ಯಾದಗಿರಿ ಜಿಲ್ಲೆಯ ಅಲೆಮಾರಿಗಳ ಸಾಮಾಜಿಕ ಸ್ಥಿತಿಗತಿಗಳು : ಒಂದು ಅಧ್ಯಯನ

(ಸಮಾಜಶಾಸ್ತ್ರ ವಿಷಯದಲ್ಲಿ ಪಿಎಚ್ ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಶಿವಲಿಂಗಪ್ಪ ಎಸ್. ನಾಯಕ

ಮಾರ್ಗದರ್ಶಕರು

ಡಾ. ತಾರಿಹಳ್ಳಿ ಹನುಮಂತಪ್ಪ

ಸಹ ಪ್ರಾಧ್ಯಾಪಕರು

ಮಾನವಶಾಸ್ತ್ರ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೩

ಪ್ರಮಾಣ ಪತ್ರ

ಯಾದಗಿರಿ ಜಿಲ್ಲೆಯ ಅಲೆಮಾರಿಗಳ ಸಾಮಾಜಿಕ ಸ್ಥಿತಿಗತಿಗಳು : ಒಂದು ಅಧ್ಯಯನ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಮಾನವಶಾಸ್ತ್ರ ಅಧ್ಯಯನ ವಿಭಾಗಕ್ಕೆ ಸಲ್ಲಿಸಲು **ಡಾ. ತಾರಿಹಳ್ಳಿ ಹನುಮಂತಪ್ಪ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : 30-09-2013
ಸ್ಥಳ : ವಿದ್ಯಾರಣ್ಯ

(ಶಿವಲಿಂಗಪ್ಪ ಎಸ್. ನಾಯಕ)
ಸಂಶೋಧಕರು
ಮಾನವಶಾಸ್ತ್ರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ದೃಢೀಕರಣ ಪತ್ರ

ಶಿವಲಿಂಗಪ್ಪ ಎಸ್. ನಾಯಕ ಅವರು ಯಾದಗಿರಿ ಜಿಲ್ಲೆಯ ಅಲೆಮಾರಿಗಳ ಸಾಮಾಜಿಕ ಸ್ಥಿತಿಗತಿಗಳು : ಒಂದು ಅಧ್ಯಯನ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲ ವೆಂದು ದೃಢೀಕರಿಸುತ್ತೇನೆ.

T. Hanumanthappa 30/9/13

ದಿನಾಂಕ : 30-04-2013
ಸ್ಥಳ : ವಿದ್ಯಾರಣ್ಯ

(ಡಾ. ತಾರಿಹಳ್ಳಿ ಹನುಮಂತಪ್ಪ)
ಮಾರ್ಗದರ್ಶಕರು
ಮಾನವಶಾಸ್ತ್ರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ಪರಿಶಿಷ್ಟಗಳು

ಕೋಷ್ಟಕಗಳು

ಲಂಬಚಿತ್ರ

ವೃತ್ತಚಿತ್ರಗಳು

ನಕ್ಷೆಗಳು

ಛಾಯಾಚಿತ್ರಗಳು

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಪ್ರಸ್ತಾವನೆ

ವಿಶ್ವದ ಮೂಲ ನಿವಾಸಿಗಳೇ ಅಲೆಮಾರಿ ಆದಿವಾಸಿಗಳು. ಇವರಲ್ಲಿ ಹಲವು ವಿಧ. ಪ್ರಕೃತಿ ಮಡಿಲಿನ ಪಾರಂಪರಿಕ ಅಲೆಮಾರಿ ಆದಿವಾಸಿಗಳು, ಪಾರಂಪರಿಕ ಧಾರ್ಮಿಕ ಬಿಕ್ಷಾವೃತ್ತಿಯ ಅಲೆಮಾರಿಗಳು ಮತ್ತು ಆಧುನಿಕ ವೈಪರಿತ್ಯಗಳ ಹಿನ್ನೆಲೆಯಲ್ಲಿ ಉಗಮಗೊಂಡ ಅಲೆಮಾರಿ ಜನ ಸಮೂಹಗಳು. ವಿಶ್ವಸಂಸ್ಥೆಯ ಇತ್ತೀಚಿನ ಒಂದು ಅಂದಾಜಿನ ಪ್ರಕಾರ ವಿಶ್ವದಲ್ಲಿ ಶೇ. ೨೦ರಷ್ಟು ಜನ ಅಲೆಮಾರಿಗಳಿರುವರು. ಭಾರತದಲ್ಲಿ ೬೭೪೮ ಅಲೆಮಾರಿ ಸಮುದಾಯಗಳನ್ನು ಗುರುತಿಸಲಾಗಿತ್ತು. ಕೊನೆಗೆ ೪೬೩೫ ಸಮುದಾಯಗಳನ್ನು ಅಧ್ಯಯನಕ್ಕೆ ಗುರುತಿಸಲು ಸಾಧ್ಯವಾಯಿತು. ಪ್ರಸ್ತುತ ಭಾರತದಲ್ಲಿ ಇವರ ಒಟ್ಟು ಸಂಖ್ಯೆ ಸುಮಾರು ೧೦ ಕೋಟಿಯನ್ನು ಮೀರಿದೆ. ಅಂದರೆ ಭಾರತದ ಜನಸಂಖ್ಯೆಯ ಸುಮಾರು ಶೇ. ೧೦ರಷ್ಟು ಜನ ಅಲೆಮಾರಿಗಳ ಹಿನ್ನೆಲೆಯವರು ಎಂದು ತಿಳಿಯುತ್ತದೆ.

ಮಹಾರಾಷ್ಟ್ರ ರಾಜ್ಯದಲ್ಲಿ ಅತ್ಯಧಿಕ ಅಂದರೆ ೭೩ ಅಲೆಮಾರಿಗಳು ಅಸ್ತಿತ್ವದಲ್ಲಿದ್ದಾರೆ. ಎರಡನೇ ಸ್ಥಾನ ಕರ್ನಾಟಕದ್ದು, ೫೬ ಅಲೆಮಾರಿ ಸಮುದಾಯಗಳನ್ನು ಹೊಂದಿದೆ. ಆದರೆ ಭಾರತದ ಸಂವಿಧಾನದ ಮೀಸಲಾತಿಯಲ್ಲಿ ಈ ಅಲೆಮಾರಿ ಸಮುದಾಯಗಳು ಪರಿಶಿಷ್ಟರ ಮತ್ತು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಹಲವೆಡೆ ಹಂಚಿ ಹೋಗಿವೆ.

ಅಲೆಮಾರಿಗಳು ದೇವತಾರಾಧನೆ, ಬಿಕ್ಷಾಟನೆ, ಕೋತಿ, ಹಾವು, ಹಗಲುವೇಷ, ಬುರ್ರಕಥೆ, ಗೊಂದಳ, ದಾಸರಪದ, ಯಕ್ಷಗಾನ, ಬಯಲಾಟ, ತೊಗಲುಬೊಂಬೆಯಾಟ, ಮಾರಮ್ಮದೇವಿ ಆಟ ಇತ್ಯಾದಿಗಳನ್ನು ಪ್ರದರ್ಶಿಸುತ್ತಾರೆ. ಇವರು ನಾಟಿವೈದ್ಯ, ಸಣ್ಣ ಪುಟ್ಟ ವಸ್ತುಗಳ ಮಾರಾಟ ಮತ್ತು ರಿಪೇರಿ, ಹಾಳಾದ ಪ್ಲಾಸ್ಟಿಕ್ ವಸ್ತುಗಳನ್ನು ಆರಿಸಿ ಮಾರುತ್ತಾರೆ. ಕೊಡಗಳನ್ನು ಮಾರುವುದು, ಕೂದಲು ತೆಗೆದುಕೊಳ್ಳುವುದು ಮುಂತಾದವುಗಳನ್ನು ತಮ್ಮ ಜೀವನೋಪಾಯಕ್ಕಾಗಿ ಮಾಡುತ್ತಾರೆ. ಅಲೆಮಾರಿಗಳಾಗಿ ತಿರುಗುತ್ತ ಜೀವನ ಸಾಗಿಸುವುದು ಇವರ ಬದುಕಿನ ಭಾಗವಾಗಿದೆ. ಇತ್ತೀಚೆಗೆ ಅಲೆಮಾರಿಗಳು ಸರಕಾರದ ಯೋಜನೆಯಿಂದ ಮತ್ತು ಸಮುದಾಯಗಳ ಸಹಕಾರದಿಂದ ಸ್ವಲ್ಪಮಟ್ಟಿಗೆ ನೆಲೆ ಕಾಣುತ್ತಿವೆ. ಆದರೂ ಬದುಕಿಗಾಗಿ ತಿಂಗಳುಗಟ್ಟಲೆ ಸಹಸ್ರಾರು ಕಿಲೋಮೀಟರ್ ಅಂತರದ ಅಲೆಮಾರಿತನ ಮುಂದುವರೆಸುತ್ತಿರುವುದು ಕಂಡುಬರುತ್ತಿದೆ. ಅಲೆಮಾರಿಗಳ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಭದ್ರತೆಯ ಹಿನ್ನಲೆಯಲ್ಲಿ ಅಲೆಮಾರಿ ಮತ್ತು ಅರೆ ಅಲೆಮಾರಿ ಎಂಬ ಎರಡು ವರ್ಗಗಳನ್ನು ಗುರುತಿಸಬಹುದಾಗಿದೆ. ಇಂತಹ ಜನರನ್ನು ಯಾದಗಿರಿ ಜಿಲ್ಲೆಯ ಬೇರೆ ಬೇರೆ ಪ್ರದೇಶಗಳಲ್ಲಿ ಗುರುತಿಸಬಹುದಾಗಿದೆ. ಈ ಪ್ರದೇಶದಲ್ಲಿ ಕೆಲವು ದಿವಸಗಳವರೆಗೆ ಇದ್ದು ಮತ್ತೆ ಬೇರೆ ಕಡೆ ಸಾಗುವ ಅಲೆಮಾರಿಗಳನ್ನು ಕಾಣಬಹುದು.

ಅಲೆಮಾರಿಗಳ ಪ್ರಾಕೃತಿಕಜ್ಞಾನ, ಕಲೆ ಮತ್ತು ಶ್ರಮವನ್ನು ಸರಕಾರ ಮತ್ತು ಸಮಾಜಗಳು ಗೌರವಪೂರ್ವಕವಾಗಿ ಗೌರವಿಸಲಿಲ್ಲ. ಜಾಗತೀಕರಣ, ಆಧುನೀಕರಣದ ಅಥವಾ ನಾಗರಿಕತೆಯ ಹಿನ್ನೆಲೆಯ ಅದರ ಗುಂಗಿನಲ್ಲಿ ಜನರು ಬೇರೆ ಪರ್ಯಾಯ ವ್ಯವಸ್ಥೆಗಳತ್ತ ಮುಖ ಮಾಡಿದರು. ಇದರಿಂದಾಗಿ ಅಲೆಮಾರಿಗಳ ಮೌಖಿಕಕಲೆ ರಾಮಾಯಣ, ಮಹಾಭಾರತದ ಕಥೆ ಹೇಳುವ ವೇಷಧಾರಿ ನೃತ್ಯಗಳು ಮಾಯವಾದವು. ಇವುಗಳ ಪರಿಣಾಮದಿಂದ ತಮ್ಮ ಬದುಕನ್ನು ಸಾಗಿಸಲು ಭಿಕ್ಷಾಟನೆ ಮಾಡಲು ಪ್ರಾರಂಭಿಸಿದರು.

ಅಲೆಮಾರಿಗಳಲ್ಲಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ಸ್ಥಾನಮಾನಗಳು ಇಲ್ಲವಾಗಿ ಅವರು ಶೋಷಣೆಗೆ ಗುರಿಯಾದರು. ಇಂದಿನ ಆಧುನಿಕ ಸಮಾಜ ಅಲೆಮಾರಿಗಳನ್ನು ನಿರ್ಲಕ್ಷ್ಯ ಮಾಡುವುದರ ಮೂಲಕ ಪ್ರಾಚೀನ ಸಮಾಜದ ಪಾರಂಪರಿಕ ಜ್ಞಾನಶಾಖೆಯನ್ನು ಕಳೆದುಕೊಳ್ಳುತ್ತಿದೆ.

ಯಾದಗಿರಿ ಜಿಲ್ಲೆಯು ಮೂರು ತಾಲೂಕುಗಳನ್ನು ಒಳಗೊಂಡಿದೆ. ಯಾದಗಿರಿ, ಸುರುಪುರ ಮತ್ತು ಶಹಾಪೂರ. ಯಾದಗಿರಿ ಜಿಲ್ಲೆ ನೂತನ ಜಿಲ್ಲೆಯಾಗಿ ತನ್ನದೆಯಾದ ಪರಿವರ್ತನೆಯಲ್ಲಿ ಅಥವಾ ಪ್ರಗತಿಯಲ್ಲಿ ಹೆಜ್ಜೆಯನ್ನಿಡುತ್ತಿದೆ. ಯಾದಗಿರಿ ಪಟ್ಟಣ ರೈಲ್ವೆ ಸಂಚಾರ ವ್ಯವಸ್ಥೆಯನ್ನು ಹೊಂದಿದ್ದು ಬೆಂಗಳೂರು, ಮುಂಬೈ ಮತ್ತು ಚೆನ್ನೈಗಳಿಗೆ ಸಂಪರ್ಕವನ್ನು ಕಲ್ಪಿಸುತ್ತದೆ. ಇದರಿಂದಾಗಿ ಅನೇಕ ಅಲೆಮಾರಿಗಳು ಅನಿಸಿಕೊಂಡ ಸಮುದಾಯಗಳು ಯಾದಗಿರಿಗೆ ಬಂದು ನೆಲೆಸಿ ತಮ್ಮ

ವೃತ್ತಿಗಳನ್ನು ಮಾಡುತ್ತಾ ಮತ್ತೊಂದು ಪ್ರದೇಶಕ್ಕೆ ಹೋಗಲು ಅನುವುಮಾಡಿಕೊಳ್ಳುತ್ತಾರೆ. ಯಾದಗಿರಿ ಪಟ್ಟಣದ ಹೊರಹೊಲಯದಲ್ಲಿ ಅನೇಕ ಅಲೆಮಾರಿ ಕುಟುಂಬಗಳು ತಮ್ಮ ಗುಡಿಸಲುಗಳನ್ನು ಹಾಕಿಕೊಂಡು ಮಳೆ, ಬಿಸಿಲು, ಚಳಿ ಇವುಗಳಿಗೆ ಹೆದರದೆ ತಮ್ಮ ಸಂಸಾರವನ್ನು ಸಾಗಿಸಿಕೊಂಡು ಹೋಗುತ್ತಿರುವ ದೃಶ್ಯ ಕಂಡುಬರುತ್ತದೆ. ಅಲ್ಲದೆ ಇನ್ನು ಕೆಲವರು ಗುಡಾರಗಳನ್ನು ಹಾಕಿಕೊಂಡು ತಾತ್ಕಾಲಿಕವಾಗಿ ವಾಸ ಮಾಡುವವರಾಗಿದ್ದಾರೆ. ಇವರಿಗೆ ಯಾವುದೇ ರೀತಿಯ ಶಾಶ್ವತ ನೆಲೆಯಾಗಲಿ ಮನೆಯಾಗಲಿ ಇಲ್ಲ. ಕೆಲವು ಅಲೆಮಾರಿಗಳು ಹೊಟ್ಟೆಪಾಡಿಗಾಗಿ ಪ್ಲಾಸ್ಟಿಕ್‌ಕೊಡಗಳನ್ನು ಮಾರುವುದು, ಕಬ್ಬಿಣದ ಸಾಮಾನುಗಳನ್ನು ಮಾರುವುದು, ಕೂದಲು ತೆಗೆದುಕೊಂಡು ಏರ್‌ಪಿನ್, ಪ್ಲಾಸ್ಟಿಕ್ ಆಟಿಕೆ ಸಾಮಾನುಗಳನ್ನು ಮಾರುವುದು ದಿನನಿತ್ಯ ಅಲೆಮಾರಿಗಳು ಕಂಡುಕೊಂಡ ಒಂದು ಜೀವನವಾಗಿದೆ.

ಒಂದು ಪ್ರದೇಶದಲ್ಲಿ ವಾಸ ಮಾಡದೇ ಇರುವುದರಿಂದ ಇವರಿಗೆ ಯಾವುದೇ ಒಂದು ಊರಿನ ಮತದಾರರ ಪಟ್ಟಿಯಲ್ಲಿ ಇವರು ಹೆಸರು ಇಲ್ಲ. ಇವರಿಗೆ ನ್ಯಾಯಬೆಲೆ ಅಂಗಡಿ ಸೌಕರ್ಯವಿಲ್ಲ. ಇವರು ಇಂತಹ ಹತ್ತು ಹಲವು ಸರ್ಕಾರಿ ಸೌಲಭ್ಯಗಳಿಲ್ಲದೆ ಸ್ಥಳೀಯ ಪ್ರದೇಶದಲ್ಲಿ ಮತ್ತು ಸುರುಪುರ, ಶಹಾಪೂರ ತಾಲೂಕಿನಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ.

೧.೨. ಅಧ್ಯಯನದ ಉದ್ದೇಶ

ಯಾವುದೇ ಒಂದು ಸಮುದಾಯದ ಅಧ್ಯಯನವೆಂದರೆ ಕೇವಲ ಅವರ ಮನೆ, ಆಚರಣೆ, ಸಂಪ್ರದಾಯ, ಆಚಾರ-ವಿಚಾರ ಮುಂತಾದವುಗಳ ಬಗ್ಗೆ ತಿಳಿಯದೆ ಹುಟ್ಟಿನಿಂದ ಸಾಯುವವರೆಗೆ ಸಂಭವಿಸಿದ ಎಲ್ಲಾ ಬಗೆಯ ಸನ್ನಿವೇಶಗಳನ್ನು ಅಧ್ಯಯನ ಮಾಡುವುದು ಅವಶ್ಯಕ.

ಅಲೆಮಾರಿಗಳಲ್ಲಿ ಶೈಕ್ಷಣಿಕ ಮಟ್ಟ ಯಾವ ರೀತಿಯದ್ದಾಗಿದೆ ಇದು ಶಿಕ್ಷಣ ಪಡೆಯಲು ಏಕೆ ಸಾಧ್ಯವಾಗುತ್ತಿಲ್ಲ ಅಲೆಮಾರಿಗಳಲ್ಲಿ ಶಿಕ್ಷಣ ಪಡೆದವರು ಎಷ್ಟು ಎಂಬಿತ್ಯಾದಿ ಅಂಶಗಳನ್ನು ಸಂಗ್ರಹಿಸುವುದು ಪ್ರಸ್ತುತ ಅಧ್ಯಯನದ ಮುಖ್ಯ ಉದ್ದೇಶ. ಇಂದಿನ ಆಧುನಿಕ ಯುಗದಲ್ಲಿ ಅನೇಕ ಸೌಲಭ್ಯಗಳು ಇದ್ದರೂ ಅಲೆಮಾರಿಗಳಿಗೆ ಅವು ಏಕೆ ಮುಟ್ಟುತ್ತಿಲ್ಲ ಅದಕ್ಕೆ ಕಾರಣಗಳೇನಿರಬಹುದು ಹಲವು ಯೋಜನೆಗಳು ಅಲೆಮಾರಿಗಳಿಗೆ ಹೇಗೆ ಸಹಾಯಕವಾಗಿವೆ ಮತ್ತು ಸಹಾಯಕವಾಗುತ್ತಿಲ್ಲ ಎಂಬ ಹತ್ತು ಹಲವು ಸಮಸ್ಯೆಗಳನ್ನು ಕೂಲಂಕಷವಾಗಿ ಶೋಧಿಸಿ ಅವರ ಸಮಸ್ಯೆಗಳ ಚಿತ್ರಣವನ್ನು ನೀಡುವುದರ ಮೂಲಕ ನಾಗರಿಕ ಸಮಾಜದ ಮುಖ್ಯವಾಹಿನಿಗೆ ಬರಲು ಎಂತಹ ಕ್ರಮಗಳ ಅವಶ್ಯಕತೆ ಇದೆ. ಇದ್ದುದರಲ್ಲಿ ಅವರು ಯಾವ ಯಾವ ಬದಲಾವಣೆಗೆ ಗುರಿಯಾಗಿದ್ದಾರೆ. ಅವರ ಸಂಪ್ರದಾಯ ಮತ್ತು ರೂಢಿಗಳಲ್ಲಿ ಏನು ಬದಲಾವಣೆ ಮಾಡಿಕೊಂಡಿದ್ದಾರೆ. ಅವರ ಸಾಮಾಜಿಕ ಜೀವನ ಎತ್ತ ಸಾಗುತ್ತಿದೆ ಎಂಬುದರ ಕುರಿತು ಬೆಳಕು ಚೆಲ್ಲುವುದು ಈ ಅಧ್ಯಯನದ ಪ್ರಮುಖ ಉದ್ದೇಶ.

ಅಧ್ಯಯನಕ್ಕೆ ಒಂದು ಚೌಕಟ್ಟು ಬೇಕಾಗಿರುವುದರಿಂದ ಮತ್ತು ಅಧ್ಯಯನದ ದೃಷ್ಟಿಯಿಂದ ಸಮಯವನ್ನು ಮುಖ್ಯವಾಗಿಟ್ಟುಕೊಂಡು ಅಲೆಮಾರಿಗಳು ವಾಸಿಸುವ ಪ್ರದೇಶಗಳನ್ನು ಗುರುತಿಸಿಕೊಂಡು ಅಧ್ಯಯನ ಕೈಗೊಳ್ಳಲು ಯಾದಗಿರಿ ಜಿಲ್ಲೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ನೂತನ ಜಿಲ್ಲೆಯಲ್ಲಿ ವಾಸಿಸುವ ಅಲೆಮಾರಿಗಳ ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ಸವಿಸ್ತಾರವಾದ ರೀತಿಯಲ್ಲಿ ತಿಳಿಯಲು ಅನುಕೂಲವಾಗುವಂತೆ ವ್ಯಾಪ್ತಿಯನ್ನು ಜಿಲ್ಲೆಗೆ ಸೀಮಿತಗೊಳಿಸಿಕೊಳ್ಳಲಾಗಿದೆ.

ಕೆಲವೇ ಕೆಲವು ಅಲೆಮಾರಿಗಳ ಸಮುದಾಯಗಳ ಕುರಿತಾದ ಸಂಪ್ರದಾಯ, ಆಚಾರ-ವಿಚಾರ, ಸಂಸ್ಕೃತಿ ಇತ್ಯಾದಿಗಳ ಬಗ್ಗೆ ಅಧ್ಯಯನಗಳು ನಡೆದಿವೆ. ಒಂದೊಂದು ಸಮುದಾಯದ ಬಗ್ಗೆ ಪ್ರತ್ಯೇಕ ಅಧ್ಯಯನ ಮತ್ತು ಬಿಡಿಲೇಖನಗಳನ್ನು ಮಾತ್ರ ನೋಡಬಹುದು. ಆದರೆ, ಜಿಲ್ಲೆಗನುಗುಣ ವಾಗಿ ಯಾವ ಯಾವ ಅಲೆಮಾರಿಗಳು ಇದ್ದಾರೆ, ಅವರ ಶೈಕ್ಷಣಿಕ ಮತ್ತು ಸಾಮಾಜಿಕ ಸ್ಥಿತಿಗತಿ ಹೇಗಿವೆ ಎಂಬುದರ ಅಧ್ಯಯನ ನಡೆದಿಲ್ಲ. ಆದ್ದರಿಂದ ನೂತನ ಜಿಲ್ಲೆಯಾಗಿ ಘೋಷಣೆಯಾದ ಯಾದಗಿರಿ ಜಿಲ್ಲೆಗೆ ಸೀಮಿತಗೊಂಡ ಅಲೆಮಾರಿಗಳ ಬದುಕನ್ನು ಕಟ್ಟಿಕೊಡುವ ಹೊಸಪ್ರಯತ್ನ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

ಯಾದಗಿರಿ ಜಿಲ್ಲೆಯ ಅಲೆಮಾರಿಗಳ ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ಬೆಳಕು ಚೆಲ್ಲಲು ಮತ್ತು ಅವರ ಸಮಸ್ಯೆಗಳಿಗೆ ಪರಿಹಾರ ಸೂಚಿಸಲು ಕಾರ್ಯಕ್ರಮಗಳನ್ನು ಸರಕಾರ ಹಮ್ಮಿಕೊಳ್ಳುವ ನಿಟ್ಟಿನಲ್ಲಿ ಯೋಚಿಸುವಂತೆ ಈ ಅಧ್ಯಯನ ಕೈಗೊಳ್ಳಲಾಗಿದೆ. ಅವರ ಜೀವನ ಈ ಆಧುನಿಕ ಯುಗಕ್ಕೆ ಹೊಂದಿಕೊಳ್ಳುವ ನಿಟ್ಟಿನಲ್ಲಿ, ಸೌಲಭ್ಯ ಸಿಗುವ ರೀತಿಯಲ್ಲಿ ಅಲೆಮಾರಿ ಸಮುದಾಯಗಳ ಸಮಸ್ಯೆಗಳನ್ನು ವಿವರಿಸುವುದರ ಮೂಲಕ ಅವುಗಳ ಪ್ರಮಾಣ ಯಾವ ರೀತಿ ಇದೆ ಆ ಸಮಸ್ಯೆಗಳು ಈ ಅಲೆಮಾರಿಗಳನ್ನು ಯಾವ ಹಂತದಲ್ಲಿಟ್ಟಿವೆ ಎಂಬಿತ್ಯಾದಿ ಅಂಶಗಳನ್ನು ಪ್ರಸ್ತುತ ಅಧ್ಯಯನದ ಅಗತ್ಯತೆಗೆ ತಕ್ಕಂತೆ ವಿಸ್ತರಿಸಿಕೊಂಡಿದೆ.

೧.೩. ಅಧ್ಯಯನದ ವ್ಯಾಪ್ತಿ

ಅಲೆಮಾರಿಗಳು ಎಲ್ಲಿಯೂ ನೆಲೆ ನಿಲ್ಲದೆ ಅಲೆಯುತ್ತಿರುತ್ತಾರೆ. ಆದರೂ ಗ್ರಾಮ ಮತ್ತು ನಗರ ಪ್ರದೇಶದ ಹೊರ ಮತ್ತು ಒಳ ಭಾಗಗಳನ್ನು ಹುಡುಕಿ ಅಲ್ಪಸ್ವಲ್ಪ ದಿವಸವಾದರೂ ತಾತ್ಕಾಲಿಕವಾಗಿ ನೆಲೆ ನಿಂತು ತಮ್ಮ ಕಸುಬನ್ನು ಮುಗಿಸಿಕೊಂಡು ಮತ್ತೆ ಮುಂದಿನ ಪ್ರದೇಶಗಳಿಗೆ ಹೋಗುತ್ತಾರೆ. ಹೀಗೆ ತಾತ್ಕಾಲಿಕವಾಗಿ ನೆಲೆ ನಿಂತ ದಿನಗಳಲ್ಲಿ ಕ್ಷೇತ್ರಕಾರ್ಯ ಮಾಡುವುದು ಅನಿವಾರ್ಯವಾಗಿದೆ. ಅದಕ್ಕಾಗಿ ಇವರ ಮಾಹಿತಿಯನ್ನು ಪಡೆಯಲು ಅಧ್ಯಯನದ ವ್ಯಾಪ್ತಿಯನ್ನು ಯಾದಗಿರಿ ಜಿಲ್ಲೆಗೆ ಸಂಬಂಧಿಸಿದಂತೆ ಅದರಲ್ಲಿ ಬರುವ ಸುರುಪುರ, ಶಹಾಪುರ ಮತ್ತು ಯಾದಗಿರಿ ತಾಲೂಕುಗಳನ್ನು ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಸೇರಿಸಿಕೊಳ್ಳಲಾಗಿದೆ.

ಯಾದಗಿರಿ ಜಿಲ್ಲೆಯ ಅಲೆಮಾರಿಗಳ ಜನಸಂಖ್ಯೆ ಕುರಿತು ನಿಖರವಾದ ಮಾಹಿತಿ ಲಭ್ಯವಿಲ್ಲದೇ ಇರುವುದರಿಂದ, ಅಲೆಮಾರಿಗಳ ಕುರಿತು ಅಧ್ಯಯನದ ದೃಷ್ಟಿಯಿಂದ ವಕ್ತೃಗಳ ಹೇಳಿಕೆಯನ್ನು ಪರಿಗಣಿಸಿ, ಅಲೆಮಾರಿ ಸಂಘದ ಪದಾಧಿಕಾರಿಗಳ ಮಾಹಿತಿಯನ್ನಾಧರಿಸಿ, ಅವಲೋಕಿಸಿದಾಗ ಸುಮಾರು ೨೫೦೦೦ ಅಲೆಮಾರಿಗಳಿರಬಹುದು ಎಂದು ಅಂದಾಜಿಸಬಹುದಾಗಿದೆ. ಅಲೆಮಾರಿಗಳ ಅಲೆದಾಟದ ಪರಿಣಾಮವಾಗಿ ಅಲೆಮಾರಿಗಳ ಕುಟುಂಬಗಳ ಕುರಿತು ಕೂಡ ನಿಖರವಾದ ಮಾಹಿತಿ ಸಿಗದೇ ಇರುವುದರಿಂದ ಈ ಜಿಲ್ಲೆಯಲ್ಲಿ ಬರುವ ಮೂರು ತಾಲೂಕುಗಳನ್ನು ಒಳಗೊಂಡಂತೆ ಅಲೆಮಾರಿಗಳು ವಾಸವಾಗಿರುವ ಗುಡಾರ ಮತ್ತು ಗುಡಿಸಲು ಪ್ರದೇಶಗಳನ್ನು ಗುರುತಿಸಿಕೊಂಡು ಕ್ಷೇತ್ರಕಾರ್ಯ ಮಾಡಿ ಮಾಹಿತಿ ಸಂಗ್ರಹಿಸಲಾಗಿದೆ.

ಪ್ರಶ್ನಾವಳಿ ವಿಧಾನ, ಸಂದರ್ಶನ ವಿಧಾನ ಮತ್ತು ಅವಲೋಕನದ ಮೂಲಕ ಈ ಪ್ರದೇಶದ ಗುಡಾರ ಮತ್ತು ಗುಡಿಸಲುಗಳಲ್ಲಿ ವಾಸಿಸುವ ಅಲೆಮಾರಿ ಸದಸ್ಯರನ್ನು ಮಾತ್ರ ಸಮೀಕ್ಷೆಯ ವ್ಯಾಪ್ತಿಯಲ್ಲಿ ಸೇರಿಸಿಕೊಂಡು ಮಾಹಿತಿಯನ್ನು ಸಂಗ್ರಹಿಸಿ ಮಹಾಪ್ರಬಂಧವನ್ನು ಗಟ್ಟಿಗೊಳಿಸಿಕೊಳ್ಳಲು ಪ್ರಯತ್ನಿಸಲಾಗಿದೆ.

ಧಾರ್ಮಿಕ ಭಿಕ್ಷಾವೃತ್ತಿಯೇ ಇಂದಿಗೂ ಪ್ರಮುಖವಾಗಿ ಕಾಣುವ ಈ ಅಲೆಮಾರಿಗಳಲ್ಲಿ ಅಲೆಮಾರಿ ಗಳನ್ನು ಬೇರೆ ಬೇರೆ ಹೆಸರುಗಳಿಂದ ಗುರುತಿಸಲ್ಪಡುವ ಮತ್ತು ಯಾದಗಿರಿ ಜಿಲ್ಲೆಯಲ್ಲಿ ನೆಲೆಸಿರುವ ಮತ್ತು ಅಲೆದಾಟದ ಜೀವನ ಸಾಗಿಸುತ್ತಿರುವ ಅಲೆಮಾರಿ ಸಮುದಾಯಗಳನ್ನು ಕುರಿತು ವಿವರವಾದ ಮಾಹಿತಿಯನ್ನು ಈ ಮಹಾಪ್ರಬಂಧದಲ್ಲಿ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ.

ದಿನಾಂಕ ೦೮.೦೨.೨೦೧೩ರಂದು ನಡೆದ ಸಚಿವಸಂಪುಟ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಜಗದೀಶ ಶೆಟ್ಟರ್ ಅವರು ಗುರುಮಠಕಲ್, ವಡಿಗೇರಾ ಮತ್ತು ಹುಣಸಗಿ ಪ್ರದೇಶಗಳನ್ನು ಹೊಸ ತಾಲೂಕುಗಳನ್ನಾಗಿ ಅಧಿಕೃತವಾಗಿ ಘೋಷಿಸಿದ್ದಾರೆ. ಪ್ರಸ್ತುತ ಯಾದಗಿರಿ ಜಿಲ್ಲೆಗೆ ಒಟ್ಟು ಆರು ತಾಲೂಕುಗಳು ಸೇರಿದಂತಾಗಿದೆ. ಈ ಹೊಸ ತಾಲೂಕುಗಳು ಈ ಮೊದಲೇ ಅಧ್ಯಯನದ ವ್ಯಾಪ್ತಿಯಲ್ಲಿ ಸೇರಿದವುಗಳಾಗಿರುತ್ತವೆ.

೧.೪. ಅಧ್ಯಯನದ ವಿಧಾನಗಳು

ಯಾದಗಿರಿ ಜಿಲ್ಲೆಯ ಅಲೆಮಾರಿಗಳ ಅಧ್ಯಯನ ಯಾವ ರೀತಿಯಿಂದ ಸಾಗಬೇಕು ಈ ಅಧ್ಯಯನದಲ್ಲಿ ಅನುಸರಿಸಬೇಕಾದ ವಿಧಾನಗಳು ಯಾವವು ಎಂಬ ವಿವಿಧ ಅಧ್ಯಯನಕ್ಕೆ ಸಂಬಂಧಿಸಿ ದಂತಹ ಮಾಹಿತಿಗಳನ್ನು ಪಡೆಯಬೇಕಾದರೆ ಹಲವು ವಿಧಾನಗಳನ್ನು ಅಳವಡಿಸಿಕೊಳ್ಳ ಬೇಕಾಗುತ್ತದೆ. ಸಂಶೋಧನೆಗೆ ಅಧ್ಯಯನದ ಸ್ವರೂಪ, ವ್ಯಾಪ್ತಿ ಮತ್ತು ಉದ್ದೇಶಗಳು ಎಷ್ಟು ಮುಖ್ಯವೋ ಸಂಶೋಧಕನು ಕ್ಷೇತ್ರಕಾರ್ಯ ಮಾಡುವಾಗ ಅನುಸರಿಸುವ ವಿಧಾನಗಳು ಅಷ್ಟೇ ಮುಖ್ಯವಾಗುತ್ತವೆ. ಸಂಶೋಧನೆಗೆ

ಸಂಬಂಧ ಪಟ್ಟಂತೆ ಹೆಚ್ಚಿನ ವಿಷಯವನ್ನು ಸಂಗ್ರಹಿಸಲು ಈ ವಿಧಾನಗಳು ಪ್ರಮುಖ ಪಾತ್ರ ವಹಿಸುತ್ತವೆ. ಸಂಶೋಧನೆಯಲ್ಲಿ ಕೆಲವೊಂದು ನಿಯಮಬದ್ಧವಾದ ವಿಧಾನಗಳನ್ನು ಬಳಸುವುದು ಅವಶ್ಯಕವಾಗಿರುತ್ತದೆ. ಪ್ರಸ್ತುತ ಅಧ್ಯಯನಕ್ಕಾಗಿ ಕೈಗೊಂಡ ಕ್ಷೇತ್ರಕಾರ್ಯದಲ್ಲಿ, ನಿರ್ಧಿಷ್ಟ ಸಂಶೋಧನೆ ಯಲ್ಲಿ, ಕೈಗೊಂಡ ಕ್ಷೇತ್ರಕಾರ್ಯದಲ್ಲಿ ನಿರ್ಧಿಷ್ಟ ಸಂಶೋಧನಾ ವಿಧಾನಗಳನ್ನು ಬಳಸಿಕೊಳ್ಳಲಾಗಿದೆ.

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಬಂದಿರುವ ಪ್ರಾಥಮಿಕ, ಆನುಷಂಗಿಕ, ಜನಪದ, ಐತಿಹ್ಯ, ದಂತಕಥೆ, ಲಾವಣಿಗಳು, ಜಾನಪದ ಗೀತೆಗಳು ಹಾಗೂ ಮೌಖಿಕ ಅಕರಗಳನ್ನು ಗಂಭೀರವಾಗಿ ಈ ಸಂದರ್ಭದಲ್ಲಿ ಬಳಸಿಕೊಳ್ಳಲಾಗಿದೆ. ಏಕೆಂದರೆ ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಅಧ್ಯಯನಗಳು ನಡೆಯದೆ ಇರುವ ಹಿನ್ನಲೆಯಲ್ಲಿ ಲಿಖಿತ ಆಕರಗಳನ್ನು ಬಳಸಿಕೊಳ್ಳುವುದರ ಜೊತೆ ಜೊತೆಗೆ ಮೌಖಿಕ ಆಕರಗಳನ್ನು ಪ್ರಮುಖವಾಗಿ ಬಳಸಿಕೊಂಡು ಅಧ್ಯಯನದ ವಿಧಾನವನ್ನು ರೂಪಿಸಿಕೊಳ್ಳಲಾಗಿದೆ. ಅಲ್ಲದೆ ಸಮಾಜಶಾಸ್ತ್ರೀಯ ಅಧ್ಯಯನದ ಹಿನ್ನಲೆಯಲ್ಲಿ ರೂಪಿತವಾಗಿರುವ ಈ ಅಧ್ಯಯನ ವಿಷಯವು ಕೆಲವು ಸೈದ್ಧಾಂತಿಕ ವಿಧಾನಗಳ ಮೂಲಕ ವಿವರಿಸಲಾಗಿದೆ. ಅವು ಹೀಗಿವೆ.

೧. ದತ್ತಾಂಶಗಳ ಸಂಗ್ರಹಣೆ

೨. ದತ್ತಾಂಶಗಳ ವಿಶ್ಲೇಷಣೆ

೩. ಪ್ರಶ್ನಾವಳಿ ವಿಧಾನ

೪. ಸಹಭಾಗಿತ್ವ ಅವಲೋಕನ ವಿಧಾನ

೫. ಸಂದರ್ಶನ ವಿಧಾನಗಳು

೬. ವಿಷಯ ಅಧ್ಯಯನ ವಿಧಾನ

೭. ಸಂಖ್ಯಾಶಾಸ್ತ್ರೀಯ ವಿಧಾನ

೮. ಅವಲೋಕನ ವಿಧಾನ

೧. ದತ್ತಾಂಶ ಸಂಗ್ರಹಣೆ: 'ಯಾದಗಿರಿ ಜಿಲ್ಲೆಯ ಅಲೆಮಾರಿಗಳ ಸಾಮಾಜಿಕ ಸ್ಥಿತಿಗತಿಗಳು ಒಂದು ಅಧ್ಯಯನ' ಎಂಬ ಅಧ್ಯಯನಕ್ಕೆ ಸಂಬಂಧಿಸಿದಂತೆ ಮುಖ್ಯ ಪ್ರಾಥಮಿಕ ಮೂಲಗಳಾದ ವೃತ್ತಪತ್ರಿಕೆಗಳು, ಲೇಖನಗಳು ವಿವಿಧ ಅಧ್ಯಯನ ಪ್ರಬಂಧಗಳು ಮುಂತಾದವುಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

೨. ದತ್ತಾಂಶ ವಿಶ್ಲೇಷಣೆ: ಯಾದಗಿರಿ ಜಿಲ್ಲೆಯಾದ್ಯಂತ ಕ್ಷೇತ್ರಕಾರ್ಯ ಹಮ್ಮಿಕೊಂಡು ಮಾಹಿತಿ ನೀಡಿದ ಅಲೆಮಾರಿಗಳ ಅನಿಸಿಕೆಗಳು ಮತ್ತು ವಿವರಗಳನ್ನು ಪಡೆಯುವುದು, ವಿವಿಧ ಸಂಘ ಸಂಸ್ಥೆಗಳ ಅಧಿಕಾರಿಗಳ, ಅಲೆಮಾರಿ ಸಂಘದ ಪದಾಧಿಕಾರಿಗಳ ಮಾಹಿತಿ ಮತ್ತು ತಾಲೂಕು

ಅಲೆಮಾರಿಗಳ ಕಲ್ಯಾಣಧಿಕಾರಿಗಳ, ಜಿಲ್ಲಾ ಅಲೆಮಾರಿ ಕಲ್ಯಾಣಧಿಕಾರಿಗಳ ಮಾಹಿತಿ ಪಡೆದು ಅವರು ನೀಡಿದ ದತ್ತಾಂಶಗಳನ್ನು ಒಟ್ಟುಗೂಡಿಸಿ ಮಾಹಿತಿಯನ್ನು ವಿಶ್ಲೇಷಣೆ ಮಾಡಿ ಫಲಿತಾಂಶವನ್ನು ಪ್ರಾಮಾಣಿಕವಾಗಿ ವಿವರಿಸಲಾಗಿದೆ.

೩. **ಪ್ರಶ್ನಾವಳಿ ವಿಧಾನ:** ಅಧ್ಯಯನಕ್ಕೆ ಸಂಬಂಧಿಸಿದಂತೆ ಯಾವ ಸಮುದಾಯಗಳಿಂದ ಮಾಹಿತಿ ಪಡೆಯಬೇಕಾಗಿರುತ್ತದೆಯೋ ಅವರಿಗೆ ಸಂಬಂಧಿಸಿದ ಪ್ರಶ್ನಾವಳಿಯನ್ನು ಪೂರ್ವದಲ್ಲಿ ರಚಿಸಿಕೊಂಡ ನಂತರ ಸಂದರ್ಶನಕ್ಕೆ ಅಳವಡಿಸಿ ನೇರವಾಗಿ ಸಂದರ್ಶನಕಾರನಿಂದ ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

೪. **ಸಹಬಾಗಿತ್ವ ಅವಲೋಕನ ವಿಧಾನ:** ಇದು ಸಂಶೋಧಕನಿಗೆ ಮಾಹಿತಿಯನ್ನು ಒದಗಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಈ ವಿಧಾನದಿಂದ ಸಂಶೋಧಕನು ಅವರಲ್ಲಿ ಭಾಗಿಯಾಗುವುದರ ಮೂಲಕ ಸಂಪೂರ್ಣ ಮಾಹಿತಿಯನ್ನು ಪಡೆಯಬಹುದು. ಈ ಸಂದರ್ಭದಲ್ಲಿ ಅಲೆಮಾರಿಗಳ ಜೊತೆ ಬೆರೆತು, ಅವರ ನೋವು ನಲಿವುಗಳನ್ನು ಆಲಿಸಿ ಅವರನ್ನು ಸಂದರ್ಶನಕ್ಕೆ ಒಳಪಡಿಸಿ, ಅವರು ಅಲೆಮಾರಿಗಳಾಗಿ ಉಳಿಯಲು ಕಾರಣಗಳೇನು. ಈ ಅಲೆಮಾರಿ ಜೀವನ ಕೊನೆಯಾಗಲು ಯಾವ ಕಾರ್ಯಕ್ರಮದ ಅವಶ್ಯಕತೆ ಇದೆ. ಅಲೆಮಾರಿಗಳು ಮುಖ್ಯ ವಾಹಿನಿಗೆ ಬರದಿರಲು ಇರುವ ಕಾರಣಗಳ ಬಗ್ಗೆ ಹಲವು ವಿಷಯವನ್ನು ಚರ್ಚಿಸಲಾಗಿದೆ.

೫. **ಸಂದರ್ಶನ ವಿಧಾನ:** ಸಂಶೋಧಕನು ತನ್ನ ಕ್ಷೇತ್ರಕಾರ್ಯದಲ್ಲಿ ಸಂದರ್ಶನ ವಿಧಾನವನ್ನು ಅಳವಡಿಸಿಕೊಳ್ಳುವ ಅನಿವಾರ್ಯತೆ ಇದ್ದೇ ಇರುತ್ತದೆ. ಈ ವಿಧಾನ ಬಳಸದಿದ್ದರೆ ಸಂಪೂರ್ಣ ಮಾಹಿತಿ ಪಡೆದುಕೊಳ್ಳುವಲ್ಲಿ ವಿಫಲವಾಗಬಹುದು. ಆದ್ದರಿಂದ ಸಂಶೋಧಕನಾಗಿ ಕ್ಷೇತ್ರಕಾರ್ಯದಲ್ಲಿ ಈ ವಿಧಾನವನ್ನು ಅಳವಡಿಸಿಕೊಂಡು ಅಲೆಮಾರಿಗಳನ್ನು ಸಂದರ್ಶನಕ್ಕಾಗಿ ಒಳಪಡಿಸಿ ಅವರಿಂದ ಮಾಹಿತಿ ಪಡೆದುಕೊಳ್ಳಲಾಗಿದೆ. ಮಾಹಿತಿ ಒದಗಿಸಿರುವ ಅಲೆಮಾರಿಗಳ ವಿವರವನ್ನು ದಾಖಲಿಸಲಾಗಿದೆ. ಇದರ ಮೂಲಕ ಅಲೆಮಾರಿ ಜೀವನಕ್ಕೆ ಕಾರಣವಾಗುವ ಅಂಶಗಳನ್ನು ಗುರುತಿಸಿದೆ.

೬. **ವಿಷಯ ಅಧ್ಯಯನ ವಿಧಾನ:** ಸಂಶೋಧನಾ ಸಮಯದಲ್ಲಿ ಯಾದಗಿರಿ ಜಿಲ್ಲೆಯಾದ್ಯಂತ ಸಂಚರಿಸಿ ಅಲೆಮಾರಿಗಳ ಬಗ್ಗೆ ಇರುವ ಲೇಖನಗಳ ಜೊತೆಗೆ ಅವರ ಅನುಭವ ಹಾಗೂ ಕೆಲ ವೊಂದು ವಿಷಯಗಳನ್ನು ಕೇಳಿಕೊಂಡು ಮಾರ್ಗದರ್ಶಕರ ಜೊತೆಗೆ ಸಾಧಕ ಬಾಧಕಗಳ ಕುರಿತು ಚರ್ಚಿಸಲಾಗಿದೆ.

೭. **ಸಂಖ್ಯಾಶಾಸ್ತ್ರೀಯ ವಿಧಾನ:** ಅಲೆಮಾರಿಗಳ ಅಂಕಿ ಅಂಶಗಳನ್ನು ಮತ್ತು ಶಿಕ್ಷಣಕ್ಕೆ ಸಂಬಂಧಿಸಿದ ಅಂಕಿ ಸಂಖ್ಯೆಗಳ ಮಾಹಿತಿಯನ್ನು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಂದ, ಸಂಘ ಸಂಸ್ಥೆಗಳಿಂದ, ಅಲೆಮಾರಿ ಸಂಘಗಳಿಂದ, ಕೆಲವು ಪುಸ್ತಕಗಳಿಂದ ಪಡೆದ ಮಾಹಿತಿಯನ್ನು ಅಂಕಿ ಅಂಶಗಳಲ್ಲಿ ದಾಖಲಿಸಿದೆ.

೮. **ಅವಲೋಕನ ವಿಧಾನ:** ಮೊದಲಿಗೆ ಅಲೆಮಾರಿಗಳ ಬಗ್ಗೆ ನನ್ನದೇ ಆದ ಪ್ರಮೇಯವನ್ನು ರೂಪಿಸಿಕೊಂಡು ಅಲೆಮಾರಿಗಳ ಬದುಕು, ಅವರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಜೀವನ, ಅವರು ಬಾಳುವ ವಿಧಾನಗಳು, ಅವರ ನೋವು-ನಲಿವು ಮುಂತಾದವುಗಳನ್ನು ಈ ವಿಧಾನದಲ್ಲಿ ಅಳವಡಿಸಿ ಸ್ಪಷ್ಟ ಮಾಹಿತಿ ಹೊರತರಲು ಬಳಸಿಕೊಂಡಿದೆ.

ಅಭಿವೃದ್ಧಿ ಹೊಂದುತ್ತಿರುವ ನಮ್ಮ ದೇಶವು ಹಲವು ರೀತಿಯ ಸಾಮಾಜಿಕ ಸಮಸ್ಯೆಗಳಲ್ಲಿ ಸಿಲುಕಿಕೊಂಡಿದೆ. ಅಂತಹ ಸಮಸ್ಯೆಗಳಲ್ಲಿ ಅಲೆಮಾರಿಗಳ ಅಭಿವೃದ್ಧಿಯ ಬಗೆಗಿನ ದೃಷ್ಟಿಕೋನಗಳು ಸಮರ್ಪಕವಾಗಿಲ್ಲ. ಈ ಕಾರಣ ಈ ಅಧ್ಯಯನವು ಅಲಕ್ಷಿತ ಸಮುದಾಯಗಳಾದ ಅಲೆಮಾರಿಗಳ ಸಾಮಾಜಿಕ ಬದುಕನ್ನು ಕುರಿತು ಗಮನ ಹರಿಸುವುದು ಅವರ ಸಮಸ್ಯೆಗಳನ್ನು ವಿವರಿಸುವ ಮೂಲಕ ಅವರನ್ನು ಅಭಿವೃದ್ಧಿಯ ಕಡೆಗೆ ಚಲಿಸುವಂತೆ ಮಾಡಲು ಸಹಾಯಕವಾಗುವ ಅಂಶಗಳನ್ನು ತಿಳಿಸುತ್ತದೆ. ಆದ್ದರಿಂದ ಈ ಅಧ್ಯಯನದ ವಿವರಣಾತ್ಮಕ ಸಂಶೋಧನೆಯಿಂದ ದೊರಕುವ ದತ್ತಾಂಶಗಳು ಹಾಗೂ ಒಳನೋಟಗಳು ಸಹಜವಾಗಿಯೇ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತವೆ.

ಜಾಗತೀಕರಣ ಮತ್ತು ವಸಾಹತುಶಾಹಿ ಪ್ರಭಾವದಿಂದ ಅಲೆಮಾರಿಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿವೆ. ಹೀಗಾಗಿ ಪ್ರಸ್ತುತ ಅಧ್ಯಯನವು ಸಮಕಾಲೀನ ಸಾಮಾಜಿಕ ಸಮಸ್ಯೆಗಳ ಜೊತೆ ನೇರ ಹಾಗೂ ಪರೋಕ್ಷ ಸಂಬಂಧವನ್ನು ಹೊಂದಿದ್ದು, ಪ್ರಸ್ತುತ ಅಧ್ಯಯನದಿಂದ ಕಂಡುಕೊಳ್ಳಬಹುದಾದ ವಿಷಯ ಜ್ಞಾನವು ಸಮಾಜಕ್ಕೆ ಹಾಗೂ ಸರಕಾರಕ್ಕೆ ದಿಕ್ಸೂಚಿಯಾಗಿ ಅಲೆಮಾರಿಗಳ ಜೀವನ ಅಭಿವೃದ್ಧಿಗೆ ಸಹಾಯಕವಾಗಬಲ್ಲದು.

೧.೫. ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನವು ಯಾದಗಿರಿ ಜಿಲ್ಲೆಯ ಅಲೆಮಾರಿ ಸಮುದಾಯಗಳ ಸಾಮಾಜಿಕ ಸ್ಥಿತಿಗತಿಗಳ ಕುರಿತ ಅಧ್ಯಯನವಾಗಿದೆ. ಈ ಅಧ್ಯಯನವು ಅಲೆಮಾರಿ ಸಮುದಾಯಗಳ ಬದುಕಿನ ವಿವಿಧ ಆಯಾಮಗಳನ್ನು ಒಳಗೊಂಡಿದೆ. ಈ ಆಯಾಮಗಳನ್ನು ವಿವಿಧ ಮಗ್ಗುಲುಗಳ ಮೂಲಕ ಚರ್ಚಿಸಲು ಈ ಅಧ್ಯಯನವು ತನ್ನದೇ ಆದ ಸ್ವರೂಪವನ್ನು ಹೊಂದಿದೆ. ಈ ಹಿನ್ನೆಲೆಯಲ್ಲಿ ಸ್ವರೂಪದಲ್ಲಿ ಒಟ್ಟು ಆರು ಅಧ್ಯಾಯಗಳನ್ನು ಮಾಡಿಕೊಳ್ಳಲಾಗಿದೆ. ಅವು ಈ ಕೆಳಗಿನಂತಿವೆ.

ಅಧ್ಯಾಯ ಒಂದರಲ್ಲಿ; ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪವನ್ನು ತಿಳಿಸಿದೆ. ಇದರ ಜೊತೆಗೆ ಈ ಸಮುದಾಯಗಳ ಬಗ್ಗೆ ಇಲ್ಲಿಯವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆಯನ್ನು ಕುರಿತು ವಿವರಿಸಲಾಗಿದೆ.

ಅಧ್ಯಾಯ ಎರಡರಲ್ಲಿ; ಯಾದಗಿರಿ ಜಿಲ್ಲೆಯ ಕ್ಷೇತ್ರ ಪರಿಚಯದಲ್ಲಿ ಭೌಗೋಳಿಕ ಹಿನ್ನೆಲೆ, ಚಾರಿತ್ರಿಕ ಹಿನ್ನೆಲೆ, ಇಲ್ಲಿ ಕಂಡುಬರುವ ಅಲೆಮಾರಿಗಳ ಸ್ಥೂಲಪರಿಚಯ ಹಾಗೂ ಅವುಗಳ ಹಿನ್ನೆಲೆಯನ್ನು ಕುರಿತು ಸಂಕ್ಷಿಪ್ತವಾಗಿ ಚರ್ಚಿಸಲು ಯತ್ನಿಸಲಾಗಿದೆ.

ಅಧ್ಯಾಯ ಮೂರರಲ್ಲಿ; ಈ ಪ್ರದೇಶದ ಅಲೆಮಾರಿಗಳ ಸಾಮಾಜಿಕ ಸ್ಥಿತಿಗತಿಗಳನ್ನು ಕುರಿತು ವಿವರಸಿಲಾಗಿದೆ. ಇದರಲ್ಲಿ ಕುಟುಂಬ ವ್ಯವಸ್ಥೆ ಆಚರಣೆಗಳು, ಉಡುಗೆ ತೊಡುಗೆಗಳು, ಆಹಾರ ಪದ್ಧತಿಗಳನ್ನು ಕುರಿತು ಚರ್ಚಿಸಲಾಗಿದೆ. ಜೊತೆಗೆ ಅಲೆಮಾರಿಗಳ ಶಿಕ್ಷಣ, ಮಹಿಳೆಯರ ಸ್ಥಾನಮಾನ, ನ್ಯಾಯ ಪಂಚಾಯಿತಿ, ವಾಸದ ನೆಲೆಗಳು ಹಾಗೂ ವರ್ತಮಾನದ ಸಾಮಾಜಿಕ ಸ್ಥಿತಿಗತಿಗಳನ್ನು ಕುರಿತು ಚರ್ಚಿಸಲು ಪ್ರಯತ್ನಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ; ಈ ಪ್ರದೇಶದ ಅಲೆಮಾರಿ ಸಮುದಾಯಗಳ ಆರ್ಥಿಕ ವಿಚಾರಗಳಿಗೆ ಸಂಬಂಧಿಸಿದ ಚರ್ಚೆಯನ್ನು ಮಾಡಲಾಗಿದೆ. ಅಲೆಮಾರಿಗಳು ತಮ್ಮ ಬದುಕಿನ ಬಂಡಿಯನ್ನು ಸಾಗಿಸುವ ಹಿನ್ನೆಲೆಯಲ್ಲಿ ಕೈಗೊಂಡ ವೃತ್ತಿಗಳಾದ ಕುಲಕಸುಬು, ಕರಕುಶಲತೆ, ಸಂಚಾರಿ ವ್ಯಾಪಾರ, ಭಿಕ್ಷೆ ಬೇಡುವುದು ಇತ್ಯಾದಿ ಅಂಶಗಳನ್ನು ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಐದರಲ್ಲಿ; ಈ ಸಮುದಾಯಗಳ ಅಭಿವೃದ್ಧಿಗಾಗಿ ರಚನೆಗೊಂಡ ಕಾರ್ಯಕ್ರಮಗಳು, ಅಲೆಮಾರಿಗಳ ಪರ್ಯಾಯ ಪದದ ಗೊಂದಲ ನಿವಾರಣೆ, ಸಮುದಾಯಗಳ ಸಬಲೀಕರಣ, ಮೀಸಲಾತಿ, ಸಾಮಾಜಿಕ ನ್ಯಾಯ, ವರ್ತಮಾನ ಸಂದರ್ಭದಲ್ಲಿ ಅಲೆಮಾರಿಗಳು ಹಾಗೂ ಡಾ. ಸಿ.ಎಸ್. ದ್ವಾರಕನಾಥ್ ಅವರ ಹಿಂದುಳಿದ ವರ್ಗಗಳ ಆಯೋಗದ ಶಿಫಾರಸ್ಸುಗಳು ಮುಂತಾದ ವಿಚಾರಗಳ ಕುರಿತು ವಿವರಿಸಲು ಪ್ರಯತ್ನಿಸಲಾಗಿದೆ.

ಅಧ್ಯಾಯ ಆರರಲ್ಲಿ; ಉಪಸಂಹಾರವನ್ನು ಕುರಿತು ವಿವರಿಸಲಾಗಿದೆ. ಇದರಲ್ಲಿ ಅಧ್ಯಯನದ ಫಲಿತಗಳನ್ನು ಮತ್ತು ಪರಿಹಾರೋಪಾಯಗಳ ಕುರಿತು ವಿವರಿಸಲಾಗಿದೆ. ಅನುಬಂಧದಲ್ಲಿ ಪರಾಮರ್ಶನ ಗ್ರಂಥಗಳು, ವಕ್ತೃ ವಿವರ, ಪತ್ರಿಕಾ ವರದಿಗಳು, ಛಾಯಾಚಿತ್ರಗಳು, ಕ್ಷೇತ್ರಕಾರ್ಯದ ಅಂಕಿ-ಅಂಶಗಳ ಪಟ್ಟಿ ಒಳಗೊಂಡಿದೆ.

೧.೬. ಇದುವರೆಗೆ ನಡೆದಿರುವ ಅಧ್ಯಯನಗಳು

ಕರ್ನಾಟಕದಲ್ಲಿ ಅಲೆಮಾರಿ ಸಮುದಾಯಗಳನ್ನು ಕುರಿತು ಕೆಲವೇ ಅಧ್ಯಯನಗಳು ನಡೆದಿರುವುದು ಕಂಡುಬರುತ್ತದೆ. ಕರ್ನಾಟಕವನ್ನು ಕೇಂದ್ರೀಕರಿಸಿಕೊಂಡು ಅಲೆಮಾರಿಗಳ ಕುರಿತು ಅಧ್ಯಯನ ಮಾಡಲಾಗಿದೆ. ಆದರೆ ೨೦೦೯, ಡಿಸೆಂಬರ್ ೩೦ರಂದು ಗುಲಬರ್ಗಾ ಜಿಲ್ಲೆಯಿಂದ ವಿಭಜನೆಗೊಂಡ ಯಾದಗಿರಿ ಜಿಲ್ಲೆಯ ಅಲೆಮಾರಿಗಳನ್ನು ಕುರಿತು ಅಷ್ಟಾಗಿ ಅಧ್ಯಯನಗಳು ನಡೆಯದಿರುವುದು ಕಂಡುಬರುತ್ತದೆ. ನಡೆದಿರುವ ಅಧ್ಯಯನಗಳು ಚಿಕ್ಕ ಪುಟ್ಟ ಕೆಲವು ಮಿತಿಗಳನ್ನು ಹೊಂದಿವೆ. ಇವು ಲೇಖನಗಳ ಮೂಲಕ ಅಲ್ಲಲ್ಲಿ ಪ್ರಸ್ತಾಪಗೊಂಡಿರುವುದನ್ನು ಕಾಣಬಹುದಾಗಿದೆ. ಹಾಗಾಗಿ ಹೈದರಾಬಾದ್ ಕರ್ನಾಟಕದ ಕೃಷ್ಣಾ ಮತ್ತು ಭೀಮಾ ನದಿಗಳ ಮಧ್ಯದ ಸಗರನಾಡು ದೋ ಅಬ್ ಪ್ರದೇಶದ ಅಲೆಮಾರಿಗಳ ಕುರಿತು ಅಧ್ಯಯನ ಅಗತ್ಯವಾಗಿದೆ. ಇಲ್ಲಿಯವರೆಗೆ ನಡೆದಿರುವ ಅಧ್ಯಯನಗಳನ್ನು

ಪ್ರಸ್ತುತ ಅಧ್ಯಯನ ಸಂದರ್ಭದಲ್ಲಿ ಅಗತ್ಯಕ್ಕೆ ತಕ್ಕಂತೆ ಬಳಸಿಕೊಳ್ಳುವುದರ ಜೊತೆಗೆ ಲಭ್ಯವಿರುವ ಇನ್ನಿತರ ಆಕರಗಳನ್ನು ಅಂದರೆ ಮೌಖಿಕ, ಜಾನಪದ, ಐತಿಹ್ಯ ಹಾಗೂ ದಂತಕಥೆಗಳನ್ನು ಈ ಸಂದರ್ಭದಲ್ಲಿ ಗಂಭೀರವಾಗಿ ಪರಿಗಣಿಸಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಈ ಪ್ರದೇಶದಲ್ಲಿರುವ ಅಲೆಮಾರಿಗಳ ಕುರಿತು ಇದುವರೆಗೆ ನಡೆದಿರುವ ಅಧ್ಯಯನಗಳನ್ನು ಈ ಕೆಳಗಿನಂತೆ ವಿವರಿಸಲು ಪ್ರಯತ್ನಿಸಲಾಗಿದೆ.

೧. ಅಜ್ಜಯ್ಯ ಅವರ ಪಿಎಚ್.ಡಿ. ಪ್ರಬಂಧ 'ಹೈದ್ರಾಬಾದ್ ಕರ್ನಾಟಕದ ಅಲೆಮಾರಿಗಳ ಸಾಮಾಜೋ ಆರ್ಥಿಕ ಸ್ಥಿತಿಗತಿ', ಕನ್ನಡ ವಿಶ್ವವಿದ್ಯಾಲಯ, ಹಂಪಿ, ಈ ಭಾಗದಲ್ಲಿ ಬರುವ ಅಲೆಮಾರಿಗಳ ಸ್ಥಿತಿಗತಿ ಮಾಹಿತಿ ದೊರೆಯುತ್ತದೆ.

೨. ಈರಪ್ಪ ಅಂಬಯ್ಯ ಅವರ ಎಂ.ಫಿಲ್ ಸಂಪ್ರಬಂಧ 'ಜಾಗತಿಕ ಸಂದರ್ಭದಲ್ಲಿ ಬುಡಕಟ್ಟುಗಳ ಸಮಾಜೋ ಆರ್ಥಿಕ ಸ್ಥಿತಿಗತಿಗಳು', ಕನ್ನಡ ವಿಶ್ವವಿದ್ಯಾಲಯ, ಹಂಪಿ, ಬುಡಕಟ್ಟು ಸಮುದಾಯ ಗಳ ಆರ್ಥಿಕ ವ್ಯವಸ್ಥೆಯ ವಿವರಣೆ ದೊರೆಯುತ್ತದೆ.

೩. ಎಡ್ಗರ್ ಥರ್ಸ್ಟನ್ ಅವರು ರಚಿಸಿದ 'ದಿ ಕ್ಯಾಸ್ಟ್ ಆ್ಯಂಡ್ ಟ್ರೈಬ್ಸ್ ಆಫ್ ಸದರ್ನ್ ಇಂಡಿಯಾ' (೧೯೦೯), ಎನ್ನುವ ಕೃತಿಯಲ್ಲಿ ಕೆಲವು ಅಲೆಮಾರಿ ಸಮುದಾಯಗಳ ಕುರಿತು ಬರೆದಿರುವ ಮಾತುಗಳು ಈ ಜನಾಂಗದ ಅಧ್ಯಯನಕ್ಕೆ ವಿಶಿಷ್ಟ ಭಾಷೆ, ವೃತ್ತಿ, ವಾಸಿಸುವ ಸ್ಥಳ ಇತ್ಯಾದಿ ಕೆಲವೊಂದು ವಿವರಗಳು ದೊರೆಯುತ್ತವೆ.

೪. ನಂಜುಂಡಯ್ಯ ಎಚ್.ವಿ. ಮತ್ತು ಎಲ್.ಕೆ. ಅನಂತಕೃಷ್ಣ ಅಯ್ಯರ್ ಅವರು ಬರೆದಿರುವ 'ದಿ ಮೈಸೂರು ಟ್ರೈಬ್ಸ್ ಆ್ಯಂಡ್ ಕ್ಯಾಸ್ಟ್ ಆಫ್ ಇಂಡಿಯಾ' (೧೯೨೯), ಕೃತಿಯಲ್ಲಿ ಅಲೆಮಾರಿಗಳ ಜೀವನ ಕ್ರಮ ಈ ಸಮುದಾಯಗಳ ಮೂಲ ವೃತ್ತಿ ಮುಂತಾದ ಹಲವು ವಿಷಯಗಳ ವಿವರಣೆ ದೊರೆಯುತ್ತದೆ.

೫. ಬಸವರಾಜ ಹೀರೇಮಠ ಅವರ ಎಂ.ಫಿಲ್ ಸಂಪ್ರಬಂಧ 'ಗುಲಬರ್ಗಾ ಜಿಲ್ಲೆಯ ಬೈಲಪತ್ತಾರರು', ಕನ್ನಡ ವಿಶ್ವವಿದ್ಯಾಲಯ, ಹಂಪಿ, ಈ ಜಿಲ್ಲೆಯಲ್ಲಿ ಬರುವ ಬೈಲ್ ಪತ್ತಾರ ಸಮುದಾಯದ ಸ್ಥಿತಿಗತಿಗಳನ್ನು ಪರಿಚಯಿಸಿದ್ದಾರೆ.

೬. ಮೇತ್ರಿ ಕೆ.ಎಂ., ಅವರ ಸಂಪಾದಕತ್ವದಲ್ಲಿ, ಕರ್ನಾಟಕದ ಅಲೆಮಾರಿ ಸಮುದಾಯಗಳ ಕುರಿತು, ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸಿ ಹೊರತಂದ ಅಲೆಮಾರಿ ಸಮುದಾಯಗಳ ೨೨ ಕೃತಿಗಳಲ್ಲಿ ಸಮುದಾಯಗಳ ಕುರಿತು ಸಮಗ್ರ ಚಿತ್ರಣವನ್ನು ದಾಖಲಿಸಲಾಗಿದೆ.

೭. ಮೇತ್ರಿ ಕೆ.ಎಂ., ಅವರ ಸಂಪಾದಕತ್ವದ ಕನ್ನಡ ವಿಶ್ವವಿದ್ಯಾಲಯ, ಪ್ರಸಾರಾಂಗ ಪ್ರಕಟಿಸಿರುವ 'ಬುಡಕಟ್ಟು ಕುಲಕಸುಬುಗಳು', ಇದರಲ್ಲಿ ಅಲೆಮಾರಿ ಬುಡಕಟ್ಟುಗಳ ವಿವಿಧ ವೃತ್ತಿಗಳ ಸಮಗ್ರ ಮಾಹಿತಿ ದೊರೆಯುತ್ತದೆ.

೮. ರಮೇಶ್ ಸ.ಚಿ., ಅವರ ಸಂಪಾದಕತ್ವದಲ್ಲಿ ಬೀದರನಲ್ಲಿ ನಡೆಸಿದ 'ಅಲೆಮಾರಿಗಳ ಸ್ಥಿತಿಗತಿ', ಎನ್ನುವ ದೇಸಿ ಸಮ್ಮೇಳನದ ಮಾತುಗಳು ಮತ್ತು ಬರಹಗಳು ಈ ಕೃತಿಯ ಸಂಕಲನದಲ್ಲಿ ಪ್ರಕಟವಾಗಿವೆ. ಒಂದು ನೆಲೆಯಿಲ್ಲದೆ ನಿರಂತರ ಜಂಗಮರಾಗಿರುವ ಅನೇಕ ಸಮುದಾಯಗಳ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ, ಕಾನೂನುಗಳ ಸಮಸ್ಯೆಗಳನ್ನು ಬಹುದೃಷ್ಟಿ ಕೋನಗಳಿಂದ ಇಲ್ಲಿ ಚರ್ಚಿಸಲಾಗಿದೆ ಮತ್ತು ಆ ಮೂಲಕ ಅಲೆಮಾರಿ ಸಮುದಾಯಗಳ ಭವಿಷ್ಯ ಕುರಿತ ಹೊಸ ಚಿಂತನೆಗೆ ಸಹಾಯಕವಾದದ್ದನ್ನು ಕಾಣಬಹುದಾಗಿದೆ.

೯. ವೆಂಕಟಸ್ವಾಮಿ ಟಿ. ಅವರ 'ಗವರ್ನ್‌ಮೆಂಟ್ ರಿಪೋರ್ಟ್ ಆಫ್ ದಿ ಸೆಕೆಂಡ್ ಬ್ಯಾಕ್‌ವರ್ಡ್ ಕ್ಲಾಸಸ್ ಕಮೀಷನ್', ಅಲೆಮಾರಿ ಸಮುದಾಯಗಳ ಮತ್ತು ಹಿಂದುಳಿದ ವರ್ಗಗಳ ವಿವರಣೆ ದೊರೆಯುತ್ತದೆ.

೧೦. ಶ್ರೀನಾಥ ಸುಭಾಷ್ ಅವರ ಎಂ.ಫಿಲ್ ಸಂಪ್ರಬಂಧ 'ಅಲೆಮಾರಿ ಸಮುದಾಯಗಳ ಸಾಮಾಜಿಕ ಅಧ್ಯಯನ' (ಶಹಾಪುರ ಪಟ್ಟಣ ಅನುಲಕ್ಷಿಸಿ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ಶಹಾಪೂರ ಪಟ್ಟಣದಲ್ಲಿ ಬರುವ ಅಲೆಮಾರಿಗಳ ಸ್ಥಿತಿಗತಿಯ ಚಿತ್ರಣ ನೀಡಿದ್ದಾರೆ.

೧೧. ಸೈಯದ್ ಸಿರಾಜ್ ಉಲ್ ಹಕ್ ಅವರ 'ದಿ ನಿಜಾಮ್ಸ್ ಡೋಮಿನಿಯನ್ಸ್'(೧೯೨೦), ಎನ್ನುವ ಕೃತಿಯಲ್ಲಿ ಹೈದ್ರಾಬಾದ ಪ್ರಾಂತ್ಯದಲ್ಲಿ ಬರುವ ಅಲೆಮಾರಿ ಸಮುದಾಯಗಳ ರೀತಿ ನೀತಿಗಳು ಜೀವನ ಕ್ರಮ ಮೊದಲಾದವುಗಳ ಚಿತ್ರಣ ಕಂಡುಬರುತ್ತದೆ.

೧೨. ಹಾವನೂರು ಎಲ್.ಜಿ. ಅವರ 'ಕರ್ನಾಟಕ ಬ್ಯಾಕ್‌ವರ್ಡ್ ಕ್ಲಾಸಸ್ ಕಮೀಷನ್ ರಿಪೋರ್ಟ್', ಅಲೆಮಾರಿಗಳ ಅಭಿವೃದ್ಧಿ ಮತ್ತು ಮೀಸಲಾತಿ ಕುರಿತು ಬೆಳಕು ಚೆಲ್ಲುತ್ತದೆ.

ಕರ್ನಾಟಕದ ಅಲೆಮಾರಿಗಳ ಕುರಿತು ಡಾ. ಕೆ.ಎಂ.ಮೇತ್ರಿ ಅವರ ಸಂಪಾದಕತ್ವದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸಿ ಹೊರತಂದ ೨೨ "ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ" ಕೃತಿಗಳು ಅಲೆಮಾರಿ ಸಮುದಾಯಗಳ ಕುರಿತು ಸಮಗ್ರ ಚಿತ್ರಣವನ್ನು ಕಾಣುತ್ತೇವೆ.

೧. ಬಾಲಗುರುಮೂರ್ತಿ, ಪ್ರತಾಪ ರಾ ಬಹುರೂಪಿ, ಅಧ್ಯಯನ ಮಾಲೆ-೧ರಲ್ಲಿ 'ಬುಡ್ಗಜಂಗಮ'ರ ಕುರಿತು ಸಮಗ್ರ ಮಾಹಿತಿಯನ್ನು ನೋಡಬಹುದಾಗಿದೆ.

೨. ಡಾ. ಯಲ್ಲಪ್ಪ ಬಿ. ಹಿಮ್ಮಡಿ, ಅಧ್ಯಯನ ಮಾಲೆ-೨ರಲ್ಲಿ 'ಚೆನ್ನದಾಸರು' ಕುರಿತು ಮೂಲ ಮತ್ತು ಪ್ರಸಾರ, ಆಚರಣೆ, ನಂಬಿಕೆಗಳ ಸಮಗ್ರ ಮಾಹಿತಿಯನ್ನು ನೋಡಬಹುದಾಗಿದೆ.

೩. ಜಾನಕಲ್ ರಾಜಣ್ಣ, ಅಧ್ಯಯನ ಮಾಲೆ–೩ರಲ್ಲಿ 'ದಕ್ಕಲಿಗ'ರ ಸಮುದಾಯ ಕುರಿತು ಸಮಗ್ರ ಮಾಹಿತಿಯನ್ನು ನೋಡಬಹುದಾಗಿದೆ.

೪. ಅಪ್ಪಾಜಿ ಎಸ್. ಸಿಂಧೆ, ಕೆ. ಚಾವಡೆ ಲೋಕೇಶ್, ಅಧ್ಯಯನ ಮಾಲೆ–೪ರಲ್ಲಿ 'ಗೋಸಂಗಿ' ಸಮುದಾಯ ಕುರಿತು ಸಮಗ್ರ ಮಾಹಿತಿ ಇದೆ.

೫. ಚಂದ್ರಪ್ಪ ಎಂ. ದುಶ್ಯಂತ್, ಅಧ್ಯಯನ ಮಾಲೆ–೫ರಲ್ಲಿ 'ಹಂಡಿಜೋಗಿ' ಸಮುದಾಯ ಕುರಿತು ಸಂಕ್ಷಿಪ್ತ ಮಾಹಿತಿ ದೊರೆಯುತ್ತದೆ.

೬. ಮಲ್ಲಿಕಾರ್ಜುನ ಬಿ. ಮಾನ್ಪಡೆ, ಅಧ್ಯಯನ ಮಾಲೆ–೬ರಲ್ಲಿ 'ಕೊರಮ' ಅಲೆಮಾರಿ ಸಮುದಾಯ ಕುರಿತು ಸಮಗ್ರ ಮಾಹಿತಿ ಇದೆ.

೭. ಡಾ. ಸಣ್ಣವೀರಣ್ಣ ದೊಡ್ಡಮನಿ, ಕೆ. ಮಹೇಂದರರಾವ್ ಸಾಸ್ನಿಕ್, ಅಧ್ಯಯನ ಮಾಲೆ–೭ರಲ್ಲಿ 'ಶಿಳ್ಳೇಕ್ಯಾತ' ಸಮುದಾಯ ಕುರಿತು ಸಮಗ್ರ ಮಾಹಿತಿ ಇದೆ.

೮. ಡಾ. ದೊಡ್ಡಮನಿ ಲೋಕರಾಜ, ಶ್ರೀನಿವಾಸ ಎಸ್. ರಾವುಲೋಳ, ಅಧ್ಯಯನ ಮಾಲೆ–೮ರಲ್ಲಿ 'ಸಿಂಧೋಳ್ಳ' ಅಲೆಮಾರಿ ಸಮುದಾಯ ಕುರಿತು ಸಮಗ್ರ ಚಿತ್ರಣವಿದೆ.

೯. ಎಂ.ಎಸ್. ಗಂಟಿ, ಅಧ್ಯಯನ ಮಾಲೆ–೯ರಲ್ಲಿ 'ಸುಡುಗಾಡು ಸಿದ್ಧ' ಅಲೆಮಾರಿ ಸಮುದಾಯ ಕುರಿತು ಸಂಪೂರ್ಣ ಮಾಹಿತಿ ದೊರೆಯುತ್ತದೆ.

೧೦. ಜಗದೀಶ ಕೆ.ಕೆ., ಅಧ್ಯಯನ ಮಾಲೆ–೧೦ರಲ್ಲಿ 'ಡುಂಗ್ರಿ ಗರಾಸಿಯ' ಅಲೆಮಾರಿ ಸಮುದಾಯ ಕುರಿತು ಸಮಗ್ರ ಸ್ಪಷ್ಟ ಚಿತ್ರಣವಿದೆ.

೧೧. ಕುಮುದಾ ಬಿ. ಸುಶೀಲಪ್ಪ, ಅಧ್ಯಯನ ಮಾಲೆ–೧೧ರಲ್ಲಿ 'ಹಕ್ಕಿಪಿಕ್ಕಿ' ಅಲೆಮಾರಿ ಸಮುದಾಯ ಕುರಿತು ಸಂಪೂರ್ಣ ಮಾಹಿತಿ ಇದೆ.

೧೨. ಪಾರ್ಧಿ – ಡಾ. ಲಕ್ಕಿಪೃಥ್ವಿರಾಜ್, ಎಚ್.ಪಿ. ಶಿಕಾರಿ ರಾಮು, ಅಧ್ಯಯನ ಮಾಲೆ–೧೨ರಲ್ಲಿ 'ಪಾರ್ಧಿ' ಅಲೆಮಾರಿ ಸಮುದಾಯ ಕುರಿತು ಸಂಪೂರ್ಣ ಮಾಹಿತಿ ಇದೆ.

೧೩. ಡಾ. ಕೆ.ಎಂ. ಮೇತ್ರಿ, ಸುದರ್ಶನ ಸೆಡ್ಮಕಿ, ಅಧ್ಯಯನ ಮಾಲೆ–೧೩ರಲ್ಲಿ 'ರಾಜಗೊಂಡ' ಅಲೆಮಾರಿ ಸಮುದಾಯ ಕುರಿತು ಸ್ಪಷ್ಟ ಚಿತ್ರಣವಿದೆ.

೧೪. ವಿಶ್ವನಾಥ ಎಲ್. ಬೈಲಪತ್ತಾರ, ಜಗನ್ನಾಥ ಎಲ್. ಬೈಲಪತ್ತಾರ, ಅಧ್ಯಯನ ಮಾಲೆ–೧೪ರಲ್ಲಿ 'ಬೈಲಪತ್ತಾರ' ಅಲೆಮಾರಿ ಸಮುದಾಯದ ಕುರಿತು ಆಚರಣೆ, ವೃತ್ತಿಗಳ ಕುರಿತು ಸಂಪೂರ್ಣ ಮಾಹಿತಿ ನೀಡಿದ್ದಾರೆ.

೧೫. ಕುಪ್ಪೆ ನಾಗರಾಜ, ಅಧ್ಯಯನ ಮಾಲೆ–೧೫ರಲ್ಲಿ 'ದೊಂಬಿದಾಸ' ಅಲೆಮಾರಿ ಸಮುದಾಯದ ಕುಟುಂಬ ವ್ಯವಸ್ಥೆ, ವಿವಾಹ ಪದ್ಧತಿ ಇತ್ಯಾದಿಗಳ ಕುರಿತು ಮಾಹಿತಿ ಇದೆ.

೧೬. ಡಾ. ಬಸವರಾಜ ಹೀರೇಮಠ, ಅಂಜಲಿ ಸಾಳುಂಕೆ, ಅಧ್ಯಯನ ಮಾಲೆ–೧೬ರಲ್ಲಿ 'ಘೀಸಾಡಿ' ಅಲೆಮಾರಿ ಸಮುದಾಯದ ಬದುಕು, ಸಾಹಿತ್ಯ, ಭಾಷೆ, ಬಂಧುತ್ವ ಕುರಿತು ಸಂಪೂರ್ಣ ಮಾಹಿತಿ ನೀಡಿದ್ದಾರೆ.

೧೭. ಶಿವಾನಂದ ಪಾಚಂಗಿ, ಅಧ್ಯಯನ ಮಾಲೆ–೧೭ರಲ್ಲಿ 'ಗೋಂಧಳಿ' ಅಲೆಮಾರಿ ಸಮುದಾಯದ ಕುರಿತು ಆಚರಣೆ, ವೃತ್ತಿಗಳ ಕುರಿತು ಸಂಪೂರ್ಣ ಮಾಹಿತಿ ನೀಡಿದ್ದಾರೆ.

೧೮. ಜೆ.ವಿ. ಬಾಗಡೆ, ಅಧ್ಯಯನ ಮಾಲೆ–೧೮ರಲ್ಲಿ 'ಕಂಜರಭಾಟ' ಅಲೆಮಾರಿ ಸಮುದಾಯ ಕುರಿತು ಸಂಪೂರ್ಣ ಮಾಹಿತಿ ನೀಡಿದ್ದಾರೆ.

೧೯. ಡಾ. ಚಲುವಾದಿ ಬಸವರಾಜು, ಶೇಖರ್‌ಸಿಂಗ್ ಎಸ್., ಅಧ್ಯಯನ ಮಾಲೆ–೧೯ರಲ್ಲಿ 'ಸಿಕ್ಲಿಗರು' ಅಲೆಮಾರಿ ಸಮುದಾಯದ ಬದುಕು, ಬಂಧುತ್ವ ಕುರಿತು ಸಂಪೂರ್ಣ ಮಾಹಿತಿ ನೀಡಿದ್ದಾರೆ.

೨೦. ಡಾ. ಯರ್‍ರಪ್ಪ ಡಿ., ಅಧ್ಯಯನ ಮಾಲೆ–೨೦ರಲ್ಲಿ 'ಅಲೆಮಾರಿ ಕುರುಬ' ಅಲೆಮಾರಿ ಸಮುದಾಯ ಕುರಿತು ಸ್ಪಷ್ಟ ಚಿತ್ರಣವಿದೆ.

೨೧. ಡಾ. ಎಂ. ಗುರುಲಿಂಗಯ್ಯ ವಿ. ನಾಗಪ್ಪ, ಅಧ್ಯಯನ ಮಾಲೆ–೨೧ರಲ್ಲಿ 'ಕಾಡುಗೊಲ್ಲ' ಅಲೆಮಾರಿ ಸಮುದಾಯ ಕುರಿತು ಸ್ಪಷ್ಟ ಚಿತ್ರಣವಿದೆ.

೨೨. ಕರ್ನಾಟಕದ ಬುಡಕಟ್ಟುಗಳು, ಸಂಪುಟ–೨ರಲ್ಲಿ ಡಾ. ಕೆ.ಎಂ. ಮೇತ್ರಿ ಅವರು 'ರಾಜಗೊಂಡ ಬುಡಕಟ್ಟು' ಕುರಿತು ಈ ಅಲೆಮಾರಿ ಸಮುದಾಯದ ಜನನ ಮರಣ, ವಿವಾಹ, ಕುಟುಂಬ ವ್ಯವಸ್ಥೆ ಹಾಗೂ ಉಪಪಂಗಡಗಳ ಸಮಗ್ರ ಮಾಹಿತಿ ದೊರೆಯುತ್ತದೆ.

೨೩. ಕರ್ನಾಟಕದ ಬುಡಕಟ್ಟುಗಳು ಸಂಪುಟ–೨ರಲ್ಲಿ ಡಾ. ಬಿ.ಪಿ. ರಾಮಯ್ಯ ಅವರು 'ಕೊರಮ'ರ ಕುರಿತು, ಹುಟ್ಟಿನ ನಂಬಿಕೆಗಳ ಕುರಿತು, ಕೊರವಂಜಿ ಆಕೆಯ ಬದುಕಿನ ಕುರಿತು ಸಮಗ್ರ ಚಿತ್ರಣ ವನ್ನು ನೀಡಿದ್ದಾರೆ.

೨೪. ದಾದಾಪೀರ್ ಅವರು 'ಕುರುಮಾಮ ಅಲೆಮಾರಿ'ಗಳ ಕುರಿತು ಕರ್ನಾಟಕದ ಬುಡಕಟ್ಟುಗಳು ಸಂಪುಟ–೨ರಲ್ಲಿ ಈ ಸಮುದಾಯದ ಭವಿಷ್ಯ ಹೇಳುವುದರ ಕುರಿತು ಅವರ ಉಪಪಂಗಡ ಮತ್ತು ಹುಟ್ಟು ಸಾವಿನ ಬಗ್ಗೆ ಇರುವ ಐತಿಹ್ಯಗಳ ಚಿತ್ರಣವನ್ನು ತೆರೆದಿಟ್ಟಿದ್ದಾರೆ.

೨೫. ಡಾ. ಮಂಜುನಾಥ ಬೇವಿನಕಟ್ಟಿ ಅವರು 'ಬುಡ ಬುಡುಕೆ ಅಲೆಮಾರಿ ಸಮುದಾಯ'ದ ಬಗ್ಗೆ ಕರ್ನಾಟಕದ ಬುಡಕಟ್ಟುಗಳು ಸಂಪುಟ–೨ರಲ್ಲಿ ಮೂಲ ನೆಲೆ, ವಾಸ, ಆಚರಣೆ, ಕುಟುಂಬ ವ್ಯವಸ್ಥೆ, ವಿವಾಹಗಳ ಕುರಿತು ಮಾಹಿತಿಗಳನ್ನು ನೀಡಿರುವುದು ಕಂಡುಬರುತ್ತದೆ.

೨೬. ಕರ್ನಾಟಕದ ಬುಡಕಟ್ಟುಗಳು ಸಂಪುಟ–೨ರಲ್ಲಿ ಯಳನಾಡು ಅಂಜನಪ್ಪ ಅವರು 'ಹಗಲುವೇಷ'

ದವರ ಸಂಸ್ಕೃತಿ ಬುಡಕಟ್ಟಿನ ಲಕ್ಷಣ ಮತ್ತು ಸ್ವರೂಪ ಜನಾಂಗದ ಹೆಸರಿನ ಕುರಿತು ವಿವರಗಳು ದೊರೆಯುತ್ತವೆ.

೨೭. ಡಾ.ಕೇಶವನ್ ಪ್ರಸಾದ್, ಕೆ. ಮರಟ್ಟಿ ಅವರು ಕರ್ನಾಟಕದ ಬುಡಕಟ್ಟುಗಳು ಸಂಪುಟ-೨ರಲ್ಲಿ 'ದೊಂಬರ' ಹಿನ್ನೆಲೆ, ಜೀವನಕ್ರಮ, ಭಾಷೆ ಮತ್ತು ಉಡುಗೆ ತೊಡುಗೆ ಮುಂತಾದವುಗಳ ಸಮಗ್ರ ಮಾಹಿತಿ ಸಿಗುತ್ತದೆ.

೨೮. ಡಾ. ಹರಿಲಾಲ ಪವಾರ ಅವರು ಕರ್ನಾಟಕದ ಬುಡಕಟ್ಟುಗಳು ಸಂಪುಟ-೨ರಲ್ಲಿ 'ಕೋಲೆ ಬಸವ' ಅಲೆಮಾರಿ ಸಮುದಾಯದ ಪರಂಪರೆ, ಜನನ ಸಂಸ್ಕಾರ, ನಾಮಕರಣ ಇತ್ಯಾದಿ ಕುರಿತು ವಿವರಗಳು ದೊರೆಯುತ್ತದೆ.

೨೯. ಡಾ. ಟಿ.ಎಂ. ಭಾಸ್ಕರ್ ಅವರ 'ಸುಡುಗಾಡು ಸಿದ್ಧರು : ಒಂದು ಸಾಂಸ್ಕೃತಿಕ ಅಧ್ಯಯನ' ಪ್ರಕಟಿತ ಪ್ರಬಂಧದಲ್ಲಿ ಈ ಜನಾಂಗದ ಜೀವನದ ಸ್ಥಿತಿಗತಿಯ ಸಂಪೂರ್ಣವಾದ ವಿವರಣೆಯನ್ನು ಪಡೆಯಬಹುದಾಗಿದೆ.

ಅಧ್ಯಾಯ ೨

ಯಾದಗಿರಿ ಜಿಲ್ಲೆಯ ಕ್ಷೇತ್ರ ಪರಿಚಯ

೨.೧ ಕ್ಷೇತ್ರ ಪರಿಚಯ

೨.೨. ಯಾದಗಿರಿಯ ಐತಿಹಾಸಿಕ ಹಿನ್ನೆಲೆ

೨.೩. ಭೌಗೋಳಿಕ ಹಿನ್ನೆಲೆ

೨.೪. ಅಲೆಮಾರಿಗಳ ಪದ ಪರಿಚಯ

೨.೫. ಅಲೆಮಾರಿಗಳ ಸ್ಥೂಲ ಪರಿಚಯ

೨.೬ ಅಲೆಮಾರಿಗಳ ಪರ್ಯಾಯ ಪದಗಳು

೨.೭ ಜನಸಂಖ್ಯೆ ಮತ್ತು ಪ್ರಸಾರ ನೆಲೆಗಳು

ಅಧ್ಯಾಯ ಎರಡು

ಯಾದಗಿರಿ ಜಿಲ್ಲೆಯ ಕ್ಷೇತ್ರ ಪರಿಚಯ

ಕರ್ನಾಟಕ ಘನ ಸರ್ಕಾರವು ಯಾದಗಿರಿ ಜಿಲ್ಲೆಯನ್ನು ರಾಜ್ಯದ ೩೦ನೇ ಜಿಲ್ಲೆಯಾಗಿ ೨೦೦೯ರ ಡಿಸೆಂಬರ್ ೩೦ರಂದು ಗುಲಬರ್ಗಾ ಜಿಲ್ಲೆಯಿಂದ ಬೇರ್ಪಡಿಸಿತು. ಗುಲಬರ್ಗಾ ಜಿಲ್ಲೆಯ ತಾಲೂಕು ಕೇಂದ್ರವಾಗಿದ್ದ ಯಾದಗಿರಿ, ಶಹಾಪುರ ಮತ್ತು ಸುರುಪುರ ಈ ಮೂರು ತಾಲೂಕುಗಳನ್ನೊಳ ಗೊಂಡ ಯಾದಗಿರಿ ಜಿಲ್ಲಾಕೇಂದ್ರವಾಗಿದೆ.

ಜಿಲ್ಲೆಯಲ್ಲಿ ಭೀಮಾ ಮತ್ತು ಕೃಷ್ಣಾ ನದಿಗಳು ಹರಿಯುತ್ತಿದ್ದರೂ ಜಿಲ್ಲೆಯ ಕೆಲವು ಮತ ಕ್ಷೇತ್ರದ ಭಾಗಗಳಿಗೆ ನೀರಾವರಿ ಸೌಲಭ್ಯ ಇಲ್ಲದಿರುವುದನ್ನು ಕಾಣಬಹುದು. ಯಾದಗಿರಿ ಜಿಲ್ಲೆಯಲ್ಲಿ ಹಲವಾರು ಕೆರೆಗಳು ಇರುವುದರಿಂದ ಈ ಭಾಗದ ಕೆಲವು ರೈತರಿಗೆ ಈ ಕೆರೆಗಳೇ ನೀರಾವರಿಗೆ ಆಧಾರವಾಗಿದೆ.

ರಾಜ್ಯದ ಉತ್ತರ ಭಾಗದಲ್ಲಿರುವ ಯಾದಗಿರಿ ಜಿಲ್ಲೆಯ ಸುರುಪುರ, ಶಹಾಪುರ, ಯಾದಗಿರಿ ತಾಲೂಕಗಳನ್ನು ಒಳಗೊಂಡಿದೆ. ಈ ಪ್ರದೇಶವು ಒಣ ಹವೆಯಿಂದ ಕೂಡಿದ್ದು, ಹೆಚ್ಚಾಗಿ ಮರಳು ಮಿಶ್ರಿತ ಜೇಡಿಮಣ್ಣು ಮತ್ತು ಕಪ್ಪುಮಣ್ಣಿನಿಂದ ಕೂಡಿದ ಬಹು ವಿಶಾಲವಾದ ಬಯಲು ನಾಡಾಗಿದೆ. ನೀರಾವರಿ ಮತ್ತು ಒಣ ಬೇಸಾಯ ಮತ್ತು ಅರೆ ಕೃಷಿಕಾರ್ಮಿಕರರು ಈ ಪ್ರದೇಶದಲ್ಲಿ ಹೆಚ್ಚು ಕಂಡುಬರುವರು. ಐಷಾರಾಮದ ವೈಭವಯುತ ಜೀವನವಿಲ್ಲದ, ಅಪಾರ ದೈವಭಕ್ತಿಯೊಂದಿಗೆ ಸಂಬಂಧಗಳನ್ನು ಹೆಣೆದುಕೊಂಡು ಸಂಗೀತ, ಪ್ರದರ್ಶನ ಕಲೆಗಳಿಗೆ ಗೌರವ ಕೊಡುವ ಅಲೆಮಾರಿಗಳು

ಈ ಸ್ಥಳದಲ್ಲಿದ್ದಾರೆ. ಈ ಸಮುದಾಯಗಳು ಉತ್ಪಾದಿಸುವ ಕರಕುಶಲ ವಸ್ತುಗಳು ಈ ಭಾಗದ ಜನತೆಗೆ ಬಹು ಇಷ್ಟವಾಗುವುದರಿಂದ ಅಲೆಮಾರಿ ಸಮುದಾಯಗಳು ಈ ಜಿಲ್ಲೆಯನ್ನು ವಾಸದ ನೆಲೆಯಾಗಿ ಆಶ್ರಯಿಸಿರುವುದು ಕಂಡುಬರುತ್ತದೆ.

ಅಲೆಮಾರಿ ಸಮುದಾಯಗಳು ತಮ್ಮ ಜೊತೆಯಲ್ಲಿರುವ ಪಶುಸಂಪತ್ತುಗಳು ತಂಗಲು ವಿಶಾಲವಾದ ಬಯಲು ಇರುವುದರಿಂದ, ಬಿಡಾರ ಹೂಡಲು ಗ್ರಾಮ ಮತ್ತು ನಗರ ಪ್ರದೇಶಗಳಲ್ಲಿ ಸೂಕ್ತ ಸ್ಥಳವಾಗಿರುವುದರಿಂದ ಈ ಜಿಲ್ಲೆಯನ್ನೇ ತಮ್ಮ ವಾಸ ಸ್ಥಾನವಾಗಿ ರೂಪಿಸಿಕೊಂಡಿದ್ದಾರೆ. ಬಯಲು ಜಾಗ ದೊರೆಯುವುದರಿಂದ ಗ್ರಾಮ ಅಥವಾ ನಗರಗಳು ಬಹಳಷ್ಟು ಜನಸಂಖ್ಯೆಯಿಂದ ಕೂಡಿರುವ ಕಾರಣ ಇವರಿಗೆ ಈ ಪ್ರದೇಶ ಸೂಕ್ತವಾಗಿದೆ. ಇಲ್ಲಿ ಬೆಳೆಯುವ ಆಹಾರ ಬೆಳೆಗಳಾದ ಭತ್ತ, ಜೋಳ, ಕಡಲೆ, ನವಣೆ ಇತ್ಯಾದಿಗಳಿಂದ ಆಹಾರದ ರೂಪದಲ್ಲಿ ರೊಟ್ಟಿ, ಅನ್ನ ದೊರೆಯುವುದರಿಂದ ಈ ಪ್ರದೇಶವನ್ನು ಇಷ್ಟಪಡುತ್ತಾರೆ.

ಅಲೆಮಾರಿಗಳು ಉತ್ಪಾದಿಸುವ ಕೃಷಿ ಉಪಕರಣಗಳು, ಗೃಹೋಪಯೋಗಿ ವಸ್ತುಗಳು, ಆಲಂಕಾರಿಕ ಸಾಮಗ್ರಿಗಳು, ಧಾರ್ಮಿಕ ವಸ್ತುಗಳು ಇತ್ಯಾದಿ ವಸ್ತುಗಳನ್ನು ತಾವು ವಾಸಿಸುವ ಕಡೆಗಳಲ್ಲಿ ಮನೆ ಬಾಗಿಲಿಗೆ ತಲುಪಿಸುವುದನ್ನು ಈ ಭಾಗದ ಜನತೆ ಇಷ್ಟಪಡುತ್ತಾರೆ. ಪೂರ್ಣ ಪ್ರಮಾಣದಲ್ಲಿ ಅಲ್ಲದಿದ್ದರೂ ಅಲ್ಪವಾದರೂ ಆಹಾರ, ಹಣ, ವಸ್ತುಗಳು, ಬಟ್ಟೆಗಳನ್ನು ನೀಡಿ ಪಡೆಯುತ್ತಾರೆ. ಎಲ್ಲಾ ಧರ್ಮದವರನ್ನು ಪ್ರೀತಿಸುವ ಅಲೆಮಾರಿಗಳು ಈ ಪ್ರದೇಶದಲ್ಲಿ ತಮ್ಮ ವೃತ್ತಿಗಳನ್ನು ಕೈಗೊಳ್ಳುತ್ತಾರೆ. ಈ ಜಿಲ್ಲೆಯ ವಾತಾವರಣವನ್ನು ಮೈಗೂಡಿಸಿಕೊಂಡವರಾಗಿದ್ದಾರೆ. ಹಿಂದುಳಿದ ಪ್ರದೇಶದಲ್ಲಿ ಹಿಂದುಳಿದವರೇ ಆಶ್ರಯ ನೀಡುವವರಾಗಿರುವುದರಿಂದ ಈ ಪ್ರದೇಶದಲ್ಲಿ ಅಲೆಮಾರಿಗಳು ಅಲೆಯುತ್ತಿದ್ದಾರೆ. ಆದ್ದರಿಂದಲೆ ಅಲೆಮಾರಿ ಸಮುದಾಯಗಳಿಗೆ ಇದು ಬಹು ಇಷ್ಟವಾದ ಪ್ರದೇಶವಾಗಿದೆ. ವಿವಿಧ ಬಗೆಯ ಅಲೆಮಾರಿ ಸಮುದಾಯಗಳಿರುವುದನ್ನು ನಾವಿಲ್ಲಿ ಕಾಣಬಹುದಾಗಿದೆ.

೨.೧ ಕ್ಷೇತ್ರ ಪರಿಚಯ

ಯಾದಗಿರಿ ಜಿಲ್ಲೆಯು ಇತ್ತೀಚಿನ ದಿನಗಳಲ್ಲಿ ಅಂದರೆ ನೂತನ ಜಿಲ್ಲೆಯಾಗಿ ಘೋಷಣೆಯಾದ ದಿನಗಳಿಂದ ಪ್ರತಿಯೊಂದು ಹಂತದಲ್ಲಿ ಅಭಿವೃದ್ಧಿ ಹೊಂದಲು ನಿರಂತರವಾಗಿ ಮುನ್ನಡೆಯುತ್ತಿದೆ. ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗೆ ಉತ್ತಮ ಆಡಳಿತ ರೂಪಿಸಿದ ಇಲ್ಲಿಯ ಅಧಿಕಾರಿವರ್ಗಗಳು ಮತ್ತು ಜನರು ಹಾಗೂ ಮುಖಂಡರು ಹಗಲಿರುಳೆನ್ನದೆ ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಜಿಲ್ಲೆಯನ್ನು ಒಂದು ಉತ್ತಮ ಮಾದರಿ ಜಿಲ್ಲೆಯನ್ನಾಗಿ ಮಾಡಲು ಸೇವಾಸಂಸ್ಥೆಗಳು, ಸರಕಾರ, ಉನ್ನತಮಟ್ಟದ ಅಧಿಕಾರಿಗಳು, ಈ ಭಾಗದ ರಾಜಕಾರಣಿಗಳು, ಸಮಾಜಸೇವಕರು ತಮ್ಮ ಶಕ್ತಿ ಮೀರಿ ಕಾರ್ಯ ನಿರ್ವಹಿಸುತ್ತಿರುವುದು ಕಂಡುಬರುತ್ತದೆ.

ಜಿಲ್ಲೆಯ ಭೂಮಿಯು ಹಲವಾರು ಸಂಪನ್ಮೂಲಗಳಿಂದ ಕೂಡಿದ್ದು ಕೃಷಿ ಬೆಳವಣಿಗೆಗೆ ಪೂರಕವಾಗಿದೆ. ಯಾದಗಿರಿಯನ್ನು ಸುಂದರಗೊಳಿಸಲು ರಸ್ತೆ ಅಗಲೀಕರಣ ಮಾಡುವುದರ ಮೂಲಕ ರಸ್ತೆ ಜಾಗವನ್ನು ಆಕ್ರಮಿಸಿದ ಕಟ್ಟಡಗಳನ್ನು ನೆಲಸಮ ಮಾಡಿ ಸಾರಿಗೆ ಸಂಪರ್ಕಕ್ಕೆ ಅನುಕೂಲ ಮಾಡಿ ಕೊಡುವಲ್ಲಿ ಜಿಲ್ಲಾ ಆಡಳಿತ ನಿರತವಾಗಿದೆ.

ಗುಲ್ಬರ್ಗಾ ಜಿಲ್ಲೆ ಕರ್ನಾಟಕದ ಉತ್ತರ ಭಾಗದಲ್ಲಿದೆ. ೧೯೫೬ರಲ್ಲಿ ಭಾರತದ ರಾಜ್ಯಗಳ ಮರುವಿಂಗಡಣೆಯಾದಾಗ ಹೈದ್ರಾಬಾದ್ ಕರ್ನಾಟಕದ ಪ್ರದೇಶದಿಂದ ಅಂದಿನ ಮೈಸೂರು ರಾಜ್ಯಗಳಿಗೆ ಸೇರಿದ ಮೂರು ಜಿಲ್ಲೆಗಳಲ್ಲಿ ಗುಲ್ಬರ್ಗಾವು ಒಂದು. ಈ ಜಿಲ್ಲೆಯಲ್ಲಿ ಯಾದಗಿರಿ ತಾಲೂಕು ಕೂಡ ಸೇರಿತ್ತು. ಆಡಳಿತದ ಹಿತದೃಷ್ಟಿಯಿಂದ ಗುಲ್ಬರ್ಗಾ ಜಿಲ್ಲೆಯನ್ನು ವಿಭಜನೆ ಮಾಡಿ ನೂತನ ಯಾದಗಿರಿ ಜಿಲ್ಲೆಯನ್ನು ಕರ್ನಾಟಕ ರಾಜ್ಯದ ಮೂವತ್ತನೇ ಜಿಲ್ಲೆಯೆಂದು ಗುಲ್ಬರ್ಗಾದಲ್ಲಿ ನಡೆದ ಅಧಿವೇಶನದಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪನವರು ಆದೇಶ ಹೊರಡಿಸಿದರು. ಅಧಿಕೃತವಾಗಿ ಯಾದಗಿರಿ ಜಿಲ್ಲೆಯನ್ನು ದಿನಾಂಕ ೩೦-೧೨-೨೦೦೯ರಂದು ಘೋಷಿಸಲಾಯಿತು. ನಂತರ ಮಾನ್ಯ ಮುಖ್ಯಮಂತ್ರಿಗಳೇ ನೂತನ ಜಿಲ್ಲೆಯನ್ನು ಉದ್ಘಾಟನೆ ಮಾಡಿದರು. ಈಗ ಯಾದಗಿರಿಯು ಅನೇಕ ಹೊಸ ಕಛೇರಿಗಳನ್ನು ಒಳಗೊಳ್ಳುವುದರ ಮೂಲಕ ಹೊಸ ರೂಪ ಪಡೆದುಕೊಂಡು ಕಾರ್ಯ ನಿರ್ವಹಿಸುತ್ತಿದೆ.

ಈ ಯಾದಗಿರಿ ಜಿಲ್ಲೆಯು ಸಮುದ್ರ ಮಟ್ಟದಿಂದ ಸುಮಾರು ೪೦೦ರಿಂದ ೫೦೦ ಮೀಟರ್ ಎತ್ತರದಲ್ಲಿದೆ. ಯಾದಗಿರಿ ಜಿಲ್ಲೆ ಪ್ರಮುಖವಾಗಿ ಕೃಷ್ಣಾ ಮತ್ತು ಭೀಮಾ ನದಿಗಳು ಹರಿಯುತ್ತವೆ. ಸುರುಪುರ ತಾಲ್ಲೂಕಿನ ನಾರಾಯಣಪುರದಲ್ಲಿ ಕೃಷ್ಣಾ ನದಿಗೆ ಬಸವಸಾಗರ ಅಣೆಕಟ್ಟನ್ನು ಕಟ್ಟಲಾಗಿದೆ. ಯಾದಗಿರಿ ಜಿಲ್ಲೆಯು ಪ್ರಮುಖವಾಗಿ ಅಂತರ ರಾಜ್ಯ ಕಲ್ಪಿಸುವ ರೈಲ್ವೆ ಸಂಪರ್ಕವನ್ನು ಪಡೆದಿದೆ. ಇದು ನೆರೆ ರಾಜ್ಯಗಳಾದ ಆಂಧ್ರ ಪ್ರದೇಶ, ಮಹಾರಾಷ್ಟ್ರ, ತಮಿಳುನಾಡಿಗೆ ಸಂಪರ್ಕ ಕಲ್ಪಿಸಿಕೊಡುತ್ತದೆ. ಯಾದಗಿರಿ ಜಿಲ್ಲೆಗೆ ಯಾದಗಿರಿ ತಾಲೂಕು, ಸುರುಪುರ ಮತ್ತು ಶಹಾಪುರ ಈ ಮೂರು ತಾಲೂಕುಗಳು ಮಾತ್ರ ಸೇರ್ಪಡೆಯಾಗಿದೆ.

೨.೨. ಯಾದಗಿರಿಯ ಐತಿಹಾಸಿಕ ಹಿನ್ನೆಲೆ

ಅಂದಿನ ಆಳರಸರು ಪ್ರಜೆಗಳ ಹಾಗೂ ತಮ್ಮ ರಕ್ಷಣೆಗೋಸ್ಕರ ಭದ್ರವಾದ ಕೋಟೆ ಕೊತ್ತಲಗಳನ್ನು ಕಟ್ಟಿಸುತ್ತಿದ್ದರು. ಅವುಗಳಲ್ಲಿ ಸಿರಿದುರ್ಗ, ಜಲದುರ್ಗ, ವನದುರ್ಗಗಳೆಂದು ಮೂರು ವಿಧ. ಅಂತಹವುಗಳಲ್ಲಿ ನೈಸರ್ಗಿಕವಾಗಿ ಮಹತ್ವದ ರಕ್ಷಣೆಯನ್ನು ಒದಗಿಸುವ ಎತ್ತರದ ಗಿರಿದುರ್ಗಗಳಲ್ಲಿ ಮೂರು ಸುತ್ತಿನ ಯಾದಗಿರಿ ಪಟ್ಟಣದ ಗಿರಿದುರ್ಗವು ಒಂದು.

ಯಾದಗಿರಿ ಶಬ್ದದ ಉತ್ಪತ್ತಿಯ ಬಗ್ಗೆ ಜನಸಾಮಾನ್ಯರಲ್ಲಿ ಹಲವು ಬಗೆಯ ಅಭಿಪ್ರಾಯಗಳು ಕಂಡುಬರುತ್ತವೆ. ಈ ಹೇಳಿಕೆಗೆ ಯಾವುದೇ ಐತಿಹಾಸಿಕ ಅರ್ಥಗಳಿಲ್ಲದಿರುವುದು ಸತ್ಯವಾಗಿದೆ.

ಯಾದಗಿರಿ ಎಂದರೆ ಯಾದವರು ಆಳಿದ ಗಿರಿ ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಈ ಹೇಳಿಕೆ ಸತ್ಯವಾದುದಲ್ಲ. ಏಕೆಂದರೆ ಯಾದವರಿಂದ ಕ್ರಿ.ಶ. ೧೧೮೭ರಿಂದ ೧೩೧೮ರವರೆಗೆ ಈ ದುರ್ಗ ಅಳ್ವಿಕೆಗೆ ಒಳಪಟ್ಟಿದ್ದರೂ ಅವರಿಗಿಂತ ಪೂರ್ವದಲ್ಲಿ ಚಾಲುಕ್ಯರ ಕಾಲಕ್ಕೆ(ಕ್ರಿ.ಶ. ೯೭೩ರಿಂದ ೧೧೯೨) ಸ್ವಲ್ಪ ಕಾಲದವರೆಗೆ ತಾತ್ಕಾಲಿಕ ರಾಜಧಾನಿಯಾಗಿದ್ದು ಈ ದುರ್ಗಕ್ಕೆ ಯಾದಗಿರಿ ಎಂದೇ ಕರೆಯಲಾಗಿತ್ತು ಎಂದು ಐತಿಹಾಸಿಕ ಉಲ್ಲೇಖವಿದೆ.

ಇನ್ನೊಂದು ಪ್ರಕಾರ

ಪ್ರಕೃತಿದತ್ತವಾಗಿ ನೋಡಿದರೆ ಗಿರಿಯು ಮಲಗಿದ ಎತ್ತಿನ ಡುಬ್ಬದಂತೆ ಕಾಣುತ್ತದೆ. ಆದುದರಿಂದ ಇದು ಎತ್ತಿನಗಿರಿ ಎಂದು ಅಭಿಪ್ರಾಯ ಪಡಲಾಗಿದೆ. ಯಾವುದೇ ಕೋನದಿಂದ ನೋಡಿದರೂ ಅದು ಹಾಗೆ ಕಾಣುತ್ತದೆ ಎಂಬ ಅಭಿಪ್ರಾಯವಿದೆ.

ಭೌಗೋಳಿಕವಾಗಿ ಈ ಪ್ರದೇಶದಲ್ಲಿ ಇದು ಇತರ ಗಿರಿಗಳಿಗಿಂತ ಎತ್ತರದ ಗಿರಿಯಾಗಿರುವುದರಿಂದ ಇದನ್ನು ಎತ್ತರದ ಗಿರಿ, ಯಾತಗಿರಿ ಹಾಗೂ ಯಾದಗಿರಿಯಾಗಿ ರೂಪಗೊಂಡಿರಬಹುದು ಎಂಬದನ್ನು ಹಲವರ ಹೇಳಿಕೆಗಳ ಮೂಲಕ ಕಂಡುಕೊಳ್ಳಬಹುದಾಗಿದೆ. ಕನ್ನಡದ ವ್ಯಾಕರಣದ ಅನುಸಾರವಾಗಿ 'ತ'ಕಾರವು 'ದ'ಕಾರವಾಗಿ ಪರಿವರ್ತನೆಯಾಗಿರುವುದರಿಂದ 'ಎತ್ತರ' ಎಂಬುದು 'ಎದ್ದರ'ವಾಗಿ ಮುಂದೆ ಅದು 'ದ್ವಿತ್ವ' ಮತ್ತು 'ರ್'ಕಾರಗಳ ಲೋಪವಾಗಿ 'ಎ'ಕಾರ 'ಯ'ಕಾರವಾಗಿ ಎದ್ದಗಿರಿ, ಯಾತಗಿರಿ, ಯಾದಗಿರಿ ಆಗಿರಬೇಕೆಂಬ ಊಹೆಯನ್ನು ಡಾ. ಭೀಮರಾಯ ಲಿಂಗೇರಿ ಅವರು ತಮ್ಮ ಪಿಎಚ್.ಡಿ. ಮಹಾಪ್ರಬಂಧವಾದ 'ಯಾದಗಿರಿ ಒಂದು ಸಂಸ್ಕೃತಿ ಅಧ್ಯಯನ'ದಲ್ಲಿ ಅಭಿಪ್ರಾಯ ಪಟ್ಟಿದ್ದಾರೆ. ಇವರ ಈ ಅಭಿಪ್ರಾಯ ಸರಿ ಇದೆ ಎನ್ನಬಹುದು ಎನಿಸುತ್ತದೆ.

ಯಾದಗಿರಿ ಪ್ರಾಚೀನ ಕಾಲದಲ್ಲಿ ಯೋಗಗಿರಿ, ಯಾತಾಗಿರಿ, ಯಾದವಗಿರಿ, ಎತ್ತಿನಗಿರಿ ಎಂದು ಪ್ರಖ್ಯಾತಿಯನ್ನು ಪಡೆದುಕೊಂಡಿದೆ. ಯಾದಗಿರಿ ಜಿಲ್ಲೆಯು ಪರಿವರ್ತನೆಗೆ ಒಳಪಡುತ್ತಿರುವ ಜಿಲ್ಲೆಯಾಗಿದ್ದು; ಇದು ಅನೇಕ ವಲಸಿಗರಿಗೆ, ಅಲೆಮಾರಿಗಳಿಗೆ ಆಶ್ರಯತಾಣವಾಗಿದೆ. ಇತ್ತೀಚಿನ ದಿನಗಳಲ್ಲಿ ಹಳ್ಳಿಗಳಲ್ಲಿ ವಾಸ ಮಾಡುತ್ತಿರುವ ಕುಟುಂಬಗಳು ಕೃಷಿಕ್ಷೇತ್ರವನ್ನು ತೊರೆದು ಉದ್ಯೋಗವನ್ನಾಧರಿಸಿ ವೈಭವದ ಜೀವನವನ್ನು ಸಾಗಿಸುವುದಕ್ಕೆ ಪಟ್ಟಣಕ್ಕೆ ಬಂದು ಸೇರಲು ಪ್ರಾರಂಭಿಸಿರುವುದರಿಂದ ಜನಸಂಖ್ಯೆ ಬೆಳೆಯುತ್ತಿದೆ.

ಯಾದಗಿರಿ ಜಿಲ್ಲೆಯ ಪೂರ್ವಭಾಗಕ್ಕೆ ನೆರೆರಾಜ್ಯ ಆಂಧ್ರಪ್ರದೇಶವನ್ನು ಹೊಂದಿದ್ದು ಪಶ್ಚಿಮಕ್ಕೆ ಬಿಜಾಪುರ ಜಿಲ್ಲೆ, ದಕ್ಷಿಣಕ್ಕೆ ರಾಯಚೂರು ಜಿಲ್ಲೆ ಮತ್ತು ಉತ್ತರಕ್ಕೆ ಗುಲ್ಬರ್ಗಾ ಜಿಲ್ಲೆಯನ್ನು ಹೊಂದಿದೆ. ಈ ಜಿಲ್ಲೆಯು ಶೈಕ್ಷಣಿಕವಾಗಿ ಪ್ರಗತಿ ಪಡೆಯುತ್ತಾ ಸಾಗುತ್ತಿದೆ. ಆದರೂ ಸಾಕಷ್ಟು ಪ್ರಮಾಣದಲ್ಲಿ ಶೈಕ್ಷಣಿಕ ವಲಯದಲ್ಲಿ ಪ್ರಗತಿ ಕಂಡುಕೊಳ್ಳಬೇಕಾದ ಅವಶ್ಯಕತೆ ಇದೆ. ಹೀಗಾಗಿ ಯಾದಗಿರಿಯನ್ನು ಶೈಕ್ಷಣಿಕ ಜಿಲ್ಲೆಯನ್ನಾಗಿ ಮಾಡಲಾಗಿತ್ತು.

೨.೩. ಭೌಗೋಳಿಕ ಹಿನ್ನೆಲೆ

ಯಾದಗಿರಿ ಜಿಲ್ಲೆಯಲ್ಲಿ ಸೇರಿದ ಸುರುಪುರ ಮತ್ತು ಶಹಾಪುರ ತಾಲೂಕುಗಳು ನೀರಾವರಿ ಯೋಜನೆಯ ಸಮೃದ್ಧಿಯನ್ನು ಹೊಂದಿವೆ. ಯಾದಗಿರಿ ತಾಲೂಕು ಮಾತ್ರ ನೀರಾವರಿ ಸೌಲಭ್ಯದಿಂದ ವಂಚಿತವಾಗಿದೆ. ಆದರೂ ಕೂಡ ಭೀಮಾನದಿಯ ದಡದಲ್ಲಿ ನೀರಾವರಿ ಕಂಡುಬರುತ್ತದೆ. ಕೆರೆಗಳು ನೀರಾವರಿಗೆ ಸಹಾಯಕವಾಗಿವೆ. ಯಾದಗಿರಿಯಿಂದ ೧೨ ಕಿ.ಮಿ. ಅಂತರದಲ್ಲಿ ಹತ್ತಿಕುಣಿ ಅಣೆಕಟ್ಟು ಮತ್ತು ಅದೇ ಮಾರ್ಗದಲ್ಲಿ ಸೌದಾಗರ ಎಂಬ ಚಿಕ್ಕ ಪ್ರಮಾಣದ ಅಣೆಕಟ್ಟು ಭೀಮಾನದಿಗೆ ಕಟ್ಟಲಾದ ಬ್ರಿಜ್ ಕಂ ಬ್ಯಾರೇಜ್‌ಗಳನ್ನು ಒಳಗೊಂಡಿದೆ. ಯಾದಗಿರಿ ತಾಲೂಕಿನ ರೈತರು ನೀರಾವರಿಗಾಗಿ ಪಂಪ್‌ಸೆಟ್‌ಗಳನ್ನು, ಬಾವಿಗಳನ್ನು ತೋಡಿಕೊಂಡು ನೀರಾವರಿ ಸೌಲಭ್ಯ ಮಾಡಿಕೊಂಡಿದ್ದಾರೆ. ಯಾದಗಿರಿಯ ಸುತ್ತಮುತ್ತಲಿನ ಪ್ರದೇಶವು ಬೆಟ್ಟಗುಡ್ಡಗಳಿಂದ ಕೂಡಿದ್ದು ಮಳೆಗಾಲದಲ್ಲಿ ಮಾತ್ರ ಸದಾ ಹಸಿರಿನಿಂದ ಕೂಡಿರುತ್ತದೆ. ಬೇಸಿಗೆ ಕಾಲದಲ್ಲಿ ಅಧಿಕ ಪ್ರಮಾಣದ ಬಿಸಿಲನ್ನು ಹೊಂದಿದೆ. ಇತ್ತೀಚಿನ ದಿನಗಳಲ್ಲಿ ಮಳೆಯ ಅಭಾವದಿಂದ ಈ ಎರಡು ಸಣ್ಣ ಅಣೆಕಟ್ಟುಗಳು ನೀರಿಲ್ಲದೆ ಬರಡಾಗಿದ್ದವು. ಇಲ್ಲಿನ ಪ್ರಮುಖ ಬೆಳೆಗಳು ಎಂದರೆ ಜೋಳ, ಸಜ್ಜೆ, ತೊಗರಿ, ಹೆಸರು, ಭತ್ತ ಮತ್ತು ಹತ್ತಿ ಮುಂತಾದವುಗಳು. ಯಾದಗಿರಿ ಜಿಲ್ಲೆಯ ಭೌಗೋಳಿಕ ನೋಟ

- ಯಾದಗಿರಿ : ರಾಜ್ಯದ ೩೦ನೇ ಜಿಲ್ಲೆ
- ಭೌಗೋಳಿಕ ವಿಸ್ತೀರ್ಣ : ೫.೧೬ ಲಕ್ಷ ಚ.ಕಿ.ಮೀ.
- ತಾಲೂಕುಗಳು : ೩
- ಹೋಬಳಿ : ೧೬
- ಗ್ರಾಮ ಪಂಚಾಯಿತಿಗಳು : ೧೧೭
- ಹಳ್ಳಿಗಳು : ೫೧೯
- ಜನಸಂಖ್ಯೆ : ೭,೯೩,೧೨೫
- ಪ.ಜಾತಿ, ಪ.ಪಂ. ಜನಸಂಖ್ಯೆ : ೨,೦೦,೫೫೮
- ಸಾಕ್ಷರರ ಪ್ರಮಾಣ : ೩,೧೦,೫೫೮
- ಜಾನುವಾರುಗಳ ಸಂಖ್ಯೆ : ೪,೯೪,೮೧೨
- ಕೈಗಾರಿಕೆಗಳು : ೩೮
- ಸಣ್ಣ ಕೈಗಾರಿಕೆಗಳು : ೧೧೦೦
- ರಾಜ್ಯ ಹೆದ್ದಾರಿ : ೪೬೧
- ಜಿಲ್ಲಾ ಮುಖ್ಯ ರಸ್ತೆ : ೨೦೮ ಕಿ.ಮೀ.
- ನಗರ ರಸ್ತೆ : ೨೦೮ ಕಿ.ಮೀ.

- ನೀರಾವರಿ ರಸ್ತೆ : ೪೨.೩೫
- ಒಟ್ಟು ರಸ್ತೆ ವಿಸ್ತಾರ : ೩೮೮೭.೯೧
- ಪ್ರಾಥಮಿಕ ಶಾಲೆಗಳು : ೧,೦೨೪
- ಪ್ರೌಢಶಾಲೆಗಳು : ೧೪೯
- ಪದವಿಪೂರ್ವ ಕಾಲೇಜುಗಳು : ೪೦
- ಪದವಿ ಕಾಲೇಜುಗಳು : ೬
- ಐ.ಟಿ.ಐ. ಕಾಲೇಜುಗಳು : ೧೮
- ಪಾಲಿಟೆಕ್‌ನಿಕ್ ಕಾಲೇಜುಗಳು : ೧
- ಅರಣ್ಯ ಪ್ರದೇಶ : ೩೩,೭೭೩. ಹೆಕ್ಟರ್.
- ಭತ್ತದ ಪ್ರದೇಶ : ೮೫,೩೨೫ ಹೆಕ್ಟರ್.

ಆಸ್ಪತ್ರೆಗಳು

- ಅಲೋಪತಿ : ೩
- ಭಾರತೀಯ ವೈದ್ಯ : ೩
- ಪಿ.ಹೆಚ್.ಸಿ.ಗಳು : ೩೭
- ಸ. ಆರೋಗ್ಯ ಕೇಂದ್ರಗಳು : ೬
- ಡಿಸ್ಪೆನ್ಸರಿಗಳು : ೨೦
- ಕುಟುಂಬ ಕಲ್ಯಾಣ ಉಪಕೇಂದ್ರಗಳು : ೧೨೦

ಒಟ್ಟು ಕಛೇರಿಗಳು

- ಲಭ್ಯತೆ ಇರುವ ಕಛೇರಿಗಳು : ೫೩
- ಬಾಡಿಗೆ ಕಟ್ಟಡ : ೧೩
- ಒಟ್ಟು ಸರಕಾರಿ ಸಿಬ್ಬಂದಿಗಳು : ೧,೧೨೮
- ಅಧಿಕಾರಿಗಳು : ೧೬೩
- ಸಿಬ್ಬಂದಿ : ೧,೦೧೫
- ಇತರೆ ಸಿಬ್ಬಂದಿ : ೨೭೭
- ಹೊಸ ನೇಮಕಾತಿ : ೯೦೧
- ಕಂದಾಯ ಇಲಾಖೆ : ೬೭

ಹೀಗೆ ಮೇಲಿನಂತೆ ಹೊಸ ಜಿಲ್ಲೆಯಲ್ಲಿ ಭೌಗೋಳಿಕವಾಗಿ ಕಂಡುಬರುವ ಅಂಶಗಳಾಗಿವೆ. ಈ ಜಿಲ್ಲೆಗೆ ಪ್ರಸ್ತುತವಾಗಿ ಸುರಪುರ, ಶಹಾಪುರ ಹಾಗೂ ಯಾದಗಿರಿಯನ್ನೊಳಗೊಂಡು ಮೂರು ತಾಲೂಕುಗಳು ಸೇರಿವೆ. ಅವುಗಳ ಸಂಕ್ಷಿಪ್ತ ವಿವರ ಈ ಕೆಳಗಿನಂತಿದೆ.

೧. ಯಾದಗಿರಿ

ಯಾದಗಿರಿ ಜಿಲ್ಲೆಯು ತನ್ನದೇ ಆದ ಚಾರಿತ್ರಿಕ ಹಿನ್ನೆಲೆಯನ್ನು ಹೊಂದಿದೆ. ಈ ಹೊಸ ಜಿಲ್ಲೆ ಯಾದಗಿರಿ, ಶಹಾಪುರ, ಸುರಪುರ ತಾಲೂಕುಗಳನ್ನು ಒಳಗೊಂಡಿದ್ದು ಈ ಜಿಲ್ಲೆ ಅನೇಕ ಪ್ರೇಕ್ಷಣೀಯ ಸ್ಥಳಗಳನ್ನು ಹೊಂದಿರುವುದರ ಮೂಲಕ ಅದರದೇ ಆದ ಚಾರಿತ್ರಿಕ ಪ್ರಸಿದ್ಧಿಯನ್ನು ಹೊಂದಿದೆ. ಅಂತಹ ಅನೇಕ ಸ್ಥಳಗಳನ್ನು ಈ ಕೆಳಗಿನಂತೆ ನೋಡಬಹುದು.

ಯಾದಗಿರಿಯಲ್ಲಿರುವ ಜಿನ್ನಪ್ಪನ ಬೆಟ್ಟದ ಮೇಲಿರುವ ಗುಹಾಂತರ ಬಸದಿ ಸುಮಾರು ೧೦-೧೧ನೇ ಶತಮಾನದ ರಚನೆಯಾಗಿದ್ದು, ಬಸದಿಯಿರುವ ಹೆಬ್ಬಂಡೆಯ ಮೇಲಿರುವ ಗುಹಾಂತರ ಪಾರ್ಶ್ವನಾಥ ತೀರ್ಥಂಕರನ ಸುಮಾರು ನಾಲ್ಕು ಅಡಿ ಎತ್ತರದ ಉಬ್ಬು ಶಿಲ್ಪ, ಬಸದಿಗೆ ಕಿರೀಟ ಪ್ರಾಯವಾಗಿದ್ದು ದೂರದಿಂದಲೇ ವೀಕ್ಷಕರ ಗಮನ ಸೆಳೆಯುತ್ತದೆ. ಈ ಬಸದಿಯಲ್ಲಿ ಗರ್ಭಗೃಹದ ಬೆನ್ನ ಬಂಡೆಯ ಮೇಲೆ ಕೆತ್ತಿರುವ ಜಿನ ಮೂರ್ತಿಗಳ ಸಾಲಿದ್ದು, ಅವುಗಳಲ್ಲಿ ನಡುವಣ ಪದ್ಮಾಸೀನ ತೀರ್ಥಂಕರನ ಶಿಲ್ಪ ಬಹಳ ಸುಂದರವಾಗಿದೆ. ಇಲ್ಲಿ ಇನ್ನೂ ಹಲವಾರು ಜೈನ ಬಿಂಬಗಳನ್ನು ಕಾಣಬಹುದಾಗಿದೆ. ಯಾದಗಿರಿಯು ಆದಿಲ್‌ಷಾಹಿ ಕಾಲಕ್ಕೆ ಸೇರಿದ ಮಸೀದಿ ಹಾಗೂ ದರ್ಗಾಗಳನ್ನು ಹೊಂದಿದ್ದು, ಅವರ ಕಾಲದ ಜುಮ್ಮಾ ಮಸೀದಿ ಹಾಗೂ ಪುಷ್ಕರಣಿಯನ್ನು ಗುಡ್ಡದ ಕೋಟೆಯೊಳಗೆ ನೋಡಬಹುದಾಗಿದೆ. ಇಲ್ಲಿಯ ಯಾಕೂಬ ಖಾದ್ರಿ, ಶಹಾಜಾನ್ ಷಾ ಹಾಗೂ ಪೀರ್ ಗಯಬಸಾಬನ ದರ್ಗಾಗಳು ಪ್ರಸಿದ್ಧಿ ಬಹುಶಃ ಹಿಂದೆ ಇದೊಂದು ತ್ರಿಕೂಟವಾಗಿದ್ದು ನಂತರದಲ್ಲಿ ಮುಂದಿನ ನವರಂಗ ಭಾಗ ನಾಶವಾಗಿರುವಂತೆ ತೋರುತ್ತದೆ. ಇಲ್ಲಿ ವರುಷಕ್ಕೊಮ್ಮೆ ಎರಡು ದಿನಗಳ ಉರುಸು ಜರುಗುತ್ತದೆ. ಉಳಿದಂತೆ ಊರಲ್ಲಿ ಎರಡು ಜೈನ ಬಸದಿ, ರಾಮ, ಬಾಲಾಜಿ, ಶರಣಬಸವೇಶ್ವರ, ವೀರಭದ್ರ, ರಾಘವೇಂದ್ರ, ಈಶ್ವರ, ಬಸವಣ್ಣ, ಮೌನೇಶ್ವರ, ಹನುಮಂತ, ಅಂಬಾಭವಾನಿ, ಮಾಶಮ್ಮ ಗುರುಗಂಗಾಧರೇಶ್ವರ, ದೇವಮ್ಮ, ಎಲ್ಲಮ್ಮ, ಮರಗಮ್ಮ, ಪೋಚಮ್ಮ ಮುಂತಾದ ನವೀನ ದೇವಾಲಯಗಳಿದ್ದು, ಕ್ರೈಸ್ತರ ಮೆಥಾಡಿಸ್ಟ್ ಚರ್ಚ್ ಕೂಡ ಇದೆ(ಭಾರತ ಸರ್ಕಾರ ಕರ್ನಾಟಕ ರಾಜ್ಯ ಗೆಝೇಟಿಯರ್, ಪು.೭೬೭).

ಗುರಮಠಕಲ್(೧೩೬೭೪) ತಾಲೂಕು ಕೇಂದ್ರವಾದ ಯಾದಗಿರಿಯಿಂದ ಈಶಾನ್ಯಕ್ಕೆ ೪೦ ಕಿ.ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದ್ದು, ಊರ ಹೊರಗೆ ಚಂದ್ರಕಿ ರಸ್ತೆಯಲ್ಲಿರುವ ವಿರಕ್ತಮಠ (ಶಾಂತವೀರಮಠ / ಖಾಸಾಮಠ)ದಿಂದಾಗಿ ಪ್ರಸಿದ್ಧವಾಗಿದೆ. ಗೋಸಾಯಿ ಮಠ ಇದೆ. ಇದು ಸುಮಾರು ೧೫೦ ವರ್ಷಗಳಷ್ಟು ಪ್ರಾಚೀನವಾದ ಕಟ್ಟಡವಾಗಿದ್ದು, ಇಲ್ಲಿ ಚಿತ್ರದುರ್ಗದ ಮುರುಘರಾಜೇಂದ್ರ ಸ್ವಾಮಿಗಳ ಗದ್ದುಗೆಯೂ ಸೇರಿದಂತೆ ಆರು ಗದ್ದುಗೆಗಳಿದ್ದು, ಮಠವು ಆಕರ್ಷಕ ವಾಗಿದೆ. ಉಳಿದಂತೆ ಊರಲ್ಲಿ ಹನುಮಂತ, ವೆಂಕಟರಮಣ, ಅಂಬಾಭವಾನಿ, ನಗರೇಶ್ವರ, ಈಶ್ವರ, ವೀರಭದ್ರ, ಎಲ್ಲಮ್ಮ, ಗಣಪತಿ ಮುಂತಾದ ನವೀನ ಗುಡಿಗಳಿದ್ದು, ಈಶ್ವರಗುಡಿ (ಪೇಟೆ) ಆವರಣದಲ್ಲಿ

ಇರುವ ಆದಿತ್ಯನ ಶಿಲ್ಪ ವಿಶಿಷ್ಟವಾಗಿದೆ. ಹನುಮಂತನ ಗುಡಿಯು ಸುಮಾರು ೧೨ನೇ ಶತಮಾನದ ಕಲ್ಯಾಣದ ಚಾಳುಕ್ಯರ ಕಾಲದ ಕಂಬಗಳನ್ನು ಬಳಸಿ ಪುನಃ ನಿರ್ಮಿಸಿದ ದೇವಾಲಯವಾಗಿದೆ.

ಗುರುಮಠಕಲ್ ದಬೆದಬೆ ಜಲಪಾತವು ಜನಪದ ಹೆಸರು ಇದೆ. ಯಾದಗಿರಿ ತಾಲೂಕಿಗೆ ಸೇರಿದ ಗುರುಮಠಕಲ್ ಪಟ್ಟಣದಿಂದ ನಜಾರಾಪುರಕ್ಕೆ ಹೋಗುವ ಹಾದಿಯಲ್ಲಿ ನಾಲ್ಕು ಕಿ.ಮೀ. ದೂರದಲ್ಲಿರುವ ನಿಸರ್ಗದತ್ತ ತಾಣವಾಗಿದೆ. ಸುಮಾರು ೨೫-೩೦ ಅಡಿ ಎತ್ತರದಿಂದ ಧುಮುಕುವ ಈ ದಬೆದಬೆಯನ್ನು ವೀಕ್ಷಿಸಲು ಮಳೆಗಾಲ ಸೂಕ್ತವಾಗಿದೆ. ಆದರೆ ಇದನ್ನು ತಲುಪುವುದೇ ಕಷ್ಟಕರವಾಗಿದ್ದು, ಪ್ರವಾಸಾಭಿವೃದ್ಧಿಗೆ ಸದಾವಕಾಶವಿದೆ(ಭಾರತ ಸರ್ಕಾರ ಕರ್ನಾಟಕ ರಾಜ್ಯ ಗೆಝೇಟಿಯರ್, ಪು.೭೦೮-೭೦೯).

ಯರಗೋಳ(೭೦೧೧)ವು ತಾಲೂಕು ಕೇಂದ್ರವಾದ ಯಾದಗಿರಿಯಿಂದ ವಾಯುವ್ಯಕ್ಕೆ ೨೦ ಕಿ.ಮೀ. ದೂರದಲ್ಲಿರುವ ಸ್ಥಳವಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಎರಂಗೋಳ' ಎಂದೇ ಉಲ್ಲೇಖಿತ ಗೊಂಡಿರುವ ಈ ಊರಿಂದ ಈವರೆಗೆ ಕಲ್ಯಾಣದ ಚಾಳುಕ್ಯ ಅರಸ ಒಂದನೇಯ ಸೋಮೇಶ್ವರನ ಕಾಲಕ್ಕೆ ಸೇರಿದ ೧೦೫೮ರ ಏಕೈಕ ಶಾಸನವು ವರದಿಯಾಗಿದೆ. ಎರಂಗೋಳದ ಪ್ರಭು ಮಾಚಯ್ಯ ನಾಯಕನು ೧೦೫೮ರಲ್ಲಿ ಇಲ್ಲಿಯ ಸಿದ್ಧೇಶ್ವರ ದೇವರ ಸೇವೆಗೆಂದು ಹೊಲ ಹಾಗೂ ತೋಟಗಳನ್ನು ದಾನ ಕೊಟ್ಟ ಅಂಶವನ್ನು ಬಂಡೆಯೊಂದರ ಮೇಲಿರುವ ಈ ಶಾಸನ ತಿಳಿಸುತ್ತಿದ್ದು, ಇಂದಿಲ್ಲಿ ಜೀರ್ಣಾವಸ್ಥೆಯಲ್ಲಿರುವ ಸಿದ್ಧೇಶ್ವರ ದೇವಾಲಯವಿದೆ. ಊರಲ್ಲಿಂದು ಸುಮಾರು ೧೧ನೇ ಶತಮಾನಕ್ಕೆ ಸೇರಿದ ಕಲ್ಲಯ್ಯ ಮುತ್ಯಾನ ಗುಡಿ ಇದೆ. ಮೂಲತಃ ತ್ರಿಕೂಟ ದೇವಾಲಯವಾಗಿರುವ ಇದು ಪೂರ್ವಾಭಿಮುಖವಾಗಿದ್ದು, ಮೂರು ಗರ್ಭಗೃಹ, ತೆರೆದೆ ಅಂತರಾಳ ಹಾಗೂ ಎಲ್ಲಕ್ಕೂ ಸೇರಿದಂತೆ ಒಂದೇ ನವರಂಗವನ್ನು ಹೊಂದಿದ್ದು, ಇಂದು ಪೂರ್ಣ ಪಾಳುಬಿದ್ದಿದೆ. ಆದರೆ ಗಣಪತಿ, ಪಾರ್ವತಿ-ಪರಮೇಶ್ವರ, ಷಣ್ಮುಖ, ಸಪ್ತಮಾತೃಕಾ ಹಾಗೂ ಯಕ್ಷನ ಬಿಡಿ ಶಿಲ್ಪಗಳು ಸುಂದರವಾಗಿದ್ದು ಉಲ್ಲೇಖಾರ್ಹವಾಗಿದೆ. ಉಳಿದಂತೆ ಊರಲ್ಲಿ ಸಿದ್ಧಲಿಂಗೇಶ್ವರ ಸಂಜೀವಿ ಭೀಮಾ, ಹನುಮಂತ ಮುಂತಾದ ನವೀನ ಗುಡಿಗಳಿದ್ದು ಮಸೀದಿ ಹಾಗೂ ಜಮಾಲ್‌ಸಾಬ್ ದರ್ಗಾಗಳಿವೆ. ಟೀಕಾಚಾರ್ಯ ರೆಂದೇ ಪ್ರಸಿದ್ಧರಾದ ಜಯತೀರ್ಥ(೧೩೬೫-೮೮)ರು ೧೪ ವರ್ಷ ಇಲ್ಲೇ ನೆಲೆನಿಂತು ತಮ್ಮ 'ನ್ಯಾಯಸುಧಾ' ಮುಂತಾದ ಟೀಕಾಗ್ರಂಥಗಳನ್ನು ರಚಿಸಿದ್ದು, ಈ ಊರಿನ ಹೊರವಲಯದಲ್ಲಿರುವ ಗುಹೆಯೊಂದರಲ್ಲಿ ಎಂಬ ಅಭಿಪ್ರಾಯವಿದೆ. ಮಿಗಿಲಾಗಿ ಇಲ್ಲಿ ಮಾಧ್ವ ಸಂಪ್ರದಾಯಕ್ಕೆ ಸೇರಿದ ರಾಮಚಂದ್ರ ತೀರ್ಥ ಹಾಗೂ ವಿದ್ಯಾನಿಧಿ ತೀರ್ಥರ ಬೃಂದಾವನಗಳಿದ್ದು, ವರ್ಷದುದ್ದಕ್ಕೂ ಭಕ್ತಾದಿಗಳು ಇಲ್ಲಿಗೆ ಭೇಟಿ ನೀಡುತ್ತಿರುತ್ತಾರೆ. ಈ ಊರಿನ ಗುಡ್ಡ-ಗಾಡಲ್ಲಿ ಸೀತಾಫಲವನ್ನು ಸಮೃದ್ಧವಾಗಿ ಬೆಳೆಯುತ್ತಾರೆ(ಭಾರತ ಸರ್ಕಾರ ಕರ್ನಾಟಕ ರಾಜ್ಯ ಗೆಝೇಟಿಯರ್, ಪು.೭೬೬).

೨. ಶಹಾಪುರ

ಒಂದು ಪ್ರದೇಶದ ಪರಿಚಯವನ್ನು ಕಂಡುಕೊಳ್ಳಬೇಕಾದರೆ ನಾವು ಮೊದಲಿಗೆ ಮೊರೆಹೋಗುವುದು ಅಲ್ಲಿನ ಭೌಗೋಳಿಕ ಪರಿಸರಕ್ಕೆ. ಫಲವತ್ತಾದ ಕಪ್ಪು ಭೂಮಿಯನ್ನು ಈ ಪ್ರದೇಶ ಹೊಂದಿದೆ. ನಾರಾಯಣ ಪುರದಲ್ಲಿ ಕಟ್ಟಿದ ಬಸವಸಾಗರ ಅಣೆಕಟ್ಟಿನಿಂದ ಇದು ಸಂಪೂರ್ಣ ನೀರಾವರಿ ಪ್ರದೇಶವಾಗಿದೆ. ಈ ಪ್ರದೇಶವನ್ನು 'ಸಗರನಾಡು' ಎಂದು ಕರೆಯಲಾಗುತ್ತದೆ. ಜೇವರ್ಗಿ, ಶಹಾಪುರ, ಸುರುಪುರ ಹಾಗೂ ಬಿಜಾಪುರ ಜಿಲ್ಲೆಯ ಸಿಂದಗಿ, ಮುದ್ದೇಬಿಹಾಳ ತಾಲೂಕುಗಳನ್ನೊಳಗೊಂಡ ಪ್ರದೇಶವನ್ನು ಸಗರನಾಡು ಎಂದು ಹೇಳುವುದುಂಟು. ಈ ಸಗರನಾಡಿಗೆ ಕಳಸ ಇಟ್ಟಂತೆ ತನ್ನದೇ ಆದ ಹಿರಿಮೆ ಯಿಂದ ಕಂಗೊಳಿಸುತ್ತಿರುವುದು ಶಹಾಪುರ. ಇದು ಹಲವು ವೈಶಿಷ್ಟ್ಯಗಳಿಂದ ಕೂಡಿದೆ.

ಸಗರನಾಡಿನ ಕೇಂದ್ರ ಸ್ಥಾನವೇ ಶಹಾಪುರ. ನಾಡಿಗೆ ವೈಶಿಷ್ಟ್ಯವಿದ್ದಂತೆ ಈ ಪ್ರದೇಶಕ್ಕೆ ತನ್ನದೇ ಆದ ವೈಶಿಷ್ಟ್ಯವಿದೆ. ಪುರಾಣ ಇತಿಹಾಸವನ್ನು ಅವಲೋಕಿಸಿ ನೋಡಿದಾಗ ಅನೇಕ ಮಹತ್ವದ ಚಾರಿತ್ರಿಕ ಅಂಶಗಳು ಗೋಚರಿಸುತ್ತವೆ. 'ಸಗರನಾಡು' ಎಂಬ ಹೆಸರು ಬಳಕೆಗೆ ಬಂದದ್ದು ಇತಿಹಾಸ ಕಾಲದಿಂದ. ಆದರೆ 'ಸಗರ', 'ಸಾಗರಪುರಿ' ಎಂಬ ಪ್ರಖ್ಯಾತಿ ಪಡೆದಿದ್ದು ಪುರಾಣ ಕಾಲದಿಂದ. ಈ ಭಾಗಕ್ಕೆ ಜಂಬೂದ್ವೀಪ, 'ದಂಡಕಾರಣ್ಯ' ಎಂಬ ಹೆಸರಿನಿಂದಲೂ ಕರೆಯುತ್ತಿದ್ದರು. ಈ ಜಂಬೂದ್ವೀಪವನ್ನು ಅನೇಕ ಜನ ಅರಸರು ಹಂಚಿಕೊಂಡು ಆಳುತ್ತಿದ್ದರು. ಅದಕ್ಕಾಗಿ ಇದಕ್ಕೆ 'ದಂಡಕಾರಣ್ಯ' ಎಂಬ ಹೆಸರು ಬಂದಿದೆ ಎಂಬುದು ತಿಳಿದುಬರುತ್ತದೆ. ಆ ತರುವಾಯ ಸಗರ ಚಕ್ರವರ್ತಿ ಸಗರಪುರವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದಾನೆಂಬುದು ಮಂದಾಕಿನಿ ಮಹಾತ್ಮೆಯಿಂದ ತಿಳಿಯುತ್ತದೆ. ಯಾದಗಿರಿ ಪಟ್ಟಣದಿಂದ ಸುಮಾರು ೩೪ ಕಿ.ಮಿ. ಪಶ್ಚಿಮಕ್ಕೆ ಶಹಾಪುರ ಪಟ್ಟಣವಿದೆ.

ಸಮುದ್ರ ಮಟ್ಟದಿಂದ ೧೪೦೦ ಅಡಿ(೪೨೭ ಮೀಟರ್) ಎತ್ತರದಲ್ಲಿದ್ದು ಉತ್ತರ ಅಕ್ಷಾಂಶ ೧೬°ರಿಂದ ೧೬°-೫೩ ಮತ್ತು ಪೂರ್ವ ರೇಖಾಂಶ ೭೬°-೫°ರಿಂದ ೭೭°-೧೨ರವರೆಗೆ ವ್ಯಾಪಿಸಿರುವ ಈ ತಾಲೂಕಿನ ವಿಸ್ತೀರ್ಣ ೧೯೬೪ ಚ.ಕಿ.ಗಳಷ್ಟಿದೆ ಎಂಬುದು ಕೆಲವು ಆಧಾರಗಳಿಂದ ತಿಳಿದುಬರುತ್ತದೆ (ಹಕ್ಕಿ ಡಿ.ಎಸ್., ೧೯೮೬-೩-೪).

೨೦೦೧ರ ಜನಗಣತಿಯ ಪ್ರಕಾರ ಶಹಾಪುರ ತಾಲೂಕಿನ ಜನಸಂಖ್ಯೆ ೫೯೩೫೧೮ ಇದೆ. ಶಹಾಪುರ ತಾಲೂಕಿನಲ್ಲಿ ಒಟ್ಟು ೧೫೭ ಹಳ್ಳಿಗಳಿವೆ. ಪುನರ್ವಸತಿ ಇರುವ ಹಳ್ಳಿಗಳ ಸಂಖ್ಯೆ ೧೦. ಶಹಾಪುರ ತಾಲೂಕಿನ ಇನ್ನೊಂದು ವಿಶೇಷತೆ ಎಂದರೆ ನಗರದಲ್ಲಿರುವ ಕೆ.ಪಿ.ಟಿ.ಸಿ.ಎಲ್. ಕಛೇರಿ ಎದುರುಗಡೆ ನಿಂತು ಗುಡ್ಡವನ್ನು ನೋಡಿದರೆ ಆಕಾಶಕ್ಕೆ ಮುಖ ಮಾಡಿಕೊಂಡು ಎದೆಯ ಮೇಲೆ ಕೈಯಿರಿಸಿಕೊಂಡು ಮಲಗಿರುವ ಬುದ್ಧನಂತೆ ಭಾಸವಾಗುವ ದೃಶ್ಯ ಕಂಡುಬರುತ್ತದೆ. ಇದು ನಿಸರ್ಗದ ಕಲಾ ವೈಶಿಷ್ಟ್ಯತೆಗೆ ಸಾಕ್ಷಿಯಾಗಿದೆ.

ಶಹಾಪುರ ತಾಲೂಕಿನಲ್ಲಿರುವ ಖನಿಜ ಸಂಪತ್ತೆಂದರೆ ಕಲ್ಲಿನ ಗಣಿ. ಶಿರವಾಳ ಕಲ್ಲುಗಳು. ಬಹಳ ಹೆಸರುವಾಸಿ. ನೆಲಕ್ಕೆ ಹಾಸಲು ಈ ಕಲ್ಲುಗಳನ್ನು ಉಪಯೋಗಿಸುತ್ತಾರೆ. ಬಂಡೆಕಲ್ಲುಗಳನ್ನು ಮನೆ ಕಟ್ಟಲು ಉಪಯೋಗಿಸುತ್ತಾರೆ. ಮನೆಯ ಬಾಗಿಲ ಮುಂದಿನ ಸಿಂಗಾರಕ್ಕೆ ಈ ಕಲ್ಲುಗಳನ್ನು ಉಪಯೋಗಿಸುತ್ತಾರೆ.

ಅದೇ ರೀತಿ ಶಹಾಪುರ ತಾಲೂಕಿನ ರಸ್ತಾಪುರ ಸುತ್ತಮುತ್ತಲ ಪ್ರದೇಶದಲ್ಲಿ ಪಿಂಕ್ ಗ್ರಾನೈಟ್ ಕಲ್ಲಿಗೆ ಬೇಡಿಕೆ ಇದೆ. ಇತ್ತೀಚಿನ ಸಂಶೋಧನೆಯ ಪ್ರಕಾರ ಶಹಾಪುರ ತಾಲೂಕಿನ ಗೋಗಿ ಎಂಬಲ್ಲಿ ಯುರೇನಿಯಂ ನಿಕ್ಷೇಪ ಪತ್ತೆಯಾಗಿದೆ. ಇದರಿಂದಾಗಿ ಶಹಾಪುರ ತಾಲೂಕಿನ ಸುತ್ತಮುತ್ತಲಿನ ಭೂಮಿಗಳಿಗೆ ತುಂಬಾ ಬೇಡಿಕೆ ಇರುವುದು ಕಂಡುಬರುತ್ತದೆ. ಈ ತಾಲೂಕು ಕೂಡ ಶೈಕ್ಷಣಿಕ ಮತ್ತು ಆರ್ಥಿಕ ವಲಯಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಅಭಿವೃದ್ಧಿ ಆಗಬೇಕಾದ ಅವಶ್ಯಕತೆ ಇದೆ.

ಮಂದಾಕಿನ ಮಹಾತ್ಮೆಯಲ್ಲಿ ದಾಖಲಾಗಿರುವಂತೆ ಶಹಾಪುರದ ದಕ್ಷಿಣಕ್ಕೆ ಇರುವ ಪರ್ವತವೇ ಸಗರಾದ್ರಿಯಾಗಿದ್ದು, ಬೆಟ್ಟದ ಮೇಲೆ ಹಲವಾರು ಪವಿತ್ರ ತಾಣಗಳಿವೆ. ಅವುಗಳಲ್ಲಿ ಚರಬಸವೇಶ್ವರರ ಗದ್ದುಗೆ, ಮೌನೇಶ್ವರ ಅನುಷ್ಠಾನ, ಪಾಂಡವರ ಕಲ್ಲು, ಭೀಮನಗವಿ, ಗವಿ ರಂಗನಾಥ, ಸಿದ್ಧಲಿಂಗೇಶ್ವರ, ಗೊಗ್ಗಮ್ಮಾಂಬೆ, ತುಳಜಾಭವಾನಿ, ಅಮರ ಕಲ್ಯಾಣ, ತ್ರಯಂಬಲಿಂಗೇಶ್ವರ, ಗವಿಬಸಪ್ಪ, ನಾಗಬಸಪ್ಪ ಆಂಜನೇಯ, ನಿರಹಂಕಾರ, ದಿಗ್ಗಿ ಸಂಗಮನಾಥ ಹಾಗೂ ಚಂದಾಸಾಹೇಬ, ತಾವರೆಕೆರೆ, ಮಂದಾಕಿನ ತೀರ್ಥ, ನೀಲಮ್ಮನ ಭಾವಿ ಮುಂತಾದ ತೀರ್ಥಗಳಿವೆ. ಚರಬಸವೇಶ್ವರ ದೇವಾಲಯವು ಸುಂದರ ವಿನ್ಯಾಸಗಳಿಂದ ಕೂಡಿದ್ದು ಬಸವೇಶ್ವರರ ಜಾತ್ರೆಯು ಚೈತ್ರ ಶುದ್ಧ ಪಂಚಮಿಯಂದು ಜರುಗುತ್ತದೆ. ಈ ಬೆಟ್ಟದ ಬುಡದಲ್ಲಿ ಕಲ್ಯಾಣ ಚಾಳುಕ್ಯರ ಕಾಲಕ್ಕೆ ಸೇರಿದ ೧೮ ಕೈಗಳನ್ನುಳ್ಳ ಚಾಮುಂಡಿಯ ಉಗ್ರಮೂರ್ತಿಯೊಂದು ಪತ್ತೆಯಾಗಿದೆ. ಇಲ್ಲಿ ವಿಶ್ವಕರ್ಮ ಸಮಾಜದ ಏಕದಂಡಿ ಮಠವಿದ್ದು, ಅಲ್ಲಿ ಕೃಷ್ಣದೇವರಾಯನ ಕಾಲದ ತಾಮ್ರಶಾಸನವೂ ಇದೆ.

ಶಹಾಪುರದಿಂದ ಭೀಮರಾಯನಗುಡಿಗೆ ಹೋಗುವ ಹಾದಿಯಲ್ಲಿ ಎಡಕ್ಕೆ ಮಲಗಿರುವ ಸಗರಾದ್ರಿ ಪರ್ವತ ಶ್ರೇಣಿಯಲ್ಲಿ ಮುಗಿಲತ್ತ ಮುಖ ಮಾಡಿ ಅಂಗಾತ ಮಲಗಿರುವ ನಿಸರ್ಗ ನಿರ್ಮಿತ ಬುದ್ಧನ ರೂಪ ರೇಷೆ ಪ್ರವಾಸಿಗರನ್ನು ಮಂತ್ರ ಮುಗ್ಧಗೊಳಿಸುತ್ತದೆ. ಅಗಲವಾದ ಹಣೆ, ಚೂಪಾದ ಮೂಗು, ವಿಶಾಲವಾದ ಎದೆಯಂತೆ ಒಡೆದು ಕಾಣುವ ಬುದ್ಧನ ಈ ನಿಸರ್ಗ ರಚನೆ ನಿಜಕ್ಕೂ ವಿಸ್ಮಯವನ್ನುಂಟು ಮಾಡುತ್ತದೆ. ಕೃಷ್ಣಾ ಮೇಲ್ದಂಡೆ ಯೋಜನೆಯ ಪ್ರಧಾನ ಕಛೇರಿ ಹಾಗೂ ವಸಹಾತುಗಳು ಶಹಾಪುರದಿಂದ ೫ ಕಿ.ಮೀ. ದೂರದಲ್ಲಿರುವ ಭೀಮರಾಯಗುಡಿಯಲ್ಲಿವೆ. ಚಾರಿತ್ರಿಕ ಮಹತ್ವದ, ಶಿರವಾಳ, ಸನ್ನತಿ, ಗೋಗಿ ಮುಂತಾದ ಸ್ಥಳಗಳು ಶಹಾಪುರದಿಂದ ಅನತಿ ದೂರದಲ್ಲಿದ್ದು, ಹೋಗಲು ಉತ್ತಮ ರಸ್ತೆ ಸೌಕರ್ಯವಿದೆ(ಭಾರತ ಸರ್ಕಾರ ಕರ್ನಾಟಕ ರಾಜ್ಯ ಗೆಝೇಟಿಯರ್, ಪು.೭೭೬).

ಗೋಗಿ(೧೧೩೫೬)ಯು ತಾಲೂಕು ಕೇಂದ್ರವಾದ ಶಹಾಪುರದಿಂದ ಉತ್ತರಕ್ಕೆ ೧೨ ಕಿ.ಮೀ. ದೂರದಲ್ಲಿ ಶಹಾಪುರ-ಸಿಂಧಗಿ ರಸ್ತೆಯಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ಗೋಗಿ ಪೇಟಾ ಹಾಗೂ ಗೋಗಿ ಕೋನಾ ಎಂದೇ ಚಾಲ್ತಿಯಲ್ಲಿರುವ ಇವೆರಡು ಒಂದಕ್ಕೊಂದು ಹತ್ತಿಕೊಂಡಂತೆ ಇರುವ ಗ್ರಾಮಗಳಾಗಿದ್ದು, ಚಂದಾಹುಸೇನಿ ದರ್ಗಾದಿಂದಾಗಿ ಇಂದು ಪ್ರಸಿದ್ಧವಾಗಿವೆ. ನೂತನ ಶಿಲಾಯುಗ ಸಂಸ್ಕೃತಿಗೆ ಸೇರಿದ ಅವಶೇಷಗಳು ಇಲ್ಲಿಂದ ವರದಿಯಾಗಿರುವುದರಿಂದ ಗೋಗಿಯ ಪ್ರಾಚೀನತೆಯನ್ನು ಅಷ್ಟು ಹಿಂದಕ್ಕೆ ಕೊಂಡೊಯ್ಯಬಹುದಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಗೋವಿಗೆ' (ಕೊಲ್ಲೂರು : ೧೧೮೯) ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಸಗರ-೫೦೦ಕ್ಕೆ ಸೇರಿದ್ದು ಎಂದು ತಿಳಿದುಬರುತ್ತದೆ(ಭಾರತ ಸರ್ಕಾರ ಕರ್ನಾಟಕ ರಾಜ್ಯ ಗೆಝೇಟಿಯರ್, ಪು.೭೧೫).

೩. ಸುರುಪುರ

ಸುರುಪುರ ಯಾದಗಿರಿ ಜಿಲ್ಲೆಯ ಪಶ್ಚಿಮ ಭಾಗದಲ್ಲಿದೆ. ಈ ಪ್ರದೇಶವು ಕಲ್ಯಾಣ ಚಾಲುಕ್ಯರಿಂದ ಹಿಡಿದು ಸುರುಪುರದ ಅರಸರ ಕಾಲದವರೆಗೆ, ಔರಂಗಜೇಬನ ಆಳ್ವಿಕೆಯಿಂದ ಹೈದ್ರಾಬಾದ್ ನಿಜಾಮನವರೆಗೆ ವಿವಿಧ ರಾಜಮನೆತನಗಳ ಆಡಳಿತಕ್ಕೆ ಒಳಪಟ್ಟಿತ್ತು. ಸುರುಪುರವನ್ನು ದೇವತೆಗಳ ನೆಲೆಬೀಡು ಎಂದು ಹೇಳಲಾಗಿದೆ. ಸುರುಪುರವನ್ನು ಪ್ರಾಚೀನ ಕಾಲದಲ್ಲಿ ಗೋರಕಪುರ ಎಂದು ಶರಣರ ಸಾಹಿತ್ಯಗಳ ಗೂಡು ಎಂದು ಕರೆಯುತ್ತಿದ್ದರು. ಸುರಪುರದ ರಾಜಮನೆತನಗಳು ಬ್ರಿಟಿಷರಿಗೆ ಸೆಡ್ಡು ಒಡೆದು ಹೋರಾಟಕ್ಕೆ ನಿಂತ ಪ್ರತಿಫಲವಾಗಿ ಸಿಂಹಗಳ ತವರೂರು ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಈ ಮೊದಲು ಶೌರ್ಯರಪುರ ಎಂದು ಕರೆಯುವ ವಾಡಿಕೆ ಇತ್ತು. ಹೈದ್ರಾಬಾದ್ ನಿಜಾಮರ ಆಳ್ವಿಕೆಯಲ್ಲಿ ಇದನ್ನು ಶೋರಾಪುರ ಎಂದು ಕರೆದರು. ಹೀಗೆ ಅನೇಕ ಪದಗಳ ಬಳಕೆ ಯಿಂದ ಇಂದು ಸುರುಪುರ ಎಂದು ಮಾರ್ಪಾಡು ಹೊಂದಿ ಅದೇ ಹೆಸರಿನಿಂದ ಕರೆಯಲ್ಪಡುತ್ತಿದೆ.

ಸುರಪುರ (ಶೋರಾಪುರ) (೩೦೫೮೯)ವು ತಾಲೂಕು ಕೇಂದ್ರವಾಗಿದ್ದು ಜಿಲ್ಲಾ ಕೇಂದ್ರವಾದ ಗುಲಬರ್ಗಾದಿಂದ ದಕ್ಷಿಣಕ್ಕೆ ೧೧೦ ಕಿ.ಮೀ., ಬೆಂಗಳೂರಿನಿಂದ ಉತ್ತರಕ್ಕೆ ೫೦೦ ಕಿ.ಮೀ., ಯಾದಗಿರಿ ರೈಲು ನಿಲ್ದಾಣದಿಂದ ಪಶ್ಚಿಮಕ್ಕೆ ೫೦ ಕಿ.ಮೀ. ದೂರದಲ್ಲಿ ಇರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ವಿಜಯನಗರ ಪತನಾ ನಂತರ ತಲೆ ಎತ್ತಿದ್ದ ಪಾಳೇಗಾರರಲ್ಲಿ ಗೋಸಲ ವಂಶದ ಸುರಪುರದ ನಾಯಕರು ಅಗ್ರಗಣ್ಯರಾಗಿದ್ದು, ಕ್ರಿ.ಶ. ೧೬೩೬ರಿಂದ ೧೮೫೮ರವರೆಗೆ, ಆರಂಭದಲ್ಲಿ ವಾಗಿಣಗೇರಿಯನ್ನು, ನಂತರದಲ್ಲಿ ಸುರಪುರವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ ೧೩ ಮಂದಿ ನಾಯಕರಲ್ಲಿ ಔರಂಗಜೇಬನೊಂದಿಗೆ ಹೋರಾಡಿದ ಗಡ್ಡಿ ಪಿಡ್ಡೆ ನಾಯಕ; ವೆಂಕಟಪ್ಪ ನಾಯಕ, ಇಮ್ಮಡಿ ವೆಂಕಟಪ್ಪ ನಾಯಕ ಹಾಗೂ ನಾಲ್ಕನೆಯ ವೆಂಕಟಪ್ಪ ನಾಯಕರು ಪ್ರಮುಖರಾಗಿದ್ದು, ೧೮೫೭ರಲ್ಲಿ ರಾಷ್ಟ್ರಾದ್ಯಂತ ಎದ್ದ ಮೊದಲ ಸ್ವಾತಂತ್ರ್ಯ ಸಂಗ್ರಾಮ ಚಳುವಳಿಯ ಅಲೆಯಲ್ಲಿ ಭೋರ್ಗರೆದು ಗರ್ಜಿಸಿ ಹೋರಾಡಿದರಲ್ಲಿ ರಾಜಾ ವೆಂಕಟಪ್ಪ ನಾಯಕನ ಹೆಸರು

ನಾಡಿನ ಇತಿಹಾಸದಲ್ಲಿ ಅಜರಾಮರವಾಗಿ ಉಳಿದಿದೆ. ಔರಂಗಜೇಬನ ದಾಳಿಗೆ ನಲುಗಿ ರಾಜಧಾನಿ ವಾಗಿಣಗೇರಿಯನ್ನು ಕಳೆದುಕೊಂಡು ಪಿತಾಂಬರ ಬಹರೀ ಪಿಡ್ಡೆ ನಾಯಕನ (ಎರಡನೇ ಗಡ್ಡಿ ಪಿಡ್ಡ ನಾಯಕ)ನು, ಮರು ಹೋರಾಟದಲ್ಲಿ ಔರಂಗಜೇಬನನ್ನು ಹಿಮ್ಮೆಟ್ಟಿಸುವಲ್ಲಿ ಯಶಸ್ವಿಯಾದರೂ ವಾಗಿಣಗೇರಿ ಬದಲು ಸುರಪುರವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ. ತತ್ಪರಿಣಾಮವಾಗಿ ಸುರಪುರವು ತ್ವರಿತಗತಿಯಲ್ಲಿ ಅಭಿವೃದ್ಧಿ ಹೊಂದಲು ಸಾಧ್ಯವಾಯಿತು.

ಸುರುಪುರ ಪಟ್ಟಣವು ೨೨೦ಕ್ಕಿಂತ ಅಧಿಕ ಗ್ರಾಮಗಳನ್ನು ಒಳಗೊಂಡಿದೆ. ಯಾದಗಿರಿ ಜಿಲ್ಲೆಯಲ್ಲಿ ಅತೀ ದೊಡ್ಡ ತಾಲೂಕು ಇದಾಗಿದೆ. ಸುರುಪುರ ತಾಲ್ಲೂಕಿನ ವಿಸ್ತೀರ್ಣ ೧೮೨೦ ಚ.ಕಿ.ಮೀ. ಉತ್ತರ ಅಕ್ಷಾಂಶ–೭೬೦.೧೮ ರಿಂದ ೭೬೦.೫೪ ಹಾಗೂ ಪೂರ್ವ ರೇಖಾಂಶ ೧೬೦.೧೫ರಿಂದ ೧೬೦.೪೪ ಇದೆ.

ಈ ಸುರುಪುರ ತಾಲ್ಲೂಕಿನ ಹತ್ತಿರಕ್ಕೆ ಕೃಷ್ಣಾ ನದಿಯು ಹರಿಯುತ್ತದೆ. ಇದು ಸುರುಪುರ ಪಟ್ಟಣದ ಜೀವನಾಡಿಯಾಗಿದೆ. ನದಿ ದಂಡೆಗೆ ತಿಂಥಿಣಿ ಮೌನೇಶ್ವರ ದೇವಾಲಯವಿದೆ. ಅದನ್ನು 'ದಕ್ಷಿಣ ಕಾಶಿ' ಎಂದು ಕರೆಯಲಾಗುತ್ತದೆ. ಸುರಪುರ ಪ್ರದೇಶವು ಸುತ್ತಲೂ ಗುಡ್ಡಗಳಿಂದ ಆವೃತ್ತವಾಗಿರುವುದರಿಂದ ನಿಸರ್ಗದ ದುರ್ಗದಂತೆ ಗೋಚರಿಸುತ್ತದೆ. ಕೃಷ್ಣಾ ಮೇಲ್ದಂಡೆ ಯೋಜನೆಯ ಮೂಲಕ ಈ ಪ್ರದೇಶದಲ್ಲಿ ಸಂಪೂರ್ಣ ನೀರಾವರಿ ಯೋಜನೆಯನ್ನು ಕಲ್ಪಿಸಿಕೊಂಡಿದೆ. ಇಲ್ಲಿ ಭತ್ತ, ಹತ್ತಿ, ಮೆಣಸಿನಕಾಯಿ, ಶೇಂಗಾ, ತೊಗರಿ, ಸಜ್ಜೆ, ಜೋಳ ಮುಂತಾದ ಬೆಳೆಗಳನ್ನು ಬೆಳೆಯಲಾಗುತ್ತದೆ. ಇದು ಕೆಂಪು ಮತ್ತು ಕಪ್ಪು ಮಣ್ಣಿನಿಂದ ಕೂಡಿದ ಪ್ರದೇಶವಾಗಿದೆ. ಶೈಕ್ಷಣಿಕ ದೃಷ್ಟಿಯಲ್ಲಿ ಸುರುಪುರ ಪಟ್ಟಣ ತೀವ್ರಗತಿಯಲ್ಲಿ ಪ್ರಗತಿ ಹೊಂದುತ್ತಿದೆ. ಇಂಜಿನಿಯರಿಂಗ್ ಮತ್ತು ಡಿಪ್ಲೊಮಾ ಕಾಲೇಜುಗಳನ್ನು ಹೊಂದುವುದರ ಮೂಲಕ ಶೈಕ್ಷಣಿಕವಾಗಿ ದಾಪುಗಾಲಿಡುತ್ತಿದೆ ಎಂದರೆ ತಪ್ಪಾಗಲಾರದು. ಆರ್ಥಿಕ, ಸಾಮಾಜಿಕ, ಧಾರ್ಮಿಕ, ರಾಜಕೀಯವಾಗಿ ಹಿಂದುಳಿದ ಅನೇಕ ವರ್ಗಗಳು, ಅಲೆಮಾರಿಗಳು ಕೂಡಾ ಇಲ್ಲಿದ್ದು ಬೃಹತ್ ಪ್ರಮಾಣದಲ್ಲಿ ಅಭಿವೃದ್ಧಿ ಹೊಂದಬೇಕಾಗಿರುವುದು ಅವಶ್ಯಕವಾಗಿದೆ.

ಯಾದಗಿರಿ ಜಿಲ್ಲೆಯ ಪ್ರಮುಖ ತಾಲೂಕುಗಳೆಂದಾಗ ಸುರಪುರವು ಚಾರಿತ್ರಿಕವಾಗಿ, ಭೌಗೋಳಿಕವಾಗಿ, ರಾಜಕೀಯವಾಗಿ ಹಾಗೂ ಐತಿಹಾಸಿಕವಾಗಿ ಮಹತ್ವದ ನಗರವಾಗಿದೆ. ಸುರುಪುರ ಪಟ್ಟಣವು ಅತೀ ಹೆಚ್ಚು ಗುಡ್ಡಗಳಿಂದ ಅವೃತವಾದ ಪ್ರದೇಶವಾಗಿದೆ. ಗುಡ್ಡದಲ್ಲಿ ಸುರುಪುರ ಇದೆ ಎನ್ನುವುದಕ್ಕಿಂತ ಸುರುಪುರವೇ ಗುಡ್ಡದಲ್ಲಿದೆ ಎಂದರೆ ತಪ್ಪಾಗಲಾರದು. ಈ ಪ್ರದೇಶವು ಅನೇಕ ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟಿದ್ದು ಇಂತಹ ರಾಜಮನೆತನಗಳಲ್ಲಿ 'ಸುರಪುರ ಸಂಸ್ಥಾನವು' ಕೂಡ ಒಂದು.

ಸುರುಪುರವನ್ನು ಗೋಸಲ ವಂಶದ ನಾಯಕರು ಅಥವಾ ಬೇಡರು ಕ್ರಿ.ಶ. ೧೬೩೫ರಿಂದ ಕ್ರಿ.ಶ. ೧೮೫೭ರವರೆಗೆ ಸುಮಾರು ೨೨೨ ವರ್ಷಗಳ ಕಾಲ ಆಳ್ವಿಕೆ ಮಾಡಿದ್ದಾರೆ. ಪ್ರಾಚೀನ ಕಾಲದ

ಕುರುಹುಗಳಲ್ಲದೆ ಧಾರ್ಮಿಕ ಸಾಮರಸ್ಯವನ್ನು ಮತ್ತು ಸಮನ್ವಯತೆಯನ್ನು ಎತ್ತಿ ಹಿಡಿಯುವ ಧಾರ್ಮಿಕ ಸ್ಥಳವಾಗಿ ಕಂಡುಬರುತ್ತವೆ. ಅವುಗಳಲ್ಲಿ ತಿಂಥಿಣಿಯ ಮೌನೇಶ್ವರರು ಮತ್ತು ಕೊಡೇಕಲ್ ಬಸವಣ್ಣನವರು ಪ್ರಮುಖರು ಇಲ್ಲಿ ಹಿಂದೂ ಮುಸ್ಲಿಂ ಧರ್ಮದ ಸಮನ್ವಯತೆಯನ್ನು ಸಾರುವ ಕುರುಹುಗಳಾಗಿ ಪ್ರಸಿದ್ಧ ಹೊಂದಿವೆ.

೧೮೫೭ರಲ್ಲಿ ಸುರುಪುರ ರಾಜ ವೆಂಕಟಪ್ಪನಾಯಕರು ತೋರಿದ ದಿಟ್ಟ ಹೋರಾಟವು ಕರ್ನಾಟಕ ಇತಿಹಾಸದಲ್ಲಿ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಈ ಹೋರಾಟವು 'ಹೈದ್ರಾಬಾದ್ ವಿಮೋಚನಾ ಹೋರಾಟ'ಕ್ಕೆ ಪ್ರೇರಣೆಯಾಗಿದೆ. ಸುರುಪುರ ಪ್ರದೇಶವು ಕವಿಗಳ, ವಚನಕಾರರ ನೆಲೆಬೀಡಾಗಿದೆ. ಮುಧನೂರಿನ ದಾಸಿಮಯ್ಯನು ಆರ್ಯ ವಚನಕಾರನೆಂದು ಪ್ರಸಿದ್ಧನಾಗಿದ್ದಾನೆ. ಈ ಸಮಾಜದಲ್ಲಿ ನಡೆಯುತ್ತಿರುವ ಅನ್ಯಾಯವನ್ನು ವಚನಗಳ ಮೂಲಕ ವಿವರಿಸಿದ್ದಾನೆ. ಕೆಂಬಾವಿ ಭೋಗಣ್ಣನು ಜಾತೀಯತೆಯನ್ನು ವಿರೋಧಿಸಿ ರಾಜತ್ವವನ್ನು ಪ್ರತಿಪಾದಿಸಿದನು. ದೇವಪುರದ ಅತ್ಯಂತ ಪ್ರಸಿದ್ದ ಕವಿ ಲಕ್ಷ್ಮೀಶ ಕರ್ನಾಟಕದ ಸುರುಪುರ ತಾಲೂಕಿನವನರು ಎಂದು ಹೇಳಿಕೊಳ್ಳಲು ಹೆಮ್ಮೆಯ ವಿಷಯ(ಇದರ ಬಗ್ಗೆ ಬಿನ್ನಾಭಿಪ್ರಾಯಗಳಿವೆ).

ನಿಷ್ಠಿ ಮನೆತನಕ್ಕೆ ಸೇರಿದ ಕಡಲಪ್ಪ ಹಾಗೂ ವೀರಪ್ಪ ಸಹೋದರರು ಸುರಪುರದ ನಾಯಕರ ಆಸ್ಥಾನದಲ್ಲಿ ೧೭೫೨ರಿಂದ ೧೮೦೨ರ ಅವಧಿಯಲ್ಲಿ ಸಚಿವರಾಗಿದ್ದು, ಗುಡಿ, ಮಠ, ಕೆರೆ, ಬಾವಿ, ದಾಸೋಹ ಭಾವಣಿ ಮಳಿಗೆ, ನ್ಯಾಯದ ಕಟ್ಟೆ, ಬಿಫೇದ ಕಟ್ಟೆಗಳೇ ಮುಂತಾದ ಸಮಾಜ ಕಲ್ಯಾಣ ಕಾರ್ಯಗಳಿಗೆ ಪ್ರಸಿದ್ಧರಾಗಿದ್ದು, ಅಂತಹ ನಿರ್ಮಾಣಗಳನ್ನು ಸುರಪುರ, ತಿಂಥಿಣಿ, ದೇವರಗೋನಾಳ, ಯಾಳಗಿ, ಸಗರ, ಹೊಸಕೆರೆ ಮುಂತಾದೆಡೆ ನೋಡಬಹುದಾಗಿದೆ.

ಗುಡ್ಡಗಾಡುಗಳಿಂದ ಆವೃತ್ತವಾಗಿರುವ, ಗುಡ್ಡವೊಂದರ ಮೇಲಿರುವ ಸುರಪುರವು ಹಿಂದೆ ಸಗರ ನಾಡಿಗೆ ಸೇರಿದ್ದು, ನಾಯಕರ ಕಾಲದಲ್ಲಿ ರಾಜಧಾನಿ ಪಟ್ಟಣವಾಗಿ ಮೆರೆಯಿತು. ಇಲ್ಲಿಂದ ಪ್ರಾಗ್ಯೈತಿಹಾಸ ಕಾಲದ ಶಿಲಾವೃತ್ತ ಸಮಾಧಿಗಳು ವರದಿಯಾಗಿರುವುದು ಮಹತ್ವದ ಅಂಶವಾಗಿದೆ. ಇದರ ಪ್ರಾಚೀನ ಹೆಸರು ಸುರಪುರ ಆಗಿದ್ದು ನಿಜಾಮರ ಆಳ್ವಿಕೆಯಲ್ಲಿ 'ಶೋರಾಪುರ' ಎಂದು ರೂಪಾಂತರಗೊಂಡಿದ್ದು, ಈಗ ಎರಡೂ ರೂಪಗಳು ರೂಢಿಯಲ್ಲಿವೆ. ನಿಸರ್ಗದತ್ತವಾದ ರಕ್ಷಣೆ ಯನ್ನುಳ್ಳದ್ದಾಗಿದೆ.

ಸುರಪುರದಲ್ಲಿ ಸುರಪುರದ ನಾಯಕರ ಕಾಲದ ಕೋಟೆ, ಕೊತ್ತಲ, ಅಗಸಿ, ಅರಮನೆ, ಗೋಪಾಲಸ್ವಾಮಿ ಗುಡಿ, ಅಷೂರಖಾನ, ಮಸೀದಿ ದರ್ಗಾ, ಬಜಾರ್, ಟೇಲರ್‌ನ ಬಂಗಲೆ, ಇಂದಿನ ಮುನ್ಸಿಫ್ ಕೋರ್ಟ್ ಕಟ್ಟಡ ಮುಂತಾದವು ಗಮನಾರ್ಹವಾಗಿವೆ. ಇವುಗಳಲ್ಲಿ ನಾಯಕರ ಅರಮನೆ ಹಾಗೂ ಗೋಪಾಲಸ್ವಾಮಿ ದೇವಾಲಯಗಳು ಆಕರ್ಷಕ ರಚನೆಗಳಾಗಿವೆ. ವಿಶಾಲವಾದ

ಸಭಾಮಂಟಪವನ್ನುಳ್ಳ ಗೋಪಾಲಸ್ವಾಮಿ ಗುಡಿಯ ಮೇಲಿರುವ ಸುಂದರವಾದ ಗಾರೆ ಶಿಲ್ಪಗಳು ಗಮನಾರ್ಹವಾಗಿದ್ದು, ಆಕರ್ಷಕವಾಗಿವೆ. ಹೈದರಾಬಾದ್ ನಿಜಾಮರ ಆಳ್ವಿಕೆಯಲ್ಲಿ ಸುರಪುರ ಸಂಸ್ಥಾನದಲ್ಲಿ ಕಮೀಶನರ್ ಆಗಿ ೧೮೪೧ರಿಂದ ರಾಜಾ ವೆಂಕಟಪ್ಪನಾಯಕನನ್ನು ಸಿಂಹಾಸನದಲ್ಲಿ ಕೂಡಿಸಿ ಅಧಿಕಾರ ನಡೆಸಿದ ಮೆಡೋಸ್ ಟೇಲರನು ಇಲ್ಲಿ ನಿರ್ಮಿಸಿರುವ ಬಂಗಲೆಯು ಭವ್ಯವಾಗಿದ್ದು, ಅತ್ಯುತ್ತಮ ತಾಂತ್ರಿಕತೆಗೆ ಹೆಸರಾಗಿದ್ದು, ವೀಕ್ಷಕರಲ್ಲಿ ವಿಸ್ಮಯವನ್ನುಂಟುಮಾಡುತ್ತಿದ್ದು, ಇಂದು ಇದು ವಿಶ್ರಾಂತಿ ಗೃಹವಾಗಿ ಬಳಸಲ್ಪಡುತ್ತದೆ. ಗುಲಬರ್ಗಾ ಜಿಲ್ಲೆಯ ಹಲವಾರು ಪ್ರಾಗೈತಿಹಾಸಿಕ ನೆಲೆಗಳನ್ನು ಬೆಳಕಿಗೆ ತಂದ ಕೀರ್ತಿ ಮೆಡೋಸ್ ಟೈಲರ್‌ನದ್ದಾಗಿದೆ. ಇಲ್ಲಿಯ ಅಷೂರಖಾನವು ಸುಂದರ ರಚನೆಯಾಗಿದ್ದು, ನಮ್ಮ ಗಮನ ಸೆಳೆಯುತ್ತದೆ. ಹಿಂದೆ ಸುರಪುರವು ನಿಜಾಮರ ಸೇನಾಪಡೆಯ ದಂಡು ಪ್ರದೇಶವಾಗಿತ್ತು. ಗೋಪಾಲಸ್ವಾಮಿ ದೇವಾಲಯದ ಜಾತ್ರೆಯು ಗೋಕುಲಾಷ್ಟಮಿಯಂದು ಜರುಗುತ್ತದೆ. ಅಂದು ಇಲ್ಲಿ ೩೫ ಅಡಿ ಎತ್ತರದ ಕಂಬದ ಮೇಲಿಂದ ತೂರುವ ನೀರು ಓಕಳಿ ಹಾಗೂ ಹಾಲೋಕಳಿಗಳನ್ನು ವೀಕ್ಷಿಸಲು ಸುತ್ತಮುತ್ತಲಿನ ಊರಿಂದ ಸಾವಿರಾರು ಜನರು ಬಂದು ಸೇರುತ್ತಾರೆ. ಸುರಪುರ ಗರುಡಾದ್ರಿ ಕಲೆ ಪ್ರಸಿದ್ಧವಾಗಿದೆ. ಸುರಪುರಕ್ಕೆ ಹೊಂದಿಕೊಂಡಂತೆ ಇರುವ ವೆಂಕಟಾಪುರದಲ್ಲಿರುವ ಬಸವಣ್ಣನ ಭವ್ಯ ಶಿಲಾಮೂರ್ತಿಯು ಮೈಸೂರಿನ ಚಾಮುಂಡಿ ಬೆಟ್ಟದಲ್ಲಿರುವ ನಂದಿಯನ್ನು ನೆನಪಿಸುತ್ತದೆ. ಇಲ್ಲಿಯ ಕೆಲವು ಪುಷ್ಕರಣಿಗಳು ಬೃಹತ್ತಾಗಿದ್ದು (ಈಶ್ವರ, ಎಲ್ಲಮ್ಮ, ಹನುಮಂತ) ಆಕರ್ಷಕವಾಗಿವೆ. ಇವುಗಳೊಂದಿಗೆ ನಬಿಸಾಬ್ ಮತ್ತು ಮುತಾವಲಿ ಹುಸೇನ್ ದರ್ಗಾಗಳಿದ್ದು, ಮಸೀದಿಯೂ ಇದೆ(ಭಾರತ ಸರ್ಕಾರ ಕರ್ನಾಟಕ ರಾಜ್ಯ ಗೆಝೇಟಿಯರ್, ಪು.೭೮೬).

ಕೊಡೇಕಲ್: ತಾಲೂಕು ಕೇಂದ್ರ ಸುರಪುರದಿಂದ ನೈಋತ್ಯಕ್ಕೆ ೪೨ ಕಿ.ಮೀ. ದೂರದಲ್ಲಿದೆ. ಸುಮಾರು ೧೫ನೇ ಶತಮಾನದಲ್ಲಿದ್ದ ಆರೂಢ ಸಂಪ್ರದಾಯದ ಕೊಡೇಕಲ್ ಬಸವಣ್ಣ ಇಲ್ಲಿ ನೆಲೆನಿಂತು ಕಾಲಜ್ಞಾನ ರಚಿಸಿ ಹಿಂದೂ ಮುಸ್ಲಿಂ ಭಾವೈಕ್ಯತೆಗೆ ದೇಹ ತ್ಯಾಜಿಸಿದ ಪುಣ್ಯ ಸ್ಥಳವಾಗಿದೆ. ಇದಕ್ಕೆ ಅಮರ ಕಲ್ಯಾಣವೆಂದು ಕರೆಯುತ್ತಾರೆ.

ಸಗರ-೫೦೦ಕ್ಕೆ ಸೇರಿದ್ದ ಕೊಡೇಕಲ್ ಶಾಸನಸ್ಥ ಊರಾಗಿಲ್ಲದಿದ್ದರೂ ಇಲ್ಲಿಂದ ವರದಿಯಾಗಿರುವ ಸೂಕ್ಷ್ಮ ನವೀನ ಹಾಗೂ ಬೃಹತ್ ಶಿಲಾಯುಗ ಸಂಸ್ಕೃತಿಯ ಅವಶೇಷಗಳು ಈ ಪ್ರದೇಶದ ಪ್ರಾಚೀನ ಜನವಸತಿ ಕಾಲವನ್ನು ಕ್ರಿಪೂ. ೨೩೩೫ರಷ್ಟು ಹಿಂದಕ್ಕೆ ಕೊಂಡೊಯ್ಯುತ್ತಿದ್ದು. ಕರ್ನಾಟಕದಲ್ಲಿ ಕಾಲ ನಿಗಧಿಗೊಳಿಸಿದ ಕೆಲವೇ ನವಶಿಲಾಯುಗ ನೆಲೆಗಳಲ್ಲಿ ಅತ್ಯಂತ ಪ್ರಾಚೀನದ್ದಾಗಿದೆ. ಈ ನೆಲೆಯನ್ನು ಕೂಲಂಕುಷವಾಗಿ ಅಧ್ಯಯನ ಮಾಡಿರುವ ಡಾ. ಪದ್ದಯ್ಯನವರು ಹಲವಾರು ಮಹತ್ವದ ಅಂಶಗಳನ್ನು ಬೆಳಕಿಗೆ ತಂದು ವಿದ್ವಾಂಸರ ಗಮನವನ್ನು ಸೆಳೆದಿದ್ದಾರೆ. ಆದರೂ ಕೊಡೇಕಲ್ 'ಕಾಲಜ್ಞಾನ' ವಿರಚಿತ ಬಸವಣ್ಣನಿಂದಾಗಿಯೇ ಜನಸಾಮಾನ್ಯರನ್ನು ತನ್ನತ್ತ ಆಕರ್ಷಿಸುತ್ತಿದೆ. ಕೊಡೇಕಲ್ಲನ್ನು ತನ್ನ ಕಾರ್ಯ ರಂಗವನ್ನಾಗಿ ಮಾಡಿಕೊಂಡಿದ್ದ ಕೊಡೇಕಲ್ ಬಸವಣ್ಣನ ಜೀವನ ಚರಿತ್ರೆಯನ್ನು ಸಾರುವ ಇವನ

ವಂಶದವನೇ ಆದ ಕವಿ ವೀರಸಂಗಯ್ಯ ವಿರಚಿತ 'ನಂದಿಯಾಗಮಲೀಲೆ' ಕಾವ್ಯದಿಂದಾಗಿ ನಾವಿಂದು ಕೊಡೇಕಲ್ ಬಸವಣ್ಣನಂತಹ ವಿಭೂತಿ ಪುರುಷನನ್ನು ಚಾರಿತ್ರಿಕವಾಗಿ ದಾಖಲಿಸಲು ಸಾಧ್ಯವಾಗಿದೆ. ಸಂಸಾರಿಯಾಗಿ ಸಂಸ್ಕಾರ ಪಡೆದು, ಜನರಲ್ಲಿ ಧರ್ಮಪ್ರಜ್ಞೆ ಮೂಡಿಸಲು ಯತ್ನಿಸಿ ೧೧ ಮಾದರಿಯ ವಿಶಿಷ್ಟ ಅಮರಗನ್ನಡ ಲಿಪಿಗಳನ್ನು ಬಳಸಿ ಕಾಲಜ್ಞಾನವನ್ನು ರಚಿಸಿದ್ದಾನೆ. ಹಿಂದೂ-ಮುಸ್ಲಿಂ ಭಾವೈಕ್ಯತೆಯನ್ನು ಬೋಧಿಸಿದ ಇವರ ಆರೂಢ ಸಂಪ್ರದಾಯದ ಮಠಗಳಿಗೆ ಅನುಯಾಯಿಗಳು ಈಗಲೂ ನಡೆದುಕೊಳ್ಳುತ್ತಾರೆ. ಕೊಡೇಕಲ್ ಬಸವಣ್ಣ ಮತ್ತು ಅವರ ಮಕ್ಕಳಿಂದ ರಚಿತವಾದ ಸುಮಾರು ೨೦೦೦ ಪುಟಗಳಷ್ಟು ಅಪ್ರಕಟಿತ ಅನುಭಾವ ಸಾಹಿತ್ಯ ಈ ಮಠದಲ್ಲಿದೆ(ಭಾರತ ಸರ್ಕಾರ ಕರ್ನಾಟಕ ರಾಜ್ಯ ಗೆಝೇಟಿಯರ್, ಪು.೭೦೪).

ತಿಂಥಿಣಿ(೨೩೨೦)ಯು ತಾಲೂಕು ಕೇಂದ್ರವಾದ ಸುರಪುರದಿಂದ ನೈಋತ್ಯಕ್ಕೆ ೧೯ ಕಿ.ಮೀ. ದೂರದಲ್ಲಿ ಸುರಪುರ-ಲಿಂಗಸುಗೂರು ಮಾರ್ಗದಿಂದ ಐದು ಕಿ.ಮೀ. ಒಳಗೆ ಕೃಷ್ಣಾನದಿಯ ಎಡದಂಡೆಯ ಮೇಲಿರುವ ಹಿಂದೂ-ಮುಸ್ಲಿಂ ಭಾವೈಕ್ಯತೆಯನ್ನು ಸಾರುವ ಧಾರ್ಮಿಕ ಕೇಂದ್ರವಾಗಿದೆ. ಸುಮಾರು ೧೭ನೇ ಶತಮಾನದಲ್ಲಿ ಜೀವಿಸಿದ್ದ ಸಂತ ಮೌನಪ್ಪಯ್ಯನ ಗದ್ದುಗೆ ಇಲ್ಲಿದ್ದು ಹಿಂದೂಗಳು ಇದನ್ನು ಮೌನೇಶ್ವರರದೆಂದೂ, ಮುಸ್ಲೀಮರು ಮೌನುದ್ದೀನರದೆಂದೂ ಭಕ್ತಿಯಿಂದ ಆರಾಧಿಸುತ್ತಾರೆ. ಸುರಪುರ ತಾಲೂಕಿನ ದೇವರಗೋನಾಳದಲ್ಲಿ ವಿಶ್ವಕರ್ಮ ಕುಟುಂಬದಲ್ಲಿ ಜನಿಸಿದ ಮೌನೇಶ್ವರರು ಹಿಂದೂ-ಮುಸ್ಲಿಂ ಸಮನ್ವಯದ ಸಂಕೇತವಾಗಿ ಬಾಳಿ ಉತ್ತರ ಕರ್ನಾಟಕದಲ್ಲಿ ಸಂಚಾರ ಕೈಗೊಂಡು, ಸೂಫಿ ಸಿದ್ಧಾಂತವನ್ನು ಪ್ರಚಾರ ಮಾಡಿ ಹಿಂದೂ-ಮುಸ್ಲಿಂ ಸಮಾಜದ ಸಮಾನ ಗೌರವಕ್ಕೆ ಪಾತ್ರವಾದ ದಿವ್ಯಚೇತನ, ಈ ಸಂತ ಐಕ್ಯವಾದ ಸ್ಥಳದಲ್ಲಿ ಇಂದು ಇರುವ ಕಮಾನು, ಮಿನರೇಟ್ ಹಾಗೂ ಗುಮ್ಮಟಗಳನ್ನುಳ್ಳ ಮೌನಪ್ಪಯ್ಯ ಗುಡಿಯನ್ನು ಸುರಪುರದ ನಾಯಕನ ಆಸ್ಥಾನದಲ್ಲಿ ೧೭೫೨-೧೮೦೨ರವರೆಗೆ ಮಂತ್ರಿಗಳಾಗಿದ್ದ ನಿಷ್ಠಿ ಕಡೆಲಪ್ಪ, ನಿಷ್ಠಿ ವೀರಪ್ಪಯ್ಯ ಹಾಗೂ ಪ್ರಮುಖನಾದ ಶೆಟ್ಟಿ ಸೊರಬಣ್ಣ ನಿರ್ಮಿಸಿದರೆಂದು ತಿಳಿದು ಬರುತ್ತದೆ. ವಿಶಾಲವಾದ ಪ್ರಾಕಾರದಲ್ಲಿರುವ ಮೌನಪ್ಪನ ಗುಡಿಯು ನೆಲಮಾಳಿಗೆಯಲ್ಲಿದ್ದು, ಮೇಲೆ ಮುಸ್ಲೀಮರ ಮಜಾರ ಇದೆ. ನೆಲಮಾಳಿಗೆಯಲ್ಲಿ ಹೂಜಿ, ಚಪ್ಪಗೊಡಲಿ, ಪರಾಸು ಬಟ್ಟಲು ಹಾಗೂ ಪರುಸ ಮಣಿಗಳನ್ನಿಟ್ಟು ಪೂಜೆ ಮಾಡುತ್ತಾರೆ. ಇಲ್ಲಿ ಸೊರಬಣ್ಣನ ಗದ್ದುಗೆ, ಶಿಷ್ಯ ಗಂಗಪ್ಪಯ್ಯ ಮಂದಿರ, ಕೈಲಾಸ ಕಟ್ಟೆ, ಶಾಸನಕಟ್ಟೆಗಳಿದ್ದು, ಸಮೀಪದ ಚಿಕ್ಕ ಬೆಟ್ಟದ ಮೇಲೆ ಮೌನಪ್ಪಯ್ಯನ ಕಮ್ಮಟ ಶಾಲೆ ಇತ್ತೆಂದು ಸ್ಥಳೀಕರು ಹೇಳುತ್ತಾರೆ. 'ಏಕಲಾಖ್ ಅಸ್ಸಿ ಹಜಾರ ಪಾಂಚೋಪೀರ ಪೈಗಂಬರ ಮೌನುದ್ದೀನ್' ಎಂಬ ಘೋಷಣೆಯು ಈ ಸಂತನನ್ನು ಜನಪ್ರಿಯಗೊಳಿಸಿದ್ದು ಈವರೆಗೆ ಈತ ರಚಿಸಿರುವ ಸುಮಾರು ೮೦೦ಕ್ಕಿಂತ ಹೆಚ್ಚು ವಚನಗಳು ಲಭಿಸಿವೆ.

ತಿಂಥಿಣಿ ಮೌನೇಶ್ವರ ಜಾತ್ರೆಯು ಐದು ದಿವಸಗಳವರೆಗೆ ನಡೆಯುತ್ತಿದ್ದು, ಭಾರತ ಹುಣ್ಣಿಮೆಯಂದು (ಫೆಬ್ರವರಿ) ಅಂತ್ಯಗೊಳ್ಳುತ್ತದೆ. ಇಲ್ಲಿಗೆ ಆಗಮಿಸುವ ಯಾತ್ರಾರ್ಥಿಗಳಿಗೆ ವಸತಿ ವ್ಯವಸ್ಥೆಯಿದ್ದು, ಜಾತ್ರೆಯಲ್ಲಿ ಸುಮಾರು ೨-೩ ಲಕ್ಷ ಜನ ಪಾಲ್ಗೊಳ್ಳುತ್ತಾರೆ. ಈ ಜಾತ್ರೆಗೆ ಹೆಚ್ಚಿನ ಸಂಖ್ಯೆಯಲ್ಲಿ ಮುಂಬೈ, ಕೊಲ್ಹಾಪುರ ಮುಂತಾದ ದೂರದ ಪ್ರದೇಶಗಳಿಂದ ಬರುತ್ತಾರೆ. ದೇವಸ್ಥಾನದ ಆಡಳಿತವನ್ನು ಟ್ರಸ್ಟ್ ಕಮಿಟಿಯು ನಡೆಸುತ್ತಿದ್ದು ಯಾದಗಿರಿ ಕಂದಾಯ ಉಪವಿಭಾಗಾಧಿಕಾರಿ ಇದರ ಅಧ್ಯಕ್ಷರಾಗಿರುತ್ತಾರೆ (ಭಾರತ ಸರ್ಕಾರ ಕರ್ನಾಟಕ ರಾಜ್ಯ ಗೆಝೇಟಿಯರ್, ಪು.೭೫೫).

ದೇವರ ಗೋನಾಲ(೨೯೯೮)ವು ತಾಲೂಕು ಕೇಂದ್ರವಾದ ಸುರಪುರದಿಂದ ವಾಯವ್ಯಕ್ಕೆ ೧೦ ಕಿ.ಮೀ. ದೂರದಲ್ಲಿದ್ದು, ಪವಾಡ ಪುರುಷ ತಿಂಥಿಣಿ ಮೌನೇಶ್ವರರ ಹುಟ್ಟೂರಾಗಿರುವುದರಿಂದ ಮಹತ್ವ ಪಡೆದಿದೆ.

ಇಲ್ಲಿಯ ಆದಿಲಿಂಗೇಶ್ವರ ದೇಗುಲವು ಪೂರ್ವಾಭಿಮುಖವಾಗಿದ್ದು ಗರ್ಭಗೃಹ, ಅಂತರಾಳ ಹಾಗೂ ತೆರೆದ ನವರಂಗಗಳನ್ನು ಹೊಂದಿದ್ದು ಪೂರ್ಣ ಶಿಥಿಲಾವಸ್ಥೆಯಲ್ಲಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು. ಇದರ ಬಾಗಿಲವು ಆಕರ್ಷಕವಾಗಿದೆ. ಇಲ್ಲಿಯ ಮೌನಪ್ಪಯ್ಯ ಮಂದಿರವೂ ಸೇರಿದಂತೆ ಮೂರು ಮಂದಿರಗಳನ್ನು ಗೋನಾಳದಲ್ಲಿ ಸುಮಾರು ೧೮ನೇ ಶತಮಾನದಲ್ಲಿದ್ದ ಸುರಪುರದ ನಾಯಕರ ಮಂತ್ರಿಗಳಾದ ನಿಷ್ಠೆಯ ಕಡೆಲಪ್ಪ ಹಾಗೂ ವೀರಪ್ಪ ಕಟ್ಟಿಸಿದ್ದಾರೆ. ಇಲ್ಲಿನ ಮೌನಪ್ಪಯ್ಯನ ಗುಡಿಯು, ಮುಸ್ಲಿಂ ವಾಸ್ತುಶೈಲಿಯ ಗುಮ್ಮಟವನ್ನು ಹೊಂದಿರುವ ಸರಳ ದೇವಾಲಯವಾಗಿದ್ದು, ಪ್ರತಿ ವರ್ಷ ಮೌನಪ್ಪಯ್ಯನ ಜಾತ್ರೆಗೆಂದು ತಿಂಥಿಣಿಗೆ ಬರುವ ಭಕ್ತರು ಇಲ್ಲಿಗೂ ಭೇಟಿ ಕೊಡುತ್ತಾರೆ(ಭಾರತ ಸರ್ಕಾರ ಕರ್ನಾಟಕ ರಾಜ್ಯ ಗೆಝೇಟಿಯರ್, ಪು.೭೩೧).

ದೇವಪುರ(೩೧೪೨)ವು ತಾಲೂಕು ಕೇಂದ್ರವಾದ ಸುರಪುರದಿಂದ ದಕ್ಷಿಣಕ್ಕೆ ೧೨ ಕಿ.ಮೀ. ದೂರದಲ್ಲಿ ಲಿಂಗಸುಗೂರು-ಸುರಪುರ ರಸ್ತೆಯಲ್ಲಿದ್ದು. ಡಾ. ಪದ್ದಯ್ಯನವರು ಇಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ವಸತಿ ನೆಲೆಯನ್ನು ಗುರುತಿಸಿದ್ದಾರೆ. ೧೨ನೇ ಶತಮಾನದ ಶಿಲಾಶಾಸನಗಳಲ್ಲಿ 'ದೇವಾಪುರ' ಎಂದೇ ಉಲ್ಲೇಖಿತಗೊಂಡಿರುವ ಈ ಊರಿನಿಂದ ಈವರೆಗೆ ಮೂರು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಮಸೀದಿಯ ಗೋಡೆಗೆ ಸೇರಿರುವ ತ್ರುಟಿತ ಶಾಸನವು ಕಲ್ಯಾಣದ ಚಾಲುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಕಾಲದ್ದಾಗಿದ್ದು, ೧೧೧೪ರಲ್ಲಿ ನಗರೇಶ್ವರ ದೇವರ್ಗೆ ದತ್ತಿ ಬಿಟ್ಟ ಪ್ರಸ್ತಾಪವಿದೆಯಾದರೂ ಊರನ್ನು ಉಲ್ಲೇಖಿಸಿಲ್ಲ. ಆದರೂ ಸಾಂದರ್ಭಿಕ ಹಿನ್ನೆಲೆಯಲ್ಲಿ ದೇವಪುರ ಬಸ್ ನಿಲ್ದಾಣದ ಬಳಿಯಿರುವ ರಾಮಲಿಂಗೇಶ್ವರ ಗುಡಿಯೇ ಶಾಸನೋಕ್ತ ನಗರೇಶ್ವರ ದೇವಾಲಯವಿದ್ದಿರಬಹುದೆಂದು ತರ್ಕಿಸಬಹುದಾಗಿದೆ. ಪೂರ್ವಾಭಿಮುಖವಾಗಿರುವ ಈ ಗುಡಿಯು ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಜೀರ್ಣೋದ್ಧಾರ ಗೊಂಡಿರು ವುದರಿಂದ ಸುಸ್ಥಿತಿಯಲ್ಲಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ಇದರ ಬಾಗಿಲಪವಾಡವು

ಪಂಚಶಾಖಾಲಂಕೃತವಾಗಿದ್ದು, ಲಲಾಟದಲ್ಲಿ ಗಜಲಕ್ಷ್ಮಿ ಕೆತ್ತನೆಯನ್ನು ಹೊಂದಿದ್ದು ಆಕರ್ಷಕವಾಗಿದೆ. ನವರಂಗದಲ್ಲಿ ಎರಡು ದೇವಕೋಷ್ಠಗಳಿವೆ. ಛತ್ತನ್ನು ಆಕರ್ಷಕವಾದ ನಾಲ್ಕು ದಳದ ಕಮಲದಿಂದ ಅಲಂಕರಿಸಲಾಗಿದೆ. ನವರಂಗದ ಮುಂಭಾಗವು ಮುಕ್ತವಾಗಿದ್ದು, ವಜ್ರಾಕಾರದ ವಿನ್ಯಾಸಗಳಿಂದ ಅಲಂಕರಿಸಲ್ಪಟ್ಟಿರುವ ಕಕ್ಷಾಸನವನ್ನು ಹೊಂದಿದೆ. ಈ ಗುಡಿಯ ಹಿಂಭಾಗದಲ್ಲೇ ಕಲ್ಯಾಣದ ಚಾಳುಕ್ಯರ ಕಾಲದ ಕಂಬಗಳನ್ನುಳ್ಳ ಪರಮಾನಂದರ ಗುಡಿ ಇದೆ. ಊರ ಒಳಗಡೆ ಬಸವಣ್ಣ, ವೀರಭದ್ರ ಹಾಗೂ ಮಲ್ಲಿಕಾರ್ಜುನ ಗುಡಿಗಳು ಕಲ್ಯಾಣದ ಚಾಳುಕ್ಯರ ಕಾಲದ ಕಂಬ, ಬಾಗಿಲುಗಳನ್ನು ಹೊಂದಿದ್ದು ಇದರಿಂದ ೧೦-೧೨ನೇ ಶತಮಾನದಲ್ಲಿ ಇಲ್ಲಿ ಕನಿಷ್ಟ ಇನ್ನೂ ನಾಲ್ಕೈದು ಸುಂದರ ದೇಗುಲಗಳಿದ್ದು ಇದೊಂದು ಪ್ರಮುಖ ಸಾಂಸ್ಕೃತಿಕ ಕೇಂದ್ರವಾಗಿದ್ದಂತೆ ತೋರುತ್ತದೆ.

ಇವೆಲ್ಲಕ್ಕಿಂತ ಮಿಗಿಲಾಗಿ 'ದೇವಾಪುರ'ವು ಕನ್ನಡ ಜೈಮಿನಿ ಭಾರತದ ಕರ್ತೃ ಲಕ್ಷ್ಮೀಶನ ಜನ್ಮ ಸ್ಥಳವೆಂದು ಹೇಳಲಾಗುತ್ತದೆಯಾದರೂ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನಲ್ಲಿರುವ ದೇವನೂರೇ ಕವಿ ಲಕ್ಷ್ಮೀಶನ ಜನ್ಮಸ್ಥಳವೆಂಬ ಅಭಿಪ್ರಾಯವಿದೆ(ಭಾರತ ಸರ್ಕಾರ ಕರ್ನಾಟಕ ರಾಜ್ಯ ಗೆಝೆಟಿಯರ್, ಪು.೭೩೦).

ಮುದನೂರು(೪೮೯೦) ತಾಲೂಕ ಕೇಂದ್ರವಾದ ಸುರುಪುರದಿಂದ ವಾಯುವ್ಯಕ್ಕೆ ೩೫ ಕಿ.ಮೀ. ಕೆಂಭಾವಿಯಿಂದ ನೈಋತ್ಯಕ್ಕೆ ೧೬ ಕಿ.ಮೀ. ದೂರದಲ್ಲಿ ಕೆಂಬಾವಿ ಹುಣಸಗಿ ರಸ್ತೆಯಲ್ಲಿದೆ. ಬಸವ ಪೂರ್ವ ಯುಗದ ವಚನಕಾರ 'ಜೇಡರ ದಾಸಿಮಯ್ಯ'ನ ಜನ್ಮಸ್ಥಳ ಈ ಊರೇ ಆಗಿರುತ್ತದೆ. ಇಲ್ಲಿಯವರೆಗೆ ೨೧ ಶಾಸನಗಳು ವರದಿಯಾಗಿವೆ. ಪ್ರಾಚೀನ ಶಾಸನಗಳಲ್ಲಿ "ಸರ್ವನಮಸ್ಯೆದಗ್ರಹಾರ ದಕ್ಷಿಣ ವಾರಣಾಸಿ ಮುದಿನೀರು. ಮಹಾಗ್ರಹಾರ ಮುದಿನೀರು, ಶಾಸನದ ಮನೆ ಮುದಿನೀರು ರಾಮದತ್ತಿ ಅಗ್ರಹಾರ" ಎಂದೇ ಉಲ್ಲೇಖಿತವಾಗಿರುವ ಇದು ಹಿಂದೆ ಸಗರ ೫೦೦ಕ್ಕೆ ಸೇರಿದ ಪ್ರಮುಖ ಧಾರ್ಮಿಕ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕೇಂದ್ರವಾಗಿತ್ತು. ಎಳಮೇಲ ಸಿಂಹಪರ್ಷೆಯ ಅಭಿನವ ಪಾಶುಪತ ಸಂಪ್ರದಾಯದ ಮೂಲ ಕೇಂದ್ರ ಇದಾಗಿದ್ದು, ಇದರ ಮೂಲ ಪುರುಷನಾದ ಮಲೆಯಾಳ ಪಂಡಿತನು ಇಲ್ಲಿಯವನೆಂದು ತಿಳಿದುಬರುತ್ತದೆ. ಇಂದು ಎರಡು ಮುದನೂರುಗಳು ಅರ್ಧ ಕಿ.ಮೀ. ಅಂತರದಲ್ಲಿದ್ದು, ಕ್ರಮವಾಗಿ ಚಿಕ್ಕಮುದನೂರಿನಲ್ಲಿ ೧೦ ಹಾಗೂ ಹಿರೇಮುದನೂರಿನಲ್ಲಿ ೧೧ ಶಾಸನಗಳು ದೊರೆತಿವೆ(ಭಾರತ ಸರ್ಕಾರ ಕರ್ನಾಟಕ ರಾಜ್ಯ ಗೆಝೆಟಿಯರ್, ಪು.೭೪೯).

ವಾಗಣಗೇರಿ(೨೫೭)ಯು ತಾಲೂಕು ಕೇಂದ್ರವಾದ ಸುರಪುರದಿಂದ ಪಶ್ಚಿಮಕ್ಕೆ ಆರು ಕಿ.ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಊರಾಗಿದೆ. ಸುರಪುರದ ಅರಸರ (೧೬೩೬-೧೮೫೮) ಆಳ್ವಿಕೆಯಲ್ಲಿ ಮಹತ್ವದ ಸ್ಥಾನವನ್ನು ಪಡೆದಿದ್ದ ಈ ಊರು ಸದೃಢವಾದ ಕೋಟೆ-ಕೊತ್ತಲಗಳನ್ನು ಹೊಂದಿದೆ. ಇದು ಆರಂಭದಲ್ಲಿ ಸುರಪುರದ ನಾಯಕರ ರಾಜಧಾನಿಯಾಗಿದ್ದು, ಈ ಕೋಟೆಯನ್ನು ಸುರಪುರದ ಸಂಸ್ಥಾನದ ಮೊದಲ ಅರಸನಾದ ಗಡ್ಡಿ ಪಿಡ್ಡನಾಯಕನು ಕಟ್ಟಿಸಿದನೆಂಬ ಅಭಿಪ್ರಾಯವಿದೆ. ಕೋಟೆಯ

ಒಳ ಅಂಗಳವು ಸುಮಾರು ೧೮ ಎಕರೆಯಷ್ಟು ವಿಶಾಲವಾಗಿದೆ. ಈ ಕೋಟೆಯು ಸುಮಾರು ೨೫೦ ಅಡಿ ಎತ್ತರದ ಗುಡ್ಡದ ಮೇಲಿದ್ದು, ಅದರ ಹೆಬ್ಬಾಗಿಲು ಒಂಭತ್ತು ಅಡಿ ಅಗಲವಿದ್ದು, ೧೧ ಅಡಿ ಎತ್ತರವಿದೆ. ಕೋಟೆಯಲ್ಲಿ ಪಾವಟಿಗೆಯುಳ್ಳ ಬಾವಿ ಇದ್ದು, ಗೋಪಾಲಸ್ವಾಮಿಯ ಮಂದಿರವಿದೆ. ಮೊಗಲ್‌ರ ನಡುವೆ ಇಲ್ಲಿ ಭೀಕರವಾದ ಕದನ ನಡೆಯಿತು. ಕೋಟೆ ಔರಂಗಜೇಬನ ವಶವಾಯಿತು. ಕೋಟೆಯ ಹೆಬ್ಬಾಗಿಲ ಮೇಲಿರುವ ಪರ್ಷಿಯನ್ ಶಾಸನವು ಮೊಗಲ್ ಚಕ್ರವರ್ತಿ ಔರಂಗಜೇಬನು ತನ್ನ ಆಳ್ವಿಕೆಯು ೪೯ನೇ ವರ್ಷದಲ್ಲಿ (೧೭೦೫) ನೀಡಿದ ಆದೇಶದಂತೆ ಈ ಕೋಟೆಯ ನಿರ್ಮಾಣ ಕಾರ್ಯವು ಹಫಿಜ ಮಸೂದನ ಮೇಲ್ವಿಚಾರಣೆಯಲ್ಲಿ ಪೂರ್ಣಗೊಂಡ ಅಂಶವನ್ನು ತಿಳಿಸುತ್ತ ಇದನ್ನು ಖಚಿತಪಡಿಸುತ್ತದೆ. ಊರಲ್ಲಿ ದೇವರಶೆಟ್ಟಿಯವರ ಹೊಲದಲ್ಲಿ ಬ್ರಹ್ಮನಗುಡಿ ಇದೆ(ಭಾರತ ಸರ್ಕಾರ ಕರ್ನಾಟಕ ರಾಜ್ಯ ಗೆಝೇಟಿಯರ್, ಪು.೭೭೫).

೨.೪. ಅಲೆಮಾರಿಗಳ ಪದ ಪರಿಚಯ

ಅಲೆಮಾರಿ–ಅರೆಅಲೆಮಾರಿ ವಿಮುಕ್ತ ಎಂದು ಕರೆಯಲಾಗುವ ಸಮುದಾಯಗಳು ಇಡೀ ದೇಶಾದ್ಯಂತ ನೆಲೆಸಿರುವ ಒಂದು ರೀತಿಯಲ್ಲಿ ಆದಿವಾಸಿ ಸಮುದಾಯಗಳೇ ಆಗಿವೆ. ಈ ಸಮುದಾಯ ಗಳಿಗೆ ಒಂದು ನೆಲೆ ಇಲ್ಲದ ಪರಿಣಾಮ ಹಾಗೂ ಈ ಸಮುದಾಯದ ಕುಟುಂಬಗಳು ಜೀವನೋಪಾಯ ಕ್ಕಾಗಿ ಇಂದಿಗೂ ಅಲೆದಾಡುತ್ತಲೇ ಇರುವ ಪರಿಣಾಮ ಈ ಸಮುದಾಯಗಳಿಗೆ ಒಂದು ಊರಾಗಲೀ, ಒಂದು ಕೇರಿಯಾಗಲಿ, ಒಂದು ಸೂರಾಗಲೀ ಇಲ್ಲ. ನಿರಂತರ ಅಥವಾ ನಿಯಮಿತ ಅಲೆಮಾರಿ ಮತ್ತು ಅರೆಅಲೆಮಾರಿ ಸಮುದಾಯಗಳ ಲಕ್ಷಣಗಳು ವಿಭಿನ್ನವಾಗಿವೆ. ಈ ಸಮುದಾಯಗಳು ಪಾರಂಪರಿಕ ವಾಗಿ ವನ್ಯಜೀವಿಗಳ ಬೇಟೆ, ಪಳಗಿಸುವಿಕೆ ಮತ್ತು ಪ್ರದರ್ಶನ, ಪಶುಪಾಲನೆ, ನಾಟಿವೈದ್ಯ, ಕಲಾ ಪ್ರದರ್ಶನ, ದೈವಾರಾಧನೆ, ಭಿಕ್ಷಾಟನೆ ಇತ್ಯಾದಿ ವೃತ್ತಿಗಳಿಂದಾಗಿ ದೇಶಾದ್ಯಂತ ಅಲೆದಾಡುತ್ತಿರುತ್ತಾರೆ. ಕರಡಿ ಕುಣಿಸುವುದು, ಕೋತಿ ಆಡಿಸುವುದು, ಹಾವಾಟ, ನಂದಿ ಪ್ರದರ್ಶನ, ಕುರಿ, ಮೇಕೆ, ಕೋಳಿ, ಹಂದಿ, ಒಂಟೆಗಳ ಪಾಲನೆ, ಹಗಲುವೇಷ, ಬುರ್ರಕಥೆ, ಗೊಂದಳ, ದಾಸರಪದ, ಯಕ್ಷಗಾನ, ಬಯಲಾಟ, ತೊಗಲುಗೊಂಬೆಯಾಟ, ದೊಂಬರಾಟ, ಮಾರಮ್ಮ, ಸುಂಕಲಮ್ಮ, ಕಟಾರಮ್ಮ ಮುಂತಾದ ದೈವಗಳ ಪ್ರದರ್ಶನ ಮಾಡಿಕೊಂಡು ಈ ಸಮುದಾಯಗಳು ಅಲೆಮಾರಿ ಜೀವನವನ್ನು ನಡೆಸುತ್ತಾ, ಸಮಾಜದಲ್ಲಿ ಗುರುತಿಸಿಕೊಂಡಿದ್ದಾರೆ.

ಸಹಜವಾಗಿ ಅಲೆಮಾರಿಗಳು ಅತ್ಯಂತ ನಿರಾಡಂಬರದ ಜನ. ಇವರು ನಿರಕ್ಷರಸ್ಥ ನಿಷ್ಕಪಟ ಹಾಗೂ ಸರಳತೆಯಿಂದ ಬದುಕುವವರು. ಇವರ ಕುಲವೃತ್ತಿಗೆ ಬಂಡವಾಳವೇ ಇಲ್ಲ. ಇವರು ಪ್ರಕೃತಿಯ ಅಗೋಚರ ಶಕ್ತಿಗಳನ್ನು ಕೈವಶ ಮಾಡಿಕೊಂಡವರೆಂದು ಹೇಳಿಕೊಳ್ಳುತ್ತಾರೆ. ಇವರಿಗೆ ಇವರದೇ ಆದ ಒಂದು ಭಾಷೆ ಇದೆ. ಸಹಜವಾಗಿ ಇವರು ಯಾವುದೇ ಗ್ರಾಮ, ಪಟ್ಟಣ, ನಗರಗಳಲ್ಲಿರುವ ಹಾಳುಗುಡಿ, ಗುಂಡಾರಗಳು, ಪಾಳು ಬಿದ್ದ ಛತ್ರಗಳು, ಬಯಲಿನ ಮರಗಿಡಗಳ ಕೆಳಗೆ, ನಗರಗಳಲ್ಲಿ

ರೈಲ್ವೆ ಪಟ್ಟಿಯ ಆಜುಬಾಜು, ಕೊಳಚೆ ಪ್ರದೇಶಗಳಲ್ಲಿ, ಸ್ಮಶಾನದ ಹತ್ತಿರ ಹಾಗೂ ಒಣ ಕೆರೆಗಳ ಹತ್ತಿರ ಗುಡಾರಗಳನ್ನು ಹಾಕಿಕೊಂಡು ವಾಸಿಸುತ್ತಾರೆ.

"ಅಲೆಮಾರಿಗಳನ್ನು ಗ್ರೀಕ್‌ನಲ್ಲಿ ನೆನಿನ್(Nenein), ಲ್ಯಾಟಿನ್‌ನಲ್ಲಿ ನೇಮಾಸ್(Nemas), ಇಂಗ್ಲೀಷ ನಲ್ಲಿ ನೋಮಾಡ್ಸ್(Nomads) ಎಂದು ಕರೆಯುತ್ತಾರೆ. ಇವರನ್ನು ಅಲೆಮಾರಿಗಳು ಎಂದು ಕರೆಯುವುದ ರೊಂದಿಗೆ ಪರದೇಶಿ, ನೆಲೆ ಇಲ್ಲದವರು, ದೇಶಸಂಚಾರಿಗಳು, ಪರಸ್ಥಳದವರು, ಹೊರಗಡೆಯವರು, ಬೀಡು ಬಿಡುವವರು, ಗುಳೆ ಹೋಗುವವರು, ವಲಸಿಗರು ಎಂದು ಕರೆಯುವುದರೊಂದಿಗೆ ಉಚಲ್ಯ, ಜಿಪ್ಸಿ ಎಂತಲೂ ಕರೆಯುತ್ತಾರೆ. ಇವರನ್ನು ಗೋಸಾಯಿ, ಜಂಗಾಲಿ, ಜಂಗಮ, ಜೋಗಿ, ದಾಸಯ್ಯ ಎಂದು ಜನಪದರು ಕರೆದರೆ, ಮಾನವಶಾಸ್ತ್ರಜ್ಞರು ಈ ಪಶುಪಾಲನೆಯ ಹಿನ್ನೆಲೆ ಉಳ್ಳವರನ್ನು ಅಲೆಮಾರಿ ಸಮುದಾಯದವರೆಂದೇ ಗುರುತಿಸಿದ್ದಾರೆ.

"ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕಾ"ದ ಪ್ರಕಾರ ಅಲೆಮಾರಿತನ ಒಂದು ಜೀವನ ವಿಧಾನ. ಬೇಟೆ ಮತ್ತು ಆಹಾರ ಸಂಗ್ರಹಣೆ, ಪಶುಪಾಲನೆ ಅಥವಾ ವ್ಯಾಪಾರಕ್ಕಾಗಿ ಮಾನವ ಒಂದೆಡೆ ನೆಲೆ ಯೂರದೆ, ದಿಕ್ಕು ದೆಸೆಯಿಲ್ಲದ ಅಥವಾ ಕಾಲಾನುಸಾರದ ಅಲೆಯುವಿಕೆಯನ್ನು ಅಲೆಮಾರಿತನ ಎಂದು ಕರೆಯುತ್ತಾರೆ. ಆದರೆ ಅಲೆಮಾರಿತನಕ್ಕೂ, ವಲಸೆ ಪ್ರಕ್ರಿಯೆಗೂ ಬಹಳ ಭಿನ್ನವಾದ ವ್ಯತ್ಯಾಸವಿದೆ" (ಸಂಕುಲ, ಪು.೨೫೬).

ಮಾನವರ ಸಾಮಾಜಿಕ ವ್ಯವಸ್ಥೆಗೆ ದೀರ್ಘ ಇತಿಹಾಸವಿದೆ. ಅವರು ಮೊದಲು ಆದಿವಾಸಿ ಯಾಗಿದ್ದರು. ಕಾಲ ಉರುಳಿದಂತೆ ಮೊದಲ ವೃತ್ತಿಗಳಿಂದ ಹೊರ ಬರುತ್ತಲೇ ಭಿನ್ನ ವೃತ್ತಿಗಳನ್ನು ಕಂಡುಕೊಂಡರು. ವೈವಿಧ್ಯಮಯ ಸಾಮಾಜಿಕ ಬದುಕನ್ನು ಕಂಡುಕೊಂಡಿರುವುದು ಎಲ್ಲರಿಗೂ ಗೊತ್ತಿರುವ ವಿಷಯವಾಗಿದೆ. ಆದರೆ ಕೆಲವೊಂದು ಅಲೆಮಾರಿ ಸಮುದಾಯಗಳು ಯಾವುದೇ ಸಾಂಸ್ಕೃತಿಕ, ತಂತ್ರಜ್ಞಾನದ ಆಧುನಿಕ ಬಿರುಗಾಳಿ ಬೀಸಿದರೂ ತಮ್ಮ ಮೂಲ ಪರಂಪರೆಯೊಂದಿಗೆ ತಮ್ಮ ಸಾಂಸ್ಕೃತಿಕ ಕಲೆಗಳೊಂದಿಗೆ ಜೀವನವನ್ನು ಕಾಲಕ್ಕೆ ತಕ್ಕಂತೆ ನಿರ್ವಹಿಸುತ್ತಾ ಬಂದಿದ್ದಾರೆ. ಅನ್ಯ ಸಂಸ್ಕೃತಿಯ ಅನ್ಯಾಯವನ್ನು ಎದುರಿಸುತ್ತ, ಪ್ರತ್ಯೇಕವಾಗಿಯೇ ಜೀವಿಸುತ್ತಿರುವ ಸಮುದಾಯಗಳೇ ಅಲೆಮಾರಿ ಸಮುದಾಯಗಳು ಎಂದರೆ ತಪ್ಪಾಗಲಾರದು.

ಅಲೆಮಾರಿ ಸಮುದಾಯ ಎಂದು ಪರಿಗಣಿಸಿರುವುದರಿಂದ ಅಲೆಮಾರಿ ಎಂದರೇನು ಎಂಬುದನ್ನು ತಿಳಿಯಬೇಕಾಗಿದೆ. ಜೀವನ ನಿರ್ವಹಣೆಗಾಗಿ ಉನ್ನತ ಹುದ್ದೆಗಳ ಹಾಗೂ ಉನ್ನತ ಪದವಿ ವ್ಯಾಸಂಗ ಮಾಡಿರುವ ಪರಿಣತರು, ದೇಶ ವಿದೇಶಗಳಲ್ಲಿ ತಿರುಗುವ ಉದ್ಯೋಗಿ ಮತ್ತು ಆಧುನಿಕ ವಿದ್ಯಾವಂತ ಅಲೆಮಾರಿ ಜನ ಈ ಪದದ ಪರಿಧಿಗೆ ಬರುವುದಿಲ್ಲ. ನೌಕರಿಗಾಗಿ ತಮ್ಮ ಮೂಲಸ್ಥಳದಿಂದ ಮತ್ತೊಂದು ಸ್ಥಳದಲ್ಲಿ ಹೋಗಿಬರುವ ಜನಸಮುದಾಯವು ಈ ಪದದ ಪರಿಧಿಗೆ ಬರುವುದಿಲ್ಲ.

ವ್ಯಾಪಾರದ ಉದ್ದೇಶಕ್ಕಾಗಿ ನೆಲೆ ನಿಂತು, ಒಂದು ಸ್ಥಳದಿಂದ ಮತ್ತೊಂದು ಸ್ಥಳದಲ್ಲಿ ಸಂಚರಿಸುವ ಸಮುದಾಯವು ಈ ಪರಿಧಿಗೆ ಬರುವುದಿಲ್ಲ.

ಗ್ರಾಮ ಮತ್ತು ನಗರ ಸಂಸ್ಕೃತಿಯ ಪ್ರಭಾವಕ್ಕೆ ಸಂಪೂರ್ಣ ಒಳಗಾಗದೆ ಅದರಿಂದ ದೂರವಿದ್ದು ನಿರ್ಗತಿಕರಾಗಿ, ಧಾರ್ಮಿಕ ಭಿಕ್ಷಾಟನೆ, ಸ್ಮಶಾನದಲ್ಲಿ ವಾಸ, ಸಮುದಾಯದ ಕಾಯಕ, ಪ್ರಾಣಿಗಳ ಜೊತೆಯಲ್ಲಿ, ಇತರರಿಗಿಂತ ಭಿನ್ನ ಪದ್ಧತಿ ರೂಢಿಸಿಕೊಂಡು ತಮ್ಮ ಮೂಲ ವೃತ್ತಿಗಳಿಂದ ಒಂದೂರಿನಿಂದ ಮತ್ತೊಂದೂರಿಗೆ ಅಲೆಯುವ ಅಥವಾ ಚಾಲನೆ ಸ್ಥಿತಿಯಲ್ಲಿರುವ ಸಮುದಾಯವನ್ನು ಅಲೆಮಾರಿ ಸಮುದಾಯ ಎನ್ನಬಹುದು. ಪಾರಂಪಾರಿಕ ಸಮಾಜದಲ್ಲಿ ಆಧುನಿಕ ಬದುಕಿನ ನಿರ್ವಹಣೆಯ ಮೂಲಕ ಒಪ್ಪತ್ತಿನ ಊಟದ ಅನ್ವೇಷಣೆಯಲ್ಲಿ ೨೧ನೇ ಶತಮಾನದಲ್ಲೂ ಅಲೆದಾಡುವ ಸಾಮಾಜಿಕ ಅನಿವಾರ್ಯತೆಯನ್ನು ಅನುಭವಿಸುತ್ತಿರುವ ಸಮುದಾಯಗಳನ್ನು ಇಲ್ಲಿ ಅಲೆಮಾರಿಗಳು ಎಂದು ಕರೆಯಬಹುದು.

ಅಧ್ಯಯನದಲ್ಲಿ ಆಯ್ದುಕೊಂಡ ಅಲೆಮಾರಿ ಸಮುದಾಯಗಳು ಜಾತಿ ಶ್ರೇಣಿಯ ಕೆಳಗೆ ಬರುವವರಾಗಿದ್ದಾರೆ. ಆ ಮೂಲಕ ತಮ್ಮದೇ ಜೀವನ ಪದ್ಧತಿಯೊಂದಿಗೆ ಬದುಕನ್ನು ಹರಸಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶದಲ್ಲಿ ಅಲೆಯುತ್ತಿರುತ್ತಾರೆ. ಎಲ್ಲಿ ತಮಗೆ ಯೋಗ್ಯವಾದ ಪ್ರದೇಶವೆಂದು ಅಂದುಕೊಳ್ಳುವರೋ ಅಂತಹ ಕಡೆಗಳಲ್ಲಿ ಅಂದರೆ ಸ್ಮಶಾನದ ಭಾಗ, ಊರಿನ ಕೊನೆಯ ಪ್ರದೇಶ, ನೀರು ಹರಿಯುವ ಸ್ಥಳ, ಶಾಲಾಮೈದಾನ, ಸಂತೆ, ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ, ಚಲನಚಿತ್ರ ಮಂದಿರಗಳ ಹಿಂಭಾಗ ಇತ್ಯಾದಿ ಸ್ಥಳಗಳಲ್ಲಿ ಕೆಲವು ದಿನಗಳವರೆಗೆ ಗುಡಾರಗಳನ್ನು ನಿರ್ಮಿಸಿ ಉಳಿದುಕೊಳ್ಳುವರು. ತರುವಾಯ ಅಲ್ಲಿಂದ ಮುಂದಿನ ಪ್ರದೇಶದಲ್ಲಿ ಸಂಚರಿಸುತ್ತಾ ಇರುತ್ತಾರೆ. ಈ ಚಲಿಸುವ ಬದುಕಿನ ಸಾಗಾಟದಲ್ಲಿ ಹಸಿವು, ನೋವು, ಹಿಂಸೆ, ಅವಮಾನಗಳು, ದುಃಖ ನಿಂದನೆಗಳೊಂದಿಗೆ ಕಷ್ಟಗಳನ್ನು ಅನುಭವಿಸಿ ತಮ್ಮ ಶ್ರೇಷ್ಠತೆ ಉಳಿಸಿಕೊಂಡು ನೆಲೆ ನಿಂತ ಸಮುದಾಯಗಳೊಂದಿಗೆ ಮುಖಾಮುಖಿಯಾಗಿ ಜೀವನ ನಡೆಸುತ್ತಿದ್ದಾರೆಯೇ ಅವರೆ ಅಲೆಮಾರಿಗಳು.

೨.೫. ಅಲೆಮಾರಿ ಸ್ಥೂಲ ಪರಿಚಯ

ಅಧ್ಯಯನದಲ್ಲಿ ಆಯ್ದುಕೊಂಡ ಅಲೆಮಾರಿ ಸಮುದಾಯಗಳ ಮೂಲ ಮತ್ತು ಸಂಕ್ಷಿಪ್ತ ಪರಿಚಯವನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

೧. ಕೊರಮ(ಹಂದಿಕೊರಮ), ೨. ಕೋಲೆ ಬಸವ, ೩. ಗೊಂಧಳಿ(ಬುಡಬುಡಕೆ), ೪. ಘೀಸಾಡಿ, ೫. ಚೆನ್ನದಾಸರು(ದೊಂಬಿದಾಸ, ಹೊಲೆಯದಾಸ), ೬ ಜೋಗೆರು(ಹಂದಿ ಜೋಗೆರು), ೭. ಬುಡ್ಗ ಜಂಗಮ್(ಸುಡುಗಾಡು ಸಿದ್ಧ, ಕುರುಮಾಮಾ, ಬಾಳಸಂತೋಷಿ), ೮. ಬೈಲಪತ್ತಾರ, ೯. ಸಿಕ್ಲಿಗರ, ೧೦. ಸಿಂಧೋಳ್ಳ(ದುರಗಮುರಗಿ), ೧೧. ಶಿಳ್ಳೇಕ್ಯಾತ, ೧೨. ಹಾವಾಡಿಗರು, ೧೩. ಹೆಳವರು. ಇತರೆ **ಅಲೆಮಾರಿ ಸಮುದಾಯಗಳು** ೧೪. ದೊಂಬರು, ೧೫. ರಾಜಗೊಂಡ ಕಾಣಬಹುದಾಗಿದೆ.

ಅಲೆಮಾರಿ ಜನಾಂಗಗಳ ಮೂಲದ ಕುರಿತು ಹಲವು ಪುಸ್ತಕಗಳನ್ನು ಪರಾಮರ್ಶಿಸಲಾಗಿದೆ. ಅವರನ್ನು ಭೇಟಿಯಾಗಿ ಕ್ಷೇತ್ರ ಅಧ್ಯಯನದ ಮೂಲಕ ಕೆಲವೊಂದು ಮಾಹಿತಿಯನ್ನು ಪಡೆಯಲಾಗಿದೆ. ಅಂತಹ ಹಲವು ಅಲೆಮಾರಿ ಸಮುದಾಯಗಳ ಪೈಕಿ ಯಾದಗಿರಿ ಜಿಲ್ಲೆಯ ಸುರಪುರ, ಶಹಾಪುರ, ಯಾದಗಿರಿ ತಾಲೂಕಿನಲ್ಲಿರುವ ಅಲೆಮಾರಿ–ಅರೆಅಲೆಮಾರಿಗಳ ಮಾಹಿತಿಯನ್ನು ಈ ಕೆಳಕಂಡಂತೆ ಪಡೆದುಕೊಳ್ಳಲು ಸಾಧ್ಯವಾಗಿದೆ.

ಯಾವುದೇ ಸಮುದಾಯದ ಮೂಲವನ್ನು ಶೋಧಿಸಿದರೂ ನಿರ್ದಿಷ್ಟವಾಗಿ ಇಂತಹದ್ದೇ ಮೂಲದಿಂದ ಬಂದವರು. ಇವರಿಂದಲೇ ಬಂದವರು, ಇಂತಹ ಸ್ಥಳದಿಂದಲೇ ಬಂದವರೆಂದು ಹೇಳುವುದು ಕಷ್ಟದ ಕಾರ್ಯ. ಇದೇ ಮೂಲವೆಂದು ಹೇಳುವುದು ಕೂಡ ಕಷ್ಟವಾದುದು. ಆ ಸಮುದಾಯ ಎಲ್ಲಿ ಜೀವಿಸಲು ಅನುಕೂಲವಾದ ವಾತಾವರಣ, ಕಾಡಿನ ಸಂಪನ್ಮೂಲ, ನೀರಿನ ಸಂಪನ್ಮೂಲ ಹಾಗೂ ಹೇರಳವಾಗಿ ಭಿಕ್ಷೆ ದೊರೆಯುವ ಸ್ಥಳಗಳು, ಬೇಟೆಗೆ ಅನುಕೂಲಕರವಾದ ಸ್ಥಳಗಳು ಮತ್ತು ವ್ಯಾಪಾರಕ್ಕಾಗಿ ಎಲ್ಲೆಲ್ಲಿ ಅನುಕೂಲವಾಗುತ್ತದೆಯೊ ಅಲ್ಲೆಲ್ಲ ಅಲೆಮಾರಿಗಳು ನೆಲೆಸಿರುವುದನ್ನು ಕಾಣಬಹುದಾಗಿದೆ.

ಮೂಲ ಎಲ್ಲಿ ಎಂಬುದನ್ನು ನಿಖರವಾಗಿ ಹೇಳುವುದು ಕಷ್ಟದ ಕೆಲಸ. ಮೂಲದ ಬಗ್ಗೆ ಕೆದಕುತ್ತಾ ಹೋದಂತೆಲ್ಲಾ ಇವರ ಸೃಷ್ಟಿ ಪುರಾಣಗಳಿಂದ ಮತ್ತು ವಕ್ತೃಗಳಿಂದ ಬಂದಿರುವ ಮಾಹಿತಿಯು ತುಂಬಾ ವಿಚಿತ್ರವಾಗಿದೆ. ಒಬ್ಬರು ಬಳ್ಳಿಯಿಂದ ಜನಿಸಿದರೆ ಮತ್ತೊಬ್ಬರು ಮಂತ್ರದಿಂದ, ಶಿವನಿಂದ, ದೇವಾನುದೇವತೆಗಳಿಂದ, ಶಾಪದಿಂದ, ಪ್ರಾಣಿ-ಪಕ್ಷಿಗಳಿಂದ, ಋಷಿಗಳಿಂದ ಹೀಗೆ ನಾನಾ ರೀತಿಯಲ್ಲಿ ಸೃಷ್ಟಿಯಾಗಿ ಬಂದದ್ದನ್ನು ಕಾಣಬಹುದಾಗಿದೆ. ಆದಿಮಕಾಲದಲ್ಲಿ ಪ್ರಾಣಿಯಂತಿದ್ದ ಮಾನವ ಹಂತಹಂತವಾಗಿ ಬೇರೆ ಬೇರೆ ಆಯಾಮಗಳಲ್ಲಿ ಬೆಳೆದು ಬಂದಿದ್ದಾನೆ. ಈ ಹಂತಗಳಲ್ಲಿ ಬದುಕಿನ ಏನೆಲ್ಲಾ ಘಟನೆಗಳಾದ ಪ್ರಕೃತಿ ವಿಕೋಪ, ವಿಪರೀತ ಮಳೆ, ಚಳಿ, ಬಿಸಿಲು, ಕ್ರೂರ ಮೃಗಗಳ ಹಾವಳಿ ಆಹಾರದ ಅಭಾವ, ಬೇಟೆಯ ತುಡಿತ, ವ್ಯಾಪಾರದ ಅಮಲು, ಬ್ರಿಟಿಷರ ಮತ್ತು ಸ್ಥಳೀಯರ ಆಡಳಿತದಿಂದ ಬೇಸತ್ತು ಮತ್ತು ಕೆಲವೊಂದು ದೊರೆಗಳಿಂದ ಹಿಂಸೆಯನ್ನು ಅನುಭವಿಸಿ ಬಂದವರಾಗಿದ್ದಾರೆ. ಇಂತಹ ಸಮುದಾಯಗಳನ್ನು ಅಂದಿನ ಆಳುವ ವರ್ಗವು ಧರ್ಮದ ಪ್ರಚಾರಕ್ಕಾಗಿ, ಸೇವೆಗಾಗಿ ಇನ್ನಿತರ ಕಾರಣಗಳಿಗಾಗಿ ಬಳಸಿಕೊಂಡಿದ್ದರು. ವೈವಿಧ್ಯಮಯ ಸ್ಥಳಗಳಲ್ಲಿ ಚದುರಿ ಹಂಚಿಹೋದ ಸಮುದಾಯಗಳು ಅಲೆಮಾರಿಗಳಾಗಿ ವಾಸದ ನೆಲೆ-ನೆಲವಿಲ್ಲದೆ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶದಲ್ಲಿ ಅಲೆಯುತ್ತಲೇ ಇದ್ದಾರೆ.

ಅಲೆಮಾರಿ ಸಮುದಾಯಗಳಿಗೆ ಗಣತಿಯ ವಿಚಾರದಲ್ಲಿ ಆಗಿರುವ ಅನ್ಯಾಯ ಅಪಾರವಾದುದು. ಎಷ್ಟೋ ಅಲೆಮಾರಿ ಸಮುದಾಯಗಳಿಗೆ ಇಂದಿಗೂ ಹೇಳಿಕೊಳ್ಳಲು ಒಂದು ನಿರ್ದಿಷ್ಟ ನೆಲೆಯಿಲ್ಲ ಇಂದು ಈ ಊರಲ್ಲಿ ವಾಸವಾಗಿದ್ದರೆ ಮತ್ತೊಂದು ದಿನ ಇನ್ನೊಂದು ಊರಲ್ಲಿ ವಾಸವಿರುತ್ತಾರೆ.

ಇನ್ನೊಂದು ದಿನ ಮತ್ತೊಂದು ಊರಲ್ಲಿ ಎನ್ನುವ ಪರಿಸ್ಥಿತಿಯಲ್ಲಿ ಹಲವಾರು ಅಲೆಮಾರಿ ಕುಟುಂಬಗಳು ಜೀವನೋಪಾಯಕ್ಕಾಗಿ ಮತ್ತು ತಮ್ಮ ಜೀವನ ನಿರ್ವಹಣೆಗಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ; ಒಂದು ಊರಿನಿಂದ ಮತ್ತೊಂದು ಊರಿಗೆ ಅಲೆದಾಡುತ್ತಲೇ ತಮ್ಮ ಅಲೆಮಾರಿ ಜೀವನವನ್ನು ಸಾಗಿಸುತ್ತಿರುವುದು ಇಂದಿಗೂ ಕಂಡುಬರುತ್ತದೆ. ಇದರಿಂದಾಗಿ ಈ ಅಲೆಮಾರಿಗಳಿಗೆ ಅವರದೇ ಆದ ಸ್ವಂತ ಊರು, ಸ್ಥಳ, ಕೇರಿ ಮನೆ ಎಂಬುದಿಲ್ಲ. ಅವರು ವಾಸ ಮಾಡುವ ಸ್ಥಳವೇ ಅವರ ಊರು ಕೇರಿ ಎಲ್ಲ. ಅಷ್ಟೇ ಏಕೆ, ಎಷ್ಟೋ ಅಲೆಮಾರಿ ಸಮುದಾಯಗಳಿಗೆ ನಿರ್ದಿಷ್ಟವಾದ ಹೆಸರೂ ಇಲ್ಲ. ಇಂತಹ ಅಲೆಮಾರಿ ಸಮುದಾಯಗಳನ್ನು ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತದೆ. ಒಂದೇ ಸಮುದಾಯವನ್ನು ಬೇರೆ ಬೇರೆ ಹೆಸರುಗಳಿಂದಲೂ ಗುರುತಿಸಲಾಗುತ್ತದೆ.

ಹೀಗೆ ಅನೇಕ ಅಲೆಮಾರಿ ಸಮುದಾಯಗಳು ನಿರ್ದಿಷ್ಟವಾದ ಹೆಸರಿನಿಂದ ಕರೆಸಿಕೊಳ್ಳದೆ ಮತ್ತು ಗುರುತಿಗೆ ಸಿಗದೆ ಇರುವುದರಿಂದ ಬೇರೆ ಬೇರೆ ಹೆಸರುಗಳಿಂದ ಇವರನ್ನು ಗುರುತಿಸಿರುವುದರಿಂದ ಆಗುವ ಅಪಾಯದ ಅರಿವು ಇಲ್ಲದೆ ಈ ಸಮುದಾಯಗಳು ಎಲ್ಲೆಂದರಲ್ಲಿ ಗುಡಾರಗಳನ್ನು ಕಟ್ಟಿಕೊಂಡು ಕೊಳಚೆ ಪ್ರದೇಶಗಳಂತಹ ಸ್ಥಳದಲ್ಲಿ ಇವರು ಬದುಕು ಸಾಗಿಸುತ್ತಿದ್ದಾರೆ.

ಈ ದೇಶದ ಸಾಮಾಜಿಕ ವ್ಯವಸ್ಥೆ ಹೇಗಿದೆ ಎಂದರೆ ಬಲಿಷ್ಠ ಜಾತಿಗಳು ದಿನದಿಂದ ದಿನಕ್ಕೆ ಸಾಂಸ್ಕೃತಿಕ ಮುಖವಾಡದಲ್ಲಿ ಹೆಚ್ಚು ಧ್ರುವೀಕರಣಗೊಳ್ಳುತ್ತಿವೆ. ರಾಜಕೀಯ ಅಧಿಕಾರವನ್ನು ಹಿಡಿಯುವ ಪೈಪೋಟಿಯಲ್ಲಿ ತೊಡಗಿಸಿಕೊಳ್ಳುತ್ತಿವೆ. ಎಷ್ಟೋ ಬಲಿಷ್ಠ ಜಾತಿಗಳು ಸಾಮಾಜಿಕ ವ್ಯವಸ್ಥೆಯಲ್ಲಿಸಿಗುವ ಎಲ್ಲ ಅನುಕೂಲತೆಗಳನ್ನು ತಾವು ದೊರಕಿಸಿಕೊಳ್ಳಬೇಕು. ಅವುಗಳನ್ನು ತಮ್ಮದಾಗಿಸಿಕೊಳ್ಳಬೇಕು ಎಂಬ ಮನೋಭಾವನೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಪ್ರಯತ್ನ ಮಾಡುತ್ತಿರುವುದು ಇತ್ತೀಚಿನ ದಿನಮಾನಗಳಲ್ಲಿ ಹೆಚ್ಚಿಗೆ ಕಂಡುಬರುತ್ತದೆ. ಆದರೆ ಇವೆಲ್ಲದರಿಂದ ಬಹುದೂರ ಉಳಿದ ಅಲೆಮಾರಿ ಸಮುದಾಯಗಳು ಮಾತ್ರ ಸಂಘಟನೆಯ ಪ್ರಾಥಮಿಕ ತಿಳಿವಳಿಕೆ ಇಲ್ಲದೆ, ತಮ್ಮ ಹಕ್ಕಿನ ಅರಿವು ಇಲ್ಲದೆ, ತಾವು ಏನು ಪಡೆಯಬೇಕು, ಯಾರಿಂದ ಪಡೆಯಬೇಕು, ಹೇಗೆ ಪಡೆಯಬೇಕು ಎಂಬ ವಿಚಾರ ಮಾಡುವ ಗೋಜಿಗೆ ಹೋಗದೆ, ತಾವು ಹುಟ್ಟಿದ್ದು ಹೀಗೆ, ತಮ್ಮ ಹಣೆಬರಹ ಹೀಗಿದೆ, ಅದುದರಿಂದ ನಮ್ಮ ಬದುಕು ಹೀಗಾಗಿದೆ ಎಂಬ ಮೂಢನಂಬಿಕೆ ಯೊಂದಿಗೆ ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ. ಆದರೆ ಇವರ ಹಕ್ಕಿನ ಕೆಲವು ಭಾಗಗಳನ್ನು ಉಳ್ಳವರೇ ಉಣ್ಣುತ್ತಿದ್ದಾರೇ ಇವರಿಗೆ ಸಿಗಬೇಕಾದ ಸೌಲಭ್ಯಗಳ ಸದುಪಯೋಗವನ್ನು ಮತ್ತೊಬ್ಬರು ಪಡೆದುಕೊಳ್ಳುತ್ತಿದ್ದಾರೆ. ಆದರೆ ಇವರು ಮಾತ್ರ ನಮಗೆ ಯಾವುದೇ ಸೌಲಭ್ಯಗಳಿಲ್ಲ, ಅವು ಮುಂದುವರೆದವರಿಗೆ ಮಾತ್ರ ಇವೆ, ನಾವೇಕೆ ಈ ಗೋಜಿಗೆ ಹೋಗಬೇಕು ಎಂಬ ಅಂಧಕಾರದಲ್ಲಿ ಬದುಕುತ್ತಿದ್ದಾರೆ. ಅವರನ್ನು ಈ ಮುಂದಿನಂತೆ ನೋಡಬಹುದು.

೧. ಕೊರಮ / ಹಂದಿಕೊರಮ

ಕೊರವ ದೊಡ್ಡ ಅಲೆಮಾರಿ ಸಮುದಾಯವಾಗಿದ್ದು ಬ್ರಿಟಿಷರ ಕಾಲದಲ್ಲಿ ಅಪರಾಧಿ ಬುಡಕಟ್ಟು ಎಂದು ಪರಿಗಣಿಸಲಾಗಿತ್ತು. ಭಯ, ಅಂಜಿಕೆ ಜೊತೆಗೆ ಪರಕೀಯತೆಯನ್ನು ಅನುಭವಿಸುತ್ತ ಕೊರಮರು ತಮ್ಮ ಬದುಕನ್ನು ಸಾಗಿಸುತ್ತಾ ಬಂದಿದ್ದಾರೆ. ತುತ್ತಿನ ಚೀಲ ತುಂಬಿಕೊಳ್ಳಲು ಅನೇಕ ರೀತಿಯ ಉದ್ಯೋಗ ಗಳನ್ನು ಅರಸುತ್ತ, ವೃತ್ತಿ ನೈಪುಣ್ಯತೆಯನ್ನು ಮೆರೆಯುತ್ತಾ ಬಂದಿದ್ದಾರೆ. ಯಾದಗಿರಿ ಜಿಲ್ಲೆಯ ಸುರುಪುರ, ಶಹಾಪುರ ಮುಂತಾದ ಪ್ರದೇಶಗಳಲ್ಲಿ ಇವರು ವಾಸವಾಗಿರುವುದನ್ನು ನೋಡಬಹುದು. ಈ ಕೊರಮ ಸಮುದಾಯವು ಕೆಲವುಕಡೆ ನೆಲೆ ಕಂಡುಕೊಂಡಿರುವುದನ್ನು ಕ್ಷೇತ್ರ ಅಧ್ಯಯನ ಸಂದರ್ಭದಲ್ಲಿ ಗಮನಕ್ಕೆ ಬಂದಿದೆ. ಇಂದು ಇವರು ಉತ್ಪಾದಿಸುವ ವಸ್ತುಗಳಿಗೆ ಬೇಡಿಕೆ ಇಲ್ಲದಿರು ವುದರಿಂದ ಎಷ್ಟೋ ಕುಟುಂಬಗಳು ಬೆಂಗಳೂರು, ಮುಂಬೈಗೆ ಕೆಲಸಕ್ಕಾಗಿ ವಲಸೆ ಹೋಗಿರುವುದನ್ನು ಕಾಣಬಹುದಾಗಿದೆ.

"ಕೊರಮರು ಮೂಲತಃ ದಕ್ಷಿಣದವರು. ಇವರ ಮೂಲನೆಲೆ ತಮಿಳುನಾಡು ಎಂಬುದರಲ್ಲಿ ಎರಡು ಮಾತಿಲ್ಲ. ಇವರ ಬಗ್ಗೆ ವಿದ್ವಾಂಸರು ದಾಖಲಿಸಿರುವ ಆಧಾರಗಳು ಮತ್ತು ಅವರ ಭಾಷೆ, ಜನಾಂಗೀಯ ಲಕ್ಷಣ ಮುಂತಾದವು ಇವರ ಮೂಲನೆಲೆಯನ್ನು ಕಂಡುಕೊಳ್ಳಲು ಸಹಾಯಕವಾಗಿವೆ".[೨] ಈ ಕೊರಮ ಜಾತಿ ಇಂದು ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಸೇರಿದೆ. ತಮ್ಮ ಪ್ರತ್ಯೇಕತೆಯನ್ನು ಕಾಯ್ದುಕೊಳ್ಳುತ್ತ ತಮ್ಮ ಮೂಲದ ಆಚಾರ, ವಿಚಾರ, ಭಾಷೆ, ವೇಷ ಮತ್ತು ನಂಬಿಕೆ ಇವುಗಳನ್ನು ಬಿಡದೆ ಉಳಿಸಿಕೊಂಡು ಬಂದಿದ್ದಾರೆ. ಕಂದಾಚಾರ, ಮೌಢ್ಯತೆಗಳಲ್ಲಿ ಬದುಕುವ ಇವರು ಅನಕ್ಷರತೆ, ಬಡತನ ಮತ್ತು ಪರಕೀಯತೆಗಳಿಂದ ನಲುಗಿ ಪ್ರಗತಿ ಕಂಡುಕೊಳ್ಳುವಲ್ಲಿ ವಿಫಲ ರಾಗಿದ್ದಾರೆ.

ಐತಿಹ್ಯ : "ಮಹಾಭಾರತದಲ್ಲಿ ಕೊರಮರು ಧರ್ಮರಾಜನ ವಂಶದವರೆಂದು ಸೂಚಿಸುವ ಒಂದು ಕಥೆ ಇದೆ. ಸೋದರರ ಜೊತೆ ಧರ್ಮರಾಜ ವನವಾಸಕ್ಕೆ ಹೋದಾಗ ಅವನನ್ನು ಪ್ರೀತಿಸಿದ ಓರ್ವ ಹೆಣ್ಣು ಕಣಿ ಹೇಳುವವಳ ವೇಷ ಧರಿಸಿ ಅವನನ್ನು ವರಿಸಿದಳಂತೆ. ಆಕೆಯ ಸಂತಾನಕ್ಕೆ ಕೊರಮರು ಎಂದು ಹೇಳಲಾಗುತ್ತದೆ".[೩]

೨. ಕೋಲೆಬಸವ

ಈ ಭೂಮಿಯ ಮೇಲೆ ಜನ್ಮ ತಾಳಿರುವ ಪ್ರತಿಯೊಂದು ಜೀವಿಗೆ ಬದುಕುವುದು ಅನಿವಾರ್ಯ. ಮನುಷ್ಯನು ಬದುಕುವುದಕ್ಕಾಗಿ ಆಹಾರ ಸೇವಿಸುತ್ತಾನೆ. ಅದಕ್ಕಾಗಿ ಅವನು ವಿವಿಧ ಕಡೆ ಶ್ರಮಪಟ್ಟು ದುಡಿಯಲು ಪ್ರಯತ್ನಿಸುತ್ತಾನೆ. ತನ್ನ ಜೀವನದ ನಿರ್ವಹಣೆಗಾಗಿ ಕೆಲವು ವೃತ್ತಿಗಳನ್ನು ಕೈಗೊಳ್ಳುತ್ತಾನೆ. ಉದಾಹರಣೆಗೆ ಪ್ರಾಣಿಗಳನ್ನು ತರಬೇತಿ ಕೊಟ್ಟು ಆಡಿಸುವುದು ಇತ್ಯಾದಿ. ಇವುಗಳಲ್ಲಿ ಅಲೆಮಾರಿತನವನ್ನು ರೂಢಿಸಿಕೊಂಡು ಪ್ರಾಣಿಯನ್ನು ಬಳಸಿಕೊಂಡು ಜೀವನ ಸಾಗಿಸುವ ಸಮುದಾಯ ಅದು 'ಕೋಲೆಬಸವ' ಅಥವಾ 'ಗಂಗೆತ್ತು' ಸಮುದಾಯ ಎನ್ನಬಹುದು.

ಈ ಕೋಲೆಬಸವ ಸಮುದಾಯದ ಕೆಲವು ಕುಟುಂಬಗಳು ಯಾದಗಿರಿ ಜಿಲ್ಲೆಯ ಹಲವು ಗ್ರಾಮಗಲ್ಲಿ ಕೆಲವು ದಿನಗಳು ನೆಲೆಸಿ ಮತ್ತೊಂದು ಪ್ರದೇಶಕ್ಕೆ ಹೋಗಿ ಬರುತ್ತಾರೆ. ಇವರು ಸುಗ್ಗಿಯ ಕಾಲದಲ್ಲಿ ಅಂದರೆ ತಮ್ಮ ಪ್ರಾಣಿಗೆ ಮೇವು ತಮಗೆ ಆಹಾರ ದಾನ್ಯ ಸಿಗುವ ಸಂದರ್ಭವನ್ನು ನೋಡಿ ತಾತ್ಕಾಲಿಕವಾಗಿ ನೆಲೆಸಿರುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಕೊಳ್ಳಲಾಗಿದೆ. ಇವರ ಪ್ರಮುಖ ವೃತ್ತಿ ಕೋಲೆ ಬಸವನಿಗೆ ತರಬೇತಿ ನೀಡಿ ಆಟವಾಡಿಸುವುದು.

ಕೋಲೆಬಸವರು ತಾವು 'ಕುರುಬ'ರೆಂದು ಅದರಲ್ಲಿ ಹತ್ತಿಕಂಕಣದವರೆಂದು ಹೇಳಿಕೊಳ್ಳುತ್ತಾರೆ ಎಂಬುದು ಅಧ್ಯಯನದಿಂದ ತಿಳಿದುಬರುತ್ತದೆ. ಆಂಧ್ರಪ್ರದೇಶದ ನಲಗೊಂಡು ಮತ್ತು ಕಂದಲವಾರು ಕೋಲೆಬಸವರ ಗುರು ಸ್ಥಾನವಾಗಿದೆ. ಈ ಕೋಲೆಬಸವ ಅಥವಾ ಕವಲೆತ್ತಿನ ಆಟದಲ್ಲಿ ಎರಡು ಬಣಗಳಿವೆ. ಒಂಟೆತ್ತು ಆಡಿಸುವುದು ಒಂದನೆಯ ಬಗೆಯಾದರೆ, ಎರಡು ಅಥವಾ ಮೂರು ಎತ್ತುಗಳು ಒಂದು ಆಕಳನ್ನು ತೆಗೆದುಕೊಂಡು ಆಡಿಸುವ ಆಟ ಮತ್ತೊಂದು ಬಗೆಯದು. ಒಂಟೆತ್ತಿನ ಆಟದಲ್ಲಿ ಒಬ್ಬ ವ್ಯಕ್ತಿ ಮನೆ ಮನೆಗೆ ಹೋಗಿ ಭಿಕ್ಷೆ ಎತ್ತುತ್ತಾನೆ. ಎರಡನೆಯ ಆಟ ಬಯಲು ಸೀಮೆಯಲ್ಲಿ ನಡೆಯುತ್ತದೆ. ಹೀಗೆ ಈ ಅಲೆಮಾರಿ ಸಮುದಾಯ ವೃತ್ತಿಯನ್ನು ಮಾಡುತ್ತ ಈಗಲೂ ಮುಂದುವರೆಸಿಕೊಂಡು ಹೋಗುತ್ತಿರುವುದು ತಿಳಿದುಬರುತ್ತದೆ.

೩. ಗೊಂದಲಿಗರು / ಬುಡುಬುಡಕಿ

ಗೊಂದಲಿಗರು ವಂಶ ಪರಂಪರಾನುಗತವಾಗಿ ತಮ್ಮಲ್ಲಿರುವ ಹಲವು ಕಲೆಗಳನ್ನು ಪ್ರದರ್ಶನ ನೀಡುತ್ತ ಅದನ್ನೇ ಅವರು ತಮ್ಮ ವೃತ್ತಿ ಮಾಡಿಕೊಂಡು ಭಿಕ್ಷೆ ಬೇಡುತ್ತ ಊರಿಂದ ಊರಿಗೆ, ಪ್ರದೇಶದಿಂದ ಪ್ರದೇಶಕ್ಕೆ ಅಲೆದಾಡುವರು. ಈ ಅಲೆಮಾರಿ ಬುಡಕಟ್ಟು ಸಮುದಾಯದ ಗೊಂದಲಿಗರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ತೀರ ಹಿಂದುಳಿದ ಪಂಗಡದವರು.

ಕರ್ನಾಟಕದಲ್ಲಿ ಅಲೆಮಾರಿ ಜನಾಂಗವಾಗಿರುವ ಗೊಂದಲಿಗರ ಮೂಲ ನೆಲೆಯನ್ನು ಗುರುತಿಸು ವಲ್ಲಿ ಅನೇಕ ಗೊಂದಲಗಳಿವೆ. ಗೊಂದಲಿಗರನ್ನು ಕೆಲವರು ಮಹಾರಾಷ್ಟ್ರದವರೆಂದು ಇನ್ನು ಕೆಲವರು ಕನ್ನಡದವರೇ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಗೊಂದಲಿ ನೃತ್ಯದ ಬಗ್ಗೆ ಅನೇಕ ಪ್ರಾಚೀನ ಕವಿಗಳು ಉಲ್ಲೇಖಿಸಿದ್ದಾರೆ. ಗೌಂಡಲಿಂಗ ಅಥವಾ ಗೊಂದಲಿ ನೃತ್ಯ ಕರ್ನಾಟಕದಲ್ಲಿಯೇ ಹುಟ್ಟಿದೆ ಎಂಬ ಮಾತನ್ನು ಹೇಳಬಹುದು. ಕವಿ ಪಂಪ, ರುದ್ರಭಟ್ಟ, ಅಭಿನವ ಪಂಪ ಮತ್ತು ಶರಣರು ಈ ಪದವನ್ನು ತಮ್ಮ ಕಾವ್ಯದಲ್ಲಿ ಬಳಸಿದ್ದಾರೆ, ಹಲವು ಹೆಸರಿನಿಂದ ಕರೆದಿದ್ದಾರೆ. ಗೊಂದಣ, ಗೊಂದಳ, ಗೊಂಡ್ಲಿ, ಗೊಂಡಾಗೀ, ಗುಂಡಲು, ಗೋದೊಳು, ಗೌಂಡಳೀ, ಗೌಂಡ್ಲಿ, ದುಡಲೀ ಗೋಧಳ್ ಎಂಬ ಹಲವು ಸಮಾನಾರ್ಥಕ ಪದಗಳಿಂದ ಕರೆದಿದ್ದಾರೆ. ಗೊಂದು ಎಂಬ ಶಬ್ದಕ್ಕೆ ಹಲವು ಅರ್ಥಗಳಿವೆ. ಗುಂಪು, ಭಜನೆಗುಂಪು, ದೈವಾವೇಶದಿಂದ ಕುಣಿಯುವ ಸಾಮಾಜಿಕ ಪ್ರಾರ್ಥನೆ ಎಂಬ ಅರ್ಥಗಳಿವೆ.

"ಗೊಂದಲಿಗರು ಎಂಬ ಹೆಸರು ಬರುವುದಕ್ಕಿಂತ ಮೊದಲು ಇವರು ಮಾವಳೆ ಜನಾಂಗ ಎಂಬ ಹೆಸರಿನಿಂದ ಕಾಡು ಕುರುಬರಾಗಿದ್ದರಂತೆ. ದೇವಿಯ ಹೆಸರಿನಲ್ಲಿ ತಿಳಿದಂತೆ ಹಾಡುವುದು ಕುಣಿಯುವುದನ್ನು ಮಾಡುತ್ತಿದ್ದರು. ಮುಸಲ್ಮಾನರ ಕುತಂತ್ರಗಳಿಂದ ಬೇಸತ್ತಿದ್ದ ಶಿವಾಜಿ ಇವರನ್ನು ಕರೆದು ದೇವಿಯ ಹೆಸರಲ್ಲಿ ಮುಸಲ್ಮಾನರ ಮನೆಗಳಿಗೆ ಹೋಗಿ ಗೊಂದಲ ಮಾಡಿ ಪ್ರಸಾದ ಕೊಡುವ, ಭಂಡಾರ ಹಚ್ಚುವ ನೆಪದಿಂದ ಅವರ ಮನೆಯೊಳಗೆ ಪ್ರವೇಶಿಸಿ ಅವರ ರಹಸ್ಯಗಳನ್ನು ತಿಳಿದು ವರದಿ ಮಾಡಬೇಕೆಂದು ಅಪ್ಪಣೆ ಮಾಡಿದ. ಅಂದರೆ ಇವರು ಗೂಢಚರ್ಯ ಕೆಲಸವನ್ನು ಮಾಡಬೇಕೆಂದು ಇವರನ್ನು ನೇಮಿಸಿದ. ಇವರು ಮುಸಲ್ಮಾನರ ಮನೆಯಲ್ಲಿ ಅಡಗಿಸಿಟ್ಟ ಮತ್ತು ಶೇಖರಿಸಿಡುತ್ತಿದ್ದ ಶಸ್ತ್ರಾಸ್ತ್ರಗಳನ್ನು ಹಾಗೂ ಅಡಗಿಕೊಂಡಿದ್ದು ಗುಪ್ತ ಯೋಧರನ್ನು ಕಂಡು ಹಿಡಿದು ಶಿವಾಜಿಗೆ ತಿಳಿಸುತ್ತಿದ್ದರು. ಇವರ ಯಶಸ್ವಿ ಗೂಢಚಾರದಿಂದ ಸಂತೃಪ್ತನಾದ ಶಿವಾಜಿ ಮಹಾರಾಜ ನೆರೆ ರಾಜ್ಯವಾದ ವಿಜಾಪುರಕ್ಕೆ ಗೊಂದಲಿಗರನ್ನು ಗೂಢಚಾರನ್ನಾಗಿ ನೇಮಿಸುತ್ತಾನೆ".[೪] ಈ ಗೊಂದಲಿಗರ ಕುರಿತು ಹಲವಾರು ಪುರಾಣಗಳು ಮತ್ತು ಕಥೆಗಳು ಕೂಡ ಇರುವುದು ಕ್ಷೇತ್ರ ಅಧ್ಯಯನಕ್ಕೆ ಹೋದಾಗ ಅವರ ಹಿರಿಯರ ಮೂಲಕ ತಿಳಿದುಬಂದಿದೆ.

ಬುಡಬುಡಿಕೆ (ಗೊಂದಲಿಗರು)

"ವೃತ್ತಿಗಾಗಿ ಬಳಸುವ ವಾದ್ಯದ ಹೆಸರಿನ ಮುಖಾಂತರವೇ ಇವರನ್ನು ಕರೆಯುತ್ತಾರೆ. ಬುಡುಬುಡಿಕೆ ಅತಿ ಸಣ್ಣ ಡಮರಿನಂತಿರುವ ಚರ್ಮವಾದ್ಯ. ಈ ವಾದ್ಯವನ್ನು ಬಾರಿಸುತ್ತಾ ಬುಡುಬುಡಿಕೆಯವರು ತಮ್ಮ ವೃತ್ತಿಯನ್ನು ಮಾಡುವರು. ಇವರು ಅರೆಅಲೆಮಾರಿಗಳಾಗಿದ್ದರೂ ಸಹ ಅಲ್ಲಲ್ಲಿ ಮನೆ ಕಟ್ಟಿ ವಾಸ ಮಾಡುತ್ತಿದ್ದಾರೆ. ಅವರೇ ಹೇಳುವಂತೆ ಅವರ ಭಾಷೆ ಮರಾಠಿ ಆದುದರಿಂದ ಇವರನ್ನು ಮಹಾರಾಷ್ಟ್ರದಿಂದ ವಲಸೆ ಬಂದವರೆಂದು ಹೇಳಲಾಗಿದೆ".[೫]

ಐತಿಹ್ಯ : "ಒಮ್ಮೆ ಶಿವಪಾರ್ವತಿಯರು ತಮ್ಮ ಭಕ್ತರಿಗೆ ವರವನ್ನು ನೀಡುತ್ತಿದ್ದರಂತೆ. ಬಂದ ಬಡವರಿಗೆ ಅವರು ಬೇಡಿದ್ದನ್ನು ದಾನಮಾಡಿದರು. ಕೊನೆಗೆ ಇವರ ಕೈಯಲ್ಲಿದ್ದದ್ದೆಲ್ಲ ಮುಗಿದಾಗ ಬುಡುಬುಡಿಕೆಯ ಜನಾಂಗದವರು ಬಂದು ಬೇಡತೊಡಗಿದರು. ಆಗ ಪಾರ್ವತಿ ಇವರನ್ನು ಬರಿಗೈಯಲ್ಲಿ ಕಲುಹಿಸಲು ಒಪ್ಪದೆ. ಶಿವನ ಕೈಯಲ್ಲಿರುವ ಡಮರುಗವನ್ನೇ ಅವರಿಗೆ ದಾನ ಮಾಡಿಸಿದಳಂತೆ. ಇದಕ್ಕೆ ಇವರು ಬುಡಬುಡಿಕೆಯನ್ನು ತಮ್ಮ ಜೀವನಾಧಾರವಾಗಿಟ್ಟುಕೊಂಡು ಬದುಕುತ್ತಿದ್ದಾರೆ".[೬]

ಯಾದಗಿರಿ ಜಿಲ್ಲೆಯಲ್ಲಿ ಬರುವ ಅನೇಕ ಹಳ್ಳಿಗಳಲ್ಲಿ ಇವರು ಅರೆಅಲೆಮಾರಿಗಳಾಗಿ ಸಂಚಾರ ಮಾಡುತ್ತಿರುವುದನ್ನು ಕ್ಷೇತ್ರಕಾರ್ಯ ಅಧ್ಯಯನದ ಸಂದರ್ಭದಲ್ಲಿ ಗಮನಿಸಲಾಗಿದೆ. ಇವರು ಕಕ್ಕೇರಿ, ತಿಂಥಿಣಿ, ಹುಣಸಗಿ, ದೇವಪುರ, ಸುರುಪುರ, ಶಹಾಪುರ, ಯಾದಗಿರಿಯ ಕೆಲವು ಪ್ರದೇಶಗಳಲ್ಲಿ ನಗರದ ಶಾಲಾ ಮೈದಾನದಲ್ಲಿ ವಾಸವಾಗಿರುವುದನ್ನು ಕಾಣಬಹುದಾಗಿದೆ.

ಈ ಆಧುನಿಕ ಕಾಲದಲ್ಲಿ ಇವರನ್ನು ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತಿದೆ. ಇವರಲ್ಲಿ ಪರಸ್ಪರ ಸಂಬಂಧಗಳು ಬೆಳೆಯುತ್ತವಾದರೂ ಕೆಲವರು ತಾವು ಹೆಚ್ಚು, ಉಳಿದವರು ಕೀಳು ಎಂಬ ನಂಬಿಕೆ ಇರುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಕ್ಕೆ ಬಂದಿದೆ. ಉದಾಹರಣೆಗೆ ಯಾದಗಿರಿ ನಗರ ಪ್ರದೇಶದಲ್ಲಿ ವಾಸ ಮಾಡುವ ಗೊಂದಲಿಗರು ಮತ್ತು ಬುಡುಬುಡಿಕೆಯವರು ಸಮುದಾಯಗಳು ಒಂದೇ ಆಗಿದ್ದರು ಅವರ ಮಧ್ಯೆ ಈ ನಂಬಿಕೆ ಇರುವುದನ್ನು ಸೂಕ್ಷ್ಮವಾಗಿ ಗಮನಿಸಲಾಗಿದೆ.

೪. ಘಿಸಾಡಿ

ಈ ಘಿಸಾಡಿ ಸಮುದಾಯದ ಜನರು ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯದಲ್ಲಿ ಹೆಚ್ಚು ವಾಸ ಮಾಡುತ್ತಿರುವುದು ಮತ್ತು ತಮ್ಮ ಸಂಚಾರಿ ಜೀವನ ಸಾಗಿಸುತ್ತಿರುವುದು ಅಧ್ಯಯನಗಳಿಂದ ತಿಳಿದುಬರುತ್ತದೆ. "ಈ ಸಮುದಾಯವು ರಾಜಸ್ತಾನ ಮತ್ತು ಗುಜರಾತಿನ ಗಡಿ ಭಾಗದಲ್ಲಿ ಹುಟ್ಟಿ ಬೆಳೆದು ದೇಶದ ವಿವಿಧ ಪ್ರದೇಶಗಳಲ್ಲಿ ಪಸರಿಸಿಕೊಂಡಿದ್ದಾರೆ".[೭]

ಕ್ಷೇತ್ರ ಅಧ್ಯಯನ ಸಂದರ್ಭದಲ್ಲಿ ಸಮುದಾಯದ ಜನರನ್ನು ಮೌಖಿಕವಾಗಿ ಭೇಟಿಯಾಗಿ ಮಾತಾಡಿಸಿದಾಗ ಅವರ ಮೂಲದ ಕುರಿತು ಮತ್ತು ಜಾತಿಯ ಕುರಿತು ಪ್ರಶ್ನೆ ಮಾಡಿದಾಗ ನಾವು ಘಿಸಾಡಿ ಜಾತಿಯವರು, ನಮ್ಮ ಕುಲಕಸುಬು ಕಮ್ಮಾರಿಕೆ ಮಾಡುವುದು, ಊರಿಂದ ಊರಿಗೆ ಅಲೆದಾಡುತ್ತ ಕಬ್ಬಿಣದ ಸಾಮಾನುಗಳನ್ನು ತಯಾರು ಮಾಡುತ್ತ ನಮ್ಮ ಜೀವನನೋಪಾಯ ಕಂಡುಕೊಳ್ಳುತ್ತೇವೆ ಎಂಬ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದರು.

ಘಿಸಾಡಿ ಸಮುದಾಯದ ಜನರು ಯಾದಗಿರಿ ಜಿಲ್ಲೆಯ ಹಲವು ಪ್ರದೇಶಗಳಲ್ಲಿ ತಮ್ಮ ಕುಲ ಕಸುಬು ಕಮ್ಮಾರಿಕೆ ಮಾಡಿಕೊಂಡು ರೈತ ಸಮುದಾಯಕ್ಕೆ ಬೇಕಾದ ಕಬ್ಬಿಣ ಸಾಮಾನುಗಳನ್ನು ತಯಾರು ಮಾಡುತ್ತಾ ತಮ್ಮ ಜೀವನ ನಿರ್ವಹಣೆಯನ್ನು ಕಂಡುಕೊಂಡಿದ್ದಾರೆ. ಹೆಣ್ಣು ಗಂಡು ಸೇರಿ ಮೈ ಮುರಿದು ಕೆಲಸ ಮಾಡುವ ಪ್ರವೃತ್ತಿಯ ಜನಾಂಗ ಇದಾಗಿದೆ.

೫. ಚೆನ್ನದಾಸರು

ಇವರು ಮೂಲತಃ ಅಲೆಮಾರಿ ಸಮುದಾಯಕ್ಕೆ ಸೇರಿದವರು. ಇವರನ್ನು ರಾಜ್ಯದ ವಿವಿಧ ಭಾಗಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತದೆ. ವೈಷ್ಣವ ಸಂಪ್ರದಾಯದ ಭಿಕ್ಷಾಟನೆ ವೃತ್ತಿಯನ್ನು ಕಸುಬನ್ನಾಗಿರಿಸಿಕೊಂಡಿರುವ ಇವರು ಯಾದಗಿರಿ ಜಿಲ್ಲೆಯ ಹಲವು ಹಳ್ಳಿಗಳಲ್ಲಿ ಕಂಡುಬರುತ್ತಾರೆ. ಯಾದಗಿರಿ ಪಟ್ಟಣದ ಶಶಿಧರ ಕಾಲೋನಿಯಲ್ಲಿ ಚೆನ್ನದಾಸರ ಕುಟುಂಬಗಳು ವಾಸವಾಗಿರುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಿಸಲಾಗಿದೆ. ಸುರಪುರ, ಶಹಾಪುರದ ಹಳ್ಳಿಗಳಲ್ಲಿ ಇವರು ವಾಸವಾಗಿರುವುದು ಕಂಡುಬರುತ್ತದೆ. ಆರ್ಥಿಕ, ಶೈಕ್ಷಣಿಕ, ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕವಾಗಿ ಹಿಂದುಳಿದಿರುವುದರಿಂದ ಇವರನ್ನು ಇತ್ತೀಚೆಗೆ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಸೇರಿಸಲಾಗಿದೆ.

ಈ ಸಮುದಾಯ ಪಟ್ಟಣಗಳಲ್ಲಿ ಅಥವಾ ಹಳ್ಳಿಯಲ್ಲಿ ಪ್ರತ್ಯೇಕವಾಗಿ ವಾಸ ಮಾಡುವುದನ್ನು ನೋಡಬಹುದು. ಉಪಜೀವನಕ್ಕೆ ಅನುಕೂಲವನ್ನರಸಿ ಅಲೆದಾಡುತ್ತಿದ್ದ ಇವರು ಆಯಾ ಊರಿನ ಪಾಳುಗುಡಿ ಊರ ಹೊರಗಿನ ಬಯಲು ಹೀಗೆ ತಮಗೆ ಅನುಕೂಲವಿರುವ ಸ್ಥಳವನ್ನು ಆಯ್ಕೆ ಮಾಡಿಕೊಂಡು ಗುಡಾರ ಹಾಕಿಕೊಂಡು ಜೀವನ ಸಾಗಿಸುತ್ತಾರೆ.

ಸಾಮಾನ್ಯವಾಗಿ ಊರು ಬಿಟ್ಟು ಹೊರಗಿನ ಬಯಲು ಸ್ಥಳದಲ್ಲಿ ಗುಂಪು ಗುಂಪಾಗಿ ಈ ಸಮುದಾಯವು ವಾಸಿಸುತ್ತಿರುವುದರಿಂದಾಗಿ ಬೇರೆಯವರು ಇವರನ್ನು ಗುರುತಿಸುವುದು ದಾಸರ ಗುಡಾರಗಳು, ದಾಸರ ಗುಡಿಸಲುಗಳು ಎಂದು. ಎಷ್ಟೋ ಸಾರಿ ಇವರದೇ ಒಂದು ಊರಾಗುವಷ್ಟು ಗುಡಿಸಿಲುಗಳನ್ನು ಸಾಲಾಗಿ ಹಾಕಿಕೊಂಡು ಜೀವನ ಸಾಗಿಸುತ್ತಾರೆ.

"ಆಂಧ್ರಪ್ರದೇಶದಿಂದ ಕೃಷ್ಣದೇವರಾಯನ ಕಾಲದಲ್ಲಿ ಕರ್ನಾಟಕಕ್ಕೆ ವಲಸೆ ಬಂದ ಈ ಸಮುದಾಯದ ಮಾತೃಭಾಷೆ ತೆಲುಗು. ಭಿಕ್ಷಾಟನೆ ಜೊತೆಗೆ ಸಂತೆ, ಜಾತ್ರೆ, ಸಾರ್ವಜನಿಕ ಸ್ಥಳಗಳಲ್ಲಿ ತಮ್ಮ ಗಾಯನ ಮತ್ತು ಅಭಿನಯದ ಮೂಲಕ ತಮ್ಮ ತುತ್ತಿನ ಚೀಲವನ್ನು ತುಂಬಿಸಿ ಕೊಳ್ಳುತ್ತಿದ್ದಾರೆ".[೯] ಇವರು ಪ್ರಾಚೀನ ವಾದ್ಯ, ಸಲಕರಣೆಗಳಾದ ಹಾರ್ಮೋನಿಯಂ, ತಬಲ, ತಂಬೂರಿ, ಏಕತಾರಿ, ಮುಂತಾದವುಗಳನ್ನು ನುಡಿಸುತ್ತಾ ಜಾನಪದ ಸೊಗಡಿನಲ್ಲಿ ಹಾಡುತ್ತಾರೆ. ಪ್ರಾಚೀನ ಕಾವ್ಯಗಳಾದ ರಾಮಾಯಣ, ಮಹಾಭಾರತ ಮುಂತಾದ ಕಥೆಗಳನ್ನು, ನೀತಿಕಥೆಗಳನ್ನು ಜನಪದ ಸೊಗಡಿನೊಂದಿಗೆ ಹೊಂದಿಸಿ ಮಧುರವಾಗಿ ಹಳ್ಳಿಗಳಲ್ಲಿ ಹಾಡುತ್ತಾರೆ. ಜನರು ಕೊಡುವ ದವಸ, ಧಾನ್ಯ, ಹಳೆಬಟ್ಟೆಗಳನ್ನು, ಪಡೆದು ಅರಳಿಕಟ್ಟೆ, ಪಾಳು ದೇವಸ್ಥಾನದ ಹತ್ತಿರ ವಾಸಿಸುತ್ತಾರೆ.

೬. ಜೋಗೇರು / ಹಂದಿ ಜೋಗಿ

"ಕರ್ನಾಟಕ ರಾಜ್ಯದಲ್ಲಿ ಜೋಗಿ ಜನಾಂಗವು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದಿರುವುದರಿಂದ ಈ ಜನಾಂಗವನ್ನು ಹಿಂದುಳಿದ ವರ್ಗಗಳ ಪಟ್ಟಿಯ ಪ್ರವರ್ಗ-೧ರ ಕ್ರಮಸಂಖ್ಯೆ ೨೧ರಲ್ಲಿ ಸೇರಿಸಲಾಗಿದೆ".[೯]

ಈ ಸಮುದಾಯವು ಮೂಲ ಅಲೆಮಾರಿ ಸಮುದಾಯವಾಗಿದ್ದು ಈ ಸಮುದಾಯದ ಜನರು ಒಂದೇ ಸ್ಥಳದಲ್ಲಿ ವಾಸಿಸುವುದಿಲ್ಲ. ಬೇರೆ ಬೇರೆ ಸ್ಥಳಗಳಿಗೆ ವಲಸೆ ಹೋಗುತ್ತಿರುತ್ತಾರೆ. ಜೋಗಿ ಸಮುದಾಯವು ಪುರಾತನ ಕಾಲದಲ್ಲಿ ಜೋಳಿಗೆಯನ್ನು ಹಾಕಿಕೊಂಡು ಕೈಯಲ್ಲಿ ಶುಂಠಿ ಕಡ್ಡಿಯನ್ನು ಹಿಡಿದುಕೊಂಡು ಹಾಡುಗಳನ್ನು ಹಾಡುತ್ತ ಭಿಕ್ಷೆ ಬೇಡುತ್ತ ಜೀವನ ಸಾಗಿಸುತ್ತಿದ್ದರು ಎಂಬುದು ಹಿಂದಿನ ಅಧ್ಯಯನಗಳಿಂದ ತಿಳಿದುಬರುತ್ತದೆ. ನಂತರದ ದಿನಗಳಲ್ಲಿ ಸಾಮಾಜಿಕ ಬದಲಾವಣೆಯಿಂದಾಗಿ ಭಿಕ್ಷೆ ಬೇಡುವುದು ಕೀಳು ಎಂದು ಮನದಟ್ಟಾಗಿ ಆ ಕಾಯಕವನ್ನು ಬಿಟ್ಟು ಸ್ವಾಭಿಮಾನದ ಬದುಕಿನ ನಿರ್ಧಾರದೊಂದಿಗೆ ಸ್ವಯಂ ವೃತ್ತಿಯನ್ನು ಆರಿಸಿಕೊಂಡಿದೆ. ಈ ಜೋಗಿಗಳು ಅಳತೆಯ ವಸ್ತುಗಳಾದ ಪಾವು, ಸೇರು ಗೃಹೋಪಯೋಗಿ ವಸ್ತುಗಳಾದ ಡಬ್ಬಿ, ಜರಡಿ, ಕೊಡ

ರಿಪೇರಿ, ಬೀಗ ರಿಪೇರಿ ಇತ್ಯಾದಿ ಕೆಲಸಗಳನ್ನು ಜೀವನೋಪಾಯಕ್ಕಾಗಿ ಕಲಿತು ತಮ್ಮ ಜೀವನವನ್ನು ನಡೆಸುತ್ತಿವೆ. ಜೋಗಿ ಜನಾಂಗದ ಸ್ತ್ರೀಯರು ಪ್ಲಾಸ್ಟಿಕ್ ವಸ್ತುಗಳಾದ ಬಾಚಣಿಗೆ, ಸೋಪಿನ ಡಬ್ಬಿಗಳು, ಕೊಡೆ ಇತ್ಯಾದಿ ವಸ್ತುಗಳನ್ನು ಬೀದಿ ಬದಿಯಲ್ಲಿಟ್ಟುಕೊಂಡು ಇಲ್ಲವೇ ಗಲ್ಲಿಗಲ್ಲಿಯಲ್ಲಿ ತಿರುಗಿ ಮಾರಾಟ ಮಾಡುತ್ತಾರೆ. ಪ್ರತಿ ಸಂತೆ ಜಾತ್ರೆಗಳಲ್ಲಿ ಇವರು ತಮ್ಮ ವಸ್ತುಗಳನ್ನು ಮಾರಾಟಕ್ಕೆ ಇಟ್ಟುಕೊಂಡಿರುತ್ತಾರೆ.

ಇವತ್ತಿಗೂ ಯಾದಗಿರಿ, ಸುರಪುರ, ಶಹಾಪುರ ಪಟ್ಟಣದ ಬೀದಿಯಲ್ಲಿ ತಮ್ಮ ಸಾಮಾನುಗಳನ್ನು ಇಟ್ಟುಕೊಂಡು ಹೊಟ್ಟೆ ತುಂಬಿಸಿಕೊಳ್ಳುವ ಕಾಯಕದಲ್ಲಿ ನಿರತರಾಗಿರುವುದನ್ನು ದಿನ ನಿತ್ಯದ ಸಂದರ್ಭದಲ್ಲಿ ನೋಡಬಹುದಾಗಿದೆ.

ಹಂಡಿ(ಹಂದಿ) ಜೋಗಿ

ಹಂಡಿ ಜೋಗಿ ಸಮುದಾಯವು ಅರೆಅಲೆಮಾರಿ ಸಮುದಾಯವಾಗಿದ್ದು ಇವರನ್ನು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಸೇರಿಸಲಾಗಿದೆ. ಈ ಹಿಂದೆ ಇವರು ಹಂದಿಗಳನ್ನು ಸಾಕಿಕೊಂಡು ಕಥನಗಳನ್ನು ಹೇಳಿಕೊಂಡು ಸ್ಥಳದಿಂದ ಸ್ಥಳಕ್ಕೆ ಅಲೆಯುತ್ತಿದ್ದರಂತೆ. ಈಗಲೂ ಕೂಡ ಇವರು ಅಲ್ಲಲ್ಲಿ ನೆಲೆನಿಂತು ಹಿಂದಿನ ವೃತ್ತಿಯನ್ನು ಅಂದರೆ ಹಂದಿ ಸಾಕಾಣಿಕೆ ಕೆಲಸವನ್ನು ಮಾಡುತ್ತಿದ್ದಾರೆ. ಯಾದಗಿರಿ ನಗರ ಪ್ರದೇಶದಲ್ಲಿ ಇವರ ವಾಸವಿದೆ. ಸುರಪುರ, ಶಹಾಪುರ ಪಟ್ಟಣ ಪ್ರದೇಶದಲ್ಲಿ ಇವರು ಹೆಚ್ಚು ಕಂಡು ಬರುತ್ತಿದ್ದು ಪ್ಲಾಸ್ಟಿಕ್ ಬಾಟಲ್, ಚೀಲ, ಗಾಜಿನ ಬಾಟಲ್, ಚಿಂದಿ ಹಾಯುವ ಕೆಲಸವನ್ನು ಇವರು ಮಾಡುತ್ತಾರೆ.

ಪರಿಶಿಷ್ಟ ಜಾತಿಯಲ್ಲಿ ಇದ್ದರೂ ಇವರು ಅದರ ಸದುಪಯೋಗ ಪಡೆದುಕೊಂಡಿಲ್ಲ. ತಾವಾಯಿತು ತಮ್ಮ ಕೆಲಸವಾಯಿತು ಎಂಬಂತೆ ಅಲೆಮಾರಿ ಜೀವನವೇ ಇವರಿಗೆ ಗತಿಯಾಗಿದೆ. ಇತ್ತೀಚೆಗೆ ಕೆಲವು ಕಡೆ ನೆಲೆ ನಿಲ್ಲುವ ಪ್ರಯತ್ನವನ್ನು ಇವರು ಮಾಡುತ್ತಿದ್ದಾರೆ. ಅತ್ಯಂತ ಕಡುಬಡತನದ ಜೀವನವನ್ನು ಸಾಗಿಸುತ್ತಿದ್ದಾರೆ. "ಇವರು ಮಹಾರಾಷ್ಟ್ರ, ರಾಜಸ್ತಾನ, ಮಧ್ಯಪ್ರದೇಶ ಹೀಗೆ ನಾನಾಕಡೆ ನೆಲೆಸಿರುವುದನ್ನು ಕಾಣಬಹುದಾಗಿದೆ".[೧೦]

೭. ಬುಡ್ಗ ಜಂಗಮ್ / ಸುಡುಗಾಡು ಸಿದ್ಧ

ಈ ಸಮುದಾಯದ ಜನರು ಅಪ್ಪಟ ಅಲೆಮಾರಿ ಜೀವನವನ್ನು ಸಾಗಿಸುವ ಪ್ರವೃತ್ತಿವುಳ್ಳವರಾಗಿದ್ದಾರೆ ಕೆಲವು ಅಧ್ಯಾಯಗಳಿಂದ ಮತ್ತು ಕ್ಷೇತ್ರ ಅಧ್ಯಯನದಿಂದ ತಿಳಿದು ಬರುವುದೇನೆಂದರೆ "ಬುಡ್ಗ ಜಂಗಮರು ಆಂಧ್ರ ಪ್ರದೇಶದ ಶ್ರೀ ಶೈಲದ ಅರಣ್ಯ ಪ್ರದೇಶದ ಕೆಲವು ಭಾಗಗಳಲ್ಲಿ ಬೇಟೆಯಾಡುವ ವೃತ್ತಿಯನ್ನು ಪ್ರಧಾನವಾಗಿಟ್ಟುಕೊಂಡು ನೆಲೆಸಿ ಜೀವನೋಪಾಯ ಮಾಡುತ್ತಿದ್ದರು. ತಾವು ಬೇಟೆಯಾಡಿ ತಂದ ಮಾಂಸವನ್ನು ಶಿವನಿಗೆ ಭಕ್ತಿಯಿಂದ ಸಮರ್ಪಿಸಿ ತಾವು ಊಟ ಮಾಡುವ ಒಂದು ಸಂಪ್ರದಾಯವನ್ನು ಅನುಸರಿಸುತ್ತಿದ್ದರು".[೧೧]

ವೃತ್ತಿ ಮತ್ತು ಆಹಾರದ ಸಲುವಾಗಿ ಬೇಟೆ ಆಡುವ ಕಸುಬನ್ನು ಇಟ್ಟುಕೊಂಡಿದ್ದರು. ಇವರು ಮುಂದುವರಿಯುತ್ತಿದ್ದಂತೆ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುವುದನ್ನು ರೂಢಿಸಿಕೊಂಡರು. ನಂತರ ಇವರು ಕಾಡಿನಿಂದ ಚದುರಿ ಮಹಾರಾಷ್ಟ್ರ, ಕರ್ನಾಟಕ ಇನ್ನಿತರ ರಾಜ್ಯಗಳಿಗೆ ವಲಸೆ ಹೋಗಿ ತಮ್ಮ ಸಂಚಾರಿ ಜೀವನವನ್ನು ತಮಗೆ ಇಷ್ಟವಾದ ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಂಚಾರ ನಡೆಸುವಾಗ ಆ ಪ್ರದೇಶದ ವ್ಯವಸ್ಥೆಗಳಿಗನುಗುಣವಾಗಿ ತಮ್ಮ ವೃತ್ತಿಗಳನ್ನು ಬದಲಾವಣೆ ಮಾಡಿಕೊಂಡಿದ್ದಾರೆ ಎಂಬುದು ಹಲವರ ಅಭಿಪ್ರಾಯವಾಗಿದೆ.

ಬುಡ್ಗ ಜಂಗಮರು ತಮ್ಮ ಜೀವನದಲ್ಲಿ ಕೆಲವು ಬದಲಾವಣೆಗಳನ್ನು ಕಂಡುಕೊಂಡರು ಇದಕ್ಕೆ ಮುಖ್ಯ ಕಾರಣವೆಂದರೆ ಕೆಲವು ಮಹಾದಾರ್ಶನಿಕರ ಆಗಮನ. ಅಂದರೆ ಇವರನ್ನು ಆಂಧ್ರ ಪ್ರದೇಶ ಮತ್ತು ಕರ್ನಾಟಕದಲ್ಲಿ ೧೨ನೇ ಶತಮಾನದಲ್ಲಿ ಬಸವಣ್ಣನವರು ಮತ್ತು ಅವರ ಅನುಯಾಯಿ ಗಳು ಧರ್ಮ ಪ್ರಚಾರಕ್ಕೆ ಬಳಸಿಕೊಂಡರು ಎಂಬ ಅಭಿಪ್ರಾಯಗಳು ಅಧ್ಯಯನದಿಂದ ತಿಳಿದುಬರುತ್ತದೆ. ಹಾಗೆಯೇ ಶಿವಾಜಿಯ ಆಡಳಿತ ಕಾಲದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಇವರನ್ನು ಗೂಢಾಚಾರಿಗಳನ್ನು ಬಳಸಿಕೊಂಡಿರುವುದು ಅಧ್ಯಯನಗಳಿಂದ ತಿಳಿದುಬರುತ್ತದೆ. ಮುಂದೆ ರಾಜರ ಪ್ರಭಾವವಾದಂತೆ, ಸಾಮಾಜಿಕ ವ್ಯವಸ್ಥೆ ಬದಲಾದಂತೆ ಇವರೂ ಕೂಡ ಅನೇಕ ಬದಲಾವಣೆಗೆ ಒಳಪಟ್ಟರು.

ಬುಡ್ಗ ಜಂಗಮರು ಸಾಮಾಜಿಕವಾಗಿ ನಿರಾಶ್ರಿತರು ಎಂದು ಮನಗಂಡ ತಕ್ಷಣದಿಂದ ಕಾಡಿನಿಂದ ನಾಡಿಗೆ ಮರಳುವ ಸಂದರ್ಭದಲ್ಲಿ ಹೊಟ್ಟೆಪಾಡಿಗಾಗಿ ಸಾಂಸ್ಕೃತಿಕ ವೇಷಗಳನ್ನು ಹಾಕಿ ಕಲೆ ಪ್ರದರ್ಶನ ನೀಡುತ್ತ ನಾಡಿನಲ್ಲಿ ಪ್ರವೇಶ ಪಡೆಯುವುದರ ಮೂಲಕ ಆ ಕಾಲದ ಘಟನೆಗಳನ್ನು ಹಾಗೂ ಧಾರ್ಮಿಕ ಪ್ರಚಾರವನ್ನು ತಮ್ಮ ವೇಷಭೂಷಣಗಳ ಮೂಲಕ ಪಾತ್ರ ಮತ್ತು ಕಲಾಪ್ರದರ್ಶನ ಮಾಡುವುದರ ಮೂಲಕ ಹಲವು ಪ್ರದೇಶಗಳಲ್ಲಿ ಬಿಕ್ಷಾಟನೆ ಮಾಡಲು ಪ್ರಾರಂಭಿಸಿದರು. ಇವರು ಪ್ರಮುಖವಾಗಿ ಕರ್ನಾಟಕ, ಮಹಾರಾಷ್ಟ್ರ ತಮಿಳುನಾಡು, ಗೋವಾ, ಆಂಧ್ರ ಪ್ರದೇಶ ಮುಂತಾದ ರಾಜ್ಯಗಳಲ್ಲಿ ಅಲ್ಲಿಯ ಪ್ರದೇಶಿಗರ ಭಾಷೆಯಲ್ಲಿ ಕಲೆಯನ್ನು ಪ್ರದರ್ಶನ ಮಾಡಿ ತಮ್ಮ ಜೀವನವನ್ನು ಸಾಗಿಸುತ್ತಾರೆ. ಹಿರಿಯರು ಕಿರಿಯರಿಗೆ ಈ ಕಲೆಯನ್ನು ಕಲಿಸುವುದರ ಮೂಲಕ ಜೀವನೋಪಾಯವನ್ನು ಕಂಡುಕೊಂಡಿದ್ದಾರೆ. ಯಾದಗಿರಿ ಜಿಲ್ಲೆಯ ಹಲವು ಕಡೆ ಇವರು ಕಾಣುತ್ತಾರೆ.

ಬುಡಕಟ್ಟಿನ ಸಂಸ್ಕೃತಿಯ ಎಲ್ಲ ಲಕ್ಷಣಗಳನ್ನು ಹೊಂದಿರುವ ಸಮುದಾಯವೆಂದರೆ ಬುಡ್ಗಜಂಗಮ ಸಮುದಾಯ. ಬುಡ್ಗಜಂಗಮರು ಮೂಲತಃ ಧಾರ್ಮಿಕ ಭಿಕ್ಷಾಟನೆಗಾರರು. ಇವರು ಮೊದಲು ಗುಡ್ಡ-ಬೆಟ್ಟಗಳಲ್ಲಿ, ಅರಣ್ಯ ಪ್ರದೇಶಗಳಲ್ಲಿ, ಬಯಲು ಸರಹದ್ದುಗಳಲ್ಲಿ ಜೀವನ ನಡೆಸುವವರಾಗಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಹಳ್ಳಿ ಮತ್ತು ಮೇಟ್ರೊಪಾಲಿಸಿಟಿಯವರೆಗೂ ತಮ್ಮ ಕಲಾತ್ಮಕತೆಯ ಭಿಕ್ಷಾಟನೆಗಳೊಂದಿಗೆ ಜೀವನ ನಿರ್ವಹಣೆ ಮಾಡುತ್ತಿರುವರು. ಬುಡ್ಗಜಂಗಮ ಕರ್ನಾಟಕದಲ್ಲಿನ ಅತಿದೊಡ್ಡ ಸಮುದಾಯವಾಗಿದೆ. ಇವರನ್ನು ಕ್ರಸಂ. ೧೯ರಲ್ಲಿ ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸಲಾಗಿದೆ.

ಎಡ್ಗರ ಥರ್ಸ್ಟನ್ ಅವರ ಪ್ರಕಾರ ಬುಡ್ಗಜಂಗಮರು ತಿರುಪತಿಯಲ್ಲಿನ ಗಂಗಮ್ಮ ಜಾತ್ರೆಯ ಹಬ್ಬದಲ್ಲಿ ತಮ್ಮ ವೇಷ ಬದಲಿಸಿಕೊಂಡು ಭಿಕ್ಷೆ ಬೇಡುವ ತೆಲುಗು ಮೂಲದವರು. ಇವರು ವಿವಿಧ ರೀತಿಯ ವೇಷಗಳಲ್ಲಿ ಜನರಿಗೆ ಕಾಣಿಸಿಕೊಳ್ಳುತ್ತಾ ಜನರಿಗೆ ಸಾಂಸ್ಕೃತಿಕವಾಗಿ ತಿಳಿಸುತ್ತಾ, ಸಂಗೀತದ ಮೂಲಕ ಜಾನಪದ ಕಥೆಗಳನ್ನು ಹೇಳುವಲ್ಲಿ ನಿಪುಣರಾಗಿದ್ದರಂತೆ. ಇವರು ಭಿಕ್ಷೆಗಾಗಿ ಸ್ಥಳದಿಂದ ಸ್ಥಳಕ್ಕೆ ಹೋಗುತ್ತಾರೆ. ಬೇರೆ ಬೇರೆ ಕಾರಣಗಳಿಂದಾಗಿ ಇವರನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುವುದುಂಟು.

ಸುಡುಗಾಡು ಸಿದ್ಧರು

ವಿಶಿಷ್ಟ ಸಂಸ್ಕೃತಿ, ಪರಂಪರೆಯನ್ನು ಹೊಂದಿರುವ ಸುಡುಗಾಡು ಸಿದ್ಧರು ಶತಮಾನಗಳು ಕಳೆದರೂ ಇನ್ನೂ ಯಾಥಾಸ್ಥಿತಿಯಲ್ಲಿ ಉಳಿದಿರುವುದನ್ನು ಕಾಣಬಹುದಾಗಿದೆ. ಈ ಜನರು ಸ್ಮಶಾನದ ಒಡೆಯನಾದ ಶಿವನ ಆರಾಧಕರಾಗಿದ್ದಾರೆ. ತಮ್ಮ ಜೀವನೋಪಾಯಕ್ಕಾಗಿ ಶಿಳ್ಳೇಕ್ಯಾತರಂತೆ ಗೊಂಬೆಯಾಟ ಗಳನ್ನು ಪ್ರದರ್ಶಿಸುತ್ತಾರೆ. ೧೯೦೧ರ ಜನಗಣತಿ ವರದಿಯಲ್ಲಿ ಸುಡುಗಾಡು ಸಿದ್ಧರನ್ನು ಈ ಕೆಳಗಿ ನಂತೆ ದಾಖಲಿಸುತ್ತಾರೆ.

Thurston : "The name is derved from Sudugadu, a burning ground they intermarry among themseleves and the office of agent is heriditary. they have particular tracts of country assigned to them. When on tour collecting burial fees. They can be recognized by the wooden beesin addition to usual metal one. Which they always carry abouts without this no one would acknowledge the agents right to colleect the fees"(V. Khandoba, 1993, P.5).

ಆಂಧ್ರದ ಮೂಲದವರೆನ್ನಲಾದ ಅಲೆಮಾರಿ ಗುಂಪಿನ ಸುಡುಗಾಡು ಸಿದ್ಧರು ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ಹರಡಿಕೊಂಡಿದ್ದಾರೆ. ಯಾದಗಿರಿ ಜಿಲ್ಲೆಯ ಕೆಲವು ಭಾಗಗಳಲ್ಲಿ ಇವರು ಕಾಣಿಸಿಕೊಳ್ಳುವುದು ಸಾಮಾನ್ಯವಾಗಿದೆ.

ಐತಿಹ್ಯ : "ಒಂದು ಸಲ ತೀರ ಬಡತನಕ್ಕೆ ಒಳಗಾಗಿರುವ ದಂಪತಿಗಳಿಬ್ಬರು ಮಗನ ಮರಣ ಸಂಸ್ಕಾರವನ್ನು ಮಾಡಲು ತುಂಬಾ ದುರಾವಸ್ಥೆಗೊಳಗಾಗಿದ್ದರು. ಅದನ್ನು ಗಮನಿಸಿದ ಶಿವಪಾರ್ವತಿಯರು ಅಲ್ಲಿಗೆ ಬಂದು ಅವರ ದುರಾವಸ್ಥೆಯನ್ನು ಕಂಡು ಮರುಗಿ ಸತ್ತ ಮಗನನ್ನು ಮತ್ತೆ ಬದುಕಿಸಿಕೊಟ್ಟು ಅವನನ್ನು ಮಸಣದ ಒಡೆಯನನ್ನಾಗಿ ನಿಯಮಿಸಿದರು. ಅಂದಿನಿಂದ ಶವಸಂಸ್ಕಾರಕ್ಕೆ ಬರುವ ಮೃತ ದೇಹದ ಮೇಲಿನ ಬಟ್ಟೆಬರೆ ಹಾಗೂ ತೆರಿಗೆಯನ್ನು ಪಡೆಯಲು ಹಕ್ಕನ್ನು ಅವರಿಗೆ ನೀಡ ಲಾಯಿತು. ಶಿವಪಾರ್ವತಿಯಿಂದ ನಿಯಮಿತವಾದ ಸಂತತಿಯೇ ಸುಡುಗಾಡು ಸಿದ್ಧರೆಂದು"[೧] ಹೇಳಲಾಗುತ್ತದೆ.

ಸುಡುಗಾಡು ಸಿದ್ಧರು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ತುಂಬಾ ಹೀನಾಯ ಸ್ಥಿತಿಯಲ್ಲಿದ್ದು ಇಂದಿಗೂ ಇವರಿಗೆ ಅಲೆಮಾರಿಯ ಬದುಕೇ ಗತಿಯಾಗಿದೆ ಎಂದರೆ ತಪ್ಪಾಗಲಾರದು.

ಕುರುಮಾಮ

"ಇವತ್ತಿಗೂ ನಿಂತ ಜಾಗದಲ್ಲಿ ನಿಲ್ಲದೇ ಊರಿಂದ ಊರಿಗೆ ಅಲೆದಾಡುತ್ತಲೇ ಬದುಕುತ್ತಿರುವ ಕುರುಮಾಮರು ಯಾರಿಗೂ ಅಪರಿಚಿತರಾದವರೇನು ಅಲ್ಲ. ಇವರು ಯಾದಗಿರಿಯ ಯಾವ ಊರಿಗೇ ಬರಲಿ ಆ ಊರಿನ ಜನ ಮಕ್ಕಳಾದಿಯಾಗಿ ಗುಂಪುಗೂಡಿ ಇವರಿಂದ ತಮ್ಮತಮ್ಮ ಬದುಕಿನಲ್ಲಿ ಮುಂದಾಗಬಹುದಾದ ಕಷ್ಟ ಕಾರ್ಪಣ್ಯಗಳನ್ನು ಅದಕ್ಕೆ ಪರಿಹಾರಗಳನ್ನು ತೀವ್ರ ಕುತೂಹಲದಿಂದ ಕೇಳುವರು".[೧೩] ಯಾದಗಿರಿ ಜಿಲ್ಲೆಯಲ್ಲಿ ಇವರು ಅಲೆಮಾರಿಗಳಾಗಿ ಸಂಚರಿಸುತ್ತಿರುವುದನ್ನು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಕಂಡುಕೊಳ್ಳಲಾಗಿದೆ.

ಕುರುಮಾಮರು ತೆಲುಗು ದೇಶದ ಶ್ರೀಶೈಲ ಮೂಲದವರೆಂದು ಹೇಳಿಕೊಳ್ಳುತ್ತಾರೆ. ಏಕೆಂದರೆ ಕುರುಮಾಮರು ತೆಲುಗು ಭಾಷೆಯಲ್ಲಿ ಸ್ಪಷ್ಟವಾಗಿ ಮಾತನಾಡುತ್ತಾರೆ.

ಐತಿಹ್ಯ : "ಕುರುಮಾಮರ ಮೂಲ ಕುರಿತಂತೆ ಒಂದು ನಂಬಿಕೆ ಇದೆ. ಇದರ ಪ್ರಕಾರ ಈ ವಂಶದವರ ಮೂಲ ಗುರು ಶ್ರೀಶೈಲದವರು. ಶ್ರೀ ಮಲ್ಲಿಕಾರ್ಜುನನ ಪರಮಭಕ್ತರಾದ ಇವರು ತಮ್ಮವರೊಂದಿಗೆ ಒಮ್ಮೆ ಭದ್ರಾಚಲಕ್ಕೆ ಭೇಟಿ ನೀಡಿದರೆಂದು, ಆಗ ಶ್ರೀ ರಾಮಚಂದ್ರನ ದರ್ಶನ ವಾಯಿತೆಂದು, ಆತನ ಆಶೀರ್ವಾದ ಪಡೆದದ್ದರಿಂದ ಶ್ರೀರಾಮನ ಭಕ್ತರಾದರೆಂದು ನಂಬಿಕೆ. ತಮ್ಮ ಕುಲದವರಿಗೆ ರಾಮಕ್ಷತ್ರಿಯರೆಂಬ ಹೆಸರು ಬಂದಿತೆಂದೂ ಈ ಜನಾಂಗದ ಹಿರಿಯರು ಅಭಿಪ್ರಾಯ ಪಡುತ್ತಾರೆ".[೧೪]

ಇತರರೊಂದಿಗೆ ಸಂವಹನಕ್ಕಾಗಿ ತೆಲುಗು ಮಿಶ್ರಿತ ಕನ್ನಡವನ್ನು ಮಾತನಾಡುತ್ತಾರೆ. ಭವಿಷ್ಯ ಹೇಳುತ್ತಾ ಊರೂರು ಅಲೆದು ಭಿಕ್ಷಾಟನೆ ಮಾಡುವ ಕುರುಮಾಮರು ಜಮೀನಿನಂಥ ಯಾವುದೇ ಆಸ್ತಿಗಳನ್ನು ಮಾಡಿಲ್ಲ. ಒಂದೂರಿನಿಂದ ನೂರಾರು ಮೈಲುಗಳಾಚೆ ಮತ್ತೊಂದು ಊರಿಗೆ ಹೋಗುವ ಕುರುಮಾಮರು ತಮ್ಮ ವೃತ್ತಿಗೆ ಅನುಕೂಲವಾಗುವ ಸ್ಥಳವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಯಾವ ಊರಲ್ಲಿ ಯಾವತ್ತು ವಾರದ ಸಂತೆ ನಡೆಯುತ್ತದೆ ಎಂಬುದನ್ನು ತಿಳಿದು ಹೊರಡುತ್ತಾರೆ. ಇವರಿಗೆ ಜನ ಬೇಕು. ಅದರಲ್ಲೂ ಹಳ್ಳಿಯ ಮುಗ್ಧರು ಬೇಕು. ವ್ಯಕ್ತಿಯ ಬಲಗೈ ಹಿಡಿದುಕೊಂಡು ಹಸ್ತರೇಖೆ ನೋಡಿ ಚಿಟಿಕೆ ಬಾರಿಸುತ್ತಾ, ಏಕನಾದ ಮಿಟುತ್ತಾ ಲಯಬದ್ಧವಾಗಿ ಮಾತಾಡುತ್ತಾರೆ. ಬಂದ ವ್ಯಕ್ತಿಯಿಂದ ತಿಳಿದುಕೊಂಡ ಮಾಹಿತಿಯಿಂದಲೇ ಸಂಭವಿಸುವ ಘಟನೆಗಳ ಕುರಿತು ಆಕರ್ಷಕವಾಗಿ ಹೇಳುತ್ತಾರೆ. ತನ್ನ ಭವಿಷ್ಯದ ಬಗಗೆ ಯೋಚಿಸದ ಈ ಕುರುಮಾಮರು ಇನ್ನೊಬ್ಬರ ಭವಿಷ್ಯವನ್ನು ಹೇಳುತ್ತಾ ಅಲೆಯುತ್ತಾ ಅಲೆಮಾರಿ ಜೀವನ ಸಾಗಿಸುತ್ತಿರುವುದನ್ನು ನೋಡಬಹುದಾಗಿದೆ.

೮. ಬೈಲಪತ್ತಾರ

ಇಂದಿನ ಆಧುನಿಕ ಸಮಾಜದಲ್ಲಿ ಯಾವುದೇ ಒಂದು ಸಮುದಾಯವನ್ನು ಆರ್ಯರೋ ಅಥವಾ ದ್ರಾವಿಡ ಮೂಲದವರೋ ಎಂದು ಖಚಿತವಾಗಿ ಹೇಳಲು ಆಗುವುದಿಲ್ಲ. ಆದರೆ ಆ ಸುಮುದಾಯ ತನ್ನದೇ ಎಂಬುದು ಸತ್ಯವಾದುದು. ಆದರೆ ಆ ಸಮುದಾಯದ ಆರ್ಥಿಕ ರಾಜಕೀಯ ಧಾರ್ಮಿಕ ಏರುಪೇರುಗಳಿಂದ ಒಂದು ನೆಲೆಯಿಂದ ಮತ್ತೊಂದು ನೆಲೆಗೆ ಸಾಗುವುದು ಪ್ರಮುಖವಾದ ವಿದ್ಯಮಾನವಾಗಿದೆ.

"ಈ ಬೈಲಪತ್ತಾರ ಸಮುದಾಯವು ಮೂಲತಃ ಒರಿಸ್ಸಾದಿಂದ ಕರ್ನಾಟಕಕ್ಕೆ ಯಾವುದೋ ಕಾಲದಿಂದ ವಲಸೆ ಬಂದ ಅಲೆಮಾರಿ ಸಮುದಾಯವಾಗಿದೆ. ಇವರು ಒರಿಸ್ಸಾ ಮೂಲದವರೆಂದು ಹೇಳಲು ಕಾರಣವೇನೆಂದರೆ ಅವರು ಆಡುವ ಭಾಷೆ ಅವರ ಕುಲ ಗೋತ್ರಗಳು ಮತ್ತು ಇವರು ಆಡುವ ಭಾಷೆಯು ಒರಿಸ್ಸಾ ಭಾಷೆಯ ಒಂದು ಉಪಭಾಷೆಯಾಗಿರುವುದು. ಇವರು ಕುಲ ಬೇಡಗುಗಳು ಒರಿಸ್ಸಾ ಮುಲಕ್ಕೆ ಸೇರಿದವುಗಳಾಗಿವೆ".[೧೫] ಇವೆಲ್ಲವೂ ಕೆಲವು ಅಧ್ಯಯನಗಳಿಂದ ತಿಳಿದುಬಂದಿದೆ. ಇವರು ಕೂಡಾ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಹೋಗುವಾಗ ಕೆಲವು ದಿನ ಒಂದು ಸ್ಥಳದಲ್ಲಿ ನೆಲೆಸಿ ಅಲ್ಲಿ ಜೀವನೋಪಾಯಕ್ಕೆ ತೊಂದರೆ ಕಂಡುಬಂದರೆ ಮತ್ತೊಂದು ಪ್ರದೇಶವನ್ನು ಆಯ್ಕೆ ಮಾಡಿ ಕೊಂಡು ಅಲ್ಲಿ ನೆಲೆಸುವ ಮನೋಭಾವನೆವುಳ್ಳವರಾಗಿದ್ದರು.

ಒರಿಸ್ಸಾ ರಾಜ್ಯದ ಪುರಿ ಜಗನ್ನಾಥ ದೇವಾಲಯದ ಸಮೀಪ ಸೂಜಿಗಾರ್ ಪಟ್ಟಣದಲ್ಲಿ ಕುಲಕಸುಬಿನೊಂದಿಗೆ ಆರಾಮವಾಗಿ ಜೀವನ ನಡೆಸುತ್ತಿದ್ದರು. ಒಂದು ಸಲ ಆಕ್ರಮಣಕಾರರು ಈ ದೇವಾಲಯದ ಸಂಪತ್ತನ್ನು ಕೊಳ್ಳೆ ಹೊಡೆದರು. ಅಲ್ಲಿ ಅರಾಜಕತೆ ಸಂಭವಿಸಿತು. ಈ ಸಂದರ್ಭವೇ ನಮ್ಮ ಅಲೆಮಾರಿಗಳಿಗೆ ಕಾರಣವಾಯಿತು ಎಂದು ಅಭಿಪ್ರಾಯಪಟ್ಟಿರುವುದು ಕೆಲವು ಸಂಶೋಧನೆಗಳಿಂದ ತಿಳಿದುಬರುತ್ತದೆ.

ಇಂದು ಇವರು ಭಾರತ ದೇಶದ ತಮಿಳುನಾಡು, ಆಂಧ್ರಪ್ರದೇಶ, ಕರ್ನಾಟಕ, ಮಹಾರಾಷ್ಟ್ರ ಮುಂತಾದ ರಾಜ್ಯಗಳಲ್ಲಿ ಮತ್ತು ವಿವಿಧ ಜಿಲ್ಲೆಗಳಲ್ಲಿ ಹಾಗೂ ತಾಲೂಕುಗಳ ಕೊಳಚೆ ಪ್ರದೇಶಗಳಲ್ಲಿ ತಮ್ಮ ಕಸುಬಿನೊಂದಿಗೆ ನೆಲೆ ನಿಂತುಕೊಂಡಿರುವುದು ಕಂಡುಬರುತ್ತದೆ. ಇವರು ಗಡಿ ಪ್ರದೇಶ ಮತ್ತು ರಾಜ್ಯದ ಗಡಿ ಪ್ರದೇಶ ಎಂಬ ಕಲ್ಪನೆಯನ್ನು ಹೊಂದಿದ್ದಾರೆ. ತಮ್ಮ ದೈನಂದಿನ ಬದುಕಿನ ಜೀವನದ ನಿರ್ವಹಣೆಯನ್ನು ನಡೆಸಲು ಯೋಗ್ಯ ಸ್ಥಳವನ್ನು ಹುಡುಕಿಕೊಂಡು ಅಲೆಮಾರಿಗಳಾಗಿ ಸಂಚರಿಸುವುದೇ ಇವರ ಮುಖ್ಯ ಯೋಜನೆಯಾಗಿದೆ. ಭಾರತ ದೇಶದ ಡೆಕನ್ ಪ್ರಸ್ಥ ಭೂಮಿಯ ಇಡೀ ನೆಲದಲ್ಲಿ ಅಲೆಮಾರಿಗಳಾಗಿ ನೆಲೆ ಕಂಡು ಕೊಂಡಿದ್ದಾರೆ ಎಂಬುದು ಅಧ್ಯಯನದಿಂದ ತಿಳಿದುಬರುತ್ತದೆ.

೯. ಸಿಕ್ಲಿಗರು

ಸಿಕ್ಲಿಗರದು ಅಲೆಮಾರಿ ಸಮುದಾಯವಾಗಿದೆ. ಇವರು ಕರ್ನಾಟಕದಲ್ಲಿ, ಅದರಲ್ಲೂ ಉತ್ತರ ಕರ್ನಾಟಕ, ಹೈದ್ರಾಬಾದ್ ಕರ್ನಾಟಕದಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಯಾದಗಿರಿಯ ರೈಲು ನಿಲ್ದಾಣದ ಹತ್ತಿರ ಶಾಸ್ತ್ರೀ ವೃತ್ತದಲ್ಲಿ ಇವರ ಕುಟುಂಬಗಳು ವಾಸವಾಗಿರುವುದನ್ನು ಕಾಣಬಹುದು. ಯಾದಗಿರಿ ಜಿಲ್ಲೆಯ ಹಲವು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಇವರು ವಾಸವಾಗಿರುವುದು ಕ್ಷೇತ್ರಕಾರ್ಯ ಅಧ್ಯಯನದಿಂದ ತಿಳಿದುಬರುತ್ತದೆ. ಸಿಕ್ಲಿಗರು ವಾಸವಿರುವ ಸ್ಥಳ ಸಾಮಾನ್ಯವಾಗಿ ಬಸ್‌ನಿಲ್ದಾಣ, ರೈಲು ನಿಲ್ದಾಣ ಅಥವಾ ಕೊಳಚೆ ಪ್ರದೇಶದಲ್ಲಿ ಕಲ್ಲು ಇಟ್ಟಿಗೆಗಳಿಂದ ಕಟ್ಟಿದ ಕಾಂಪೌಂಡ್ ಗೋಡೆಗೆ ತಗಡಿನ ಶೀಟನ್ನು ಹಾಕಿಕೊಂಡು ತಮ್ಮ ಗುಡಿಸಲು ಹಾಕಿ ಕೊಂಡಿರುತ್ತಾರೆ. ಈ ಚಿತ್ರಣವನ್ನು ಯಾದಗಿರಿ ಜಿಲ್ಲೆಯ ಮುಂತಾದ ಪ್ರದೇಶಗಳಲ್ಲಿ ಕಾಣಬಹುದಾಗಿದೆ.

"ಸಿಕ್ಲಿಗರು ರಾಜಾರಣಜಿತ್‌ಸಿಂಗ್‌ರ ಆಸ್ಥಾನದಲ್ಲಿ ಯುದ್ಧ ಪರಿಕರಗಳನ್ನು ತಯಾರಿಸಿ ಕೊಡುವ ಕಾಯಕದಲ್ಲಿ ನಿರತರಾದವರು ಇವರು ಪ್ರದೇಶದಿಂದ ಪ್ರದೇಶಕ್ಕೆ ಅಲೆಮಾರಿಗಳಾಗಿ ವಲಸೆ ಹೋಗುವಂತವರು. ರಾಜಾರಣಜಿತ್‌ಸಿಂಗ್ ೧೭೮೦-೧೮೩೯ ಮತ್ತು ಹೈದ್ರಾಬಾದ್ ಸಂಸ್ಥಾನ ನಿಜಾಮರು ೧೭೬೪ ೧೯೪೮ ಅವಧಿಯಲ್ಲಿ ಕನ್ನಡ ನಾಡಿನ ಸುರುಪುರ ಸಂಸ್ಥಾನ, ಜಮಖಂಡಿ, ಬಿಜಾಪುರ, ಕೊಪ್ಪಳ ಸಂಸ್ಥಾನಗಳಲ್ಲಿ ಸಿಕ್ಲಿಗರು ಆಶ್ರಯ ಪಡೆದಿದ್ದರು ಎಂಬುದು ಅಧ್ಯಯನಗಳಿಂದ ತಿಳಿದುಬರುತ್ತದೆ".[೧೬]

ಇವರು ಈಗಲೂ ಮಾರಕಾಸ್ತ್ರಗಳಾದ ಭರ್ಚಿ, ಕುಡುಗೋಲು, ಈಳಿಗೆ, ತಲವಾರ್ ಮುಂತಾದ ಕಬ್ಬಿಣದ ಸಾಮಾನುಗಳನ್ನು ತಯಾರಿ ಮಾಡುತ್ತಾರೆ. ಅವರು ತಾವು ಉತ್ಪಾದಿಸಿದ ವಸ್ತುಗಳನ್ನು ಅಲೆಯುತ್ತಾ ಮಾರಿ ಹೊಟ್ಟೆ ತುಂಬಿಕೊಳ್ಳುತ್ತಾರೆ. ಇಂದಿನ ಆಧುನಿಕ ಯುಗದಲ್ಲಿ ಇವರು ಉತ್ಪಾದಿಸಿದ ವಸ್ತುಗಳು ಸ್ಪರ್ಧೆ ನೀಡಲಾರವು. ಆದರೂ ಗ್ರಾಮೀಣ ಪ್ರದೇಶದಲ್ಲಿ ಇವರು ಉತ್ಪಾದಿಸುವ ವಸ್ತುಗಳಿಗೆ ಬೇಡಿಕೆ ಇದೆ. ಜಾತ್ರೆ, ಸಂತೆ ದಿನಗಳಂದು ತಮ್ಮ ವಸ್ತುಗಳನ್ನು ಮಾರುತ್ತಾ ಅಲೆಮಾರಿ ಜೀವನ ಸಾಗಿಸುವ ಇವರು ಯಾದಗಿರಿ ಜಿಲ್ಲೆಯಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ.

೧೦. ಸಿಂಧೋಳ್ಳು / ದುರುಗಮುರಗಿ

ಸಿಂಧೋಳ್ಳು ಸಮುದಾಯವು ಪ್ರಮುಖ ಅಲೆಮಾರಿ ಸಮುದಾಯವಾಗಿದ್ದು ಇದನ್ನು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಸೇರಿಸಲಾಗಿದೆ. ಇದೇ ವೃತ್ತಿ ಮಾಡುವ ದುರಗಮುರಗಿ ಸಮುದಾಯವನ್ನು ಓ.ಬಿ.ಸಿ. ಪಟ್ಟಿಗೆ ಸೇರಿಸಲಾಗಿದೆ. ಇವರು ಮೂಲತಃ ಆಂಧ್ರಪ್ರದೇಶದಿಂದ ಬಂದವರೆಂದು ಗುರುತಿಸಲಾಗಿದೆ. ಭಿಕ್ಷೆ ಬೇಡುತ್ತಾ ಊರೂರು ಅಲೆಯುವ ಸಿಂಧೋಳ್ಳು ಊರುಗಳ ಹೊರ ಭಾಗದ ಪ್ರದೇಶಗಳಾದ ಶಾಲಾ ಮೈದಾನ ಸ್ಮಾಶಾನದ ಪಕ್ಕದಲ್ಲಿ, ಊರುಗಳಲ್ಲಿಯ ಖಾಲಿ ಬಿದ್ದ

ಕಟ್ಟಡಗಳಲ್ಲಿ ವಾಸವಾಗಿರುವುದನ್ನು ಕಾಣಬಹುದು. ಯಾದಗಿರಿ ಜಿಲ್ಲೆಯ ಯಾದಗಿರಿ, ಶಹಾಪುರ, ಸುರುಪುರ ಮುಂತಾದ ಪ್ರದೇಶಗಳಲ್ಲಿ ಇವರು ನೆಲೆಸಿರುವುದನ್ನು ಕಾಣಬಹುದಾಗಿದೆ.

ಸಿಂಧೋಳ್ಳು ತೆಲುಗು ಮಿಶ್ರಿತ ಕನ್ನಡ ಭಾಷೆಯನ್ನು ಬಳಸುವರು. ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ನೆಲೆಸುತ್ತಿರುವ ಇವರು ಮೂಲತಃ ಅಲೆಮಾರಿಗಳಾಗಿರುವುದರಿಂದ ಕರ್ನಾಟಕದಾದ್ಯಂತ ಭಿಕ್ಷಾಟನೆಗಾಗಿ ಸಂಚರಿಸುವುದು ಸಾಮಾನ್ಯವಾಗಿದೆ.

"ಸಿಂಧೋಳ್ಳು ಸಮುದಾಯದ ಮೂಲ ನೆಲೆ ಮೂಲತಃ ಆಂಧ್ರಪ್ರದೇಶದ ತೆಲಂಗಾಣವೆಂದು ಅಧ್ಯಯನಕಾರರ ಅಭಿಪ್ರಾಯವಾಗಿದೆ. ಸಿಂಧೋಳ್ಳು ಕುರಿತು ೧೨ನೇ ಶತಮಾನದ ವಚನಗಳಲ್ಲಿ ಉಲ್ಲೇಖಗಳು ದೊರೆಯುವುದರಿಂದ ಇವರು ಹಿಂದಿನಿಂದ ಕರ್ನಾಟಕದಲ್ಲಿ ನೆಲೆಸಿರಬೇಕೆಂಬ ವಾದಗಳು ಕೇಳಿ ಬರುತ್ತವೆ".[೧೭]

ಇವರು ಗ್ರಾಮಾಂತರ ಪ್ರದೇಶಕ್ಕಿಂತ ನಗರ ಪ್ರದೇಶದಲ್ಲಿ ಹೆಚ್ಚು ವಾಸವಾಗಿರುವುದು ಕಂಡು ಬರುತ್ತದೆ. ಏಕೆಂದರೆ ತಮ್ಮ ಕಲೆಯನ್ನು ಪ್ರದರ್ಶನ ಮಾಡುವುದರ ಮೂಲಕ ಹಣ ಸಂಪಾದಿಸಲು ಅನುಕೂಲವಾಗಿರುತ್ತದೆ. ಸಂತೆ ನಡೆಯುವ ದಿನ, ಜಾತ್ರೆಯ ದಿನಗಳಲ್ಲಿ ಇವರು ತಮ್ಮ ಪ್ರದರ್ಶನ ಮಾಡಿ ಭಿಕ್ಷೆ ಬೇಡುತ್ತಾ ಹಣ ಪಡೆಯುತ್ತಾರೆ. ಯಾದಗಿರಿಯಲ್ಲಿ ಪ್ರತಿ ಮಂಗಳವಾರದಂದು ಸಿಂಧೋಳ್ಳು ಮತ್ತು ಇತರ ಅಲೆಮಾರಿಗಳು ಭಿಕ್ಷೆ ಬೇಡುವ ದಿನವನ್ನಾಗಿ ಮಾಡಿಕೊಂಡಿದ್ದಾರೆ. ಆ ದಿನ ಸಂತೆ ಇರುವುದರಿಂದ ಭಿಕ್ಷಾಟನೆಯಲ್ಲಿ ಹೆಚ್ಚು ಅಲೆಮಾರಿಗಳು ತೊಡಗಿರುವುದನ್ನು ಕ್ಷೇತ್ರ ಅಧ್ಯಯನದಿಂದ ಕಂಡುಬರುತ್ತದೆ.

ದುರಗಮುರಗಿ

"ದುರಗಮುರಗಿಯವರು ಜೀವನೋಪಾಯಕ್ಕಾಗಿ ಊರಿಂದ ಊರಿಗೆ ಅಲೆಯುವ ಅಲೆಮಾರಿ ಜನಾಂಗದವರಾಗಿದ್ದಾರೆ. ಯಾವುದೇ ಊರಿಗೆ ಹೋದರೂ ಅಲ್ಲಿ ಕೆಲವು ದಿನಗಳಿದ್ದು ಮತ್ತೆ ಮುಂದಿನ ಊರಿಗೆ ಹೋಗುತ್ತಾರೆ".[೧೮] ಯಾದಗಿರಿಯ ನಗರ ಪ್ರದೇಶದ ಶಶಿಧರ ಕಾಲೋನಿಯಲ್ಲಿ ಕೆಲವು ಕುಟುಂಬಗಳು ನೆಲೆ ಕಂಡುಕೊಂಡರೆ, ಹೊಸಳ್ಳಿ ಕ್ರಾಸ್ ಹತ್ತಿರ ಕೆಲವು ದುರಗಮುರಗಿ ಅಥವಾ ಸಿಂಧೋಳ್ಳು ಕುಟುಂಬಗಳು ಗುಡಾರ ಹಾಕಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಅಲ್ಲದೆ ಯಾದಗಿರಿ ಜಿಲ್ಲೆಯ ಸೈದಾಪುರ, ಗುರುಮಠಕಲ್, ಸುರುಪುರ, ಸತ್ಯಪೇಟೆಯ ಹತ್ತಿರ, ಶಹಾಪುರ ನಗರ ಹತ್ತಿರ ಇವರು ತಾತ್ಕಾಲಿಕ ಡೇರೆಗಲ್ಲಿ ಗಾಳಿ ಮಳೆ ಚಳಿಗೆ ಮೈಯೊಡ್ಡಿ ಬದುಕು ಸಾಗಿಸು ತ್ತಿರುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಿಸಲಾಗಿದೆ.

ದುರಗಮುರಗಿಯವರು ಉತ್ತರದಿಂದ ಬಂದವರೆಂದು ದ್ರಾವಿಡರ ಗುಂಪಿಗೆ ಸೇರಿದವರೆಂದು ಅಭಿಪ್ರಾಯಗಳಿವೆ. ಪುಟ್ಟಿಯಲ್ಲಿ ದೇವರನ್ನು ಹೊತ್ತು ಊರಿಂದ ಊರಿಗೆ ಅಲೆಯುತ್ತ ಭಕ್ತರಿಂದ

ಧವಸಧಾನ್ಯ ಒಡವೆ ವಸ್ತ್ರಗಳನ್ನು ಕಾಣಿಕೆಯಾಗಿ ಪಡೆಯುತ್ತ ಜೀವನ ನಡೆಸುವ ದುರಗಮುರಗಿಯರು ದೇವಿಯ ಆರಾಧನೆಯನ್ನೇ ಮುಖ್ಯ ಕಸುಬಾಗಿ ಹೊಂದಿದ್ದಾರೆ. ಇವರು ಮೀನುಗಾರಿಕೆ ವೃತ್ತಿಯನ್ನು ಮಾಡುತ್ತಿರುವುದು ತಿಳಿದುಬರುತ್ತದೆ.

ನಿಲ್ಲಲು ನೆಲೆಯಿಲ್ಲದ ಬದುಕನ್ನು ದುರಗಮುರಗಿಯರು ಒಪ್ಪಿಕೊಂಡಿರುವುದರಿಂದ ದಿನದ ಒಪ್ಪತ್ತಿನ ಊಟ ಸಂಪಾದಿಸುವುದು ಕಷ್ಟವಾಗಿ ಹೋಗಿದೆ. ದೇವಿಯನ್ನು ಹೊತ್ತು ನಡೆದರೂ ಹಣ ಕೊಡುವವರಿಲ್ಲ. 'ನಿಮಗೇನಾಗಿದೆ ದಾಡಿ; ದುಡಿದು ತಿನ್ನಬೇಕು' ಎಂಬ ಮಾತುಗಳು ಜನರಿಂದ ಕೇಳಿ ಬರುತ್ತವೆ. ಈ ಮಾತುಗಳು ಇವರನ್ನು ಇನ್ನಷ್ಟು ಜರ್ಜರಿತವಾಗಿಸಿದೆ. ಪಕ್ಕದ ಊರುಗಳಲ್ಲಿ ಜಾತ್ರೆ ಹಬ್ಬಗಳು ಸಂತೆ ಇದ್ದರೆ ಅಲ್ಲಿ ದೇವಿಯನ್ನು ಹೊತ್ತುಕೊಂಡು ಆಟಕ್ಕೆ ಹೋಗುತ್ತಾರೆ. ಇಂತಹ ಸಂದರ್ಭಗಳಲ್ಲಿ ಹೆಚ್ಚು ಸಂಪಾದನೆ ಆದರೆ ಮೂರು ನಾಲ್ಕು ದಿನ ನಿಶ್ಚಿಂತೆಯಿಂದ ಕಾಲ ಕಳೆಯುತ್ತಾರೆ. ಸಿಂಧೋಳ್ಳು ಮತ್ತು ದುರಗಮುರಗಿ ಎರಡೂ ಒಂದೇ ಆದರೂ ಕೂಡ ಒಂದು ಪರಿಶಿಷ್ಟ ಜಾತಿಯಲ್ಲಿ ಸೇರಿಸಿದ್ದರೆ. ಮತ್ತೊಂದನ್ನು ಹಿಂದುಳಿದ ವರ್ಗದ ಪಟ್ಟಿಯಲ್ಲಿ ಸೇರಿಸಲಾಗಿದೆ. ಇಂತಹ ತೊಡಕುಗಳು ಸಹ ಈ ಸಮುದಾಯದ ಅಭಿವೃದ್ಧಿಗೆ ಕಂಟಕವಾಗಿದೆ. ಸರ್ಕಾರದ ಸೌಲಭ್ಯ ಗಳನ್ನು ಅದೇ ಜಾತಿಯ ಕೆಲವರು ಪಡೆದರೆ, ಅದರಲ್ಲಿ ಬರುವ ಕೆಲವರಿಗೆ ಈ ಸೌಲಭ್ಯ ಸಿಗುವುದಿಲ್ಲ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೧೧. ಶಿಳ್ಳೇಕ್ಯಾತರು

"ಈ ಸಮುದಾಯದವರು ಅಶೋಕನ ಕಾಲದಲ್ಲಿ ಇದ್ದರೆಂದು ಊಹಿಸಲಾಗುತ್ತದೆ ಕಳಿಂಗ ಯುದ್ಧದಲ್ಲಿ ಯುದ್ಧಮಾಡಿ ಕೆಲವು ಸಾವು ನೋವುಗಳನ್ನು ಅನುಭವಿಸಿ ಅಲ್ಲಿಂದ ಇವರು ಇಂದಿನ ಗುಜರಾತ, ಮಹಾರಾಷ್ಟ್ರದ ಲಾತೂರ ಅಹ್ಮದ್‌ನಗರ, ಸೊಲ್ಲಾಪುರ, ಪಂಡರಾಪುರ ಈ ಮುಂತಾದ ಪ್ರದೇಶಗಳಿಗೆ ವಲಸೆ ಬಂದು ಜೀವನ ಸಾಗಿಸಲು ಪ್ರಾರಂಭಿಸಿದರು"[೧೯] ಎಂಬ ಅಭಿಪ್ರಾಯಗಳು ಅಧ್ಯಾಯನದ ಮೂಲಕ ತಿಳಿದುಬರುತ್ತದೆ. ಪ್ರಸ್ತುತ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡ ಶಿಳ್ಳೇಕ್ಯಾತರು ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಇವರ ಬಗ್ಗೆ ಇನ್ನೂ ಕೆಲವು ಅಭಿಪ್ರಾಯಗಳು ಕೇಳಿ ಬರುತ್ತವೆ. ಈ ಹಿಂದೆ ಇವರು ಮರಾಠ ರಾಜ್ಯದಲ್ಲಿ ಸೈನಿಕರಾಗಿ ಸೇರಿಕೊಂಡರು ಎಂಬ ಮಾಹಿತಿ ಕೂಡ ಇದೆ. ಮರಾಠ ಸಂಸ್ಥಾನಗಳು ಪತನವಾದ ನಂತರ ದಕ್ಷಿಣ ಮುಂಬೈದಿಂದ ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳಿಗೆ ವಲಸೆ ಬಂದು ಈ ಪ್ರದೇಶಗಳಲ್ಲಿ ತಮ್ಮ ಮೂಲ ಪ್ರವೃತ್ತಿಯಾದ ಮೀನು ಹಿಡಿಯುವುದು ಮತ್ತು ಭಿಕ್ಷೆ ಬೇಡುವುದನ್ನು ತಮ್ಮ ಜೀವನೋಪಾಯಕ್ಕಾಗಿ ಮುಂದುವರೆಸಿಕೊಂಡು ಬಂದಿದ್ದಾರೆ. ಈಗಾಗಲೇ ಬದಲಿ ವೃತ್ತಿಗಳಲ್ಲಿ ಅವರು ಹೆಚ್ಚು ತೊಡಗಿಸಿಕೊಂಡಿದ್ದಾರೆ ಎಂಬುದು ತಿಳಿದುಬರುತ್ತದೆ.

ಇವರು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಲಸೆ ಹೋಗುವುದನ್ನು ಸಾಮಾನ್ಯವಾಗಿ ಕಾಣಬಹುದು. ಇದರಿಂದ ಇವರ ನಿರ್ದಿಷ್ಟವಾದ ಸಂಖ್ಯೆಯನ್ನು ಗುರುತಿಸುವುದು ಕೂಡ ಬಹಳ ಕಷ್ಟದ ಕೆಲಸ. ಆದರೂ ಅವರಿರುವ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಪಡೆಯಲಾಗಿದೆ.

೧೨. ಹಾವಾಡಿಗ

ಕರ್ನಾಟಕ ರಾಜ್ಯದಲ್ಲಿ ಹಾವಾಡಿಗ, ಮುಸ್ಲಿಂ ಜನಾಂಗವು ಸಾಮಾಜಿಕ ಮತ್ತು ಶೈಕ್ಷಣಿಕ ಆರ್ಥಿಕವಾಗಿ ಹಿಂದುಳಿದಿರುವುದರಿಂದ ಈ ಜನಾಂಗವನ್ನು ಹಿಂದುಳಿದ ವರ್ಗಗಳ ಪಟ್ಟಿಯ ಪ್ರವರ್ಗ ೧ರಲ್ಲಿ ಕ್ರಮಸಂಖ್ಯೆ ೧೯ರಲ್ಲಿ ಎ. ಹಾವಾಡಿಗ, ಬಿ. ಹಾವಗರ್ ಸಿ. ಹೌಗರ ಎಂದು ಸೇರಿಸಲಾಗಿದೆ. ಆದರೆ ಈ ಸಮುದಾಯಕ್ಕೆ ಇದುವರೆಗೂ ಪ್ರವರ್ಗ ೧ರ ಸ್ಥಾನಮಾನ ಸಿಕ್ಕಿಲ್ಲದಿರುವುದು ಒಂದು ದುರಂತವೇ ಸರಿ.

ಯಾದಗಿರಿಯ ಜಿಲ್ಲೆಯ ಪಟ್ಟಣ ಪ್ರದೇಶದ ಶಶಿಧರ ಕಾಲೋನಿಯಲ್ಲಿ ವಾಸವಾಗಿರುವ ಸಯ್ಯದ್ ಕಾಸಿಂ, ಇಮಾಮಸಾಬ್, ಬಾಬುಸಾಬ್, ಅಲಿಸಾಬ್ ಮದಾರಿ ಇವರನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಭೇಟಿ ನೀಡಿದಾಗ ಮತ್ತು ಅವರಿಂದ ಕೆಲವೊಂದು ಮಾಹಿತಿಯನ್ನು ಪಡೆಯುತ್ತಿರುವಾಗ ಗಮನಕ್ಕೆ ಬಂದದ್ದೇನೆಂದರೆ ಈ ಸಮುದಾಯ ಬಡತನ ರೇಖೆಗಿಂತಲೂ ಕೆಳಮಟ್ಟದಲ್ಲಿ ಜೀವನ ಸಾಗಿಸುತ್ತಿರುವುದು.

ಸಯ್ಯದ್ ಮದಾರಿಯವರನ್ನು ಮಾತನಾಡಿಸಿದಾಗ 'ನೋಡ್ರಿ ಸರ್ ನಮಗೆ ಸರ್ಕಾರದಿಂದ ಈ ಜಾಗ ಸಿಕ್ಕಿದೆ. ಅದನ್ನು ಕಟ್ಟಿಕೊಳ್ಳಲು ಆಗಿಲ್ಲ. ಅದಕ್ಕಾಗಿ ತಗಡಿನ ಟೆಂಟ್ ಹಾಕಿ ಕೊಂಡಿದ್ದೇವೆ. ಸಂತೆಯ ದಿನಗಳಂದು ಮತ್ತು ಯಾದಗಿರಿ ಜಿಲ್ಲೆ ಸುತ್ತಮುತ್ತ ನಡೆಯುವ ಜಾತ್ರೆಗಳಲ್ಲಿ ಹಾವಾಡಿಸುವ ಮತ್ತು ಜಾದು ಮಾಡುವುದರ ಮೂಲಕ ನಮ್ಮ ಹೊಟ್ಟೆ ತುಂಬಿಕೊಳ್ಳುತ್ತೇವೆ. ನಮಗೆ ಸರ್ಕಾರದ ಬೇರೆ ಯಾವ ಸೌಲಭ್ಯಗಳು ಸಿಕ್ಕಿಲ್ಲ. ನಮ್ಮ ಜೀವನ ನಾಯಿಪಾಡಾಗಿದೇ ಎಂದು ನೋವಿನಿಂದ ಹೇಳಿದನು.

ಇವರು ಮುಸ್ಲಿಂ ಜನಾಂಗಕ್ಕೆ ಸೇರಿದವರೇ ಆದರೂ ಇವರನ್ನು ನೆಲೆ ನಿಂತ ಮುಸ್ಲಿಮರು ಹತ್ತಿರ ಕರೆದುಕೊಳ್ಳುವುದಿಲ್ಲ. ಯಾವ ರೀತಿ ಎಷ್ಟೋ ಅಲೆಮಾರಿಗಳು ದಲಿತರು, ಹಿಂದುಗಳೇ ಆಗಿದ್ದರೂ ಅವರನ್ನು ಹತ್ತಿರ ಕರೆದುಕೊಳ್ಳುವುದಿಲ್ಲವೋ ಹಾಗೆಯೇ ಇವರ ಪರಿಸ್ಥಿತಿ ಅದಕ್ಕೆ ಹೊರತೇನಾಗಿಲ್ಲ. ಕಡುಬಡತನದಲ್ಲಿ ಜೀವನ ಸಾಗಿಸಲು ಇವರು ಕೆಲವು ಕಡೆ ನೆಲೆ ನಿಂತರೆ ಮತ್ತೆ ಕೆಲವು ಕಡೆ ಅಲೆಯುತ್ತ ತಮ್ಮ ಜೀವನ ನಿರ್ವಹಣೆ ಮಾಡುತ್ತಿರುವುದು ಅಧ್ಯಯನದಿಂದ ಮತ್ತು ಕ್ಷೇತ್ರ ಅಧ್ಯಯನ ಸಂದರ್ಭದಲ್ಲಿ ಕಂಡುಕೊಳ್ಳಲಾಗಿದೆ.

ಹಾವಾಡಿಗ ಸಮುದಾಯದ ಮೂಲವನ್ನು ಹುಡುಕುತ್ತಾ ಹೋದಂತೆ ಒಂದು ಅಂಶ ಕಾಣಿಸುತ್ತದೆ. ಇಡೀ ಜಗತ್ತಿನಲ್ಲಿ ಹಾವಾಡಿಸುವ ಪರಂಪರೆಗೆ ಮನುಕುಲದ ಚರಿತ್ರೆಯಷ್ಟೇ ದೊಡ್ಡದಾದ

ಚರಿತ್ರೆಯಿದೆ. ಹಲವಾರು ಪುರಾತನ ಗುಹೆಗಳಲ್ಲಿ ಹಾವಾಡಿಗರ ಚಿತ್ರಗಳನ್ನು ಇಂದೂ ಸಹ ಕಾಣಬಹುದು. ಹಾವಾಡಿಗ ಸಮುದಾಯದ ಚರಿತ್ರೆ ಮತ್ತು ಮೂಲವನ್ನು ಮತ್ತಷ್ಟು ಹುಡುಕುತ್ತಾ ಹೋದಂತೆ 'ಮದಾರಿ' ಎನ್ನುವ ಸಮುದಾಯದ ಕುರುಹುಗಳು ಕಾಣಿಸುತ್ತವೆ. "ಈ ಸಮುದಾಯ ಇಸ್ಲಾಂ ಧರ್ಮವನ್ನು ಬದುಕಿನ ಕಾರಣಕ್ಕಾಗಿ ಆರಿಸಿಕೊಂಡಿರುವುದನ್ನು ಕಾಣಬಹುದು. 'ಮದಾರಿ' ಸಮುದಾಯ ಮುಸ್ಲಿಂ ಸಮುದಾಯಗಳಲ್ಲಿ ಕಂಡುಬರುವ ಒಂದು ಸಮುದಾಯ. ಶ್ರೀಯುತ ವೆಂಕಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆದ ಹಿಂದುಳಿದ ವರ್ಗಗಳ ಸಮೀಕ್ಷೆಯಲ್ಲಿ ಈ ಮಾದಾರಿ ಸಮುದಾಯದ ಬಗ್ಗೆ ಮಾಹಿತಿ ಇದೆ. ಹಾಗೆಯೇ ಪ್ರಸಿದ್ಧ ಸಮಾಜವಿಜ್ಞಾನಿ ಕೆ.ಎನ್.ಸಿಂಗ್ ಅವರು ಸಹ ತಮ್ಮ 'ಕ್ಯಾಸ್ಟ್ ಆ್ಯಂಡ್ ಟ್ರೈಬ್ಸ್ ಆಫ್ ಇಂಡಿಯಾ' ಪುಸ್ತಕದಲ್ಲಿ ಮಾದಾರಿ ಸಮುದಾಯದ ಬಗ್ಗೆ ಮಹತ್ವದ ಸುಳಿವುಗಳನ್ನು ನೀಡಿರುತ್ತಾರೆ".[೨೦] ಈ ಮಾದಾರಿ ಸಮುದಾಯ ಹಲವಾರು ಮನೋರಂಜನ ಆಟಗಳನ್ನು ಆಡಿಸುವ ಸಮುದಾಯವಾಗಿದ್ದು, ಕೋತಿ ಆಡಿಸುವವರು, ಕರಡಿ ಆಡಿಸುವವರು, ಹಾವಾಡಿಸುವವರು, ಸರ್ಕಸ್ ಮಾಡುವವರು ಎಲ್ಲರೂ ಒಂದೇ ಸಮುದಾಯಕ್ಕೆ ಸೇರಿದವರಾಗಿದ್ದು, ಹಲವಾರು ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಮತ್ತು ಆರ್ಥಿಕ ಕಾರಣ ಗಳಿಂದಾಗಿ ಒಂದೊಂದು ಆಟವನ್ನು ಆಡುವವರು ಕಾಲಕ್ರಮೇಣ ಪ್ರತ್ಯೇಕವಾದ ಕುಲಕಸುಬು ಅಲೆಮಾರಿ ಸಮುದಾಯವಾಗಿ ಮಾರ್ಪಟ್ಟಿರುವದನ್ನು ಕಾಣಬಹುದು.

೧೩. ಹೆಳವರು

ಈ ಜನಾಂಗ ಮೂಲದ ಬಗ್ಗೆ ಹಲವು ವಿದ್ವಾಂಸರು ಹಲವು ರೀತಿಯ ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ. "ಕೆಲವು ವಿದ್ವಾಂಸರ ಪ್ರಕಾರ ಈ ಹೆಳವರು ಆಂಧ್ರಪ್ರದೇಶದಿಂದ ಬಂದವರು. ಅದುದರಿಂದ ಅವರ ಮೂಲ ಆಂಧ್ರವಿರಬಹುದು ಎಂಬ ಅಭಿಪ್ರಾಯ ಕೆಲವರದಾಗಿದೆ".[೨೧] ಹಳೆವರದು ಒಂದು ಜಾತಿಯಾಗಿರದೆ ಒಂದು ವೃತ್ತಿಯಾಗಿದೆ. ಕಾಲಾಂತರದಲ್ಲಿ ಅದು ಜಾತಿಯಾಗಿ ಮಾರ್ಪಾಟಾಗಿದೆ ಎಂಬ ಅಭಿಪ್ರಾಯ ಕೆಲವರದ್ದಾಗಿದೆ. ಕ್ಷೇತ್ರಕಾರ್ಯದಲ್ಲಿದ್ದಾಗ 'ನಾವು ಬಹಳ ದಿನಗಳಿಂದ ಕರ್ನಾಟಕದಲ್ಲಿ ನೆಲೆಸಿದ್ದೇವೆ. ನಾವು ಕನ್ನಡ ಮೂಲದವರು' ನಮ್ಮ ಹಿರಿಯರು ಎಲ್ಲಿಂದ ಬಂದಿರುವರು ಗೊತ್ತಿಲ್ಲ, ಎಂಬ ಅಭಿಪ್ರಾಯ ಅವರದಾಗಿದೆ. ಕೆಲವು ಅಧ್ಯಯನಗಳಿಂದ ಇವರು ಆಂಧ್ರ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಹೆಚ್ಚು ಕಂಡುಬರುತ್ತಾರೆ ಎಂಬ ಅಭಿಪ್ರಾಯಗಳು ವ್ಯಕ್ತವಾಗಿವೆ.

ಇತರೆ ಅಲೆಮಾರಿ ಸಮುದಾಯಗಳು

೧೪. ದೊಂಬರು

ಗುಲಬರ್ಗಾದಿಂದ ಬೇರ್ಪಟ್ಟ ಯಾದಗಿರಿ ಜಿಲ್ಲೆಯ ಹಲವು ಹಳ್ಳಿಗಳಲ್ಲಿ ದೊಂಬರು ಬರುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಕೊಳ್ಳಲಾಗಿದೆ. ಗುಲಬರ್ಗಾ, ಬೆಂಗಳೂರು,

ಮುಂಬೈ ರೈಲು ಮಾರ್ಗದ ಮಧ್ಯೆ ಇರುವ ಯಾದಗಿರಿ ಅನುಕೂಲ ಇರುವುದರಿಂದ ಈ ದೊಂಬರು ಬಂದು ಆಟವನ್ನು ಮುಗಿಸಿಕೊಂಡು ಹೋಗುವುದನ್ನು ಕಾಣುತ್ತೇವೆ. ಆದರೆ ಯಾದಗಿರಿ ಜಿಲ್ಲೆಯಲ್ಲಿ ಈ ದೊಂಬರು ಸಂತೆ, ಜಾತ್ರೆ, ಶಾಲೆ ಮುಂದೆ ಆಟ ಪ್ರದರ್ಶನ ಮಾಡಲು ಆಗಾಗ ಬಂದು ಹೋಗುತ್ತಿರುವುದನ್ನು ಮಾತ್ರ ಕಾಣಬಹುದಾಗಿದೆ.

ವಿಶಿಷ್ಟ ರೂಪದ ಕಸರತ್ತು ಮತ್ತು ರಂಜನೆ ಕಲೆಯನ್ನು ಹೊಂದಿದ ಡೊಂಬರನ್ನು ಬ್ರಿಟಿಷರು ಅಪರಾಧಿಗಳೆಂದು ಪರಿಗಣಿಸಿದ್ದರು. ಇವರ ವೃತ್ತಿ ಡೊಂಬರಾಟ. ಡೊಂಬರ ಸಮುದಾಯವು ಸ್ವಾತಂತ್ರ್ಯಪೂರ್ವ ಮತ್ತು ಆಧುನಿಕ ಸಮಾಜದಲ್ಲಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ನಿರಂತರ ಜೀವನೋಪಾಯಕ್ಕಾಗಿ ಅಲೆಯುತ್ತಿದ್ದಾರೆ. ಇವರು ತಮ್ಮ ಕಸುಬುಗಳಿಂದ ಜನರಿಗೆ ಮನೋರಂಜನೆ ನೀಡುತ್ತಾರೆ. ಉತ್ತರ ಭಾರತದಲ್ಲಿ ಇವರಿಗೆ 'ಡೊಂಸಿ' ಎಂದು ಕರೆಯುತ್ತಾರೆ. ನಂತರದ ದಿನಗಳಲ್ಲಿ ಇವರನ್ನು ಜಾಡಮಾಲಿಗಳಾಗಿ ಬಳಸಿಕೊಳ್ಳಲಾಗುತಿತ್ತು. ಶವಸಾಗಾಣಿಕೆ ವೃತ್ತಿಗಳನ್ನು ಅನುಸರಿಸುತ್ತಿದ್ದರು. ಇವರು ಆಂಧ್ರ ಮೂಲದವರೆಂದು ಹೇಳಿಕೊಳ್ಳುತ್ತಾರೆ. ಊರಿಂದ ಊರಿಗೆ ಅಲೆದಾಡುತ್ತಾ ಜೀವನ ಸಾಗಿಸುತ್ತಾರೆ. ಒಂದೂರಿಂದ ಮತ್ತೊಂದು ಊರಿಗೆ ಅಲೆದಾಡುತ್ತಾ ಜೀವನ ನಿರ್ವಹಣೆ ಮಾಡಿ ಕೊಳ್ಳುತ್ತಾರೆ.

"ಡೊಂಬ ಪದಕ್ಕೆ ಪರ್ಯಾಯವಾಗಿ ದೊಂಬ, ದೋವರ ಶಬ್ದಗಳು ಬಳಕೆಯಲ್ಲಿವೆ. ಕರ್ನಾಟಕ ದಲ್ಲಿ ಈಗ ಇವರನ್ನು 'ದೊಂಬರು' ಎಂದು ಗುರುತಿಸುತ್ತಾರೆ. ನಿಖರವಾಗಿ ಹೇಳಲಾಗದಿದ್ದರೂ ದೊಂಬರು ಮೂಲತಃ ದಕ್ಷಿಣ ಭಾರತದವರು. ಅಲೆಮಾರಿಗಳಾದ ಈ ಜನವರ್ಗ ಸಹಜವಾಗಿ ಭಾರತದ ವಿವಿಧ ಪ್ರದೇಶಗಳಲ್ಲಿ ಸಂಚರಿಸುತ್ತಾರೆ. ಇವರಲ್ಲಿ ಕೆಲವರು ವಿವಿಧ ಪ್ರದೇಶಗಳಲ್ಲಿ ನೆಲೆಸಿರುವ ಸಾಧ್ಯತೆ ಇದೆ".[೨]

'ಡೊಂಬಗೆ ನೆಲೆ ಇಲ್ಲ, ಡಂಬಿಗೆ ಬೆಲೆ ಇಲ್ಲ'. ಈ ಗಾದೆಯಿಂದ ಡೊಂಬರಿಗೆ ಸ್ಥಿರವಾದ ನೆಲೆ ಇದ್ದಿರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ. 'ಡಂಬು' ಎಂದರೆ ಬಿದಿರು. ಯಥೇಚ್ಛವಾಗಿ ಲಭ್ಯವಿದ್ದ ಬಿದಿರನ್ನು ಹಣ ಕೊಟ್ಟು ಕೊಂಡುಕೊಳ್ಳುವ ಅಗತ್ಯವಿರಲಿಲ್ಲ. ಒಟ್ಟಾರೆ ಈ ಗಾದೆಯು ವಲಸೆ ಜೀವನವನ್ನು ಸೂಚಿಸುತ್ತದೆ. ಅವರು ಅವಲಂಬಿಸಿರುವ ಕಸುಬು ದೈಹಿಕ ಕಸರತ್ತು ಮತ್ತು ಚಮತ್ಕಾರ ಆಟಗಳ ಪ್ರದರ್ಶನ. ಆ ಕಾರಣಕ್ಕೆ ಅವರು ಅನಿವಾರ್ಯವಾಗಿ ವಲಸೆ ಬದುಕನ್ನು ಒಪ್ಪಿಕೊಳ್ಳ ಬೇಕಾಯಿತು. ಇವರು ಜನರ ಮನರಂಜಕರಾಗಿದ್ದರು. ಆದರೆ ಮನರಂಜನೆಗೆ ಬೇರೆ ಬೇರೆ ಮಾಧ್ಯಮಗಳು ಹುಟ್ಟಿಕೊಂಡಾಗ ಡೊಂಬರು ಬೇಡವಾದರು. ಆಗ ಅವರು ಅನಿವಾರ್ಯವಾಗಿ ಬೇರೊಂದು ಕಸಬನ್ನು ರೂಢಿಸಿಕೊಳ್ಳಬೇಕಾದ ಸ್ಥಿತಿ ಬಂದಿದೆ.

ಸಾಮಾಜಿಕವಾಗಿ ಡೊಂಬರು ಹಿಂದುಳಿದ ವರ್ಗ ಎಂದು ಪರಿಗಣಿಸಬಹುದು. ಇದು ೧೯೭೭ರ ಎಲ್.ಜಿ. ಹಾವನೂರು ವರದಿಯ ಪ್ರಕಾರ ಇವರು ಪರಿಶಿಷ್ಟ ಜಾತಿಗೆ ಸೇರಿರುತ್ತಾರೆ.

ಅನಿವಾರ್ಯ ಕಾರಣಗಳಿಂದ ತಮ್ಮ ಮೂಲ ಕಸುಬನ್ನು ಇನ್ನೂ ಅವಲಂಬಿಸಿರುವ ದೊಂಬರು ಅರೆಅಲೆಮಾರಿಗಳಾಗಿ ಬದುಕುತ್ತಿದ್ದಾರೆ. ಇವರ ವಸತಿ ವ್ಯವಸ್ಥೆ ಭಿನ್ನವಾದುದು. ಇವರು ಊರಿಂದ ಊರಿಗೆ ತಮ್ಮ ಆಟದ ಸಾಮಗ್ರಿಗಳನ್ನು, ಅಡುಗೆ ಪಾತ್ರೆಗಳನ್ನು ಒಯ್ಯುತ್ತಾರೆ. ಆದರೆ ತಾತ್ಕಾಲಿಕವಾಗಿ ಗುಡಿಸಲು ನಿರ್ಮಿಸಿಕೊಳ್ಳುವುದಿಲ್ಲ. ಅದಕ್ಕೆ ಸಂಬಂಧಿಸಿದ ಯಾವ ಸಾಮಗ್ರಿಗಳು ಇವರ ಬಳಿ ಇರುವುದಿಲ್ಲ. ಏಕೆಂದರೆ ಊರ ಹೊರಗಿನ ಗುಡಿ, ಧರ್ಮಶಾಲೆಯ ಪಡಸಾಲೆ, ಪಾಠಶಾಲೆಯ ಹೊರಭಾಗ ಮತ್ತು ಒಂದು ಹಾಳುಮನೆಯೇ ಇವರ ತಾತ್ಕಾಲಿಕ ವಾಸದ ಮನೆಯಾಗಿರುತ್ತದೆ.

೧೫. ರಾಜಗೊಂಡ

ರಾಜಗೊಂಡರು ಶತಮಾನಗಳಿಂದಲೂ ಅಲೆಮಾರಿ ಜೀವನವನ್ನು ಸಾಗಿಸುತ್ತಿದ್ದಾರೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಈ ರಾಜಗೊಂಡ ಅಲೆಮಾರಿಗಳ ಕುಟುಂಬಗಳು ಬಸ್ ನಿಲ್ದಾಣದ ಹತ್ತಿರ ಕಂಡುಬಂದರು. ಅವರನ್ನು ಮಾತಾಡಿಸಿದಾಗ ತಾವು ಬದುಕುವುದಕ್ಕಾಗಿ ಊರಿಂದ ಊರಿಗೆ ಅಲೆಯುತ್ತ ಔಷಧಿ ಮಾರುತ್ತ ಕೆಲವು ದಿನಗಳು ಸಂಚಾರಿ ಜೀವನ ನಡೆಸಿ ಮತ್ತೆ ನಮ್ಮ ನಿವಾಸಕ್ಕೆ ತೆರಳುತ್ತೇವೆ ಎಂದು ಹೇಳಿದರು. ಜನರು ತಿರುಗಾಡುವ ಜನನಿಬಿಡದ ಪ್ರದೇಶಗಳ ರಸ್ತೆ ಬದಿಯಲ್ಲಿ ಔಷಧ ಮಾರುವ ಗುಡಾರ ಅಥವಾ ಟೆಂಟ್ ಹಾಕಿಕೊಂಡು ಧ್ವನಿವರ್ಧಕದ ಮೂಲಕ ವಿವಿಧ ರೋಗಗಳನ್ನು ಗುಣಪಡಿಸುವ ವನ್ಯ ಗಿಡಮೂಲಿಕೆ ಔಷಧಿ ನಮ್ಮಲ್ಲಿದೆ ಎಂಬುದರ ಕುರಿತು ಪ್ರಚಾರ ಮಾಡುತ್ತಿರುತ್ತಾರೆ.

ದ್ರಾವಿಡರ ಮೂಲ ಜನಾಂಗ ಗೊಂಡರು ಆರ್ಯರೆ. ಮೊದಲೇ ಮಧ್ಯ ಏಶ್ಯಾದಿಂದ ಸಿಂಧೂ ನದಿ ಬಯಲು ಮೆಹೆಂಜೊದಾರ ಹರಪ್ಪಗಳಲ್ಲಿ ನೆಲಸಿ ಪಶುಪಾಲನೆಯೊಂದಿಗೆ ಕೃಷ್ಣಾ ಕಾವೇರಿ, ನದಿಗಳ ಬಯಲುಗಳಲ್ಲಿ ವಾಸಿಸಲಾರಂಭಿಸಿ, ಕರ್ನಾಟಕ ರಾಜ್ಯದಿಂದ ಪುನಃ ಆಂಧ್ರಕ್ಕೆ ವಲಸೆ ಆಗಿರುವಂತೆ ಅವರ ಭಾಷೆಯಿಂದ ಅರಿವಾಗುತ್ತದೆ ಎಂಬುದು ಅಧ್ಯಯನಕಾರರ ಅಭಿಪ್ರಾಯವಾಗಿದೆ.

ಗೊಂಡರ ಹೆಸರಾಂತ ಮಂತ್ರಗಾರನಾದ ಪಂಡಬಾಬಾ ಹೇಳುವಂತೆ 'ಗೊಂಡರು ದಕ್ಷಿಣದಿಂದ ಹದಿನಾಲ್ಕನೆಯ ಶತಮಾನದ ಮೊದಲು ಬಹುಶಃ ಗೋದಾವರಿ ನದಿಯ ಮೂಲಕ ಬಂದು ಮಧ್ಯಪ್ರಾಂತ್ಯದಲ್ಲೆಲ್ಲ ಹರಡಿಕೊಂಡರು. ಅವರು ತಮಿಳು ಮತ್ತು ಕನ್ನಡ ಎರಡೂ ಸೇರಿದ ಒಂದು ಬಗೆಯ ಭಾಷೆಯನ್ನಾಡುತ್ತಾರೆ. ೧೪ನೇ ಶತಮಾನದಲ್ಲಿ ಅವರು ಆಗ ಗೊಂಡವನ ಎಂದು ಕರೆಯಲ್ಪಡುತ್ತಿದ್ದ ಮಧ್ಯ ಇಂಡಿಯಾದ ಹಲವಾರು ಪ್ರದೇಶಗಳಲ್ಲಿ ರಾಜರಾಗಿ ಇದ್ದುದಾಗಿ ತಿಳಿದು ಬರುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ರಾಜರ ಹಿನ್ನೆಲೆಯಲ್ಲಿ ಬಂದ ಈ ರಾಜಗೊಂಡ ಅಲೆಮಾರಿಗಳು ತಮ್ಮ ಉಪಜೀವನಕ್ಕಾಗಿ ಹೊಟ್ಟೆ ತುಂಬಿಸಿಕೊಳ್ಳಲು ದಿನನಿತ್ಯದ ಸಂಚಾರ ಮಾಡುತ್ತ ಗಿಡಮೂಲಿಕೆ ಔಷಧಿ ಮತ್ತು ಪ್ಲಾಸ್ಟಿಕ್

ವಸ್ತುಗಳನ್ನು ಮಾರುತ್ತಾ ಜೀವನ ಸಾಗಿಸುತ್ತಾರೆ. ಈ ಸಮುದಾಯ ಯಾದಗಿರಿ ಜಿಲ್ಲೆಯಲ್ಲಿ ನೆಲೆ ಇಲ್ಲ. ಆದರೆ ಆಗಾಗ ಇವರು ಬಂದು ಕೆಲವು ದಿನ ನೆಲೆಸುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಿದೆ.

೨.೬ ಅಲೆಮಾರಿಗಳ ಪರ್ಯಾಯ ಪದಗಳು

"ಕರ್ನಾಟಕದಲ್ಲಿ ಅಲೆಮಾರಿಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಪಟ್ಟಿಯಲ್ಲಿಯೂ ಸೇರಿಸಲಾಗಿದೆ. ಮಿಕ್ಕ ಅಲೆಮಾರಿಗಳನ್ನು ಹಿಂದುಳಿದ ಪಟ್ಟಿಯಲ್ಲಿ ಸೇರಿಸಲಾಗಿದೆ. ಲಭ್ಯವಿರುವ ಮಾಹಿತಿಯ ಪ್ರಕಾರ ಪರಿಶಿಷ್ಟ ಜಾತಿಯಲ್ಲಿ ೯, ಪರಿಶಿಷ್ಟ ಪಂಗಡದಲ್ಲಿ ೨ ಹಾಗೂ ಹಿಂದುಳಿದ ವರ್ಗದಲ್ಲಿ ೧೩ ವಿಮುಕ್ತ ಸಮುದಾಯಗಳಿದ್ದರೆ, ಪರಿಶಿಷ್ಟ ಜಾತಿಯಲ್ಲಿ ೫, ಪರಿಶಿಷ್ಟ ಪಂಗಡದಲ್ಲಿ ೩ ಹಾಗೂ ಹಿಂದುಳಿದ ವರ್ಗದಲ್ಲಿ ೨೪ ಅಲೆಮಾರಿ ಸಮುದಾಯಗಳಿವೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡವನ್ನು ಹೊರತುಪಡಿಸಿದರೆ ಹಿಂದುಳಿದ ವರ್ಗಗಳ ಪ್ರವರ್ಗ–೧ರಲ್ಲಿ ಕೆಳಗಿನಂತೆ ಅಲೆಮಾರಿ ಹಾಗೂ ಅರೆಅಲೆಮಾರಿಗಳು ಇವೆ.

ಹಿಂದುಳಿದ ವರ್ಗಗಳ ಅಲೆಮಾರಿ ಸಮುದಾಯಗಳಲ್ಲಿ ಗೋಂದಳಿ ಸಮುದಾಯವು ಬುಡಬುಡಕಿ, ಜೋಗಿ, ಬುತೇರು ಇತ್ಯಾದಿ ಹೆಸರುಗಳಿಂದಲೂ, ಹೆಳವರನ್ನು ಗಂಟಿಹೆಳವ, ಹಂದಿಹೆಳವ, ಪುಂಗಿಹೆಳವ, ಚಾಪೆಹೆಳವ ಇತ್ಯಾದಿ ಹೆಸರುಗಳಿಂದಲೂ ಸ್ಥಳಿಯರು ಕರೆಯುತ್ತಾರೆ".[೨]

ಕೋಷ್ಟಕ ೨.೬.೧. ಅಲೆಮಾರಿಗಳ ಪರ್ಯಾಯ ಪದಗಳ ಪಟ್ಟಿಯ ವಿವರ

ಕ್ರಸಂ.	ಮೂಲ ಸಮುದಾಯ	ಉಪ ಪಂಗಡ
೧.	ಕೊರವ	ಕೊರಚ, ಕೊರವ, ಕೊರಮ, ಕುಂಚಿಕೊರವ, ಕೊರವಂಜಿಯರು, ಭಜಂತ್ರಿ, ಕುಕ್ಕೆ ಕೊರವ, ವಾಲಗದ ಕೊರಮ, ಹಗ್ಗದ ಕೊರವ, ಎತ್ತಿನ ಕೊರವ, ಉಪ್ಪು ಕೊರವರು, ಬಾರಿಗಾಯಿ ಕೊರವರು, ಗರಡಿ ಕೊರವರು, ಕೋಲೆ ಕೊರವರು, ಹಾವಿನ ಕೊರವರು, ಹಂದಿಕೊರವ ಇತ್ಯಾದಿ.
೨.	ಕೋಲೆಬಸವ	ಕೋಲೆಬಸವಣ್ಣ, ಕವಲೆಬಸವ, ಬುರ್‌ಬಸ ಉರವಣ್ಣ, ಕವಲೆತ್ತಿನವರು, ಗಂಗೆತ್ತಿನವರು, ಗಂಗೆ ಮಕ್ಕಳು
೩.	ಗೊಂಧಳಿ	ಗೊಂದಲಿಗರು, ಗೊಂದಳಿಗರು, ಗೊಂದಲದವರು, ಬುಡು ಬುಡುಕಿಯವರು, ಜೋತಿಷಿಗಳು, ಕವಲೆತ್ತಿನವರು, ಬಾವರು, ಸಿಂಗದವರು, ವಾಸುದೇವರು, ಚಿತ್ರಪಟದವರು, ಗಿಳಿಶಾಸ್ತ್ರದವರು, ಭೂತೆರಕತಿ ಇತ್ಯಾದಿ.

	ಬುಡಬುಡಕೆ	ದೋಪಿಗ್ಯಾ, ಗೂಳಿಗಾರ, ಸುಡುಬುಡುಕ್ಯಾ, ಹಕ್ಕಿನರಸಣ್ಣ
೪.	ಫಿಸಾಡಿ	ಸುರ್ವೆಸಿ, ಸೋಳುಂಕೆ, ಪವಾರ, ಪಡವರ್‌ಕರ್, ದುಬೇಜಿ
೫.	ಚೆನ್ನದಾಸರು	ಹೊಲೆಯ ದಾಸರು, ಚಕ್ರವಾದ್ಯ, ದೊಂಬಿದಾಸರು, ಹಂಡಿಗ ದಾಸರು
೬.	ಜೋಗೇರು	ಗೋಸಾವಿ, ಗೋಸಂಗಿ, ಜೋಗೇರ್
	ಹಂದಿಜೋಗಿ	ಕಿನ್ನರಿಜೋಗಿ, ಡಬ್ಬಜೋಗಿ, ಎಣ್ಣೆಜೋಗಿ, ಬಳಗಾರಜೋಗಿ, ಕುಣಬಿಜೋಗಿ, ಹಂದಿಜೋಗಿ, ಹಂದಿಚಿಕ್ಕ, ಹಂದಿಗೊಲ್ಲ ಜೋಗೇರ.
೭.	ಬುಡ್ಗಜಂಗಮ	ಹಗಲುವೇಷಗಾರರು, ಬುರ್ರಕಥೆಯವರು, ಬಹುರೂಪಿಗಳು, ಬಾಲಸಂತೋಷಿ, ಬೈರಾಗಿ, ಸನ್ಯಾಸಿ, ಜಗ್ಗಾಲಿ, ಜಂಗಾಲರು, ಕುರುಕುರುಮಾಮ ಇತ್ಯಾದಿ.
	ಸುಡುಗಾಡು ಸಿದ್ಧ	ಕಾಡುಪಾಪಯ್ಯಗಳು, ತೆಲುಗು ಜಂಗಮ, ಗೊಂಬೆಯಾಟದವರು, ಪಾಕನಕಟ್ಟಿ ಕೊಲ್ಲ, ಸಿದ್ಧರು, ಕಾಡುಸಿದ್ಧರು, ಮಸಣಸಿದ್ದ, ಕಾಟಿಪಾಪ, ಸ್ಮಶಾನಜೋಗಿ, ಬೈರಾಗಿ, ರಾಮಕೊಂಡಿಗಳು ಇತ್ಯಾದಿ.
	ಕುರುಮಾಮ	ಕುರುಕುರುಮಾಮ, ರಾಮಕೊಂಡ, ಕೊಂಡಮಾಮ
೮.	ಬೈಲಪತ್ತಾರ	ಬೈಲುಕಂಬಾರ, ಬೈಲುಅಕ್ಕಸಾಲಿಗ, ಪತ್ತಾರ, ಬೈಲುಪತ್ತಾರ್ ಇತ್ಯಾದಿ.
೯.	ಸಿಕ್ಲಿಗರು	ಶಿಕ್ಕಾಲಿಗಳು, ಸಿಕ್ಕಲರು, ಚಿಕ್ಕಲಿಗಾರರು, ಸಿಕ್ಲಿಗಾರರು ಇತ್ಯಾದಿ.
೧೦.	ಸಿಂಧೋಳ್ಳು	ದುರುಗಮುರುಗಿ, ಜಿರ್‌ಬುರ್ರ್ರ, ಚಿಂದೋಳ್ಳರು, ಪೋತರಾಜರು, ಸುಂಕಲಮ್ಮ ನೋರು, ಉರಿಮಾರಿಯಾರ್, ಕೂಗಮ್ಮನ ಆಡಿಸುವವರು, ಬೆಂಕಿಮಾರಿಯರ್, ದುರುಗಮ್ಮ ಆಡಿಸುವರು, ಮರಗಮ್ಮ ಆಡಿಸುವರು.
	ದುರಗಮುರಗಿ	ಬುರ್‌ಬರ್‌ಜಾ, ಮರಗಮ್ಮ ನುಡಿಸುವವರು, ಸಿಂಧೋಳ್ಳು
೧೧.	ಶಿಳ್ಳೇಕ್ಯಾತ	ಶಿಳ್ಳೇಕ್ಯಾತ, ಬುಂಡೆಬೆಸ್ತ, ಗೊಂಬೆರಾಮರು, ತೊಗಲುಗೊಂಬೆಯವರು, ಕಟುಬ, ಜಾಲಗಾರ ಇತ್ಯಾದಿ.

೧೨.	**ಹಾವಾಡಿಗ**	ಜಾದು ಮಾಡುವವರು, ಹಾವುಗಾರ, ಮದಾರಿ
೧೩.	**ಹೆಳವ**	ಎತ್ತಿನ ಹೆಳವ, ಗಂಟೆಹೆಳವ, ಚಾಪೆಹೆಳವ, ಮಂದಲಹೆಳವ, ಕಂಬಿಹೆಳವ, ದೂದಿ ಹೆಳವ, ಹತ್ತಿಹೆಳವ, ಕೂಕಣಿಹೆಳವ, ಅಡವಿಹೆಳವ, ಮಾರಹೆಳವ, ಸಾಧುಹೆಳವ, ತಂಬೂರಿ ಹೆಳವ, ಮದ್ದಿನ ಹೆಳವ ಇತ್ಯಾದಿ.
೧೪.	**ದೊಂಬರು**	ಡೊಂಬರು, ಡೊಂಬರಾಟರು, ಡೊಮ್ಮನಾಡಿಸುವರು, ಡೊಮ್ಮಾರು, ದೊಂಬಾರಿ, ಕಸರತ್ತಿನವರು, ಸರ್ಕಸ್‌ಮಾಡುವವರು, ಬಾಜಿಗಾರರು ಇತ್ಯಾದಿ
೧೫.	**ರಾಜಗೊಂಡ**	ಬೊಮಗೊಂಡ, ಕಾಲಗೊಂಡ, ರಾಯಗೊಂಡ, ಲಾಲಗೊಂಡ

"ಕನ್ನಡ ಪುಸ್ತಕ ಪ್ರಾಧಿಕಾರ" ಹೊರತಂದಿರುವ 'ಅಲೆಮಾರಿ ಸಮುದಾಯಗಳ ಅಧ್ಯಯನ' ಎಂಬ ಕೃತಿ ಸರಣಿಯ ಸಂಪಾದಕರಾದ ಕೆ.ಎಂ. ಮೇತ್ರಿಯವರು ಬರೆದಿರುವ ವಿವರವಾದ ಪ್ರಸ್ತಾವನೆಯಲ್ಲಿ ಕರ್ನಾಟಕದ ವಿಮುಕ್ತ ಮತ್ತು ಅಲೆಮಾರಿ ಸಮುದಾಯಗಳನ್ನು ಹೀಗೆ ವಿಭಜಿಸಲಾಗಿದೆ ಎನ್ನುವುದನ್ನು ವಿಶ್ಲೇಷಿಸಿದ್ದಾರೆ".[೨೪]

ಕರ್ನಾಟಕಕ್ಕೆ ಸಂಬಂಧಿಸಿದಂತೆ ೫೬ ವಿಮುಕ್ತ ಅಲೆಮಾರಿ ಮತ್ತು ಅರೆಅಲೆಮಾರಿ ಬುಡಕಟ್ಟು ಗಳಿರುವವು. ಇವುಗಳನ್ನು ಅನಂತರದ ಅವಧಿಗಳಲ್ಲಿ ಸಂವಿಧಾನಬದ್ಧವಾಗಿ ಪರಿಶಿಷ್ಟ ಜಾತಿ, ಪಂಗಡದ ಮತ್ತು ಹಿಂದುಳಿದ ವರ್ಗಗಳ ಪಟ್ಟಿಗಳಲ್ಲಿ ಇರಿಸಲಾಗಿದೆ. ವಿಮುಕ್ತಗೊಳಿಸಿದ ೨೪ ಸಮುದಾಯಗಳಲ್ಲಿ ೯ ಪರಿಶಿಷ್ಟ ಜಾತಿ, ೨ ಪರಿಶಿಷ್ಟ ಪಂಗಡ ಮತ್ತು ೧೩ ಸಮುದಾಯಗಳಿಗೆ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಇದುವರೆಗೆ ಸ್ಥಾನ ಕಲ್ಪಿಸಲಾಗಿದೆ. ೩೨ ಅಲೆಮಾರಿ ಸಮುದಾಯಗಳಲ್ಲಿ ೫ ಪರಿಶಿಷ್ಟ ಜಾತಿ, ೩ ಪರಿಶಿಷ್ಟ ಪಂಗಡ ಮತ್ತು ೨೪ ಸಮುದಾಯಗಳನ್ನು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸ್ಥಾನ ಕಲ್ಪಿಸಲಾಗಿದೆ. ಈ ಸಮುದಾಯಗಳ ವಿವರ ಹೀಗಿದೆ:

ವಿಮುಕ್ತ ಬುಡಕಟ್ಟುಗಳು(ಅಯ್ಯಂಗಾರ್ ಸಮಿತಿಯ ವರದಿ ಪ್ರಕಾರ):

ಪರಿಶಿಷ್ಟ ಜಾತಿ: ೧. ಆದಿ ದ್ರಾವಿಡ, ೨. ಬಂಜಾರ, ಲಂಬಾಣಿ, ಬಂಬಾಡ, ಲಮಾನಿ, ಸುಗಾಲಿ, ಸುಕಾಲಿ, ೩. ದೋಮ್, ದೊಂಬರ, ಪೈದಿ, ಪಾನೊ, ೪. ಗಂಟಿ ಚೋರ್ಸ, ೫. ಹಂಡಿ ಜೋಗೀಸ್, ೬. ಕೇಪ್‌ಮಾರಿಸ್, ೭. ಕೊರಚ, ಕೊರಚರ ೮. ಮಾಲ, ೯. ಮಾಂಗ, ಗಾರೂಡಿ.

ಪರಿಶಿಷ್ಟ ಪಂಗಡ: ೧. ಬಿಲ್ ೨. ಪಾರ್ಧಿ, ೩. ಅಡ್ವಿಚಿಂಚೇರ್, ಫಾನ್ಸ್ ಪಾರ್ಧಿ, ಹರಣಶಿಕಾರಿ.

ಹಿಂದುಳಿದ ವರ್ಗದ : ೧. ಬೈರಾಗಿ, ೨. ಬವಾನಿ, ಬಾವಾ, ೩. ಬೇಡರು, ೪. ಬೇರಿಯ ೫. ಭಾಮ್ಟಾ, ೬. ಚಾರ, ಛಾರ, ಛಾರಾ ೭. ಘಿಸಾಡಿ ೮. ಜ್ಯೋಗಿ, ಜ್ಯೋಗರ, ಸನಜ್ಯೋಗಿ,

೯. ಕಂಜರ ಭಾಟ, ೧೦. ಕಂಜರಿ, ಕಂಜರ್, ೧೧. ಮಸಣ ಜ್ಯೋಗಿ, ೧೨. ನಟ್, ೧೩. ಗುಜರ್, ೧೪. ಮರವರ್

ಅಲೆಮಾರಿ ಬುಡಕಟ್ಟುಗಳು: (ಬ್ರಿಟಿಷ್ ಕುಲಶಾಸ್ತ್ರಿಯ ಅಧ್ಯಯನಕಾರರ ಪ್ರಕಾರ) ೧. ಬೇಡ ಜಂಗಮ, ಬುಡ್ಗ ಜಂಗಮ, ೨. ಭೋವಿ, ಓಡ್, ಓಡ್ಡೆ, ವಡ್ಡರ್, ಒಡ್ಡರ್, ೩. ಕೊರಮ, ಕೊರವ, ೪. ಮದಾರಿ, ೫, ಶಿಳ್ಳೇಕ್ಯಾತಾಸ್; ಪರಿಶಿಷ್ಟ ಪಂಗಡದ ೧. ಹಕ್ಕಿಪಿಕ್ಕಿ, ೨. ಮೇದ, ಮೇದಾರಿ, ಗೌರಿಗ, ಬುರುಡ, ೩. ತೋಡ, ಮತ್ತು

ಹಿಂದುಳಿದ ವರ್ಗದ ಅಲೆಮಾರಿ ಬುಡಕಟ್ಟುಗಳು: ೧. ಬಾಲಸಂತೋಷಿ, ೨. ಬಾಝಿಗರ್, ೩. ಬೆಸ್ತರ್, ೪. ಬುಡಬುಡಕಿ, ದೇವಾರಿ, ಜ್ಯೋಶಿ, ೫. ಛಪ್ಪರಬಂದ, ೬. ಚಿತ್ರಕಥಿ, ೭. ಜ್ಯೋಶಿ ೮. ದರವೇಸು, ೯. ದೊಬಿದಾಸ ೧೦. ದುರ್ಗಮುರ್ಗ ೧೧. ಗೋಂಧಳಿ, ೧೨. ಹೆಳವ, ೧೩. ಕಾಶಿಕಾಪಡಿ, ತಿರೆಉಮಾಲಿ ೧೪. ಕೊಲ್ಹಾಟಿ, ೧೫. ಕೊರವರ್, ಯರಕುಲ, ಯರಕುಲ, ೧೬. ನಂದಿವಾಲ, ೧೭. ನಾಥಪಂಥಿ ೧೮. ಪಿಚಿಗುಂಟಲಾ ೧೯. ಸುರಾನಿಯ ೨೦. ಸಿಕ್ಕಲಿಗಾರ, ೨೧. ವಡಿ ೨೨. ವೈದು, ೨೩. ವಾಸುದೇವ, ೨೪. ಮದಾರಿ ೨೫. ಗೋಸಾವಿ, ಗೋಸಾಯಿ ಮತ್ತು ಅತೀತ್. ೧೯೫೨ರಲ್ಲಿ ವಿಮುಕ್ತಗೊಂಡ ಅಲೆಮಾರಿ ಬುಡಕಟ್ಟುಗಳು ೧೯೫೦ರಲ್ಲಿಯೇ ಪ್ರಕಟಗೊಂಡ ಪರಿಶಿಷ್ಟರ ಮೀಸಲಾತಿ ಪಟ್ಟಿಯಿಂದ ಹೊರಗುಳಿದು ೦೧-೦೨-೧೯೬೬ರವರೆಗೆ ಸಂವಿಧಾನಬದ್ಧವಾಗಿ ಅನಾಥವಾಗಿದ್ದವು. ಈ ಸಮುದಾಯಗಳು ೧೯೬೬ರಿಂದ ೦೪-೦೩-೧೯೭೭ರವರೆಗೆ ಕರ್ನಾಟಕ ರಾಜ್ಯ ಅಲೆಮಾರಿ ಮತ್ತು ಅರೆಅಲೆಮಾರಿ ಪ್ರತ್ಯೇಕ ಪಟ್ಟಿಯಲ್ಲಿ ನೆಲೆ ಕಂಡವು.[೨೫]

೨.೭. ಜನಸಂಖ್ಯೆ ಮತ್ತು ಪ್ರಸಾರ ನೆಲೆಗಳು

ಕರ್ನಾಟಕ ರಾಜ್ಯದ ಯಾದಗಿರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಯಾದಗಿರಿ, ಶಹಾಪುರ, ಸುರುಪುರ ತಾಲೂಕಿನಲ್ಲಿ ಬರುವ ವಿವಿಧ ಅಲೆಮಾರಿ ಸಮುಯಾಗಳಾದ ಗೊಂದಳಿ, ಘಿಸಾಡಿ, ಬುಡ್ಗಜಂಗಮ್, ಬೈಲಪತ್ತಾರ, ಚನ್ನದಾಸ, ಕೊರಮ, ಕೊಲೆಬಸವ, ಶಿಳ್ಳೇಕ್ಯಾತ, ಸಿಕ್ಲಿಗ್, ಸಿಂಧೋಳ್ಳು, ಹೆಳವ, ಹಾವಾಡಿಗ ಹೀಗೆ ವಿವಿಧ ಅಲೆಮಾರಿ ಸಮುದಾಯಗಳು ವಾಸಿಸುವುದು ಕಂಡುಬರುತ್ತದೆ. ಈ ಪದಗಳಾಚೆ ಸ್ಥಳೀಯರು ಬಳಸುವ ಪದಗಳು ಹಲವಾರಿವೆ. ಅವರನ್ನು ಆಯಾ ಪ್ರದೇಶಗಳಲ್ಲಿ ವಿಭಿನ್ನ ಹೆಸರುಗಳಿಂದ ಗುರುತಿಸಲಾಗುತ್ತದೆ. ಜಾತಿ ಆಧಾರಿತ ಭಾರತದಲ್ಲಿ ವರ್ಣ ವ್ಯವಸ್ಥೆಯ ಕಾಲದಿಂದಲೂ ಯಾವ ವ್ಯಕ್ತಿ ಯಾವ ಕಾರ್ಯಗಳನ್ನು ಕೈಗೊಳ್ಳುತ್ತಾನೆಯೋ ಅದೇ ವೃತ್ತಿಯಿಂದ ಆತನ ಜಾತಿಯನ್ನು ಗುರುತಿಸಲಾಗುತ್ತದೆ. ಈ ವಿವಿಧ ಅಲೆಮಾರಿ ಸಮುದಾಯಗಳ ವಿಷಯದಲ್ಲಿಯೂ ಅದೇ ತಪ್ಪಾಗಿರುವುದು. ಉದಾಹರಣೆಗೆ ಹಗಲು ಹೊತ್ತಿನಲ್ಲಿ ವೇಷ ಹಾಕಿಕೊಂಡು ಅಭಿನಯಿಸುವವರನ್ನು ಹಗಲುವೇಷಗಾರರೆಂಬ ವೃತ್ತಿಯಿಂದ ಗುರುತಿಸುವರು. ಆದರೆ, ಇವರು ಮೂಲತಃ ಬುಡ್ಗಜಂಗಮರಾಗಿದ್ದಾರೆ. ದುರುಗಮುರಗಿ ಎಂಬುದು ಸಿಂಧೊಳ್ಳರ ವೃತ್ತಿಸೂಚಕ ಪದವಾಗಿದೆ.

ಇದೇ ಹಾದಿಯಲ್ಲಿ ಶಿಳ್ಳೇಕ್ಯಾತ, ಕೋಲೆಬಸವ, ಹಾವಾಡಿಗ, ಕೊಂಡಮಾಮ ಮತ್ತು ಬುಡಬುಡಕಿ, ಬಾಳಸಂತೋಷಿ, ಹಂದಿಜೋಗೇರಂತಹ ವೃತ್ತಿಸೂಚಕ ಪದವು ಜಾತಿಸೂಚಕ ಪದ ಎಂಬ ಪರಿಕಲ್ಪನೆ ಯಿಂದ ಕೂಡಿದ್ದಾಗಿವೆ.

ಸಂಶೋಧನಾ ಸಮೀಕ್ಷೆಯ ಅಂಕಿ-ಅಂಶಗಳಲ್ಲಿ ಯಾದಗಿರಿ ಜಿಲ್ಲೆಯು ಸೇರಿದಂತೆ ಶಹಾಪುರ ಮತ್ತು ಸುರುಪುರ ತಾಲೂಕಿನ ವಿವಿಧ ಅಲೆಮಾರಿ ಸಮುದಾಯಗಳ ಎಲ್ಲ ಕಳ್ಳುಬಳ್ಳಿಯವರನ್ನು ಒಳಪಡಿಸಿ ಸಮೀಕ್ಷೆಯಿಂದ ಈ ಕೆಳಗಿನಂತೆ ಜನಸಂಖ್ಯೆ ಪ್ರಮಾಣವನ್ನು ದಾಖಲಿಸಲಾಗಿದೆ.

ಕೋಷ್ಟಕ: ೨.೭೧. ಕರ್ನಾಟಕ ರಾಜ್ಯದ ಯಾದಗಿರಿ ಜಿಲ್ಲೆಯ ವಿವಿಧ ಅಲೆಮಾರಿ ಸಮುದಾಯಗಳ ಕುಟುಂಬವಾರು, ಲಿಂಗವಾರು ಜನಸಂಖ್ಯೆ

ಸಂ.	ತಾಲೂಕು	ಕುಟುಂಬ	ಒಟ್ಟು	ಗಂಡು	ಹೆಣ್ಣು
೧.	ಯಾದಗಿರಿ	೩೩೦	೧೫೮೩	೭೯೩	೭೯೦
೨.	ಶಹಾಪುರ	೧೩೧	೬೪೫	೩೩೩	೩೧೨
೩.	ಸುರುಪುರ	೧೭೭	೮೩೫	೪೨೬	೪೦೯
	ಒಟ್ಟು	೬೩೮	೩೦೬೩	೧೫೫೨	೧೫೧೧

ಕೋಷ್ಟಕ ೨.೭೧.ರಲ್ಲಿ ಯಾದಗಿರಿ ಜಿಲ್ಲೆಯಲ್ಲಿ ಒಟ್ಟಾರೆಯಾಗಿ ಲಭ್ಯವಾದ ೬೩೮ ವಿವಿಧ ಅಲೆಮಾರಿ ಸಮುದಾಯಗಳ ಒಟ್ಟು ಕುಟುಂಬಗಳು. ಒಟ್ಟು ಜನಸಂಖ್ಯೆ ೩೦೬೩ ಇದರಲ್ಲಿ ಪುರುಷರು ಶೇ. ೫೧ರಷ್ಟು, ಮಹಿಳೆಯರು ಶೇ. ೪೯ರಷ್ಟು ಇದ್ದಾರೆ.

ಇವರು ಯಾದಗಿರಿಯನ್ನು ಒಳಗೊಂಡಂತೆ, ಕೊಂಕಲ್, ಗುರುಮಿಟಕ್ಕಲ್, ಯರಗೋಳ, ಸೈದಾಪುರ, ಹತ್ತಿಕುಣಿಯಲ್ಲಿ ನೆಲೆಯಾಗಿರುವರು. ಶಹಾಪುರ ತಾಲೂಕು ಒಳಗೊಂಡಂತೆ, ಅತ್ತಿಗೂಡುರು, ಖಾನಪುರ, ಗೋಗಿ, ದಿಗ್ಗಿ, ದೋರನಹಳ್ಳಿ, ಸಗರದಲ್ಲಿ ನೆಲೆಯಾಗಿರುವರು. ಮತ್ತು ಸುರುಪುರ ತಾಲೂಕು ಒಳಗೊಂಡಂತೆ, ಕಕ್ಕೇರಿ, ಕೆಂಬಾವಿ, ಕೊಡೇಕಲ್ಲು, ತಿಂಥಣಿ, ನಾರಾಯಣಪುರ, ಲಕ್ಷ್ಮೀಪುರ, ಹುಣಸಗಿ ಸೇರಿದಂತೆ ಒಟ್ಟಾರೆ ಯಾದಗಿರಿ ಜಿಲ್ಲೆಯಲ್ಲಿ ೨೧ ನೆಲೆಗಳಲ್ಲಿ ಕಾಣಸಿಗುವರು. ಇಲ್ಲಿ ತಿಳಿಸಿರುವ ನೆಲೆ ಮತ್ತು ಕುಟುಂಬಗಳ ಸಂಖ್ಯೆಯೇ ಅಂತಿಮವೆಂದು ಭಾವಿಸಬಾರದು. ಏಕೆಂದರೆ ಮೇಲೆ ತಿಳಿಸಿದ ವಿವಿಧ ಅಲೆಮಾರಿ ಸಮುದಾಯದವರು ಊರಿಂದೂರಿಗೆ ಅಲೆದಾಡುವ ಸಮುದಾಯ ಗಳಾಗಿವೆ. ಅಲೆಮಾರಿಗಳಾಗಿ ಬೇರೆ ಕಡೆ ವಲಸೆ ಹೋಗಿದ್ದರಿಂದ ಹೆಚ್ಚಿನ ಕುಟುಂಬಗಳನ್ನು ಕ್ಷೇತ್ರ ಕಾರ್ಯ ಅಧ್ಯಯನ ವ್ಯಾಪ್ತಿಗೆ ತೆಗೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ. ಆದರೆ ಯಾವುದೇ ನಿರ್ವಂಚನೆಯಿಲ್ಲದೆ ಗುಡಿಸಲು, ಗುಡಾರಗಳಲ್ಲಿ ವಾಸಿಸುವವರನ್ನು ಹೆಚ್ಚು ವೈಜ್ಞಾನಿಕ ಸಮೀಕ್ಷೆಗೆ ಒಳಪಡಿಸಲಾಗಿದೆ. ಹಾಗೆಯೇ ಅತೀ ಹೆಚ್ಚಿನ ಅಲೆಮಾರಿ ಸಮುದಾಯಗಳ ಕುಟುಂಬಗಳನ್ನು ಹೊಂದಿರುವ ತಾಲೂಕು ಯಾದಗಿರಿ ಆಗಿದೆ. ಇಲ್ಲಿ ಒಟ್ಟಾರೆ ೩೩೦ ಕುಟುಂಬಗಳು ವಾಸಿಸುತ್ತವೆ.

ಅದರಂತೆ ಶಹಾಪುರ ತಾಲೂಕಿನಲ್ಲಿ ಒಟ್ಟಾರೆ ೧೩೧ ಕುಟುಂಬಗಳು ಹಾಗೂ ಸುರುಪುರ ತಾಲೂಕಿನಲ್ಲಿ ೧೭೭ ಅಲೆಮಾರಿ ಕುಟುಂಬಗಳ ನೆಲೆಗಳನ್ನು ಕೋಷ್ಟಕ ೨.೭೧.ರಲ್ಲಿ ಕಾಣಬಹುದಾಗಿದೆ. ಇಂದು ಇವರ ಅಲೆದಾಟವೇನಿದ್ದರೂ ಕೇವಲ ಹೊಟ್ಟೆಪಾಡಿಗಾಗಿ ವ್ಯಾಪಾರವನ್ನು ಅರಸುತ್ತ ಊರಿಂದ ಊರಿಗೆ ಅಲೆದಾಡುವುದಾಗಿದೆ.

ಪ್ರತ್ಯೇಕವಾಗಿ ಜಿಲ್ಲೆಯ ಮೂರು ತಾಲೂಕು(ಯಾದಗಿರಿ, ಶಹಾಪುರ, ಸುರುಪುರ)ಗಳ ನೆಲೆಗಳಲ್ಲಿ ಅಲೆಮಾರಿ ಸಮುದಾಯಗಳ ಜನಸಂಖ್ಯಾ ಪ್ರಮಾಣವನ್ನು ಅವಲೋಕಿಸಿ ವಿಶ್ಲೇಷಿಸಲಾಗಿದೆ. ಕೋಷ್ಟಕ ೨.೭೨.ನ್ನು ಗಮನಿಸಿದಾಗ ಯಾದಗಿರಿ ತಾಲೂಕು ಒಳಗೊಂಡಂತೆ ಆರು ನೆಲೆಗಳಲ್ಲಿ ವಿವಿಧ ಅಲೆಮಾರಿ ಸಮುದಾಯಗಳನ್ನು ಸಮೀಕ್ಷಿಸಲಾಗಿದೆ. ಅವುಗಳಲ್ಲಿ ಕೊಂಕಲ್ (೨೧), ಗುರುಮಿಟಕ್ಕಲ್ (೩೫), ಯರಗೋಳು (೨೫), ಯಾದಗಿರಿ (೧೯೧), ಸೈದಾಪುರ (೩೫), ಹತ್ತಿಕುಣಿ ಗ್ರಾಮದಲ್ಲಿ (೨೩) ಒಟ್ಟಾರೆಯಾಗಿ ೩೩೦ ಕುಟುಂಬಗಳಿವೆ. ಯಾದಗಿರಿ ಜಿಲ್ಲೆ ಮತ್ತು ವ್ಯಾಪಾರಿ ಕೇಂದ್ರವಾಗಿರುವುದರಿಂದ ೧೯೧ ವಿವಿಧ ಅಲೆಮಾರಿ ಕುಟುಂಬಗಳು ಜೀವನ ನಿರ್ವಹಣೆಯ ದೃಷ್ಟಿಯ ಹಿನ್ನೆಲೆಯಲ್ಲಿ ಹೆಚ್ಚಾಗಿ ನೆಲೆಯಾಗಿರುವುದು ಕಂಡುಬರುತ್ತದೆ.

ಕೋಷ್ಟಕ ೨.೭೨. ಯಾದಗಿರಿ ಜಿಲ್ಲೆಯ ಅಲೆಮಾರಿ ಸಮುದಾಯಗಳ ನೆಲೆಗಳವಾರು, ಕುಟುಂಬವಾರು ಹಾಗೂ ಲಿಂಗವಾರು ಜನಸಂಖ್ಯೆ ಪ್ರಮಾಣ

ನೆಲೆಗಳು	ಅಲೆಮಾರಿ ಸಮುದಾಯಗಳು	ಕುಟುಂಬ	ಜನಸಂಖ್ಯೆ		
			ಗಂಡು	ಹೆಣ್ಣು	ಒಟ್ಟು
ಕೊಂಕಲ್	ಬೈಲಪತ್ತಾರ	೭	೧೦	೧೨	೨೨
	ಗೊಂದಳಿ	೪	೧೨	೯	೨೧
	ಜೋಗಿ	೪	೬	೬	೧೨
	ಸುಡುಗಾಡುಸಿದ್ಧ	೬	೨೨	೨೩	೪೫
	ಒಟ್ಟು	೨೧	೫೦	೫೦	೧೦೦
ಗುರುಮಿಟಕಲ್	ಚನ್ನದಾಸ	೨೪	೬೦	೭೨	೧೩೨
	ಬುಡ್ಗಜಂಗಮ್	೬	೨೩	೧೬	೩೯
	ಬೈಲಪತ್ತಾರ	೩	೮	೧೨	೨೦
	ಹಂಡಿಜೋಗಿ	೨	೫	೯	೧೪
	ಒಟ್ಟು	೩೫	೯೬	೧೦೯	೨೦೫
ಯರಗೋಳು	ಬುಡಬುಡಕಿ	೬	೧೧	೧೯	೩೦
	ಗೊಂದಳಿ	೭	೧೬	೧೬	೩೨
	ಜೋಗಿ	೪	೯	೬	೧೫
	ಕೋಲೆಬಸವ	೮	೧೭	೧೧	೨೮
	ಒಟ್ಟು	೨೫	೫೩	೫೨	೧೦೫

ಯಾದಗಿರಿ	ಕೊರವ	೩೯	೧೦೧	೯೫	೧೯೬
	ಕೋಲೆಬಸವ	೭	೧೩	೧೦	೨೩
	ಗೊಂದಳಿ	೨೦	೪೫	೫೧	೯೬
	ಘಿಸಾಡಿ	೬	೧೬	೧೬	೩೨
	ಚನ್ನದಾಸ	೫	೧೭	೧೧	೨೮
	ಬುಡ್ಗಜಂಗಮ್	೩೧	೭೫	೬೮	೧೪೩
	ಬೈಲಪತ್ತಾರ	೨೭	೭೧	೬೧	೧೩೨
	ಶಿಳ್ಳೇಕ್ಯಾತ	೧೮	೪೨	೪೭	೮೯
	ಸಿಕ್ಲಿಗರ	೫	೧೨	೯	೨೧
	ಸಿಂಧೋಳ್ಳು	೨೧	೩೬	೪೨	೭೮
	ಹಾವಾಡಿಗ	೩	೯	೬	೧೫
	ಹೆಳವ	೯	೨೭	೨೨	೪೯
	ಒಟ್ಟು	೧೯೧	೪೬೪	೪೩೮	೯೦೨
ಸೈದಾಪುರ	ಬುಡ್ಗಜಂಗಮ್	೩೫	೮೫	೯೦	೧೭೫
ಹತ್ತಿಕುಣಿ	ಕೋಲೆಬಸವ	೬	೧೩	೧೦	೨೩
	ಚನ್ನದಾಸ	೬	೧೧	೧೯	೩೦
	ಜೋಗಿ	೭	೧೩	೧೦	೨೩
	ಸುಡುಗಾಡುಸಿದ್ಧ	೪	೮	೧೨	೨೦
	ಒಟ್ಟು	೨೩	೪೫	೫೧	೯೬
ಯಾದಗಿರಿ ತಾಲೂಕಿನ ಒಟ್ಟು		೩೩೦	೭೯೩	೭೯೦	೧೫೮೩

ಕೋಷ್ಟಕ ೨.೭೩.ನ್ನು ಗಮನಿಸಿದಾಗ ಶಹಾಪುರ ತಾಲೂಕು ಸೇರಿದಂತೆ ಏಳು ನೆಲೆಗಳಲ್ಲಿ ವಿವಿಧ ಅಲೆಮಾರಿ ಸಮುದಾಯಗಳನ್ನು ಸಮೀಕ್ಷಿಸಲಾಗಿದೆ. ಅವುಗಳಲ್ಲಿ ಶಹಾಪುರ (೩೩), ಅತ್ತಿಗೂಡುರು (೧೦), ಖಾನಪುರ (೭), ಗೋಗಿ (೧೬), ದಿಗ್ಗಿ (೭), ದೋರನಹಳ್ಳಿ (೨೦), ಸಗರ (೩೮) ಗ್ರಾಮದಲ್ಲಿ ಒಟ್ಟಾರೆಯಾಗಿ ೧೩೧ ಕುಟುಂಬಗಳಿವೆ. ಶಹಾಪುರ ತಾಲೂಕು ಹಾಗೂ ಸಗರ, ದೊರನಹಳ್ಳಿ ವ್ಯಾಪಾರಿ ಕೇಂದ್ರವಾಗಿರುವುದರಿಂದ ವಿವಿಧ ಅಲೆಮಾರಿ ಕುಟುಂಬಗಳು ಜೀವನ ನಿರ್ವಹಣೆಯ ಹಿನ್ನೆಲೆಯಲ್ಲಿ ಹೆಚ್ಚಾಗಿ ನೆಲೆಯಾಗಿರುವುದು ಕಂಡುಬರುತ್ತದೆ.

ಕೋಷ್ಟಕ ೨.೭೩. ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ಅಲೆಮಾರಿ ಸಮುದಾಯಗಳ ನೆಲೆಗಳವಾರು, ಕುಟುಂಬವಾರು ಹಾಗೂ ಲಿಂಗವಾರು ಜನಸಂಖ್ಯೆ ಪ್ರಮಾಣ

ನೆಲೆಗಳು	ಅಲೆಮಾರಿ ಸಮುದಾಯಗಳು	ಕುಟುಂಬ	ಜನಸಂಖ್ಯೆ		
			ಗಂಡು	ಹೆಣ್ಣು	ಒಟ್ಟು
ಅತ್ತಿಗೂಡುರು	ಕೊರಮ	೪	೬	೬	೧೨
	ಬುಡ್ಗಜಂಗಮ್	೬	೧೫	೧೯	೩೪
	ಒಟ್ಟು	೧೦	೨೧	೨೫	೪೬

ಖಾನಪುರ	ಫಿಸಾಡಿ	೪	೯	೬	೧೫
	ಬುಡ್ಗಜಂಗಮ್	೩	೭	೯	೧೬
	ಒಟ್ಟು	೭	೧೬	೧೫	೩೧
ಗೋಗಿ	ಬುಡ್ಗಜಂಗಮ್	೧೬	೩೪	೩೫	೬೯
ದಿಗ್ಗಿ	ಗೊಂದಳಿ	೬	೨೨	೨೩	೪೫
	ಜೋಗೇರ	೧	೩	೨	೫
	ಒಟ್ಟು	೭	೨೫	೨೫	೫೦
ದೋರನಹಳ್ಳಿ	ಕೊರಮ	೬	೧೦	೧೨	೨೨
	ಬುಡ್ಗಜಂಗಮ್	೪	೭	೯	೧೬
	ಬೈಲಪತ್ತಾರ್	೪	೯	೬	೧೫
	ಹೆಳವ	೬	೧೨	೧೨	೨೪
	ಒಟ್ಟು	೨೦	೩೮	೩೯	೭೭
ಶಹಾಪುರ	ಬುಡ್ಗಜಂಗಮ್	೨೩	೮೧	೬೪	೧೪೫
	ಶಿಳ್ಳೇಕ್ಯಾತ	೧೦	೨೪	೨೦	೪೪
	ಒಟ್ಟು	೩೩	೧೦೫	೮೪	೧೮೯
ಸಗರ	ಕೊರಮ	೮	೧೮	೧೩	೩೧
	ಗೊಂದಳಿ	೪	೧೦	೧೫	೨೫
	ಬುಡ್ಗಜಂಗಮ್	೧೬	೩೯	೩೯	೭೮
	ಹೆಳವ	೧೦	೨೭	೨೨	೪೯
	ಒಟ್ಟು	೩೮	೯೪	೮೯	೧೮೩
ಶಾಹಪುರ ತಾಲೂಕಿನ ಒಟ್ಟು		೧೩೧	೩೩೩	೩೧೨	೬೪೫

ಕೋಷ್ಟಕ ೨.೭೪ನ್ನು ಗಮನಿಸಿದಾಗ ಸುರುಪುರ ತಾಲೂಕು ಸೇರಿದಂತೆ ಎಂಟು ನೆಲೆಗಳಲ್ಲಿ ವಿವಿಧ ಅಲೆಮಾರಿ ಸಮುದಾಯಗಳನ್ನು ಸಮೀಕ್ಷಿಸಲಾಗಿದೆ. ಅವುಗಳಲ್ಲಿ ಸುರುಪುರ (೮೭), ಕಕ್ಕೇರಿ (೩೪), ಕೆಂಬಾವಿ (೧೧), ಕೊಡೆಕಲ್ಲು (೧೧), ತಿಂಥಣಿ (೧೦), ನಾರಾಯಣಪುರ (೬), ಲಕ್ಷ್ಮೀಪುರ (೫), ಹುಣಸಗಿ (೧೩) ಗ್ರಾಮದಲ್ಲಿ ಒಟ್ಟಾರೆಯಾಗಿ ೧೬೪ ಕುಟುಂಬಗಳಿವೆ. ಸುರುಪುರ ತಾಲೂಕು ಮತ್ತು ವ್ಯಾಪಾರಿ ಕೇಂದ್ರವಾಗಿರುವುದರಿಂದ ವಿವಿಧ ಅಲೆಮಾರಿ ಕುಟುಂಬಗಳು ಜೀವನ ನಿರ್ವಹಣೆಯ ಹಿನ್ನೆಲೆಯಲ್ಲಿ ಹೆಚ್ಚಾಗಿ ನೆಲೆಯಾಗಿರುವುದು ಕಂಡುಬರುತ್ತದೆ.

ಕೋಷ್ಟಕ ೨.೭೪. ಯಾದಗಿರಿ ಜಿಲ್ಲೆಯ ಸುರುಪುರ ತಾಲೂಕಿನ ಅಲೆಮಾರಿ ಸಮುದಾಯಗಳ ನೆಲೆಗಳವಾರು, ಕುಟುಂಬವಾರು ಹಾಗೂ ಲಿಂಗವಾರು ಜನಸಂಖ್ಯೆ ಪ್ರಮಾಣ

ನೆಲೆಗಳು	ಅಲೆಮಾರಿ ಸಮುದಾಯಗಳು	ಕುಟುಂಬ	ಜನಸಂಖ್ಯೆ		
			ಗಂಡು	ಹೆಣ್ಣು	ಒಟ್ಟು
ಕಕ್ಕೇರಿ	ಗೊಂದಳಿ	೧೪	೩೦	೨೬	೫೬
	ಘಿಸಾಡಿ	೮	೧೮	೧೩	೩೧
	ಬುಡ್ಗಜಂಗಮ್	೬	೨೨	೨೩	೪೫
	ಬೈಲಪತ್ತಾರ	೬	೧೫	೧೯	೩೪
	ಒಟ್ಟು	**೩೪**	**೮೫**	**೮೧**	**೧೬೬**
ಕೆಂಬಾವಿ	ಬುಡ್ಗಜಂಗಮ್	೬	೧೫	೧೬	೩೧
	ಸಿಂಧೋಳ್ಳು	೫	೯	೧೨	೨೧
	ಒಟ್ಟು	**೧೧**	**೨೪**	**೨೮**	**೫೨**
ಕೊಡೆಕಲ್ಲು	ಗೊಂದಳಿ	೬	೧೦	೧೨	೨೨
	ಬುಡ್ಗಜಂಗಮ್	೫	೯	೧೧	೨೦
	ಒಟ್ಟು	**೧೧**	**೧೯**	**೨೩**	**೪೨**
ತಿಂಥಣಿ	ಸಿಂಧೋಳ್ಳು	೧೦	೧೩	೧೦	೨೩
ನಾರಾಯಣಪುರ	ಬುಡ್ಗಜಂಗಮ್	೬	೧೧	೧೯	೩೦
ಲಕ್ಷ್ಮೀಪುರ	ಹೆಳವ	೫	೧೨	೧೨	೨೪
ಸುರಪುರ	ಗೊಂದಳಿ	೪	೧೦	೧೨	೨೨
	ಶಿಳ್ಳೇಕ್ಯಾತ	೮	೧೮	೧೩	೩೧
	ಸಿಂಧೋಳ್ಳು	೫	೧೦	೧೫	೨೫
	ಬುಡ್ಗಜಂಗಮ್	೫೭	೧೪೯	೧೨೮	೨೭೭
	ಹೆಳವ	೧೩	೩೫	೩೦	೬೫
	ಒಟ್ಟು	**೮೭**	**೨೨೨**	**೧೯೮**	**೪೨೦**
ಹುಣಸಗಿ	ಬುಡ್ಗಜಂಗಮ್	೧೩	೩೯	೩೯	೭೮
ಸುರುಪುರ ತಾಲೂಕಿನ ಒಟ್ಟು		**೧೭೭**	**೪೨೫**	**೪೧೦**	**೮೩೫**

ಅಲೆಮಾರಿ ಸಮುದಾಯಗಳ ವಯೋಗುಂಪುವಾರು ಜನಸಂಖ್ಯೆ

ಒಂದು ಸಮುದಾಯದ ಶೈಕ್ಷಣಿಕ ಮತ್ತು ಆರ್ಥಿಕ ಅಂಶಗಳನ್ನು ಅರಿಯಲು ಆ ಸಮುದಾಯದ ಜನರ ವಯೋಗುಂಪುಗಳನ್ನು ತಿಳಿಯುವುದು ಅಗತ್ಯವಾಗಿರುತ್ತದೆ. ವಿವಿಧ ಅಲೆಮಾರಿ ಸಮುದಾಯಗಳ ಈ ಅಂಶಗಳನ್ನು ಅರಿಯಲು ಆರು ವರ್ಷದೊಳಗಿರುವ ಅಂಕಿ-ಅಂಶಗಳನ್ನು ಕಲೆ ಹಾಕಲಾಗಿದೆ. ಈ ವಯೋಗುಂಪಿನವರನ್ನು ಹೊರಗಿಟ್ಟು ಸಾಕ್ಷರತೆಯ ಪ್ರಮಾಣವನ್ನು ಪಡೆಯಲಾಗಿದೆ.

ಕೋಷ್ಟಕ: ೨.೭೫ ಯಾದಗಿರಿ ಜಿಲ್ಲೆಯ ಅಲೆಮಾರಿ ಸಮುದಾಯಗಳ ವಯೋಗುಂಪುವಾರು ಲಿಂಗವಾರು ಜನಸಂಖ್ಯೆ ಪ್ರಮಾಣ

ಸಂ.	ವಯೋಗುಂಪು	ಗಂಡು	ಹೆಣ್ಣು	ಒಟ್ಟು
೧	೦೦-೦೬	೧೧೧	೧೦೮	೨೧೯
೨	೦೭-೧೭	೨೨೪	೨೩೭	೪೬೧
೩	೧೮-೪೦	೩೫೩	೩೫೫	೭೦೮
೪	೪೧-೬೦	೮೧	೬೫	೧೪೬
೫	೬೧ರ ಮೇಲ್ಪಟ್ಟು	೨೪	೨೫	೪೯
	ಒಟ್ಟು	೭೯೩	೭೯೦	೧೫೮೩

ಕೊಷ್ಟಕ ೨.೭೫ರಲ್ಲಿ ಇವರ ಒಟ್ಟು ಜನಸಂಖ್ಯೆಯಲ್ಲಿ ೦-೬ ವರ್ಷದೊಳಗಿನ ವಯೋಗುಂಪಿನವರ ಪ್ರಮಾಣ ಶೇ. ೧೩.೮೩ರಷ್ಟಿದೆ. ೭-೧೭ ವರ್ಷದೊಳಗಿನ ವಯೋಗುಂಪನ್ನು ಸಾಕ್ಷರಸ್ಥರ ಗುಂಪು ಎಂದು ಅವರ ಪ್ರಮಾಣ ಶೇ. ೨೯.೧೨ರಷ್ಟಿದೆ. ೧೮ರಿಂದ ೪೦ ವಯೋಗುಂಪನ್ನು ಕಾಯಕಾರ್ಹ ಗುಂಪು ಎಂದು ಗ್ರಹಿಸಲಾಗುವುದು. ಇವರ ಪ್ರಮಾಣವು ಶೇ. ೪೪.೭೩ರಷ್ಟಿರುವುದು. ೪೧ರಿಂದ ೬೦ರ ವಯೋಗುಂಪನ್ನು ಅನುಭವಿ ಗುಂಪೆಂದು ಈ ಗುಂಪಿನಲ್ಲಿ ಇವರ ಪ್ರಮಾಣವು ಶೇ. ೯.೨೨ರಷ್ಟಿದೆ. ೬೧ರ ಮೇಲ್ಪಟ್ಟ ವಯೋಗುಂಪು ಅವಲಂಬಿತ, ಅಸಹಾಯಕ ಹಾಗೂ ಕಾಯಕ ಅರ್ಹವಲ್ಲದ ಗುಂಪೆಂದು ಪರಿಗಣಿಸಲಾಗಿರುವುದು. ಈ ಗುಂಪಿನಲ್ಲಿಯ ಇವರ ಪ್ರಮಾಣವು ಶೇ. ೩.೧೦ರಷ್ಟಿದೆ.

ಕೋಷ್ಟಕ: ೨.೭೬ ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕು ಅಲೆಮಾರಿ ಸಮುದಾಯಗಳ ವಯೋಗುಂಪುವಾರು ಲಿಂಗವಾರು ಜನಸಂಖ್ಯೆ ಪ್ರಮಾಣ

ಸಂ.	ವಯೋಗುಂಪು	ಗಂಡು	ಹೆಣ್ಣು	ಒಟ್ಟು
೧	೦೦-೦೬	೫೪	೪೭	೧೦೧
೨	೦೭-೧೭	೧೦೧	೮೬	೧೮೭
೩	೧೮-೪೦	೧೩೪	೧೩೯	೨೭೩
೪	೪೧-೬೦	೨೯	೨೭	೫೬
೫	೬೧ರ ಮೇಲ್ಪಟ್ಟು	೧೫	೧೩	೨೮
	ಒಟ್ಟು	೩೩೩	೩೧೨	೬೪೫

ಕೊಷ್ಟಕ ೨.೭೬ರಲ್ಲಿ ಇವರ ಒಟ್ಟು ಜನ ಸಂಖ್ಯೆಯಲ್ಲಿ ೦-೬ ವರ್ಷದೊಳಗಿನ ವಯೋಗುಂಪಿನವರ ಪ್ರಮಾಣ ಶೇ. ೧೫.೬೬ರಷ್ಟಿದೆ. ೭-೧೭ ವರ್ಷದೊಳಗಿನ ವಯೋಗುಂಪನ್ನು ಸಾಕ್ಷರಸ್ಥರ ಗುಂಪು

ಎಂದು ಅವರ ಪ್ರಮಾಣ ಶೇ. ೨೮.೯೯ರಷ್ಟಿದೆ. ೧೮ರಿಂದ ೪೦ ವಯೋಗುಂಪನ್ನು ಕಾಯಕಾರ್ಹ ಗುಂಪು ಎಂದು ಗ್ರಹಿಸಲಾಗುವುದು. ಇವರ ಪ್ರಮಾಣವು ಶೇ. ೪೨.೩೩ರಷ್ಟಿರುವುದು. ೪೧ರಿಂದ ೬೦ರ ವಯೋಗುಂಪನ್ನು ಅನುಭವಿ ಗುಂಪೆಂದು ಈ ಗುಂಪಿನಲ್ಲಿ ಇವರ ಪ್ರಮಾಣವು ಶೇ. ೮.೬೮ರಷ್ಟಿದೆ. ೬೧ರ ಮೇಲ್ಪಟ್ಟ ವಯೋಗುಂಪು ಅವಲಂಬಿತ, ಅಸಹಾಯಕ ಹಾಗೂ ಕಾಯಕರ್ಹವಲ್ಲದ ಗುಂಪೆಂದು ಪರಿಗಣಿಸಲಾಗಿರುವುದು. ಈ ಗುಂಪಿನಲ್ಲಿಯ ಇವರ ಪ್ರಮಾಣವು ಶೇ. ೪.೩೪ರಷ್ಟಿದೆ.

ಕೋಷ್ಟಕ: ೨.೭೮ ಯಾದಗಿರಿ ಜಿಲ್ಲೆಯ ಸುರುಪುರ ತಾಲೂಕು ಅಲೆಮಾರಿ ಸಮುದಾಯಗಳ ವಯೋಗುಂಪುವಾರು ಲಿಂಗವಾರು ಜನಸಂಖ್ಯೆ ಪ್ರಮಾಣ

ಸಂ.	ವಯೋಗುಂಪು	ಗಂಡು	ಹೆಣ್ಣು	ಒಟ್ಟು
೧	೦೦-೦೬	೭೪	೬೫	೧೩೯
೨	೦೭-೧೭	೧೨೪	೧೨೨	೨೪೬
೩	೧೮-೪೦	೧೭೨	೧೭೭	೩೪೯
೪	೪೧-೬೦	೪೪	೩೬	೮೦
೫	೬೧ರ ಮೇಲ್ಪಟ್ಟು	೧೧	೧೦	೨೧
	ಒಟ್ಟು	೪೨೫	೨೧೦	೮೩೫

ಕೊಷ್ಟಕ ೨.೭೮ರಲ್ಲಿ ಇವರ ಒಟ್ಟು ಜನ ಸಂಖ್ಯೆಯಲ್ಲಿ ೦-೬ ವರ್ಷದೊಳಗಿನ ವಯೋಗುಂಪಿನವರ ಪ್ರಮಾಣ ಶೇ. ೧೬.೬೫ರಷ್ಟಿದೆ. ೭-೧೭ ವರ್ಷದೊಳಗಿನ ವಯೋಗುಂಪನ್ನು ಸಾಕ್ಷರಸ್ಥರ ಗುಂಪು ಎಂದು ಅವರ ಪ್ರಮಾಣ ಶೇ. ೨೯.೪೬ರಷ್ಟಿದೆ. ೧೮ರಿಂದ ೪೦ ವಯೋಗುಂಪನ್ನು ಕಾಯಕಾರ್ಹ ಗುಂಪು ಎಂದು ಗ್ರಹಿಸಲಾಗುವುದು. ಇವರ ಪ್ರಮಾಣವು ಶೇ. ೪೧.೮೦ರಷ್ಟಿರುವುದು. ೪೧ರಿಂದ ೬೦ರ ವಯೋಗುಂಪನ್ನು ಅನುಭವಿ ಗುಂಪೆಂದು ಈ ಗುಂಪಿನಲ್ಲಿ ಇವರ ಪ್ರಮಾಣವು ಶೇ. ೯.೫೮ರಷ್ಟಿದೆ. ೬೧ರ ಮೇಲ್ಪಟ್ಟ ವಯೋಗುಂಪು ಅವಲಂಬಿತ, ಅಸಹಾಯಕ ಹಾಗೂ ಕಾಯಕರ್ಹ ವಲ್ಲದ ಗುಂಪೆಂದು ಪರಿಗಣಿಸಲಾಗಿರುವುದು. ಈ ಗುಂಪಿನಲ್ಲಿಯ ಇವರ ಪ್ರಮಾಣವು ಶೇ. ೨.೫೧ರಷ್ಟಿದೆ.

ಉಪಸಂಹಾರ

ಯಾದಗಿರಿ ಜಿಲ್ಲೆಯ ಅಲೆಮಾರಿಗಳ ಸ್ಥಿತಿಗತಿಗಳ ಕುರಿತು ಅಧ್ಯಯನ ಮಾಡಲು ಮುಖ್ಯ ಕಾರಣ ಈ ಪ್ರದೇಶದ ಅಲೆಮಾರಿಗಳ ಆರ್ಥಿಕ, ಸಾಮಾಜಿಕ ಸ್ಥಿತಿಗಳ ಕುರಿತು ಅಧ್ಯಯನ ಮಾಡುವುದಾಗಿದೆ. ಈ ಪ್ರದೇಶವು ಆಂಧ್ರದ ಗಡಿಗೆ ಹೊಂದಿಕೊಂಡಿದೆ. ಇಲ್ಲಿಗೆ ರೈಲು ಸಂಪರ್ಕದ ವ್ಯವಸ್ಥೆ ಇರುವುದರಿಂದ ಅನೇಕ ಅಲೆಮಾರಿಗಳು ಬಂದು ತಮ್ಮ ವೃತ್ತಿಗಳನ್ನು ನಿರ್ವಹಿಸುತ್ತಿದ್ದಾರೆ. ಕೆಲವರು ಪ್ರದರ್ಶನ ಮಾಡಿ ಮತ್ತು ತಾವು ಉತ್ಪಾದಿಸಿದ ವಸ್ತುಗಳನ್ನು ಮಾರಾಟ ಮಾಡಿ ಕೆಲವು ದಿನಗಳವರೆಗೆ ಇದ್ದು ಮತ್ತೆ ಬೇರೆ ಕಡೆ ಹೋಗುತ್ತಿರುವುದು ಕ್ಷೇತ್ರ ಅಧ್ಯಯನದಿಂದ ತಿಳಿದುಬಂದಿದೆ.

ಯಾದಗಿರಿಯು ಕರ್ನಾಟಕ ರಾಜ್ಯದ ೩೦ನೇ ಜಿಲ್ಲೆಯಾಗಿ ಘೋಷಣೆಯಾಗಿದ್ದು ಮೂರು ತಾಲೂಕು ಅಂದರೆ ಶಹಾಪುರ ಮತ್ತು ಸುರಪುರ ತಾಲೂಕುಗಳು ನೀರಾವರಿ ಪ್ರದೇಶಗಳನ್ನು ಒಳಗೊಂಡಿದ್ದರೆ, ಯಾದಗಿರಿ ತಾಲೂಕಿನಲ್ಲಿ ಮಳೆ ಮತ್ತು ಕೆರೆ ನೀರನ್ನು ಅವಲಂಬಿಸಿ ಬೇಸಾಯ ನಡೆಸುವುದು ಕಂಡುಬರುತ್ತದೆ.

ಚಾರಿತ್ರಿಕವಾಗಿ ಈ ಜಿಲ್ಲೆಯು ಅನೇಕ ಪ್ರೇಕ್ಷಣೀಯ ಸ್ಥಳಗಳನ್ನು ಒಳಗೊಂಡಿದೆ. ಈಗ ತಾನೆ ಹುಟ್ಟಿದ ಈ ಜಿಲ್ಲೆಯಲ್ಲಿ ಅನೇಕ ಸಮಸ್ಯೆಗಳು ಇವೆ. ಅವುಗಳನ್ನು ಪರಿಹರಿಸಿಕೊಳ್ಳುವ ನಿಟ್ಟಿನಲ್ಲಿ ಪ್ರಯತ್ನ ನಡೆಸುತ್ತಿರುವುದನ್ನು ಕಾಣಬಹುದು.

ಯಾದಗಿರಿ ಜಿಲ್ಲೆಯಲ್ಲಿ ಕೆಲವು ನೆಲೆ ಕಂಡುಕೊಂಡಿರುವ, ಕೆಲವು ನೆಲೆ ಕಂಡುಕೊಳ್ಳಲು ಪ್ರಯತ್ನಿಸುವ ಯಾವುದೇ ನೆಲೆ ಇಲ್ಲದೇ ಜೀವನ ಸಾಗಿಸುವ ಅನೇಕ ಸಮುದಾಯಗಳನ್ನು ಅಧ್ಯಯನದಿಂದ ಗುರುತಿಸಲು ಪ್ರಯತ್ನಿಸಿ ಅವುಗಳ ಸ್ಥೂಲ ಪರಿಚಯವನ್ನು ಇಲ್ಲಿ ನೀಡಲಾಗಿದೆ. ಈ ಎಲ್ಲ ಅಲೆಮಾರಿಗಳು ಸರ್ವೆ ಸಾಮಾನ್ಯವಾಗಿ ಒಂದೇ ರೀತಿಯ ಸಾಮಾಜಿಕ ಆರ್ಥಿಕ ಮತ್ತು ಶೈಕ್ಷಣಿಕ ಸಮಸ್ಯೆಗಳನ್ನು ಎದುರಿಸುತ್ತಿವೆ. ಕೆಲವು ಅಲೆಮಾರಿಗಳು ಒಂದೇ ಜಾತಿಗೆ ಸೇರಿದ್ದರೂ. ಅವುಗಳನ್ನು ಬೇರೆ ಬೇರೆ ಹೆಸರಿನಿಂದ ಕರೆಯಲಾಗುತ್ತದೆ. ಇದರ ಪರಿಣಾಮದಿಂದಾಗಿ ಒಂದೇ ಜಾತಿಯ ಅಲೆಮಾರಿಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದರೆ, ಅದೇ ಜಾತಿಯ ಬೇರೆ ಹೆಸರಿನಿಂದ ಕರೆಯುವ ಸಮುದಾಯವನ್ನು ಹಿಂದುಳಿದ ವರ್ಗದ ಪಟ್ಟಿಯಲ್ಲಿ ಕಾಣಬಹುದಾಗಿದೆ. ಈ ಅಲೆಮಾರಿಗಳಲ್ಲಿ ಅನೇಕ ಉಪಪಂಗಡಗಳಿದ್ದು ಬೇರೆ ಬೇರೆ ವೃತ್ತಿಗಳನ್ನು ಮಾಡುತ್ತಾ ಅದೇ ವೃತ್ತಿ ಹೆಸರಿನಿಂದ ಇವರನ್ನು ಗುರುತಿಸುವುದು ಅಧ್ಯಯನದಿಂದ ತಿಳಿದುಬರುತ್ತದೆ. ಹೀಗಾಗಿ ಕೆಲವು ಅಲೆಮಾರಿಗಳು ಸರ್ಕಾರದ ಸೌಲಭ್ಯಗಳಿಂದ ವಂಚಿತವಾಗಿರುವುದನ್ನು ಕಾಣಬಹುದಾಗಿದೆ.

ಅಡಿಟಿಪ್ಪಣಿ

೧. ದ್ವಾರಕನಾಥ ಸಿ.ಎಸ್., ಹಿಂದುಳಿದ ವರ್ಗದ ಆಯೋಗದ ವರದಿ, 'ಸಂಕುಲ', ಪು.೨೫೬

೨. ರಾಮಯ್ಯ ಬಿ.ಪಿ., ಕರ್ನಾಟಕದ ಬುಡಕಟ್ಟುಗಳು ಸಂಪುಟ-೨, ಕೊರಮರು, ಪು.೨೮೪

೩. ಅದೇ ಪು. ೨೮೭

೪. ಶಿವಾನಂದ ಪಾಚಂಗಿ, ಗೋಂಧಳಿ, ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೮.

೫. ಮಂಜುನಾಥ ಬೇವಿನಕಟ್ಟಿ, ಕರ್ನಾಟಕದ ಬುಡಕಟ್ಟುಗಳು ಸಂಪುಟ-೨. ಸುಡುಗಾಡು ಸಿದ್ಧರು, ಪು.೪೨೧

೬. ಅದೇ ಪು. ೪೨೮

೭. ಬಸವರಾಜ ಎಸ್. ಹಿರೇಮಠ, ಅಂಜಲಿ ಸಾಳುಂಕಿ, ಘಿಸಾಡಿ, ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೮, ಪು. ೧೫

೮. ಯಲ್ಲಪ್ಪ ಹಿಮ್ಮಡಿ ಬಿ., ಚೆನ್ನದಾಸರು, ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೮, ಪು. ೫೩

೯. ದ್ವಾರಕನಾಥ ಸಿ.ಎಸ್., ಹಿಂದುಳಿದ ವರ್ಗದ ಆಯೋಗದ ವರದಿ, 'ಸಂಕುಲ', ಪು.೩೩೯

೧೦. ಚಂದ್ರಪ್ಪ ದುಷಂತ್ ಎಂ., ಹಂಡಿಜೋಗಿ, ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೮, ಪು. ೧೦

೧೧. ಬಾಲಗುರುಮೂರ್ತಿ, ಪ್ರತಾಪ ರಾ. ಬಹುರೂಪಿ, ಬುಡ್ಗಜಂಗಮ, ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೮, ಪು. ೧೧

೧೨. ಭಾಸ್ಕರ್ ಟಿ.ಎಮ್., ಸುಡುಗಾಡು ಸಿದ್ಧರು: ಒಂದು ಸಂಸ್ಕೃತಿಕ ಅಧ್ಯಯನ, ಪು.೧೩-೧೪

೧೩. ದಾದಾಪೀರ್, ಕರ್ನಾಟಕದ ಬುಡಕಟ್ಟುಗಳು ಸಂಪುಟ-೨, ಕುರುಮಾಮಾ, ಪು.೩೪೯

೧೪. ಅದೇ ಪು. ೩೯೨

೧೫. ವಿಶ್ವನಾಥ ಎಲ್. ಬೈಲಪತ್ತಾರ, ಜಗನ್ನಾಥ ಎಂ. ಬೈಲ್‌ಪತ್ತಾರ, ಬೈಲ್‌ಪತ್ತಾರ, ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೮, ಪು. ೭

೧೬. ಚಲವಾದಿ ಬಸವರಾಜ, ಶೇಖರಸಿಂಗ್ ಎಸ್., ಸಿಕ್ಲಿಗರ,ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೮, ಪು.೭೯೮

೧೭. ದೊಡ್ಡಮನಿ ಲೋಕರಾಜ ಎ.ಕೆ., ಶ್ರೀನಿವಾಸ ರಾವುಲೋಳ ಎಸ್., ಸಿಂಧೋಳ್ಳು, ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೮, ಪು. ೨೦

೧೮. ದುರ್ಗಾದಾಸ್ ಕೆ.ಆರ್., ಕರ್ನಾಟಕದ ಬುಡಕಟ್ಟುಗಳು ಸಂಪುಟ-೨, ದುರುಗಮುರಗಿಯರು, ಪು.೪೫೧

೧೯. ಸಣ್ಣ ವೀರಣ್ಣ ದೊಡ್ಡಮನಿ ಮಹೇಂದರ್ ರಾವ್ ಸಾಸ್‌ನೀಕ್, ಶಿಳ್ಳೇಕ್ಯಾತ, ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೮, ಪು. ೧೯

೨೦. ಸಿಂಗ್ ಕೆ.ಎಸ್., ಸಮಾಜ ವಿಜ್ಞಾನಿ, ಕ್ಯಾಸ್ಟ್ ಆ್ಯಂಡ್ ಟ್ರೈಬ್ಸ್ ಆಫ್ ಇಂಡಿಯಾ

೨೧. ಹೆಳವರ್ ಎಂ.ಎಸ್., ಹೆಳವರು, ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೮, ಪು. ೧೫

೨೨. ಕೇಶವನ್ ಪ್ರಸಾದ್, ಮರಬ್ಬಿ ಕೆ., ಕರ್ನಾಟಕದ ಬುಡಕಟ್ಟುಗಳು ಸಂಪುಟ-೨, ದೊಂಬರು, ಪು.೫೦೧

೨೩. ದ್ವಾರಕನಾಥ ಸಿ.ಎಸ್., ಹಿಂದುಳಿದ ವರ್ಗದ ಆಯೋಗದ ವರದಿ, 'ಸಂಕುಲ', ಪು.೨೫೬

೨೪ ಮೇತ್ರಿ ಕೆ.ಎಂ., (ಪ್ರಸಂ.) ಅಲೆಮಾರಿ ಸಮುದಾಯಗಳ ಅಧ್ಯಯನ, ೨೦೦೮ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೨೫. ದ್ವಾರಕನಾಥ ಸಿ.ಎಸ್., ಹಿಂದುಳಿದ ವರ್ಗದ ಆಯೋಗದ ವರದಿ, 'ಸಂಕುಲ', ಪು.೨೫೬

ಅಧ್ಯಾಯ ೩

ಯಾದಗಿರಿ ಜಿಲ್ಲೆಯ ಅಲೆಮಾರಿಗಳ ಸಾಮಾಜಿಕ ಸ್ಥಿತಿಗತಿ

೩.೧. ಕುಟುಂಬ ವ್ಯವಸ್ಥೆ

೩.೨. ಆಚರಣೆಗಳು

೩.೩. ಮೂಢನಂಬಿಕೆಗಳು

೩.೪. ಉಡುಗೆ ತೊಡುಗೆಗಳು

೩.೫. ಆಹಾರ ಪದ್ಧತಿಗಳು

೩.೬ ಅಲೆಮಾರಿಗಳ ಶಿಕ್ಷಣ

೩.೭. ಆರೋಗ್ಯ

೩.೮. ಅಲೆಮಾರಿ ಮಹಿಳೆಯರ ಸ್ಥಾನಮಾನ

೩.೯. ನ್ಯಾಯ ಪಂಚಾಯಿತಿ

೩.೧೦. ವಾಸದ ನೆಲೆಗಳು

೩.೧೧. ಅಲೆಮಾರಿಗಳ ಭಾಷೆ

ಅಧ್ಯಾಯ ಮೂರು

ಯಾದಗಿರಿ ಜಿಲ್ಲೆಯ ಅಲೆಮಾರಿಗಳ ಸಾಮಾಜಿಕ ಸ್ಥಿತಿಗತಿ

ಇಂದಿನ ಆಧುನಿಕ ಯುಗದಲ್ಲಿ ಅಲೆಮಾರಿಗಳ ಸಾಮಾಜಿಕ ಸ್ಥಾನಮಾನವನ್ನು ನೋಡಿದಾಗ ಅವರು ಇಂದಿಗೂ ಸಮಾಜದಿಂದ ದೂರ ಉಳಿದಿರುವುದು ಕಂಡುಬರುತ್ತದೆ. ಆದರೂ ಅಲೆಮಾರಿಗಳು ಈ ಆಧುನಿಕ ಸಮಾಜದಲ್ಲಿ ಅವರದೇ ಆದ ಸಾಮಾಜಿಕ ವ್ಯವಸ್ಥೆಯನ್ನು ಕಂಡುಕೊಂಡಿದ್ದಾರೆ. ಅಲೆಮಾರಿಗಳ ಈ ವ್ಯವಸ್ಥೆಯು ಪ್ರತಿಯೊಂದು ವಸ್ತುವಿನ ನಡುವೆ, ಜೀವಿಗಳ ನಡುವೆ ವ್ಯವಸ್ಥಿತವಾಗಿ ಏರ್ಪಟ್ಟಿರುತ್ತದೆ. ಈ ರೀತಿಯ ಸಾಮಾಜಿಕ ವ್ಯವಸ್ಥೆಯು ಎಲ್ಲ ಸಮುದಾಯಗಳಲ್ಲೂ ಕಂಡುಬರುವುದು ಸಹಜವಾದುದು. ಆದರೆ ಎಲ್ಲ ಸಮುದಾಯಗಳಲ್ಲೂ ಒಂದೇ ರೀತಿಯಾದ ಸಾಮಾಜಿಕ ವ್ಯವಸ್ಥೆ ರಚಿತವಾಗಿರುತ್ತದೆ ಎಂದು ಹೇಳುವುದು ತಪ್ಪಾಗುತ್ತದೆ. ಏಕೆಂದರೆ ಈ ಸಾಮಾಜಿಕ ವ್ಯವಸ್ಥೆಯು ಆರ್ಥಿಕ ರಚನೆ, ಸಮುದಾಯಗಳ ಸಂಬಂಧಗಳ ಸಮಷ್ಟಿತನದ ಭಾಗವಹಿಸುವಿಕೆ, ನಡೆದುಕೊಳ್ಳುವಿಕೆ, ಪರಿಸರ, ಕಾಲ, ಸ್ಥಳ ಮತ್ತು ಸಂದರ್ಭಕ್ಕನುಸಾರವಾಗಿ ರಚಿತಗೊಂಡಿರುತ್ತದೆ. ಉದಾಹರಣೆಗೆ ನೆಲೆ ನಿಂತವರ ಸಾಮಾಜಿಕ ವ್ಯವಸ್ಥೆಗೂ, ಅಲೆಮಾರಿ ಸಮುದಾಯಗಳ ಸಾಮಾಜಿಕ ವ್ಯವಸ್ಥೆಗೂ ಭಿನ್ನತೆಯನ್ನು ಕಾಣಬಹುದು. ನೆಲೆ ನಿಂತವರ ಆರ್ಥಿಕ ವ್ಯವಸ್ಥೆ, ಸಂಬಂಧಗಳ ವ್ಯವಸ್ಥೆ, ಸಮುದಾಯದ ಗಾತ್ರ, ಸೀಮಿತ ಪ್ರದೇಶ ಒಂದು ರೀತಿಯಾದರೆ ಅಲೆಮಾರಿಗಳದ್ದು ಇದಕ್ಕೆ ತೀರ ಭಿನ್ನವಾದ ರೀತಿಯಾಗಿದೆ. ಅಂದರೆ ಅಲೆಮಾರಿಗಳಲ್ಲಿ ಸಂಚಾರಿ ಸಾಮಾಜಿಕ ವ್ಯವಸ್ಥೆಯನ್ನು ಕಾಣಬಹುದು.

ಅದರಂತೆ ನೆಲೆ ನಿಂತ ಸಮುದಾಯಗಳ ರಚನೆ, ಬೇರೆ ಗುರಿ, ಉದ್ದೇಶಗಳನ್ನು ಹೊಂದಿರುತ್ತದೆ. ಯಾದಗಿರಿ ಜಿಲ್ಲೆಯ ಅಲೆಮಾರಿಗಳ ಸಾಮಾಜಿಕ ವ್ಯವಸ್ಥೆಯನ್ನು ಈ ಕೆಳಗಿನ ಅಂಶಗಳ ಮೂಲಕ ಕಂಡುಕೊಳ್ಳಬಹುದಾಗಿದೆ.

೩.೧. ಕುಟುಂಬ ವ್ಯವಸ್ಥೆ

ಕುಟುಂಬ: ಅಲೆಮಾರಿಗಳದು ಸಂಚಾರಿ ಜೀವನವೇ ಆಗಿದ್ದರೂ ಅವರು ಕುಟುಂಬ ವ್ಯವಸ್ಥೆಯನ್ನು ದೂರೀಕರಿಸುವುದಿಲ್ಲ. ಇವರಲ್ಲಿ ಮಾತೃಸ್ಥಾನೀಯ ಮತ್ತು ಪಿತೃಸ್ಥಾನೀಯ ಕುಟುಂಬಗಳನ್ನು ಕಾಣಬಹುದು. ಕೆಲವು ಸಮುದಾಯಗಳು ಅವಿಭಕ್ತ ಕುಟುಂಬದಲ್ಲಿಯೂ ಬದುಕುತ್ತಿದ್ದಾರೆ. ಆದರೆ ಇತ್ತೀಚಿನ ದಿನಮಾನಗಳಲ್ಲಿ ಈ ಅಲೆಮಾರಿಗಳು ತಮಗೆ ಜೀವನ ಸಾಗಿಸಲು ಸೂಕ್ತವಾದ ಪ್ರದೇಶ ವನ್ನು ಆಯ್ಕೆ ಮಾಡಿಕೊಂಡು ವಿಭಕ್ತ ಕುಟುಂಬ ವ್ಯವಸ್ಥೆಯನ್ನು ಮುಂದುವರೆಸುತ್ತಿದ್ದಾರೆ.

ಸ್ತ್ರೀ-ಪುರುಷರಿಬ್ಬರೂ ಕುಟುಂಬದಲ್ಲಿ ತಮಗೆ ಬೇಕಾದ ಮತ್ತು ವಹಿಸಿಕೊಂಡ ಕೆಲಸಗಳನ್ನು ಮಾಡುತ್ತಾರೆ. ಸ್ತ್ರೀಯರು ತಮಗೆ ಸಂಬಂಧಪಟ್ಟ ಕೆಲಸಗಳಾದ ಸ್ವಚ್ಛತೆ, ದುಡಿಮೆ, ಮನೆಕೆಲಸ, ಧಾನ್ಯಗಳ ಸಂಗ್ರಹಣೆ, ಕಟ್ಟಿಗೆ ತರುವುದು ಮುಂತಾದವನ್ನು ಮಾಡುತ್ತಾರೆ. ಒಟ್ಟಾರೆ ಸದಸ್ಯರೊಂದಿಗೆ ಸಹಬಾಳ್ವೆಯಿಂದ ತಮ್ಮ ಪಾತ್ರಕ್ಕೆ ತಕ್ಕಂತೆ ಕೆಲಸ ನಿರ್ವಹಿಸುವರು. ಸ್ತ್ರೀ-ಪುರುಷರಿಬ್ಬರೂ ಹೆಂಡತಿಗೆ ಗಂಡನಾಗಿ, ಮಗುವಿಗೆ ತಂದೆಯಾಗಿ, ತಂದೆ ತಾಯಿಗೆ ಮಗನಾಗಿ, ತಂಗಿ-ತಮ್ಮನಿಗೆ ಅಣ್ಣನಾಗಿ ವೈವಿಧ್ಯಮಯ ಪಾತ್ರಗಳನ್ನು ಮಾಡುತ್ತಾ ಕುಟುಂಬಜೀವನ ಸಾಗಿಸುವರು. ಈ ವ್ಯವಸ್ಥೆಯು ಅಲೆಮಾರಿ ಗಳ ಸಾಮಾಜಿಕ ಜೀವನದಲ್ಲಿ ಅತಿ ಪ್ರಮುಖವಾದ ಪಾತ್ರವನ್ನು ನಿರ್ವಹಿಸುವುದು.

ಕುಟುಂಬಜೀವನ ಭಾವನೆಯ ಪರಿಣಾಮದಿಂದಾಗಿ ಅಲೆಮಾರಿಗಳು ನಾವು, ನಮ್ಮವರು, ನನ್ನ ಜನ ಎಂಬ ಭಾವನೆಗಳನ್ನು ಬೆಳೆಸಿಕೊಳ್ಳುವುದರ ಜೊತೆಗೆ ನಾವೆಲ್ಲರೂ ಒಂದೇ ಸಮುದಾಯದಲ್ಲಿ ಸೇರಿದವರು. ಇದು ನಮ್ಮ ಸಮುದಾಯ ಎಂಬ ಭಾವನೆ ಅವರಲ್ಲಿ ಮೂಡುವುದು. ಅಲೆಮಾರಿಗಳು ಪರಸ್ಪರ ಸುಖ ದುಃಖಗಳಲ್ಲಿ ಭಾಗಿಯಾಗುತ್ತ ಹೊಸ ಆಸಕ್ತಿ ಒಲವುಗಳನ್ನು ಬೆಳೆಸುವುದರೊಂದಿಗೆ ಪರಸ್ಪರ ಆತ್ಮೀಯ ಭಾವನೆಯನ್ನು ಕಾಣಬಹುದಾಗಿದೆ. ಅಲೆಮಾರಿಗಳು ಎಲ್ಲಿಯೇ ಹೋಗಲಿ ಸರ್ವೇ ಸಾಮಾನ್ಯವಾಗಿ ಒಂದೇ ಕಡೆ ನೆಲೆಸುವುದನ್ನು ಕಾಣಬಹುದು. ಇದರಿಂದ ಅವರ ಆತ್ಮಬಲ ಮತ್ತು ಸ್ಥೈರ್ಯವು ಬೆಳೆಯುತ್ತದೆ. ಇದ್ದುದರಲ್ಲಿಯೇ ತಮ್ಮ ಬದುಕನ್ನು ಕಟ್ಟಿಕೊಳ್ಳಲು ಪ್ರಯತ್ನಿಸಿ ಕೊಳ್ಳುವುದನ್ನು ಕಾಣಬಹುದು. ಇತ್ತೀಚಿನ ದಿನಗಳಲ್ಲಿ ಅಲೆಮಾರಿಗಳಿಗೆ ಶಾಶ್ವತವಾದ ವಾಸದ ನೆಲೆ ಇಲ್ಲದೇ ಇರುವುದರಿಂದ ಕುಟುಂಬಜೀವನ ಸಂಚಾರಿಜೀವನವೇ ಆಗಿರುವುದನ್ನು ಕಾಣಬಹುದು.

ಅಲೆಮಾರಿ ಕುಟುಂಬದಲ್ಲಿ ಸಾಮಾನ್ಯವಾಗಿ ತಂದೆ, ತಾಯಿ, ಮಕ್ಕಳು ಮತ್ತು ಮೊಮ್ಮಕ್ಕಳು ಚಿಕ್ಕಪ್ಪ-ಚಿಕ್ಕಮ್ಮ, ದೊಡ್ಡಪ್ಪ-ದೊಡ್ಡಮ್ಮ ಇರುವುದು ಸಾಮಾನ್ಯವಾಗಿದೆ. ಈ ಅಲೆಮಾರಿ ಸಮುದಾಯಗಳಲ್ಲಿ

ಎಲ್ಲ ಸದಸ್ಯರ ಜೊತೆಯಲ್ಲಿ ಅಳಿಯನೂ ಕೂಡ ಅದೇ ಕುಟುಂಬದ ಒಬ್ಬ ಸದಸ್ಯನಾಗಿರುತ್ತಾನೆ. ವಿವಾಹ ಮಾಡಿಕೊಳ್ಳುವ ತನಕ ಈ ಕುಟುಂಬದ ಸದಸ್ಯನಾಗಿದ್ದು ಅವರಂತೆ ಕೆಲಸ ಕಾರ್ಯಗಳಲ್ಲಿ ನಿರತನಾಗಿರುತ್ತಾನೆ. ಸಂಪತ್ತಿನಲ್ಲಿ ಈತನಿಗೆ ಅಧಿಕಾರವಿರುವುದಿಲ್ಲ. ಕಾರಣ ಈತನ ಉದ್ದೇಶ ವಿವಾಹ ವಾಗಲು ಕನ್ಯೆಯ ತಂದೆ-ತಾಯಿಯನ್ನು ಮನಮೆಚ್ಚಿಸುವುದಕ್ಕಾಗಿ ಬಂದವನಾಗಿರುತ್ತಾನೆ. ವಿವಾಹವಾದ ನಂತರ ಎಂದಿನಂತೆ ತನ್ನ ಹೆಂಡತಿಯ ಜೊತೆಗೂಡಿ ತನ್ನ ಕುಟುಂಬಕ್ಕೆ ಮರಳುತ್ತಾನೆ.

ಅಲೆಮಾರಿ ಕುಟುಂಬಕ್ಕೆ ಜೀವನ ನಡೆಸಲು ಒಂದು ವೃತ್ತಿ ಅನಿವಾರ್ಯವಾಗಿದೆ. ಇಲ್ಲದಿದ್ದರೆ ಜೀವನ ನಡೆಸುವುದು ಕಷ್ಟವಾಗುತ್ತದೆ. ಆದ್ದರಿಂದ ಪ್ರತಿಯೊಂದು ಕುಟುಂಬವೂ ಒಂದಿಲ್ಲೊಂದು ವೃತ್ತಿಯಲ್ಲಿ ತೊಡಗಿರುತ್ತದೆ. ಇದರಿಂದ ಅಲೆಮಾರಿಗಳು ತಮ್ಮ ಪಾರಂಪರಿಕ ವೃತ್ತಿಗಳನ್ನು ಸ್ವಲ್ಪಮಟ್ಟಿಗೆ ಮುಂದುವರಿಸಿಕೊಂಡು ಹೋಗುತ್ತಿರುವುದನ್ನು ಕಾಣಬಹುದು.

ಅಲೆಮಾರಿ ಸಮುದಾಯಗಳಲ್ಲಿ ಪುರುಷನು ಕುಟುಂಬದ ಯಜಮಾನನಾಗಿ ಕಾರ್ಯ ನಿರ್ವಹಿಸುತ್ತಿರುತ್ತಾನೆ. ಮೊದಲು ತಂದೆಯು ಆ ಸಮುದಾಯದ ಸಂಚಾಲಕನಾಗಿ ಕಾರ್ಯನಿರ್ವಹಿಸುತ್ತಿರುತ್ತಾನೆ. ಆತನ ಮರಣದ ನಂತರ ಆ ಸ್ಥಾನಕ್ಕೆ ಆ ಕುಟುಂಬದ ಹಿರಿಯ ಮಗನು ಯಜಮಾನನ ಸ್ಥಾನಕ್ಕೆ ಬರುವನು. ಅವನು ತಂದೆಯು ನಿರ್ವಹಿಸುತ್ತಿದ್ದ ಕೆಲಸ ಕಾರ್ಯಗಳನ್ನು ನಿರ್ವಹಿಸುವನು. ಈ ರೀತಿಯ ತಂದೆಯ ನಂತರ ಮಗನು ಆ ಕುಟುಂಬದ ಜವಾಬ್ದಾರಿಯನ್ನು ಸಾಂಪ್ರದಾಯಿಕವಾಗಿ ತೆಗೆದುಕೊಳ್ಳುವುದನ್ನು ಕಾಣಬಹುದು. ನೆಲೆನಿಂತ ಇತರ ಸಮುದಾಯಗಳಲ್ಲಿ ಕೂಡ ಇದನ್ನು ನೋಡಬಹುದು. ಅದೇ ರೀತಿಯ ಯಜಮಾನಿಕೆಯನ್ನು ಅಲೆಮಾರಿಗಳ ಬಹುತೇಕ ಸಮುದಾಯಗಳಲ್ಲಿ ಕಾಣಬಹುದು.

ಅಲೆಮಾರಿ ಕುಟುಂಬಗಳಲ್ಲಿ ಕುಟುಂಬದ ಸದಸ್ಯರೆಲ್ಲರೂ ಪ್ರೀತಿ, ವಿಶ್ವಾಸ ಮತ್ತು ಸಹಕಾರದಿಂದ ಇರುತ್ತಾರೆ. ಸ್ತ್ರೀಯರಿಗೆ ಕುಟುಂಬದ ಜವಾಬ್ದಾರಿಯು ಹೆಚ್ಚಾಗಿ ಇರುವುದರೊಂದಿಗೆ ಅವಳು ಪುರುಷನಂತೆ ಹೊರಗಡೆ ದುಡಿಯುತ್ತಾಳೆ. ಉದಾಹರಣೆಗೆ ಕಸಬರಿಗೆ, ಬುಟ್ಟಿ, ಪ್ಲಾಸ್ಟಿಕ್ ವಸ್ತುಗಳ ಮಾರಾಟ, ಗೃಹೋಪಯೋಗಿ ವಸ್ತುಗಳ ಮಾರಾಟ ಮುಂತಾದವು. ಕುಟುಂಬ ನಿರ್ವಹಣೆಯಲ್ಲಿ ಸ್ತ್ರೀ-ಪುರುಷರ ಪಾತ್ರ ಮತ್ತು ಶ್ರಮ ಪ್ರಮುಖವಾಗಿದೆ. ಮನೆಯಲ್ಲಿ ಮಕ್ಕಳ ಪೋಷಣೆ ಜೊತೆಯಲ್ಲಿ ಕುಟುಂಬದ ನಿರ್ವಹಣೆಗೆ ವಿವಿಧ ಕೆಲಸಗಳನ್ನು ಮಾಡುತ್ತ ಭಿಕ್ಷೆ ಬೇಡುತ್ತ ಕುಟುಂಬದ ಹೊಣೆಗಾರಿಕೆಯನ್ನು ಸಮಾನವಾಗಿ ಹಂಚಿಕೊಂಡು ನಿರ್ವಹಿಸುವುದನ್ನು ಕಾಣಬಹುದು.

ಅಲೆಮಾರಿಗಳಲ್ಲಿ ನಾಮಕರಣ ವ್ಯವಸ್ಥೆ: ಅಲೆಮಾರಿ ಸಮುದಾಯಗಳು ತಮ್ಮದೇ ಜಾತಿಯ ಹೆಸರುಗಳನ್ನು ನಾಮಕರಣ ಮಾಡುವುದುಂಟು. ಬದಲಾದ ಆಧುನಿಕತೆಯ ದಿವಸಗಳಲ್ಲಿ ವೃತ್ತಿಗಳನ್ನು ಸೂಚಿಸುವ ಹೆಸರು ಇಡುವುದನ್ನು ಅಲೆಮಾರಿಗಳಲ್ಲಿ ಕಾಣಬಹುದು. ಆಧುನಿಕ ಪ್ರಭಾವಕ್ಕೆ ಒಳಗಾದ

ಅಲೆಮಾರಿಗಳು ಚಲನಚಿತ್ರದ ನಾಯಕ, ನಾಯಕಿಯರ ಹೆಸರುಗಳನ್ನು ಇಡುವರು. ಉದಾಹರಣೆಗೆ ಸುದೀಪ್, ಅಂಬರೀಷ್, ಚಿರಂಜೀವಿ, ನಾಯಕಿಯರಾದ ರಮ್ಯ, ರಕ್ಷಿತಾ, ಸುಹಾಸಿನಿ ಇತ್ಯಾದಿ ಮತ್ತು ರಾಜಕೀಯ ವ್ಯಕ್ತಿಗಳ ಹೆಸರುಗಳನ್ನು ಇಡುವುದು ಕಾಣಬಹುದು. ಉದಾ: ರಾಹುಲ್‌ಗಾಂಧಿ, ಗಗನ, ಕುಮಾರಸ್ವಾಮಿ, ರಾಮುಲು ಇತ್ಯಾದಿ.

ಅಲೆಮಾರಿ ಸಮುದಾಯ ಸೂಚಿಸುವ ನಾಮಗಳು

ಗೊಂದಲಿಗರ ರಾಮಪ್ಪ, ಚೆನ್ನದಾಸರ ಹಣಮಂತಪ್ಪ, ದೊಂಬ್ರ ಭರಮಪ್ಪ, ಬಹುರೂಪಿ ರಾಮಣ್ಣ, ಸಿಳ್ಳೇಕ್ಯಾತ ಯಮನಪ್ಪ, ವೇಷಗಾರ ಶಂಕ್ರಪ್ಪ, ಬುರ್ರಕಥೆ ಲಕ್ಷ್ಮೀ, ಕೊರವರ ಮಾನಪ್ಪ, ಪೋತರಾಜ ಮಾರೆಪ್ಪ, ದುರುಗಮ್ಮ ಮರಗಮ್ಮ, ಜೋಗೇರ ಸುದೀಪ, ಶಿಕಾರಿ ರಾಮು, ಹೆಳವರ ರಾಮಪ್ಪ, ಕುರುಮಾಮ ಸಿದ್ಧಪ್ಪ, ಹಾವಾಡಿಗರ ಹುಸೇನಪ್ಪ, ಬೈಲ್‌ಪತ್ತಾರ ಲಚಮಪ್ಪ, ಸಿಕ್ಲಿಗರ್ ಮೋಹನ್‌ಸಿಂಗ್, ಫಿಸಾಡಿ ಪರಮಣ್ಣ ಇತ್ಯಾದಿ.

ಪ್ರಾಚೀನ ಕಾಲದಲ್ಲಿ ಬೆಟ್ಟ ಗುಡ್ಡ, ಮರ, ಕಾಡು ಉತ್ಪನ್ನ, ಪ್ರಾಣಿಪಕ್ಷಿಗಳ ಹೆಸರುಗಳು ವ್ಯಕ್ತಿಗಳ ಹೆಸರುಗಳಲ್ಲಿ ಬೆರೆತುಹೋಗಿತ್ತು. ಮಾನವನು ನಾಗರಿಕತೆ ರೂಢಿಸಿಕೊಂಡಂತೆ ನಾಮಕರಣ ವ್ಯವಸ್ಥೆಯಲ್ಲಿ ಅಪಾರ ಬದಲಾವಣೆಯಾಗಿರುವುದು ಸಹಜ. ನಾಮದಿಂದ ಸಮುದಾಯ ಮತ್ತು ಜಾತಿಯ ಹೆಸರನ್ನು ಗುರುತಿಸಬಹುದಾಗಿದೆ. ಕೆಲವು ಅಲೆಮಾರಿ ಸಮುದಾಯಗಳಲ್ಲಿ ತಮ್ಮ ಮಕ್ಕಳಿಗೆ ಸತ್ತುಹೋದ ತಮ್ಮ ಯಜಮಾನರ ಹೆಸರುಗಳನ್ನು ಇಡುವುದು ಗಮನಿಸಬಹುದಾಗಿದೆ. ಈ ಪದ್ಧತಿ ನೆಲೆ ನಿಂತ ಸಮುದಾಯದಲ್ಲಿ ಕೂಡ ಕಂಡುಬರುತ್ತದೆ. ಹೆಸರು ಇಡುವುದು ಕೂಡ ಇತ್ತೀಚಿನ ದಿನಗಳಲ್ಲಿ ಒಂದು ಫ್ಯಾಶನ್ ಆಗಿ ಕಾಣುತ್ತದೆ. ಹಿಂದಿನ ಹೆಸರುಗಳಾದ ಮಲ್ಲಪ್ಪ, ಕಲ್ಲಪ್ಪ, ಬುಡ್ಡಪ್ಪ, ಸಣ್ಣಪ್ಪ, ಕಾಮಪ್ಪ, ಭೀಮಪ್ಪ ಎಂಬ ಹೆಸರುಗಳನ್ನು ಬಿಟ್ಟು ಅವುಗಳನ್ನು ಭೀಮೇಶ್ ಕುಮಾರ, ಮಲ್ಲೇಶ್ ಎಂಬ ಆಧುನಿಕ ರೀತಿಯ ಪದಗಳನ್ನು ಬಳಕೆ ಮಾಡಿಕೊಂಡು ಹೆಸರಿಡುವುದು ಕಾಣಬಹುದಾಗಿದೆ.

೩.೨. ಆಚರಣೆಗಳು

ಅಲೆಮಾರಿಗಳಲ್ಲಿ ಕಂಡುಬರುವ ಆಚರಣೆಗಳು ದೈವಸಂಬಂಧಿಯಾದ ಹಬ್ಬ, ಜಾತ್ರೆ, ಉತ್ಸವ, ಪೂಜೆಗಳು ಒಂದು ಬಗೆಯಾದರೆ, ಹುಟ್ಟು, ಮದುವೆ, ಕೂಡಿಕೆ, ಸಾವಿನ ಸಂದರ್ಭದ ಆಚರಣೆಗಳು ಮತ್ತೊಂದು ಬಗೆಯದ್ದಾಗಿರುತ್ತವೆ. ಮೂಢನಂಬಿಕೆಯ ದಾಸರಾಗಿರುವ ಇವರು ತಮ್ಮ ಕುಲಪದ್ಧತಿಗಳನ್ನು ಸರಿಯಾಗಿ ನಡೆಸದಿದ್ದರೆ ತಮಗೆ ಒಳ್ಳೆಯದಾಗುವುದಿಲ್ಲ. ದೆವ್ವಗಳು ಕಾಡುತ್ತವೆ ಎಂದು ನಂಬುತ್ತಾರೆ. ಸಾಮಾನ್ಯವಾಗಿ ಅಲೆಮಾರಿಗಳು ಈ ಕೆಳಗಿನ ಆಚರಣೆಗಳನ್ನು ತಮ್ಮ ಸಂಪ್ರದಾಯಕ್ಕೆ ಅನುಗುಣವಾಗಿ ಆಚರಿಸಿಕೊಂಡು ಬರುತ್ತಾರೆ.

೧. ಜನನ, ನಾಮಕರಣ, ಮೈನೆರದ ಶಾಸ್ತ್ರ, ಮದುವೆ, ಸಾವು

೨. ಹಬ್ಬ ಹರಿದಿನಗಳಾದ ಯುಗಾದಿ, ನವರಾತ್ರಿ, ದೀಪಾವಳಿ, ದುರ್ಗಾಷ್ಟಮಿ, ಕಾಮನಹಬ್ಬ, ಮುಂತಾದ ಆಧುನಿಕ ಕಾಲಘಟ್ಟದಲ್ಲಿ ಆಚರಿಸುವ ಹಬ್ಬಗಳನ್ನು ಕೂಡ ಇಂದು ಇವರು ಆಚರಿಸುತ್ತಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಅವರ ಹೇಳಿಕೆಯಿಂದ ತಿಳಿದುಬಂದಿದೆ.

ಅಲೆಮಾರಿ ಸಮುದಾಯದ ಜನರು ನಂಬಿಕೆ ಮತ್ತು ಆಚರಣೆಗಳಿಗೆ ಹೆಚ್ಚು ಮಹತ್ವ ನೀಡುವುದನ್ನು ಕಾಣಬಹುದು. ಯಾವುದೇ ಅಲೆಮಾರಿಗಳು ಧಾರ್ಮಿಕ ವಿಷಯದಲ್ಲಿ ತುಂಬಾ ಮಹತ್ವದ ಪಾತ್ರ ವಹಿಸುತ್ತಾರೆ. ಅವರು ದೇವರುಗಳಿಗೋಸ್ಕರ ಅರೆಬೆತ್ತಲೆ ಸೇವೆ, ದೀರ್ಘದಂಡ ನಮಸ್ಕಾರ, ದೇವರ ಮುಂದೆ ಬಲಿ ಕೊಡುವುದು ಹೀಗೆ ಅನೇಕ ಆಚರಣೆಗಳನ್ನು ಮಾಡುತ್ತಾರೆ.

"ಕುಟುಂಬ ವ್ಯವಸ್ಥೆಯು ಬಿಗಿಯಾಗಿರಲೆಂದು ಕರುಣೆ, ಸಹಕಾರ, ಪ್ರೀತಿ, ಅನುಕಂಪ ಇತ್ಯಾದಿಗಳನ್ನು ಜೀವನದಲ್ಲಿ ರೂಢಿಸಿಕೊಂಡಿದ್ದಾರೆ".[೪] ಆದ್ದರಿಂದ ಅಲೆಮಾರಿಗಳು ಪುರುಷಪ್ರಧಾನ ದೇವರುಗಳಿಗೆ ಅಷ್ಟೇನೂ ಮಹತ್ವ ನೀಡದೆ ಸ್ತ್ರೀಶಕ್ತಿ ದೇವತೆಗಳಾದ ದುರುಗಮ್ಮ, ಮಾರಮ್ಮ, ಮರಗಮ್ಮ, ಕಾಳಿ, ದುರ್ಗ, ಎಲ್ಲಮ್ಮ, ಪೋಚಮ್ಮ ಎಂಬ ಅನೇಕ ಹೆಣ್ಣುದೇವತೆಗಳನ್ನು ಆರಾಧಿಸುವುದುಂಟು. ಅರೆಬೆತ್ತಲೆ ಸೇವೆ, ಬಲಿ ಆಚರಣೆಗಳನ್ನು ಮಾಡುವುದರ ಮೂಲಕ ದೇವತೆಗಳನ್ನು ತೃಪ್ತಿಪಡಿಸಿ ಅವರಿಗೆ ಪ್ರಸನ್ನರಾಗಿ ಮತ್ತು ಅವರು ವರಗಳನ್ನು ದಯಪಾಲಿಸುತ್ತಾಳೆ. ಹಾಗೆಯೇ ನಮ್ಮ ಕಷ್ಟಗಳನ್ನು ಪರಿಹರಿಸುತ್ತಾಳೆ. ಇಲ್ಲವಾದರೆ ಕೋಪಗೊಂಡು ರೋಗಗ್ರಸ್ತರಾಗಿ ಹಸಿವಿನಿಂದ ಬಳಲುವಂತೆ ಮಾಡುತ್ತಾಳೆ. ಅದಕ್ಕಾಗಿ ಅವರು ದೇವತೆಗಳನ್ನು ಪೂಜಿಸುತ್ತಾರಂತೆ.

ಆಚರಣೆಗಳು: ಹುಟ್ಟಿನಿಂದ ಸಾಯುವತನಕ ವ್ಯಕ್ತಿಯು ಒಂದಲ್ಲ ಒಂದು ವಿವಿಧ ಸಂಸ್ಕಾರಗಳನ್ನು ದಾಟಿ ಅವಸಾನ ಕಾಣುತ್ತಾನೆ. ನೆಲೆ ನಿಂತವರು ಸಂಸ್ಕಾರಗಳನ್ನು ಪೂರೈಸಲು ಪುರೋಹಿತರು ಅಥವಾ ಪೂಜಾರಿಗಳನ್ನು ಅವಲಂಬಿಸಿದ್ದಾರೆ. ಅವರಿಲ್ಲದಿದ್ದರೆ ಸಂಸ್ಕಾರಗಳು ನಡೆಯುವುದಿಲ್ಲ. ಆದರೆ ಅಲೆಮಾರಿಗಳಿಗೆ ಈ ಪೂಜಾರಿ, ಪುರೋಹಿತರ ಅವಶ್ಯಕತೆ ಇಲ್ಲ. ತಮ್ಮ ಜಾತಿಯ ಮುಖ್ಯಸ್ಥರು, ಸೋದರಮಾವ, ಸೋದರ ಅತ್ತೆಯಿಂದ ಈ ಕೆಳಗಿನ ಆಚರಣೆಗಳನ್ನು ನೆರವೇರಿಸುವರು.

೧. ಋತುಮತಿಯಾದಾಗ ಸೋದರತ್ತೆಯಿಂದ ನೀರು ಹಾಕಿಸಿಕೊಳ್ಳುವುದು.

೨. ಸೋದರಮಾವನಿಂದ ಪ್ರತ್ಯೇಕ ಗುಡ್ಲು(ಗುಡಿಸಲು) ಕಟ್ಟಿಸಿಕೊಳ್ಳುವುದು.

೩. ಮದುವೆ ಸಂದರ್ಭದಲ್ಲಿ ಸೋದರಮಾವನು ಅಳಿಯನನ್ನು ಅಥವಾ ಸೊಸೆಯನ್ನು ಹೆಗಲ ಮೇಲೆ ಹೊತ್ತು ಮದುವೆ ಸ್ಥಳಕ್ಕೆ ಕರೆದುಕೊಂಡು ಬರುವುದು.

೪. ಮರಣ ಸಂಭವಿಸಿದಾಗ ಕುಲದ ಮುಖ್ಯಸ್ಥರು ವಿಧಿವಿಧಾನಗಳನ್ನು ನೆರವೇರಿಸುವರು.

೫. ಮಕ್ಕಳ ಜವಳ ತೆಗೆಯುವ ಸಂಸ್ಕಾರದಲ್ಲಿ ಸೋದರಮಾವ ಪ್ರಮುಖ ಪಾತ್ರ ವಹಿಸುತ್ತಾನೆ.

೬. ಕುಲದ ಮುಖಂಡ ವೈವಾಹಿಕ ಕಾರ್ಯದಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಾನೆ. ಅಂದರೆ ಮದುವೆಗೆ ಚಾಲನೆ ನೀಡುವುದು.

೭. ವರದಕ್ಷಿಣೆ ಇಲ್ಲ ವಧುದಕ್ಷಿಣೆ ಇದೆ. ವಿಧವಾ ವಿವಾಹಗಳು ನಡೆಯುತ್ತವೆ. ಸರಳ ವಿವಾಹ ವಿಚ್ಛೇದನವಿದೆ. ಸಂಪ್ರದಾಯ ಆಚರಣೆಗಳನ್ನು ಮಾಡುವರು.

ಹೀಗೆ ಅಲೆಮಾರಿಗಳು ಪ್ರತಿ ಕಾರ್ಯದಲ್ಲಿ ಅದೇ ಜಾತಿಯವರಿಂದ ಕಾರ್ಯಗಳನ್ನು ನಿರ್ವಹಿಸುತ್ತಾರೆ. ಇದರಿಂದ ಸಮಯ, ಹಣ ಉಳಿತಾಯದ ಜೊತೆಗೆ ಸಂಬಂಧಗಳು ವಿಸ್ತಾರವಾಗುತ್ತವೆ. ಇದು ಪ್ರತಿ ಅಲೆಮಾರಿ ಸಮುದಾಯದ ಜೊತೆ ಜೊತೆಗೆ ಬೆರೆಸಿಕೊಂಡು ಹೋಗುವಂತಹದ್ದಾಗಿದೆ.

ಅಲೆಮಾರಿ ಸಮುದಾಯಗಳಲ್ಲಿ ವಿನೋದ ಸಂಬಂಧಗಳು ವಿಶೇಷವಾಗಿ ಕಂಡುಬರುತ್ತವೆ. ದಿನಪೂರ್ತಿ ಅಲೆದು ದಣಿದು ಬಂದ ಗಂಡ ಹೆಂಡತಿಯರು ಮಕ್ಕಳೊಂದಿಗೆ. ಅಳಿಯ ಸೊಸೆ ತಮಾಷೆ ಮಾಡುವುದರೊಂದಿಗೆ ದಣಿದ ಮನಸ್ಸಿಗೆ ವಿನೋದವನ್ನು ಪಡೆಯುವರು. ಹಬ್ಬ ಹರಿದಿನಗಳಲ್ಲಿ ಮದುವೆ, ಋತುಮತಿ ಕಾರ್ಯಕ್ರಮಗಳಲ್ಲಿ ಎಲ್ಲರೂ ಸೇರುವುದರೊಂದಿಗೆ ತಂದೆಯ ಸಹೋದರಿಯರ ಜೊತೆ ತಾಯಿಯ ಅಣ್ಣನ ಜೊತೆ ಸಲುಗೆಯಿಂದ ವರ್ತಿಸುವುದುಂಟು. ಊಟ ಮಾಡಿದ ನಂತರ ಕಥೆಗಳು, ಹಾಸ್ಯ ಪ್ರಸಂಗಗಳು, ವೃತ್ತಿಯಲ್ಲಾದ ಅನುಭವಗಳು ಮತ್ತು ಅಶ್ಲೀಲ ಗಾದೆಗಳಿಂದ ಮನೋರಂಜನೆ ಪಡೆದುಕೊಳ್ಳುವ ಆಚರಣೆಯನ್ನು ಈ ಎಲ್ಲ ಅಲೆಮಾರಿಗಳಲ್ಲಿ ಕಂಡುಬರುವುದು.

ವಿವಾಹ ವ್ಯವಸ್ಥೆ

ಪ್ರತಿಯೊಂದು ಅಲೆಮಾರಿ ಸಮುದಾಯಗಳಲ್ಲಿ ತಮ್ಮ ಜನಾಂಗ ಪದ್ಧತಿಗೆ ಅನುಸಾರವಾಗಿ ವಿವಾಹ ಪದ್ಧತಿಗಳನ್ನು ಅನುಸರಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ಈ ಅಲೆಮಾರಿಗಳಲ್ಲಿ ಸಂಬಂಧಗಳು ವಂಶಾವಳಿ ಆಧಾರದ ಮೇಲೆ ನಿರ್ಮಾಣಗೊಂಡಿರುತ್ತದೆ. "ಕುಲ' ವೆಂದರೆ ವಂಶಾನು ಕ್ರಮದ ಬಂಧುಗಳ ಸಂಬಂಧಗಳ ಆಧಾರದ ಮೇಲೆ ರೂಪಿತಗೊಂಡಿರುತ್ತದೆ. ಸಮುದಾಯದ ಸದಸ್ಯರೆಲ್ಲರೂ ಕಾಲ್ಪನಿಕವಾದ ಪೂರ್ವಜರ ವಂಶಾವಳಿಯ ಜೊತೆಗೆ ಸಂಬಂಧವಿದೆ ಎಂದು ನಂಬುತ್ತಾರೆ."[೧]

ಈ ಅಲೆಮಾರಿ ಸಮುದಾಯಗಳು ತಮ್ಮ ಕುಲವನ್ನು ಮರ, ಬಳ್ಳಿ, ಪ್ರಾಣಿ, ಪಕ್ಷಿ ಕೆಲವೊಂದು ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಸಂದರ್ಭಕ್ಕೆ ತಕ್ಕಂತೆ ರಚಿಸಿಕೊಂಡಿರುತ್ತಾರೆ. "ಕುಲವು ಒಬ್ಬ ನಿರ್ದಿಷ್ಟ ಪೂರ್ವಜರಿಂದ ಉದ್ಭವಿಸಿದ ಸಂಬಂಧಿಕರ ಒಂದು ಸಮೂಹ. ಈ ವಂಶಾವಳಿಯನ್ನು ಮೂಲ ದಂಪತಿಗಳಿಂದ ಗುರುತಿಸಲಾಗುವುದು. ಈ ಅಲೆಮಾರಿಗಳಲ್ಲಿ ಒಳಗೋತ್ರ ವಿವಾಹಕ್ಕೆ ಆಸ್ಪದವಿದೆ.

ಒಳಗೋತ್ರ ವಿವಾಹಕ್ಕೆ ಆಸ್ಪದವಿಲ್ಲದ್ದನ್ನು ಕಾಣಬಹುದು. ಏಕೆಂದರೆ ಒಂದು ಕುಲ ಅಥವಾ ಬಳ್ಳಿ ಉಳ್ಳವರೆಲ್ಲರೂ ಸಹೋದರ-ಸಹೋದರಿಯರೆಂಬ ಮನೋಭಾವವಿದೆ. ಇದು ಪ್ರತಿಯೊಂದು ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರತಿಯೊಂದು ಆಧುನಿಕ ಸಮುದಾಯಗಳಲ್ಲಿ ಕಂಡುಬರುತ್ತದೆ".[೨] ಅಲೆಮಾರಿ ಸಮುದಾಯದ ಕುಲಗಳಲ್ಲಿ ಎರಡು ಪ್ರಕಾರಗಳನ್ನು ನೋಡಬಹುದು.

೧. ತಂದೆಯ ಕುಲ

೨. ತಾಯಿಯ ಕುಲ

೧. ತಂದೆಯ ಕುಲ: ಇದರಲ್ಲಿ ಪುರುಷ ಕುಲದ ಮುಖಂಡ ಮೂಲವಾಗಿರುತ್ತಾನೆ. ಇಲ್ಲಿ ಮಕ್ಕಳು, ಸಹೋದರ-ಸಹೋದರಿಯರು ಮತ್ತು ಸಹೋದರರ ಮಕ್ಕಳು ಬರುತ್ತಾರೆ. ಆದರೆ ತಂದೆಯ ಸಹೋದರಿಯರ ಮಕ್ಕಳು ಇದರಲ್ಲಿ ಬರುವುದಿಲ್ಲ.

೨. ತಾಯಿಯ ಕುಲ: ಇದರಲ್ಲಿ ಸ್ತ್ರೀಯು ಕುಲದ ಮೂಲವಾಗಿದ್ದಾಳೆ. ಇಲ್ಲಿ ಆಕೆಯ ಮಕ್ಕಳು ಸಹೋದರಿಯರು-ಸಹೋದರರು ಮತ್ತು ಸಹೋದರಿಯರ ಮಕ್ಕಳು ಬರುತ್ತಾರೆ. ಆದರೆ ಸಹೋದರರ ಮಕ್ಕಳು ಬರಲಾರರು. ಒಂದೇ ರಕ್ತ ಸಂಬಂಧಗಳಿಂದ ಬಂದವರೆಲ್ಲ ಸಂಬಂಧಿಕರು. ಇವರ ಸಂಬಂಧವು ಸಹೋದರ ಸಂಬಂಧವಾಗುತ್ತದೆ. ಆದ್ದರಿಂದ ಪರಸ್ಪರ ಕೊಡುಕೊಳ್ಳುವಿಕೆಗಳು ಇವರ ಮಧ್ಯೆ ನಡೆಯಲಾರವು. ಆದರೆ ಬೇರೆ ಗೋತ್ರದ ಬೆಡಗಿನವರ ಜೊತೆ ವಿವಾಹ ಸಂಬಂಧಗಳು ನಡೆಯುತ್ತವೆ.

ಉದಾ: ಹೆಳವರಲ್ಲಿ ಕಂಬಳೇರ+ಕಂಬಳೇರ= ಸಹೋದರರ ಗೋತ್ರಗಳು ಅಥವಾ ಸಮಬೆಡಗು

ಕಂಬಳೇರ+ಕಂಬೆ= ಬೆಸಬೆಡಗು. ಹೀಗೆ ಅನ್ಯ ಗೋತ್ರ ಅಥವಾ ಬೆಡಗಿನ ಜೊತೆ ವಿವಾಹವನ್ನು ನೆರವೇರಿಸುವರು.

ಹೀಗೆ ಸಮ ಮತ್ತು ಬೆಸಬೆಡಗುಗಳನ್ನು ಕಾಣುತ್ತೇವೆ. ಪ್ರತಿಯೊಂದು ಮನೆತನಕ್ಕೂ ಒಂದು ನಿರ್ಧಿಷ್ಟ ಹೆಸರಿರುತ್ತದೆ. ಇಂತಹ ಕುಲದ ವ್ಯವಸ್ಥೆಯಲ್ಲಿ ಅವರ ಸಹೋದರರು ಮಾತ್ರ ಶಾಶ್ವತವಾಗಿರ ಬಹುದಾಗಿದೆ. ಆದ್ದರಿಂದ ಅಲೆಮಾರಿಗಳ ಸಾಮಾಜಿಕ ವ್ಯವಸ್ಥೆಯಲ್ಲಿ ವಿವಾಹ ಕಾರ್ಯ ನೆರವೇರುವ ಸಂದರ್ಭದಲ್ಲಿ ಕುಲ ತುಂಬಾ ಮಹತ್ವದ ಪಾತ್ರ ವಹಿಸುತ್ತದೆ.

ಅಲೆಮಾರಿ ಸಮುದಾಯಗಳು ಕೂಡ ಅಂತರ್‌ಜಾತಿಯ ವಿವಾಹಕ್ಕೆ ಆಸ್ಪದ ಕೊಡದೇ ಇರುವುದನ್ನು ನೋಡಬಹುದು. ಆದರೆ ಅಲೆಮಾರಿ ಕುಟುಂಬಗಳಲ್ಲಿ ಗಂಡ ಸತ್ತರೆ ಆತನ ವಿಧವೆ ಅತ್ತಿಗೆಯನ್ನು ವರಿಸುವ ಪದ್ಧತಿ ಇರುವುದನ್ನು ಈಗಲೂ ಕೆಲವು ಅಲೆಮಾರಿಗಳಲ್ಲಿ ನೋಡಬಹುದಾಗಿದೆ. ಇದು ಅವಳ ಒಪ್ಪಿಗೆ ಇದ್ದರೆ ಮಾತ್ರ, ಇಲ್ಲವಾದರೆ ಆಕೆ ಸಾಯುವವರೆಗೂ ಗಂಡನ ಮನೆಯಲ್ಲಿ

ಮಕ್ಕಳ ಜೊತೆ ಜೀವಿಸಬಹುದು. ಇವಳಿಗೆ ಕುಟುಂಬದ ಎಲ್ಲ ಗೌರವಗಳು, ಸ್ಥಾನಮಾನಗಳು ದೊರೆಯುತ್ತವೆ. ಇಲ್ಲಿ ಅವಳಿಗೆ ಯಾವುದೇ ರೀತಿ ಅಪಮಾನಗಳು ಕಂಡುಬರುವುದಿಲ್ಲ. ಇದು ಸ್ತ್ರೀಗೆ ನೀಡಿದ ಗೌರವ ಪ್ರಮುಖವಾಗಿ ಗೋಚರಿಸುತ್ತದೆ.

ಅಲೆಮಾರಿಗಳಲ್ಲಿ ಆಡಂಬರದ ಮದುವೆಗಿಂತ ಅರಿತುಕೊಂಡು ಆಗುವ ಮದುವೆ ಶ್ರೇಷ್ಠ ಎನ್ನುತ್ತಾರೆ. ವೈವಾಹಿಕ ಆಯ್ಕೆಯಲ್ಲಿ ತೊಂದರೆಗಳು ಇರುವುದಿಲ್ಲ. ಕಾರಣ ತಮ್ಮ ಸಮುದಾಯಗಳ ಪ್ರವೃತ್ತಿಯಲ್ಲಿ ಒಬ್ಬರಿಗೊಬ್ಬರು ಒಡನಾಡಿಗಳಾಗಿರುವುದರಿಂದ ಮತ್ತು ಹತ್ತಿರದ ಸಂಬಂಧಿಗಳೊಂದಿಗೆ ವಿವಾಹ ಬೆಸೆಯುವುದರಿಂದ ಸಲುಗೆಯಿಂದ ವಿವಾಹಕ್ಕೆ ಸಮ್ಮತಿಸಲಾಗುವುದು.

ಸಮುದಾಯದ ದೇವಸ್ಥಾನ ಇಲ್ಲವೆ ಬಿಡಾರಗಳಲ್ಲಿ ಕುಲ ಮುಖಂಡರ ನೇತೃತ್ವದಲ್ಲಿ ಸೋದರಮಾವನ ಮುಂದಾಳತ್ವದಲ್ಲಿ ವಿವಾಹಗಳು ಜರುಗುವವು. ಈ ಅಲೆಮಾರಿ ವಿವಾಹಗಳಲ್ಲಿ ಸಂಪತ್ತಿಗಿಂತ ಸಂಬಂಧವೇ ಪ್ರಧಾನವಾಗಿರುವುದು ಕಂಡುಬರುತ್ತದೆ. ನೆಲೆ ನಿಂತ ಜನಸಮುದಾಯದಲ್ಲಿ ಹಣ ಹಿಡಿದುಕೊಂಡು ಹುಡುಗಿಯ ತಂದೆಯು ವರನನ್ನು ಶೋಧಿಸಿದರೆ ಅಲೆಮಾರಿಗಳಲ್ಲಿ ಹುಡುಗನ ತಂದೆಯು ತೆರ ಹಿಡಿದುಕೊಂಡು ಹುಡುಗಿಯನ್ನು ಹುಡುಕುವುದಾಗಿದೆ. ಆ ಶುಲ್ಕವನ್ನು ಹುಡುಗಿಯ ತಂದೆಗೆ ವಧುದಕ್ಷಿಣೆಯಾಗಿ ನೀಡಿ ವಿವಾಹ ಮಾಡಿಕೊಂಡು ಬರುವ ಪದ್ಧತಿಯಾಗಿದೆ. ಇತ್ತೀಚಿನ ದಿನಮಾನಗಳಲ್ಲಿ ಇದು ಕಣ್ಮರೆಯಾಗಿದೆ. ಅದರ ಸ್ಥಳದಲ್ಲಿ ವರದಕ್ಷಿಣೆ ಎಂಬ ಪಿಡುಗು ಅವರವರ ಅಂತಸ್ತಿಗೆ ಅನುಗುಣವಾಗಿ ಮುಂದುವರೆಯುತ್ತಿರುವುದನ್ನು ಕಾಣಬಹುದು.

ವಿವಾಹದ ಪ್ರಕಾರಗಳು

೧. ಮೈದುನ ವಿವಾಹ ಪದ್ಧತಿ: ಈ ವಿವಾಹ ಪದ್ಧತಿಯಲ್ಲಿ ಅಲೆಮಾರಿಗಳು ಕೊಟ್ಟಿರುವ ಸ್ಥಾನ ಅವಿಸ್ಮರಣೀಯವಾಗಿದೆ. ಕುಟುಂಬದ ಸದಸ್ಯತ್ವ ಪಡೆದುಕೊಂಡಿರುವ ಸದಸ್ಯರಿಗೆ ಹೊಸಬಾಳು ಕೊಡುವುದು ಇದರ ಉದ್ದೇಶವಾಗಿದೆ. ಮಹಿಳೆ ಆ ಕುಟುಂಬವನ್ನು ನಂಬಿ ಬಂದಿರುವುದರಿಂದ ಆಕೆಯ ಸಂಬಂಧ ಕೇವಲ ಅಣ್ಣನಿಗೆ ಮಾತ್ರ ಸೀಮಿತವಾಗಿರದೆ ಇಡೀ ಕುಟುಂಬ ಸಂಬಂಧಿಸಿರುತ್ತದೆ. ತಮ್ಮ ಕುಟುಂಬಕ್ಕಾಗಿ ದುಡಿದರು ನೊಂದು ಬಾಳಬಾರದೆಂದು ಈ ವ್ಯವಸ್ಥೆ ರೂಪಿಸಿಕೊಂಡಿದ್ದಾರೆ.

೨. ವಧುಶುಲ್ಕ ವಿವಾಹ: ವರನ ಕಡೆಯವರು ವಧುವಿನ ತಂದೆ ತಾಯಿಗಳಿಗೆ ವಸ್ತುಗಳನ್ನು ಇಲ್ಲವೇ ಹಣದ ರೂಪದಲ್ಲಿ ಕನ್ಯಾಶುಲ್ಕ ಕೊಟ್ಟು ಸಂಪ್ರದಾಯದ ಪ್ರಕಾರ ವಿವಾಹವಾಗುವ ಪದ್ಧತಿ ಇದಾಗಿದೆ.

೩. ಸೇವಾ ವಿವಾಹ: ಅಲೆಮಾರಿಗಳಲ್ಲಿ ವಿವಾಹ ಆಗಬಯಸುವ ಹುಡುಗನು ಕನ್ಯೆಯ ಮನೆಯಲ್ಲಿ ಅತ್ತೆ ಮಾವಂದಿರಿಗೆ ವಿಧೇಯರಾಗಿ ತಮ್ಮ ಅಲೆದಾಟದಲ್ಲಿ ತೊಡಗಿಸಿಕೊಂಡು ಅವರ ಕುಟುಂಬದಲ್ಲಿ ಸೇವೆ ಸಲ್ಲಿಸುತ್ತಾನೆ. ಈ ಸೇವೆಯು ಅತ್ತೆ ಮಾವ ತೃಪ್ತಿಯಾಗುವ ತನಕ ಮತ್ತು

ಕನ್ಯೆಯು ವರನನ್ನು ಒಪ್ಪುವ ತನಕ ಹುಡುಗ-ಹುಡುಗಿ ಒಡನಾಡಿಗಳಾಗಿರುವುದರಿಂದ ಒಬ್ಬರಿಗೊಬ್ಬರು ಆಕರ್ಷಿತರಾಗಿ ಪ್ರೀತಿಯಲ್ಲಿ ಬಂಧಿಯಾಗುವುದರಿಂದ ಸಂಪ್ರದಾಯದ ಪ್ರಕಾರ ವಿವಾಹ ನೆರವೇರಿ ಸುತ್ತಾರೆ. ಒಮ್ಮೊಮ್ಮೆ ಸೇವೆ ಮಾಡುತ್ತಿರುವ ಅಳಿಯನ ಮೇಲೆ ನಂಬಿಕೆ ಬಾರದಿದ್ದರೆ ಹುಡುಗಿಯನ್ನು ಕೊಡುವುದಿಲ್ಲ.

೪. ಭಿಕ್ಷಾ ವಿವಾಹ: ಸಿಂಧೋಳ್ಳು ಸಮುದಾಯದಲ್ಲಿ ಪೋತರಾಜ ಮದುವೆಯಾಗಲು ಇಷ್ಟಪಟ್ಟರೆ ಅವನು ವಿವಾಹ ಪರೀಕ್ಷೆಯಲ್ಲಿ ಭಾಗವಹಿಸಬೇಕಾಗುತ್ತದೆ. ಅವನು ಭಿಕ್ಷೆ ಹೋಗುವ ಸಂದರ್ಭದಲ್ಲಿ ಎಷ್ಟು ಬಾರಿ ಕುಣಿಯುವನು, ತನ್ನ ಮೈಗೆ ಚಾಟಿಯಿಂದ ಎಷ್ಟು ಬಾರಿ ಹೊಡೆದು ಕೊಳ್ಳುವನು. ಅವನ ಕೈಯಲ್ಲಿ ರಕ್ತ ಎಷ್ಟು ಬಾರಿ ಚಿಮ್ಮಿಸುತ್ತಾನೆ ಹಾಗೂ ದಿನದಲ್ಲಿ ಎಷ್ಟು ಮನೆ ಗಳಲ್ಲಿ ಭಿಕ್ಷೆ ಬೇಡುತ್ತಾನೆ ಎಂಬುದನ್ನು ಆಧರಿಸಿ ತಮ್ಮ ಮಗಳನ್ನು ಕೊಡುತ್ತಾರೆ. ಅಕಸ್ಮಾತ್ ಅವನು ಸೋಮಾರಿಯಾದರೆ ಕನ್ಯೆ ಕೊಡುವುದಿಲ್ಲ.

೫. ಬಾಲ್ಯವಿವಾಹ: ಅಲೆಮಾರಿ ಸಮುದಾಯಗಳಲ್ಲಿ ಬಾಲ್ಯವಿವಾಹಗಳು ಸಾಮಾನ್ಯವಾಗಿವೆ. ಅಕ್ಕನ ಮದುವೆಯ ಜೊತೆಗೆ ತಂಗಿಯ ಮದುವೆಯನ್ನು ಮಾಡಿದರೆ ಖರ್ಚು ಉಳಿತಾಯವಾಗುವುದು. ಬೇಗ ಮದುವೆ ಮಾಡುವುದರಿಂದ ನಮಗೆ ಅಳಿಯನು ದುಡಿದು ಹಾಕುತ್ತಾನೆ ಎಂಬ ಮನೋಭಾವನೆ ಹೊಂದಿದ್ದರಿಂದ ಹಾಗೂ ಚಿಕ್ಕವರಾಗಿ ಇರುವಾಗ ಮದುವೆ ಮಾಡಿ ನಮ್ಮ ಜವಾಬ್ದಾರಿಯನ್ನು ಕಳೆದುಕೊಳ್ಳಬೇಕು ಎಂಬ ಕಾರಣದಿಂದ ಬಾಲ್ಯವಿವಾಹವನ್ನು ಅನುಸರಿಸಿಕೊಂಡು ಬರುತ್ತಿದ್ದಾರೆ. ಇದರ ಜೊತೆಗೆ ಕುಟುಂಬದಲ್ಲಿರುವ ವೃದ್ಧರು ತಾವು ಸಾಯುವುದಕ್ಕಿಂತ ಮೊದಲು ಮೊಮ್ಮಗನ ಅಥವಾ ಮೊಮ್ಮಗಳ ಮದುವೆ ನೋಡಬೇಕೆಂಬ ಬಯಕೆ ಮತ್ತು ಆಸೆಗಳು ಈ ಬಾಲ್ಯವಿವಾಹ ನಡೆಸಲು ಕಾರಣವೆಂಬುದನ್ನು ತಿಳಿಯಬಹುದು. ಇಂದು ಈ ವಿವಾಹ ಸ್ವಲ್ಪಮಟ್ಟಿಗೆ ಕಡಿಮೆಯಾಗು ತ್ತಿರುವುದು ಕಂಡುಬರುತ್ತಿದೆ.

೬. ಒಳಬಾಂಧವ್ಯ ವಿವಾಹ: ತಮ್ಮ ಜಾತಿ ಮತ್ತು ವರ್ಗಗಳ ಹೆಣ್ಣು-ಗಂಡುಗಳನ್ನು ಕೊಡುವ ಮತ್ತು ತರುವ ವೈವಾಹಿಕ ಪದ್ಧತಿಗೆ 'ಒಳಬಾಂದವ್ಯ' ವಿವಾಹ ಎನ್ನಲಾಗಿದೆ. ಪುರಾತನ ಕಾಲದಿಂದಲೂ ಈ ವಿವಾಹ ಪದ್ಧತಿ ಎಲ್ಲ ಜನ ಸಮುದಾಯದಲ್ಲಿ ಕಂಡುಬರುತ್ತದೆ. ಅದೇ ರೀತಿ ಈ ವಿವಾಹ ಪದ್ಧತಿ ಅಲೆಮಾರಿಗಳಲ್ಲಿ ಜೀವಂತವಾಗಿದೆ. ನಮ್ಮ ಮಕ್ಕಳು ತಮ್ಮ ಎದುರಿನಲ್ಲಿ ಇರಬೇಕೆಂಬ, ಆಸೆ ಯಿಂದ ತಮ್ಮ ಸಮುದಾಯದ ಕೌಶಲ್ಯ ಬೇರೆ ಕಡೆ ಹೋಗಬಾರದೆಂಬ ರಕ್ತ ಪರಿಶುದ್ಧತೆಗಾಗಿಯೂ, ಭಾವನಾತ್ಮಕ ಸಂಬಂಧಗಳಿಗಾಗಿಯೂ ತಮ್ಮ ಸಮುದಾಯಗಳಲ್ಲಿ ವಿವಾಹ ಮಾಡುವರು. ಈ ವಿವಾಹ ಪದ್ಧತಿ ಎಲ್ಲ ಅಲೆಮಾರಿ ಸಮುದಾಯಗಳಲ್ಲಿ ಕಂಡುಬರುತ್ತದೆ.

೭. ವಿಧವಾ ವಿವಾಹ: ಗಂಡನು ತೀರಿದ ನಂತರ ವಿಧವೆಯು ಮತ್ತೆ ವೈವಾಹಿಕ ಜೀವನದಲ್ಲಿ ಕಾಲಿಡುವ ಅವಕಾಶವನ್ನು ಅಲೆಮಾರಿ ಸಮುದಾಯಗಳು ಇಟ್ಟುಕೊಂಡಿದ್ದಾರೆ. ವಿಧವೆ ಒಂಟಿಯಾಗಿರಲು ಸಾಧ್ಯವಿಲ್ಲವೆಂದಾಗ ಅದೇ ಕುಟುಂಬದ ಮೈದುನ ಇಲ್ಲವೇ ಆ ಸಮುದಾಯದ ಬೇರೆ ಪುರುಷನೊಂದಿಗೆ ಪರಸ್ಪರರು ಇಷ್ಟಪಟ್ಟರೆ ಕುಲದ ಮುಖಂಡರು ಮದುವೆ ಮಾಡಿಸುವರು. ಈ ವಿವಾಹವನ್ನು ರಾತ್ರಿ ಸಮಯದಲ್ಲಿ ಅಷ್ಟೊಂದು ಶಾಸ್ತ್ರಬದ್ಧವಿಲ್ಲದೆ ಜರುಗಿಸುತ್ತಾರೆ. ಇದನ್ನು 'ಉಡಿಕೆ' ವಿವಾಹ ಎಂತಲೂ ಕರೆಯುತ್ತಾರೆ.

೮. ವಿವಾಹ ವಿಚ್ಛೇದನ: ಯಾವುದೇ ಸಮುದಾಯದ ಕುಟುಂಬ ಆರೋಗ್ಯಕರವಾಗಿರಬೇಕಾದರೆ ಪತಿ ಪತ್ನಿಯರಿಬ್ಬರೂ ಅನ್ಯೋನ್ಯದಿಂದ ಕೂಡಿರಬೇಕಾಗುವುದು. ಇವರಿಬ್ಬರಲ್ಲಿಯೂ ಸಹಕಾರ ಬೇಕು. ಇವರಲ್ಲಿ ಅಸೂಯೆ, ಅನುಮಾನ, ಬೇಸರ ಉಂಟಾದರೆ ವಿವಾಹ ಸಂಬಂಧದ ಜೊತೆಗೆ ಭಾವನಾತ್ಮಕ ಸಂಬಂಧಗಳು ಮುರಿದು ಬೀಳುತ್ತವೆ. ಇವು ಕುಟುಂಬ ಮತ್ತು ಮಕ್ಕಳ ಮೇಲೆ ಕೆಟ್ಟ ಪರಿಣಾಮಕ್ಕೆ ಕಾರಣವಾಗುತ್ತದೆ. ಇಂತಹ ಸಮಸ್ಯೆಗಳು ಬಂದಾಗ ಅನಿವಾರ್ಯವಿದ್ದಲ್ಲಿ ವಿಚ್ಛೇದನ ಪಡೆಯಲೇಬೇಕಾಗುತ್ತದೆ. ಹೀಗೆ ವಿಚ್ಛೇದನ ಪಡೆಯಬೇಕಾದರೆ ಅಲೆಮಾರಿ ಜನರು ಇತರೆ ಸಮುದಾಯ ಗಳಂತೆ ಹಣ ಖರ್ಚು ಮಾಡಬೇಕಾಗಿಲ್ಲ. ಕಾನೂನು, ಪೊಲೀಸ್, ಕೋರ್ಟ್ ಕಛೇರಿಗಳಿಗೆ ಹೋಗ ಬೇಕಾಗಿಲ್ಲ. ಕುಲದ ಮುಖಂಡರಿಗೆ ತಮ್ಮ ನಿಮಯವನ್ನು ಸ್ಪಷ್ಟಪಡಿಸಿದರೆ ಅವರಿಬ್ಬರ ಅಭಿಪ್ರಾಯಗಳನ್ನು ಪಡೆದು ಒಂದುಗೂಡಲು ಅವರಿಗೆ ಬುದ್ಧಿಮಾತುಗಳನ್ನು ಹೇಳಲು ಪ್ರಯತ್ನ ಮಾಡುವರು. ಅದು ಆಗದಿದ್ದಾಗ ಅನಿವಾರ್ಯವಾಗಿ ವಿವಾಹ ವಿಚ್ಛೇದನಕ್ಕೆ ಸಮ್ಮತಿ ಸೂಚಿಸುವರು. ಇಬ್ಬರ ಸಮ್ಮುಖದಲ್ಲಿ ಸರಳ ವಿಧಾನವಾದ ಕಡ್ಡಿ ಮುರಿಯುವುದರ ಮೂಲಕ, ಅರಿವೆ ಸುಡುವುದರ ಮೂಲಕ ದಾಂಪತ್ಯ ಜೀವನವನ್ನು ಕೊನೆಗಾಣಿಸುತ್ತಾರೆ ಎಂದು ಅಲೆಮಾರಿ ವೃದ್ಧ ಶಂಕರ್ ರೇವಲ್ ಅಭಿಪ್ರಾಯಪಡುತ್ತಾನೆ. ಆ ಸಂದರ್ಭದಲ್ಲಿ ಮದುವೆಯಲ್ಲಿ ಕಟ್ಟಿದ ಕನ್ಯಾಶುಲ್ಕ ತಾಳಿಯನ್ನು ಹಿಂತಿರುಗಿಸುತ್ತಾರೆ. ಇಬ್ಬರು ಬೇರೊಬ್ಬರನ್ನು ಪುನಃ ವಿವಾಹವಾಗಬಹುದಾಗಿರುತ್ತದೆ. ಈ ಆಧುನಿಕ ಯುಗದಲ್ಲಿ ವಿಚ್ಛೇದನ ಪದ್ಧತಿಯಲ್ಲಿ ಬದಲಾವಣೆಗಳಾಗಿರುವುದನ್ನು ಕಾಣಬಹುದಾಗಿದೆ".[೩]

ಮರಣ ಸಂಸ್ಕಾರ

ಪ್ರತಿಯೊಂದು ಅಲೆಮಾರಿ ಸಮುದಾಯಗಳಲ್ಲಿ ತಮ್ಮದೇ ಆದ ಜನಾಂಗ ಪದ್ಧತಿಗೆ ಅನುಸಾರವಾಗಿ ಮರಣ ಸಂಸ್ಕಾರ ಪದ್ಧತಿಗಳನ್ನು ಅನುಸರಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ಮಾನವನ ಹುಟ್ಟಿನಿಂದ ಹಲವಾರು ಹಂತಗಳಲ್ಲಿ ದಾಟಿಕೊಂಡು ಕರ್ಮಾದಿಗಳು ಮುಗಿದ ನಂತರ ಬರುವುದು ಸಾವು. 'ಸಾವು' ಎಂದಾಕ್ಷಣ ಸಮಾಜದಲ್ಲಿ ವಾಸಿಸುವ ಎಲ್ಲರಿಗೂ ಭಯವಾಗುತ್ತದೆ. ಆದರೂ ಸಾವಿನ ಸಂದರ್ಭದಲ್ಲಿ ಪ್ರತಿಯೊಂದು ಸಮುದಾಯದವರು ಸಂಪ್ರದಾಯ-ಆಚರಣೆಗಳನ್ನು ನಡೆಸಿಕೊಂಡು ಬರುತ್ತಿರುವರು. ಅಲೆಮಾರಿ ಸಮುದಾಯದಲ್ಲಂತೂ ಸತ್ತವರು ದೇವರಾಗುತ್ತಾರೆಂಬ ನಂಬಿಕೆ ಇರುತ್ತದೆ.

ಸಾವು ಒಂದು ಪ್ರಕೃತಿದತ್ತವಾದ ಕ್ರಿಯೆ. ಮಾನವ ಬದುಕಿರುವಾಗ ಸಮಾಜದ ಒಂದು ಅಂಗವಾಗಿರುತ್ತಾನೆ. ಅಲ್ಲಿ ಸಾಮಾಜಿಕ ಸಂಬಂಧಗಳನ್ನು ಹೊಂದಿ, ಏರಿಳಿತಗಳನ್ನೂ ಅನುಭವಿಸುತ್ತಾನೆ. ಆ ಅನುಭವಗಳನ್ನು ಅವನಿಗೆ ನೀಡಿದ ಸಮಾಜವೊಂದಿರುತ್ತದೆ ಎಂಬುದನ್ನು ಮರೆಯುವಂತಿಲ್ಲ. ವ್ಯಕ್ತಿ ಸತ್ತರೂ, ಅವು ಹಾಗೆಯೇ ಜೀವಂತಿಕೆಯ ಪಳೆಯುಳಿಕೆಗಳಾಗಿ ಉಳಿದುಕೊಂಡಿರುತ್ತವೆ. ಈ ಹಿನ್ನೆಲೆಯಲ್ಲಿ ಸಾವಿಗೆ ಸಂಬಂಧಿಸಿದಂತೆ ಮಾಡಲಾಗುವ ವಿಧಿವಿಧಾನಗಳನ್ನೇ ಮರಣಸಂಸ್ಕಾರ ಎಂದು ಕರೆಯಲಾಗುವುದು.

ಶವದ ಮುಂದೆ ಆತನ ಸಂಬಂಧಿಕರೆಲ್ಲರೂ ಸೇರಿ ಶೋಕವನ್ನು ವ್ಯಕ್ತಪಡಿಸುವರು. ನೆರೆಹೊರೆಯ ಅಲೆಮಾರಿಗಳು ಮನೆಯವರನ್ನು ಸಮಾದಾನಪಡಿಸಿ, ನಾವಿದ್ದೇವೆ; ನಿಮ್ಮ ಜೊತೆ, ನೀವು ಅಳಬಾರದು, ಅತ್ತರೆ ಅವರ ಆತ್ಮಕ್ಕೆ ಶಾಂತಿ ಸಿಗುವುದಿಲ್ಲ. ಮಣ್ಣಿನ ಜೀವ ಮಣ್ಣಿಗೆ ಸೇರಿದೆ ಎಂಬ ಮಾತುಗಳಾನ್ನಾಡಿ ಸಮಧಾನಪಡಿಸುತ್ತಾರೆ.

ಸಾವಿನ ಸುದ್ದಿಯನ್ನು ತಮ್ಮ ಕುಲದವರಿಗೆ ತಿಳಿಸುವರು. ಇವರು ಅಲೆಮಾರಿಗಳಾದ ಕಾರಣ ಸಕಾಲಕ್ಕೆ ಸುದ್ದಿ ತಲುಪುವುದು ಕಷ್ಟಕರವಾಗಿರುತ್ತದೆ. ಆದರೂ ಯುವಕರು ಸೈಕಲ್ ಮೇಲೆ ಪ್ರಯಾಣ ಮಾಡಿ, ಆಪ್ತರಿಗೆ ಮಾತ್ರ ತಿಳಿಸುವರು. ಇಂದು ಮೊಬೈಲ್ ಪೋನ್‌ಗಳ ಮೂಲಕ ತಿಳಿಸುವರು. ಸುದ್ದಿ ತಲುಪುತ್ತಿದ್ದಂತೆ ಬಂಧು-ಬಳಗದವರು ಬರುತ್ತಾರೆ. ದೂರದ ಸಂಬಂಧಿಕರು ಬರುವುದು ತಡವಾಗುವಂತಿದ್ದರೆ ಸಾಯಂಕಾಲ ಸಮಯದವರೆಗೆ ನೋಡಿಕೊಂಡು ಅನಿವಾರ್ಯ ಪರಿಸ್ಥಿತಿಯಲ್ಲಿ ಅಂತಿಮ ಸಂಸ್ಕಾರ ಮಾಡಬೇಕಾಗುತ್ತದೆ. ಕೆಳಗಿನಂತೆ ಬಹುತೇಕ ಅಲೆಮಾರಿ ಸಮುದಾಯಗಳು ಸಾವಿನ ಪದ್ಧತಿಗಳನ್ನು ಅನುಸರಿಸುವುದು:

೧. **ಸ್ನಾನ ಮಾಡಿಸುವುದು:** ಬಿಸಿ ನೀರಿನಿಂದ ಶವಕ್ಕೆ ಸ್ನಾನ ಮಾಡಿಸಿ ಅವರ ಪದ್ಧತಿಗೆ ಅನುಸಾರವಾಗಿ ಗಂಡಸಾದರೆ ಹಣೆಗೆ ನಾಮ, ಹೆಂಗಸಾದರೆ ಕುಂಕುಮ ಇಡುತ್ತಾರೆ. ಶವದ ಎರಡು ಕೈಗಳನ್ನು ದೇಹದ ಮೇಲೆ ಜೋಡಿಸುವರು. ಶವದ ಮೇಲೆ ಹಳೇ ಕೌದಿಯನ್ನು ಹೊದಿಸುವರು. ಹಾಗೂ ತಲೆ ಹತ್ತಿರ ದೀಪ ಹೊತ್ತಿಸಿ ಇಡಲಾಗುತ್ತದೆ.

ಬಿಳಿಬಟ್ಟೆ, ಎಲೆ, ಅಡಿಕೆ, ಊದುಬತ್ತಿ, ತೆಂಗಿನಕಾಯಿಗಳು, ಹೂವು, ಮಂಡಕ್ಕಿ, ಕುಂಕುಮ ಇತ್ಯಾದಿ ವಸ್ತುಗಳನ್ನು ಕುಲದ ಹಿರಿಯ ವ್ಯಕ್ತಿ ಮಾರುಕಟ್ಟೆಯಿಂದ ತಂದಿಟ್ಟುಕೊಳ್ಳುತ್ತಾನೆ. ಹಿರಿಯರು ಬಿಸಿ ನೀರಿನಿಂದ ಶವವನ್ನು ಸ್ನಾನ ಮಾಡಿಸಿ, ಇರುವ ಬಟ್ಟೆಯನ್ನು ಉಡಿಸುವರು. ತಲೆಗೆ ವಿಭೂತಿ ಮತ್ತು ಕುಂಕುಮ ಹಚ್ಚಲಾಗುತ್ತದೆ.

೨. **ಚಟ್ಟ ತಯಾರಿಸುವ ಕ್ರಮ:** ಆಯಾ ಅಲೆಮಾರಿ ಸಮುದಾಯದವರು ಅವರದೇ ಆದ ಪದ್ಧತಿಯಲ್ಲಿ ಶವವನ್ನು ಸಾಗಿಸುವವರು. ಉದಾಹರಣೆಗೆ ಕಳ್ಳಿಕಟ್ಟಿಗೆಯಿಂದ ಒಂದು ಏಣಿಯಾಕಾರದಲ್ಲಿ ಚಟ್ಟವನ್ನು ನಿರ್ಮಿಸುವರು.

೩. **ಸಮಾಧಿ:** ವ್ಯಕ್ತಿ ಯಾವ ಊರಿನಲ್ಲಿ ಸತ್ತಿರುತ್ತಾನೋ ಆ ಊರಿನ ಸ್ಮಶಾನದಲ್ಲಿ ಅಂತ್ಯ ಸಂಸ್ಕಾರ ಮಾಡುವರು. ಸ್ಮಶಾನದಲ್ಲಿ ಸಮಾಧಿಯನ್ನು ತೋಡಲು ಗುರುತಿಸುವವರು ಆಯಾ ಸಮುದಾಯದ ಕುಲದ ಮುಖಂಡರಾಗಿರುತ್ತಾರೆ. ಮುಖಂಡರು ಮನೆಯವರ ಅಭಿಪ್ರಾಯದಂತೆ ಸಾರ್ವಜನಿಕರ ಸಮಾಧಿ ಸ್ಥಳದಲ್ಲಿ ನಿರ್ದಿಷ್ಟ ಸ್ಥಳ ಆಯ್ದು ಕೊಡುವರು.

೪. **ಇಸಬಾಯಿ:** ಶವಸಂಸ್ಕಾರ ಮುಗಿಸಿ ಮನೆಗೆ ಮರಳಿ ನಂತರದಲ್ಲಿ ಬೀಗರಾಗುವವರು ಸತ್ತವನ ಹೆಂಡತಿ ಹಾಗೂ ಗಂಡುಮಕ್ಕಳನ್ನು ಕರೆದುಕೊಂಡು ಸೇಂದಿ/ಸಾರಾಯಿ ಕುಡಿಸಿ ಇಸಬಾಯಿ ತೊಳೆಸುವರು.

೫. **ದಿನಕಾರ್ಯ (ತಿಥಿ):** ಮೃತಪಟ್ಟ ಮೂರನೆಯ ದಿನ ಮಾಡುವ ಕಾರ್ಯವೇ ಸಣ್ಣ ತಿಥಿ ಆಗಿದೆ. ವ್ಯಕ್ತಿ ಸತ್ತ ಒಂಬತ್ತನೆ ದಿನಕ್ಕೆ ಕಾರ್ಯಕ್ರಮ ಇಟ್ಟುಕೊಳ್ಳುವ ಪದ್ಧತಿ ಆಯಾ ಅಲೆಮಾರಿ ಸಮುದಾಯಗಳ ಪದ್ಧತಿಯ ಅನುಸಾರವಾಗಿ ಮಾಡುವರು.

೬. **ವೀಳ್ಯೆದೆಲೆ ನೀಡುವುದು:** ಒಂದು ತಿಂಗಳಿನ ಒಳಗೆ ವಿಧವೆಯಾದವಳನ್ನು ತವರು ಮನೆಗೆ ಕರೆದುಕೊಂಡು ಹೋಗಲಾಗುತ್ತದೆ. ವಿಧವೆಯಾದವಳಿಗೆ ಹೊಸ ಸೀರೆಯನ್ನು ಕುಬಸ ತೊಡಿಸಿ ವೀಳ್ಯದೆಲೆಯನ್ನು ಸೆರಗಿನೊಳಗೆ ಹಾಕಿ ಅಂದು ಸಿಹಿ ಊಟ ಮಾಡಿಸುವರು. ಅಂದಿನಿಂದ ತವರು ಮನೆಯ ಮಂಗಳ ಕಾರ್ಯಗಳಿಂದ ಇವಳು ಸಂಪೂರ್ಣವಾಗಿ ವಂಚಿತಳಾಗುತ್ತಾಳೆ. ಇವರಲ್ಲಿ ವಿಧವೆಗೆ ಅನ್ವಯಿಸುವ ಈ ಆಚರಣೆ, ನಡಾವಳಿಗಳು ಹೆಂಡತಿ ಸತ್ತ ವಿಧುರನಿಗೂ ಅನ್ವಯಿಸುತ್ತದೆ.

ಹೀಗೆ ವಿವಿಧ ಅಲೆಮಾರಿ ಸಮುದಾಯಗಳು ಆಚರಿಸುವ ಹುಟ್ಟಿನಿಂದ ಸಾಯುವವರೆಗೂ ತಮ್ಮದೇ ಪದ್ಧತಿಗಳಲ್ಲಿ ನಡೆಸಿಕೊಂಡು ಬರುವ ಜೀವನಾವರ್ತನ ಕಾರ್ಯಗಳನ್ನೇ ಆಚರಣೆಗಳೆಂದು ಕರೆಯುವರು.

೩.೩. ಮೂಢನಂಬಿಕೆಗಳು

ಅಲೆಮಾರಿಗಳಲ್ಲಿ ಹಲವು ಮೂಢನಂಬಿಕೆಗಳನ್ನು ಇವತ್ತಿಗೂ ಕಾಣಬಹುದಾಗಿದೆ.

೧. ತಮ್ಮ ಸದಸ್ಯರಿಗೆ ಅನಾರೋಗ್ಯ ಕಂಡುಬಂದರೆ ದೇವತೆ ದೇವರ ಕಾಟದಿಂದ ಬಂದಿದೆ ಎಂದು ನಂಬುವುದು.

೨. ಅದರಿಂದ ಪಾರಾಗಲು ಮಾಟ-ಮಂತ್ರ, ಹರಕೆಯ ಬಲಿ, ಬೆತ್ತಲೆಸೇವೆಯನ್ನು ಮಾಡುತ್ತಾರೆ.

೩. ರಾತ್ರಿ ಕನವರಿಸಿದರೆ ದೆವ್ವಗಳು ಇವೆ ಎಂದು ನಂಬಿ ಮಾಟಗಾರರ ಹತ್ತಿರ ಹೋಗಿ ಬಿಡಿಸುವುದು.

೪. ಮಾಟಗಾರರು ಕೊಡುವ ಪತ್ರೆ, ವಿಭೂತಿ, ಭಸ್ಮ, ತಾಯತದ ತಗಡುಗಳನ್ನು ಕೈಗೆ ಅಥವಾ ಕೊರಳಿಗೆ ಕಟ್ಟಿಕೊಳ್ಳುತ್ತಾರೆ.

೫. ಮೂರು ರಸ್ತೆಗಳು ಕೂಡುವಲ್ಲಿ ನಿಂಬೆಹಣ್ಣು ಕೊಯ್ದು ಹಾಕುವುದು.

೬. ಮಗುವಿಗೆ ಜ್ವರ ಬಂದರೆ, ವಾಂತಿ ಬೇಧಿಯಾದರೆ ಅದು ಗುಣವಾಗಲೆಂದು ದೇವರಿಗೆ ಹರಕೆ ಕಟ್ಟಿಕೊಂಡು ಅರೆಬೆತ್ತಲೆ ಸೇವೆ, ಕುರಿ, ಕೋಳಿಗಳನ್ನು ಬಲಿ ಕೊಡುವುದಾಗಿ ಬೇಡಿಕೊಳ್ಳುವುದು.

೭. ಕುಟುಂಬದ ಯಾವುದೇ ಕಷ್ಟ, ಸಾವುಗಳೆಲ್ಲವೂ ದೈವ ಮುನಿಸಿನಿಂದ ನಡೆಯುತ್ತದೆ ಎಂಬ ನಂಬಿಕೆ ಅಲೆಮಾರಿಗಳಲ್ಲಿರುವುದು ಸರ್ವೇಸಾಮಾನ್ಯವಾಗಿದೆ.

೮. ಅಲೆಮಾರಿಗಳು ವಂಶಾವಳಿ ವೃತ್ತಿಯಲ್ಲಿ ಮುಂದುವರೆಯಬೇಕೆಂಬ ಭಾವನೆ.

೯. ನಿಧಿಗಳು ದೊರೆತರೆ ದೇವರಿಗೆ ಅರ್ಪಿಸಬೇಕೆಂಬ ಭಾವನೆ.

೧೦. ಒಂದು ಸ್ಥಳದಲ್ಲಿ ಕೊನೆಯತನಕ ವಾಸವಾದರೆ ದೇವರು ಕ್ಷಮಿಸುವುದಿಲ್ಲ ಎನ್ನುವುದು.

೧೧. ತಮ್ಮ ಗುರುಗಳನ್ನು ಕರೆಸಿ ಒಂದು ರಾತ್ರಿ ಮನೆಯಲ್ಲಿ ಮಲಗಿಸಿದರೆ ಕಷ್ಟ ದೂರವಾಗುತ್ತದೆ ಎನ್ನುವುದು.

೧೨. ಅಂತರ್ಜಾತಿ ಮತ್ತು ಪ್ರೇಮವಿವಾಹ ಆಗಬಾರದು ಎಂಬುವಂತದ್ದು.

೧೩. ಕಾಯಿಲೆಗಳು ಬಂದಾಗ ಆಸ್ಪತ್ರೆಗಳಿಗೆ ಹೋಗಬಾರದು ಎಂಬ ನಿಯಮವಿದೆ. ಇದರ ಫಲವಾಗಿ ಬೂದಿ, ನಿಂಬೆ ಹಣ್ಣುಗಳಿಂದ ಹಾಗೂ ಮಾಟ ಮಂತ್ರಗಳಿಂದ ಗುಣಪಡಿಸಿಕೊಳ್ಳುವುದು.

೧೪. ವೃತ್ತಿ ಮಾಡುವಾಗ ರಕ್ತ(ಶ್ರಮವಹಿಸಿ)ವನ್ನು ಹರಿಸಬೇಕೆಂಬುದು.

೧೫. ಋತುಮತಿ ಆಗುವ ಮೊದಲೇ ವಿವಾಹ ಮಾಡಬೇಕೆಂಬ ದೃಢನಿರ್ಧಾರ.

ಈ ಮೇಲಿನ ಎಲ್ಲಾ ನಂಬಿಕೆಗಳಿಂದ ತಮ್ಮ ಬದುಕನ್ನು ಅವಸಾನದ ಅಂಚಿಗೆ ತಳ್ಳಿಕೊಳ್ಳುತ್ತಿದ್ದಾರೆ. ಇದಕ್ಕೆ ಕಾರಣ ಇವರು ಹಿಂದಿನಿಂದಲೂ ಸಮುದಾಯದೊಂದಿಗೆ ಅಂಟಿಕೊಂಡು ಬಂದಿರುವುದು. ಇವರ ಕಸುಬು ಜೀವ ಹೋಗುವವರೆಗೂ ಮುಂದುವರೆಸಿಕೊಂಡು ಹೋಗುವುದು ಎಂದು ಹೇಳುವುದುಂಟು.

"ಸರ್ಕಾರ ಇವರಿಗೆ ಮನೆಗಳನ್ನು ಕಟ್ಟಿಸಿಕೊಟ್ಟರೆ ಮನೆಯಲ್ಲಿ ವಾಸ ಮಾಡದೆ ಮನೆಯ ಮುಂದೆ ಬಿಡಾರ ಹೂಡಿಕೊಂಡು ವಾಸಿಸುವರು. ಅ ಮನೆಯಲ್ಲಿ ವಾಸಿಸಿದರೆ ದೇವರು ಕ್ಷಮಿಸುವುದಿಲ್ಲವಂತೆ. ಅಲ್ಲಿ ಕೇವಲ ಕೆಲವು ದಿವಸಗಳವರೆಗೂ ಇರುತ್ತಾರೆ. ಬೇರೆಯವರಿಗೆ ಮಾರಾಟ ಮಾಡಿ ಅಥವಾ ಬಾಡಿಗೆಗೆ ನೀಡಿ ಮುಂದಿನ ಊರುಗಳಿಗೆ ಹೋಗಿ ತಮ್ಮ ಅಲೆಮಾರಿ ಬದುಕನ್ನು ಸಾಗಿಸುತ್ತಾರೆ. ಒಂದೆಡೆ ನೆಲೆ ನಿಂತರೆ ಸಮಸ್ಯೆಗಳು ಉಂಟಾಗುತ್ತದೆ. ಮಾನಸಿಕ ನೆಮ್ಮದಿ ಹಾಳಾಗುತ್ತದೆ. ಸಂಚಾರದಲ್ಲಿ ಸದಾ ಮುಂದುವರೆದು ಬದುಕನ್ನು ನಡೆಸಬೇಕೆಂದು ದೇವರ ಆಶೀರ್ವಾದ ಇದೆ ಎನ್ನುತ್ತಾರೆ.

ವ್ಯಾಪಾರದಲ್ಲಿ ಅತಿಯಾದ ಲಾಭ ಪಡೆಯಬಾರದು ಹಾಗೂ ಸ್ವಲ್ಪ ಪ್ರಮಾಣದ ಲಾಭದಲ್ಲಿ ತೃಪ್ತರಾಗ ಬೇಕೆಂದು ಇವರ ನೀತಿಯಾಗಿದೆ. ಹೆಚ್ಚಿನ ಲಾಭದಿಂದ ಮುಂದಿನ ಜನ್ಮದಲ್ಲಿ ದೇವರು ಪ್ರಾಣಿಯಾಗಿ ಹುಟ್ಟಿಸುತ್ತಾನೆ. ಸ್ವರ್ಗದಲ್ಲಿ ನಮಗೆ ಯಮನು ವಿಪರೀತ ಕಿರುಕುಳ ನೀಡುತ್ತಾನೆ ಎಂಬುದು ಇವರ ಆಳವಾದ ನಂಬಿಕೆಯಿದೆ. ಮದುವೆ ಆಗುವ ಮೊದಲು ಋತುಮತಿಯಾದರೆ ಮನೆತನದಲ್ಲಿ ಕೆಡಕು ಬರುವುದುಂಟು. ಆದಕಾರಣ ಋತುಮತಿ ಆಗುವ ಮೊದಲೇ ವಿವಾಹ ಮಾಡಿಸುತ್ತಾರೆ".[೫] ಇದರಿಂದ ಹೆಣ್ಣುಮಕ್ಕಳ ಆರೋಗ್ಯದ ಮೇಲೆ ದುಷ್ಪರಿಣಾಮಗಳ ಪ್ರಭಾವ ಬೀರುತ್ತದೆ. ಚಿಕ್ಕ ವಯಸ್ಸಿನಲ್ಲಿ ಸಾವುಗಳು ಸಂಭವಿಸುವ ಸಾಧ್ಯತೆಗಳು ಒಮ್ಮೊಮ್ಮೆ ಕಂಡುಬರುವುದುಂಟು. ಹೀಗಾಗಿ ಸಂಸಾರಿಕ ಜೀವನ ನಡೆಸುವುದು ಕಷ್ಟವಾಗುವುದು. ಆಧುನೀಕರಣದಲ್ಲಿ ಬಾಲ್ಯವಿವಾಹ ನಿಷೇಧಿಸಿದರೂ, ಈ ಪದ್ಧತಿಯನ್ನು ಅಲೆಮಾರಿಗಳು ಬಿಟ್ಟಿಲ್ಲ. ಆದರೂ ಈ ಮೇಲಿನ ಭಾವನೆಗಳಲ್ಲಿ ಈಗ ಬದಲಾವಣೆ ಕಂಡುಬರುತ್ತದೆ.

೩.೪. ಉಡುಗೆ ತೊಡುಗೆಗಳು

ಅಲೆಮಾರಿಗಳನ್ನು ನೋಡಿದಾಗ ಅವರು ಧರಿಸುವ ಉಡುಪುಗಳಿಂದ ಇವರು ಇದೇ ಅಲೆಮಾರಿ ಜಾತಿಗೆ ಸೇರಿದವರು ಎಂಬುದನ್ನು ಹೇಳಬಹುದು. ಅವರು ಭಿಕ್ಷಾಟನೆ ಮಾಡಲು ಬಂದಾಗ, ಇಲ್ಲವೇ ತಮ್ಮ ಕಲೆ ಪ್ರದರ್ಶನ ಮಾಡಲು ಬಂದಾಗ ಇವರು ಇಂತಹ ಅಲೆಮಾರಿಗಳೆಂದು ಗುರುತಿಸಬಹುದಾಗಿದೆ. ಉಳಿದ ಸಮಯದಲ್ಲಿ ಅವರು ಸಾಮಾನ್ಯವಾಗಿ ಹರಿದ, ಹಳೆಯದಾದ ಅಥವಾ ಯಾರಾದರೂ ಕೊಟ್ಟಂತಹ ಬಟ್ಟೆಯನ್ನು ಧರಿಸಿಕೊಳ್ಳುವುದನ್ನು ಕಾಣಬಹುದು. ಇತ್ತೀಚಿನ ದಿನಗಳಲ್ಲಿ ವಿಶೇಷ ಸಂದರ್ಭದಲ್ಲಿ ಸಾಮಾನ್ಯರಂತೆ ಹಲವು ತರಹದ ಬಟ್ಟೆಗಳನ್ನು ಧರಿಸುವರು.

ಅಲೆಮಾರಿಗಳು ಮತ್ತು ತಳಸಮುದಾಯಗಳು ಉಳ್ಳವರು ಉಟ್ಟು ಬಿಟ್ಟ ಬಟ್ಟೆಯನ್ನು ಮಾತ್ರ ಸೇವೆಯ ಪ್ರತಿಯಾಗಿ ಭಿಕ್ಷಾರೂಪದಲ್ಲಿ ಪಡೆದು ಧರಿಸುವಂತಾಗಿತ್ತು. ಇಂತಹ ವ್ಯವಸ್ಥೆಯನ್ನು ಈಗಲೂ ಕೆಲವು ಗ್ರಾಮಗಳಲ್ಲಿ ಕಾಣಬಹುದಾಗಿದೆ. ಗ್ರಾಮದಲ್ಲಿ ಅವರು ಧರಿಸುವ ಬಟ್ಟೆಗಳಿಂದ ಅವರ ಜಾತಿಗಳನ್ನು ಗುರುತಿಸುವ ಪರಿಪಾಟವಿದೆ. ಅವರ ಅರ್ಥಿಕ ಸ್ಥಿತಿ ಅತ್ಯಂತ ಶೋಚನೀಯ ವಾಗಿರುವುದು ಮನಗಾಣಬಹುದಾಗಿದೆ.

ಉಡುಪುಗಳು ಅಂದಿನ ಸ್ಥಿತಿಯಲ್ಲಿ ಆಯಾ ಸಮುದಾಯಗಳನ್ನು ವರ್ಗೀಕರಿಸುವ ಸಾಧನವಾಗಿತ್ತು. ಅವು ವೃತ್ತಿಗಳನ್ನು ಸೂಚಿಸುವ ಸಂಕೇತವಾಗಿದ್ದವು. ಉಡುಗೆಗಳು ಸಮುದಾಯಗಳ ಅಂತಸ್ತನ್ನು ಗುರುತಿಸುವ ಮಾನದಂಡಗಳಾಗಿವೆ. ಬದಲಾದ ಸ್ಥಿತಿಯಲ್ಲಿಯೂ ಅಲೆಮಾರಿಗಳು ಹಾಗೂ ಬುಡುಕಟ್ಟುಗಳು ಜಾತಿ ವ್ಯವಸ್ಥೆಯ ಸಂಪ್ರದಾಯದಂತೆ ಉಡುಗೆಗಳನ್ನು ಧರಿಸುತ್ತಿದ್ದಾರೆ. ವೃತ್ತಿಗಳನ್ನಾಧರಿಸಿ ಉಡುಪನ್ನು ನೋಡಬಹುದಾಗಿದೆ. ಇಂದಿಗೂ ನಾವು ಹಗಲುವೇಷಗಾರರು ಧರಿಸುವ ಉಡುಪುಗಳು, ಡೊಂಬರಾಟ ಪ್ರದರ್ಶಿಸಲು ಧರಿಸುವ ಉಡುಪುಗಳು ಹಾಗೆಯೇ ಸಿಂಧೋಳ್ಳು, ಗೊಂದಲಿಗರು ಹೀಗೆ ವಿವಿಧ ಅಲೆಮಾರಿಗಳು ತಮ್ಮ ವೃತ್ತಿಗನುಗುಣವಾಗಿ ಧರಿಸುವ ಉಡುಗೆಗಳನ್ನು ಕಾಣಬಹುದಾಗಿದೆ.

ಇತ್ತೀಚಿನ ದಿನಗಳಲ್ಲಿ ಯಾವುದೇ ಸಮುದಾಯವು ನಿರ್ಬಂಧವಿಲ್ಲದೆ, ಯಾವುದೇ ತರಹದ ಉಡುಗೆಗಳನ್ನು ಧರಿಸಬಹುದು. ಆದರೆ ಅಲೆಮಾರಿಗಳು ಒಂದು ಹೊತ್ತಿನ ಊಟಕ್ಕೆ ಬವಣೆ ಪಡುತ್ತಿರ ಬೇಕಾದರೆ ಹೊಸ ಉಡುಗೆಗಳು ಅಂದಚಂದದ ಉಡುಪುಗಳನ್ನು ಧರಿಸುವುದು ಕನಸಿನ ಮಾತಾಗಿದೆ. ಜಾತಿ ಬಿಂಬಿಸುವ ಉಡುಗೆಗಳನ್ನು ಇಂದಿಗೂ ಕೆಲವು ಅಲೆಮಾರಿಗಳು ಧರಿಸುವರು.

ಸುಡುಗಾಡುಸಿದ್ಧರು : ಬೇರೆ ಬೇರೆ ಬಣ್ಣಗಳ ತುಂಡು ಬಟ್ಟೆಗಳನ್ನು ತೆಪೆ ಹಾಕಿದ ಕಾವಿಯ ರೀತಿಯಲ್ಲಿ ಉದ್ದನೆಯ ನಿಲುವಂಗಿ, ಕೊರಳಿಗೆ ರುದ್ರಾಕ್ಷಿ, ತಲೆಗೆ ರುಮಾಲು, ಹಣೆಗೆ ವಿಭೂತಿ, ಕಚ್ಚೆಪಂಚೆ, ಸರಗಳು ಶಂಖ ಇತ್ಯಾದಿ.[೬]

ಗೊಂದಲಿಗರು : ತಲೆಗೆ ರುಮಾಲು, ಕಚ್ಚೆಪಂಚೆ, ಅಂಗಿಯ ಮೇಲೆ ಕಪ್ಪುಕೋಟು, ರುದ್ರಾಕ್ಷಿಸರ, ಸಂಬಾಳ, ಚೌಡಿಕೆ, ಗೆಜ್ಜೆ, ಭಂಡಾರ[೭] ಇತ್ಯಾದಿ.

ಕೊರವರು : ಕೈಯಲ್ಲಿ ಕಣಿ, ಸಣ್ಣದಾದ ಬುಟ್ಟಿ, ಮಡಿಸೀರೆ, ಕುಪ್ಪಸ, ಹಣೆಗೆ ವಿಭೂತಿ, ಅಗಲವಾದ ಕುಂಕುಮದ ಬೊಟ್ಟು, ದೊಡ್ಡದಾದ ಮೂಗುತಿ ಇತ್ಯಾದಿ.[೮]

ಸಿಂಧೋಳ್ಳು : ಬಣ್ಣ-ಬಣ್ಣದ ಕಚ್ಚೆ, ಬರಿ ಮೈ, ಚಾಟಿಯಿಂದ ಹೊಡೆದು ಕೊಳ್ಳುವಿಕೆ, ಪೋತರಾಜನ ವೇಷ, ಹಣೆಯ ತುಂಬ ಕುಂಕುಮ ಭಂಡಾರ, ಚಾಕುವಿನಿಂದ ಮೈಮೇಲೆ ಗಾಯ ಮಾಡಿ ಕೊಳ್ಳುವುದು.[೯]

ಬುಡ್ಗಜಂಗಮ : ಹಗಲಿನಲ್ಲಿ ವೇಷ ತೊಟ್ಟು ಸಂದರ್ಭದಲ್ಲಿ ತಕ್ಕಂತೆ ಪಾತ್ರದ ಅನುಗುಣವಾಗಿ ಉಡುಗೆ ಧರಿಸುವುದುಂಟು. ಉದ್ದವಾದ ಕೂದಲು, ಮುಖದಲ್ಲಿ ಬಣ್ಣ, ಕೊರಳಲ್ಲಿ ಸರ, ಮಾಲೆಗಳು ಇತ್ಯಾದಿ.[೧೦]

ಬುಡಬುಡಿಕೆಯವರು : ಕಚ್ಚೆಪಂಚೆ, ತಲೆಗೆ ರುಮಾಲು, ಕೋಟು, ಕೈಯಲ್ಲಿ ಬುಡಬುಡಿಕೆ ವಾದ್ಯ.[೧೧]

ಕೋಲೆಬಸವ : ಕಚ್ಚೆಪಂಚೆ, ಕೋಟು, ತಲೆಗೆ ರುಮಾಲು, ಶಹನಾಯಿ ವಾದ್ಯ, ಡೋಲು ಇತ್ಯಾದಿಗಳು.[೧೨]

ಕುರುಕುರುಮಾಮ : ತಲೆಗೆ ಟವಲುಸುತ್ತಿ ನವಿಲುಗರಿಯನ್ನು ಇರಿಸಿಕೊಂಡಿರವರು,

ಅಂಗಿ, ಲುಂಗಿಯನ್ನು ಭಿನ್ನವಾದ ವಿನ್ಯಾಸದಲ್ಲಿ ತೊಟ್ಟು ಕೊಂಡಿರುತ್ತಾರೆ ಮತ್ತು ಉದ್ದನೆಯ ಕೂದಲು ಬಿಟ್ಟಿರುವವರು.[೧೩]

ಜೋಗಿ : ಕಿವಿಯಲ್ಲಿ ರಿಂಗ್, ತಲೆಗೆ ಪೇಟಾ, ಅಂಗಿಯ ಮೇಲೆ ಕೋಟು, ಪಂಚೆ, ಕೈಯಲ್ಲಿ ತಂಬೂರಿವಾದ್ಯ ಇರುವುದುಂಟು.

ಸಿಕ್ಕಲಗಾರ : ತಲೆಗೆ ತುರುಬು ಕಟ್ಟಿಕೊಂಡು, ಗಡ್ಡ ಬಿಟ್ಟು, ಪ್ಯಾಂಟು, ಅಂಗಿ, ಕೈಯಲ್ಲಿ ಬಳೆ, ಸ್ತ್ರೀಯರು ಚೂಡಿದಾರ, ನತ್ತು, ಓಲೆಗಳನ್ನು ಧರಿಸುವರು.[೧೪]

ಡೊಂಬರು : ಹುಡುಗಿಯರು ಕೇಶರಾಶಿ ಕತ್ತರಿಸಿಕೊಂಡು, ವಿಭಿನ್ನ ವಸ್ತ್ರಗಳನ್ನು ಧರಿಸಿಕೊಳ್ಳುತ್ತಾರೆ. ಅಲಂಕಾರವಾದ ಲಂಗ, ಧಾವಣಿ, ಚೂಡಿ, ಹಾಕಿಕೊಳ್ಳುವರು. ಪುರುಷರು ಬಣ್ಣ ಬಣ್ಣದ ಉಡುಪುಗಳಾದ ಪ್ಯಾಂಟ್, ಅಂಗಿ ಧರಿಸುವರು.[೧೫]

ಘಿಸಾಡಿಗಳು : ಗಂಡಸರು ಲುಂಗಿ, ಶರ್ಟ್, ಪ್ಯಾಂಟ ಧರಿಸಿದರೆ, ಹೆಂಗಸರು ಸೀರೆ ಧರಿಸುವರು.(ಗೋಸಿ(ಕಚ್ಚೆ) ಹಾಕಿಕೊಂಡಿರುತ್ತಾರೆ)

ಶಿಳ್ಳೇಕ್ಯಾತ : ದೋತಿ, ನಿಲುವಂಗಿ ಪುರುಷರು ತೊಟ್ಟರೆ, ಸೀರೆಯನ್ನು ಮಹಿಳೆಯರು ತೊಟ್ಟುಕೊಳ್ಳುತ್ತಾರೆ.

ಬೈಲಪತ್ತಾರ : ಪುರುಷರು ದೋತಿ ತೊಟ್ಟರೆ, ಇಂದಿನ ಯುವಕರು ಪ್ಯಾಂಟ್ ಧರಿಸುತ್ತಾರೆ. ಮಹಿಳೆಯರು ಸೀರೆ ತೊಟ್ಟುಕೊಳ್ಳುತ್ತಾರೆ.

ಚನ್ನದಾಸರು : ತಲೆಯ ಮೇಲೆ ಪೇಟಾ, ಕೈಯಲ್ಲಿ ಏಕನಾದ, ಪಂಚೆ ನಿಲುವಂಗಿ ತೊಡುವರು. ಮಹಿಳೆಯರು ಸೀರೆ ತೊಟ್ಟುಕೊಳ್ಳುತ್ತಾರೆ.

ಹಾವಾಡಿಗರು : ಪುರುಷರು ಲುಂಗಿ ಮತ್ತು ಕಮೀಜು(ಅಂಗಿ) ತೊಟ್ಟರೆ, ಸೀರೆಯನ್ನು ಮಹಿಳೆಯರು ತೊಟ್ಟುಕೊಳ್ಳುತ್ತಾರೆ.

ದುರಗಮುರಗಿ : ಪ್ರದರ್ಶನ ಸಂದರ್ಭದಲ್ಲಿ ಪುರುಷನು ಕೆಂಪು ಬಟ್ಟೆ ಧರಿಸುವನು. ಮಹಿಳೆಯರು ಸೀರೆಯನ್ನು ತೊಟ್ಟುಕೊಳ್ಳುವರು.


ಹಂದಿಜೋಗಿ : ತಲೆಯ ಮೇಲೆ ರುಮಾಲು ಮತ್ತು ಅಂಗಿ ಪುರುಷರು ತೊಟ್ಟರೆ, ಮಹಿಳೆಯರು ಕುಪ್ಪಸ ಮತ್ತು ಸೀರೆಯನ್ನುಟ್ಟು ಕೊಳ್ಳುವರು.

ರಾಜಗೊಂಡ :	ಇತ್ತೀಚಿನ ದಿನಗಳಲ್ಲಿ ಪುರುಷರು ಪ್ಯಾಂಟ್, ಶರ್ಟ್ ಧರಿಸುತ್ತಾರೆ. ಮಹಿಳೆಯರು ಸೀರೆ ಮತ್ತು ಚೂಡಿದಾರ ತೊಡುತ್ತಾರೆ.
ಹೆಳವ :	ತಲೆಯ ಮೇಲೆ ಪೇಟಾ, ಕೊರಳಲ್ಲಿ ಶಾಲ್ಯವನ್ನು ಪುರುಷರು ತೊಟ್ಟರೆ, ಮಹಿಳೆಯರು ಕುಪ್ಪಸ ಮತ್ತು ಸೀರೆಯನ್ನು ಕಚ್ಚೆಯಾಗಿ ತೊಟ್ಟುಕೊಳ್ಳುತ್ತಾರೆ.


ವಿವಿಧ ಅಲೆಮಾರಿ ಸಮುದಾಯಗಳ ವಿಭಿನ್ನ ಜೀವನಶೈಲಿಯ ಚಿತ್ರಗಳು



ಬುಡ್ಗಜಂಗಮರ ಜೀವನ ಶೈಲಿ




ಬುಡ್ಗಜಂಗಮರ ಕಲಾಪ್ರದರ್ಶನ ಪರಿಕರಗಳು



ಗೊಂದಲಿಗರ ಜೀವನ ಶೈಲಿ

ಬುಡಬುಡಿಕೆಯವರು




ಕೋಲೆಬಸವ


ಸಿಂಧೋಳ್ಳು ದುರಗಮುರಗಿ



ಹೆಳವರ ಜೀವನ ಶೈಲಿ



ಚೆನ್ನದಾಸರ ಜೀವನ ಶೈಲಿ



ಬೈಲುಪತ್ತಾರಿಕೆ ಕೆಲಸದಲ್ಲಿ ನಿರತವಾಗಿರುವುದು




ಪರಿಕರಗಳೊಂದಿಗೆ ವಲಸೆ ಹೋಗುತ್ತಿರುವ ಅಲೆಮಾರಿಗಳ ಬದುಕು

ಬೇಟೆಯಾಡುವ ಪರಿಕರಗಳೊಂದಿಗೆ ಅಲೆಮಾರಿಗಳು









ಅಲೆಮಾರಿಗಳು ಬೇಟೆಯಾಡುವುದು

೩.೫. ಆಹಾರ ಪದ್ಧತಿಗಳು

ಅಲೆಮಾರಿ ಸಮುದಾಯಗಳು ಆಹಾರ ಪದ್ಧತಿಯಲ್ಲಿ ಮಾಂಸಾಹಾರವನ್ನು ಹೆಚ್ಚು ಸ್ವೀಕರಿಸುವವರಾಗಿದ್ದಾರೆ. ಇದರಲ್ಲಿ ಕೆಲವರು ಸಸ್ಯಾಹಾರಿಗಳಾಗಿದ್ದರೂ ಮಾಂಸಾಹಾರಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಡುವುದನ್ನು ಕಾಣಬಹುದು. ಆಹಾರಕ್ಕಾಗಿ ಪ್ರಾಣಿಪಕ್ಷಿಗಳ ಬೇಟೆಯಾಡಿ ಅವುಗಳನ್ನು ತಂದು ಬೇಯಿಸಿ, ಇಲ್ಲವೇ ಸುಟ್ಟುಕೊಂಡು ತಿನ್ನುವ ಪದ್ಧತಿಯನ್ನು ಕಾಣಬಹುದು. ಬಹುತೇಕ ಅಲೆಮಾರಿಗಳು ಮಾಂಸಾಹಾರಿಗಳು ಮತ್ತು ಸಸ್ಯಾಹಾರಿಗಳಾಗಿರುವುದನ್ನು ಕಾಣಬಹುದು. ಆದರೆ ಇದರಲ್ಲಿ ಹಲವು ಅಲೆಮಾರಿಗಳು ದನದ ಮಾಂಸವನ್ನು ಸ್ವೀಕರಿಸುವುದಿಲ್ಲ.

ಈ ಅಲೆಮಾರಿ ಸಮುದಾಯಗಳು ತಮ್ಮ ಮದುವೆ ಸಂದರ್ಭಗಳಲ್ಲಿ ಮಾಂಸಾಹಾರವನ್ನೇ ಸೇವಿಸುವುದನ್ನು ನೋಡಬಹುದಾಗಿದೆ. ಕೆಲವು ಹಬ್ಬ ಹರಿದಿನಗಳಲ್ಲಿ ಪ್ರಾಣಿಬಲಿ ಕೊಡುವುದರ ಮೂಲಕ ತಮ್ಮ ಭಕ್ತಿಯನ್ನು ತೋರಿಸುವುದರ ಜೊತೆಗೆ ಮಾಂಸವನ್ನು ಎಲ್ಲ ಸಂಬಂಧಿಕರ ಜೊತೆಗೂಡಿ ಸೇವಿಸುವುದು ಕಾಣುತ್ತೇವೆ.

ಬುರ್ಲಿ, ಕೌಜುಗ, ಮೊಲ, ಅಳಿಲು, ಬೆಕ್ಕು, ಕಾಡುಹಂದಿಯನ್ನು ತಮ್ಮ ಆಹಾರಕ್ಕಾಗಿ ಬಳಸಿಕೊಳ್ಳುತ್ತಾರೆ. ಆದರೆ ಇತ್ತೀಚಿನ ದಿನಮಾನಗಳಲ್ಲಿ ಬೇಟೆಯಾಡುವುದು ಮತ್ತು ಪ್ರಾಣಿಯನ್ನು ಸಾಯಿಸುವುದು ನಿಷೇಧವಿರುವುದರಿಂದ ಹಲವು ಅಲೆಮಾರಿಗಳು ಕದ್ದುಮುಚ್ಚಿ ಬೇಟೆಯಾಡಿ ತಿನ್ನುತ್ತಾರೆ. ಈ ಆಧುನಿಕ ದಿನದಲ್ಲಿ ಮಾರುಕಟ್ಟೆಯಲ್ಲಿ ಮಾಂಸದ ಮಾರಾಟ ಇರುವುದರಿಂದ ಅದನ್ನು ತಂದು ತಿನ್ನುತ್ತಾರೆ. ಕೆಲವು ಬದಲಾವಣೆಗಳನ್ನು ಮಾಡಿಕೊಂಡಿದ್ದಾರೆ.

ಈ ಅಲೆಮಾರಿ ಸಮುದಾಯಗಳಲ್ಲಿ ಸ್ತ್ರೀಯರು ಮತ್ತು ಪುರುಷರು ಮದ್ಯಪಾನ ಸೇವನೆ ಮಾಡುವುದನ್ನು ಕಾಣಬಹುದಾಗಿದೆ. ಈ ಸಂದರ್ಭದಲ್ಲಿ ಕೋಳಿ ಮತ್ತು ಮೀನು, ಕುರಿ ಮಾಂಸವನ್ನು ಸ್ವೀಕರಿಸುವುದನ್ನು ಕಂಡುಬರುತ್ತದೆ.

ಮಾನವ ಮತ್ತು ಅವನ ಆಹಾರಕ್ಕೂ ನಿಕಟವಾದ ಸಂಬಂಧವಿದೆ. ಒಂದು ಜೀವಿ ಬದುಕಬೇಕೆಂದರೆ ಆಹಾರ, ಗಾಳಿ, ನೀರು, ವಸತಿ ಅತಿ ಅವಶ್ಯಕವಾಗಿದೆ. ಇದರಲ್ಲಿ ಒಂದಿಲ್ಲದಿದ್ದರೂ ಬದುಕುವುದು ಸಾಧ್ಯವಿಲ್ಲ. ಆಹಾರ ಕೇವಲ ಮನುಷ್ಯನಿಗೆ ಮಾತ್ರವಲ್ಲದೆ, ಪ್ರಕೃತಿಯಲ್ಲಿ ಹುಟ್ಟಿರುವ ಪ್ರತಿಯೊಂದು ಜೀವಿಗೂ ಅತ್ಯಾವಶ್ಯಕವಾಗಿ ಬೇಕಾಗಿದೆ. ಆದರೆ ಪಡೆಯುವ ವಿಧಾನ, ಮಾರ್ಗಗಳು ಬೇರೆ. ಆದರೂ ಆಹಾರ ದೊರಕಿಸಿಕೊಳ್ಳಬೇಕಾಗಿದೆ. ಆಹಾರ ಪಡೆಯುವ ಕ್ರಮದಲ್ಲಿ ಮಾನವನು ಉಳಿದೆಲ್ಲಾ ಜೀವಿಗಳಿಗಿಂತ ಭಿನ್ನವಾಗಿದ್ದಾನೆ.

ಆಹಾರವು ಸಾಮಾಜಿಕ ಜೀವನದಲ್ಲಿ ಎಷ್ಟರಮಟ್ಟಿಗೆ ಪ್ರಭಾವ ಬೀರಿದೆ ಹಾಗೂ ಬದುಕನ್ನು ಸಮೃದ್ಧಿಗೊಳಿಸಿದೆ ಎಂಬುದನ್ನು ತಿಳಿಯುವುದಾಗಿದೆ. ಮಾನವ ವಿಕಾಸಗೊಂಡಂತೆ ಆಹಾರದ

ಸ್ಪರ್ಧೆ-ಘರ್ಷಣೆಗಳಿಗೆ ಇಳಿದದ್ದು, ಆಹಾರಕ್ಕಾಗಿ ಪರದಾಟವನ್ನು ಇಂದಿನ ದಿನಗಳಲ್ಲೂ ನಡೆಸುತ್ತಿದ್ದಾನೆ. ಈ ಹಿಂದೆ ಆಹಾರದ ಕ್ರಮದ ಮೇಲೆ ನಿರ್ಬಂಧಗಳು ಇದ್ದವು. ಅಂದರೆ ಆಹಾರ ಪಡೆಯುವ ಬಗೆ, ಆಹಾರದ ಪ್ರಕಾರ, ಆಹಾರ ಸಂಗ್ರಹಣೆ ಇತ್ಯಾದಿಗಳೆಲ್ಲವೂ ಜಾತಿಯ ಹೆಸರಿನಲ್ಲಿ ವರ್ಗೀಕರಿಸಲಾಗಿದೆ. ಈ ಹಿಂದೆ ಯಾವ ಜಾತಿಯ ಜನರು ಯಾವ ರೀತಿಯ ಆಹಾರ ಸೇವಿಸಬೇಕು ಮತ್ತು ಯಾವ ರೀತಿಯ ಆಹಾರವನ್ನು ಸೇವಿಸಬಾರದು ಎಂಬುದರ ಕುರಿತು ನಿರ್ಧಿಷ್ಟ ನಿಯಮಗಳಿದ್ದವು. ಕೆಳಜಾತಿಯವರ ಆಹಾರವನ್ನು ಮೇಲ್ಜಾತಿಯವರು ಉಪಯೋಗಿಸಬಾರದು ಎಂಬ ಜಾತಿಯ ವಿಷಬೀಜ ಬಿತ್ತಿದ ಪರಿಣಾಮ ಆಹಾರದಿಂದ ಜಾತಿಯನ್ನು ವರ್ಗೀಕರಿಸಲಾಯಿತು.

ಅಲೆಮಾರಿ ಸಮುದಾಯಗಳಂತೂ ಜಾತಿಯ ಆರ್ಭಟದಲ್ಲಿ ಬಲಿಯಾಯಿತು. ನೆಲೆಯಿಲ್ಲದೆ ಪಾರಂಪರಿಕ ವೃತ್ತಿಯನ್ನು ನೆಚ್ಚಿಕೊಂಡು ಬೇರೆಯವರ ಸುಖಕ್ಕಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶದಲ್ಲಿ ಅಲೆದರು. ಆಹಾರಕ್ಕಾಗಿ ಪರದಾಡಿದರು. ಭಿಕ್ಷಾಟನೆ ವೃತ್ತಿಗಳಿಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟುಕೊಂಡರು. ಹೀಗೆ ಅನೇಕ ಘೋರ ಸಮಸ್ಯೆಗಳಿಂದ, ಅಂದಿನ ಸ್ಥಿತಿಯಿಂದ ಇಂದಿನ ವರೆಗೂ ಅಲೆಮಾರಿಗಳಾಗಿ ಅಲೆದಾಡುತ್ತಿದ್ದಾರೆ. ಅವರಿಗೆ ಒಂದು ಶಾಶ್ವತ ನೆಲೆ ಸಿಕ್ಕಿಲ್ಲ.

ಅಲೆಮಾರಿಗಳು ತಮಗೆ ಎಲ್ಲಿ ಆಹಾರ ದೊರೆಯುತ್ತದೆಂದು ತಿಳಿದುಕೊಂಡು ಅಂತಹ ಸ್ಥಳಗಳಲ್ಲಿ ಕುಟುಂಬಗಳನ್ನು ಕರೆದುಕೊಂಡು ಬಿಡಾರಗಳನ್ನು ಹೂಡಿ ಬೇಟೆಯಾಡಿ ಆಹಾರ ವನ್ನು ಪಡೆಯುತ್ತಿದ್ದಾರೆ. ಇಂದಿನ ಆಧುನಿಕತೆಯಲ್ಲಿಯೂ ಇವರಿಗೆ ಪಕ್ಕಾ ಆಹಾರ ದಕ್ಕದ ಸ್ಥಿತಿಯೂ ಇವರದ್ದಾಗಿದೆ. ಒಂದೊತ್ತಿನ ಊಟಕ್ಕಾಗಿ ಅಲೆದಾಡುವ ಇವರಿಗೆ ಪಕ್ಕಾ ಆಹಾರವಾದರೂ ಎಲ್ಲಿಂದ ಬರಬೇಕು ಆಹಾರ ಸಂಗ್ರಹಿಸಿಕೊಳ್ಳುವುದೇ ಇವರ ದಿನನಿತ್ಯದ ಜೀವನವಾಗಿದೆ.

ಅಲೆಮಾರಿಗಳು ಸ್ವೀಕರಿಸುವ ಆಹಾರ ಕ್ರಮದಲ್ಲಿ ಅವರು ಉಪಯೋಗಿಸುವ ಪರಿಕರಗಳು ಅವರ ಸ್ಥಿತಿಯನ್ನು ಬಿಂಬಿಸುತ್ತವೆ. ಮುಂಜಾನೆ ಹೋಟೆಲ್‌ನಲ್ಲಿ ತಿಂಡಿ ಹಾಗೂ ಚಹಾ ಸೇವನೆ, ಸಾಯಂಕಾಲ ಚಹಾ ತಿಂಡಿ ಸ್ವೀಕರಿಸುವರು. ಹಣವಿದ್ದಾಗ ಮಾತ್ರ ಹೋಟೆಲ್‌ನಲ್ಲಿ ಹೋಗುವುದು ಅವರ ಅಭ್ಯಾಸ. ಇಲ್ಲದಿದ್ದರೆ ತಮ್ಮ ಗುಡಾರಗಳಲ್ಲಿ ಇರುತ್ತಾರೆ. ಊಟಕ್ಕಾಗಿ ಭಿಕ್ಷೆಗೆ ಹೋಗಬೇಕಾಗಿರುವುದು ಅನಿವಾರ್ಯವಾಗಿದೆ. ಅವರು "ಅಮ್ಮವರೇ ನಾವು ಕೂಗಮ್ಮನ ಆಡಿಸುವರು ಬಂದಿದ್ದೇವೆ, ಏನಾದರೂ ಊಟ ಇದ್ದರೆ ನೀಡಿರಿ" ಎಂದು ಊಟಕ್ಕಾಗಿ ಅಂಗಲಾಚುತ್ತಾರೆ. ಆ ರಾತ್ರಿಯಲ್ಲಿ ಏನಾದರೂ ಉಳಿದ ತಂಗಳನ್ನ, ಸಾರು, ಮುದ್ದೆ, ರೊಟ್ಟಿ ಇತ್ಯಾದಿಗಳನ್ನು ಭಿಕ್ಷಾಟನೆಯಲ್ಲಿ ಬೇಡುವರು. ಹಿಟ್ಟಿನ ಗಿರಣಿಗಳಲ್ಲಿ ಕೆಳಗೆ ಬಿದ್ದಿರುವ ಹಿಟ್ಟನ್ನು ಬೇಡಿ ಸ್ವೀಕರಿಸುವರು. ವಾರದ ಸಂತೆಗಳಲ್ಲಿ ಕೊನೆಯಲ್ಲಿ ಉಳಿದ ತರಕಾರಿಗಳನ್ನು ಬೇಡುವರು ಅಥವಾ ಕೆಳಗೆ ಬಿದ್ದ ತರಕಾರಿಗಳನ್ನು ಸಂಗ್ರಹಿಸಿ, ಕೊಳೆತ ಸೊಪ್ಪುಗಳನ್ನು ಪಡೆಯುವರು. ಭಿಕ್ಷೆಯಲ್ಲಿ ಬಂದ ಕಾಳುಗಳನ್ನು ಗಿರಣಿಗೆ ಹಾಕಿಸಿ, ರೊಟ್ಟಿ ಮಾಡುವುದುಂಟು.

'ಅಂಗಡಿಯಿಂದ ದಿನಸಿ ತಂದು ಅಡಿಗೆ ಮಾಡಲು ಆರ್ಥಿಕ ಶಕ್ತಿ ಇಲ್ಲದಿರುವುದರಿಂದ. ಅಲ್ಪ-ಸ್ವಲ್ಪ ಹಣ ಕೊಟ್ಟು ಹೋಟೆಲ್‌ಗಳಲ್ಲಿ ತಿನ್ನುತ್ತೇವೆ. ಕಾಡುಗಳಲ್ಲಿ ಇರಬಹುದಾದ ಜೇನು, ಹಣ್ಣು, ಕಾಯಿ, ಗಡ್ಡೆಗಳು, ಸೊಪ್ಪು ಇತ್ಯಾದಿಗಳನ್ನು ಬೇಯಿಸಿಕೊಂಡು ಸೇವಿಸುತ್ತೇವೆ. ವಾರದ ಸಂತೆಗಳಲ್ಲಿ ಕೆಟ್ಟುಹೊದ ತರಕಾರಿಗಳನ್ನು ಸಂಗ್ರಹಿಸುತ್ತೇವೆ. ದೊಡ್ಡ ನಗರಗಳಲ್ಲಿ ಮಕ್ಕಳನ್ನು ಭಿಕ್ಷೆಗಾಗಿ ಕಳುಹಿಸಿ ಆಹಾರವನ್ನು ಬೇಡಿ ತಿನ್ನುತ್ತೇವೆ. ಮದುವೆ ಮನೆ, ಮಂಟಪಗಳಲ್ಲಿ ಹೊರಹಾಕುವ ಊಟದ ಎಲೆಗಳ ಆಹಾರವನ್ನು ಅಯ್ದುಕೊಂಡು ತಿನ್ನುತ್ತೇವೆ" ಎಂಬ ಸಂಕಟವನ್ನು ತೋಡಿಕೊಳ್ಳುವರು. ಇದು ಅಲೆಮಾರಿಗಳ ಆಹಾರ ವ್ಯವಸ್ಥೆಯ ದುರಂತ ಕಥೆ.

೩.೬ ಅಲೆಮಾರಿಗಳ ಶಿಕ್ಷಣ

ಆಧುನಿಕ ಕಾಲದಲ್ಲಿ ಶಿಕ್ಷಣವು ಮಾನವನ ಬದುಕಿನಲ್ಲಿ ಪ್ರಮುಖವಾದ ಪಾತ್ರವನ್ನು ನಿರ್ವಹಿಸುತ್ತದೆ. ಪ್ರತಿಯೊಬ್ಬರೂ ಶಿಕ್ಷಣ ಪಡೆಯುವುದು ಅವಶ್ಯವಿದೆ. ಅದಕ್ಕಾಗಿ ಕರ್ನಾಟಕ ಸರ್ಕಾರ ಮತ್ತು ಭಾರತ ಸರ್ಕಾರಗಳು ಪ್ರಾಥಮಿಕ ಮತ್ತು ಮಾಧ್ಯಮಿಕ ಹಾಗೂ ಪದವಿ ಮತ್ತು ಇನ್ನಿತರ ವೃತ್ತಿ ಆಧಾರಿತ ಶಿಕ್ಷಣಕ್ಕೆ ಹೆಚ್ಚಿನ ಅಧ್ಯತೆಯನ್ನು ನೀಡಲಾಗುತ್ತಿದೆ. ೬ರಿಂದ ೧೪ರ ವಯಸ್ಸಿನಲ್ಲಿರುವ ಮಕ್ಕಳು ಶಿಕ್ಷಣ ಪಡೆಯುವುದು ಕಡ್ಡಾಯವಾಗಿದೆ. ಅದೇ ರೀತಿ "ಆರ್.ಟಿ.ಇ.(Right to Education)" ಎಂಬ ಮಸೂದೆಯನ್ನು ಕರ್ನಾಟಕ ಸರ್ಕಾರ ಜಾರಿಗೆ ತಂದಿದೆ. ಇದರ ಪರಿಣಾಮವಾಗಿ ಹಿಂದುಳಿದ ತಳ ಸಮುದಾಯ ಮತ್ತು ಅಲೆಮಾರಿಗಳು ಕೂಡ ತಮ್ಮ ಮಕ್ಕಳನ್ನು ಬೇರೆ ಬೇರೆ ಶಿಕ್ಷಣ ಸಂಸ್ಥೆಗಳಲ್ಲಿ ಓದಿಸುವ ಅವಕಾಶವನ್ನು ಪಡೆದಿದ್ದಾರೆ.

ಯಾದಗಿರಿ ಜಿಲ್ಲೆಯಲ್ಲಿ ನೆಲೆ ನಿಂತ ಸಮುದಾಯಗಳಲ್ಲಿಯೇ ಶಿಕ್ಷಣ ಪಡೆಯುವವರ ಮತ್ತು ಪಡೆದವರ ಸಾಕ್ಷರತೆಯನ್ನು ಗಮನಿಸಿದರೆ ಉಳಿದ ಜಿಲ್ಲೆಗಳಿಗಿಂತ ಕೊನೆಯ ಸಾಲಿನಲ್ಲಿರುವುದು ಕಂಡುಬರುತ್ತದೆ. ಇವರದೇ ಈ ಪರಿಸ್ಥಿತಿ ಆದರೆ ಇನ್ನು ಅಲೆಮಾರಿ ಸಮುದಾಯಗಳ ಶಿಕ್ಷಣ ಕುರಿತು, ಅವರು ಶಿಕ್ಷಣ ಪಡೆಯುವ ವ್ಯವಸ್ಥೆ ಕುರಿತು ಅತ್ಯಂತ ಶೋಚನೀಯ ಸ್ಥಿತಿಯಿದೆ. ಏಕೆಂದರೆ ಅಲೆಮಾರಿಗಳು ಒಂದೇ ಕಡೆ ನೆಲೆ ನಿಲ್ಲದೆ ಇರುವುದರಿಂದ ಒಂದು ವಾರದವರೆಗೆ ಒಂದು ಊರಿನಲ್ಲಿದ್ದರೆ ಮತ್ತೊಂದು ವಾರ ಇನ್ನೊಂದು ಊರಿನಲ್ಲಿರುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಈ ಮಕ್ಕಳ ಶಿಕ್ಷಣ ಮರೀಚಿಕೆಯಾಗಿದೆ.

ಈ ಅಲೆಮಾರಿಗಳು ಮನಸ್ಸು ಮಾಡಿ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಬೇಕೆಂದು ಹೆಸರು ನೋಂದಾಯಿಸುತ್ತಾರೆ. ಸ್ವಲ್ಪ ದಿನ ಶಾಲೆಗೆ ಕಳುಹಿಸುತ್ತಾರೆ. ತಮ್ಮ ಹೊಟ್ಟೆಪಾಡಿಗಾಗಿ ಮತ್ತೊಂದು ಊರಿಗೆ ಹೋಗಬೇಕಾಗಿರುವುದರಿಂದ ಮಗುವನ್ನು ಕರೆದುಕೊಂಡು ಹೋಗುತ್ತಾರೆ. ಆಗ ಆ ಮಗು ಶಿಕ್ಷಣದಿಂದ ವಂಚಿತವಾಗುತ್ತದೆ. ಈ ಸಮಸ್ಯೆ ಎಲ್ಲ ಅಲೆಮಾರಿ ಸಮುದಾಯಗಳಲ್ಲಿ ಕಾಣಬಹುದಾಗಿದೆ.

"ನಮ್ಮ ಮಕ್ಕಳು ನಮ್ಮಂಗ ಕೂಲಿ ಮಾಡೋ ಪರಿಸ್ಥಿತಿ ಬರಬಾದ್ರಿ, ನಾಕ ಅಕ್ಷರ ಕಲತು ವಿದ್ಯಾವಂತರಾಗಬೇಕು. ಹಂಗಾಗಬೇಕ್ರಿ ನಮ್ಮ ಮಕ್ಳು. ಇವ್ರಿಗೆ ಸಾಲಿ ಕಲಸಾಕ ವ್ಯವಸ್ಥಾ ಮಾಡ್ರಿ". ಬೆಳಗ್ಗೆ ಎದ್ದೊಡನೆ ಬೈಕ್ ಮೇಲೆ ಕೊಡಗಳನ್ನು ಹಾಕಿಕೊಂಡು ಮಾರಾಟಕ್ಕೆ ಹೋಗುವ ಶೇಖರಯ್ಯ ಅವರು ತಮ್ಮ ಸಮುದಾಯದ ಮಕ್ಕಳ ಉಜ್ವಲ ಭವಿಷ್ಯದ ಕನಸನ್ನು ಬಿಚ್ಚಿಕೊಂಡ ಪರಿ ಇದು.

ಮಕ್ಕಳು ಶಾಲೆಗೆ ಹೋಗಬೇಕು. ಶಿಕ್ಷಣ ಪಡೆದು ಒಳ್ಳೆಯ ಸ್ಥಾನಗಳಿಸಬೇಕು. ಸ್ವಂತ ದುಡಿಮೆ ಯಿಂದ ಜೀವನ ನಡೆಸಬೇಕು ಎಂಬ ಹತ್ತಾರು ಆಸೆಗಳು ಇಲ್ಲಿರುವ ಪಾಲಕರಲ್ಲಿವೆ. ಆದರೆ ದೊಡ್ಡ ಶಾಲೆಗಳಿಗೆ ಸೇರಿಸಲು ಹಣ ಇಲ್ಲ. ದೂರದ ಊರುಗಳಿಗೆ ಹೋಗಿ ಕೊಡ ಮಾರಿಬಂದ ಹಣದಲ್ಲಿ ಜೀವನ ಸಾಗಿಸಬೇಕು. ಹಾಗಂತ ಶಾಲೆಗೆ ಹೋಗುವುದೇ ಬೇಡ ಎನ್ನುವ ಮನೋಭಾವ ಎಳ್ಳಷ್ಟೂ ಇಲ್ಲ.

ಇಲ್ಲಿನ ಮಕ್ಕಳಿಗೆ ಶಾಲೆಗೆ ಹೋಗುವ ಅವಕಾಶಗಳು ದೊರೆಯುತ್ತಿಲ್ಲ. ಮನೆಯಲ್ಲಿ ತಂದೆ-ತಾಯಿ ದುಡಿಯಲು ಹೋಗುತ್ತಾರೆ. ಮನೆಯಲ್ಲಿ ಯಾರೂ ಇರುವುದಿಲ್ಲ. ಪುಟ್ಟ ಮಕ್ಕಳು ಬೇರೆ. ಅವರನ್ನು ನೋಡಿಕೊಂಡು ಶಾಲೆಗೆ ಹೋಗುವುದು ಆಗದ ಮಾತು. ಹೀಗಾಗಿ ಬಹುತೇಕ ಮಕ್ಕಳು ಶಾಲೆಗೆ ಹೋಗುವುದಿಲ್ಲ.

ನೂರಾರು ಕನಸುಗಳನ್ನು ಹೊತ್ತು ಮನೆಯನ್ನು ನಡೆಸುತ್ತಿರುವ ಪಾಲಕರು ಮಾತ್ರ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕೆಂಬ ಅದಮ್ಯ ಆಸೆಯನ್ನು ಹೊತ್ತಿದ್ದಾರೆ. ಹೀನಾಯ ಪರಿಸ್ಥಿತಿಯಿಂದಾಗಿ ಶಾಲೆಗೆ ಕಳುಹಿಸಲು ಆಗುತ್ತಿಲ್ಲ. "ನಮ್ಮ ಹುಡುಗುರ್ನ ಎಲ್ಲಿ ಸಾಲಿಗೆ ಕಳಸೋದ್ರಿ, ಮನ್ಯಾಗ ಯಾರೂ ಇರಂಗಿಲ್ಲ. ನಾವು ಹೊರಗಡೆ ಕೆಲಸಕ್ಕೆ ಹೋಗತೇವ್ರಿ, ದುಡಕೊಂಡ ಬಂದಿದ್ದು, ಎರಡು ಹೊತ್ತು ಊಟಕ್ಕೆ ಸಾಕಾಗತೈತಿ ಎಂದು ಲಕ್ಷ್ಮಮ್ಮ ಅಳಲು ತೊಡಿಕೊಳ್ಳುತ್ತಾರೆ.

ಸರ್ಕಾರಗಳು ಶಿಕ್ಷಣವನ್ನು ಕಡ್ಡಾಯ ಮಾಡುವ ಮಸೂದೆಯನ್ನು ತಂದಿದೆ. ಆದರೆ ಇಂತಹ ಮಕ್ಕಳು ಕಲಿಯುವ ಆಸೆ ಇದ್ದರೂ, ಕಲಿಯಲು ಆಗದಂತಹ ಸ್ಥಿತಿಯನ್ನು ಎದುರಿಸುತ್ತಿರುವುದು ನಿಜಕ್ಕೂ ವಿಷಾದದ ಸಂಗತಿ ಎನ್ನುತ್ತಾರೆ ಇಲ್ಲಿಯ ಹಿರಿಯರು.

ಮಾನವನಿಗೆ ಬೇಕಾದುದು ಕೇವಲ ಆಹಾರವಲ್ಲ. ಏಕೆಂದರೆ ಮನುಷ್ಯ ಬರೀ ದೇಹವನ್ನಷ್ಟೇ ಪಡೆದಿಲ್ಲ. ಅವನಿಗೆ ಆತ್ಮ ಇದೆ. ದೇಹಕ್ಕೆ ಹಸಿವು ಎಷ್ಟು ಮುಖ್ಯವೋ, ಆತ್ಮದ ಹಸಿವಿಗೆ ಶಾಂತಿ ಪ್ರೀತಿ, ಸಹಾನುಭೂತಿ ಬೇಕಾಗಿರುವುದು ಅಷ್ಟೇ ಅನಿವಾರ್ಯವಾಗಿದೆ. ಹಾಗೆಯೇ ಶಿಕ್ಷಣವು ಪ್ರತಿಯೊಬ್ಬ ವ್ಯಕ್ತಿಗೂ ಬೇಕಾಗಿದೆ. ಶಿಕ್ಷಣವನ್ನು ಮಾನವ ಮಾತ್ರ ಪಡೆಯಲು ಸಾಧ್ಯ. ಏಕೆಂದರೆ ಆತನಲ್ಲಿರುವ ಬುದ್ಧಿಶಕ್ತಿ ಸುಪ್ತವಾಗಿರುವ ಅಂತರ್‌ಶಕ್ತಿಗಳೇ ಅದಕ್ಕೆ ಕಾರಣವಾಗಿವೆ. ಬುದ್ಧಿಶಕ್ತಿ ಅಥವಾ ವಿಚಾರಶಕ್ತಿಯ ಜೊತೆಗೆ ಮನುಷ್ಯ ಇನ್ನೂ ಎರಡು ವಿಶೇಷ ಅನುಕೂಲಗಳನ್ನು ಪಡೆದಿದ್ದಾನೆ.

ಒಂದು ಆತನ ಸುದೀರ್ಘ ಬಾಲ್ಯ ಮತ್ತೊಂದು ಆತನ ಮಾತನಾಡುವ ಕಲೆ. ಈ ಮೂರರಿಂದ ಮನುಷ್ಯ ಶಿಕ್ಷಣ ಪಡೆಯಬಲ್ಲ ಏಕಮೇವ ಪ್ರಾಣಿಯಾಗಿದ್ದಾನೆ. ಹೀಗಾಗಿ ಶಿಕ್ಷಣ ಅನಿವಾರ್ಯವಾಗಿದೆ. ವಿಚಾರಶಕ್ತಿ, ಕಲ್ಪನಾಶಕ್ತಿ, ನಿರ್ಣಯಶಕ್ತಿ, ನಿರ್ಮಾಣಶಕ್ತಿ, ಸ್ಮರಣಶಕ್ತಿ ಮುಂತಾದ ಶಕ್ತಿಗಳು ಮಾನವನಲ್ಲಿ ಸುಪ್ತವಾಗಿರುತ್ತವೆ. ಅವುಗಳನ್ನು ಜಾಗೃತಗೊಳಿಸಿ ವಿಕಾಸಗೊಳಿಸುವುದೇ ಶಿಕ್ಷಣವಾಗಿದೆ. ಇಂತಹ ಶಿಕ್ಷಣದ ಗುರಿ ಎಂದರೆ ಆರೋಗ್ಯ, ಶೀಲಸಂವರ್ಧನೆ, ಜ್ಞಾನಶಾಖೆ, ಸಾಂಸ್ಕೃತಿಕ ಹೊಂದಾಣಿಕೆಯ ಜೀವನ, ಆಧುನಿಕತೆಯ ಜೀವನೋಪಾಯ ಇತ್ಯಾದಿಗಳನ್ನೊಳಗೊಂಡಿದೆ. ಶಿಕ್ಷಣವನ್ನು ಸಂಸ್ಕಾರವೆಂದು ಗೌರವಿಸಲಾಗುತ್ತದೆ. ಶಿಕ್ಷಣ ಜೀವನಕ್ಕೆ ಅತ್ಯವಶ್ಯಕವಾಗಿದೆ. ಆದರೆ ಈ ಅಲೆಮಾರಿ ಸಮುದಾಯದ ಎಲ್ಲರಿಗೂ ಸರಿಯಾದ ರೀತಿಯಲ್ಲಿ ಶಿಕ್ಷಣ ಸಿಗದಿರುವುದು ಅಥವಾ ಅವರು ಪಡೆದುಕೊಳ್ಳದಿರುವುದು ಅವರ ಹಿಂದುಳಿಯುವಿಕೆಗೆ ಪ್ರಧಾನ ಕಾರಣವಾಗಿದೆ.

ಶಿಕ್ಷಣವನ್ನು ಸಮಾಜದ ಎಲ್ಲ ಸದಸ್ಯರು ಪಡೆಯಲಾಗಿಲ್ಲ. ಕೇವಲ ಕೆಲವೇ ಸಮುದಾಯಗಳಲ್ಲಿ ಕೇಂದ್ರೀಕೃತವಾಗಿದ್ದನ್ನು ಬಹು ಹಿಂದಿನಿಂದಲೂ ನೋಡುತ್ತೇವೆ. ಅದು ಹಂತಹಂತವಾಗಿ ಕೆಲವೇ ಜನರ ನಡುವೆ ಸೀಮಿತ ಪ್ರದೇಶದಲ್ಲಿ ನಡೆದಿದ್ದನ್ನು ನೋಡುತ್ತೇವೆ. ವೇದಗಳ ಕಾಲದಲ್ಲಿ ಗುರುಕುಲಗಳಲ್ಲಿ, ಬುದ್ಧನ ಕಾಲದಲ್ಲಿ ವಿಹಾರಗಳಲ್ಲಿ, ಮಮ್ಮದಿಯರ ಕಾಲದಲ್ಲಿ ಮಕ್ತಾಬ-ಮದರಸಾಗಳಲ್ಲಿ, ಮಸೀದಿ-ಮಂದಿರ ಮುಂತಾದ ಧಾರ್ಮಿಕ ಪರಿಸರದಲ್ಲಿ ಮಕ್ಕಳಿಗೆ ಶಿಕ್ಷಣ ನೀಡಲಾಗುತಿತ್ತು. ಗಂಜಿಗಾಗಿ ದಿನಪೂರ್ತಿ ಅಲೆಯಬೇಕಾಗಿರುವುದರಿಂದ ಶಿಕ್ಷಣದ ಬಗ್ಗೆ ಆಸಕ್ತಿಯಾದರೂ ಹೇಗೆ ಬಂದೀತು? ಮನುಷ್ಯನಿಗೆ ಮೊದಲು ಅನ್ನ ಬೇಕು. ನಂತರ ಉಳಿದೆಲ್ಲವೂ. ಬದುಕಿಗಾಗಿ ಪರದಾಡುತ್ತಿರುವ ಅಲೆಮಾರಿಗಳಿಗೆ ಶಿಕ್ಷಣ ಮರೀಚಿಕೆಯಾಗಿದೆ. ಒಂದು ವೇಳೆ ಕಲಿಯುವ ಆಸಕ್ತಿಯಿದ್ದರೂ ಅವಕಾಶಗಳಿಲ್ಲ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಸರ್ಕಾರವು ಜಾರಿಗೊಳಿಸಿದರೂ ಇದರ ಬಗ್ಗೆ ಅಲೆಮಾರಿಗಳಿಗೆ ಪರಿವೇ ಇಲ್ಲದಂತಾಗಿದೆ. 'ನಾವುಗಳು ಅಲೆಮಾರಿಗಳು ನಮ್ಮಂತವರಿಗೆ ಈ ಓದು ಬರಹ ಏತಕ್ಕೆ' ಎಂಬ ನಿರುತ್ಸಾಹದಾಯಕವಾದ ಉತ್ತರವನ್ನು ನೀಡುತ್ತಾರೆ. ಜೊತೆಗೆ ಒಂದೊತ್ತಿನ ಊಟವನ್ನು ಹೊಂದಿಸಲು ಪರದಾಡುತ್ತಿರಬೇಕಾದರೆ ಶಾಲೆಗೆ ಹೋಗಿ ಕಲಿಯುವುದು ಅಸಾಧ್ಯವಾದುದು ಎಂದು ಹೇಳುತ್ತಾರೆ.

ಯಾವುದೇ ಒಬ್ಬ ವ್ಯಕ್ತಿಯು ಶಿಕ್ಷಣರಂಗದಲ್ಲಿ ಪ್ರವೇಶ ಮಾಡಬೇಕಾದರೆ, ಅದರ ಹಿಂದೆ ಆ ಕುಟುಂಬದ ಪಾಲುದಾರಿಕೆ ಬಹುಮುಖ್ಯವಾಗಿರುತ್ತದೆ. ಇಂತಹ ಒಂದು ಅವಕಾಶ ಅಲೆಮಾರಿಗಳಿಗಿಲ್ಲ. ಎಲ್ಲವೂ ಶಿಕ್ಷಣದಿಂದ ಸಿಗುವುದಾದರೂ ಅದರಿಂದ ದೂರವಿದ್ದು ಕತ್ತಲೆಯಲ್ಲಿಯೇ ಉಳಿದಿದ್ದಾರೆ.

ಮನೆಯಲ್ಲಿ ಒಬ್ಬ ವಿದ್ಯಾವಂತನಾದರೆ ಉಳಿದೆಲ್ಲ ಸದಸ್ಯರಿಗೆ ಅವನು ಪ್ರಭಾವ ಬೀರುವಂತವನಾಗಿ ಶಿಕ್ಷಣ ಕಲಿಯಲು ಆಸಕ್ತಿ ಬರುತ್ತದೆ. ಕಲಿಸಲು ಅವನಿಗೂ ಆಸಕ್ತಿ ಇರುತ್ತದೆ. ಆದರೆ ಅಲೆಮಾರಿಗಳ ಕುಟುಂಬದಲ್ಲಿ ಅನಕ್ಷರಸ್ಥರಾಗಿರುವುದರಿಂದ ಅವರಿಗೆ ಶಿಕ್ಷಣದ ಒಲವುಗಳ ಬಗೆಗೆ ಅರಿವು ಇಲ್ಲದಿರುವುದು ಕಾರಣವಾಗಿದೆ.

"ಮನೆಯೆ ಮೊದಲ ಪಾಠಶಾಲೆ ಜನನಿತಾನೆ ಮೊದಲ ಗುರು" ಎಂಬುದು ಅಕ್ಷರ ನೀತಿಯ ಮಾತಾಗಿದೆ. ಮನೆಯಲ್ಲಿಯೇ ಬೆಳೆಯುವುದರಿಂದ ಅದರ ಪ್ರಭಾವ ಮಕ್ಕಳ ಮೇಲೆ ಉಂಟಾಗುತ್ತದೆ. ಸಮುದಾಯದ ನೀತಿನಿಯಮ, ಭಾಷೆ, ಸಂಕೇತಗಳೆಲ್ಲವನ್ನು ತಾಯಿ ಕಲಿಸುತ್ತಾಳೆ. ಜೊತೆಗೆ ತಂದೆ, ಅಜ್ಜ-ಅಜ್ಜಿ, ಅಣ್ಣ-ತಮ್ಮ, ಅಕ್ಕ-ತಂಗಿ ಹಾಗೂ ಕುಟುಂಬದ ಇತರೇ ಸದಸ್ಯರ ಮೇಲಿನ ಪ್ರಭಾವದಿಂದ ಅನೇಕ ಅನುಕರಣೆಗಳು ಮಕ್ಕಳ ಮೇಲೆ ಮಾತುಗಾರಿಕೆ ವರ್ತನೆ, ಶಿಸ್ತುಗಳು ಪರಿಣಾಮ ಬೀರುವುದುಂಟು.

"ಶಿಕ್ಷಣ ಮತ್ತು ವ್ಯಕ್ತಿತ್ವ ರೂಪಿಸುವ ಮೂರು ಪ್ರಭಾವಗಳೆಂದರೆ ೧. ಮನೆ, ೨. ತಂದೆ-ತಾಯಿ ಮತ್ತು ಸದಸ್ಯರು, ೩. ಶಿಕ್ಷಕರು ಮತ್ತು ಸ್ಥಳೀಯ ಸಮಾಜ. ಈ ಮೂರು ಅಂಶಗಳು ಅಲೆಮಾರಿಗಳ ಸಮುದಾಯಗಳ ಮೇಲೆ ಪ್ರಭಾವ ಬೀರಲಾರವು. ಕಾರಣ ಮೊದಲನೆಯದು ಮನೆಯಲ್ಲಿ ಕಲಿತವರಾರೂ ಇರುವುದಿಲ್ಲ. ಎರಡನೆಯದು ತಂದೆ-ತಾಯಿ ಇತರೆ ಸದಸ್ಯರು ಅಕ್ಷರ ವಂಚಿತರು. ಇವರನ್ನು ಸ್ಥಳೀಯ ಸಮಾಜ ಮುಟ್ಟಿಸಿಕೊಳ್ಳುವುದಿಲ್ಲ. ಇವರ ಬಗ್ಗೆ ಅಸಹ್ಯ ಭಾವನೆ ಇರುವುದರಿಂದ ಶಿಕ್ಷಣದ ಮೂಲಕ ಪ್ರಭಾವ ಬೀರಲಾರರು. ಶಾಲೆಗೆ ಹೋಗದೆ ಇರುವುದರಿಂದ ಶಿಕ್ಷಕರು ಹೇಗೆ ಪ್ರಭಾವ ಬೀರಲು ಸಾಧ್ಯ. ಆದುದರಿಂದ ಶಿಕ್ಷಣವು ಅಲೆಮಾರಿಗಳಿಗೆ ಕಬ್ಬಿಣದ ಕಡಲೆಯಾಗಿದೆ. ಒಂದು ದೇಶದ ನಿಜವಾದ ಸಂಪತ್ತು ಮಾನವ ಸಂಪನ್ಮೂಲ. ಅವರು ಸುಶಿಕ್ಷಿತರಾಗಿ, ಸ್ವಾವಲಂಬಿಗಳಾಗಿ, ಪ್ರಭಾವಿತರಾದರೆ ಅದು 'ಆಸ್ತಿ' ಎನಿಸುತ್ತದೆ. ಇಲ್ಲವಾದರೆ ದೇಶಕ್ಕೆ ಹೊರೆಯಾಗಬಲ್ಲದು. ಆದುದರಿಂದ ಅವರಿಗೆ ಗುಣಮಟ್ಟದ ಶಿಕ್ಷಣ ಅವಶ್ಯಕತೆಯಿದೆ. ಎಲ್ಲ ಕ್ಷೇತ್ರಗಳಲ್ಲಿ ಜಾಗತೀಕರಣ ಹಾಗೂ ಉದಾರೀಕರಣದ ದಿನಗಳಲ್ಲಿ ಗುಣಮಟ್ಟಕ್ಕೆ ಹೆಚ್ಚಿನ ಮಹತ್ವವಿದೆ".[೧]

ಶೈಕ್ಷಣಿಕ ಸ್ಥಿತಿಗತಿ

ಯಾದಗಿರಿ ಜಿಲ್ಲೆಯಲ್ಲಿ ಅಲೆಮಾರಿ ಸಮುದಾಯಗಳು ಸ್ಥಿರವಾಗಿ ಎಲ್ಲಿ ವಾಸ ಮಾಡಿದ್ದಾರೆಯೋ ಅಂತಹ ಕಡೆಯಲ್ಲಿ ಶಿಕ್ಷಣ ಪಡೆದಿದ್ದಾರೆ. ಎಲ್ಲಿ ಅಲೆಮಾರಿ ಜೀವನವನ್ನು ಅನುಸರಿಸಿದ್ದಾರೆಯೋ ಅಂತಹ ಕಡೆಗಳಲ್ಲಿ ಶಿಕ್ಷಣದಲ್ಲಿ ಪ್ರವೇಶ ಪಡೆದಿರುವುದು ತುಂಬಾ ಕಡಿಮೆ ಪ್ರಮಾಣದಲ್ಲಿ.

ಕಡುಬಡತನದ ಅಲೆಮಾರಿ ಸಮುದಾಯಗಳಿಗೆ ಶಿಕ್ಷಣ ಕಲಿಯಲು ಬೇಕಾದ ವಾತಾವರಣ ನಿರ್ಮಾಣವಾಗಿಲ್ಲ. ಆದ್ದರಿಂದ ಅವರ ನೆಲೆಸುವಿಕೆ ಮತ್ತು ಶಿಕ್ಷಣ ಜೊತೆಗೆ ನಡೆಸುವುದು ಸೂಕ್ತವಾಗಿದೆ. ಇವರು ತಮ್ಮ ಮಕ್ಕಳನ್ನು ಚಿಕ್ಕ ವಯಸ್ಸಿನಲ್ಲಿ ಭಿಕ್ಷೆ ಹಾಗೂ ದುಡಿಮೆಗೆ ಕಳುಹಿಸಿಬಿಡುತ್ತಾರೆ. ಇದು ಮಕ್ಕಳ ಶೈಕ್ಷಣಿಕತೆಗೆ ಅಡ್ಡಿಯನ್ನುಂಟುಮಾಡಿದೆ.

ಈ ಅಧ್ಯಯನಕ್ಕಾಗಿಯೇ ಯಾದಗಿರಿ ಜಿಲ್ಲೆಯನ್ನೊಳಗೊಂಡಂತೆ ಶಹಾಪುರ ಮತ್ತು ಸುರಪುರ ತಾಲೂಕಗಳ ವಿವಿಧ ಅಲೆಮಾರಿ ಸಮುದಾಯಗಳ ಕುರಿತು ಒಟ್ಟಾರೆಯಾಗಿ ಸಮೀಕ್ಷೆಯಲ್ಲಿ ಕಂಡುಬಂದ ಅಂಕಿ ಅಂಶಗಳು ಈ ಕೆಳಗಿನ ಕೋಷ್ಟಕ ೩.೬.೧ರಂತೆ ವಿವಿಧ ಅಲೆಮಾರಿ ಸಮುದಾಯದಲ್ಲಿ

ಶಿಕ್ಷಣಕ್ಕೆ ಅರ್ಹವಾದವರ ಸಂಖ್ಯೆಯಲ್ಲಿ ಪುರುಷರು ಶೇ. ೫೦ (೧೩೧೨)ರಷ್ಟು ಹಾಗೂ ಮಹಿಳೆಯರು ಶೇ. ೫೦ (೧೨೯೨)ರಷ್ಟು ಇದ್ದಾರೆ. ಆದರೆ ಸಾಕ್ಷರರಲ್ಲಿ ಪುರುಷರು ಶೇ. ೧೫.೬೩ (೪೦೭)ರಷ್ಟು ಹಾಗೂ ಮಹಿಳೆಯರು ಶೇ. ೯.೭೨ (೨೫೩)ರಷ್ಟು ಒಟ್ಟು ಜನರಿದ್ದಾರೆ. ನಿರಕ್ಷರಿಗಳು ಪುರುಷರಲ್ಲಿ ಶೇ. ೩೪.೭೫ (೯೦೫)ರಷ್ಟು ಹಾಗೂ ಮಹಿಳೆಯರು ಶೇ. ೩೯.೯೦ (೧೦೩೯)ರಷ್ಟಿದ್ದಾರೆ.

ಕೋಷ್ಟಕ ೩.೬.೧. ಯಾದಗಿರಿ ಜಿಲ್ಲೆಯ ಒಟ್ಟಾರೆ ವಿವಿಧ ಅಲೆಮಾರಿ ಸಮುದಾಯಗಳ ಸಾಕ್ಷರರ್ಹ, ಸಾಕ್ಷರಸ್ಥ ಮತ್ತು ನಿರಕ್ಷರಿಗಳ ಲಿಂಗವಾರು ಪ್ರಮಾಣ

ವಿವರ	ಗಂಡು	ಹೆಣ್ಣು	ಒಟ್ಟು
ಸಾಕ್ಷರತೆ ಹೊಂದಲು ಅರ್ಹವಾದವರು	೧೩೧೨	೧೨೯೨	೨೬೦೪
ಸಾಕ್ಷರತೆ ಹೊಂದಿದವರು	೪೦೭	೨೫೩	೬೬೦
ಅನಕ್ಷರಸ್ಥರರು	೯೦೫	೧೦೩೯	೧೯೪೪


ಅಲೆಮಾರಿ ಸಮುದಾಯಗಳ ಶೈಕ್ಷಣಿಕ ಮಟ್ಟ

ಪ್ರತ್ಯೇಕವಾಗಿ ಜಿಲ್ಲೆಯ ಮೂರು ತಾಲೂಕು(ಯಾದಗಿರಿ, ಶಹಾಪುರ, ಸುರುಪುರ)ಗಳ ನೆಲೆಗಳಲ್ಲಿ ಅಲೆಮಾರಿ ಸಮುದಾಯಗಳ ಲಿಂಗವಾರು ಸಾಕ್ಷರರ್ಹರು, ಸಾಕ್ಷರಸ್ಥರು, ಅನಕ್ಷರಸ್ಥರ ಪ್ರಮಾಣ ಹಾಗೂ ಶೈಕ್ಷಣಿಕಮಟ್ಟದ ಪ್ರಮಾಣವನ್ನು ಅವಲೋಕಿಸಿ ಅಂಕಿ-ಅಂಶಗಳನ್ನು ನೀಡಲಾಗಿದೆ.

ಸಾಕ್ಷರತೆಯ ಪ್ರಮಾಣ: ಸಾಕ್ಷರತೆಯನ್ನು ಪಡೆದವರಲ್ಲಿ ಮೆಟ್ರಿಕ್ ಪೂರ್ವ ಶಿಕ್ಷಣವನ್ನು ಪಡೆದವರು ಹಾಗೂ ಮೆಟ್ರಿಕ್ ನಂತರದ ಶಿಕ್ಷಣ ಪಡೆದವರು ಎಂದು ವಿಂಗಡಿಸಲಾಗಿದೆ. ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲಾ ಶಿಕ್ಷಣ ಪಡೆದವರನ್ನು ಮೆಟ್ರಿಕ್ ಪೂರ್ವ ಶಿಕ್ಷಣದಲ್ಲಿಯೂ, ಪದವಿಪೂರ್ವ, ಪದವಿ, ಸ್ನಾತಕೋತ್ತರ ಶಿಕ್ಷಣ ಪಡೆದವರನ್ನು ಮೆಟ್ರಿಕ್ ನಂತರದ ಶಿಕ್ಷಣದಲ್ಲಿ ಸೇರಿಸಲಾಗಿದೆ.

ಕೋಷ್ಟಕ ೩.೬.೨ರಲ್ಲಿ ಸಾಕ್ಷರತೆಯ ಶೇಕಡಾವಾರನ್ನು ಗಮನಿಸಿದಾಗ ಅಧ್ಯಯನದ ವ್ಯಾಪ್ತಿಗೆ ಸಂಬಂಧಪಟ್ಟ ಯಾದಗಿರಿ ಜಿಲ್ಲೆಯನ್ನೊಳಗೊಂಡಂತೆ ಕೊಂಕಲ್, ಗುರುಮಿಟಕ್ಕಲ್, ಯರಗೋಳು, ಸೈದಾಪುರ, ಹತ್ತಿಕುಣಿಯಲ್ಲಿ ನೆಲೆಯಾಗಿರುವ ೩೩೦ ಕುಟುಂಬಗಳಲ್ಲಿ ಶಿಕ್ಷಣ ಬಹಳಷ್ಟು ಕಡಿಮೆ ಪ್ರಮಾಣದಲ್ಲಿದೆ. ಮೆಟ್ರಿಕ್ ಪೂರ್ವ (ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢ) ಶಿಕ್ಷಣದವರೆಗೆ ಮಾತ್ರ ಕೆಲವರು ಕಲಿತಿದ್ದಾರೆ. ಉಳಿದಂತೆ ಮೆಟ್ರಿಕ್‌ನಂತರ(ಪದವಿಪೂರ್ವ, ಪದವಿ ಹಾಗೂ ಸ್ನಾತಕೋತ್ತರ)ದ ಸಾಕ್ಷರತೆ ಮುಂದಿನ ವಿದ್ಯಾಭ್ಯಾಸಕ್ಕೆ ಹೋದವರ ಸಂಖ್ಯೆ ಕಾಣಬರುವುದಿಲ್ಲ. ಅದರಲ್ಲಿ ಲಿಂಗವಾರು ಸಾಕ್ಷರತೆ ಮತ್ತು ಅನಕ್ಷರಸ್ಥರ ಪ್ರಮಾಣವನ್ನು ಗಮನಿಸಿದಾಗ, ಸಾಕ್ಷರತಸ್ಥರಲ್ಲಿ ಪುರುಷರು ಶೇ. ೬೩ರಷ್ಟು ಮೈಲುಗೈ ಹೊಂದಿದವರಾಗಿದ್ದಾರೆ, ಅದರಲ್ಲಿ ಸ್ತ್ರೀಯರು ಶೇ. ೩೭ರಷ್ಟಿದ್ದಾರೆ. ಶಾಲೆಗೆ ಹೋಗದೇ ಹಿಂದುಳಿದು ಅನಕ್ಷರಸ್ಥರಾಗಿರುವವರ ಸಂಖ್ಯೆ ಗಮನಾರ್ಹ ಸಂಗತಿಯಾಗಿದೆ.

ಲಂಬಚಿತ್ರ: ೩.೬.೧ ಯಾದಗಿರಿ ಜಿಲ್ಲೆಯ ಮೂರು ತಾಲೂಕುವಾರು ಅಲೆಮಾರಿ ಸಮುದಾಯಗಳ ಶೈಕ್ಷಣಿಕ ಹಂತಗಳ ಪ್ರಮಾಣ



ಕೋಷ್ಟಕ: ೩.೬.೨ ಯಾದಗಿರಿ ಜಿಲ್ಲೆಯ ಅಲೆಮಾರಿ ಸಮುದಾಯಗಳ ಲಿಂಗವಾರು, ಶೈಕ್ಷಣಿಕ ಮಟ್ಟ

ವಿವರಗಳು	ಪುರುಷ	ಮಹಿಳೆ	ಒಟ್ಟು
ಒಟ್ಟು ಜನಸಂಖ್ಯೆ	೭೯೩	೭೯೦	೧೫೮೩
ಸಾಕ್ಷರತೆಗೆ ಅನರ್ಹರು	೧೧೧	೧೦೮	೨೧೯
ಸಾಕ್ಷರತೆಗೆ ಅರ್ಹರು	೬೮೨	೬೮೨	೧೩೬೪
ಸಾಕ್ಷರರು			
ಮೆಟ್ರಿಕ್‌ಪೂರ್ವ ಸಾಕ್ಷರತೆ	೨೨೪	೧೩೭	೩೬೧
ಪ್ರಾಥಮಿಕ ಶಿಕ್ಷಣ	೧೧೫	೮೫	೨೦೦
ಮಾಧ್ಯಮಿಕ	೬೪	೨೮	೯೨
ಪ್ರೌಢ ಶಿಕ್ಷಣ	೪೫	೨೪	೬೯
ಮೆಟ್ರಿಕ್‌ನಂತರ ಸಾಕ್ಷರತೆ	೧೧	೧	೧೨
ಪದವಿಪೂರ್ವ	೫	೦	೫
ಪದವಿ	೩	೧	೪
ಸ್ನಾತಕೋತ್ತರ	೩	೦	೩
ಅನಕ್ಷರಸ್ಥರು	೪೪೭	೫೪೪	೯೯೧

ಸಾಕ್ಷರತೆಗೆ ಅರ್ಹವಾದ ವ್ಯಕ್ತಿಗಳ ವಿವರ: ಯಾದಗಿರಿ ಜಿಲ್ಲೆಯ ವಿವಿಧ ಅಲೆಮಾರಿ ಸಮುದಾಯದ ಒಟ್ಟು ಜನಸಂಖ್ಯೆ ೧೫೮೩ಗೆ ಪುರುಷರು ಪ್ರಮಾಣವು ಶೇ ೫೦.೦೮(೭೯೩) ಹಾಗೂ ಮಹಿಳೆಯರು ಪ್ರಮಾಣ ಶೇ ೪೯.೯೧(೭೯೦)ರಷ್ಟಿದೆ. ಇದರಲ್ಲಿ ೦.೬ರ ಪ್ರಮಾಣದ ಮಕ್ಕಳು ಒಟ್ಟು ಶೇ ೧೪ ರಷ್ಟಿದ್ದಾರೆ. ಈ ಮಕ್ಕಳನ್ನು ಶಿಕ್ಷಣ ಪಡೆಯಲು ಅರ್ಹವಲ್ಲದವರು ಎಂದು ಭಾವಿಸಲಾಗಿದೆ. ಸಾಕ್ಷರತೆ ಪಡೆಯಲು ಅರ್ಹವಾದವರ ಪ್ರಮಾಣದಲ್ಲಿ ಪುರುಷ ಪ್ರಮಾಣವು ಶೇ. ೩೪.೪೬ರಷ್ಟಿದ್ದಾರೆ. ಮಹಿಳೆಯರ ಪ್ರಮಾಣ ಶೇ. ೨೦.೨೩ರಷ್ಟಿದೆ. ಅನಕ್ಷರಸ್ಥರ ಪ್ರಮಾಣದಲ್ಲಿ ಪುರುಷ ಪ್ರಮಾಣವು ಶೇ. ೬೫.೫೪ರಷ್ಟಿದ್ದಾರೆ. ಮಹಿಳೆಯರ ಪ್ರಮಾಣ ಶೇ ೭೯.೭೭ರಷ್ಟಿದ್ದಾರೆ.

ಕೋಷ್ಟಕ: ೩.೬.೩ ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ಅಲೆಮಾರಿ ಸಮುದಾಯಗಳ ಲಿಂಗವಾರು, ಶೈಕ್ಷಣಿಕ ಮಟ್ಟ

ವಿವರಗಳು	ಪುರುಷ	ಮಹಿಳೆ	ಒಟ್ಟು
ಒಟ್ಟು ಜನಸಂಖ್ಯೆ	೩೩೩	೩೧೨	೬೪೫
ಸಾಕ್ಷರತೆಗೆ ಅನರ್ಹರು	೫೪	೪೭	೧೦೧
ಸಾಕ್ಷರತೆಗೆ ಅರ್ಹರು	೨೭೯	೨೬೫	೫೪೪
ಸಾಕ್ಷರರು			
ಮೆಟ್ರಿಕ್‌ಪೂರ್ವ ಸಾಕ್ಷರತೆ	೫೯	೩೫	೯೪
ಪ್ರಾಥಮಿಕ ಶಿಕ್ಷಣ	೪೬	೨೧	೬೭
ಮಾಧ್ಯಮಿಕ	೮	೧೦	೧೮
ಪ್ರೌಢ ಶಿಕ್ಷಣ	೫	೪	೯
ಮೆಟ್ರಿಕ್‌ನಂತರ ಸಾಕ್ಷರತೆ	೧	೧	೨
ಪದವಿಪೂರ್ವ	೦	೧	೧
ಪದವಿ	೧	೦	೧
ಸ್ನಾತಕೋತ್ತರ	-	-	-
ಅನಕ್ಷರಸ್ಥರು	೨೨೨	೨೩೦	೪೫೨

ಕೋಷ್ಟಕ ೩.೬.೩ರಲ್ಲಿ ಸಾಕ್ಷರತೆಯ ಶೇಕಡಾವಾರನ್ನು ಗಮನಿಸಿದಾಗ ಅಧ್ಯಯನದ ವ್ಯಾಪ್ತಿಗೆ ಸಂಬಂಧಪಟ್ಟ ಶಹಾಪುರ ತಾಲೂಕುನ್ನೊಳಗೊಂಡಂತೆ ಅತ್ತಿಗೂಡುರು, ಖಾನಪುರ, ಗೋಗಿ, ದಿಗ್ಗಿ, ದೋರನಹಳ್ಳಿ, ಸಗರ ಗ್ರಾಮದಲ್ಲಿ ನೆಲೆಯಾಗಿರುವ ೧೩೧ ಕುಟುಂಬಗಳಲ್ಲಿ ಶಿಕ್ಷಣ ಬಹಳಷ್ಟು ಕಡಿಮೆ ಪ್ರಮಾಣದಲ್ಲಿದೆ.

ಶಹಾಪುರ ತಾಲೂಕಿನ ವಿವಿಧ ಅಲೆಮಾರಿ ಸಮುದಾಯದ ಒಟ್ಟು ಜನಸಂಖ್ಯೆ ೬೪೫ಗೆ ಪುರುಷರು ಪ್ರಮಾಣವು ಶೇ. ೫೧.೬೨(೩೩೩)ರಷ್ಟು ಹಾಗೂ ಮಹಿಳೆಯರು ಪ್ರಮಾಣ ಶೇ. ೪೮.೩೭ (೩೧೨)ರಷ್ಟಿದೆ. ಇದರಲ್ಲಿ ೦.೬ರ ಪ್ರಮಾಣದ ಮಕ್ಕಳು ಒಟ್ಟು ಶೇ. ೧೬ರಷ್ಟಿದ್ದಾರೆ. ಈ ಮಕ್ಕಳನ್ನು ಶಿಕ್ಷಣ ಪಡೆಯಲು ಅರ್ಹವಲ್ಲದವರು ಎಂದು ಭಾವಿಸಲಾಗಿದೆ. ಸಾಕ್ಷರತೆ ಪಡೆಯಲು ಅರ್ಹವಾದವರ ಪ್ರಮಾಣದಲ್ಲಿ ಪುರುಷ ಪ್ರಮಾಣವು ಶೇ. ೨೧ರಷ್ಟಿದ್ದಾರೆ. ಮಹಿಳೆಯರ ಪ್ರಮಾಣ ಶೇ ೧೪ರಷ್ಟಿದೆ. ಅನಕ್ಷರಸ್ಥರ ಪ್ರಮಾಣದಲ್ಲಿ ಪುರುಷ ಪ್ರಮಾಣವು ಶೇ. ೭೯ರಷ್ಟಿದ್ದಾರೆ. ಮಹಿಳೆಯರ ಪ್ರಮಾಣ ಶೇ ೮೬ರಷ್ಟು ಇರುವುದು ಕಂಡುಬರುತ್ತದೆ.

ಕೋಷ್ಟಕ: ೩.೬.೪ ಯಾದಗಿರಿ ಜಿಲ್ಲೆಯ ಸುರುಪುರ ತಾಲೂಕಿನ ಅಲೆಮಾರಿ ಸಮುದಾಯಗಳ ಲಿಂಗವಾರು, ಶೈಕ್ಷಣಿಕ ಮಟ್ಟ

ವಿವರಗಳು	ಪುರುಷ	ಮಹಿಳೆ	ಒಟ್ಟು
ಒಟ್ಟ ಜನಸಂಖ್ಯೆ	೪೨೫	೪೧೦	೮೩೫
ಸಾಕ್ಷರತೆಗೆ ಅನರ್ಹರು	೭೪	೬೫	೧೩೯
ಸಾಕ್ಷರತೆಗೆ ಅರ್ಹರು	೩೫೨	೩೪೪	೬೯೬
ಸಾಕ್ಷರರು			
ಮೆಟ್ರಿಕ್‌ಪೂರ್ವ ಸಾಕ್ಷರತೆ	೧೦೮	೭೮	೧೮೬
ಪ್ರಾಥಮಿಕ ಶಿಕ್ಷಣ	೫೩	೪೬	೯೯
ಮಾಧ್ಯಮಿಕ	೩೯	೨೭	೬೬
ಪ್ರೌಢ ಶಿಕ್ಷಣ	೧೬	೫	೨೧
ಮೆಟ್ರಿಕ್‌ನಂತರ ಸಾಕ್ಷರತೆ	೪	೧	೫
ಪದವಿಪೂರ್ವ	೩	–	೩
ಪದವಿ	–	೧	೧
ಸ್ನಾತಕೋತ್ತರ	೧	–	೧
ಅನಕ್ಷರಸ್ಥರು	೨೪೩	೨೬೬	೫೦೯

ಕೋಷ್ಟಕ ೩.೬.೪ರಲ್ಲಿ ಸಾಕ್ಷರತೆಯ ಶೇಕಡಾವಾರನ್ನು ಗಮನಿಸಿದಾಗ ಅಧ್ಯಯನದ ವ್ಯಾಪ್ತಿಗೆ ಸಂಬಂಧಪಟ್ಟ ಸುರಪುರ ತಾಲೂಕುನ್ನೊಳಗೊಂಡಂತೆ ಕಕ್ಕೇರಿ, ಕೆಂಬಾವಿ, ಕೊಡೆಕಲ್ಲು, ತಿಂಥಣಿ, ನಾರಾಯಣಪುರ, ಲಕ್ಷ್ಮಿಪುರ, ಹುಣಸಗಿ ಗ್ರಾಮದಲ್ಲಿ ನೆಲೆಯಾಗಿರುವ ೧೭೭ ಕುಟುಂಬಗಳಲ್ಲಿ ಶಿಕ್ಷಣ ಬಹಳಷ್ಟು ಕಡಿಮೆ ಪ್ರಮಾಣದಲ್ಲಿದೆ.

ಸುರಪುರ ತಾಲೂಕಿನ ವಿವಿಧ ಅಲೆಮಾರಿ ಸಮುದಾಯದ ಒಟ್ಟು ಜನಸಂಖ್ಯೆ ೮೩೫ ಪುರುಷರು ಪ್ರಮಾಣವು ಶೇ. ೫೧.೦೧(೪೨೬)ರಷ್ಟು ಹಾಗೂ ಮಹಿಳೆಯರು ಪ್ರಮಾಣ ಶೇ. ೪೮.೯೮(೪೦೯)ರಷ್ಟಿದೆ. ಇದರಲ್ಲಿ ೦.೬ರ ಪ್ರಮಾಣದ ಮಕ್ಕಳು ಒಟ್ಟು ಶೇ. ೧೬.೧೬ರಷ್ಟಿದ್ದಾರೆ. ಈ ಮಕ್ಕಳನ್ನು ಶಿಕ್ಷಣ ಪಡೆಯಲು ಅರ್ಹವಲ್ಲದವರು ಎಂದು ಭಾವಿಸಲಾಗಿದೆ. ಸಾಕ್ಷರತೆ ಪಡೆಯಲು ಅರ್ಹವಾದವರ ಪ್ರಮಾಣದಲ್ಲಿ ಪುರುಷ ಪ್ರಮಾಣವು ಶೇ. ೩೨ರಷ್ಟಿದ್ದಾರೆ. ಮಹಿಳೆಯರ ಪ್ರಮಾಣ ಶೇ ೨೩ರಷ್ಟಿದೆ. ಅನಕ್ಷರಸ್ಥರ ಪ್ರಮಾಣದಲ್ಲಿ ಪುರುಷ ಪ್ರಮಾಣವು ೬೮ರಷ್ಟಿದ್ದಾರೆ. ಮಹಿಳೆಯರ ಪ್ರಮಾಣ ಶೇ ೭೭ರಷ್ಟು ಇರುವುದು ಕಂಡುಬರುತ್ತದೆ.

ಈ ಸಮುದಾಯಗಳಿಗೆ ಶಿಕ್ಷಣ ನೀಡಬೇಕಾಗಿದೆ. ಪ್ರಾಥಮಿಕ ಶಿಕ್ಷಣ, ಸಾರ್ವತ್ರಿಕ ಶಿಕ್ಷಣ ಕಡ್ಡಾಯ ಹಾಗೂ ಉಚಿತವಾಗಿ ದೊರೆಯುವಂತಾಗಬೇಕು. ಈಗಾಗಲೇ ಕೇಂದ್ರ ಸರ್ಕಾರ ೬ರಿಂದ ೧೪ ವರ್ಷದ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣ ಪಡೆಯುವ ಹಕ್ಕನ್ನು ಕಾನೂನಿನ ಮೂಲಕ ನೀಡಿರುವುದು ಸ್ವಾಗತಾರ್ಹ. ಕಾನೂನು ಮಾಡಿ ಕೈತೊಳೆದುಕೊಂಡು ಬಿಟ್ಟರೆ ಕೆಲಸವಾಯಿತೆಂದಲ್ಲ. ಅದನ್ನು ಅನುಷ್ಠಾನದಲ್ಲಿ ತರಲು ಸರ್ಕಾರದ ಅಧಿಕಾರಿಗಳು ಮತ್ತು ಸಮುದಾಯದ ವಿದ್ಯಾವಂತರ ಪ್ರಾಮಾಣಿಕ ಪ್ರಯತ್ನ ನಡೆಯಬೇಕಾಗಿದೆ.

ತಲೆತಲಾಂತರಗಳಿಂದ ತಮ್ಮ ಪಾರಂಪರಿಕ ಜ್ಞಾನವನ್ನೇ ಸಮಾಜದ ಇತರೆ ಎಲ್ಲಾ ಸಮುದಾಯಗಳ ಸ್ವಾಸ್ಥ್ಯ ಕಾಪಾಡಲು ಧಾರೆ ಎರೆದ ಈ ಅಲೆಮಾರಿಗಳು ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ಎಂದೂ ಏನನ್ನೂ ಮಾಡಲಾಗಲಿಲ್ಲ. ಅಂತೆಯೇ ಸರ್ಕಾರಗಳು ಕೂಡ ಈ ಅಲೆಮಾರಿ ಮಕ್ಕಳ ಶಿಕ್ಷಣಕ್ಕಾಗಿ ಯಾವುದೇ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡಂತೆ ಕಂಡುಬರುವುದಿಲ್ಲ. ಹಾಗೇನಾದರೂ ಯಾವುದೋ ಒಂದು ಕಾರ್ಯಕ್ರಮ ಹಮ್ಮಿಕೊಂಡರೂ ಅದು ಅಲೆಮಾರಿಗಳಿಗೆ ಸರಿಯಾದ ರೀತಿಯಲ್ಲಿ ಮುಟ್ಟುತ್ತಿರುವುದಿಲ್ಲ. ಇದಕ್ಕೆ ಉದಾಹರಣೆ ಟೆಂಟ್ ಶಾಲೆಗಳು.

ಯಾದಗಿರಿಯಲ್ಲಿ ಕೆಲವು ದಿನಗಳ ಮಟ್ಟಿಗೆ ಅಲೆಮಾರಿಗಳು ವಾಸ ಮಾಡುವ ಪ್ರದೇಶಗಳಲ್ಲಿ ಟೆಂಟ್ ಶಾಲೆಗಳನ್ನು ಸ್ಥಾಪನೆ ಮಾಡಲಾಗಿತ್ತು. ಅದು ಕೆಲವೇ ದಿನಗಳಲ್ಲಿ ಮಾಯವಾಗಿತ್ತು. ಅದಕ್ಕೆ ಹಲವಾರು ಕಾರಣಗಳು. ಆದುದರಿಂದ ಕಾಲಾಂತರದಿಂದ ಶಿಕ್ಷಣ ಪಡೆಯಲು ವಂಚಿತರಾದ ಈ ಅಲೆಮಾರಿ ಮಕ್ಕಳ ಶಿಕ್ಷಣ ಮತ್ತು ಉದ್ಯೋಗದ ದೃಷ್ಟಿಯಿಂದ ಈ ಅಲೆಮಾರಿಗಳಿಗೆ ಶಿಕ್ಷಣಕ್ಕೆ ಸಂಬಂಧಿಸಿದಂತೆ ಒಂದು ವಿಶೇಷ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕಾಗುತ್ತದೆ. ಅಂದಾಗ ಮಾತ್ರ ಅಲೆಮಾರಿಗಳು ಶಿಕ್ಷಣ ಪಡೆಯುವಲ್ಲಿ ಯಶಸ್ವಿಯಾಗಬಹುದು. ಅವುಗಳನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

"೧. ಶಿಕ್ಷಣ ಕ್ಷೇತ್ರದಲ್ಲಿ ಈಗಿರುವ ಸ್ಪರ್ಧೆಯನ್ನು ಗಮನಿಸಿದರೆ ಈ ಅಲೆಮಾರಿಗಳಿಗೆ ಸಾಧಾರಣ ಶಿಕ್ಷಣ ನೀಡುವುದು ಉಪಯೋಗವಿಲ್ಲ ಎನಿಸುತ್ತದೆ. ಈ ಹಿನ್ನೆಲೆಯಲ್ಲಿ ಅಲೆಮಾರಿಗಳಿಗೆ ವಿಶೇಷ

ಶಿಕ್ಷಣದ ಸವಲತ್ತುಗಳನ್ನು ನೀಡಬೇಕಾಗುತ್ತದೆ. ಈ ಕಾರಣಕ್ಕಾಗಿ ಅಲೆಮಾರಿಗಳಿಗೆ ಶಿಕ್ಷಣದಲ್ಲಿ ವಿಶೇಷ ಮೀಸಲಾತಿ ಸೌಲಭ್ಯವನ್ನು ರೂಪಿಸಿ ಜಾರಿಗೊಳಿಸಿದರೆ ಅವರು ಶಿಕ್ಷಣದ ಮುಖ್ಯವಾಹಿನಿಗೆ ಬರಲು ಸಾಧ್ಯವಾಗುವುದು. ಅಲೆಮಾರಿಗಳಿಗೆ ಶಾಲಾ ಕಾಲೇಜು, ಅನುದಾನಿತ ಶಿಕ್ಷಣ ಸಂಸ್ಥೆಗಳು, ಹಾಸ್ಟೆಲ್‌ಗಳಿಗೆ ಪ್ರವೇಶ ಪಡೆಯಲು ಗಳಿಸಿದ ಅಂಕಗಳ ನಿರ್ಬಂಧವಿಲ್ಲದೆ ಅವಕಾಶ ಮಾಡಿಕೊಡಬೇಕು.

೨. ಅಲೆಮಾರಿಗಳಿಗೆ ವೃತ್ತಿಜೀವನ ನಡೆಸಲು ಸಾಧ್ಯವಾಗದೆ ಅತ್ಯಂತ ಕಡುಬಡವರಾಗಿರುವ ಕಾರಣ ಇವರ ಮಕ್ಕಳ ಶಿಕ್ಷಣದ ಅವಶ್ಯಕತೆಯ ಅರಿವಾಗಿರುವುದಿಲ್ಲ. ಆದಕಾರಣ ಅವರಿಗೆ ಅವರ ಮಕ್ಕಳ ಭವಿಷ್ಯದ ಕುರಿತು ಅರಿವು ಮೂಡಿಸಬೇಕಾಗಿದೆ. ಉನ್ನತ ಶಿಕ್ಷಣ ಪಡೆಯುವ ಅಲೆಮಾರಿ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮಹಾನಗರಗಳಲ್ಲಿ ಮತ್ತು ಅವರು ವಾಸ ಮಾಡುವ ಪ್ರದೇಶದ ಜಿಲ್ಲಾ ಕೇಂದ್ರಗಳಲ್ಲಿ ವಿಶೇಷ ಹಾಸ್ಟೆಲ್ ವ್ಯವಸ್ಥೆ ಮಾಡಿದರೆ ಅವರು ಶಿಕ್ಷಣದ ಕಡೆಗೆ ಮುಖಮಾಡಲು ಸಾಧ್ಯವಾಗಬಹುದಾಗಿದೆ.

೩. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಓಬಿಸಿ ಈ ಯಾವುದೇ ಪಟ್ಟಿಯಲ್ಲಿ ಅಲೆಮಾರಿ ಗಳಿದ್ದರೂ 'ಅಲೆಮಾರಿ' ಎಂದು ಗುರುತಿಸಲಾದ ಈ ಸಮುದಾಯದ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣ ದಿಂದ ಉನ್ನತ ಶಿಕ್ಷಣದವರೆಗೆ ಉಚಿತ ಶಿಕ್ಷಣ ನೀಡುವುದನ್ನು ಕಡ್ಡಾಯಗೊಳಿಸಿದರೆ ಮಾತ್ರ ಅವರನ್ನು ಕತ್ತಲಿನಿಂದ ಬೆಳಕಿನೆಡೆಗೆ ತರಲು ಸಾಧ್ಯವಾಗಬಹುದು.

೪. ಅನುದಾನರಹಿತ ಮತ್ತು ಅನುದಾನಸಹಿತ ಪ್ರತಿಷ್ಠಿತ ಶಾಲೆಗಳಲ್ಲಿ ಪ್ರವೇಶ ಕೊಡುವಂತೆ ನೀತಿ ರೂಪಿಸಬೇಕು. ಈಗಾಗಲೇ ಸರ್ಕಾರ ಜಾರಿಗೆ ತಂದ ಆರ್.ಟಿ.ಇ. ಕಾಯ್ದೆಯಡಿಯಲ್ಲಿ ಈ ಅಲೆಮಾರಿ ಮಕ್ಕಳಿಗೆ ವಿಶೇಷವಾದ ನೀತಿಯನ್ನು ರೂಪಿಸಿದರೆ ಶಿಕ್ಷಣದಿಂದ ವಂಚಿತವಾಗುವುದನ್ನು ತಡೆಯಬಹುದು.

೫. ಅಲೆಮಾರಿಗಳಿಗೆ ಉನ್ನತ ಶಿಕ್ಷಣ ಪಡೆಯಲು ವಿಶೇಷ ಮೀಸಲಾತಿ ಕಲ್ಪಿಸುವುದರ ಜೊತೆಗೆ ಈ ಮಕ್ಕಳಿಗೆ ಶಿಕ್ಷಣಕ್ಕಾಗಿ ಹೆಚ್ಚಿನ ಧನಸಹಾಯ ನೀಡಬೇಕಾದ ಅವಶ್ಯಕತೆ ಇದೆ. ಹೀಗೆ ಮಾಡಿದಾಗ ಮಾತ್ರ ಅಲೆಮಾರಿಗಳ ಶಿಕ್ಷಣ ಅಭಿವೃದ್ಧಿ ಸಾಧ್ಯ".[೧೭]

೩.೭. ಆರೋಗ್ಯ

ಈ ಅಲೆಮಾರಿ ಸಮುದಾಯದ ಜನರು ಇತರರು ಸೇವಿಸುವಂತಹ ಪೌಷ್ಟಿಕತೆಯಿಂದ ಕೂಡಿದ ಆಹಾರವನ್ನು ಸೇವಿಸುವುದು ಕಷ್ಟ. ಈ ಪರಿಣಾಮದಿಂದಾಗಿ ಈ ಸಮುದಾಯದ ಜನರು ಹೆಚ್ಚು ಅನಾರೋಗ್ಯಕ್ಕೆ ತುತ್ತಾಗುವ ಸಂಭವವಿರುತ್ತದೆ. ಹಾಗೆಯೇ "ಈ ಸಮುದಾಯದ ಮಕ್ಕಳು ಇತರೆ ಮಕ್ಕಳ ಹಾಗೆ ಪೌಷ್ಟಿಕತೆಯಿಂದ ಕೂಡಿದ ಆಹಾರವನ್ನು ಸೇವಿಸುವುದು ಕಷ್ಟ. ಅಪೌಷ್ಟಿಕತೆಯ ಆಹಾರ ಸೇವಿಸುವುದರ ಕಾರಣದಿಂದಲೂ ಈ ಅಲೆಮಾರಿ ಮಕ್ಕಳು ಮತ್ತು ಜನರು ಅನೇಕ

ರೋಗಗಳಿಗೆ ತುತ್ತಾಗುತ್ತಿದ್ದಾರೆ. ಯಾದಗಿರಿ ಜಿಲ್ಲೆಯ ಭಾಗದಲ್ಲಿ ನೆಲೆ ನಿಂತವರ ಮಕ್ಕಳೇ ಅನಾರೋಗ್ಯ ದಿಂದ ಬಳಲುತ್ತಿರುವ, ಅಪೌಷ್ಟಿಕತೆಗೆ ತುತ್ತಾಗಿರುವ ಚಿತ್ರಣವನ್ನು ನೋಡುತ್ತಿರುವಾಗ ಈ ಅಲೆಮಾರಿಗಳ ಪಾಡಂತು ಹೇಳತೀರದು".[೧೮]

ಅಲೆಮಾರಿಗಳಿಗೆ ಒಂದು ಕಡೆ ಶಾಶ್ವತವಾಗಿ ನಿಲ್ಲಲು ನೆಲೆ ಇಲ್ಲದ ಕಾರಣ ಇವರು ಕೊಳಚೆ ಪ್ರದೇಶದ ಪಕ್ಕದಲ್ಲಿ ಗುಡಿಸಲುಗಳನ್ನು ಹಾಕಿಕೊಂಡು ಜೀವನ ನಡೆಸುತ್ತಿರುತ್ತಾರೆ. ಇದರ ಪರಿಣಾಮದಿಂದ ಇವರ ಮಕ್ಕಳು ಕೆಮ್ಮು, ಜ್ವರ, ವಾಂತಿ, ಬೇಧಿ, ಚಿಕನ್‌ಗುನ್ಯಾಗಳಂತಹ ಮಾರಕ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಇವರಿಗಾಗಿ ಹತ್ತಿರದಲ್ಲಿ ಪ್ರಾಥಮಿಕ ಚಿಕಿತ್ಸಾ ಕೇಂದ್ರವಾಗಲಿ, ಶೌಚಾಲಯದ ವ್ಯವಸ್ಥೆಯಾಗಲಿ ಇರುವುದಿಲ್ಲ. ಇದರ ಪರಿಣಾಮದಿಂದಾಗಿ ಈ ಸಮುದಾಯದ ಜನರು ಮತ್ತು ಮಕ್ಕಳು ಅನೇಕ ಕಾಯಿಲೆಗಳಿಗೆ ತುತ್ತಾಗುವ ಸಂಭವವಿರುವುದನ್ನು ಮತ್ತು ಕಾಯಿಲೆಗೆ ತುತ್ತಾಗಿರುವುದನ್ನು ನೋಡಬಹುದು.

ನಮ್ಮ ಭಾರತದ ಅನೇಕ ಗ್ರಾಮಗಳಲ್ಲಿ ಅಚ್ಚುಕಟ್ಟಾದ ಶೌಚಾಲಯಗಳ ವ್ಯವಸ್ಥೆ ಇಲ್ಲದೇ ಇರುವುದನ್ನು ನೋಡಬಹುದು. ಶೌಚಾಲಯ ಇಲ್ಲದೇ ಇರುವುದರಿಂದ ಗಂಡನ ಮನೆಯನ್ನು ಬಿಟ್ಟು ಬಂದ ಉದಾಹರಣೆಗಳನ್ನು ಪತ್ರಿಕೆಯಲ್ಲಿ ನೋಡಿದ್ದೇವೆ. ಹಳ್ಳಿಯಲ್ಲಿ ಬಯಲೇ ಇವರಿಗೆ ಶೌಚಾಲಯ. ಇನ್ನು ಅಲೆಮಾರಿಗಳಿಗೆ ಎಲ್ಲಿಂದ ಅಚ್ಚುಕಟ್ಟಾದ ಶೌಚಾಲಯ ಸಿಗುತ್ತದೆ ಎಂಬುದು ಡಾಲರ್ ಪ್ರಶ್ನೆಯಾಗಿ ಕಾಡುತ್ತದೆ. "ಅಲೆಮಾರಿಗಳು ಇವತ್ತಿಗೂ ತಮ್ಮದೇ ಆದ ಕೆಲವು ಕಸುಬುಗಳನ್ನು ಮುಂದುವರೆಸಿಕೊಂಡು ಬಂದಿರುವುದನ್ನು ಕಾಣುತ್ತೇವೆ. ಈ ಕೆಲಸ ಮಾಡುವ ಸಂದರ್ಭದಲ್ಲಿ ಆರೋಗ್ಯಕ್ಕೆ ಹೆಚ್ಚಿನ ತೊಂದರೆಗಳಾಗಿರುವುದು ಕಂಡುಬರುತ್ತದೆ. ಕೆಲಸ ಮಾಡುವಾಗ ಹುಳಿ ಮತ್ತು ಸುತ್ತಿಗೆ ಜಾರಿ ಬಿದ್ದು ಕೈ ಕಾಲು ಮೈಗೆ ಗಂಭೀರ ಗಾಯಗಳಾಗುತ್ತವೆ. ಈ ಕೆಲಸ ಮಾಡುವ ಹಲವು ಜನಗಳಿಗೆ ಬೆರಳುಗಳು ಸಂಪೂರ್ಣವಾಗಿ ಕತ್ತರಿಸಿರುವುದನ್ನು ಕಾಣಬಹುದು".[೧೯] ಅಲೆಮಾರಿಗಳು ತಾವು ತಯಾರಿಸಿದ ಡಬ್ಬಿಗಳಿಗೆ ವೆಲ್ಡ್ ಮಾಡುತ್ತಾರೆ. ಸೀಮೆಎಣ್ಣೆಯಿಂದ ನಡೆಸುವ ಸಣ್ಣ ಡಬ್ಬಿಯಲ್ಲಿ ಇಟ್ಟು ಸ್ಫಟಿಕದ ದ್ರಾವಣದಲ್ಲಿ ಕಬ್ಬಿಣದ ಸರಳನ್ನು ಅದ್ದಿ ಈ ಬೆಂಕಿಯಲ್ಲಿ ಕಾಯಿಸಿದ ನಂತರ ವೆಲ್ಡಿಂಗ್ ಮಾಡುತ್ತಾರೆ. ಈ ಸಂದರ್ಭದಲ್ಲಿ ಸ್ಫಟಿಕ ಮತ್ತು ಇದಕ್ಕೆ ಬಳಸುವ ಆ್ಯಸಿಡ್ ಜಾರಿ ಕೈ ಕಾಲುಗಳ ಮೇಲೆ ಬಿದ್ದು ಕಾಲುಗಳಿಗೆ ಗಾಯಗಳಾಗಿರುವುದನ್ನು ಕ್ಷೇತ್ರಕಾರ್ಯದಲ್ಲಿ ತಿಳಿದುಬರುತ್ತದೆ. ಕಬ್ಬಿಣದ ರಾಡ್‌ಗಳು ಕೈಗೆ ಚುಚ್ಚಿ ನಂಜು ಆಗುವಂತಹ ಕಾಯಿಲೆಗೆ ಗುರಿಯಾದ ಉದಾಹರಣೆಗಳನ್ನು ಈ ಅಲೆಮಾರಿ ಸಮುದಾಯದಲ್ಲಿ ಕಾಣಬಹುದು.

ಅಲೆಮಾರಿಗಳು ವ್ಯಾಪಕವಾಗಿ ಹಳ್ಳಿ ಹಳ್ಳಿಗೆ ಹೋಗಿ ವ್ಯಾಪಾರ ಮಾಡುವುದರಿಂದ ಅಲ್ಲೇ ಟಾರ್ಪಲ್ ಶೆಡ್‌ಗಳನ್ನು ಹಾಕಿ ಮಳೆಗಾಳಿ ಎನ್ನದೆ ಸಣ್ಣ ಶೆಡ್‌ಗಳಲ್ಲಿ ವಾಸಿಸುವುದರಿಂದ ಆರೋಗ್ಯವು

ಹದಗೆಡುತ್ತಿರುತ್ತದೆ. ಇವರು ವಾಸವಾಗಿರುವ ಸ್ಥಳಗಳಲ್ಲಿ ಶುದ್ಧವಾದ ನೀರು ಸಹ ಸಿಗದೆ ಇರುವುದನ್ನು ಕಾಣಬಹುದು. ವಾಸಿಸಲು ಯೋಗ್ಯವಲ್ಲದ ಜಾಗಗಳಲ್ಲಿ ತಮ್ಮ ಬಿಡಾರಗಳನ್ನು ಇವರು ಹಾಕಿ ಕೊಂಡಿರುತ್ತಾರೆ. ಈ ಕಾರಣದಿಂದ ಅಲೆಮಾರಿಗಳಲ್ಲಿ ಸದಾ ಜ್ವರ ಮತ್ತು ಇತರ ರೋಗಗಳು ಸಾಮಾನ್ಯವಾಗಿ ಕಂಡುಬರುತ್ತವೆ. ನಗರದ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವ ಈ ಸಮುದಾಯಗಳಿಗೆ ಆರೋಗ್ಯದ ದೃಷ್ಟಿಯಿಂದ ವ್ಯತಿರಿಕ್ತವಾದ ಪರಿಣಾಮಗಳುಂಟಾಗುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಿದೆ.

ಅಲೆಮಾರಿ ಸಮುದಾಯಗಳು ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಅಥವಾ ಯಾವುದೇ ಕಾಯಿಲೆಗೆ ತುತ್ತಾದಾಗ ಅವರು ಹೆಚ್ಚು ಅವಲಂಬನೆಯಾಗುವುದು ಗಿಡಮೂಲಿಕೆ ಔಷಧಗಳ ಮೇಲೆ ಎಂದರೆ ತಪ್ಪಾಗಲಾರದು. ಕಾಡಿನಲ್ಲಿ ಏನೆಲ್ಲಾ ಇದೆ ಎಂಬುದನ್ನು ಪ್ರಾಯೋಗಿಕವಾಗಿ ತೋರಿಸಿ ಕೊಟ್ಟವರು ಅಲೆಮಾರಿಗಳು. ಕಾಡಲ್ಲಿ ದೊರೆಯಬಹುದಾದ ಅನೇಕ ವಿಶೇಷ ಗಿಡಮೂಲಿಕೆಗಳನ್ನು ಪರಿಚಯಿಸಿದವರು. ಎಲೆ ಬೇರು, ಕಾಂಡ, ಬಳ್ಳಿ, ಪಶು ಪಕ್ಷಿಗಳ ಚರ್ಮ, ಎಲುಬುಗಳನ್ನು ಇತರೆ ಕಾಡಿನ ಉತ್ಪನ್ನಗಳನ್ನು ತಂದು ಮನುಷ್ಯರ ಆರೋಗ್ಯದಲ್ಲಿ ಹೊಂದಿಕೆಯಾಗುವಂತೆ ಯಾವ ಯಾವ ವಿಧಾನಗಳ ಮೂಲಕ ಹೇಗೆ ಔಷಧಿಗಳನ್ನು ತಯಾರಿಸಿ ಕೊಡಬೇಕೆಂದು ಕಂಡುಕೊಂಡವರು. ತಮ್ಮ ಜನರಿಗೆ ಯಾವುದಾದರೂ ಕಾಯಿಲೆಗಳು ಬಂದಾಗ ತಮ್ಮ ಬಳಿ ಇರುವ ಗಿಡಮೂಲಿಕೆ ಉಪಯೋಗಿಸಿ ಔಷಧಿಗಳನ್ನು ಸಿದ್ಧಪಡಿಸಿ ರೋಗಗಳನ್ನು ಗುಣಪಡಿಸುವರು. ಆಧುನಿಕ ಔಷಧಿಗಳಿಗೆ ಮಾರುಹೋಗದೆ ಪಾರಂಪರಿಕ ವೈದ್ಯಪದ್ಧತಿಯಿಂದ ಕಾಯಿಲೆಗಳನ್ನು ಗುಣಪಡಿಸಿಕೊಳ್ಳುವರು. ಈ ಅಲೆಮಾರಿಗಳು ಆರ್ಥಿಕವಾಗಿ ದುರ್ಬಲವಾಗಿರುವುದರಿಂದ ಇಂಗ್ಲಿಷ್ ಔಷಧಿಗಳಿಗೆ ಹಾಗೂ ಡಾಕ್ಟರ್‌ಗಳಿಗೆ ಹೆಚ್ಚು ಹಣ ನೀಡಬೇಕಾಗಿರುವುದರಿಂದ ಅನಿವಾರ್ಯವಾಗಿ ತಮ್ಮ ಮನೆ ವೈದ್ಯಪದ್ಧತಿಯಾದ ಗಿಡಮೂಲಿಕೆಗಳನ್ನು ಬಳಸುವುದರ ಮೂಲಕ ರೋಗ ನಿವಾರಣೆ ಮಾಡಿಕೊಳ್ಳಲು ಪ್ರಯತ್ನಿಸುವುದನ್ನು ಕಾಣಬಹುದು. ಇಂದಿನ ಆಧುನಿಕ ಯುಗದಲ್ಲಿಯೂ ಕೆಲವು ಬದಲಾವಣೆಯನ್ನು ಮಾಡಿಕೊಳ್ಳದ ಅಲೆಮಾರಿಗಳನ್ನು ಗಮನಿಸಬಹುದು. ಅಲೆಮಾರಿಗಳ ಆರೋಗ್ಯದ ದೃಷ್ಟಿಯಿಂದ ನೋಡಿದಾಗ ಅಷ್ಟೇನೂ ಸುಧಾರಿತ ವ್ಯವಸ್ಥೆಯಿಲ್ಲದಿರುವುದು ಕಂಡುಬರುತ್ತದೆ. ಆರೋಗ್ಯ ಸಮಸ್ಯೆ ಇವರನ್ನು ಕಾಡುತ್ತದೆ.

ಅಲೆಮಾರಿಗಳು ಊರೂರು ತಿರುಗುವುದರಿಂದ ಮೂಲಭೂತ ಸೌಲಭ್ಯಗಳಾದ ನೀರು, ಆಹಾರ, ಶುಭ್ರವಾದ ಬಟ್ಟೆ ಅವರಿಗೆ ದೊರೆಯದೇ ಇರುವುದರಿಂದ ಅವರು ಸ್ವಚ್ಛತೆಯನ್ನು ಕಾಪಾಡಿಕೊಳ್ಳುವುದು ಬಹಳ ಕಷ್ಟ. ಯಾರದೋ ಮನೆಯ ಅನ್ನ, ಯಾರದೋ ಮನೆಯ ಬಟ್ಟೆಗಳು, ಎಲ್ಲಿಯೋ ವಾಸ ಎಂಬಂತೆ ಊರಿಂದ ಊರಿಗೆ ಸಂಚಾರಿಗಳಾಗಿ ನೆಲೆಯಿಲ್ಲದ ಇವರಿಗೆ ಸ್ವಚ್ಛತೆ ಎಂಬುದು ಮರೀಚಿಕೆಯಾಗಿದೆ.

ಅಲೆಮಾರಿಗಳಲ್ಲಿ ಧೂಮಪಾನ ಮತ್ತು ಮದ್ಯಪಾನದ ವ್ಯಸನ ಜಾಸ್ತಿ. ಕೆಲವರು ಮೋಜಿಗಾಗಿ, ಮತ್ತೊಬ್ಬರು ಮಾನಸಿನ ತೊಳಲಾಟಗಳನ್ನು ಮರೆಸುವ ಸಾಧನವಾಗಿ ಇವುಗಳನ್ನು ಬಳಸಿ ಅನಾರೋಗ್ಯಕ್ಕೆ ತುತ್ತಾಗುವರು. ಅಲೆಮಾರಿಗಳಲ್ಲಿ ಸ್ತ್ರೀಯರು ತಂಬಾಕು, ನಶ್ಯೆ, ಸೇವನೆಗಳು ಹೆಚ್ಚಾಗಿ ಕಾಣಬರುತ್ತವೆ. ಪುರುಷರು ಬೀಡಿ, ಸಿಗರೇಟು, ಗೋಟ್ಕಾ ಪಾನ ಮಸಾಲ, ಸಾರಾಯಿ, ಬ್ರಾಂದಿ, ಹೆಂಡ, ಇತ್ಯಾದಿ ಅಮಲು ನೀಡುವ ಪೇಯಗಳನ್ನು ಸೇವಿಸುತ್ತಾರೆ. ಈ ಸೇವನೆಯ ಚಟಕ್ಕೆ ಅಂಟಿಕೊಂಡ ಅದೆಷ್ಟೋ ಅಲೆಮಾರಿ ಯುವಕರು ತಮ್ಮ ಆರೋಗ್ಯ ಹಾಳು ಮಾಡಿಕೊಂಡು ಮರಣ ಹೊಂದಿದ ಅನೇಕ ಉದಾಹರಣೆಗಳನ್ನು ಈ ಸಮುದಾಯಗಳಲ್ಲಿ ಕಾಣಬಹುದು.

೩.೮. ಅಲೆಮಾರಿ ಮಹಿಳೆಯರ ಸ್ಥಾನಮಾನ

ಅಲೆಮಾರಿ ಸಮುದಾಯಗಳಲ್ಲಿ ಮಹಿಳೆಯರಿಗೆ ಸ್ವತಂತ್ರ ಸ್ಥಾನಮಾನ, ಸಮಾನತೆ, ಸಮಬಾಳು ಕೊಡುವುದರ ಮೂಲಕ ಅಪಾರವಾದ ಗೌರವ ಕೊಡುವುದನ್ನು ನೋಡಬಹುದಾಗಿದೆ. ಸಂಪತ್ತಿನಲ್ಲಿ ಆಕೆಯದು ಸಮಾನ ಪ್ರಮಾಣವಿರುತ್ತದೆ. ಈ ಮೊದಲು ಸ್ತ್ರೀಯರು ಯಾವ ರೀತಿ ಸ್ವತಂತ್ರವಾಗಿ ಅಲೆಯುತ್ತಿದ್ದರೋ ಈಗಲೂ ಕೂಡ ಅವರು ಸ್ವತಂತ್ರವಾಗಿ ತಮ್ಮ ಕೆಲಸಗಳನ್ನು ಮಾಡುತ್ತಾ ಅಲೆಯುವುದನ್ನು ನೋಡಬಹುದಾಗಿದೆ. ಸ್ತ್ರೀಯರ ಸ್ಥಾನಮಾನದ ಕೆಲವು ವಿಚಾರಗಳಲ್ಲಿ ನೋಡಿದಾಗ ಅಲೆಮಾರಿ ಸಮುದಾಯಗಳು ಮತ್ತು ನೆಲೆ ನಿಂತ ಸಮುದಾಯದವರಲ್ಲಿ ಭಿನ್ನತೆಯನ್ನು ಕಾಣಬಹುದು. ಸ್ತ್ರೀಯರು ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವಂತಹ ವ್ಯವಸ್ಥೆಯನ್ನು ಮೊದಲಿನಿಂದಲೂ ಪಾಲಿಸುತ್ತಾ ಬಂದಿದ್ದಾರೆ. ಅಷ್ಟೇ ಅಲ್ಲ, ಅವರು ಇದನ್ನು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ವರ್ಗಾಯಿಸುತ್ತ ಬಂದಿರುವುದನ್ನು ಅಲೆಮಾರಿ ಸಮುದಾಯಗಳಲ್ಲಿ ಕಾಣಬಹುದು.

ಅಲೆಮಾರಿ ಸಮುದಾಯಗಳಲ್ಲಿ ಆಚರಿಸುವ ಪೂಜಾ ಕ್ರಿಯೆಗಳಲ್ಲಿ ಮಹಿಳೆಯರು ಹೆಚ್ಚಾಗಿ ಭಾಗವಹಿಸುತ್ತಾರೆ. ದುಡಿಮೆಯಿಂದ ಹಿಡಿದು ಎಲ್ಲಾ ಹಂತದ ಸಂದರ್ಭಗಳಲ್ಲೂ ಪುರುಷರಷ್ಟೇ ಸ್ತ್ರೀಯರಿಗೂ ಸ್ಥಾನಮಾನಗಳನ್ನು ಕೊಟ್ಟಿರುವುದು ಇಂದಿಗೂ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಕ್ಕೆ ಬಂದಿದೆ. ಯಾರೂ ಯಾರಿಗೂ ಗುಲಾಮರಾಗುವ ಅಥವಾ ದಾಸಿಯಾಗುವ ಪ್ರಮೇಯ ಇಲ್ಲದ ಸಹಬಾಳ್ವೆಯ ಮಂತ್ರದೊಂದಿಗೆ ಬದುಕು ಸಾಗಿಸುತ್ತಾರೆ. ಬಡತನ ಇರಬಹುದು, ಮೂಲಭೂತ ಸೌಲಭ್ಯಗಳಿಲ್ಲದಿದ್ದರೂ ಸ್ತ್ರೀಯರಿಗೆ ಸ್ವಾತಂತ್ರ್ಯ ಕೊಟ್ಟಿರುವುದನ್ನು ಅಲೆಮಾರಿ ಸಮುದಾಯಗಳಲ್ಲಿ ಕಾಣಬಹುದಾಗಿದೆ.

ಅಲೆಮಾರಿ ಸಮುದಾಯವು ಕೌಟುಂಬಿಕ ವ್ಯವಸ್ಥೆಯ ದುಡಿಮೆಯಲ್ಲಿ ಸಮಾನತೆ, ಸಮಾನ ಶ್ರಮ ವಹಿಸುವಿಕೆ, ಸಮಾನ ಅನುಭೋಗ ವ್ಯವಸ್ಥೆ ಇರುವುದರಿಂದ ಪ್ರಾಚೀನಕಾಲದ ಸಾಂಘಿಕ ಪದ್ಧತಿ ಮರುಕಳಿಸುತ್ತದೆ. ಅಂದಿನ ಜೀವನ ಪದ್ಧತಿಯು ಸಾಂಘಿಕವಾಗಿಯೇ ಇದ್ದು ಸಮಾನ

ಶ್ರಮವಿಭಜನೆಯಿದ್ದು ಬದುಕು ಸಾಗಿಸಲು ಎಷ್ಟು ಬೇಕೋ ಅಷ್ಟೇ ಸಂಪಾದನೆ ಮಾಡುತ್ತಿದ್ದರು. ಅಗತ್ಯಕ್ಕಿಂತ ಹೆಚ್ಚಿನದನ್ನು ಸಂಪಾದಿಸುತ್ತಿರಲಿಲ್ಲ. ಇಂತಲ್ಲಿ ಯಾವುದೇ ತರಹದ ಯಜಮಾನಿಕೆ ಯಿರುವುದಿಲ್ಲ. ಹೆಂಗಸರು ಗಂಡಸರು ಮಾಡುವ ಕೆಲಸಗಳಲ್ಲಿ ವ್ಯತ್ಯಾಸವಿತ್ತೇ ವಿನಾ ಅಧಿಕಾರದ ದರ್ಪಗಳಿರಲಿಲ್ಲ. ಗಂಡಸರು ಬೇಟೆ ಮತ್ತು ಇತರೆ ಕಾರ್ಯದಲ್ಲಿ ನಿರತರಾದರೆ ಹೆಂಗಸರು ಅಡುಗೆ ಮತ್ತು ಪಶುಸಂಗೋಪನೆಯಲ್ಲಿ ತೊಡಗಿರುತ್ತಿದ್ದರು. ಇಲ್ಲಿ ಸ್ತ್ರೀ-ಪುರುಷರಿಬ್ಬರ ಶ್ರಮವೂ ಸಾಮೂಹಿಕ ವಾಗಿಯೇ ಜರುಗುತ್ತಿದ್ದವು. ಹೆಣ್ಣನ್ನು ಸಂತಾನೋತ್ಪತ್ತಿ ಮೂಲವೆಂದು ತಿಳಿದರೂ ಅದು ಆಕೆಯ ಜೈವಿಕ ಕ್ರಿಯೆಯೆಂದು ತಿಳಿದಿದ್ದರು. ಅಲ್ಲಿನ ಸಂಪತ್ತು ಸ್ತ್ರೀ-ಪುರುಷರಿಬ್ಬರಿಗೂ ಸೇರಿತ್ತು.

ಹೆಣ್ಣು ಕೇವಲ ಬೋಗದ ವಸ್ತುವಾಗಿರಲಿಲ್ಲ. ಸಾಮೂಹಿಕ ಶ್ರಮ, ಸಾಮೂಹಿಕ ಅನುಭೋಗ ಅಂದಿನ ವ್ಯವಸ್ಥೆಯ ಪ್ರಮುಖ ಲಕ್ಷಣವಾಗಿತ್ತು. ಇಂದಿಗೂ ಅಲೆಮಾರಿ ಸಮುದಾಯಗಳು ಸಮಾನತೆ ಯನ್ನು ಜೀವಂತವಾಗಿಟ್ಟುಕೊಂಡಿರುವುದನ್ನು ಕಾಣಬಹುದು. ಮೇಲ್ನೋಟಕ್ಕೆ ಕುಟುಂಬದಲ್ಲಿ ಪುರುಷನ ಯಜಮಾನಿಕೆ ಗುರುತಿಸಿದರೂ ಇದರ ಹಿಂದೆ ಹೆಂಡತಿಯ ಪ್ರಭಾವವನ್ನು ತಳ್ಳಿ ಹಾಕುವಂತಿಲ್ಲ. ಪ್ರತಿಯೊಂದು ಕೆಲಸ ಕಾರ್ಯಗಳನ್ನು ನಿರ್ವಹಿಸುವಾಗಲೂ ಪುರುಷರು ಸ್ತ್ರೀಯರ ಸಲಹೆ ಕೇಳುತ್ತಾರೆ. ಮಹಿಳಾವಾದಿಗಳ ಪ್ರಶ್ನೆ ಎಂದರೆ ಅಲೆಮಾರಿ ಕುಟುಂಬದಲ್ಲಿ ಸ್ತ್ರೀಯು ಗರ್ಭಿಣಿಯಾಗಿರುವಾಗ ಭಿಕ್ಷೆ ಬೇಡುತ್ತಾಳೆ, ಹೆರಿಗೆಯಾದ ಸ್ವಲ್ಪ ದಿನಗಳಿಗೆ ಭಿಕ್ಷೆಗೆ ಹೋಗುತ್ತಾಳೆಂದು ಹಾಗೂ ಪಂಚಾಯಿತಿ, ನ್ಯಾಯಕಟ್ಟೆಯಲ್ಲಿ ಸ್ತ್ರೀಯರಿಗೆ ಆದ್ಯತೆ ಇಲ್ಲವೆಂದು. ಇಂತಹ ಪ್ರಶ್ನೆಗೆ ಅಲೆಮಾರಿ ಸ್ತ್ರೀಯರನ್ನು ಕೇಳಿದಾಗ ಹೇಳುವುದೇನೆಂದರೆ "ಹಿಂದಿನಿಂದಲೂ ರೂಢಿಗತವಾಗಿ ಬಂದ ಪದ್ಧತಿಯಾಗಿದ್ದು ಹೆರಿಗೆಯಾದ ಸ್ವಲ್ಪ ದಿನಗಳಲ್ಲಿ ನಾವೇ ಭಿಕ್ಷೆ ಬೇಡಲು ಹೋಗುತ್ತೇವೆ. ಪುರುಷರು ಒತ್ತಾಯ ಮಾಡುವುದಿಲ್ಲ. ಕೂಸಿನ ನೆಪದಿಂದ ಜಾಸ್ತಿ ಭಿಕ್ಷೆ ಸಿಗುತ್ತದೆ ಎಂಬ ಉದ್ದೇಶಕ್ಕಾಗಿ ನಾವೇ ಹೊರಡುತ್ತೇವೆ. ಗರ್ಭಿಣಿಯಿರುವಾಗ ನಾವು ಭಿಕ್ಷೆಗೆ ಹೋಗಲು ಕಾರಣ, ನಮ್ಮ ನರಗಳು ಸಡಿಲ ಗೊಂಡು ಹೆರಿಗೆಗೆ ಯಾವುದೇ ತೊಂದರೆಯಾಗುವುದಿಲ್ಲ. ಆದುದರಿಂದ ನಾವೇ ಬಿಡಾರದಿಂದ ಹೊರಗೆ ಬರುತ್ತೇವೆ" ಎಂದು ಹೇಳುತ್ತಾರೆ. "ನಮ್ಮಲ್ಲಿ ಮೇಲು-ಕೀಳೆಂಬ ಪ್ರಶ್ನೆ ಮೂಡುವುದಿಲ್ಲ ವಾದ್ದರಿಂದ ನಾವು ಭಿಕ್ಷೆಗೆ ಹೋದರೆ ನಮ್ಮ ಪುರುಷರು ಬೇರೆ ವೃತ್ತಿಯಲ್ಲಿ ತೊಡಗಿರುತ್ತಾರೆ. ನಾವೊಂದು ವೃತ್ತಿ ಕೈಗೊಂಡರೆ, ಅವರೊಂದು ವೃತ್ತಿಯನ್ನು ಕೈಗೊಳ್ಳುತ್ತಾರೆ. ಇದರಲ್ಲಿ ತಾರತಮ್ಯವಿದೆ ಎಂದಾದರೆ ಅದು ನಿಮ್ಮ ಗ್ರಹಿಕೆ ಎನ್ನುತ್ತಾರೆ. ಹೇಗೆ ಒಂದು ಎತ್ತಿನ ಬಂಡಿಗೆ ಎರಡು ಚಕ್ರಗಳ ಅವಶ್ಯಕತೆ ಮತ್ತು ಸಮಾನ ಸಹಕಾರವಿದೆಯೋ ಕುಟುಂಬದ ಪಾಲನೆಗೂ ಗಂಡ-ಹೆಂಡತಿ ಎಂಬ ಚಕ್ರಗಳು ಸಮಾನವಾಗಿ ಉರುಳುವುದು ಅಗತ್ಯ. ಇಬ್ಬರ ನಡುವೆ ಪ್ರೀತಿ, ಸಹಬಾಳ್ವೆ, ಸಹಕಾರ, ದಯೆ ಹೊರತು ವೈಮನಸ್ಸು, ತಾರತಮ್ಯತೆ ಇಲ್ಲ. ಒಂದು ಕೆಲಸದಲ್ಲಿ ಸ್ತ್ರೀಯರ ಪಾತ್ರ ಎಷ್ಟು ಮುಖ್ಯವೋ ಪುರುಷರ ಪಾತ್ರವೂ ಅಷ್ಟೇ ಮುಖ್ಯವಾಗಿದೆ ಎಂದು ಅಲೆಮಾರಿ ಸ್ತ್ರೀಯರು ಹೇಳುತ್ತಾರೆ.

ಮನೆಯ ಯಜಮಾನಿಕೆಯಲ್ಲಿ ಪುರುಷ ಹೇಳಿದಂತೆ ಎಲ್ಲರೂ ಕೇಳಬೇಕು ನಾನು ಮಾಡಿದ್ದೆ ಕಾನೂನು, ಹೇಳಿದ್ದೆ ವೇದವಾಕ್ಯ ಎಂದು ಕುಟುಂಬದಲ್ಲಿ ಯಾವ ಸದಸ್ಯರೂ ಹೇಳಲಾರರು. ಶ್ರಮವಿಭಜನೆಗೆ ತಕ್ಕಂತೆ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಉಳಿದಂತೆ ಸಂಬಂಧಗಳಲ್ಲಿ ಕುಡಿದು ಜಗಳ ಕಾಯುತ್ತಾರೆಂದು ಕಂಡುಬಂದ ಅವರು ಮತ್ತೆ ಕೇವಲ ೧೦-೧೫ ನಿಮಿಷಗಳಲ್ಲಿ ಹೊಂದಾಣಿಕೆಯಾಗುತ್ತಾರೆ. ತುಂಬಾ ಸೂಕ್ಷ್ಮವಾಗಿ ಗಮನಿಸಿದಾಗ ಕುಟುಂಬದ ಜವಾಬ್ದಾರಿಯು ಸ್ತ್ರೀಯ ಮೇಲೆಯೇ ನಿಂತಿರುವುದು ಕಂಡುಬರುತ್ತದೆ. ಇಲ್ಲಿ ಗಂಡಸರು ಕೇವಲ ನಾಮ ಮಾತ್ರ ಯಜಮಾನ. ಇಬ್ಬರೂ ಸೇರಿ ಕಿರಿಯ ಸದಸ್ಯರ ಮೇಲೆ ಪ್ರಭಾವ ಬೀರುವರು. ಒಟ್ಟಾರೆ ಅಲೆಮಾರಿಗಳ ಕುಟುಂಬದಲ್ಲಿ ಕಂಡುಬರುವ ಸಂಬಂಧಗಳ ದೃಷ್ಟಿಕೋನ ಎಂದರೆ ಸಮಾನತೆ ಮತ್ತು ಸ್ವತಂತ್ರವಾದುದಾಗಿದೆ.

ಕ್ಷೇತ್ರಕಾರ್ಯದಲ್ಲಿ "ಅಲೆಮಾರಿ ವಕ್ತೃದಾರರಾದ ಯಂಕಮ್ಮ ಮತ್ತು ಶಂಕರಶಾಸ್ತ್ರಿಯನ್ನು ಸ್ತ್ರೀಯರ ಕುರಿತು ಕೇಳಿದಾಗ ಈ ಕೆಳಗಿನಂತೆ ವಿವರಗಳನ್ನು ನೀಡಿದ್ದಾರೆ".[೨೦] ಪ್ರಸ್ತುತ ಅಧ್ಯಯನದ ಶುದ್ಧತೆಗಾಗಿ ಈ ಕೆಳಗಿನಂತೆ ವಿಂಗಡಿಸಿಕೊಳ್ಳಲಾಗಿದೆ.

ಕೋಷ್ಟಕ ೩.೮.೧. ಕುಟುಂಬದಲ್ಲಿ ಲಿಂಗಸಂಬಂಧಗಳ ವ್ಯವಸ್ಥೆ

ಸಮುದಾಯ	ಪುರುಷ	ಸ್ತ್ರೀ
ಯಾದಗಿರಿ ಜಿಲ್ಲೆಯಲ್ಲಿ ಬರುವ ಅಲೆಮಾರಿಗಳು	ಬಿಡಾರ ನಿರ್ಮಾಣ	ಬಿಡಾರ ನಿರ್ಮಾಣದ ಕಾರ್ಯದಲ್ಲಿ ಸಹಾಯಕರಾಗುವುದು.
	ಬಿಡಾರ ಸಂರಕ್ಷಣೆ	ಬಿಡಾರ ಶುಚಿತ್ವ
	ಮಕ್ಕಳ ಚಲನವಲನಗಳಲ್ಲಿ ಭಾಗಿ	ಸಂಪೂರ್ಣ ಮಕ್ಕಳ ಪೋಷಣೆ
	ವೃತ್ತಿಯಿಂದ ದಾನ್ಯಗಳ ಸಂಗ್ರಹಣೆ	ದಾನ್ಯಗಳ ಸಂಗ್ರಹ ಮತ್ತು ಸ್ವಚ್ಚಮಾಡುವುದು.
	ಬೇಟೆಗಾರಿಕೆ ಮಾಡುವುದು ಮತ್ತು ಇದರ ಪರಿಕರ ಸಂಗ್ರಹ	ಬೇಟೆಯಿಂದ ತಂದ ಮಾಂಸವನ್ನು ಭಾಗ ಮಾಡಿ ಶುಚಿಗೊಳಿಸಿ ಬೇಯಿಸುವುದು.
	ಅಂಗವಿಕಲ ಮತ್ತು ವೃದ್ಧರಿಗೆ ಆಸರೆಯಾಗಿ (ಗಿಡಮೂಲಿಕೆ ಔಷಧಿಗಳನ್ನು ತಂದುಕೊಡುವುದು)	ಅಂಗವಿಕಲ ಹಾಗೂ ವೃದ್ಧರ ಸಂಪೂರ್ಣ ಪೋಷಣೆಯ ಜವಾಬ್ದಾರಿ.
	ಪರಸ್ಪರ ಸುಖ-ದುಃಖಗಳಲ್ಲಿ ಭಾಗಿ	ಪರಸ್ಪರ ಸುಖ-ದುಃಖಗಳಲ್ಲಿ ಭಾಗಿ

ನೆಂಟರ ಯೋಗಕ್ಷೇಮ ನೋಡುವುದು(ಕುಡಿಸುವುದು-ತಿನ್ನಿಸುವುದು)	ನೆಂಟರ ಯೋಗಕ್ಷೇಮದಲ್ಲಿ ತಲ್ಲೀನ ಊಟೋಪಚಾರವನ್ನು ಮಾಡುವುದು.
ಭಿಕ್ಷೆ ಪರಿಕರ ಮತ್ತು ಕರಕುಶಲ ತಯಾರಿಕೆಯಲ್ಲಿ ತೊಡಗುವುದು	ಭಿಕ್ಷೆ ಪರಿಕರ ಮತ್ತು ಕರಕುಶಲತೆಯ ತಯಾರಿಕೆಯಲ್ಲಿ ತೊಡಗಿಸಿಕೊಳ್ಳುವಿಕೆ
ಮಕ್ಕಳಿಗೆ ವೃತ್ತಿ ತರಬೇತಿ ನೀಡುವುದು (ಹಾಡು, ನೃತ್ಯ, ಸಾಹಸ, ವಾದ್ಯಗಳು ನುಡಿಸುವಿಕೆ, ಸಂಭಾಷಣೆ ಇತರೆ)	ವೃತ್ತಿ ಪ್ರೋತ್ಸಾಹ, ತಪ್ಪನ್ನು ತಿದ್ದುವುದು
ಸಂಸ್ಕಾರಗಳಲ್ಲಿ ಭಾಗಿಯಾಗುವುದು	ಸಂಸ್ಕಾರಗಳಲ್ಲಿ ಭಾಗಿ ಯಾಗುವುದು.

೩.೯. ನ್ಯಾಯ ಪಂಚಾಯಿತಿ

ಅಲೆಮಾರಿ ಸಮುದಾಯಗಳಲ್ಲಿ ತಮ್ಮ ಕುಟುಂಬದ ಸದಸ್ಯರ ನಡುವೆ ಅಥವಾ ಕುಟುಂಬದಲ್ಲಿ ಏನಾದರೂ ಸಮಸ್ಯೆಗಳು ಉದ್ಭವಿಸಿದಲ್ಲಿ ಆ ಸಮಸ್ಯೆಗಳ ಪರಿಹಾರಕ್ಕೆ ಅದೇ ಸಮುದಾಯದ ಕುಲಪಂಚಾಯಿತಿ ಸದಸ್ಯರು ಸಹಾಯಕ್ಕೆ ಬರುತ್ತಾರೆ. ಇಂತಹ ವ್ಯವಸ್ಥೆಯು ಈಗಲೂ ಅನೇಕ ಸಮುದಾಯಗಳಲ್ಲಿ ಚಾಲ್ತಿಯಲ್ಲಿದೆ. ಆಧುನಿಕ ವ್ಯವಸ್ಥೆಗಳಾದ ಕಾನೂನು ನಿಬಂಧನೆಗಳಿಗೆ ಒಳಗಾಗದೆ, ತಮ್ಮ ಸಮುದಾಯದ ನಿಯಮಗಳಿಗೆ ಬದ್ಧರಾಗಿರುತ್ತಾರೆ. ನ್ಯಾಯಗಳನ್ನು ಪರಿಹರಿಸುತ್ತಾರೆ. ಕುಲಪಂಚಾಯಿತಿಯ ಹಿರಿಯರು, ಯಜಮಾನರು, ಪಂಚರು ಅಥವಾ ೫ರಿಂದ ೭ ಸದಸ್ಯರಗಳನ್ನೊಳಗೊಂಡ ಪಂಚಾಯಿತಿ ರಚನೆಯಾಗಿರುತ್ತದೆ. ಈ ಕುಲಪಂಚಾಯಿತಿಗೆ ಫಿರ್ಯಾದಿಗಾರರು ಅಹವಾಲನ್ನು ಸಲ್ಲಿಸುತ್ತಾರೆ. ಅಹವಾಲನ್ನು ಗಮನಿಸಿದ ಪಂಚಾಯಿತಿ ಇಬ್ಬರನ್ನೂ ಕರೆದುಕೊಂಡು ವಾದ ವಿವಾದಗಳನ್ನು ಪರಿಗಣಿಸುತ್ತಾರೆ. ಕೆಲವು ಬಾರಿ ತೀರ್ಮಾನ ಕೊಡುವುದು ಕಷ್ಟವಾಗುವುದರಿಂದ ವಿವಿಧ ತಂತ್ರಗಳನ್ನು ಪ್ರಯೋಗಿಸಿ ಸರಿ ತಪ್ಪುಗಳನ್ನು ಕಂಡುಹಿಡಿದು ಅವರವರ ತಪ್ಪುಗಳಿಗೆ ಅನುಗುಣವಾಗಿ ಶಿಕ್ಷೆ, ದಂಡಗಳನ್ನು ವಿಧಿಸುತ್ತಾರೆ. ಮನೆಗಳು, ಬಯಲು ಅಂಗಳ, ದೇವರ ಗುಡಿ, ನೀರು ಹರಿಯುವ ಸ್ಥಳ, ಜಗಲಿಕಟ್ಟೆ ಇತ್ಯಾದಿಗಳು ನ್ಯಾಯಪಂಚಾಯಿತಿ ಸ್ಥಳಗಳಾಗಿ ಆಯ್ಕೆ ಮಾಡಿಕೊಂಡು ಈ ಸ್ಥಳಗಳು ಪವಿತ್ರ ಸ್ಥಳವೆಂದು ಭಾವಿಸಿ ಸರಿ-ತಪ್ಪುಗಳನ್ನು ಒಪ್ಪುವರು. ಯಾವುದೇ ಕಾರಣಕ್ಕೂ ಪಂಚಾಯಿತಿ ತೀರ್ಮಾನವನ್ನು ಉಲ್ಲಂಘಿಸುವಂತಿಲ್ಲ. ಎಂತಹ ಶಿಕ್ಷೆಗಾದರೂ ಬದ್ಧರಾಗಿರುತ್ತಾರೆ.

ತಮ್ಮ ಬದುಕಿನ ರೂಢಿ ಪರಂಪರೆಗಳಲ್ಲಿ ವ್ಯತ್ಯಾಸ ಉಂಟಾದಾಗ ಜಾತಿ ಪಂಚಾಯಿತಿಯು ನ್ಯಾಯ ಮಾಡಿ ಪರಂಪರೆಯನ್ನು ಮುರಿದವರಿಗೆ ಶಿಕ್ಷೆ ವಿಧಿಸುತ್ತದೆ. ಜಾತಿ ಪಂಚಾಯಿತಿಗಳು ಇಂದಿಗೂ ಕೆಲವು ಸಮುದಾಯಗಳಲ್ಲಿ ಜಾರಿಯಲ್ಲಿದ್ದು ತಮ್ಮ ಸಮುದಾಯಕ್ಕೆ ಬೇಕಾದ ರಕ್ಷಣೆ ಹಾಗೂ ನ್ಯಾಯ ಒದಗಿಸುವ ಕಾರ್ಯವನ್ನು ಯಶಸ್ವಿಯಾಗಿ ಮಾಡುತ್ತದೆ. ಗಂಡ-ಹೆಂಡಿರ ಜಗಳ, ಅನೈತಿಕ ಸಂಬಂಧಕ್ಕೆ ಸಂಬಂಧಪಟ್ಟ ಜಗಳವನ್ನು ಪಂಚಾಯಿತಿಯು ಅತ್ಯಂತ ಯಶಸ್ವಿ ರೀತಿಯಲ್ಲಿ ತನ್ನ ಕಾರ್ಯವನ್ನು ನಿರ್ವಹಿಸುತ್ತದೆ.

ಉದಾಹರಣೆಗೆ ರಾಜಗೊಂಡರ ಅಲೆಮಾರಿ ಸಮುದಾಯದಲ್ಲಿ ಅಪರಾಧಿಗಳು ಸರ್ಕಾರದ ನ್ಯಾಯಾಲಯದಿಂದ ತಪ್ಪಿಸಿಕೊಳ್ಳಬಹುದು. ಆದರೆ ಅವರ ನ್ಯಾಯ ಪಂಚಾಯಿತಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಅಲೆಮಾರಿ ಸಮುದಾಯಗಳಲ್ಲಿ ಬಳಕೆಯಿರುವ ಹಲವಾರು ಅನೈತಿಕ ಸಂಬಂಧಗಳು ಮತ್ತು ಅದಕ್ಕೆ ಕೊಡುವ ಶಿಕ್ಷೆಗಳು ವೈಶಿಷ್ಟ್ಯಪೂರ್ಣವಾಗಿರುತ್ತವೆ. ಉದಾಹರಣೆಗೆ ಕುಟುಂಬದ ಸದಸ್ಯನೊಬ್ಬನಿಗೆ ಅವನ ತಪ್ಪಿನಿಂದಾಗಿ ಇಲ್ಲವೆ ತಪ್ಪಿತಸ್ಥವೆಂದು ಬಗೆದು ಅವನಿಗೆ ಹೊಡೆದಾಗ ಆ ಹೊಡೆತದಿಂದ ಆತ ಗಾಯಗೊಂಡು ಗಾಯದಲ್ಲಿ ಹುಳಗಳು ಕಂಡುಬಂದರೆ ಹೊಡೆದ ವ್ಯಕ್ತಿ ಅಪರಾಧಿಯೆಂದು ತಿಳಿಯುವರು. ಹೊಡೆದ ವ್ಯಕ್ತಿಯು ಪಂಚಾಯಿತಿ ವಿಧಿಸಿದ ಶಿಕ್ಷೆಯನ್ನು ಅನುಭವಿಸಬೇಕಾಗಿರುವುದಲ್ಲದೆ ನಿಗದಿತ ದಂಡ ಕಟ್ಟಿಕೊಡಬೇಕಾಗುತ್ತದೆ.

ಒಬ್ಬ ವ್ಯಕ್ತಿ ಕೈಗಡ(ಸಾಲ)ವಾಗಿ ಹಣ ಪಡೆದು ಪಡೆದಿಲ್ಲವೆಂದು ತಿರುಗಿಬಿದ್ದರೆ ಈ ಜಾತಿ ಪಂಚಾಯಿತಿ ಸಾಲ ಪಡೆದವನಿಗೆ ಕುಲದಿಂದ ಹೊರಗೆ ಹಾಕುವರು. ಸಾಲ ಮರುಪಾವತಿ ಮಾಡುವವರೆಗೆ ಆತನನ್ನು ಕುಲಕ್ಕೆ ಸೇರಿಸಿಕೊಳ್ಳುವುದಿಲ್ಲ. ಈ ಕುಲಬಾಹಿರ ವ್ಯಕ್ತಿಯಿಂದ ನೀರು, ಚಹಾ, ಊಟ ಸ್ವೀಕರಿಸುವಂತಿಲ್ಲ. ಹಲವರು ಆತನೊಂದಿಗೆ ಮಾತನಾಡದೆ ಮುಟ್ಟಿಕೊಳ್ಳುವುದಿಲ್ಲ. ರಾಜಗೊಂಡರಲ್ಲಿ ಜಾತಿಬಾಹಿರ ಶಿಕ್ಷೆ ಅತ್ಯಂತ ಕಠಿಣವಾಗಿರುತ್ತದೆ ಎಂಬುದು ಅಧ್ಯಯನದಿಂದ ತಿಳಿದುಬರುತ್ತದೆ.

ಆಧುನಿಕತೆಯ ಸೋಂಕು ಅಲೆಮಾರಿಗಳಲ್ಲಿ ಸ್ಪಂದಿಸಿದ್ದಕ್ಕಾಗಿ ಮತ್ತು ಜಾತಿ ಪಂಚಾಯಿತಿಯ ಶಿಕ್ಷೆಗಳಿಂದ ಸದಸ್ಯರು ತಪ್ಪಿಸಿಕೊಳ್ಳಲಾರಂಭಿಸಿದ್ದರಿಂದ ಜಾತಿ ಪಂಚಾಯಿತಿಯು ಮೊದಲಿನ ಸ್ವರೂಪ ಕಳೆದುಕೊಂಡು ಬದಲಾಗುತ್ತಿವೆ. ದೈಹಿಕವಾಗಿ ದಂಡಿಸುವುದು, ಅವಮಾನಿಸುವುದು ಸರಿಯಾದುದಲ್ಲ ಎಂಬ ಭಾವನೆ ಅಲೆಮಾರಿಗಳಲ್ಲಿ ಬರುತ್ತಿದೆ. ಈ ಕಾರಣದಿಂದ ಜಾತಿಪಂಚಾಯಿತಿಯೆಂಬುದು ಸ್ವಲ್ಪಮಟ್ಟಿಗೆ ತನ್ನ ಅಸ್ತಿತ್ವವನ್ನು ಕಳೆದುಕೊಂಡಿದೆ ಎಂದರೆ ತಪ್ಪಾಗಲಾರದು.

ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತಮಗೆ ತಾವು ನೆಲೆಸಿರುವ ಸ್ಥಳಗಳಲ್ಲಿ ಬೇರೆಯವರಿಂದ ತೊಂದರೆಗಳು ಬಂದಾಗ ಅವನ್ನು ನಿವಾರಿಸಿಕೊಳ್ಳಲು ಪೊಲೀಸ್, ನ್ಯಾಯಾಲಯದ ಮೊರೆ

ಹೋಗುತ್ತಿರುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಿದೆ. ಈ ಅಲೆಮಾರಿಗಳು ಪಾರಂಪರಿಕವಾಗಿ ಪಂಚಾಯಿತಿಯಿಂದ ಆಧುನಿಕ ನ್ಯಾಯ ಪಂಚಾಯಿತಿ ವ್ಯವಸ್ಥೆಗೆ ಹೊಂದಿಕೊಳ್ಳುತ್ತಿರುವುದನ್ನು ಗಮನಿಸಬಹುದು.

೩.೧೦. ವಾಸದ ನೆಲೆಗಳು

ಆಧುನಿಕವಾಗಿ ನೆಲೆ ನಿಂತ ಸಮುದಾಯದ ಕೆಲವರಲ್ಲಿ ಕಾರು, ಬಂಗಲೆ, ಎಸ್ಟೇಟುಗಳು, ಶ್ರೀಮಂತಿಕೆಯ ಸಂಕೇತಗಳಾದರೆ ಅಲೆಮಾರಿಗಳಿಗೆ ದೇವರು, ದೇವತೆ, ಬಳ್ಳಿ, ಮರ, ಭಾಷೆ ಇತ್ಯಾದಿಗಳು ಸಂಕೇತಗಳಾಗಿವೆ. ಆ ಸಂಕೇತದ ಚಿಹ್ನೆಗಳ ಮೂಲಕ ಅಲೆಮಾರಿಗಳು ಎಲ್ಲಿಯೋ ಅಲೆದಾಡಿದರೂ ಗುರುತು ಹಿಡಿದು ಆತ್ಮೀಯವಾಗಿ ಬೆರೆಯುತ್ತಾರೆ ಮತ್ತು ತಾತ್ಕಾಲಿಕವಾಗಿ ಒಂದು ಕಡೆ ನೆಲೆಸಲು ಮುಂದಾಗುತ್ತಾರೆ.

ನೆಲ ಮತ್ತು ನೆಲೆಯಿಲ್ಲದ ಅಲೆಮಾರಿಗಳ ವಾಸ : ಒಂದು ಸಮುದಾಯಕ್ಕೆ ವಾಸ ಮಾಡಲು ತನ್ನದೇ ಆದ ಒಂದು ನೆಲ ಬೇಕಾಗುತ್ತದೆ. ಆ ನೆಲದಲ್ಲಿಯೇ ತನ್ನ ನೆಲೆಯನ್ನು ಕಂಡುಕೊಂಡು ಬದುಕನ್ನು ಕಟ್ಟಿಕೊಳ್ಳಬೇಕಾಗುತ್ತದೆ. ಈ ನೆಲ ಮತ್ತು ನೆಲೆ ಎರಡೂ ಇರದಿದ್ದರೆ ಬದುಕನ್ನು ಕಟ್ಟಿಕೊಳ್ಳುವುದು ತುಂಬಾ ಕಷ್ಟವಾಗುತ್ತದೆ. ಸಾಮಾನ್ಯವಾಗಿ ಒಂದು ಕುಟುಂಬದಲ್ಲಿ ತಂದೆ-ತಾಯಿ, ಮಕ್ಕಳು ಒಂದೆ ಕಡೆ, ಒಂದೇ ಸೂರಿನಡಿಯಲ್ಲಿ ಕೂಡಿಕೊಂಡು ಬಾಳುವುದು ಸಾಮಾನ್ಯವಾಗಿದೆ. ಈ ಮೂಲಕ ತನ್ನ ಮೂಲಭೂತ ಬೇಡಿಕೆಗಳನ್ನು ಈಡೇರಿಸಿಕೊಳ್ಳುತ್ತಾರೆ. ಆದರೆ ಅಲೆಮಾರಿಗಳು ಇಂತಹ ನಿಲುವುಗಳಿಗೆ ವಿರೋಧದ ನೆಲೆಯಲ್ಲಿ ನಿಂತಿದ್ದಾರೆ. ಯಾರದೋ ಕಟ್ಟಡಗಳಲ್ಲಿ ಕೆಲವು ದಿವಸಗಳ ತನಕ ವಾಸವಿರುತ್ತಾರೆ. ಗಾಳಿ ಬೆಳಕು ಇಲ್ಲದೆ ನರಕಯಾತನೆ ಅನುಭವಿಸುತ್ತ ಜೀವಿಸುತ್ತಾರೆ. ನೆಲದ ಮಾಲೀಕ ಬಂದು ಹೆದರಿಸಿದಾಗ ಅಲ್ಲಿಂದ ಜಾಗ ಖಾಲಿ ಮಾಡಬೇಕಾಗುತ್ತದೆ. ಇದರಿಂದಾಗಿ ಅಲೆಮಾರಿ ಸಮುದಾಯಗಳಿಗೆ "ಇಂದು ಈ ಊರು, ನಾಳೆ ಬೇರೆ ಯಾವುದೋ ಊರು" ಎಂಬಂತೆ ಅಲೆದಾಡುತ್ತಿರುವುದನ್ನು ಕ್ಷೇತ್ರಕಾರ್ಯ ಅಧ್ಯಯನದಿಂದ ಗೊತ್ತಾಗುತ್ತದೆ.

ಅಲೆಮಾರಿತನ: ಒಂದೊತ್ತಿನ ಊಟಕ್ಕಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಅಲೆಯುವ ಈ ಅಲೆಮಾರಿ ಸಮುದಾಯಗಳು ಸ್ಥಳೀಯ ಪರಿಸರ ಹಾಗೂ ಸಾಂದರ್ಭಿಕ ಪರಿಸ್ಥಿತಿ ಮತ್ತು ಪರಿಸರದಲ್ಲಿ ಹೊಂದಿಕೊಂಡಿದ್ದಾರೆ. ಅವರು ಅಲ್ಲಿಯ ಭಾಷೆಯನ್ನು ಮೈಗೂಡಿಸಿಕೊಂಡು ಆಹಾರಗಳಿಗೆ ಹೊಂದಾಣಿಕೆ ಮಾಡಿಕೊಂಡು ಅಲ್ಲಿನ ಜನರೊಂದಿಗೆ ಸಹಕಾರದಿಂದ ಗುರುತಿಸಿಕೊಳ್ಳುತ್ತಾರೆ. ಆ ಸಮಯದಲ್ಲಿ ವಸ್ತುಗಳನ್ನು ಬೇಡಿಕೊಂಡು ಮತ್ತೆ ಮುಂದಿನ ಊರಿಗೆ ತೆರಳುತ್ತಾರೆ ಕುಟುಂಬದ ಮೇಲೆ ಪ್ರಭಾವ ಬೀರುವ ಅಂಶಗಳನ್ನು ಬಿಟ್ಟುಕೊಡದೆ ಕೌಟುಂಬಿಕ ಚೌಕಟ್ಟಿನಲ್ಲಿ ನೀತಿ ನಿಯಮಗಳನ್ನು ಅಳವಡಿಸಿಕೊಂಡು ಅಲೆಮಾರಿತನದ ಜೀವನವನ್ನು ಸಾಗಿಸುವರು.

ವಾಸದ ನೆಲೆ ಮನುಷ್ಯನ ಮೂಲಭೂತ ಅವಶ್ಯಕತೆಗಳಲ್ಲೊಂದು. ವಾಸದ ನೆಲೆಯು ಮಾನವನ ರಕ್ಷಣೆಯ ಮೊದಲ ಕೋಟೆ. ತನ್ನ ಮೂಲಭೂತ ಅವಶ್ಯಕತೆಯನ್ನು, ಕುಟುಂಬದ ವೈಯಕ್ತಿಕ ಕಾರ್ಯಗಳನ್ನು ಮನುಷ್ಯರು ಪೂರೈಸಿಕೊಳ್ಳುವ ತಾಣ ವಾಸದ ನೆಲೆ ಅಥವಾ ಸೂರು ಆಗಿದೆ. ಅದು ಮಳೆ, "ಬಿಸಿಲು, ಚಳಿ, ಗಾಳಿ, ಪ್ರಾಣಿ-ಪಕ್ಷಿ, ಕೀಟಗಳಿಂದ ರಕ್ಷಿಸುವ ರಕ್ಷಣೆ" ಆಸರೆಯ ನೆಲೆಯಾಗಿದೆ. ಮಾನವರ ದೈಹಿಕ ಹಾಗೂ ಮಾನಸಿಕ ಆರೋಗ್ಯದಲ್ಲಿ ಕಾರ್ಯಕ್ಷಮತೆಗೆ ಸಾಮಾಜಿಕ ಪ್ರತಿಷ್ಠೆಗೆ ವಾಸದ ನೆಲೆಯೇ ಭೂಮಿಕೆಯಾಗಿದೆ.

ಈ ನೆಲೆಯು ಕೇವಲ ಮನುಷ್ಯನಿಗಷ್ಟೇ ಸೀಮಿತವಾಗಿಲ್ಲ. ಅದು ಜೀವಿಗಳಿಗೂ ಬೇಕು. ಹುಲಿ, ಸಿಂಹಗಳಿಗೆ ಗುಹೆಯಾಗಿ, ಹಕ್ಕಿಗೆ ಗೂಡಾಗಿ, ಮೊಸಳೆಗಳಿಗೆ ಹೊಂಡ, ಕುದುರೆಗೆ ಲಾಯ, ದನಗಳಿಗೆ ಕೊಟ್ಟಿಗೆ, ಹಾವಿಗೆ - ಹುತ್ತ ಹೀಗೆ ಎಲ್ಲಾ ಜೀವಕ್ಕೂ ವೈವಿಧ್ಯಮಯ ವಾಸದ ನೆಲೆಗಳು ಬೇಕು. ಇದನ್ನರಿತ ಜಾನಪದ ವಿದ್ವಾಂಸರು "ಹೇಳಿಕೊಳ್ಳುವುದಕ್ಕೆ ಒಂದು ಊರು; ತಲೆ ಮೇಲೆ ಒಂದು ಸೂರು" ಎನ್ನುವುದು ಸೂಕ್ತ. ಮನುಷ್ಯ ಎಲ್ಲಿಯೆ ತಿರುಗಾಡಿ ಬಂದರೂ ತನ್ನದೇ ಒಂದು ಸೂರು ಬೇಕು. ವ್ಯಕ್ತಿ ಒಂಟಿಯಾಗಿ ಇರಲಾರ ಇದ್ದರು ತನ್ನದ್ದೆನ್ನುವ ಒಂದು ಮನೆ ಬೇಕು. ಸಂಸಾರಿಯಾದರೂ ಸರಿ ಸನ್ಯಾಸಿಯಾದರೂ ಸರಿ, ಪ್ರಾಣಿ ಆದರೂ ಸರಿ ಪಕ್ಷಿಯಾದರೂ ಸರಿ ಇಂತಹ ಮಹತ್ವವನ್ನರಿತ ಜಾನಪದ ಗಾದೆ ಹೀಗೆನ್ನುತ್ತದೆ. "ಮನೆಯಿಲ್ಲದವನಿಗೆ ಮಾನವಿಲ್ಲ" ಎಂಬಂತೆ ನೆಲೆಯು ಅಲೆಮಾರಿ ಸಮುದಾಯಕ್ಕೆ ಇಲ್ಲವಾದರೂ ಸಹ ತಮ್ಮದೇ ಆದ ಒಂದು ಸಣ್ಣ ಪ್ರಮಾಣದ ಗುಡಾರದಲ್ಲಿ ಜೀವಿಸುವುದನ್ನು ಹಾಗೂ ಅತ್ಯಂತ ಪ್ರಾಮಾಣಿಕತೆಯಿಂದ ಬದುಕನ್ನು ಸಾಗಿಸುವುದನ್ನು ಗಮನಿಸಬಹುದಾಗಿದೆ.

ಅಲೆಮಾರಿ ಸಮುದಾಯಗಳು ತಾತ್ಕಾಲಿಕವಾಗಿ ಮಾತ್ರ ಒಂದೆಡೆ ನೆಲೆಸುತ್ತಾರೆ. ಈ ನೆಲೆಯನ್ನು ಊರಿನ ಅಂಗಳ, ವಲಸೆ, ಓಣಿ, ಪಾಳೆ, ವಠಾರ ಎನ್ನಬಹುದು. ಇಲ್ಲಿ ಒಂದೇ ಸಮುದಾಯ ಅಥವಾ ಒಂದೇ ಪಂಥದ ಜನರು ವಾಸಿಸುವುದರಿಂದ ಇದನ್ನು ಪಾಳೆಗಳು ಎನ್ನಲು ಅಡ್ಡಿಯಿಲ್ಲ. ಆದರೆ ಪಾಳೆಗಳು ಸ್ವಂತದ್ದಿರುತ್ತವೆ. ಅಲೆಮಾರಿಗಳ ವಾಸದ ಪ್ರದೇಶಗಳೂ ಬೇರೆಯವರದಾಗಿರುತ್ತವೆ. ಅಂದು ಅಲೆಮಾರಿಗಳಿಗೆ ಒಂದು ನಿರ್ದಿಷ್ಟ ನೆಲೆಯ ಅವಶ್ಯಕತೆಯಿದ್ದಿರಲಿಲ್ಲ. ಆದರೆ ಇಂದಿನ ಅಲೆಮಾರಿ ಮಾನವರಿಗೆ ಅವಶ್ಯಕತೆಯಿದೆ. ಅದರೆ ಅವರಿಗೆ ಅವಕಾಶಗಳಿಲ್ಲದಿರುವುದು ದುರಂತ.

ಅಲೆಮಾರಿ ಸಮುದಾಯಗಳು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶದಲ್ಲಿ ದಿನನಿತ್ಯದ ಸಂಚಲನೆಯ ಸ್ಥಿತಿ ಕಂಡುಕೊಂಡಿದ್ದರಿಂದ ಬದುಕು ಯಾಂತ್ರಿಕವಾಗಿದೆ. ಒಂದೆಡೆ ನೆಲೆ ನಿಲ್ಲದೆ ಸ್ಥಿರರಚನೆ ಕಾಪಾಡಿಕೊಳ್ಳದೆ ತಮ್ಮ ಸಾಂಪ್ರದಾಯಿಕ ವೃತ್ತಿಯಿಂದ ಸಾಂಸ್ಕೃತಿಕ ಸಾಂಕೇತಗಳನ್ನು ಪ್ರದರ್ಶಿಸುವ ಮೂಲಕ ಊರಿಂದ ಊರಿಗೆ ಅಲೆಯುವುದೇ ಬದುಕಾಗಿದೆ. ಹಾಗಾಗಿ ಸಾಮಾಜಿಕ

ಭದ್ರತೆ ಇಲ್ಲವಾಗಿದೆ. ದುಡಿಮೆಯು ಸೀಮಿತ ವ್ಯಾಪ್ತಿಯಲ್ಲಿ ಒಳಗೊಂಡಿದೆ. ಒಂದೊತ್ತಿನ ಊಟ, ನೀರು, ಬಟ್ಟೆ, ವೈಯಕ್ತಿಕ ಹವ್ಯಾಸಗಳಿಗೆ ಮಾತ್ರ ಸೀಮಿತವಾಗಿದೆ.

ವೃತ್ತಿಯ ಮೂಲಕ ಸಂಚಲನೆಯನ್ನು ಕಂಡುಕೊಂಡಿದ್ದರೂ ವಾಸಸ್ಥಾನಗಳು ಎಂತವರಿಗೂ ಅಸಹ್ಯ ಎನಿಸುವಂತಹ ರೀತಿಯಲ್ಲಿವೆ. ಆದಕಾರಣ ಇವರು ಸಾಂದರ್ಭಿಕ ಸನ್ನಿವೇಶಗಳಿಗೆ ಸಿಲುಕಿ ಕೊಂಡು ಬದುಕನ್ನು ನಡೆಸುವವರಾಗಿದ್ದಾರೆ. ಸಾಮಾಜಿಕ ಸ್ಥಿರವ್ಯವಸ್ಥೆಯಲ್ಲಿ ತೀರಾ ಕೆಳಮಟ್ಟದವರಾಗಿರು ವುದರಿಂದ ಇತರರಿಗೆ ಇವರ ಬಗ್ಗೆ ಅಸ್ಪೃಶ್ಯತಾ ಭಾವನೆ, ಇರುವುದನ್ನು ನೋಡಬಹುದಾಗಿದೆ. ಇದರಿಂದಾಗಿ ಅಲೆಮಾರಿಗಳು ಬದುಕು ಅತಂತ್ರ ಸ್ಥಿತಿಯ ರೂಪ ಪಡೆದುಕೊಂಡಿದೆ. ಅಲೆಮಾರಿಗಳು ಸಮಾಜದ ಇತರೆ ಸಮುದಾಯಗಳಂತೆ ವ್ಯವಸ್ಥಿತವಾಗಿ ಬದುಕಲು ಸಾಧ್ಯವಾಗಿಲ್ಲ.

ಈ ಬದುಕಿಗೆ ಬಹುಮುಖ್ಯ ಕಾರಣ ಅಜ್ಞಾನ, ಮೂಢನಂಬಿಕೆ, ಅನಕ್ಷರತೆ, ಬಡತನ, ಆಸ್ತಿಯಲ್ಲಿ ಅಸಮಾನ ಹಂಚಿಕೆ, ಕೀಳರಿಮೆಯ ನೋಟಗಳು ಇವೆಲ್ಲವುಗಳ ಪರಿಣಾಮವಾಗಿ ಸಮಾಜದಲ್ಲಿ ಪ್ರತ್ಯೇಕ ಬದುಕನ್ನು ಕಂಡುಕೊಳ್ಳುವುದರ ಮೂಲಕ, ವಿವಿಧ ಪ್ರದೇಶವಾರು ವ್ಯಾಪ್ತಿಯಲ್ಲಿ ಗುಡಾರ, ಗುಡಿಸಿಲು, ಡೇರಾಗಳನ್ನು ನಿರ್ಮಾಣ ಮಾಡಿಕೊಂಡಿದ್ದಾರೆ. ಅದು ಬೇರೆಯವರ ಹಕ್ಕುಗಳಿಗೆ ಸಂಬಂಧಿಸಿದ ಸ್ಥಳಗಳಲ್ಲಿ. ಉದಾ: ರೈಲ್ವೆನಿಲ್ದಾಣ, ಬಸ್‌ನಿಲ್ದಾಣ, ಕೊಳಚೆ ಪ್ರದೇಶ, ಶಾಲಾಮೈದಾನ ಹೀಗೆ ಇನ್ನಿತರ ಸ್ಥಳಗಳಲ್ಲಿ ನೆಲೆ ಕಂಡುಕೊಂಡು ಆ ವಾಸದ ನೆಲೆಯಿಂದ ಆಹಾರ ಸಂಪಾದನೆಗಾಗಿ ವಿವಿಧ ಪ್ರದೇಶ ಮತ್ತು ವಿವಿಧ ಕಸುಬುಗಳಿಗೆ ಅಲೆದಾಡುತ್ತಿದ್ದಾರೆ.

ನೆಲೆಯಿಂದ ದೂರ ಉಳಿದ ಅಲೆಮಾರಿಗಳು ವಾಸದ ನೆಲೆಯ ಬಗ್ಗೆ ಹೆಚ್ಚಿನ ಗಮನ ನೀಡ ಲಾಗಲಿಲ್ಲ. ಇದಕ್ಕೆ ಕಾರಣ ಭೂಮಿ ತಮ್ಮಿಂದ ದೂರವಿರಬಹುದು, ಸಂಪತ್ತಿಲ್ಲದಿರಬಹುದು, ಇನ್ನೂ ಮುಂತಾದ ಕಾರಣಗಳಿಂದ ವಾಸಕ್ಕಾಗಿ ನೆಲೆಯನ್ನು ಕಂಡುಕೊಳ್ಳದೆ, ಮನೆಯನ್ನು ಕಟ್ಟಿಕೊಳ್ಳದೆ, ಆಹಾರಕ್ಕಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗಿ, ಬಿಡಾರ ಹಾಕಿಕೊಂಡು, ಆಹಾರ ದೊರೆಯುವ ತನಕ ಅಲ್ಲಿದ್ದು ನಂತರ ಮುಂದಿನ ಸ್ಥಳಕ್ಕೆ ಹೋಗುವರು. ಬಿಡಾರ ಹಾಕಿಕೊಳ್ಳಲು ಪ್ಲಾಸ್ಟಿಕ್ ಚೀಲ ಇತ್ಯಾದಿಗಳನ್ನು ಪ್ರಾಣಿಗಳ ಮೇಲೆ ಹೊತ್ತೊಯ್ಯುವರು. ಅಂದು ವಾಸದ ನೆಲೆಯಿಂದ ಆಹಾರಕ್ಕಾಗಿ ಬೇರೊಂದು ಸ್ಥಳಕ್ಕೆ ಅಲೆಯುತ್ತಿದ್ದರು. ಇಂದು ವಾಸದ ನೆಲೆಯಿಂದ ಆಹಾರಕ್ಕಾಗಿ ಅಲೆಯುತ್ತಿದ್ದಾರೆ.

ಅಂದಿನ ಆದಿಮಾನವನ ಜೀವನಕ್ಕೂ ಇಂದಿನ ಅಲೆಮಾರಿಗಳ ಜೀವನಕ್ಕೂ ವ್ಯತ್ಯಾಸಗಳು ಕಡಿಮೆ ಎಂದು ಹೇಳಬಹುದು. ಏಕೆಂದರೆ ಅಂದು ನದಿತೀರ, ಕಾಡುಗಳು ಇವರ ಆಹಾರದ ಕೇಂದ್ರ ಬಿಂದುವಾಗಿದ್ದವು. ಅಲೆಮಾರಿಗಳಿಗೆ ಇಂದು ಕೂಡ ಇವು ಆಹಾರದ ಕೇಂದ್ರಬಿಂದುಗಳಾಗಿವೆ. ಸ್ವಲ್ಪ ಸುಧಾರಣೆಯೆಂದರೆ ನಗರಗಳಲ್ಲಿ ಗ್ರಾಮಗಳಲ್ಲಿ ಜನರನ್ನೇ ಆಶ್ರಯಿಸುವ ಮೂಲಕ ಸಮಾಜ

ಆಹಾರದ ಕೇಂದ್ರವಾಗಿರುವುದು ವಿಶೇಷವಾಗಿದೆ. ನಾಡಿನಲ್ಲಿ ವಾಸವಿದ್ದರೂ ಕಾಡಿನ ಜೀವನ ಈ ಸಮುದಾಯಗಳಲ್ಲಿ ಜೀವಂತವಾಗಿದೆ. ಅಂದು ನೆಲೆ ನಿಂತು ನೈಸರ್ಗಿಕ ಸಂಪತ್ತನ್ನು ಉಪಯೋಗಿಸಿ ಕೊಂಡು ಆರ್ಥಿಕವಾಗಿ ಪ್ರಬಲವಾಗಲಿಲ್ಲ. ಇಂದಿಗೂ ಕೂಡ ನೆಲ–ನೆಲೆ ಎರಡೂ ಇಲ್ಲದೆ ಬದುಕಿನ ಬವಣೆಗಾಗಿ ಪ್ರದೇಶದಿಂದ ಪ್ರದೇಶಕ್ಕೆ ಅಲೆಯುತ್ತಾ ಇದ್ದಾರೆ. ಅಂದೂ ಅಲೆದಾಟವಿತ್ತು, ಇಂದೂ ಅಲೆದಾಟವಿದೆ.

ಕೋಟೆ-ಕೊತ್ತಲಗಳಲ್ಲಿ

ಜೀವನದುದ್ದಕ್ಕೂ ಜಂಜಾಟದ ಬದುಕಿನಲ್ಲಿ ಸೋತು ಸಣ್ಣಾಗಿರುವ ಅಲೆಮಾರಿಗಳು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಅಲೆಯುತ್ತಾ ಇರುತ್ತಾರೆ. ಹೀಗೆ ಅಲೆಯುತ್ತಾ ನಗರ ಅಥವಾ ಗ್ರಾಮಗಳ ಹೊರವಲಯದಲ್ಲಿ ಇಲ್ಲವೇ ಒಳಗಡೆ ಇರುವ, ರಾಜಮಹಾರಾಜರು ಆಳಿದ ಕೋಟೆ-ಕೊತ್ತಲಗಳಲ್ಲಿ, ತಮ್ಮ ನೆಚ್ಚಿನ ಪ್ರಾಣಿ ಪಕ್ಷಿಗಳೊಂದಿಗೆ, ಕುಟುಂಬ ಸಮೇತ ಬದುಕುತ್ತಾರೆ. ಇದನ್ನೇ ಸ್ವಚ್ಛ ಮಾಡಿಕೊಂಡು ಕತ್ತಲು ತುಂಬಿದ ಕೋಟೆಯಲ್ಲಿ ದೀಪದ ಬುಡ್ಡಿಯಿಂದ ಇಲ್ಲವಾದರೆ, ಸೌದೆಯಿಂದ ಬೆಂಕಿ ಹಾಕಿಕೊಂಡು ಅಡುಗೆ ತಯಾರಿಸಿ ಊಟ ಮಾಡಿ ಮಲಗುತ್ತಾರೆ. ಹಾಳುಬಿದ್ದ ಇಂತಹ ಕೋಟೆ ಕೊತ್ತಲಗಳಲ್ಲಿ ವಿಷಜಂತುಗಳೇ ಅತಿಥಿಗಳಾಗಿರುತ್ತವೆ. ತಲೆ ಮೇಲೆ ಸೂರು ಬೇಕಾಗಿರುವುದರಿಂದ ಇಂತಲ್ಲಿ ವಾಸವಾಗಿ ಎಂದಿನಂತೆ ಬೆಳಗ್ಗೆ ತಮ್ಮ ವೃತ್ತಿಗಳಿಗೆ ತೆರಳಿ ಸಾಯಂಕಾಲದ ಸಮಯದಲ್ಲಿ ಮರಳುತ್ತಾರೆ.

ರೈಲ್ವೆ ನಿಲ್ದಾಣದಲ್ಲಿ

ಅಲೆಮಾರಿಗಳ ವಲಸೆ ಅಥವಾ ನೆಲೆಯು ರೈಲ್ವೆ ರಹದಾರಿ ಇದ್ದೆಡೆ ಇರುತ್ತದೆ. ಇದರಿಂದಾಗಿ ಗುಡಾರವನ್ನು ರೈಲ್ವೆಗಳಲ್ಲಿ ಸಾಗಿಸಲು ಅನುಕೂಲವಾಗುತ್ತದೆ. ನಿಲ್ದಾಣದಲ್ಲಿರುವ ನೀರನ್ನು ಬಳಸಲು, ರೈಲ್ವೆಯಲ್ಲಿಯೇ ಸಣ್ಣ-ಪುಟ್ಟ ವ್ಯಾಪಾರವನ್ನು ಮಾಡುವುದು. ತಮ್ಮ ಕಲಾ ಪ್ರದರ್ಶನ ಬಿತ್ತರಿಸುವುದಕ್ಕಾಗಿ ಹಾಗೂ ರೈಲ್ವೆಯ ದರಗಳು ಬಸ್‌ಗಿಂತ ಕಡಿಮೆ ಇರುವುದರಿಂದ, ತಮ್ಮ ಬೇಡಿಕೆ ಮುಗಿದ ಮೇಲೆ ಕುಟುಂಬ ಸಮೇತ ಒಮ್ಮೆಲೆ ಪ್ರಯಾಣ ಬೆಳೆಸಲು ಅನುಕೂಲವಾಗುವುದರಿಂದ ಇಂತಹ ಸ್ಥಳಗಳಲ್ಲಿ ವಾಸಿಸುತ್ತಾರೆ.

ಸಂತೆಗಳ ಸಮೀಪ

ಉತ್ಪಾದಿಸಿದ ಮತ್ತು ಕೊಂಡು ತಂದ ಆಲಂಕಾರಿಕ ವಸ್ತುಗಳು ಹಾಗೂ ವನಸ್ಪತಿಯಂತಹ ಗಿಡಮೂಲಿಕೆ, ಬಿದಿರು ಮತ್ತು ಈಚಲು ಕೊಂಬೆಯ ವಸ್ತುಗಳನ್ನು ಮಾರಾಟ ಮಾಡಲು ಅನುಕೂಲ ವಾಗಿರುತ್ತದೆ. ಸಂತೆಯಲ್ಲಿ ಜನಜಂಗುಳಿ ಇರುವುದರಿಂದ, ತಂದ ವಸ್ತುಗಳನ್ನೆಲ್ಲಾ ಮಾರಾಟ ಮಾಡುವ ಉದ್ದೇಶದಿಂದ ಸಂತೆಗಳ ಸಮೀಪದಲ್ಲಿ ಬಿಡಾರ ಹೂಡುತ್ತಾರೆ.

ಅರ್ಧದಲ್ಲಿ ನಿಂತಿರುವ ಸರ್ಕಾರಿ ಕಟ್ಟಡಗಳಲ್ಲಿ

ಅಲೆಮಾರಿಗಳಿಗೆ ಯಾರೂ ಮನೆ ಬಾಡಿಗೆ ಕೊಡುವುದಿಲ್ಲ. ಮನೆಯನ್ನು ಬಾಡಿಗೆ ಪಡೆಯುವ ಆರ್ಥಿಕ ಶಕ್ತಿ ಇಲ್ಲದಿರುವುದರಿಂದ ಇದ್ದಷ್ಟು ಕಾಲ ತಮ್ಮ ಕಸುಬುಗಳನ್ನು ಮುಗಿಸಿಕೊಂಡು ಹೋಗಲು ಒಂದು ತಾತ್ಕಾಲಿಕ ನೆಲೆ ಬೇಕಾಗುವುದರಿಂದ ಗ್ರಾಮದ ಅಥವಾ ನಗರಗಳಲ್ಲಿ ಅನಾನುಕೂಲಗಳಿಂದ, ಅರ್ಧದಲ್ಲಿ ನಿಂತಿರುವ ಕಟ್ಟಡಗಳಿರುತ್ತವೆ. ಇಂತಹ ಸ್ಥಳಗಳಲ್ಲಿ ಗೋಡೆಗಳು ಇರುತ್ತವೆ ವಿನಾ ಬೆಳಕು, ನೀರಿನ ವ್ಯವಸ್ಥೆಯಿರುವುದಿಲ್ಲ. ಆದರೂ ಉಳಿಯಬೇಕಾಗುವುದರಿಂದ ಇಂತಹ ಕಟ್ಟಡಗಳಲ್ಲಿ ವಾಸಿಸುತ್ತಾರೆ. ತಮ್ಮ ಕಾರ್ಯ ಚಟುವಟಿಕೆಗಳು ಮುಗಿದ ಮೇಲೆ ಮುಂದಿನ ಊರಿಗೆ ಪ್ರಯಾಣ ಬೆಳೆಸುವರು.

ಗ್ರಾಮಗಳ ಹೊರವಲಯದಲ್ಲಿ

ಗ್ರಾಮಗಳಲ್ಲಿ ಅಲೆಮಾರಿಗಳಿಗೆ ಯಾರೂ ಆಸರೆ ಆಗುವುದಿಲ್ಲ. ಅವರಿಗೆ ಮನೆ ಕೊಡದಿರುವುದ ರಿಂದ ತಮ್ಮ ಜೊತೆ ಇರುವ ಪ್ರಾಣಿ-ಪಕ್ಷಿಗಳನ್ನು ತಂಗಲು ಜಾಗ ಬೇಕಾಗುವುದರಿಂದ, ಹೊರವಲಯ ದಲ್ಲಿ ತಾವು ತಂದಿರುವ ಸರಂಜಾಮುಗಳನ್ನು ಇಳಿಸಿಕೊಂಡು, ಸ್ವಚ್ಛ ಮಾಡಿಕೊಂಡು ಬಿಡಾರ ಹಾಕಿಕೊಳ್ಳುತ್ತಾರೆ. ನೀರು ಮತ್ತು ಇತರೆ ಅಗತ್ಯ ವಸ್ತುಗಳು ಬೇಕಾದಲ್ಲಿ ಗ್ರಾಮದಲ್ಲಿ ಹೋಗಿ ಪಡೆಯುವರು. ಕುಲಕಸುಬುಗಳನ್ನು ಆ ಗ್ರಾಮದಲ್ಲಿ ಪೂರೈಸಲು ಸುಲಭವಾಗುವುದ ರಿಂದ ಹೊರ ವಲಯದಲ್ಲಿ ವಾಸಿಸುತ್ತಾರೆ.

ಕೊಳಚೆ ಪ್ರದೇಶಗಳಲ್ಲಿ

ಪ್ರತಿಯೊಂದು ನಗರಗಳಲ್ಲಿ ಕೊಳಚೆ ಪ್ರದೇಶಗಳನ್ನು ಕಾಣುತ್ತೇವೆ. ಕೊಳಚೆ ಪ್ರದೇಶಗಳು ಸರ್ವ ರೋಗಗಳ ಬ್ರಹ್ಮಾಂಡವಾಗಿವೆ. ಇಲ್ಲಿ ಸೊಳ್ಳೆಗಳು, ಸತ್ತ ನಾಯಿ, ಕತ್ತೆ, ಹಂದಿ, ದನಕರುಗಳು, ಹೆಣಗಳು, ನಗರದ ಚರಂಡಿಯ ಕಲುಷಿತ ನೀರು, ತ್ಯಾಜ್ಯವಸ್ತುಗಳೆಲ್ಲವು ಬಂದು ಶೇಖರಣೆಯಾಗುವ ಸ್ಥಳವಾಗಿರುತ್ತದೆ. ಯಾವುದೇ ರೀತಿಯ ಬೆಳಕಿನ ವ್ಯವಸ್ಥೆಯಿಲ್ಲದೆ, ಕತ್ತಲಿನಿಂದ ಆವರಿಸಿದ ದುರ್ನಾತ ಮೂಗಿಗೆ ಹೊಡೆಯುತ್ತಿರುವ ಇಂತಹ ಸ್ಥಳದಲ್ಲಿ ಪ್ರಾಣಿಗಳೂ ಸಹ ವಾಸಿಸುವುದಿಲ್ಲ. ಆದರೆ ಅಲೆಮಾರಿಗಳು ವಾಸಿಸುತ್ತಿದ್ದಾರೆಂದರೆ ಸ್ಥಿತಿ ಎಂಥದ್ದಿರಬಹುದು. ಇಂತಹ ಸ್ಥಿತಿಗೆ ಕಾರಣಗಳು ಹಲವಾರು. ಮುಂಗಡ ಹಣ ಕೊಟ್ಟು ಬಾಡಿಗೆಯ ಮನೆಯನ್ನು ಪಡೆಯುವಷ್ಟು ಶಕ್ತಿ ಇವರಲ್ಲಿಲ್ಲ. ಒಂದೊತ್ತಿನ ಊಟಕ್ಕೆ ದಿನಪೂರ್ತಿ ಹೆಣಗಾಡುವುದರಿಂದ ವಾಸದ ಮನೆ ಮಾಡಿಕೊಳ್ಳುವುದು ಸುಲಭದ ಮಾತಲ್ಲ. ಆದ್ದರಿಂದ ನಗರ ಪ್ರದೇಶದಲ್ಲಿ ಜಾಗ ಬೇರೆಯವರ ಸ್ವತ್ತಾಗಿರುವುದರಿಂದ ಪುಕ್ಕಟೆಯಾಗಿ ವಾಸಿಸಲು ಯಾವ ಸ್ಥಳವೂ ದೊರೆಯಲಾರದು.

ನಗರದಲ್ಲಿ ಅಲ್ಪಸ್ವಲ್ಪ ಸರ್ಕಾರಿ ಜಾಗವೆಂದರೆ ಕೊಳಚೆ ಪ್ರದೇಶ. ಇಂತಹ ಪ್ರದೇಶವನ್ನು ಅಲೆಮಾರಿಗಳು ವಾಸಿಸಲು ಆಯ್ಕೆ ಮಾಡಿಕೊಳ್ಳುವರು. ಈ ಸ್ಥಳವು ಬಾಡಿಗೆಯಿಲ್ಲದ ಮುಕ್ತ

ಸ್ಥಳವಾಗಿರುವುದು. ಆದರೆ ಸುತ್ತಮುತ್ತಲೂ ಮಲೀನಗೊಂಡ ವಾತಾವರಣವಿರುವುದರಿಂದ ತಮ್ಮ ಬಳಿ ಇರುವ ಸಲಕರಣೆಗಳಿಂದ ಸ್ವಚ್ಛಗೊಳಿಸಿಕೊಂಡು, ಕುಲುಷಿತ ನೀರು ಬಿಡಾರದೊಳಗೆ ಬಾರದಂತೆ ಮೋರಿಗಳನ್ನು ನಿರ್ಮಿಸುವರು. ಕಲ್ಲುಮಣ್ಣುಗಳಿಂದ ನೀರನ್ನು ತಡೆ ಹಿಡಿಯಲಾಗುತ್ತದೆ. ಕಮಾನಿನ ಆಕಾರದಲ್ಲಿ ಪ್ಲಾಸ್ಟಿಕ್ ಚೀಲ, ಗೋಣಿಚೀಲ, ರಟ್ಟಿನಿಂದ, ಕಬ್ಬಿಣದ ಮೊಳೆ, ಹಗ್ಗ ಉಪಯೋಗಿಸಿಕೊಂಡು ಬಿಡಾರ ನಿರ್ಮಿಸುವರು. ಮಳೆನೀರು ಬಿಡಾರದೊಳಗೆ ಬಾರದಂತೆ ಹಾಗೂ ಬಿದ್ದ ನೀರು ಜಾರುವಂತೆ ಇಳಿಜಾರಾಗಿ ನಿರ್ಮಿಸುವರು. ಬಿಡಾರದ ಒಳಗೆ ಸಾಮಾನುಗಳನ್ನು ಇರಿಸಲು ಸ್ಥಳ ಮಾಡಿಕೊಳ್ಳುವರು. ಉಳಿದ ಕಡೆ ಮಕ್ಕಳು ಮತ್ತು ಮಹಿಳೆಯರು ಮಲಗಲು ಉಪಯೋಗಿಸಿಕೊಳ್ಳುವರು. ದಂಪತಿಗಳು ಪ್ರತ್ಯೇಕವಾಗಿ ಮಲಗಲು ಸ್ಥಳ ಇರುವುದಿಲ್ಲ. ಕಾರಣ ಸ್ವಲ್ಪ ಸ್ಥಳವಿರುವುದರಿಂದ ಸ್ತ್ರೀಯರು ಮತ್ತು ಪುರುಷರು ಹಾಗೂ ಮಕ್ಕಳು ಒಂದೇ ಕಡೆ ಮಲಗುವರು.

ಬೇಸಿಗೆಯಲ್ಲಿ ಹಾಗೂ ಗಾಳಿಯಿಲ್ಲದ ಸಮಯದಲ್ಲಿ ಕೆಲವು ಸದಸ್ಯರು ಗುಡಾರಗಳ ಮುಂದಿನ ಬಯಲಿನಲ್ಲಿ ಮಲುಗುತ್ತಾರೆ. ಚಳಿಗಾಲದಲ್ಲಿ ಮತ್ತು ಮಳೆಗಾಲದಲ್ಲಿ ಹಾಸಿಕೊಳ್ಳಲು ಮತ್ತು ಹೊದ್ದು ಕೊಳ್ಳಲು ಕೌದಿಯನ್ನು ಉಪಯೋಗಿಸುವರು. ಕೆಲವರು ಈಚಲ ಚಾಪೆ, ಪ್ಲಾಸ್ಟಿಕ್ ಚೀಲ, ಗೋಣಿಚೀಲಗಳನ್ನು ಬಳಸುವರು. ಸ್ತ್ರೀಯರು ಹಳೆಯ ಸೀರೆಯನ್ನು ಉಪಯೋಗಿಸುವರು. ಬಹಳಷ್ಟು ಸದಸ್ಯರು ಇದ್ದಾಗ ಮಳೆಗಾಲದಲ್ಲಿ ಕೆಲವು ಸದಸ್ಯರು ನಿದ್ದೆ ಮಾಡಿದರೆ ಕೆಲವು ಸದಸ್ಯರು ಕುಳಿತು ಕೊಳ್ಳುವರು. ಇಲ್ಲಿ ಶುದ್ಧವಾದ ಗಾಳಿ, ಬೆಳಕು, ಆಸ್ಪತ್ರೆ, ಶುದ್ಧವಾದ ನೀರು, ಕಿರಾಣಿ ಅಂಗಡಿಗಳು, ಮಾರುಕಟ್ಟೆ ಇತ್ಯಾದಿ ಯಾವುದೇ ತರದ ಸೌಲಭ್ಯ ಇರುವುದಿಲ್ಲ. ಇವರ ಸುತ್ತಲೂ ಇರುವುದೆಂದರೆ ಮಲಮೂತ್ರ, ಸತ್ತನಾಯಿಗಳ ವಾಸನೆ, ಹೊಲಸು ನಾರುವ ನೀರು. ಮತ್ತೊಂದು ವಿಶೇಷತೆ ಎಂದರೆ ಇವರ ಸುತ್ತಮುತ್ತಲೂ ಕೆಲವು ಸಮುದಾಯಗಳು ವಾಸವಿರುತ್ತವೆ. ಆ ಸಮುದಾಯಗಳೂ ಇಂತಹ ಪರಿಸ್ಥಿತಿಯಲ್ಲಿಯೇ ಇರುತ್ತದೆ. ಹೀಗಿರುವಾಗ ಆಕಸ್ಮಿಕವಾಗಿ ಜಗಳಗಳು ನಡೆಯುತ್ತಾ ಇರುತ್ತವೆ. ಇಲ್ಲಿ ನಾಗರಿಕರೆನಿಸಿಕೊಂಡವರು ಜಗಳ ಇತ್ಯರ್ಥದಲ್ಲಿ ಮುಂದೆ ಬರುವುದಿಲ್ಲ. ಕುಡಿದು ಬಂದು ಜಗಳ ಮಾಡುತ್ತಾರೆಂದು ಸುಮ್ಮನಿರುತ್ತಾರೆ. ಕೊನೆಗೆ ಅವರೆ ಸುಮ್ಮನಾಗಬೇಕು. ಅಲೆಮಾರಿಗಳ ಸ್ತ್ರೀಯರನ್ನು ಕಾಡಿಸದೆ ಇರುವುದಿಲ್ಲ ಸಹಿಸದೆ ಪ್ರತಿಭಟಿಸಿದರೆ ಕಳ್ಳತನ, ಅಪರಾಧವ ಹೊರಿಸಿ ಜೈಲಿಗೆ ಕಳಿಸುತ್ತಾರೆಂದು ಭಯದಿಂದ ಜರ್ಜರಿತರಾಗಿದ್ದು ಹೇಳಲೂ ಆಗದೆ ಬಿಡಲು ಆಗದೆ ಕೆಲವು ದಿವಸ ಅಲ್ಲಿದ್ದು ಬೇಗ ಕಾಲ್ಕೀಳುತ್ತಾರೆ.

ಮಾನವರು ಮಾನವರಿಗೆ ಕೊಡುವ ತೊಂದರೆಯಾದರೆ ಪ್ರಾಣಿಗಳು ಕೊಡುವ ತೊಂದರೆ ಇನ್ನೂ ಭಯಂಕರ. ಸತ್ತ ಪ್ರಾಣಿಗಳ ಮಾಂಸ ಸಿಗುತ್ತದೆಂಬ ಕಾರಣದಿಂದ ನಾಯಿಗಳು ಕಚ್ಚಾಡುತ್ತಲೇ ಇರುತ್ತವೆ. ಹಂದಿಗಳು ಮಲ ತಿನ್ನಲು ಬರುತ್ತಾ ಇರುತ್ತವೆ. ಒಮ್ಮೊಮ್ಮೆ ಅಹಾರಕ್ಕಾಗಿ ಬಿಡಾರದಲ್ಲಿ ನುಗ್ಗುತ್ತವೆ. ಮಕ್ಕಳು, ಮಹಿಳೆಯರಿಗೆ ತೊಂದರೆ ಮಾಡುವುದುಂಟು. ಇಂತಹ ಸ್ಥಳದಲ್ಲಿ ವಾಸಿಸುವವರು

ಹೆರಿಗೆ ಸೌಲಭ್ಯವಿಲ್ಲದೆ, ಸೊಳ್ಳೆಯಿಂದ ಕಾಯಿಲೆ ಬರಿಸಿಕೊಂಡು ಎಷ್ಟೋ ಜನ ಸಾವನ್ನಪ್ಪಿದ್ದಾರೆ. ಅಲೆಮಾರಿಗಳಿಗೆ ಎಲ್ಲ ಹಂತದಲ್ಲಿ ಒಂದಲ್ಲ ಒಂದು ರೀತಿಯ ತೊಂದರೆಯಿದ್ದರೂ, ನೆಲೆಯಿಲ್ಲದೆ ಕೊಳಚೆ ಪ್ರದೇಶಗಳನ್ನು ವಾಸದ ನೆಲೆಯಾಗಿ ಪರಿವರ್ತಿಸಿಕೊಳ್ಳುತ್ತಾರೆ.

ಶಾಲಾ ಮೈದಾನದಲ್ಲಿ

ಪ್ರತಿ ನಗರ ಮತ್ತು ಗ್ರಾಮಗಳಲ್ಲಿ ಸರ್ಕಾರಿ ಶಾಲೆಗಳಿರುವುದು ಸರ್ವವಿದಿತ. ಈ ಶಾಲೆಗಳು ತಮ್ಮದೇ ಆದ ಒಂದು ವಿಶಾಲವಾದ ಮೈದಾನವನ್ನು ಒಳಗೊಂಡಿರುತ್ತವೆ. ಬೇರೆಯವರು ಬಾರದ ಹಾಗೆ ಕಾಂಪೌಂಡು ಅಥವಾ ಮುಳ್ಳಿನ ತಂತಿ, ಕಲ್ಲಿನ ಕಂಬಗಳಿಗೆ ಮುಳ್ಳಿನ ಬೇಲಿಯ ಮೂಲಕ ತನ್ನ ವ್ಯಾಪ್ತಿಯು ಎಲ್ಲಿಯವರೆಗೆ ವ್ಯಾಪಿಸಿದೆಯೋ, ಅಲ್ಲಿಯವರೆಗೆ ಗುರುತು ಮಾಡಿರುತ್ತಾರೆ. ಬಿಸಿಯೂಟ ಆರಂಭವಾದಾಗಿನಿಂದ ನೀರಿನ ವ್ಯವಸ್ಥೆ ಪ್ರತಿ ಶಾಲೆಯ ಆವರಣದಲ್ಲಿರುತ್ತದೆ. ಊಟ ಮಾಡುವ ಮಕ್ಕಳಿಗೆ ತೊಂದರೆಯಾಗಬಾರದೆಂಬ ಕಾರಣದಿಂದ ನಾಯಿ ಹಂದಿಗಳಿಂದ ಆವರಣವನ್ನು ಸ್ವಚ್ಛವಾಗಿಸುತ್ತಾರೆ. ಶಾಲೆಗಳು ಪ್ರತಿದಿನ ೧೦.೩೦ರಿಂದ ಆರಂಭವಾಗಿ ಸಂಜೆ ೪.೩೦ಕ್ಕೆ ಮುಕ್ತಾಯ ವಾಗುತ್ತವೆ. ಶನಿವಾರ ಮಧ್ಯಾಹ್ನದ ನಂತರ ಭಾನುವಾರ ಮತ್ತು ಹಬ್ಬದಿನ, ಬೇಸಿಗೆಯಲ್ಲಿ ಶಾಲೆಗಳು ರಜಾ ಇರುತ್ತವೆ. ರಜಾದಿನಗಳಲ್ಲಿ ಅಲೆಮಾರಿಗಳು ಶಿಕ್ಷಕರ ಅನುಮತಿ ಪಡೆದು ಶಾಲೆ ಗಳಲ್ಲಿ ಬಿಡಾರ ಹೂಡುತ್ತಾರೆ. ಅಡಿಗೆ ತಯಾರಿಸಲು, ಮಲಗಲು, ಸಾಕುಪ್ರಾಣಿಗಳಿಗೆ ಸಾಕಷ್ಟು ಸ್ಥಳಾವಕಾಶವಿರುವುದರಿಂದ ತೊಂದರೆಯಾಗಲಾರದು. ರಾತ್ರಿಯಲ್ಲಿ ಬೆಳಕಿನ ವ್ಯವಸ್ಥೆ ಇಲ್ಲವಾದ್ದರಿಂದ ಬೆಳಗಿನ ಅಡಿಗೆ ಜೊತೆಯಲ್ಲಿ ರಾತ್ರಿಯ ಅಡಿಗೆ ಮಾಡಿಕೊಳ್ಳುವರು. ಮುಸ್ಸಂಜೆಯ ಸಮಯದಲ್ಲಿ ಅಡುಗೆ ತಯಾರಿಸಿ ಕೊಳ್ಳುತ್ತಾರೆ. ಶಾಲೆಯ ವೇಳೆಯಲ್ಲಿ ಶಾಲೆ ಆರಂಭವಾಗುವ ಮೊದಲು ಅಡಿಗೆ ತಯಾರಿಸಿಕೊಂಡು ಊಟ ಮಾಡಿ ತಮ್ಮ ವೃತ್ತಿಗಳಿಗೆ ತೆರಳುವರು. ಸಾಮಾನುಗಳನ್ನು ಕಾಯಲು ಮುದುಕ, ಮುದುಕಿಯರನ್ನು ಅಥವಾ ಮಕ್ಕಳನ್ನು ಇಲ್ಲವೇ, ಬಾಣಂತಿಯವರನ್ನು ಬಿಟ್ಟು ಹೋಗುತ್ತಾರೆ. ಶಾಲೆ ಬಿಟ್ಟ ಮೇಲೆ ೬ ಗಂಟೆ ನಂತರ ಎಲ್ಲರೂ ಆವರಣದಲ್ಲಿ ಬಂದು, ಗಡಿಬಿಡಿಯಿಂದ ಅಡುಗೆ ತಯಾರಿಸಿಕೊಂಡು ಊಟ ಮಾಡಿ ಮಲಗುವರು. ಇಲ್ಲಿ ಜನಗಳು ಮತ್ತು ಪ್ರಾಣಿಗಳಿಂದ ಭಯ, ಅಂತಕಗಳಿರುವುದಿಲ್ಲ. ಜೊತೆಗೆ ವಿಶಾಲವಾದ ಮೈದಾನ, ಬಾಡಿಗೆರಹಿತವಾದ ಸ್ಥಳ, ಕೊಳಚೆ ನಿರ್ಮೂಲನೆಯಿಂದ ಸ್ವಚ್ಛವಾಗಿರುವುದು, ಸದಾಕಾಲ ನೀರು ದೊರೆಯುವುದು, ಶಾಲಾ ಮಕ್ಕಳ ಬಿಸಿಯೂಟದ ವ್ಯವಸ್ಥೆಯಿಂದ ಉಳಿದ ಊಟವು ಸಿಗುವುದು, ಮಳೆ, ಗಾಳಿಯಿಂದ ಶಾಲೆಯ ಮುಂಭಾಗದಲ್ಲಿ ಆಸರೆಯಾಗಲು ಸ್ಥಳಗಳು ಇರುವುದರಿಂದ ಅಲೆಮಾರಿಗಳು ಶಾಲೆಯನ್ನು ಬಹಳಷ್ಟು ಇಷ್ಟಪಡುವರು.

ಆದರೆ ಕೆಲವು ಸಂದರ್ಭಗಳಲ್ಲಿ ಕೆಲವು ಅಧಿಕಪ್ರಸಂಗಿಗಳು ಶಿಕ್ಷಕರನ್ನು ತರಾಟೆಗೆ ತೆಗೆದುಕೊಂಡು ಅಲೆಮಾರಿಗಳಿಗೆ ವಾಸಿಸಲು ಅವಕಾಶ ಕೊಡಬಾರದೆಂದು ಹೇಳುವವರು ಇದ್ದಾರೆ. ಇದಕ್ಕೆ ಕಾರಣ

ಅಲೆಮಾರಿಗಳು ಕಳ್ಳರು, ಮೋಸಗಾರರು, ಕುಡುಕರು, ಸುಳ್ಳುಗಾರರು, ಶಾಲೆ ಮಲಿನ ಮಾಡುತ್ತಾರೆಂಬು ದಾಗಿದೆ. ನೀರಿನ ತೊಟ್ಟಿ ಕಲುಷಿತಗೊಳಿಸುವರು ಎಂಬಿತ್ಯಾದಿ ಕಾರಣಗಳಿಂದ ಅಲ್ಲಿಂದ ಕಾಲುಕೀಳು ವಂತೆ ವಾತಾವರಣ ಸೃಷ್ಟಿಸುತ್ತಾರೆ. ಈ ತರದ ವಾಸದ ನೆಲೆಯಲ್ಲಿ ಮೂಲಭೂತ ಸೌಲಭ್ಯಗಳಿರಲಾರವು. ಆಕಸ್ಮಿಕವಾಗಿ ಇದ್ದರೂ, ಇವರಿಂದ ದೂರವಿರುವವು. ಕ್ಷೌರಿಕನಿಂದ ಹಿಡಿದು ಎಲ್ಲ ಹಂತದ ವರ್ಗಗಳು ಇವರನ್ನು ಅನುಮಾನದ ದೃಷ್ಟಿಯಿಂದ ನೋಡುವರು. ಆದರೂ ಎಲ್ಲರೂ ಅದೇ ಮನಸ್ಸಿನವರಿರಲಾರರು. ಕೆಲವೊಬ್ಬ ಶಿಕ್ಷಕರು ಮತ್ತು ಊರಿನ ಜನರು ಒಳ್ಳೆಯವರಿದ್ದಾಗ ಊರಿನ ಜನರೆದುರು ಪ್ರದರ್ಶನ ಮಾಡಿ ಆಹಾರ, ದವಸಧಾನ್ಯ, ಬಟ್ಟೆ, ಹಣ ಸಂಗ್ರಹಿಸುತ್ತಾರೆ. ಶಾಲೆಯಲ್ಲಿ ಮನೋರಂಜನೆ ಪ್ರದರ್ಶನ ನೀಡಿ ಶಿಕ್ಷಕರಿಂದ, ಮಕ್ಕಳಿಂದ ಇಂತಿಷ್ಟು ಎಂಬಂತೆ ಹಣವನ್ನು ಸಂಗ್ರಹಿಸಿ ಪಡೆಯುತ್ತಾರೆ. ಸಾಕು ಪ್ರಾಣಿಗಳಿಂದ ಕೂಡಿರುವ ಸಮುದಾಯಗಳಿಗೆ ಪ್ರವೇಶ ನೀಡುವುದು ಕಷ್ಟವಾಗಿದೆ. ಅಲ್ಲಿನ ವಾತಾವರಣ ಅಥವಾ ಪರಿಸರ ಮಲಿನವಾಗುತ್ತದೆಂಬ ಕಾರಣದಿಂದ ಉಳಿಯಲು ಅವಕಾಶ ಕೊಡುವುದಿಲ್ಲ. ಇಂತಹ ತೊಂದರೆಗಳೂ ಸಾಮಾನ್ಯವಾಗಿವೆ. ಆದರೂ ಅನಿವಾರ್ಯವಾಗಿ ಬದುಕಬೇಕಾಗಿರುವುದರಿಂದ ಇಂತವು ಗಳನ್ನೇ ಆಶ್ರಯಿಸುತ್ತಾರೆ.

ನದಿ, ಕೆರೆ, ಹಳ್ಳ, ಕೊಳ್ಳಗಳ ಸಮೀಪ

ಅನ್ನ ನೀಡುವ ಮತ್ತು ನೆಚ್ಚಿನ ಜೀವಸಂಗಾತಿಗಳಾದ ಹಸು, ಮೇಕೆ, ಕುರಿ ಇತ್ಯಾದಿಗಳಿಗೆ ಮೇವು, ನೀರು ಅನಿವಾರ್ಯವಾಗಿ ಬೇಕಾಗಿದೆ. ಇವು ತಂಗಲು ವಿಶಾಲವಾದ ಪ್ರದೇಶ ಬೇಕಾಗುತ್ತದೆ. ಆದುದರಿಂದ ಅಲೆಮಾರಿಗಳು ನೀರು ದೊರೆಯಬಹುದಾದ ನದಿ, ಕೆರೆ, ಹಳ್ಳ, ಕೊಳ್ಳಗಳ ಸಮೀಪ ಬಿಡಾರ ಹೂಡುವರು. ಇಂತಹ ಸ್ಥಳದಲ್ಲಿ ಮೇವು ಮತ್ತು ನೀರಿನ ಅನುಕೂಲವಿರುತ್ತದೆ. ಪ್ರಾಣಿಗಳಿಂದ ಹಾಲು, ಮೊಸರು, ಬೆಣ್ಣೆ ಮತ್ತು ಮಾಂಸವನ್ನು ಬಳಸಿಕೊಳ್ಳುತ್ತಾರೆ. ಹಣದ ಅಗತ್ಯತೆ ಬಂದಾಗ ಪ್ರಾಣಿಗಳ ಮಾರಾಟ ಮಾಡುತ್ತಾರೆ.

ನೀರಿನಲ್ಲಿ ದೊರೆಯಬಹುದಾದ ಮೀನು, ಏಡಿಗಳನ್ನು ಸಂಗ್ರಹಿಸಿ ಜೀವನ ಸಾಗಿಸಲು ಇಲ್ಲಿನ ವಾಸ ಅನುಕೂಲವಾಗುತ್ತದೆ. ಇತ್ತೀಚೆಗೆ ಮೀನುಗಳನ್ನು ಗುತ್ತಿಗೆ ಆಧಾರದ ಮೇಲೆ ಹಿಡಿದು ಮಾರಾಟ ಮಾಡಿ ಆದಾಯ ಪಡೆಯುವುದುಂಟು.

ಸ್ಮಶಾನದಲ್ಲಿ ಸುಡುಗಾಡುಸಿದ್ಧರ ವಾಸ

ವಿಶಿಷ್ಟ ಶಕ್ತಿಯನ್ನು ಪಡೆಯುವ ಉದ್ದೇಶದಿಂದ ಅಮಾವಾಸ್ಯೆಯಂತಹ ವಿಶೇಷ ದಿನಗಳ ಮಧ್ಯರಾತ್ರಿಗಳಲ್ಲಿ ಸ್ಮಶಾನದಲ್ಲಿ ಪೂಜೆ ಪೂರೈಸಬೇಕಾಗಿರುವುದರಿಂದ ಮತ್ತು ಸತ್ತ ಬಾಣಂತಿಯರ ಹೊಟ್ಟೆಯೊಳಗಡೆಯಿರುವ ಕೂಸಿನ ಕೈ ಪಡೆಯುವುದರ ಸಲುವಾಗಿ ಸ್ಮಶಾನದಲ್ಲಿಯೇ ವಾಸವಿರುತ್ತಾರೆ. ಬೆಳಗಿನ ಜಾವದಲ್ಲಿ ಪೂಜೆ ಮಾಡಿಕೊಂಡು ಶಂಖ, ಜಾಗಟೆ ಬಾರಿಸುತ್ತ ದೇವರನ್ನು ಆರಾಧಿಸುತ್ತ,

'ಜಯವಾಗಲಿ ಜಯವಾಗಲಿ ರೇವಣ್ಣಸಿದ್ಧ'ನೆಂದು ಊರೊಳಗೆ ಪ್ರವೇಶ ಮಾಡುತ್ತಾರೆ. ಸಿದ್ಧಿಸಿಕೊಂಡಿರುವ ಚಮತ್ಕಾರದ ಆಟ ತೋರಿಸುತ್ತ ಭಿಕ್ಷೆ ಪಡೆದುಕೊಂಡು ಮತ್ತೆ ತಮ್ಮ ವಾಸಸ್ಥಾನವಾದ ಸ್ಮಶಾನಕ್ಕೆ ಹೋಗುತ್ತಾರೆ. ಇಂತಲ್ಲಿ ವಾಸಿಸಲು ಮತ್ತೊಂದು ಮುಖ್ಯ ಕಾರಣವೆಂದರೆ ತಾವು ಮಾಡುವ ಪೂಜೆ ಯಾರು ನೋಡಬಾರದೆಂಬುದಾಗಿದೆ. ಬೀದಿಯಲ್ಲಿ ಪ್ರತಿ ಮನೆಯ ಬಾಗಿಲಿಗೆ ಹೋಗಿ "ಜಯವಾಗಲಿ ರೇವಣ್ಣಸಿದ್ಧೇಶ್ವರ" ಎನ್ನುತ್ತಾ "ಕುಟುಂಬದ ಎಲ್ಲ ಸದಸ್ಯರನ್ನು ದೇವರೇ ನೀನು ಕಾಯಬೇಕು. ಸಕಲ ಸಮಾಜವನ್ನು ಚೆನ್ನಾಗಿಟ್ಟಿರು" ಎಂದು ಹಾರೈಸುವ ಸಮುದಾಯ 'ಸುಡುಗಾಡು ಸಿದ್ಧರು'.

ಸ್ಮಶಾನದಲ್ಲಿ ವಾಸಿಸುವವರಿಗೆ ಶಿಕ್ಷಣವು ಮಾಯಾಜಿಂಕೆಯಾಗಿದೆ. ಅತಿವೃಷ್ಟಿ-ಅನಾವೃಷ್ಟಿಯ ಅನಾಹುತಗಳು ಸಂಭವಿಸಿದಾಗ ಸ್ಮಶಾನದಲ್ಲಿರುವವರಿಗೆ ಯಾರೊಬ್ಬರು ಸಹಾಯಕ್ಕೆ ಬರಲಾರರು. ಅದು ಮನುಷ್ಯರು ವಾಸಿಸುವ ಸ್ಥಳವಲ್ಲ, ಅದು ಸತ್ತ ಹೆಣಗಳನ್ನು ಹೂಳುವ ಸ್ಥಳ. ಕುಟುಂಬದಲ್ಲಿ ಬೇಕಾದ ಆಹಾರವನ್ನು ಸ್ಮಶಾನದಲ್ಲಿಯೇ ಮೂರು ಕಲ್ಲುಗಳನ್ನಿಟ್ಟು ಒಲೆ ಹೂಡಿಕೊಂಡು, ಶವಸಂಸ್ಕಾರಕ್ಕೆ ತಂದ ಕಟ್ಟಿಗೆಯನ್ನು ಉರುವಲಿಗಾಗಿ ಬಳಸಿಕೊಂಡು ಕತ್ತಲಾಗುವ ಮುಂಚೆಯೇ ಆಹಾರವನ್ನು ಬೇಯಿಸುವರು. ರಾತ್ರಿ ಸಮಯದಲ್ಲಿ ಸ್ಮಶಾನದಲ್ಲಿ ಬೆಳಕಿನ ವ್ಯವಸ್ಥೆ ಇಲ್ಲದಿರುವುದರಿಂದ ಬೇಗ ಅಡುಗೆ ತಯಾರಿಸಿ ಬೆಳಕು ಕಂಡುಬಂದಾಗ ಸಾಮೂಹಿಕವಾಗಿ ಆಹಾರ ಸ್ವೀಕರಿಸುವರು. ಮಲಗಲು ತಾವೇ ತಯಾರಿಸಿದ ಕೌದಿ ಉಪಯೋಗಿಸಿಕೊಳ್ಳುವರು. ಮಲಗಿದ ಸಮಯದಲ್ಲಿ ನಾಯಿ ತೋಳಗಳು ಹೆಣ ತಿನ್ನಲು ಆ ಸ್ಥಳದಲ್ಲಿ ಬರುವುದರಿಂದ ರಕ್ಷಣೆ ಪಡೆಯಲು ಸಾಕು ನಾಯಿ ಬಳಸುತ್ತಾರೆ. ಮಾನವರು ಜೀವಿಸಲು ಯೋಗ್ಯವಲ್ಲದ, ಮೂಲಭೂತ ಸೌಲಭ್ಯಗಳಿಂದ ವಂಚಿತರಾದ ಇವರು ಸ್ಮಶಾನದಲ್ಲಿ ವಾಸಿಸಲು ಕಷ್ಟವಾದರೂ ಅನಿವಾರ್ಯವಾಗಿ ವಾಸಿಸುವರು.

ಬಸ್ ನಿಲ್ದಾಣಗಳಲ್ಲಿ

ಪ್ರತಿಯೊಂದು ನಗರ ಮತ್ತು ಗ್ರಾಮಗಳಲ್ಲಿ ಬಸ್ ನಿಲ್ದಾಣವನ್ನು ಕಾಣುತ್ತೇವೆ. ತಾಲ್ಲೂಕು ಕೇಂದ್ರಗಳಲ್ಲಿ ಬಸ್‌ನಿಲ್ದಾಣ ತುಂಬಾ ವಿಶಾಲವಾದ ಜಾಗದಲ್ಲಿ ಆವರಿಸಿಕೊಂಡಿರುತ್ತದೆ. ಹಾಗೆಯೇ ಎಲ್ಲಿಯ ತನಕ ನಿಲ್ದಾಣದ ಜಾಗವಿರುವುದೋ ಅಲ್ಲಿಯವರೆಗೆ ಕಾಂಪೌಂಡ್ ಕಟ್ಟಿರುತ್ತಾರೆ. ಇಂತಹ ಕಾಂಪೌಂಡ್ ಗೋಡೆಗೆ ಆಸರೆಯಾಗಿ ಅಲೆಮಾರಿ ಕುಟುಂಬಗಳು ಕಮಾನಿನ ಆಕಾರದಲ್ಲಿ ಪ್ಲಾಸ್ಟಿಕ್ ಚೀಲ, ಗೋಣಿಚೀಲ, ರಟ್ಟಿನಿಂದ ಬಿಡಾರ ನಿರ್ಮಿಸಿಕೊಂಡಿರುವರು. ಅಲ್ಲಿನ ಸಿಬ್ಬಂದಿ ವರ್ಗದವರ ಅನುಮತಿಯೂ ಇದಕ್ಕೆ ಇರಬಹುದು. ಇದು ಒಂದು ಮಾದರಿ ವಾಸದ ವ್ಯವಸ್ಥೆಯಾದರೆ, ಎರಡನೆಯದಾಗಿ ನಿಲ್ದಾಣದ ಕೊನೆಯ ಸ್ಥಳ ಸ್ವಚ್ಛ ಮಾಡಿಕೊಂಡು, ಅಲ್ಲಿನ ನೌಕರರ ಅನುಮತಿಯ ಮೇರೆಗೆ ತಮ್ಮ ಬಳಿಯಿದ್ದ ಪ್ಲಾಸ್ಟಿಕ್ ಚೀಲ, ಗೋಣಿಚೀಲ, ರಟ್ಟಿನಿಂದ ಬಿಡಾರ ತಯಾರಿಸಿ ವಾಸಿಸುತ್ತಾರೆ. ಇಂತಲ್ಲಿ ವಾಸಿಸುವುದರಿಂದ ಅಲೆಮಾರಿಗಳಿಗೆ ಹಲವಾರು ಅನುಕೂಲತೆಗಳಿವೆ.

೧. ದಟ್ಟ ಜನಸಂದಣಿಯಾಗಿರುವ ಈ ಸ್ಥಳದಲ್ಲಿ ವ್ಯಾಪಾರ ಮಾಡಲು ಅನುಕೂಲ.

೨. ಸಣ್ಣಪುಟ್ಟ ತಿಂಡಿತಿನಿಸುಗಳನ್ನು ಪ್ರಯಾಣಿಕರಿಗೆ ಮಾರಾಟ ಮಾಡಬಹುದು.

೩. ತಮ್ಮ ಆಟಗಳನ್ನು ತೋರಿಸಬಹುದು.

೪. ಪ್ರಯಾಣಿಕರಿಂದ ಭಿಕ್ಷೆಯನ್ನು ಬೇಡಬಹುದು.

೫. ರಾತ್ರಿವೇಳೆ ಮತ್ತು ಮಳೆ ಬಂದಾಗ ನಿಲ್ದಾಣದಲ್ಲಿ ಮಲಗಬಹುದು.

೬. ನಿಲ್ದಾಣದಲ್ಲಿ ನೀರು ಸದಾ ಇರುವುದರಿಂದ ನೀರು ಬಳಸಿಕೊಳ್ಳಬಹುದು.

೭. ಬಾಡಿಗೆ ಕಟ್ಟುವ ಅಗತ್ಯವಿಲ್ಲ.

೮. ಪ್ರಯಾಣಿಕರು ಬಿಸಾಡಿದ ಆಹಾರ ಪೊಟ್ಟಣದಲ್ಲಿರುವ ಚೂರುಪಾರು ತಿಂಡಿ ತಿನಿಸು ಸಿಗುತ್ತದೆ.

೯. ಅಡಿಗೆ ಮಾಡಲು ಉರುವಲಿಗಾಗಿ ನಿಲ್ದಾಣದಲ್ಲಿ ಬಿದ್ದಿರುವ ಕಾಗದಗಳನ್ನು ಬಳಸಬಹುದು.

೧೦. ಪ್ರಯಾಣಿಕರು ನೀಡುವ ತಿಂಡಿ, ಹಣ್ಣು-ಹಂಪಲುಗಳು ಮಕ್ಕಳಿಗೆ ಸಿಗುತ್ತವೆ.

೧೧. ಭಿಕ್ಷೆಗೆ ಅತಿಮುಖ್ಯ ಸ್ಥಳವಾಗಿದೆ.

ಹೀಗೆ ಈ ಸಮುದಾಯಗಳಿಗೆ ಎಷ್ಟು ಅನುಕೂಲಗಳಿವೆಯೋ ಅಷ್ಟೇ ಇಲ್ಲಿ ಅನಾನುಕೂಲತೆಗಳು ಇವೆ.

೧. ಊರಲ್ಲಿ ಕಳ್ಳತನಗಳು ನಡೆದರೆ ಈ ಸಮುದಾಯಗಳನ್ನು ನೇರವಾಗಿ ಆರೋಪಿಸುತ್ತಾರೆ.

೨. ಸ್ತ್ರೀಯರನ್ನು ಕೆಟ್ಟ ದೃಷ್ಟಿಯಿಂದ ಕಾಣುವುದು ಹಾಗೂ ಕಿರುಕುಳ ನೀಡುವುದಾಗಿದೆ.

೩. ಗಾಳಿಯಿಂದ ಬಿಡಾರದಲ್ಲಿ ಬೆಂಕಿ ಬಿದ್ದರೆ ನಷ್ಟ ಭರಿಸುವ ವ್ಯವಸ್ಥೆಗಳಿರುವುದಿಲ್ಲ.

೪. ನಿಲ್ದಾಣದಲ್ಲಿ ನೀರು ಕೈಕೊಟ್ಟಾಗ ಕುಡಿಯಲು ನೀರು ದೊರೆಯಲಾರದು.

೫. ಸಾಕುಪ್ರಾಣಿಗಳು ವಾಹನಗಳ ಶಬ್ದದಿಂದ ಬೆದರು(ಹೆದರು)ತ್ತವೆ.

೬. ಚಿಕ್ಕಮಕ್ಕಳು ಅಪಘಾತಕ್ಕೆ ಈಡಾಗುವ ಸಂಭವ ಹೆಚ್ಚಾಗಿರುತ್ತದೆ.

ಹೀಗೆ ನಗರ ಮತ್ತು ಗ್ರಾಮಗಳಲ್ಲಿ ಸೌಲಭ್ಯಗಳು ಮತ್ತು ತೊಂದರೆಗಳಿವೆ. ಜನರ ನಿಂದನೆಗಳು ಹೊಡೆತಗಳು ಸಾಮಾನ್ಯವಾಗಿದ್ದರೂ ಬಸ್ ನಿಲ್ದಾಣವನ್ನೇ ತಮ್ಮ ವಾಸದ ನೆಲೆಯನ್ನಾಗಿ ರೂಪಿಸಿಕೊಂಡು ಬದುಕು ಸಾಗಿಸುತ್ತಿರುವ ಅಲೆಮಾರಿಗಳು ಅಲ್ಲಿನ ಕಷ್ಟಸುಖಗಳನ್ನು ಸಮ ಪ್ರಮಾಣದಲ್ಲಿ ಸ್ವೀಕರಿಸಿಕೊಂಡು ಇದ್ದಷ್ಟು ಕಾಲವಿದ್ದು, ಮುಂದಿನ ಪ್ರದೇಶದಲ್ಲಿ ಬದುಕು ಸಾಗಿಸುವರು.

ನಗರಪಾಲಿಕೆ ಮತ್ತು ತಾಲ್ಲೂಕು ಕಛೇರಿಗಳ ಮೈದಾನಗಳು

ಇಂತಹ ಸ್ಥಳಗಳಲ್ಲಿ ಅಲೆಮಾರಿಗಳು ತಾತ್ಕಾಲಿಕವಾಗಿ ತಂಗಲು ಬಿಡಾರ ಹೂಡುತ್ತಾರೆ. ಸದಾ ತಮ್ಮ ಬಳಿಯಲ್ಲಿಯೇ ಇರುವ ಬಿಡಾರದ ಸಾಮಾನುಗಳನ್ನು ಉಪಯೋಗಿಸಿ ಬಿಡಾರ ಹಾಕುವರು.

ಇಂತಹ ಸ್ಥಳಗಳಲ್ಲಿ ಅಲೆಮಾರಿಗಳಿಗೆ ಆ ಕಛೇರಿಯ ನೀರಿನ ಉಪಯೋಗ ದೊರೆಯುವುದು. ಅಲ್ಲಿನ ಕಟ್ಟಿಗೆ ತುಂಡುಗಳು ಕಾಗದ ಪ್ಲಾಸ್ಟಿಕ್ ಇತ್ಯಾದಿಗಳೂ ದೊರೆಯುವುದು. ಬಾಡಿಗೆ ಕಟ್ಟುವ ಅವಶ್ಯಕತೆಯಿಲ್ಲ. ಅಲ್ಲಿನ ಸಿಬ್ಬಂದಿಗಳ ಅನುಮತಿ ಪಡೆದು ತಮ್ಮ ಬಳಿಯಲ್ಲಿರುವ ಚಿಕ್ಕ-ಪುಟ್ಟ ಆಟಿಕೆ ಸಾಮಾನುಗಳನ್ನು ಮಾರಾಟ ಮಾಡಲು, ಕಲೆ ಬಿತ್ತರಿಸಲು ಹಾಗೂ ಯಾವಾಗಲೂ ಆಫೀಸಿಗೆ ಹೋಗುವ ಬರುವ ಜನರಿರುವುದರಿಂದ ಭಿಕ್ಷೆ ಬೇಡಲು ಅನುಕೂಲವಾಗುತ್ತದೆ. ಮಳೆಯಿಂದ ರಕ್ಷಣೆ ಪಡೆಯಲು ರಾತ್ರಿ ಕಛೇರಿಗಳ ಮುಂದೆ ತಂಗಲು ಅನುಕೂಲವಿರುವುದರಿಂದ ವಾಸಿಸಲು ಮುಂದಾಗುವರು. ಆದರೂ ಕೆಲವು ಸಂದರ್ಭಗಳಲ್ಲಿ ಅಲ್ಲಿನ ಸಾಮಾನುಗಳು ಕಳ್ಳತನವಾದರೆ, ಸ್ವಚ್ಛತೆಯು ಇಲ್ಲವೆಂದಾಗ ಅನಿವಾರ್ಯವಾಗಿ ಅಲ್ಲಿಂದ ಖಾಲಿ ಮಾಡಿಸುತ್ತಾರೆ. ಅವರು ಅನುಮತಿಯಲ್ಲಿ ಬಿಡಾರಗಳನ್ನು ಹಾಕಿಕೊಂಡಿದ್ದು, ಅವರು ಖಾಲಿ ಮಾಡಿ ಎಂದೇಳಿದಾಗ ಮುಂದಿನ ಸ್ಥಳದಲ್ಲಿ ಅಣಿಯಾಗಬೇಕಾಗುತ್ತದೆ. ಹೀಗೆ ಅಲೆಮಾರಿಗಳು ಅಧಿಕಾರಿಗಳಿಗೆ, ಸಾಮಾನ್ಯರಿಗೆ ಏನೆಲ್ಲಾ ಸೇವೆ ಸಲ್ಲಿಸಿದರೂ ವಾಸದ ಅಭದ್ರತೆ ಇರುವುದರಿಂದ ಮೂಲ ಸೌಲಭ್ಯಗಳಿಲ್ಲದೆ ವಾಸಿಸುವರು.

ಸ್ಥಗಿತಕೊಂಡ ವಾಹನದ ಕೆಳಗಡೆ

ಲಾರಿ, ಬಸ್ಸುಗಳು, ಟ್ರಕ್ಟರ್‌ಗಳಂತಹ ವಾಹನಗಳು ಅಪಘಾತಕ್ಕೀಡಾಗಿ ಅಥವಾ ಇನ್ನಾವುದೋ ಸಮಸ್ಯೆಯಿಂದ ಚಾಲನಾರಹಿತವಾಗಿ ನಿಂತಿರುವುದುಂಟು. ಕೆಲವು ಕಛೇರಿಗಳಲ್ಲಿ ದುರಸ್ತಿಯಾಗದೆ ನಿಲ್ಲಿಸಿರುವ ವಾಹನಗಳ ಕೆಳಗೆ ತಾತ್ಕಾಲಿಕವಾಗಿ, ವಾಸಕ್ಕಾಗಿ ಅಲೆಮಾರಿಗಳು ಅಂತವುಗಳನ್ನು ಬಳಸಿ ಕೊಳ್ಳುವರು. ಅಂದರೆ ತಮ್ಮ ಬಳಿ ಇರುವ ಪ್ಲಾಸ್ಟಿಕ್ಕನ್ನು ವಾಹನದ ಕೆಳಗಡೆ ಮತ್ತು ಸುತ್ತಲೂ ಗಾಳಿ ನುಸುಳದಂತೆ ಮತ್ತು ಜನರು ಕಾಣದಂತೆ ಸುತ್ತುವರಿದು ವಾಸಕ್ಕಾಗಿ ನಿರ್ಮಿಸುವರು. ಇದು ಚಳಿ, ಗಾಳಿ, ಮಳೆ, ಬಿಸಿಲುಗಳಿಂದ ಕೂಡಿದ ಮಲೀನ ಪ್ರದೇಶವಾಗಿದೆ. ಆಹಾರವನ್ನು ವಾಹನಗಳ ಮುಂದೆ ತಯಾರಿಸಿಕೊಂಡು ಊಟ ಮಾಡಿ ಒಳಗಡೆ ಸಾಮಾನು ಇಟ್ಟುಕೊಂಡು, ಉಳಿದ ಜಾಗದಲ್ಲಿ ವಾಹನದ ಕೆಳಗಡೆ ಮಲಗುವರು. ಬೇಸಿಗೆಯಲ್ಲಿ ವಾಹನಗಳ ಮೇಲೆ ಮಲಗುವರು. ವೃತ್ತಿಗಾಗಿ ಹೊರಡುವಾಗ ವೃದ್ಧರನ್ನು ಅಥವಾ ಮಕ್ಕಳನ್ನು ಸಾಮಾನು ಕಾಯಲು ಹೇಳಿ ಹೋಗುವರು. ಇಲ್ಲಿ ಗಾಳಿ ವ್ಯವಸ್ಥೆ ಬಿಟ್ಟರೆ ನೀರು, ಬೆಳಕು ಇತ್ಯಾದಿ ಮೂಲಭೂತ ಸೌಲಭ್ಯ ಇರುವುದಿಲ್ಲ. ಕಾಗದದ ಚೂರುಗಳನ್ನು ಉರುವಲಿಗೆ ಉಪಯೋಗಿಸಿಕೊಳ್ಳುವರು. ಕೆಲವು ಸಾರಿ ವಾಹನದಲ್ಲಿರುವ ವಸ್ತುಗಳು ಹಾಳಾಗುವವು ಹಾಗೂ ಕಳ್ಳತನವಾಗುತ್ತವೆ ಎಂಬ ಕಾರಣಕ್ಕಾಗಿ ಅಲ್ಲಿಂದ ಜಾಗ ಖಾಲಿ ಮಾಡಲು ಸೂಚಿಸುತ್ತಾರೆ. ಅದಕ್ಕೂ ಮೊದಲು ವಾಹನಗಳಿಗೆ ರಿಪೇರಿ ಭಾಗ್ಯ ಬಂದಾಗ ಅನಿವಾರ್ಯವಾಗಿ ಸ್ಥಳ ಬದಲಾಯಿಸಲೇಬೇಕಾಗುತ್ತದೆ.

ವಸತಿ

ಕಾಲಾನುಕ್ರಮದಲ್ಲಿ ಅಲೆಮಾರಿ ಸಮುದಾಯಗಳು ಚಿಕ್ಕ ಗುಂಪು ಕಟ್ಟಿಕೊಂಡು ನಾಲ್ಕಾರು ಕುಟುಂಬಗಳೊಂದಿಗೆ ನಿಶ್ಚಿತವಾಗಿ ನೆಲೆನಿಲ್ಲದೆ ಅಲೆಮಾರಿಗಳಾಗಿ ಕೆಲವೊಂದು ಪ್ರದೇಶಗಳನ್ನು ಆಯ್ಕೆ ಮಾಡಿಕೊಂಡು ಬೀಡುಬಿಟ್ಟರು. ಅಂದರೆ ತಮ್ಮ ವೃತ್ತಿಗೆ ಅನುಕೂಲವಾಗುವಂತೆ ಗುಡಾರಗಳನ್ನು ಹಾಕಿಕೊಂಡು ವಾಸಿಸುತ್ತಿದ್ದರು. ಪ್ರಸ್ತುತ ವಿವಿಧ ಅಲೆಮಾರಿ ಸಮುದಾಯಗಳು ತಮ್ಮ ಜೀವನದ ಬಹುಪಾಲು ಗುಡಾರದಲ್ಲಿ ವಾಸ ಮಾಡುತ್ತಿದ್ದಾರೆ. ಬದುಕಿನಲ್ಲಿ ಸ್ಥಿರವಾದ ವಸತಿಯೆಂಬುದೇ ಇಲ್ಲದಾಗಿದೆ.

ಸದಾ ಅಲೆಮಾರಿಗಳಾಗಿರುವುದರಿಂದ ಇವರು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಪ್ರದೇಶದಿಂದ ಪ್ರದೇಶಕ್ಕೆ ಹೋಗಿ ಊರ ಶಾಲೆ, ಧರ್ಮಶಾಲೆ, ಗುಡಿ-ಗುಂಡಾರ ಇಲ್ಲವೆ ಊರ ಹೊರಗೆ ರಂಗಮಂದಿರ, ಕೃಷಿ ಮಾರ್ಕೆಟ್ ಸ್ಥಳ, ಸಿನಿಮಾ ಟಾಕೀಸ್ ಪಕ್ಕದಲ್ಲಿ, ರೈಲ್ವೆ ನಿಲ್ದಾಣದಲ್ಲಿ, ತಿಪ್ಪೆಗುಂಡಿ ಸ್ಥಳದಲ್ಲಿ, ಸ್ಮಶಾನದಲ್ಲಿ ತಮ್ಮದೇ ಆದ ಗುಡಾರಗಳಲ್ಲಿ ಇವರು ವಾಸಮಾಡುವರು. ಒಮ್ಮೆ ಗುಡಾರ ನಿರ್ಮಾಣ ಮಾಡಿದರೆ ಎರಡರಿಂದ ನಾಲ್ಕು ದಿವಸಗಳು ಬೇಕಾಗುತ್ತದೆ. ಮೀನು ದೊರೆಯುವ ಪ್ರದೇಶಕ್ಕೆ ಹೋದರೆ ಹೊಳೆ ದಂಡೆಯಲ್ಲಿ ಮೂರು ನಾಲ್ಕು ತಿಂಗಳವರೆಗೆ ಅಲ್ಲಿಯೇ ವಾಸ.

ನಿಂತಲ್ಲಿ ಖಾಯಂ ನಿಲ್ಲದ ಸ್ವಭಾವವಿರುವ ಈ ಸಮುದಾಯ ಸಹಜವಾಗಿಯೇ ತಮಗೆಂದು ಮನೆ ಮಾಡುವ ಗೋಜಿಗೆ ಹೋಗುವವರಲ್ಲ. ಇವರಿಗೆ ನಾಳೆಯ ಬಗ್ಗೆ ಚಿಂತೆಯಿಲ್ಲ. ಕೂಡಿಡುವ ಅಪೇಕ್ಷೆ ಮೊದಲೇ ಇಲ್ಲ. ಅವರಿಗೆ ತಾವು ತಂಗಿದ ಸ್ಥಳಗಳ ಗುಡಾರಗಳನ್ನು ತಮ್ಮ ಮನೆಯಂದೇ ಹೇಳುವರು. ಅದು ಅವರ ಎಲ್ಲ ಚಟುವಟಿಕೆಗಳ ಕೇಂದ್ರ ಸ್ಥಾನ; ಹುಟ್ಟಿನಿಂದ ಸಾಯುವವರೆಗೂ ಅವರ ಬದುಕನ್ನು ರೂಪಿಸಿ ಪೋಷಿಸುವ ನೆಲೆಯಾಗಿರುತ್ತದೆ.

ಯಾದಗಿರಿ ಜಿಲ್ಲೆಯ ವ್ಯಾಪ್ತಿಯ ಸಮೀಕ್ಷೆಯಲ್ಲಿ ಬರುವ ವಿವಿಧ ಅಲೆಮಾರಿ ಸಮುದಾಯಗಳು ಸಂಪೂರ್ಣ ಗುಡಾರಗಳಲ್ಲಿ ವಾಸಿಸುವುದಾಗಿದೆ. ಗುಡಿಸಲಿನಲ್ಲಿ, ತಗಡನ್ನು ಬಳಸಿಕೊಂಡು ಅಭದ್ರತೆಯನ್ನು ಅನುಭವಿಸುತ್ತಿರುವರು. ಕೆಲವು ಕಡೆ ಸರ್ಕಾರದ ಆಶ್ರಯ ಮನೆಗಳನ್ನು ಪಡೆಯಲು ಸಾಧ್ಯವಾಗಿದೆ. ಆದರೆ ಪ್ರಸ್ತುತ ಅಧ್ಯಯನವನ್ನು ಗುಡಿಸಲು ಮತ್ತು ಗುಡಾರಗಳಲ್ಲಿ ಕೇವಲ ಯಾವುದೇ ನೆಲೆಯಿಲ್ಲದೆ ಅಲೆದಾಡುತ್ತ ಬದುಕನ್ನು ಸಾಗಿಸುತ್ತಿರುವವರದಾಗಿದೆ.

೩.೧೧. ಅಲೆಮಾರಿಗಳ ಭಾಷೆ

ನಾಗರಿಕ ಸಾಮಾಜದ ವ್ಯವಸ್ಥೆಯಲ್ಲಿ ಮತ್ತು ಮಾನವ ಸಾಮಾಜದ ಜೀವನದಲ್ಲಿ ಭಾಷೆಯು ಪ್ರಮುಖವಾದ ಪಾತ್ರ ನಿರ್ವಹಿಸುತ್ತದೆ. ಅಂತೆಯೇ ಭಾಷೆಯು ಆಂತರಿಕ ಸಂಬಂಧಗಳನ್ನು ಒಂದುಗೂಡಿಸುವ ಮಾಧ್ಯಮವಾಗಿದೆ. ಪ್ರತಿಯೊಂದು ಸಮುದಾಯದಲ್ಲಿ ಭಾಷೆ ಇರುವಂತೆ ಪ್ರತಿ

ಅಲೆಮಾರಿ ಸಮುದಾಯದಲ್ಲಿ ತಮ್ಮದೇ ಆದ ಭಾಷೆಯನ್ನು ಅಳವಡಿಸಿಕೊಂಡಿರುವುದನ್ನು ಕಾಣಬಹುದು. ಈ ಅಲೆಮಾರಿ ಭಾಷೆಯು ಅವರವರ ಕೌಟುಂಬಿಕ ಸದಸ್ಯರಿಗೆ ಮಾತ್ರ ಸೀಮಿತ ವಾಗಿರುತ್ತದೆ. ಅವರ ಭಾಷೆ ಅವರ ಜಾತಿಯ ಸಮುದಾಯಕ್ಕೆ ಮಾತ್ರ ಗೊತ್ತಿರುತ್ತದೆ. ಇಂತಹ ಭಾಷೆಯು ಅಲೆಮಾರಿ ಕುಟುಂಬದ ಚೌಕಟ್ಟಿನಲ್ಲಿ ಹೆಚ್ಚಾಗಿ ಚಾಲ್ತಿಯಲ್ಲಿರುವುದನ್ನು ಅಧ್ಯಯನದ ಸಂದರ್ಭದಲ್ಲಿ ಕಂಡುಬಂದಿದೆ.

ಬುಡ್ಗಜಂಗಮರು ಬುಡ್ಗ ಭಾಷೆಯನ್ನು ಹೆಚ್ಚು ಬಳಸುವುದರ ಜೊತೆಗೆ ತೆಲುಗು ಮತ್ತು ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ದೊಂಬರು ದೊಂಬರ ಭಾಷೆ, ಶಿಳ್ಳೇಕ್ಯಾತ ಮರಾಠಿ, ಸಿಂಧೋಳ್ಳು ತೆಲುಗು, ಸಿಕ್ಲಿಗರು ಡೊಂಗ್ರಿ ಮಿಶ್ರಿತ ಗುಜರಾತಿ ಭಾಷೆ, ಬೈಲಪತ್ತಾರರು ಓರಿಯಾ, ರಾಜಗೊಂಡ ಗೊಂಡಿ ಭಾಷೆ, ಹೆಳವರು ಕನ್ನಡ, ತೆಲುಗು, ಮರಾಠಿ, ಗೊಂದಲಿಗರು ಮರಾಠಿ, ಸುಡುಗಾಡು ಸಿದ್ಧರು ತೆಲುಗು, ಹಂಡಿಜೋಗಿ ತೆಲುಗು, ಕೊರವರು ಕುಳುವ ಅಥವಾ ಕೊರಗ ಭಾಷೆ, ಕುರುಮಾಮರು ತೆಲುಗು ಮಿಶ್ರಿತ ಕನ್ನಡ, ಕೋಲೆಬಸವರು ತೆಲುಗು, ಹೀಗೆ ಕ್ಷೇತ್ರಕಾರ್ಯದಲ್ಲಿ ಗಮನಕ್ಕೆ ಬಂದ ಭಾಷೆಗಳು. ಈ ಅಲೆಮಾರಿ ಸಮುದಾಯಗಳಲ್ಲಿ ಹೆಚ್ಚಿನ ಅಲೆಮಾರಿಗಳು ತೆಲುಗು ಮಾತನಾಡುವರು ಮತ್ತು ಜೊತೆಗೆ ತಾವು ಸಂಚಾರ ಮಾಡುವ ಪ್ರದೇಶಗಳಿಗೆ ಅನುಗುಣವಾಗಿ ಹಾಗೂ ವ್ಯಾವಹಾರಿಕವಾಗಿ ಮರಾಠಿ, ಕನ್ನಡ ಹೀಗೆ ಇತರೆ ಭಾಷೆಗಳನ್ನಾಡುವುದು ಕಂಡುಬರುತ್ತದೆ.

ತಮ್ಮ ವೃತ್ತಿಯ ಕಾರಣದಿಂದ ವಿವಿಧ ಪ್ರದೇಶಗಳಿಗೆ ಅಲೆಯುವುದರಿಂದ ಆಯಾ ಪ್ರಾಂತೀಯ ಭಾಷೆಯನ್ನು ಕಲಿತುಕೊಳ್ಳುತ್ತಾರೆ. ವಿವಿಧ ಪ್ರದೇಶದ ಬೇರೆ ಬೇರೆ ಗುಂಪಿನವರ ಜೊತೆ ಬೆರೆತು ಅವರ ಪ್ರೀತಿ ವಿಶ್ವಾಸಗಳಿಗೆ ತಕ್ಕಂತೆ ವ್ಯವಹರಿಸುವ ಮಟ್ಟಿಗೆ ಆಯಾ ಪ್ರಾಂತ್ಯದ ಭಾಷೆಗಳನ್ನು ಕರಗತ ಮಾಡಿಕೊಳ್ಳುತ್ತಾರೆ. ತಮ್ಮ ಭಾಷೆಯ ಜೊತೆಗೆ ಕನ್ನಡ, ಮರಾಠಿ, ಉರ್ದು ಇತ್ಯಾದಿ ಭಾಷೆಗಳನ್ನು ಮಾತನಾಡುತ್ತಾರೆ. ಉದಾಹರಣೆಗೆ ಸಂಬಂಧಿಕರನ್ನು ಕರೆಯುವಾಗ ಅಣ್ಣ-ಅಣ್ಣ, ಅಯ್ಯ-ಅಪ್ಪ, ಜೇಜಯ್ಯ-ಅಜ್ಜ, ತಮ್ಮಡು-ತಮ್ಮ ಚೆಲ್ಲೆಲು-ತಂಗಿ, ಪಿನ್ನಾಯನ-ಚಿಕ್ಕಪ್ಪ, ಪೆಳ್ಳಾಮ-ಹೆಂಡತಿ, ಮಗುಡು-ಗಂಡ.

ಉಪಸಂಹಾರ

ಅಲೆಮಾರಿ ಸಮುದಾಯಗಳಲ್ಲಿ ನಿಯೋಜಿತವಾದ ಕೆಲಸಕಾರ್ಯಗಳನ್ನು ಮಾಡುತ್ತಾ ತಮ್ಮ ಜೀವನ ನಿರ್ವಹಣೆ ಮಾಡುತ್ತಾರೆ. ಇಲ್ಲವಾದರೆ ಈ ಸಮುದಾಯದಲ್ಲಿ ನ್ಯೂನತೆಗಳು ಕಂಡುಬರುತ್ತವೆ. ಸ್ತ್ರೀಯರು ತಮಗೆ ಸಂಬಂಧಪಟ್ಟ ಕೆಲಸಗಳನ್ನು ಮಾಡಿದರೆ ಪುರುಷನು ಕೂಡ ಕುಟುಂಬದ ಇಡೀ ಜವಾಬ್ದಾರಿಯನ್ನು ನಿಭಾಯಿಸುತ್ತ ತನ್ನ ಕಾರ್ಯವನ್ನು ಮಾಡುವುದರ ಮೂಲಕ ಹೆಂಡತಿಗೆ ಗಂಡನಾಗಿ, ಮಕ್ಕಳಿಗೆ ತಂದೆಯಾಗಿ, ತನ್ನ ಕಾರ್ಯವನ್ನು ನಿರ್ವಹಿಸುತ್ತಾನೆ. ಹೀಗೆ ಅಲೆಮಾರಿಗಳು ತಮ್ಮ ಪಾತ್ರಕ್ಕೆ ತಕ್ಕಂತೆ ವರ್ತಿಸುವರು. ಪಾತ್ರಗಳ ಪೋಷಣೆಯು ಅಲೆಮಾರಿಗಳ ಸಾಮಾಜಿಕ ಜೀವನದಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತವೆ.

ಯಾದಗಿರಿ ಜಿಲ್ಲೆಯಲ್ಲಿ ಕಂಡುಬರುವ ಅಲೆಮಾರಿಗಳ ಸಾಮಾಜಿಕ ಜೀವನದಲ್ಲಿ ಸಾಮುದಾಯಿಕ ಭಾವನೆಯು ಬಹಳ ಮುಖ್ಯವಾಗಿರುವುದನ್ನು ಅಧ್ಯಯನದ ಸಂದರ್ಭದಲ್ಲಿ ಕ್ಷೇತ್ರಕಾರ್ಯಕ್ಕೆ ಹೋದಾಗ ತಿಳಿದು ಬಂದಿದೆ. ಇಲ್ಲಿ ನಾವು, ನಮ್ಮವರು, ನನ್ನ ಜನ ಎಂಬ ಭಾವನೆಗಳನ್ನು ಬೆಳೆಸಿಕೊಳ್ಳುವುದರ ಜೊತೆಗೆ ನಾವೆಲ್ಲರೂ ಒಂದೇ ಸಮುದಾಯದವರು ಎಂಬ ನಂಬಿಕೆ ಅವರಲ್ಲಿದೆ. ಇದನ್ನು ಬಾಹ್ಯವಾಗಿ ತೋರ್ಪಡಿಸದೆ "ನಾವು ಹೆಚ್ಚು, ನೀವು ಹೆಚ್ಚು" ಎಂಬ ಸಮುದಾಯದ ಕಲ್ಪನೆ ಆಂತರಿಕವಾಗಿ ಇರುವುದನ್ನು ಕ್ಷೇತ್ರಕಾರ್ಯದಲ್ಲಿ ಗಮನಕ್ಕೆ ಬಂದಿದೆ.

ಉದಾಹರಣೆಗೆ ಯಮನಪ್ಪ ಎಂಬ ಸಿಂಧೋಳ್ಳು ಜನಾಂಗದ ಯಾದಗಿರಿಯ ಅಲೆಮಾರಿ ಯುವಕ ಬುಡ್ಗಜಂಗಮರನ್ನು ಕುರಿತು "ಅವರೇನು ಇವತ್ತು ಊಟ ಇರಲಿಲ್ಲ ಅಂದ್ರೆ ನಾಲ್ಕು ಮನೆ ಭಿಕ್ಷೆ ಬೇಡಿ ತಂದು ಊಟ ಮಾಡುತ್ತಾರೆ. ನಾವೆಲ್ಲ ಮೀನು ಹಿಡಿದು ತಂದು ಮಾರಾಟ ಮಾಡಿ, ಮಾರಾಟದಿಂದ ಬಂದ ಹಣದಿಂದ ಊಟ ಮಾಡಿ ಹೊಟ್ಟೆಯನ್ನು ತುಂಬಿಕೊಳ್ಳಬೇಕು. ಮೀನು ಇಲ್ಲ ಅಂದರೆ ಜೀವನ ಇಲ್ಲ" ಎಂಬ ಭಾವನೆಯನ್ನು ತೋಡಿಕೊಂಡಾಗ ಆ ಎರಡು ಸಮುದಾಯದ ನಡುವೆ ಇರುವ ಆಂತರಿಕ ಭಾವನೆಯನ್ನು ಆ ಯುವಕನಾಡಿದ ಮಾತುಗಳಿಂದ ಗುರುತಿಸಲು ಸಾಧ್ಯವಾಗಿದೆ.

ಆಚಾರ ವಿಚಾರ, ಉಡುಗೆ ತೊಡುಗೆ, ನ್ಯಾಯ ವ್ಯವಸ್ಥೆ, ಸ್ತ್ರೀಯರ ಸ್ಥಾನಮಾನ ಮುಂತಾದ ವಿಷಯಗಳನ್ನು ಅವಲೋಕಿಸಿದಾಗ ಸಾಂಪ್ರದಾಯಿಕ ಲೋಕದಿಂದ ಈ ಅಲೆಮಾರಿಗಳು ಹೊರ ಬರಬೇಕಾದ ಅವಶ್ಯಕತೆ ಇದೆ. ಅದಕ್ಕೆ ಪೂರಕವಾದ ವ್ಯವಸ್ಥೆಯನ್ನು ಕಲ್ಪಿಸಬೇಕಾದ ಜವಾಬ್ದಾರಿ ನಾಗರಿಕ ಸಮಾಜದ ಮೇಲಿದೆ ಎಂದು ಹೇಳಿದರೆ ತಪ್ಪಾಗದು.

ಅಡಿಟಿಪ್ಪಣಿ

೧. ನಂಜಮಣ್ಣಿ ಎಂ., ಸಾಮಾಜಿಕ ಮಾನವಶಾಸ್ತ್ರ, ಪು. ೪೬

೨. ಅಜ್ಜಯ್ಯ ಸಿ., ಪಿಎಚ್.ಡಿ. ಮಹಾಪ್ರಬಂಧ, ಪು. ೪೭-೪೮

೩. ಅದೇ ಪು. ೬೭-೭೦

೪. ರಮೇಶ ಸ.ಚಿ., ಅಲೆಮಾರಿಗಳ ಸ್ಥಿತಿಗತಿ, ಪು. ೮೫

೫. ಅಜ್ಜಯ್ಯ ಸಿ., ಪಿಎಚ್.ಡಿ. ಮಹಾಪ್ರಬಂಧ, ಪು. ೭೭

೬. ಭಾಸ್ಕರ್ ಟಿ.ಎಂ., ಸುಡುಗಾಡು ಸಿದ್ಧರು ಒಂದು ಸಾಂಸ್ಕೃತಿಕ ಅಧ್ಯಯನ, ಪು. ೧೨೬

೭. ಗಂಗಾಧರ ದೈವಜ್ಞ, ಗೊಂದಲಿಗರು, ಪು.೪೧

೮. ರಾಮಯ್ಯ ಬಿ.ಪಿ., ಕರ್ನಾಟಕದ ಬುಡಕಟ್ಟುಗಳು ಸಂಪುಟ-೨, ಪು. ೨೯೩

೯. ದೊಡ್ಡಮನಿ ಲೋಕರಾಜ, ಶ್ರೀನಿವಾಸ ರಾವುಲೊಳ್, ಸಿಂಧೊಳ್ಳು, ಪು. ೧೧೧

೧೦. ಬಾಲಗುರುಮೂರ್ತಿ, ಪ್ರತಾಪ ಆರ್. ಬಹುರೂಪಿ, ಬುಡ್ಗಜಂಗಮ್, ಪು.೧೦೫

೧೧. ಮಂಜುನಾಥ ಬೇವಿನಕಟ್ಟಿ, ಕರ್ನಾಟಕದ ಬುಡಕಟ್ಟುಗಳು ಸಂಪುಟ-೨, ಪು. ೪೨೨

೧೨. ಹರಿಲಾಲ ಪವಾರ, ಕರ್ನಾಟಕದ ಬುಡಕಟ್ಟುಗಳು ಸಂಪುಟ-೨, ಪು. ೫೩೦

೧೩. ದಾದಾಪೀರ್, ಕರ್ನಾಟಕದ ಬುಡಕಟ್ಟುಗಳು ಸಂಪುಟ-೨, ಪು. ೩೯೭

೧೪. ಚಲವಾದಿ ಬಸವರಾಜ, ಶೇಖರ್‌ಸಿಂಗ್, ಸಿಕ್ಕಲಿಗರ, ಪು. ೩೭

೧೫. ಕೇಶವನ್ ಪ್ರಸಾದ್, ಕರ್ನಾಟಕದ ಬುಡಕಟ್ಟುಗಳು ಸಂಪುಟ-೨, ಪು. ೫೧೫

೧೬. ಅಜ್ಜಯ್ಯ ಸಿ., ಪಿಎಚ್.ಡಿ. ಮಹಾಪ್ರಬಂಧ, ಪು. ೧೦೫

೧೭. ದ್ವಾರಕನಾಥ ಸಿ.ಎಸ್., ಹಿಂದುಳಿದ ವರ್ಗದ ಆಯೋಗದ ವರದಿ, ಸಂಕುಲ, ಪು.೨೬೨

೧೮. ಅದೇ ಪು. ೩೨೬

೧೯. ಅದೇ ಪು.೩೪೧

೨೦. ವಕ್ತೃ ಮಾಹಿತಿ: ಶಂಕರಶಾಸ್ತ್ರಿ (೩೮), ಬುಡ್ಗಜಂಗಮ್, ಯಾದಗಿರಿ, ಯಮನಪ್ಪ (೩೦), ಬುಡ್ಗಜಂಗಮ್, ಶಹಾಪುರ, ಗೋಪಾಲ (೪೬), ಕುರುಮಾಮ, ಸುರುಪುರ.

ಅಧ್ಯಾಯ ೪

ಯಾದಗಿರಿ ಜಿಲ್ಲೆಯ ಅಲೆಮಾರಿಗಳ ಆರ್ಥಿಕ ಸ್ಥಿತಿಗತಿ

ಅಧ್ಯಾಯ ನಾಲ್ಕು

ಯಾದಗಿರಿ ಜಿಲ್ಲೆಯ ಅಲೆಮಾರಿಗಳ ಆರ್ಥಿಕ ಸ್ಥಿತಿಗತಿ

ಕುಲಕಸಬುನೊಂದಿಗೆ ತಳಕು ಹಾಕಿಕೊಂಡ ಅಲೆಮಾರಿಗಳು ತಮ್ಮದೇ ಸಾಂಪ್ರದಾಯಿಕ ಕರಕೌಶಲ್ಯದಿಂದ ವಿಶೇಷತೆ ಹೊಂದಿದ್ದಾರೆ. ಗುಣಮಟ್ಟದ ವಸ್ತುಗಳನ್ನು ತಯಾರಿಸುತ್ತಿರುವುದು ಈ ಸಮುದಾಯಗಳ ಮತ್ತೊಂದು ವಿಶೇಷತೆಯಾಗಿದೆ. ಕುಲಕಸಬುಗಳನ್ನು ನಂಬಿಕೊಂಡು ಜೀವನ ಸಾಗಿಸುವ ಮೂಲಕ ಕರಕೌಶಲ್ಯದ ಜಾಣ್ಮೆಯ ಕೈಚಳಕದ ನೈಪುಣ್ಯವನ್ನು ಪ್ರತಿಯೊಂದು ವಸ್ತುವಿನಲ್ಲಿ ಕಾಣಿಸುತ್ತಾರೆ. ಈ ಪ್ರವೃತ್ತಿಯನ್ನು ಇವರು ಹಿಂದಿನಿಂದಲೂ ರೂಢಿಸಿಕೊಂಡು ಬಂದಿದ್ದಾರೆ. ಒಬ್ಬ ವ್ಯಕ್ತಿ ಆ ಕಸಬುಗಳಲ್ಲಿ ತೊಡಗಿರದೆ ಇಡೀ ಕುಟುಂಬ ತಮ್ಮನ್ನು ತಾವು ತೊಡಗಿಸಿಕೊಂಡಿರುತ್ತಾರೆ. ಅಲ್ಲಿ ನಿರ್ದಿಷ್ಟವಾಗಿ ಯಾರು ಯಾವ ಹಂತದ, ಯಾವ ರೀತಿಯ ಕರಕೌಶಲ್ಯದಲ್ಲಿ ತೊಡಗಬೇಕೆಂದು ಹೇಳಿಸಿಕೊಳ್ಳಲಾರದೆ, ತಮ್ಮ ಪಾಡಿಗೆ ತಾವು ಕಾರ್ಯ ಪ್ರವೃತ್ತರಾಗುತ್ತಾರೆ. ವಸ್ತುವಿನ ಕಲ್ಪನೆಗೆ ತಕ್ಕಂತೆ ಅವಶ್ಯಕ ಪರಿಕರಗಳನ್ನು ಸಂಸ್ಕರಣಕ್ಕೊಳಪಡಿಸಿ, ಕರಕೌಶಲ್ಯದಿಂದ ಭೌತಿಕ ರೂಪ ಕೊಡುವುದು ಕುಲಕಸಬಿನ ಕುಶಲತೆಯ ವೈಶಿಷ್ಟ್ಯವಾಗಿದೆ. "ರಸಾನುಭವವನ್ನು ಉಂಟುಮಾಡಬಹುದಾದ ಯಾವುದೇ ರಚನೆ ಅಥವಾ ಸೃಷ್ಟಿಯನ್ನು ನಾವು ಕಲೆ" ಎಂದು ಗುರುತಿಸುತ್ತೇವೆ. ಹೀಗಾಗಿ ಕಲೆಗೆ ಹೆಚ್ಚಿನ ಮಹತ್ವ ನೀಡಲಾಗಿದೆ. ಕರಕುಶಲ ಕಲೆಯು ಸಾಂಸ್ಕೃತಿಕ ಪರಂಪರೆಯ ಪ್ರತೀಕವಾಗಿರುವುದರಿಂದ. ಇದು ಇವರ ನಿತ್ಯದ ಬದುಕಿನಲ್ಲಿ ಹಾಸುಹೊಕ್ಕಾಗಿ ಹೆಣೆದುಕೊಂಡಿದೆ. ಕಡುಬಡತನದ ಜೀವನ ಸಾಗಿಸುತ್ತಿರುವ ಈ ಅಲೆಮಾರಿಗಳ ಆರ್ಥಿಕ ಸ್ಥಿತಿ ತುಂಬಾ ಚಿಂತಾಜನಕವಾಗಿದೆ. ನೆಲೆ ನಿಂತವರ ಬದುಕೇ ಈಗಿನ

ಸಂದರ್ಭದಲ್ಲಿ ಕಷ್ಟವಾಗಿರುವಾಗ. ಈ ಅಲೆಮಾರಿಗಳ ಆರ್ಥಿಕ ಬದುಕಿನ ಬಗ್ಗೆ ಊಹಿಸಿಕೊಳ್ಳಲು ಸಾಧ್ಯವಿಲ್ಲ. ಅಂತಹ ಆರ್ಥಿಕ ಮುಗ್ಗಟ್ಟಿನಿಂದ ಕೂಡಿದ ಜೀವನ ಇವರದಾಗಿದೆ.

ಅಲೆಮಾರಿ ಸಮುದಾಯವು ಶಕುನ ಮತ್ತು ಭವಿಷ್ಯ ಹೇಳಲು ತಾಳೆಗರಿಯ ಮೂಲಕ ಕಲೆಗಳನ್ನು ರಚಿಸಿಕೊಂಡರು. ರಾಮಕೊಂಡಿಗಳು, ತಾಳೆಗರಿಯ ಮೇಲೆ ಅನೇಕ ರೀತಿಯ ಚಿತ್ರಗಳನ್ನು ಸೃಷ್ಟಿಸಿಕೊಂಡಿದ್ದಾರೆ. ಅವರು ಕೃಷ್ಣ, ರಾಮ, ಸೀತೆ, ಹಾವು, ಚೇಳು, ಸೂರ್ಯ, ಚಂದ್ರ, ಆದಿಶಕ್ತಿ, ಸರಸ್ವತಿ, ಲಕ್ಷ್ಮಿ, ಬ್ರಹ್ಮ, ಶಿವ, ಆನೆ, ಗರುಡ, ಟಗರು, ಹಂದಿ ಇತ್ಯಾದಿ ಚಿತ್ರಗಳನ್ನು ಸೃಷ್ಟಿಸಿದ್ದಾರೆ. ನಿಸರ್ಗದ ಜೀವಿಗಳು ಹಾಗೂ ದೈವಶಕ್ತಿಗಳ ಚಿತ್ರಗಳನ್ನು ಬರೆದುಕೊಂಡು ಅವುಗಳನ್ನು ಭವಿಷ್ಯದ ಮೂಲಕ ತಿಳಿಸುವ ಸಾಧನವಾಗಿ ಬಳಸಿಕೊಳ್ಳುವರು. ಈ ಕಾರ್ಡುಗಳನ್ನು ತೆಗೆಯಲು ಅವರು ಗಿಳಿಯನ್ನು ಸಾಕಿಕೊಂಡು ಅದರಿಂದ ಭವಿಷ್ಯ ಕೇಳಲು ಉಪಯೋಗಿಸುವರು. ಮುಂದಿನ ಜೀವನ ಯಾವ ರೀತಿಯದು ಎಂಬುದನ್ನು ತಿಳಿಯಲು ಗಿಳಿಯನ್ನು ಉಪಯೋಗಿಸಿಕೊಳ್ಳುತ್ತಾರೆ. ವ್ಯಕ್ತಿಯ ಭವಿಷ್ಯದ ಕಾರ್ಡು ತೆಗೆಯಲು ಗಿಳಿಗೆ ತಮ್ಮದೇ ಆದ ಸಂಕೇತದ ಮೂಲಕ ಹೇಳುತ್ತಾನೆ. ಬಂದಿರುವ ಚಿತ್ರವನ್ನು ನೋಡಿ ವರ್ಣನೆ ಮಾಡುತ್ತಾ ಭವಿಷ್ಯ ನುಡಿಯವರು. ಒಂದೊಂದು ಬಾರಿ ಆ ಚಿತ್ರದಲ್ಲಿ ಏನಾದರೂ ಅನಾಹುತ ಸಂಭವಿಸಬಹುದಾಗಿದ್ದರೆ ಅದರ ಪರಿಹಾರಕ್ಕಾಗಿ ಕರ್ಮ, ಕ್ರಿಯೆಗಳನ್ನು ಮಾಡಬೇಕಾಗಿರುವುದು ಅನಿವಾರ್ಯ ಎಂದು ಹೇಳುತ್ತಾರೆ. ನಿಮಗೆ ಸುಖ ಶಾಂತಿಗಳು ದೊರೆಯುತ್ತವೆಂದು ಮಾತಿನ ಮೋಡಿ ಮಾಡಿ ವಿವರಿಸಿ ಹೇಳಿ ಹಣ ಪಡೆಯುತ್ತಾರೆ.

೪.೧. ಅಲೆಮಾರಿಗಳ ಕುಲಕಸಬು

ಸಾಮಾಜಿಕ ವ್ಯವಸ್ಥೆಯಲ್ಲಿ ಮೇಲ್ವರ್ಗದವರ ಕಸಬುಗಳೇ ಬೇರೆ, ಕೆಳವರ್ಗದ ಕಸಬುಗಳೇ ಬೇರೆ, ಬುಡಕಟ್ಟು ಕಸಬುಗಳೇ ಬೇರೆ. ಹೀಗೆ ಸಮುದಾಯಗಳಲ್ಲಿ ವೈವಿಧ್ಯ ಕಸಬುಗಳಾಗಿ ಕಂಡು ಬರುವುದುಂಟು. ಮಧ್ಯಮ ವರ್ಗದವರ ಕಸಬುಗಳು ಮತ್ತು ಮೇಲ್ವರ್ಗದ ಕಸಬುಗಳು ಸಾಮಾನ್ಯವಾಗಿ ಅಧಿಕ ಆದಾಯ, ಗೌರವಗಳನ್ನು ಕೊಡುವಂಥದ್ದಾದರೆ ಮಧ್ಯಮ ವರ್ಗದ ಕಸಬುಗಳು ಅದಕ್ಕಿಂತ ಸ್ವಲ್ಪ ಭಿನ್ನವಾದ ಕಸಬು ಮತ್ತು ಗೌರವ ಹೊಂದಿದೆ. ಕೆಳವರ್ಗದ ಕಸಬುಗಳಲ್ಲಿ ಅಧಿಕ ಶ್ರಮ ಮತ್ತು ಅಷ್ಟೇನೂ ಗೌರವ ಕೊಡದಂತಹ ಕಸಬುಗಳಾಗಿವೆ. ಇಂತಹ ಕಸಬುಗಳನ್ನು ಪೂರೈಸುವ ಸಮುದಾಯಗಳನ್ನು ಸ್ಪರ್ಶಿಸಲಿಕ್ಕೂ ಅಸಹ್ಯ ವ್ಯಕ್ತಪಡಿಸುತ್ತಾರೆ. "ಬುಡಕಟ್ಟು ಸಮುದಾಯಗಳು ಸಂಚಾರಿ ವ್ಯಾಪಾರ, ಸಾಂಪ್ರದಾಯಿಕ ಕೃಷಿ, ಗಿಡಮೂಲಿಕೆ ಇತ್ಯಾದಿಗಳನ್ನು ನಂಬಿಕೊಂಡಿದ್ದಾರೆ. ಆಹಾರ ಸಂಗ್ರಹಣದಲ್ಲಿ ಕಾಡನ್ನೇ ಅವಲಂಬಿಸಿರುವುದು ಅನಿವಾರ್ಯವಾಗಿದೆ. ಅಲೆಮಾರಿಗಳು ಕಾಡಿನ ಉತ್ಪನ್ನಗಳನ್ನು ನಾಡಿಗೆ ತಂದರೆ ಮತ್ತೆ ಕೆಲವು ಅಲೆಮಾರಿಗಳು ತಮ್ಮ ಸಂಪ್ರದಾಯ ಕೌಶಲ್ಯಗಳಿಂದ ವಿವಿಧ ರೀತಿಯ ಸಾಹಸ ಅಭಿನಯ ಕಸಬುಗಳಲ್ಲಿ ತೊಡಗಿಸಿಕೊಂಡು ಅಲೆಯುತ್ತಾರೆ".[೧] ಮತ್ತೆ ಕೆಲವರು ಆಧುನಿಕ ಉತ್ಪನ್ನಗಳನ್ನು ಅವಲಂಬಿಸಿದ್ದಾರೆ. ಇಂತಹ ಕಸಬುಗಳು ಕೊಡುವ

ಸಂಭಾವನೆ ಮತ್ತು ಗೌರವಗಳೇ ಬೇರೆ. ಈ ರೀತಿಯ ಏಣಿ-ಶ್ರೇಣಿ ವ್ಯವಸ್ಥೆಯ ಕಸಬುಗಳಿಗೆ ಬಹುಮುಖ್ಯ ಕಾರಣವೆಂದರೆ ಜಾತಿವ್ಯವಸ್ಥೆ. ಜಾತಿಯು ಮೊದಲು ವರ್ಗಗಳ ಮೂಲಕ ಕಸಬುಗಳನ್ನು ಸೂಚಿಸಿದರೂ ದಿನಕಳೆದಂತೆ ಕಸಬಿನ ಆಧಾರದ ಮೇಲೆ ಜಾತಿಗಳನ್ನು ಗುರುತಿಸಲಾಯಿತು.

ಅಲೆಮಾರಿ ಸಮುದಾಯಗಳಂತೂ ಬೇರೆಯವರ ವೃತ್ತಿಯ ಹತ್ತಿರ ಸುಳಿದಾಡುವಂತಿರಲಿಲ್ಲ. ತಮ್ಮ ಜಾತಿಗೆ ಅಂಟಿಸಿದ ವೃತ್ತಿಯನ್ನು ಪ್ರಾಮಾಣಿಕತನದಿಂದ ಇಲ್ಲಿಯ ತನಕ ಕಾಪಾಡಿಕೊಂಡು ಬಂದಿದ್ದಾರೆ. ಹೀಗೆ ವೃತ್ತಿ ಆಧಾರದ ಮೇಲೆ ಜಾತಿಗಳನ್ನು ಗುರುತಿಸಲಾಯಿತು. ಸಮುದಾಯಗಳು ಅನುಸರಿಸುವ ಕಸಬಿನ ಆಧಾರದ ಮೇಲೆ ಜಾತಿ ಹೆಸರನ್ನು ಕರೆಯಲಾಯಿತು. ಇದರಿಂದಲೇ ಅಲೆಮಾರಿಗಳನ್ನು ಗುರುತಿಸಲಾಗುತ್ತಿದೆ. "ಹೊಟ್ಟೆಪಾಡಿಗಾಗಿ ವಿವಿಧ ರೀತಿಯ ವೃತ್ತಿಗಳನ್ನು ಮಾಡುವುದರಿಂದ ಆಯಾ ಜಾತಿಯನ್ನು ಗುರುತಿಸಲಾಯಿತು".[೨]

೧. ಕಬ್ಬಿಣದ ಕೃಷಿ ಸಾಮಾನುಗಳನ್ನು ಮಾಡುವವರು ಘಿಸಾಡಿಗಳಾದರು.

೨. ಗೊಂದಳಿ ನುಡಿಸುವವರನ್ನು ಗೊಂದಲಿಗರೆಂದು ಕರೆದರು.

೩. ಸುಡುಗಾಡಿನಲ್ಲಿ ವಾಸವಿದ್ದು ಕಾವಲು ಕಾಯುತ್ತಿದ್ದವರನ್ನು ಸುಡುಗಾಡುಸಿದ್ಧರೆಂದು ಕರೆದರು.

೪. ಹಂದಿಗಳನ್ನು ಸಾಕುವವರನ್ನು ಹಂದಿಜೋಗಿಗಳೆಂದು ಕರೆದರು.

೫. ದುರುಗಮ್ಮ ಹಾಗೂ ಮಾರಮ್ಮದೇವಿಯನ್ನು ಬುಟ್ಟಿಯಲ್ಲಿ ಹಾಗೂ ಪೆಟ್ಟಿಗೆಯಲ್ಲಿ ಹೊತ್ತುಕೊಂಡು ಬುರ್ರಬುರ್ರ ವಾದ್ಯದೊಂದಿಗೆ ವೇಷ ಹಾಕಿ ಭಿಕ್ಷೆ ಬೇಡುತ್ತಿದ್ದವರನ್ನು ಸಿಂಧೋಳ್ಳರೆಂದು ಕರೆಯಲಾಯಿತು.

೬. ಎತ್ತುಗಳನ್ನು ಹಿಡಿದುಕೊಂಡು ಆಟವಾಡಿಸುತ್ತಿದ್ದವರು ಕೋಲೆಬಸವರೆಂದು ಕರೆಯಿಸಿಕೊಂಡರು.

೭. ತೊಗಲುಗೊಂಬೆ ಆಟವಾಡಿಸುವ ಅಲೆಮಾರಿ ಸಮುದಾಯವು ಗೊಂಬೆರಾಮರೆಂದು ಕರೆಸಿಯಿಕೊಂಡಿತು.

೮. ಹಗಲು ಹೊತ್ತಿನಲ್ಲಿ ವೇಷಗಳನ್ನು ಹಾಕಿಕೊಂಡು ಅಭಿನಯಿಸುತ್ತಿರುವುದನ್ನು ಕಂಡು ಹಗಲು ವೇಷಗಾರರು ಎಂದು ಕರೆದರು.

೯. ಹಗಲುವೇಷ ಪ್ರದರ್ಶಿಸುವ ಅದೇ ಸಮುದಾಯವು ಇನ್ನೊಂದು ವೃತ್ತಿ ಮಾಡುವುದರಿಂದ ಬುಡ್ಗ ಹಿಡಿದು ಹಾಡುವುದರಿಂದ ಬುಡ್ಗಜಂಗಮ ಎಂದು ಕರೆಸಿಕೊಂಡರು.

೧೦. ಬುರ್ರ ಕಥೆ ಹೇಳುವುದರಿಂದ ಅವರು ಬುರ್ರ ಕಥೆಯವರು ಎಂದು ಕರೆಯಿಸಿಕೊಂಡರು.

೧೧. ಬೊಂಬನ್ನು ಉಪಯೋಗಿಸಿ ಕಸರತ್ತುಗಳ ಹಾಗೂ ಪ್ರದರ್ಶನ ಮಾಡಿದ್ದಕ್ಕೆ ಅವರನ್ನು ಡೊಂಬರೆಂದು ಕರೆದರು.

೧೨. ಹಾವುಗಳನ್ನು ಆಡಿಸುವುದರ ಮೂಲಕ ಹೊಟ್ಟೆ ತುಂಬಿಕೊಳ್ಳುವ ಅಲೆಮಾರಿ ಸಮುದಾಯ ಹಾವಾಡಿಗರೆಂದು ಕರೆಸಿಯಿಕೊಂಡರು.

೧೩. ವಂಶಾವಳಿ ಹೇಳುವವರನ್ನು ಹೆಳವರೆಂದು ಕರೆದರು.

೧೪. ಕಬ್ಬಿಣದ ಆಯುಧಗಳನ್ನು ಹೊಳಪು ಬರುವಂತೆ ಮಾಡುತ್ತಿದ್ದವರನ್ನು ಸಿಕ್ಕಾಲಿಗರೆಂದು ಕರೆದರು.

೧೫. ಮೋಡಿ ಆಟವನ್ನು ಮಾಡುವವರನ್ನು ಮೋಡಿಕಾರರೆಂದು ಪರಿಗಣಿಸಿದರು.

೧೬. ಬೈಲಿನಲ್ಲಿ ಪತ್ತಾರಿಕೆ ಕೆಲಸ ಮಾಡುವವರನ್ನು ಬೈಲುಪತ್ತಾರರೆಂದು ಕರೆಯಲಾಯಿತು.

೧೭. ಶಿಳ್ಳೆಮೀನು ಹಿಡಿಯುತ್ತಿದ್ದವರಿಗೆ ಶಿಳ್ಳೆಕ್ಯಾತರೆಂದು ಕರೆಯಲಾಯಿತು.

ಹೀಗೆ ಹಲವಾರು ಸಮುದಾಯಗಳನ್ನು ಅವರ ದೈನಂದಿನ ಕಸಬುಗಳಿಂದ ಗುರುತಿಸುವಂತಾಗಿದೆ. ಇದರಿಂದ "ಕಸಬು ಬಿಟ್ಟು ಜಾತಿಯಿಲ್ಲ; ಜಾತಿ ಬಿಟ್ಟು ಕಸಬುಗಳು ಇಲ್ಲ" ಎಂಬಂತೆ ಎರಡೂ ಜೀವನದಲ್ಲಿ ಅವಶ್ಯಕವಾಗಿವೆ. ಆಧುನಿಕದ ಮುಖ್ಯವಾಹಿನಿಯತ್ತ ನಡೆಯಲು ಈ ಸಮುದಾಯಗಳು ಇಂದಿಗೂ ಆಗುತ್ತಿಲ್ಲದಿರುವುದು ಅವರ ದುರಂತವೆಂದೇ ಹೇಳಬಹುದು.

೪.೨. ಅಲೆಮಾರಿಗಳ ಕರಕುಶಲತೆ

"ಅಲೆಮಾರಿ ಸಮುದಾಯಗಳು ಕರಕುಶಲ ವೃತ್ತಿಗಳಾದ ಚಾಪೆ ತಯಾರಿಕೆ, ಕೌದಿ ತಯಾರಿಕೆ, ಭಿಕ್ಷಾಟನೆ ಪರಿಕರ, ವೇಷ ಪರಿಕರಗಳಾಗದ ಕಂಠಿಸರ, ಮುಖ ಅಲಂಕಾರ, ಪ್ರಾಣಿಪಕ್ಷಿ, ಸರ, ಜರಡಿ, ದಬ್ಬಳ"[೨] ಇತ್ಯಾದಿಗಳ ತಯಾರಿಕೆಯಲ್ಲಿ ಹೇಗೆ ಕೌಶಲ್ಯ ಅಳವಡಿಸಿಕೊಳ್ಳುತ್ತಾರೆಂದು ಈ ಕೆಳಗಿನಂತೆ ಕಾಣಬಹುದು.

ಹಚ್ಚೆ : ಹಚ್ಚೆ ಸಾಮಾಜಿಕ ಜೀವನದ ವಿಶಿಷ್ಟ ಪದ್ಧತಿಯಾಗಿದೆ. ಸಂಸ್ಕೃತಿಯ ಸಂಕೇತವಾಗಿ ಬೆಳೆದುಕೊಂಡು ಬಂದಿದೆ. ಹುಟ್ಟು ಮತ್ತು ಮರಣದ ಮಧ್ಯೆ ಬಂದು ಹೋಗುವ ಬದಲು ಸತ್ತಾಗ ನಮ್ಮ ಜೊತೆಯಲ್ಲಿಯೇ ಹಿಂದೆ ಬರುವ ಅಮೂಲ್ಯ ಆಸ್ತಿ ಎಂದರೆ 'ಹಚ್ಚೆ' ಎನ್ನಬಹುದು. ಆದುದರಿಂದ ಗ್ರಾಮೀಣ ಮಹಿಳೆಯರಿಗೆ ಹಚ್ಚೆ ಹಾಕುವ ಕಲಾವಿದರು ಬಂದರೆ ಎಲ್ಲಿಲ್ಲದ ಸಂತೋಷ. ದೇಹದ ಯಾವುದೇ ಭಾಗವಾದ ಹಣೆ, ಕೈ, ಕಾಲು, ಗಲ್ಲ, ಎದೆ, ತೊಡೆ, ಇತ್ಯಾದಿ ಅವರಿಗೆ ಎಲ್ಲಿ ಇಷ್ಟವಾಗುತ್ತದೆಯೋ ಅಲ್ಲಿ ತಮಗೆ ಬೇಕಾದವರ ಆಪ್ತರ ಹೆಸರು ಹಾಕಿಸುವುದುಂಟು. ಇವರು ಪತಿ-ಪತ್ನಿ, ಪ್ರಿಯತಮ, ಪ್ರೇಯಸಿ, ಆಂಜನೇಯ, ನಾಗರಹಾವು, ಗಣೇಶ ಹಾಗೂ ಹೂವುಗಳನ್ನು ಹಾಕಿಸಿಕೊಳ್ಳುತ್ತಾರೆ. ಹಚ್ಚೆ ಸ್ತ್ರೀ-ಪುರುಷರಿಬ್ಬರೂ ಮತ್ತು ಚಿಕ್ಕ ಮಕ್ಕಳು ಹಾಕಿಸಿ ಕೊಳ್ಳುವುದುಂಟು. ಹಚ್ಚೆ ಪರಿಕರಗಳಾದ ಅರಿಶಿಣ, ಔಡಲ ಬೀಜದ ಎಣ್ಣೆ, ಹಳದಿ ಮಿಶ್ರಿತ ಮಾಡಿದರೆ, ಮತ್ತೆ

ಕೆಲವರು ಬೇವಿನ ರಸ, ಎಲೆಗಳಿಂದ ತಯಾರಿಸುತ್ತಾರೆ. ೧೫ರಿಂದ ೩೫ ಸೂಜಿಯನ್ನು ಉಪಯೋಗಿಸಿ, ಯಾವ ಚಿತ್ರ ಮತ್ತು ಹೆಸರು ಬೇಕೋ ಅದನ್ನು ದೇಹದ ಮೇಲೆ ಅಕ್ಷರ ಚುಚ್ಚಿ ಚುಚ್ಚಿ ತೆಗೆಯುತ್ತಾರೆ. ಚುಚ್ಚುವಾಗ ನೋವಾಗುವುದರಿಂದ ನೋವು ಕಾಣದ ಹಾಗೆ ಜಾನಪದ ಹಾಡುಗಳನ್ನು ಹಾಡುತ್ತಾ ಹಾಕುತ್ತಾರೆ. ಹಚ್ಚೆಯು ಶಾಶ್ವತವಾಗಿ ದೇಹದ ಮೇಲೆ ಹಾಗೆಯೇ ಇರುತ್ತದೆ. ಹೀಗೆ ಹಚ್ಚೆ ತುಂಬಾ ಜಾಗೂರೂಕತೆಯಿಂದ ನೋವು ಮರೆಯುವಂತೆ ಹಾಡಿ, ಬೇಕಾದ ಚಿತ್ರವನ್ನು ಬಿಡಿಸಿ ಮನಸ್ಸನ್ನು ಉಲ್ಲಾಸಗೊಳಿಸುವ ಕೌಶಲ್ಯದ ತಂತ್ರಗಾರಿಕೆಯಾಗಿದೆ. ಈಗ ಆಧುನಿಕವಾಗಿ ಯಂತ್ರಗಳನ್ನು ಬಳಸಿ ಹಾಕಲಾಗುತ್ತದೆ.

ನಾರಿನ ಹಗ್ಗ : ರಕ್ಕಸಬಾಳೆ, ಕತ್ತಾಳೆ ಗರಿಗಳನ್ನು ಕತ್ತರಿಸಿ, ಹಳ್ಳ, ಕೆರೆ, ಊರಿನ ಅಕ್ಕಪಕ್ಕದಲ್ಲಿರುವ ನೀರಿನಲ್ಲಿ ಹಾಕಲಾಗುತ್ತದೆ. ೧೫ ದಿವಸ ಇಲ್ಲವೇ ಒಂದು ತಿಂಗಳ ನಂತರ ಹೊರಗಡೆ ತೆಗೆಯುತ್ತಾರೆ. ಅದು ಸಂಪೂರ್ಣವಾಗಿ ಮೆತ್ತಗಾಗಿ ಹಳದಿ ಬಣ್ಣ ಬಂದಿರುತ್ತದೆ. ಅದನ್ನು ಕಲ್ಲಿಗೆ ಒಡೆಯಲಾಗುವುದು. ಮತ್ತೆ ನೀರಿನಲ್ಲಿ ತೆಗೆದಾಗ ಬಿಳಿ ನಾರಾಗುತ್ತದೆ. ನಾರನ್ನು ತೆಗೆದುಕೊಂಡು ಉದ್ದನೆಯ ಒಂದೊಂದು ಪೆಂಡಿಗಳಾಗಿ ಮಾಡಿ ಹೊಸೆಯುತ್ತಾರೆ. ಒಂದು ಕಟ್ಟಿಗೆ ಸುತ್ತಿಕೊಂಡು ಹಗ್ಗ ಕಟ್ಟಿ ಮತ್ತೊಬ್ಬರ ಸಹಾಯದಿಂದ ಸಣ್ಣ ಕಟ್ಟಿಗೆಗೆ ಬಿಗಿಯಾಗಿ ಹಿಂದೆ ಹಿಡಿದುಕೊಂಡು ಒಂದರಲ್ಲಿ ಇನ್ನೊಂದನ್ನು ಸೇರಿಸುತ್ತಾ ಹಗ್ಗ ಮಾಡುತ್ತಾರೆ. ಇದಕ್ಕೆ ದನಗಳನ್ನು ಕಟ್ಟುವ ಹಗ್ಗವೆಂದು ಕರೆಯುತ್ತಾರೆ. ಇವಲ್ಲದೆ ಎತ್ತುಗಳ ಬಾಯಿಗೆ ಕಟ್ಟುವ ಚಿಕ್ಕ ಕುಕ್ಕೆ, ಮನೆಯಲ್ಲಿ ಹಾಲು ಮೊಸರು ಅಥವಾ ಆಹಾರವನ್ನು ಮೇಲಿಡಲು ತೂಗೂಯ್ಯಾಲೆ ಯಂತೆ ಇರಿಸಲು ನೆಲುವು ಮಾಡುತ್ತಾರೆ.

ಬಳ್ಳಿಯ ಸಿಂಬೆ: ದಾಗಡಿ ಹಾಗೂ ಹಾಲಿನ ಬಳ್ಳಿ ಬಳಸಿಕೊಂಡು, ಅದು ಹಸಿ ಇರುವಾಗಲೇ ಒಂದರ ಮೇಲೆ ಒಂದರಂತೆ ಬಳ್ಳಿ ಬರುವಂತೆ ಸಿಂಬೆಯಾಕಾರದಲ್ಲಿ ಸುರುಳಿ ಮಾಡುತ್ತಾರೆ. ಇದು ಬಾಡಿದ ಮೆಲೆ ಉಪಯೋಗಿಸಬಹುದು. ಇದನ್ನು ಮಣ್ಣಿನ ಪಾತ್ರೆಯ ಕೆಳಗಿಡಲು ಮತ್ತು ವಿವಿಧ ಸಾಮಾನುಗಳು ನೆಲದಲ್ಲಿ ಉರುಳಿ ಹೋಗದಂತೆ ಉಪಯೋಗಿಸುತ್ತಾರೆ. ಇವು ಇಂದು ಕಣ್ಮರೆಯಾಗುತ್ತಿವೆ. ಇವುಗಳ ಸ್ಥಳದಲ್ಲಿ ಸ್ಟೀಲ್ ಮತ್ತು ಪ್ಲಾಸ್ಟಿಕ್ ವಸ್ತುಗಳು ಸ್ಥಾನ ಪಡೆದಿವೆ.

ಇಂದಿನ ದಿನಗಳಲ್ಲಿ ಪ್ಲಾಸ್ಟಿಕ್ ದಾರ ಬಳಸಿಕೊಂಡು, ಸಣ್ಣ ಯಂತ್ರದ ಮೂಲಕ ಹಗ್ಗ ತಯಾರಿಸುತ್ತಾರೆ. ಪ್ಲಾಸ್ಟಿಕ್ ಚೀಲಗಳಿಂದ ನೂಲು ತೆಗೆದು ಹಗ್ಗ ತಯಾರಿಸುವುದುಂಟು.

ಚಾಪೆ ತಯಾರಿಕೆ: ಕಾಡುಗಳಲ್ಲಿ ಈಚಲ ರೆಂಬೆಗಳನ್ನು ಕತ್ತರಿಸಿಕೊಂಡು ಬಿಸಿಲಿನಲ್ಲಿ ಒಣಗಿಸುವುದುಂಟು. ಅದನ್ನ ಸೀಳಿ ಮುಳ್ಳುಗಳನ್ನು ಕತ್ತರಿಸಿ ನೀರಿನಲ್ಲಿ ಹಾಕುತ್ತಾರೆ. ಒಂದರಲ್ಲಿ ಇನ್ನೊಂದು ಗರಿಯನ್ನು ಪೋಣಿಸುತ್ತಾ, ಆಲಂಕಾರಿಕವಾಗಿ ಸುಮಾರು ೧೦ರಿಂದ ೧೫ರ ತನಕ ಉದ್ದನೆಯ ಪಟ್ಟಿ ಮಾಡಿ, ನಂತರ ಒಂದರ ಪಕ್ಕದಲ್ಲೊಂದು ಪಟ್ಟಿಯನ್ನು ಈಚಲ ಗರಿಯಿಂದ ಸೇರಿಸುತ್ತಾರೆ.

ಎರಡೂ ಕಡೆ ದಿಂಡನ್ನು ಕಟ್ಟಿ ಪೂರ್ಣಗೊಳಿಸುತ್ತಾರೆ. ಇಂತಹ ಕೆಲಸದಲ್ಲಿ ಸ್ತ್ರೀಯರದು ಪ್ರಮುಖ ಪಾತ್ರವಾಗಿದೆ. ಗಂಡಸರು ಇತರೇ ಕಸಬುಗಳನ್ನು ಮಾಡುವರು. ಚಾಪೆ ಮಾರಾಟದ ಸಂದರ್ಭದಲ್ಲಿಯೇ ತಾಳೆಗರಿಯಿಂದ ಮತ್ತು ತೆಂಗಿನ ಗರಿಯಿಂದ ಮಾಡಿದ ಪಿಪಿಯಿಂದ ಬೀದಿಯಲ್ಲಿ ನಿಂತು ಪೀ.. ಪೀ... ಎಂದು ಕೂಗಿ ಊದುವರು. ಮಕ್ಕಳೂ ಶಬ್ದವನ್ನು ಕೇಳುತ್ತಲೇ ಬಂದು ಹಣವನ್ನು ಇಲ್ಲವೇ ಆಹಾರವನ್ನು ನೀಡಿ ಪಡೆಯುತ್ತಾರೆ. ದೊಡ್ಡವರು ಚಾಪೆಯನ್ನು ಪಡೆಯುತ್ತಾರೆ. ಪ್ಲಾಸ್ಟಿಕ್ ಚಾಪೆಗಳು ಮಾರುಕಟ್ಟೆಗೆ ಬಂದಿರುವುದರಿಂದ ಅಲೆಮಾರಿಗಳು ಈ ಚಾಪೆ ತಯಾರಿಸುವುದನ್ನು ಕಡಿಮೆ ಮಾಡಿದ್ದಾರೆ. ಏಕೆಂದರೆ ಅವುಗಳನ್ನು ಬಳಸುವವರು ಕಡಿಮೆಯಾಗಿದ್ದಾರೆ.

ಕೌದಿ ಹೊಲಿಯುವುದು: ಅಲೆಮಾರಿಗಳು ತಂಗಿರುವ ಊರಲ್ಲಿ ತಿರುಗಾಡುತ್ತ "ಕೌದಿ ಹೊಲಿಯುವುದು ಇದೆಯೇನಮ್ಮ..." ಎಂದು ಮನೆಮನೆಯ ಬಾಗಿಲಲ್ಲಿ ನಿಂತು ಕೂಗುತ್ತಾರೆ. ಆ ಬೀದಿಯ ಆಸಕ್ತರು, ಸ್ತ್ರೀಯರು ತಮ್ಮ ಹಳೆಯ ಸೀರೆಯನ್ನು ಕೊಟ್ಟು ಕೌದಿ ಹೊಲೆಯಲು ಹೇಳುತ್ತಾರೆ. ಹಳೆಯ ಸೀರೆಯನ್ನು ತೆಗೆದುಕೊಂಡು ಸೂಜಿಯಲ್ಲಿ ದಪ್ಪವಾದ ದಾರವನ್ನು ಪೋಣಿಸಿ, ಒಂದರ ಪಕ್ಕದಲ್ಲೊಂದನ್ನು ಹೆಣಿಗೆ ಹಾಕುತ್ತ, ಹರಿದ ಸೀರೆಯಲ್ಲಿ ಬಣ್ಣಬಣ್ಣದ ಬಟ್ಟೆಗಳಿಂದ ತೇಪೆಗಳನ್ನು ಹಚ್ಚುತ್ತ, ಅಲಂಕಾರವಾಗಿ ಕಾಣುವಂತೆ ಮಾಡುತ್ತಾರೆ. ಹೆಣೆಯುತ್ತ ಒಂದು ಮತ್ತು ಎರಡು ಇಂಚುಗಳ ಅಂತರದಲ್ಲಿ ದಾರದಿಂದ ಹೆಣಿಕೆಯನ್ನು ಹಾಕುತ್ತಾರೆ. ಕೌದಿಯು ಚಳಿಗಾಲದಲ್ಲಿ ಬೆಚ್ಚಗೆ ಮತ್ತು ಬಿಸಿಲು ಕಾಲದಲ್ಲಿ ತಂಪು ನೀಡುವ ಮೆತ್ತನೆಯ ಹಾಸಿಗೆಯ ಹೊದಿಕೆಯಾಗಿದೆ. ಭಿಕ್ಷೆ ಬೇಡಲು ಜೋಳಿಗೆ ಅವಶ್ಯಕವಾಗಿದೆ. ಇದನ್ನು ಸ್ವತಃ ತಾವೇ ತಯಾರಿಸಿಕೊಳ್ಳುತ್ತಾರೆ. ಜೋಳಿಗೆ ಯಲ್ಲಿ ವಿವಿಧ ಬಗೆಗಳನ್ನು ಕಾಣಬಹುದು. ದೇವರ ಜೋಳಿಗೆ, ದೊಡ್ಡ ಜೋಳಿಗೆ, ಭಿಕ್ಷೆ ಜೋಳಿಗೆ ಗಳು, ಜೋಳಿಗೆ ತಯಾರಿಸಲು ಹಳೆಯದಾದ ಬಟ್ಟೆ ಬಳಸಿ, ಸೂಜಿ ದಾರದಿಂದ ನಾಲ್ಕು ಮೂಲೆಯಲ್ಲಿ ಚೌಕಾಕಾರವಾಗಿ ಹೊಲಿಯುತ್ತಾರೆ. ಇದು ನೋಡಲು ಸುಂದರವಾಗಿ ಕಾಣಿಸುವುದರ ಜೊತೆಗೆ ಭದ್ರವಾಗಿ ಇರುತ್ತದೆ.

ಅಲೆಮಾರಿ ವೇಷಧಾರಿ ವಸ್ತುಗಳ ತಯಾರಿಕೆ: ವಿವಿಧ ಬಗೆಯ ಕಥೆ ಪರಧಿಗಳನ್ನೊಳಗೊಂಡ ವೇಷಗಳನ್ನು ಹಾಕುವ ಅಲೆಮಾರಿಗಳು ತಮ್ಮ ವೇಷ-ಭೂಷಣಗಳಿಗೆ ಬೇಕಾಗುವ ಮತ್ತು ಉಪಯೋಗಿ ಸುವ ವಸ್ತುಗಳನ್ನು ತಯಾರಿಸಿಕೊಳ್ಳುವುದುಂಟು. ಕಿರೀಟ ತಯಾರಿಸಲು ಹಗುರ ಮತ್ತು ತೆಳುವಾದ ತಗಡನ್ನು ಆಕರ್ಷಕವಾಗಿ ಕತ್ತರಿಸಿ ದುಂಡಾಗಿ ಮಾಡಿ ಬಂಗಾರ ಮಿಶ್ರಿತ ಬಣ್ಣ ಲೇಪನ ಮಾಡಿ ತಯಾರಿಸುವುದುಂಟು. ನೋಡಲು ತುಂಬಾ ಆಕರ್ಷಣೆಯಿಂದ ಕೂಡಿರುತ್ತದೆ.

ಗದೆ: ತೆಳುವಾದ ತಗಡಿನಿಂದ ದುಂಡಾಗಿ ಕತ್ತರಿಸಿಕೊಂಡು, ಒಂದು ಕಟ್ಟಿಗೆಗೆ ಸುತ್ತಲೂ ಮೊಳೆ ಹೊಡೆಯಲಾಗುವುದು. ತಗಡು ಅಂಟಿಸಿ ಅದಕ್ಕೂ ಬಂಗಾರದ ಬಣ್ಣ ಲೇಪಿಸುತ್ತಾರೆ.

ಕಂಠಿಸರ: ಬಣ್ಣ ಬಣ್ಣದ ಮಣಿಗಳನ್ನು ತಂದು ಒಂದು ದಾರದಲ್ಲಿ ಪೋಣಿಸಿ ಅಲಂಕೃತವಾಗಿ ತಯಾರಿಸಿಕೊಳ್ಳುತ್ತಾರೆ. ಇದರಲ್ಲಿ ತೋಳುಬಂದಿ, ಉಡುಪುಗಳು, ಭಿಕ್ಷೆಯಲ್ಲಿ ಕೊಟ್ಟಿರುವ ಬಟ್ಟೆಗಳಿಗೆ ವಿಶೇಷ ಆಕಾರವನ್ನು ಕೊಟ್ಟು ಸಿದ್ಧಪಡಿಸುತ್ತಾರೆ. ಕಾಲಿಗೆ ಹಾಕಿಕೊಳ್ಳುವ ಗೆಜ್ಜೆಗಳನ್ನು ತಾವೇ ಸೃಷ್ಟಿಸುವುದುಂಟು.

ಬಣ್ಣವನ್ನು ಬಣ್ಣದ ಕಲ್ಲುಗಳಿಂದ, ಇದ್ದಿಲು ಮತ್ತು ಮಸಿಯಿಂದ ಅಲಂಕಾರ ಮಾಡಿಕೊಳ್ಳುತ್ತಿದ್ದಾರೆ. ಇಂದಿನ ಕಿರಾಣಿ ಮಳಿಗೆಗಲ್ಲಿ ವಿವಿಧ ರೀತಿಯ ಬಣ್ಣಗಳು ದೊರೆಯುವುದರಿಂದ ಮುಖದ ಅಲಂಕಾರಕ್ಕಾಗಿ ತಮ್ಮದೇ ಶೈಲಿಯಲ್ಲಿ ಮಿಶ್ರಣ ಮಾಡಿ ಲೇಪಿಸಿಕೊಳ್ಳುವರು.

ಪ್ರಾಣಿ-ಪಕ್ಷಿ: ರೆಕ್ಕೆ-ಪುಕ್ಕಗಳಿಂದ ಹಾಗೂ ಕೂದಲುಗಳಿಂದ ಬೇಕಾದ ರೀತಿಯಲ್ಲಿ ಆಲಂಕಾರಿಕ ವಸ್ತುಗಳನ್ನು ತಯಾರಿಸುವುದುಂಟು. ಕುದುರೆಯ ಕೂದಲಿನಿಂದ ಮೀಸೆ ಹಾಗೂ ಗಡ್ಡಗಳು ಮಾಡಿ ಕೊಳ್ಳುತ್ತಾರೆ. ಪಕ್ಷಿಗಳ ಪುಕ್ಕಗಳಿಂದ ತಲೆಯನ್ನು ಶೃಂಗಾರವಾಗಿ ಕಾಣಲು ಬಳಸಿಕೊಳ್ಳುತ್ತಾರೆ.

ಸ್ಫಟಿಕದ ಸರ: ಅಲೆಮಾರಿಗಳು ಅಂಗಡಿಯಿಂದ ಮಣಿಗಳನ್ನು ತಂದು, ತಮ್ಮ ವೇಷಗಳಿಗೆ ತಕ್ಕಂತೆ ಆಲಂಕಾರಿಕವಾಗಿ ಕಾಣಲು ತಮ್ಮದೇ ಕರಕುಶಲತೆಯಲ್ಲಿ ಅವುಗಳನ್ನು ಸಿದ್ಧಪಡಿಸುವರು.

ಜರಡಿ ಮತ್ತು ದಬ್ಬಳ ತಯಾರಿಕೆ: ತೆಳುವಾದ ತಗಡನ್ನು ತೆಗೆದುಕೊಂಡು, ದಬ್ಬಳದಿಂದ ಸುತ್ತಲೂ ರಂಧ್ರ ಮಾಡುತ್ತಾರೆ. ಅದರ ಸುತ್ತ ಮೇಲ್ಮುಖವಾಗಿ ಗಟ್ಟಿ ತಗಡನ್ನು ಕಟ್ಟಿ ಜರಡಿ ಮಾಡುತ್ತಾರೆ. ಇದು ದವಸ ಮತ್ತು ಧಾನ್ಯಗಳನ್ನು ಸ್ವಚ್ಛಗೊಳಿಸಲು ಉಪಯೋಗಿಸುವುದುಂಟು. ಇದನ್ನು ಜೋಗೇರರು ಮಾಡುತ್ತಾರೆ.

ದಬ್ಬಳ: ಕಬ್ಬಿಣಕ್ಕೆ ಬೆಂಕಿಯ ಶಾಖ ಕೊಟ್ಟು ಆಕಾರಕ್ಕೆ ಬೇಕಾದಂತೆ ಇಕ್ಕಳ ಮತ್ತು ಕತ್ತರಿ, ಸುತ್ತಿಗೆಯ ಸಹಾಯದಿಂದ ದಬ್ಬಳ ತಯಾರಿಸುವರು.

ಈಳಿಗೆ ಮಣೆ: ಸ್ವಲ್ಪ ಗಟ್ಟಿಯಾದ ಮತ್ತು ಮಧ್ಯಮ ಗಾತ್ರದ ತಗಡನ್ನು ಕಮಾನಿನ ಅರ್ಧ ಭಾಗದಷ್ಟು ಕತ್ತರಿಸಿಕೊಳ್ಳುತ್ತಾರೆ. ಬೆಂಕಿಯಲ್ಲಿ ಕಾಯಿಸಿ ಚೂಪಾಗಿರುವ ಕಟ್ಟಿಗೆಗೆ ಅಂಟಿಕೊಳ್ಳುವಂತೆ ಮೊಳೆ ಹೊಡೆಯುತ್ತಾರೆ. ಆಗ ಈಳಿಗೆ ತಯಾರಾಗುತ್ತದೆ. ಇದನ್ನು ಗಡ್ಡೆ-ಗೆಣಸು-ಕಾಯಿ, ತರಕಾರಿಗಳನ್ನು ಕತ್ತರಿಸಲು ಉಪಯೋಗಿಸುವುದುಂಟು. ಇವುಗಳನ್ನು ಸಿಕ್ಲಿಗಾರು ಮಾಡುತ್ತಾರೆ.

ಕುಡುಗೋಲು: ಕಬ್ಬಿಣ ಇಲ್ಲವೇ ಉಕ್ಕು ಉಪಯೋಗಿಸಿ ಬೆಂಕಿಯಲ್ಲಿ ಚೆನ್ನಾಗಿ ಕಾಯಿಸಿ, ಹರಿತ ಬರುವ ಹಾಗೆ ಮಾಡಿ ಅದನ್ನು ಹಿಡಿದುಕೊಳ್ಳಲು ದುಂಡನೆಯ ಕಟ್ಟಿಗೆಯ ಹಿಡಿಕೆಯ ಮೂಲಕ ಸೇರಿಸುತ್ತಾರೆ. ಇದು ಮುಂದೆ ಸ್ವಲ್ಪ ಬಾಗಿಕೊಂಡು ಉದ್ದವಾಗಿರುತ್ತದೆ. ವಿವಿಧ ಬೆಳೆ ಮತ್ತು ಕಟ್ಟಿಗೆ ರಂಬೆಗಳನ್ನು ಕತ್ತರಿಸಲು ಇದನ್ನು ಉಪಯೋಗಿಸಬಹುದು. ಇವುಗಳನ್ನು ಘಿಸಾಡಿಗಳು ತಯಾರಿಸುತ್ತಾರೆ.

ಬಾರುಕೋಲು: ವ್ಯವಸಾಯದ ಸಮಯದಲ್ಲಿ ಎತ್ತುಗಳು ಜೋರಾಗಿ ಎಳೆಯಲು ಅದಕ್ಕೆ ಚಾಲನೆ ಬೇಕಾಗುತ್ತದೆ. ಆ ಚಾಲನೆ ಸಿಗುವುದು ಬಾರುಕೋಲಿನಿಂದ ಮಾತ್ರ, ಪ್ಲಾಸ್ಟಿಕ್ ಚರ್ಮವನ್ನು ಕತ್ತರಿಸಿಕೊಂಡು, ಅದರ ಎಳೆ ಹೆಣೆದುಕೊಂಡು ಬಿದಿರಿನ ಕೋಲಿಗೆ ರಂಧ್ರ ಮಾಡಿ ಪೋಣಿಸುತ್ತಾರೆ.

ಚಿಕ್ಕಬಾಯಿಕುಕ್ಕೆ: ಎತ್ತುಗಳು ಹೊಲ ಉಳುವ ಸಂದರ್ಭದಲ್ಲಿ ಪೈರುಗಳು ಇರುವುದರಿಂದ ಆ ಪೈರನ್ನು ತಿನ್ನಲು ಹಾತೊರೆಯುತ್ತವೆ. ಅದನ್ನು ತಪ್ಪಿಸಲೆಂದು ಬಾಯಿಕುಕ್ಕೆ ಹಾಕುವುದುಂಟು. ಬಾಯಿಗೆ ಅಡ್ಡವಾಗಿ ಪ್ಲಾಸ್ಟಿಕ್ ಹಗ್ಗ ಇಲ್ಲವೇ ದಾಗಡಿ ಬಳ್ಳಿಗಳಿಂದ ಬಾಯಿಕುಕ್ಕೆ ತಯಾರಿಸುತ್ತಾರೆ.

ಗುದ್ದಲಿ ಮತ್ತು ಹಾರೆ, ಸಲಿಕೆ: ಗುದ್ದಲಿ ಮತ್ತು ಹಾರೆಗಳನ್ನು ಕಬ್ಬಿಣ ಮತ್ತು ಉಕ್ಕನ್ನು ಬಳಸಿ ಇವು ವ್ಯವಸಾಯಕ್ಕೆ ಬೇಕಾಗುವ ಉಪಕರಣಗಳು. ಸಲಿಕೆಗೆ ಗಟ್ಟಿಯಾದ ತಗಡನ್ನು ಅಗಲ ಮತ್ತು ಚೂಪಾಗಿ ಮಾಡಿ ಸಲಿಕೆಯ ಕಟ್ಟಿನೊಳಗೆ ಕಟ್ಟಿಗೆಯನ್ನು ಸೇರಿಸುತ್ತಾರೆ. ಇದರಿಂದ ಮಣ್ಣು ತುಂಬಲು ಬಳಸುತ್ತಾರೆ. ಹಾರೆ ಮತ್ತು ಗುದ್ದಲಿಯನ್ನು ಕಲ್ಲು ಕೀಳಲು, ಮಣ್ಣು ಅಗೆಯಲು ಉಪಯೋಗಿಸುವರು. ಇವುಗಳನ್ನು ಸಿಕ್ಲಿಗರು. ಮಾಡುತ್ತಾರೆ.

ಕತ್ತಿ - ಈಟಿ: ಇವು ಆತ್ಮರಕ್ಷಣೆಗೆ ಬೇಕಾಗುವ ಆಯುಧಗಳಾಗಿವೆ. ಇವುಗಳನ್ನು ಕಬ್ಬಿಣ ಇಲ್ಲವೇ ಉಕ್ಕನ್ನು ಉಪಯೋಗಿಸಿಕೊಂಡು ವಿವಿಧ ಆಕಾರಗಳಲ್ಲಿ ಮಾಡುವುದುಂಟು.

೪.೩. ಕಸಬುಗಳು ಮತ್ತು ಪ್ರದರ್ಶನಕಲೆ

"ಯಾವ ಕುರುಮಾಮರು ಕಾಣಿಕೆಯನ್ನು ಕೈಯಲ್ಲಿ ಮುಟ್ಟಿಪಡೆಯುವುದಿಲ್ಲ. ಇವರು ಎರಡೂ ಕಣ್ಣುಗಳನ್ನು ಮುಚ್ಚಿಕೊಂಡು ಏನನ್ನೋ ಧ್ಯಾನಿಸುವವರಂತೆ ಏಕನಾದದ ತಂತಿಯನ್ನು ಮೀಟುತ್ತಾ ಶ್ರೀರಾಮನಾಮದಿಂದ ಹಾಡಲಾರಂಭಿಸುತ್ತಾರೆ. ವ್ಯಕ್ತಿಯ ಬಲಗೈ ಹಿಡಿದುಕೊಂಡು ಹಸ್ತರೇಖೆ ನೋಡಿ ಚಿಟಿಕೆ ಭಾರಿಸುತ್ತಾ ಏಕನಾದ ಮೀಟುತ್ತಾರೆ. ಇದರಿಂದ ಹೊಮ್ಮುವ ಟೊಂಯ್ ಟೊಂಯ್ ನಾದಕ್ಕೆ ತಕ್ಕಂತೆ ಲಯಬದ್ಧವಾಗಿ ಮಾತಾಡುತ್ತಾರೆ".[೪] ವಿಶೇಷವೆಂದರೆ ಕುರುಮಾಮ ತಮ್ಮ ಬಳಿ ಭವಿಷ್ಯ ಕೇಳಲು ಬಂದ ವ್ಯಕ್ತಿಯಿಂದ ತಿಳಿದುಕೊಂಡ ಮಾಹಿತಿಗಳಿಂದಲೇ ಮನುಷ್ಯನ ಬದುಕಿನಲ್ಲಿ ತೀರ ಸಹಜವಾಗಿ ಸಂಭವಿಸುವ ಘಟನೆಗಳನ್ನೇ ಆಕರ್ಷಕವಾಗಿ ಹೇಳುತ್ತಾ ಹೋಗುವುದರಿಂದ ಕುರುಮಾಮರ ಮಾತುಗಳು ತಮ್ಮ ಬದುಕಿನಲ್ಲಿ ನಡೆದಿರುವ ಘಟನೆಗಳು ಹೆಚ್ಚು ಕಡಿಮೆ ಹೋಲುವಂತಿರುವುದರಿಂದ ವ್ಯಕ್ತಿಗೆ ಕುರುಮಾಮರಲ್ಲಿ ನಂಬಿಕೆ ಉಂಟಾಗುತ್ತದೆ.

ರಾಮನಂದಣ ರಾಮನಂದಂ ವಸ್ತಾನನ್ನ ಗುರುನಾದನ್ನ
ಕೊಂಡದೇವತೆ ಜಗನ್ನಾಥುಡು ವೆಕಡುಂಡಾವು
ಮಂಜುನಾತುಡು ವೆಕಡುಂಡಾವು
ಶ್ರೀ ಶೈಲಡ ವೆಗಡುಂಡಾವು ರಾಮನಂದುಡ ವೆಕಡುಂಡಾವು
ಹೆಸರು ಯಾವುದು? ಬಾಬು ನಿನ್ನದು

ಎಂದು ಹೇಳಿದಾಗ ವ್ಯಕ್ತಿ ಹೆಸರು ಹೇಳುತ್ತಾನೆ, ನಂತರ ಕುರುಮಾಮನ ಮಾತುಗಳು ಮುಂದು ವರೆಯುತ್ತವೆ.

ಹುಟ್ಟಿದ ಗಳಿಗೆ ರೈಟುಂ ಉಂಟು
ಕಟ್ಟುವ ಹೆಸರು ಕರೆಟ್ಟು ಉಂಟು
ಬಾಬು ನಿಂದು,
ಹುಟ್ಟಿದ ನಿಂದು ದೇವುಗಣಮು
ಬೆಳದದ್ದು ನಿಂದು ರಾಹು ಗಳಿಗಿ
ಬಾಬು ನಿಂದು
ಹುಟ್ಟಿದೆ ಒಂದು ದೊಡ್ಡ ಸಂಸಾರ
ಬಾಬು ನಿಂದು
ಮಲ್ಲಿಕಾರ್ಜನ ಯಾಡುಂಡಾವು

ಕರ್ನಾಟಕದಲ್ಲಿ ತುಂಬಾ ಆಕರ್ಷಕವಾಗಿ ಭವಿಷ್ಯ ಹೇಳುವ ಅತ್ಯಂತ ಜನಪ್ರಿಯ ಜನಾಂಗಗಳಲ್ಲಿ ಕುರುಮಾಮರಿಗೆ ಆದ್ಯತೆ ಸಲ್ಲುತ್ತದೆ. ಮೂಲತಃ ತೆಲಗಿನವರಾದರೂ ಕುರುಮಾಮರು ಕನ್ನಡ ನಾಡಿಗೆ ಬಂದು ಶತಮಾನಗಳೇ ಕಳೆದುಹೋಗಿವೆ. ಇಲ್ಲಿಯ ಭಾಷೆ, ಸಂಸ್ಕೃತಿ, ಪರಿಸರದಲ್ಲಿ ಅವರೂ ಒಂದಾಗಿ ಹೋಗಿದ್ದಾರೆ. ಹಾಗಾಗಿ ಕುರುಮಾಮರ ವೃತ್ತಿಯ ಪ್ರಧಾನ ನೆಲೆಯಾದ ಮಾತುಗಾರಿಕೆ ಕನ್ನಡದ ನುಡಿಗಟ್ಟುಗಳಲ್ಲೇ ನಡೆಯುತ್ತದೆ. ಅಲೆಮಾರಿಗಳಾಗಿ ಅಲ್ಲಲ್ಲಿ ತಾತ್ಕಾಲಿಕವಾಗಿ ವಾಸ ಮಾಡುವ ಕುರುಮಾಮರು ತಾವು ವಾಸ ಮಾಡುವ ಪ್ರದೇಶದ ಭಾಷೆ, ನುಡಿಗಟ್ಟುಗಳನ್ನು ಚೆನ್ನಾಗಿ ಕಲಿತಿರುತ್ತಾರೆ. ಆ ಪ್ರದೇಶದ ಜನರಿಗೆ ಅರ್ಥವಾಗುವಂತಹ ಭಾಷೆಯ ಏರಿಳಿತಗಳನ್ನೂ, ಪಲುಕುಗಳನ್ನು ಬಳಸುತ್ತಾರೆ. ಹೀಗಾಗಿ ಕುರುಮಾಮರ ಮಾತುಗಳು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಭಿನ್ನವಾಗುತ್ತಾ ಹೋಗುತ್ತವೆ. ಮಾತುಗಳ ನಡುವೆ ತೆಲುಗು ಪ್ರತ್ಯಯಗಳು, ಪದಗಳು ನುಸುಳುವುದುಂಟು. ಇಷ್ಟಾದರೂ ಕುರುಮಾಮರ ಮನೆಮಾತು ತೆಲುಗು ಭಾಷೆಯೇ. ಬಹುಪಾಲು ಕುರುಮಾಮರು ತೆಲುಗು ಮಿಶ್ರಿತ ಕನ್ನಡದಲ್ಲೇ ಶಾಸ್ತ್ರ ಹೇಳುತ್ತಾರೆ. ಇದು ಇವರ ವೈಶಿಷ್ಟ್ಯ ಕೂಡ. ಆದರೆ ಎಲ್ಲೂ ತೆಲುಗು ಬಾರದ ಕನ್ನಡಿಗರಿಗೆ ಸಂವಹನದ ತೊಂದರೆಯಾಗದಂತೆ ತೆಲುಗು ಭಾಷೆಯನ್ನೂ ಕನ್ನಡಕ್ಕೆ ಅವರು ಅಳವಡಿಸುವ ರೀತಿ ವಿಶಿಷ್ಟವಾದುದು.

"ಕುರುಮಾಮರು ಕೇವಲ ಭವಿಷ್ಯಕಾರರು ಮಾತ್ರವಲ್ಲ ವೈದ್ಯರೂ ಆಗಿರುವುದುಂಟು. ಇವರಲ್ಲಿ ಸದಾ ಒಂದು ನಾಲ್ಕು ಮೂಲೆಯ ಕಾವಿಬಟ್ಟೆಯ ಚೀಲವಿರುತ್ತದೆ. ಇದನ್ನು 'ಸಂಚಿ' ಎಂದು ಕರೆಯಲಾಗುತ್ತದೆ. ಭವಿಷ್ಯವಾಚನಕ್ಕೆ ಸಹಾಯಕವಾಗುವ ಯಕ್ಷಿಭಜನ್ ಎಂಬ ಸಚಿತ್ರ ಪುಸ್ತಕ, ಕವಡೆ, ಚಿಂತಾಮಣಿ, ಅರಪೆಟ್ಟಿಗೆ, ಬಳೆ, ನವಿಲುಗರಿ, ಕರಿಬಂಟನಬಳ್ಳಿ(ಇದನ್ನು ಮಂತ್ರದ ಅಥವಾ

ಮೋಡಿಯ ಬಳ್ಳಿ ಎಂದೂ ಕರೆಯುತ್ತಾರೆ) ತಾಯತ, ತಗಡು, ಕಬ್ಬಿಣದ ಕಂಠ ಇತ್ಯಾದಿ ಸಾಮಗ್ರಿಗಳು ಅದರಲ್ಲಿ ಇರುತ್ತವೆ. ದುಂಡಾಗಿ ಸುತ್ತಿದ ಎಕ್ಕದ ಬಿಳಿಬೇರು, ಕರಡಿ ಕಾಲಿನ ಪಂಜ, ವೈವದನಿಕ, ತಮಸಖಿ ಜಡಮೂಲಕಿ ಮುಂತಾದ ಅಪರೂಪದ ಗಿಡಮೂಲಿಕೆಗಳು ಇರುತ್ತವೆ. ಮಕ್ಕಳ ಬಾಲಗ್ರಹ, ನೆಲಗ್ರಹ ಭೀತಿ, ಹಲ್ಲು ಕಡಿಯುವಿಕೆ ಮುಂತಾದವುಗಳನ್ನು ಇವುಗಳ ಸಹಾಯದಿಂದ ನಿವಾರಿಸುತ್ತಾರೆ. ಗಿಡಮೂಲಿಕೆಗಳ ಜೊತೆಗೆ ಭಂಗಿ ಸೊಪ್ಪಿನ ಚಿಲುಮೆ, ಅಡಿಕೆ ಚೀಲ, ಬಾಚಣಿಕೆ ಇತ್ಯಾದಿ ವಸ್ತುಗಳು ಸಹ ಸಂಚಿಯಲ್ಲಿ ಸೇರಿಕೊಂಡಿರುತ್ತವೆ. ಗುಡ್ಡಗಾಡುವಾಸಿಗಳಾಗಿದ್ದ ಇವರ ಪೂರ್ವಜರು ಸ್ವತಃ ವೈದ್ಯರಾಗಿದ್ದುಕೊಂಡು ಪ್ರಾಣಾಂತಿಕ ಗಳಿಗೆಗಳಲ್ಲಿ ಚಿಕಿತ್ಸೆ ಮಾಡಿಕೊಳ್ಳಬೇಕಾಗುತ್ತಿದುದ್ದರಿಂದ ಈ ಜನಾಂಗದ ವೈದ್ಯ ತೀರಾ ಪ್ರಾಚೀನವಾದುದು ಎಂದು ತಿಳಿಯಬಹುದಾಗಿದೆ. ತೀರಾ ವಯಸ್ಸಾದ ಕೊಂಡಮಾಮ ಹೆಂಗಸರಲ್ಲಿ ಕೆಲವರು ಗರ್ಭಚವಿ, ಗರ್ಭಶೂಲೆ, ಕಿವಿಸೋರುವುದು, ದೃಷ್ಟಿಕೋನ, ವಾಂತಿ ಮುಂತಾದ ರೋಗಗಳಿಗೆ ಔಷಧಿ ಮಾಡುತ್ತಾರೆ. ಕೊಂಡಮಾಮಗಳು ಏಕನಾದದ ತಂತಿ ಮೀಟುತ್ತಾ ಮನೆಯಿಂದ ಮನೆಗೆ ಭಿಕ್ಷಾಟನೆ ಮಾಡುವಾಗ

ಈ ಔಷಧಿ ರಾಮಬಾಣ ಎಂದು ಹೇಳುತ್ತ ತಮ್ಮ ಜೀವನಕ್ಕೆ ಒಂದು ನೆಲೆಯನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿರುವುದಾಗಿ ಗೋಪಾಲ ಎಂಬ ಕುರುಮಾಮ ಯುವಕನ ಅಭಿಪ್ರಾಯವಾಗಿದೆ.

ಕೋಲೆಬಸವ ವೃತ್ತಿ: ಈ ಕವಲೆತ್ತಿನ ಆಟದಲ್ಲಿ ಎರಡು ಬಗೆಗಳಿವೆ. ಒಂಟೆತ್ತು ಆಡಿಸುವುದು ಒಂದನೆಯ ಬಗೆಯಾದರೆ, ಎರಡು ಅಥವಾ ಮೂರು ಎತ್ತುಗಳು ಮತ್ತು ಒಂದು ಆಕಳನ್ನು ತೆಗೆದುಕೊಂಡು ಆಡಿಸುವ ಆಟ ಮತ್ತೊಂದು ಬಗೆಯದು. ಒಂಟೆತ್ತಿನ ಆಟದಲ್ಲಿ ಒಬ್ಬ ವ್ಯಕ್ತಿ ಮನೆ ಮನೆಗೆ ಹೋಗಿ ಭಿಕ್ಷೆ ಎತ್ತುತ್ತಾನೆ. ಎರಡನೆಯ ಬಗೆಯ ಆಟ ಬಯಲು ಜಾಗದಲ್ಲಿ ನಡೆಯುತ್ತದೆ.

ಕವಲೆತ್ತಿನಾಟದವರು ಜಾನುವಾರುಗಳಿಗೆ ಅಲಂಕಾರ ಮಾಡಿರುತ್ತಾರೆ. ಬಸವನ ಕೊಂಬುಗಳು ಗಿಡ್ಡ ಇದ್ದರೂ ಅದಕ್ಕೆ ಬಟ್ಟೆಯಿಂದ ಅಣಸು ಹಾಕಿ ಛತ್ರಿಯ ಕಡ್ಡಿಯಿಂದ ಉದ್ದ ಮಾಡಿ ಕಿಲಾರಿ ಹೋರಿಯ ಕೋಡುಗಳಂತೆ ಕಾಣುವ ಹಾಗೆ ಸಿಂಗರಿಸುತ್ತಾರೆ. ಕೋಡುಗಳಿಗೆ ವಿವಿಧ ಬಣ್ಣಗಳ ಬಟ್ಟೆಯಿಂದ ಸುತ್ತಿ ತುದಿಗೆ ಕುಚ್ಚನ್ನು ಕಟ್ಟಿರುತ್ತಾರೆ. ಹಣೆಯ ಮೇಲೆ ತಿರುಪತಿಯಿಂದ ತಂದಿರುವ ಅಂಗೈ ಅಗಲದ ರಾಮ ಇಲ್ಲವೇ ಆಂಜನೇಯ ಮುದ್ರೆ ಇರುವ ಹಿತ್ತಾಳೆಯ ದಪ್ಪನೆಯ ತಗಡು ಕೊರಳಲ್ಲಿ ತಗಲಿಸಿರುತ್ತಾರೆ. ಕೊರಳಲ್ಲಿ ಹುರಿಗೆಜ್ಜೆ ಸರ, ಗಂಟೆ, ಕಾಲಲ್ಲಿ ಕಡಗ, ಗಗ್ಗರಿ ಮತ್ತು ಗೆಜ್ಜೆಸರ ಕಟ್ಟಿರುತ್ತಾರೆ. ಬಸವನ ಹಣೆ ದೊಡ್ಡದಾಗಿ ಕಾಣುವಂತೆ ಕರಡಿ ಚರ್ಮದಿಂದ ಸುತ್ತಿ ಅದರ ಮೇಲೆ ಬಟ್ಟೆ ಸುತ್ತಿರುತ್ತಾರೆ. ಬೆನ್ನ ಮೇಲಿಂದ ಬಣ್ಣ ಬಣ್ಣಗಳ ಬಟ್ಟೆಗಳ ಮತ್ತು ಎರಡು ಬದಿಗೆ ಕಂಟ್ಲೆ(ಜೋಳಿಗೆ) ಇಳಿಬಿಟ್ಟಿರುತ್ತಾರೆ. ಸೀತಮ್ಮನ ಹಣೆಗೆ ಕುಂಕುಮವಿರಿಸಿ ಬೆನ್ನ ಮೇಲೆ ಬಣ್ಣದ ಸೀರೆಗಳನ್ನು ಹೊದಿಸಿ ನವವಧುವಿನಂತೆ ಸಿಂಗರಿಸುತ್ತಾರೆ. ವಿಶೇಷ ಅಲಂಕಾರಗಳಿಂದ ವಂಚಿತವಾದ ಲಕ್ಷ್ಮಣನ ಬೆನ್ನ ಮೇಲೆ ಒಂದೆರಡು ಬಟ್ಟೆಗಳನ್ನು ಹೊದಿಸುತ್ತಾರೆ.

ಒಂಟೆತ್ತಿನ ಆಟದಲ್ಲಿ ಒಬ್ಬನೇ ಗೊಲ್ಲನು ಸಿಂಗರಿಸಿದ ಹೋರಿಯನ್ನು ಓಲಗದೊಡನೆ ಮನೆ ಮನೆಯ ಬಾಗಿಲ ಮುಂದೆ ತಂದು ಆಟವಾಡಿಸಿ ಭಿಕ್ಷೆ ಎತ್ತುತ್ತಾನೆ. ಈತ ಶಾಸ್ತ್ರ ಹೇಳುವ ಅಭ್ಯಾಸ ಮಾಡಿಕೊಂಡಿರುತ್ತಾನೆ. ಜನರಿಗೆ ಒಳ್ಳೆಯದನ್ನು ಹೇಳುತ್ತಾನೆ. ಶ್ರೀರಾಮನಿಗೆ ಪಂಚೆ ಕೊಡಿ, ಸೀತಮ್ಮನಿಗೆ ಸೀರೆ ಕೊಡಿ ಅವರ ಮದುವೆಗೆ ದುಡ್ಡು ಕೊಡಿ ಎಂದು ಅಂಗಲಾಚಿ ಜನರಿಂದ ಬೇಡುತ್ತಾನೆ. ಅವರಿಂದ ಕಾಳುಕಡಿ, ಬಟ್ಟೆ ಬರೆ, ಜೊತೆಗೆ ಮೇವನ್ನು ಪಡೆದುಕೊಂಡು ಹೋಗುತ್ತಾನೆ.

ಕೋಲೆಬಸವರಾದ ಮೂರು ಮಂದಿ ಮಾನವ ಪಾತ್ರಗಳು ಮತ್ತು ಮೂರು ಪ್ರಾಣಿ ಪ್ರಾಣಿಗಳಿಗಷ್ಟೇ ಸೀಮಿತವಾಗಿರುತ್ತದೆ. ಪ್ರಾಣಿಗಳಲ್ಲಿ ಬೃಹದಾಕೃತಿಯ ಬಸವ ರಾಮನಾದರೆ ಮತ್ತೊಂದು ಮರಿಬಸವ ಲಕ್ಷ್ಮಣವಾಗುತ್ತದೆ. ಇನ್ನುಳಿದ ಹಸು ಸೀತೆಯ ಪಾತ್ರ ನಿರ್ವಹಿಸುತ್ತದೆ. ಮಾನವ ಪಾತ್ರಗಳಲ್ಲಿ ಈ ನಾಟಕದ ನಿರ್ದೇಶಕರಾದ ಸೀತಾದೇವಿಯ ತಂದೆ, ರಾಮನ ಕಡೆಯವನೊಬ್ಬ ಇರುತ್ತಾರೆ. ಬಿಳಿಯ ಧೋತರ ಅಂಗಿ, ಮೇಲೊಂದು ಹಳೆಯ ಕೋಟು ಇಲ್ಲವೇ ಜಾಕೀಟು, ತಲೆಗೆ ರುಮಾಲು ಹೆಗಲ ಮೇಲೆ ಶಾಲು, ಬಾರಕೋಲು ಹಣೆಗೆ ವಿಭೂತಿ ಕುಂಕುಮ ಹಚ್ಚಿರುತ್ತಾರೆ.

"ರಾಮ ಸೀತೆಯ ವಿವಾಹ ನಡೆಯುವ ದೃಶ್ಯ ನೋಡಿಯೇ ಆನಂದಿಸಬೇಕು. ವಿವಾಹ ಸಂದರ್ಭದ ಮಂಗಳವಾದ್ಯಗಳಾಗಿ ಭೋರ್ಗರೆಯುವ ಈ ವಾದ್ಯಗಳ ಸೊಗಸುಗಾರಿಕೆ ಅನನ್ಯವಾದುದು. ಸೂತ್ರಧಾರನು ರಾಮಾಯಣದ ಚಿತ್ರಕೂಟ ಕಥೆಯನ್ನು ಹೇಳುತ್ತಾನೆ".[*]

ಗಂಡಿನವರು : ನಮ್ಮ ರಾಮನಿಗೆ ಹೆಣ್ಣು ಕೊಡುವರು ಯಾರು

ಹೆಣ್ಣಿನವರು : ನಾವು ಎಂದು ಉತ್ತರಿಸುತ್ತಾನೆ.

ಗಂಡಿನವರು : ನೋಡ್ರಿ ನಮ್ಮ ರಾಮದೇವರು ತಿರುಪತಿಯಿಂದ ಕಾರಿನಲ್ಲಿ ಸೀತಮ್ಮನ ನೋಡಲಿಕ್ಕ ಬಂದಾನ, ಮೊದಲಿಗೆ ಬೀಗರ ಮರ್ಯಾದೆ ಚಹಾಪನಿ ಆಗಬೇಕು ಎನ್ನುತ್ತ, ಸ್ವಾಮಿ ನಮ್ಮ ರಾಮನಿಗೆ ಮದುವೆ ಮಾಡು ಮುಂಚೆ ನಿಮ್ಮ ಸೀತಮ್ಮಗ ಏನೇನ್ ಕೊಡಬೇಕು.

ಹೆಣ್ಣಿನವರು : ನಾಲ್ಕು ಜನರು ಹೌದ ಅನ್ನವಂಗ ಧಾರಿ ಸೀರೆ, ಕುಬುಸ, ಮ್ಯಾಲೆರಡು ಬೆಂಗಳೂರು ಸೀರೆ, ಮೈಸೂರ ಶ್ಯಾಲ, ಒಡವೆ ವಸ್ತ್ರ ದಾಗಿಣ ಅರಿಶಿಣ, ಕುಂಕುಮ, ಮಂಗಲಸೂತ್ರ ಇವೆಲ್ಲ ಕೊಡಬೇಕು.

ಗಂಡಿನವರು : ನೀವು ಹೇಳಿದಂಗ ಒಡವೆ ವಸ್ತ್ರ ಕೊಡತೀವಿ. ನಮ್ಮ ರಾಮಗ ಎರಡ ಸಾವಿರ ವರದಕ್ಷಿಣೆ, ಅಂಗಿ, ಧೋತರ, ಕೋಟು, ರುಮಾಲು, ಟೈಮ್ ನೋಡಾಕ ಎಚ್.ಎಂ.ಟಿ.ವಾಚ್. ರಿಕಾರ್ಡ್ ಕೇಳಾಕ ಫಿಲಿಪ್ಸ್ ರೇಡಿಯೋ ಪ್ರವಾಸ ಮಾಡಕ್ಕ ಫಟ್‌ಫಟಿ ಗಾಡಿ ಮ್ಯಾಲ ಒಂದ ತೊಲ ಬಂಗಾರ ಚೈನ ಇಷ್ಟ ಸಾಕು ಎನ್ನುತ್ತಾರೆ.

ಹೆಣ್ಣಿನವರು : ಅಮ್ಮ ಸೀತಮ್ಮ ನೋಡಲಿಕ್ಕ ಥೇಟ್ ಮನ್ಮಥ ಅದಾನ ಮದುವಿ ಮಾಡಿಕೊಳ್ಳವ್ವ ಗಂಡನ ಮಾಡಕೊಂಡ ಸುಖವಾಗಿ ಸಂಸಾರ ಮಾಡವ್ವ ಎಂದಾಗ ಸೀತೆ ಸೆಟಗೊಂಡು ಕೆಳಮುಖ ಮಾಡಿಕೊಂಡು ನಿಲ್ಲುತ್ತಾಳೆ. ನೋಡ್ರಿ ಸ್ವಾಮಿ ನನ್ನ ಮಗಳು ಹೇಳುತ್ತಿದ್ದಾಳ, ರಾಮನೇನೋ ಮುದುಕ ಅದಾನ, ಈ ಮದುವೆ ಒಲ್ಲೇ ಎನ್ನುತ್ತಿದ್ದಾಳೆ ಎಂದು ಪ್ರೇಕ್ಷಕರಿಗೆ ನಗೆ ಬರುವಂತೆ ಮಾಡುತ್ತಾನೆ.

ಅಮ್ಮ ಸೀತಮ್ಮ ಒಪ್ಪಿಕೊಳ್ಳಮ್ಮ, ನೋಡಲಿಕ್ಕ ಥೇಟ ಶ್ರೀರಾಮನಂಗ ಅದಾನ, ಮದವಿ ಮಾಡಿಕೊಂಡ ಚನ್ನಾಗಿ ಸಂಸಾರ ಮಾಡಿಕೊಂಡ ಬಾಳ್ವೆ ಮಾಡು ನನ್ನ ಪೆಪ್ಪರಮೆಂಟ, ಬೆಂಗಳೂರ ಬಳ್ಳೊಳ್ಳಿ, ಬಂಬಾಯಿ ಬಿಸ್ಕಿತ್ತು ಮುಂತಾದ ಹಾಸ್ಯದ ನುಡಿಗಳನ್ನು ಹೇಳುತ್ತಾನೆ. ಆಗ ಒಡವೆಯ ಮಾತನ್ನು ಪ್ರಸ್ತಾಪಿಸುತ್ತ ಒಂದೊಂದಾಗಿ ವಂಕಿ, ಮುತ್ತಿನೋಲೆ, ಡಾಬ, ಬಂಗಾರದ ಒಡವೆ ಮುಂತಾದ ವಸ್ತುಗಳ ಹೆಸರು ಹೇಳುತ್ತಾನೆ. ಯಜಮಾನನ ಮಾತಿಗೆ ಓಗೊಟ್ಟು ಸೀತಮ್ಮನೂ ತಲೆ ಹಾಕಿ ಮದುವೆಗೆ ತನ್ನ ಸಮ್ಮತಿ ಸೂಚಿಸುತ್ತದೆ.

ಸೀತೆಗೆ ರಾಮನ ಪರಿಚಯ ಮಾಡುತ್ತ ಸೀರೆ, ಒಡವೆ ಎಲ್ಲಾ ತಂದಿದ್ದಾರೆ ಸೀತಮ್ಮ ಎಂದಾಗ ರಾಮನ ಕಡೆಯವರು ಒಂದೊಂದೆ ಸೀರೆ, ಒಡವೆಗಳನ್ನು ಕೊಡುತ್ತಾರೆ. ಹೀಗೆ ಪರಿಚಯ ಮಾಡುತ್ತಾ ಧಾರೆ ಎರೆಯಲು ಗಂಡಿನ ಕಡೆಯವರನ್ನು ಕರೆಯುತ್ತಾರೆ. ಸೀತೆ ನಾಚಿಕೆಯಿಂದ ತಲೆ ತಗ್ಗಿಸಿಕೊಂಡು ಮೆಲ್ಲಮೆಲ್ಲನೆ ಬಂದು ರಾಮನ ಪಕ್ಕದಲ್ಲಿ ನಿಲ್ಲುತ್ತದೆ. ಈಗ ಧಾರೆ ಎರೆಯುವ ಸೂಚನೆಗಾಗಿ ಮಂಗಳವಾದ್ಯ ಶಹನಾಯಿ, ಡೋಲು, ಸುತಿ, ಬಾರಿಸುತ್ತಾರೆ. ಬಳಿಕ ರಾಮನ ಸುತ್ತ ಸೀತೆ ಐದು ಸುತ್ತು ಪ್ರದಕ್ಷಿಣೆ ಬಂದು 'ಸಪ್ತಪದಿ'ಯೊಂದಿಗೆ ಪ್ರದರ್ಶನ ಮುಕ್ತಾಯವಾಗುತ್ತದೆ, (ಯಾದಗಿರಿಯಲ್ಲಿ ದಿನಾಂಕ ೧೪.೧.೧೩ ನರಸಪ್ಪ ಮತ್ತು ಪ್ರಕಾಶ ಎಂಬ ಕೊಲೆಬಸವ ಆಡಿಸುವವರು ಪ್ರದರ್ಶನ ನೀಡಿದರು.)

"ಆಟದ ನಂತರ ರಾಮ ಸೀತೆ, ಲಕ್ಷ್ಮಣರನ್ನು ಮನೆಮನೆಯ ಬಳಿ ಕೊಂಡೊಯ್ದು ನಾಗಸ್ವರದ ನಾದ ಹೊರಡಿಸಿದಾಗಲೇ ಅವನ ಪ್ರಮುಖ ಸಂಪಾದನೆ ಆರಂಭವಾಗುತ್ತದೆ. ಹಳ್ಳಿಯ ಹೆಣ್ಣುಮಕ್ಕಳು ಆ ಪ್ರಾಣಿಗಳ ಕಾಲ್ತೊಳೆದು, ಕುಂಕುಮವಿರಿಸಿ, ಗಂಧದಕಡ್ಡಿ ಹಚ್ಚಿ ಪೂಜಿಸುತ್ತಾರೆ. ಅವುಗಳಿಗೆ ತಿನ್ನಲು ಹುರುಳಿಯನ್ನೋ, ರಾಗಿ ಹಿಟ್ಟನ್ನೋ ಕಲಿಸಿಕೊಡುವುದುಂಟು. ಕಲಾವಿದರಿಗೆಂದು ರಾಗಿ, ಜೋಳ. ಅಕ್ಕಿ ಇತ್ಯಾದಿ ಬಟ್ಟೆಬರೆಗಳನ್ನು ನೀಡುವುದುಂಟು. ಕೆಲವು ಸಲ ಯಾವುದಾದರೂ ಮನೆಯಿಂದ ದವಸಧಾನ್ಯವೋ, ಬಟ್ಟೆಬರೆಯೋ, ಹಣಕಾಸೋ ಬರಲಿಲ್ಲವೆಂದರೆ ಅವರು ಕೊಡುವವರೆಗೂ ಮನೆಬಿಟ್ಟು ಕದಲದೆ ನಾಗಸ್ವರವನ್ನು ಏರು ಧ್ವನಿಯಿಂದ ಊದುತ್ತಲೂ ಬಸವನನ್ನು ಮನೆಬಾಗಿಲಿಗಡ್ಡವಾಗಿ ನಿಲ್ಲಿಸಿಯೇ ಪಟ್ಟು ಹಿಡಿಯುತ್ತಾರೆ. ಬಹುಶಃ ತುಂಬು ಸಂಸಾರದ ಹೊಟ್ಟೆ ತುಂಬಿಸುವ ಅನಿವಾರ್ಯತೆ ಅವರನ್ನು ಇಂಥ ಮೊಂಡುತನಕ್ಕೆ ಪ್ರಚೋದಿಸಬಹುದು.

೪.೩.೧ ಪ್ರದರ್ಶನ ಕಲೆಯಲ್ಲಿ ಸ್ತ್ರೀಯ ಪಾತ್ರ

ನಿಯಮ ಕಟ್ಟಳೆಗಳಿಲ್ಲದೆ, ಜಾತಿಭೇದವಿಲ್ಲದೆ, ಬಡವಬಲ್ಲಿದವನೆಂಬ ಭೇದಭಾವವಿಲ್ಲದೆ, ತಮ್ಮ ಬದುಕಿನ ಒಂದು ಅಂಗವಾಗಿ ಬೆರೆತುಹೋಗಿರುವ ಪ್ರದರ್ಶನ ಕಲೆಗಳು ಅಲೆಮಾರಿ ಸಮುದಾಯದ ಆರ್ಥಿಕ ಸಾಮಾಜಿಕ ರಕ್ಷಾಕವಚವೂ ಆಗಿದೆ. ಇಂತಹ ಪ್ರದರ್ಶನಕಲೆಯಿಂದ ಆ ಸಮುದಾಯ ಆಹಾರವನ್ನು ಕಾಣಬೇಕಿದೆ. ಪ್ರದರ್ಶನ ಕಲೆಗಳಲ್ಲಿ ವೈವಿಧ್ಯತೆ ಕಾಣಬಹುದು. ಗೌರವ, ಹೇರಳವಾದ ಸಂಭಾವನೆ ಪಡೆದುಕೊಂಡು ವಿಶೇಷವಾದ ರಂಗಸಜ್ಜಿಕೆ, ಕಲಾಪರಿಕರ, ತಂತ್ರಜ್ಞಾನ, ಉತ್ತಮ ನಿರ್ದೇಶನ, ವಿಶೇಷ ರೀತಿಯ ವೇಷ-ಭೂಷಣ, ಧ್ವನಿವರ್ಧಕ ಉಪಕರಣಗಳೂ ಒಳಗೊಂಡು ಸುಮಾರು ದಿವಸಗಳ ಕಾಲ ತರಬೇತಿ ಪಡೆದು ಇಂತಿಷ್ಟೆ ಎಂಬ ಸಮಯವನ್ನು ಹೊಂದಿ ಹೀಗೆಯೆ ಅಭಿನಯಿಸಬೇಕೆಂದು ಷರತ್ತುಗಳನ್ನು ಮೈಗೂಡಿಸಿಕೊಂಡು ಪ್ರದರ್ಶಿಸಬೇಕೆಂಬುದು ಕೆಲವರ ಪ್ರವೃತ್ತಿಯಾಗಿದೆ. ಇಂತಲ್ಲಿ ಮನೋರಂಜನೆಯೇ ಕೇಂದ್ರಬಿಂದುವಾಗಿದೆ. ಆದರೆ ಹೊಟ್ಟೆಪಾಡಿನ ಕೇಂದ್ರಬಿಂದುವಾಗಿರುವ ಅಲೆಮಾರಿಗಳ ಕಲಾಪ್ರದರ್ಶನಗಳು ಯಾವುದೇ ರೀತಿಯ ರಂಗಸಜ್ಜಿಕೆ, ಸಮಯ, ತಂತ್ರಜ್ಞಾನ, ತರಬೇತಿ, ಹೇರಳವಾದ ಹಣ ಸಂಪಾದನೆ, ಗೌರವಗಳಿಲ್ಲದೆಯೇ ಗಂಜಿಗಾಗಿಯೇ ಬೀದಿಬೀದಿಗಳಲ್ಲಿ ಇಲ್ಲವೇ ಮನೆಗಳ ಮುಂದೆ ನಿಂತು ದೃಶ್ಯಕ್ಕೆ ತಕ್ಕ ಉಡುಪನ್ನು ಧರಿಸಿ ತಮ್ಮ ಕಲೆಯನ್ನು ಲೀಲಾಜಾಲವಾಗಿ ಪ್ರದರ್ಶನ ನೀಡುವ ಅಲೆಮಾರಿಗಳ ಕಲೆಯು ಅದ್ಭುತವೆ ಸರಿ. ಇವರಿಗೆ ಅಕ್ಷರ ಜ್ಞಾನವಿಲ್ಲದಿದ್ದರೂ ಸಂಭಾಷಣೆಯನ್ನು ಸರಿಯಾಗಿ ಹೇಳುವರು. ಪ್ರದರ್ಶನ ಕಲೆಯಲ್ಲಿ ಅಲೆಮಾರಿ ಸ್ತ್ರೀ-ಪುರುಷರ ಸಂಬಂಧಗಳು ಸಹಜತೆಯಿಂದ ಕೂಡಿವೆ. ಯಾವುದೇ ಲಿಂಗ ತಾರತಮ್ಯವಿಲ್ಲದೆ ಕಸುಬು ಮತ್ತು ಪ್ರದರ್ಶನ ಕಲೆಗಳಲ್ಲಿ ಹಾಗೂ ಜೀವನನಿರ್ವಹಣೆಯಲ್ಲಿ ಇವರಿಬ್ಬರ ಪಾತ್ರವೂ ಪ್ರಮುಖವಾಗಿರುವುದು ಕೋಷ್ಟಕ ೪.೩.೧ರಲ್ಲಿ ಗಮನಿಸಬಹುದು.

ಕೋಷ್ಟಕ ೪.೩.೧. ಕಸುಬು ಮತ್ತು ಪ್ರದರ್ಶನ ಕಲೆಯಲ್ಲಿ ಸ್ತ್ರೀ ಪಾತ್ರ

ಸಮುದಾಯ	ಕಸಬು	ಪುರುಷ	ಮಹಿಳೆ
ಬೈಲುಪತ್ತಾರ	ಆಲಂಕಾರಿಕ ವಸ್ತುಗಳ ತಯಾರಿಸುವಿಕೆ.	ತಾಮ್ರದ ತಂತಿಯನ್ನು ತುಂಡು ತುಂಡಾಗಿ ಕತ್ತರಿಸುವಿಕೆ.	ಬಳೆಯಾಕಾರದಲ್ಲಿ ದುಂಡಗೆ ಮಾಡುವುದು.
	ಅಲ್ಯೂಮಿನಿಯಂ ಡಾಬನ್ನು ಮಾಡುವುದು.	ಅಲ್ಯೂಮಿನಿಯಂ ಪಟ್ಟಿಯನ್ನು ಟೊಂಕದ ಅಳತೆಗೆ ತಕ್ಕಂತೆ ಕತ್ತರಿಸುವಿಕೆ	ಕತ್ತರಿಸಿದ ಅಲ್ಯೂಮಿನಿಯಂಗಳಿಗೆ ಚಿತ್ತಾರ ಹಾಕಿ ಡಾಬುಮಾಡುವುದು
	ಚಿಮುಟಿಗೆ, ಹಲ್ಲುಕಡ್ಡಿ, ತಾಯತ, ಕಿವಿ ಓಲೆಗಳ ತಯಾರಿಕೆ	ಅಳತೆಗೆ ತಕ್ಕಂತೆ ಕತ್ತರಿಸುವುದು.	ವಸ್ತುಗಳ ತಯಾರಿಕೆ ಸಿದ್ದತೆ
ಸಿಕ್ಕಲಿಗರು	ವಿಗ್ರಹ, ಗೃಹೋಪಯೋಗಿ ವಸ್ತುಗಳತಯಾರಿಕೆ	ಕಚ್ಚಾ ಅಲ್ಯೂಮಿನಿಯಂ ಬಳಸಿ ಕೊಂಡು ಮುರಿದು ಸೇರಿಸುವಿಕೆ.	ಅಲ್ಯೂಮಿನಿಯಂ ಕರಗಲು ರಾಟಿ ತಿರುಗಿಸುವಳು.
		ಚಿಕ್ಕದಾದ ಪಾತ್ರೆಯಲ್ಲಿ ಅಲ್ಯೂಮಿನಿಯಂ ಕರಗಲು ಹಾಕುತ್ತಾನೆ	ಮತ್ತೊಂದಕ್ಕೆ ಸಿದ್ಧ ಮಾಡುತ್ತಾಳೆ
		ಅಲ್ಯೂಮಿನಿಯಂ ನೀರಾಗುವಂತೆ ಕರಗಲು, ಇತರೆ ಬೇರೆ ಪದಾರ್ಥಗಳನ್ನು ಹಾಕಿ ಬೇರ್ಪಡಿಸುತ್ತಾನೆ.	ಗ್ರಾನೈಟ್ ಮಣ್ಣಿನಲ್ಲಿ ನೀರು ಹಾಕಿ ಮಿಶ್ರಣ ಮಾಡಿ ಅಚ್ಚು ಪಡಿಯಲ್ಲಿ ತುಂಬುತ್ತಾಳೆ. ಇದನ್ನು ನಿರ್ಮಿಸಲು ಸಹಕರಿಸುತ್ತಾಳೆ.
		ಅಚ್ಚುಪಡಿಯನ್ನು ತೆಗೆದು ಸ್ವಚ್ಛ ಮಾಡುತ್ತಾನೆ.	೫ ನಿಮಿಷದ ನಂತರ ಆ ಪಟ್ಟಿ ತೆಗೆದು ಗ್ರಾನೈಟ್ ಮಣ್ಣನ್ನು ಕೆಳಗೆ ಹಾಕಿ ವಿಗ್ರಹವನ್ನು ತೆಗೆದು ಸುತ್ತಲೂ ಇರಬಹು ದಾದ ತುಂಡು ಮಣ್ಣಿನ ಕಣ ಗಳನ್ನು ಸ್ವಚ್ಛ ಮಾಡುತ್ತಾಳೆ.
		ವಿಗ್ರಹ ಇಲ್ಲವೆ ಉಪಕರಣವನ್ನು ಅಚ್ಚುಪಡಿಯಲ್ಲಿಟ್ಟು ಮಣ್ಣಿನಲ್ಲಿ ಪ್ರತಿರೂಪ ಮೂಡಿಸುತ್ತಾನೆ.	
		ಅಚ್ಚುಪಡಿಯ ಪಟ್ಟಿಗೆ ಮೇಲೆ ರಂಧ್ರ ವನ್ನು ಮಾಡಿ ಕಾಯ್ದ ಅಲ್ಯೂಮಿನಿಯಂ	

		ಮಿನಿಯಂ ದ್ರಾವಣ ಹಾಕಿ ೫ ನಿಮಿಷ ಬಿಡುತ್ತಾನೆ.	
		ತೆಗೆದ ವಿಗ್ರಹವನ್ನು ಬಟ್ಟೆಯಿಂದ ಒರೆಸಿ ಸ್ವಚ್ಛ ಮಾಡಿ ಹೊಳಪು ಬರುವಂತೆ ಮಾಡುತ್ತಾನೆ.	
ಶಿಳ್ಳೆಕ್ಯಾತರು	ತೊಗಲುಗೊಂಬೆ	ಸಮುದಾಯದ ಪರಿಚಯ	ಆಟದ ತಯಾರಿಯಲ್ಲಿರುವುದು
ಬುಡ್ಗಜಂಗಮ	ಬುರ್ರಕಥ	ಅಲಂಕಾರಿಕವಾಗಿ ಬಟ್ಟೆ ಧರಿಸಿಕೊಂಡು ಮಧ್ಯದಲ್ಲಿ ನಿಂತು ತಂಬೂರಿ ಹಿಡಿದು ಕೊಂಡಿರುತ್ತಾನೆ	ಇಬ್ಬರೂ ಸ್ತ್ರೀಯರು ಗುಮಟೆ ಹಾಕಿಕೊಂಡು ಅವನ ಅಕ್ಕಪಕ್ಕದಲ್ಲಿ ನಿಂತಿರುತ್ತಾರೆ.
		ಪ್ರಾರ್ಥನೆ ಹಾಡಿ, ಕಥೆ ಹೇಳುತ್ತಾ ಸಂಭಾಷಿಸುತ್ತಾ, ತಂಬೂರಿ ನುಡಿಸುತ್ತಾನೆ. ಸಂದರ್ಭಕ್ಕೆ ತಕ್ಕಂತೆ ಹಾಡುತ್ತಾನೆ ಲಘು ನರ್ತನ ಮಾಡುತ್ತಾನೆ.	ತಂಬೂರಿ ಮತ್ತು ಸಂಭಾಷಣೆ ಹಾಡಿಗೆ ತಕ್ಕಂತೆ ಗುಮಟೆಯ ಬಾರಿಸುತ್ತ ಹಿಮ್ಮೇಳವಾಗಿ ಹಾಡುವರು.
ಡೊಂಬರು	ಕಸರತ್ತು ಪ್ರದರ್ಶನ	ಊರ ಪ್ರಮುಖನ ಪರವಾನಗಿ ಪಡೆದು ಪ್ರದರ್ಶನ ಇದೆಯೆಂದು ತಿಳಿಸಲು ಡಂಗುರ ಇಲ್ಲವೇ ಧ್ವನಿವರ್ಧಕ ರಹಿತ ಮೈಕ್ ಹಿಡಿದು ಕೊಂಡು ಊರೆಲ್ಲಾ ತಿರುಗುವನು.	ಪ್ರದರ್ಶನ ನೀಡಲು ಪರಿಕರಗಳ ಜೋಡಣೆಯಲ್ಲಿ ನಿರತರಾಗುವುದು.
		ಗ್ರಾಮ ಮತ್ತು ಇಲ್ಲವೇ ಸ್ಥಳಿಯರಿಗೆ ಸಮುದಾಯದ ಪರಿಚಯ ಮಾಡಿ ಕೊಡುವುದು.	ಪ್ರದರ್ಶನವಿದೆ ಎಂದು ಮಕ್ಕಳನ್ನು ಹುರಿದುಂಬಿಸುವುದು.

		ಆಟ ಪ್ರಾರಂಭಿಸಿ ಹಿಂದೆ ಮುಂದಕ್ಕೆ ಲಾಗ ಹೊಡೆಯುವನು ಮತ್ತು ಡೋಲು ಹೊಡೆಯುವನು ಸೈಕಲ್ ತುಳಿಯುವಿಕೆ, ನೇಗಿಲನ್ನು ಹಲ್ಲಿನಿಂದ ಎತ್ತುವುದು. ಟೈರಿಗೆ ಬೆಂಕಿ ಹಚ್ಚಿ ಅದರ ನಡುವೆಯಿಂದ ಜಿಗಿಯುವುದು. ಬಂಡಿಗಾಲಿ ತೊಡಿಸುವುದು, ಕಣ್ಣಿನಿಂದ ಸೂಜಿಯನ್ನು ತೆಗೆಯುವುದು ಕಲ್ಲನ್ನು ಹೊಡೆಯುವುದು ಪ್ರೇಕ್ಷಕರಿಗೆ ಚಪ್ಪಾಳೆ ಹೊಡೆಯುವಂತೆ ಹೇಳುವುದು. ಆಟ ಮುಕ್ತಾಯ ಹಂತದಲ್ಲಿರುವಾಗ ಹೆಚ್ಚು ಸಹಾಯ ಮಾಡಿ ಎಂದು ಜನರಲ್ಲಿ ವಿನಮ್ರತೆಯ ಮನವಿಯ ಮೂಲಕ ಬೇಡುವುದು.	ಲಾಗಕ್ಕೆ ತಕ್ಕಂತೆ ಡೋಲು ಬಾರಿಸುವಳು. ಕಬ್ಬಿಣದ ಸಣ್ಣ ಬಳೆಯಲ್ಲಿ ದೇಹ ತೂರಿಸುವಳು. ಪ್ರೇಕ್ಷಕರಿಗೆ ಭಂಗಿಯ ಸಾರ ಹೇಳುತ್ತಾ ಡೋಲು ಬಡಿಯುತ್ತಲೇ ಹುರಿದುಂಬಿಸುತ್ತಾಳೆ. ನೃತ್ಯಗಳಲ್ಲಿ ಬಾಗಿ ಡೋಲು ಬಾರಿಸುತ್ತಾ ಜನರನ್ನು ಆಟದ ಕಡೆಗೆ ಸೆಳೆಯುತ್ತಿರುತ್ತಾಳೆ. ಹಗ್ಗ ಅಥವಾ ತಂತಿಯ ಮೇಲೆ ಬೊಂಬುವಿನ ಆಸರೆಯಿಂದ ತಟ್ಟೆ ಹಿಡಿದು ಜನರ ಬಳಿ ನಯವಾಗಿ ನಡೆದು ಬಂದು ಪ್ರೇಕ್ಷಕರಿಂದ ಹಣ ಪಡೆಯುವುದು.
		ಹೆಚ್ಚು ಹಣ ಕೊಟ್ಟವರನ್ನು ಕೊಂಡಾಡುವುದು. ಧನ್ಯವಾದಗಳನ್ನು ಹೇಳಿ ಆಟವನ್ನು ಮುಗಿಸುತ್ತಾನೆ.	ಹೆಚ್ಚು ಹಣ ಕೊಟ್ಟವರ ಹೆಸರನ್ನು ಕೂಗಿ ಹೇಳುವುದು. ಇಬ್ಬರು ಪ್ರೇಕ್ಷಕರತ್ತ ಕೈ ಮುಗಿಯುವುದು.

ಈ ರೀತಿಯಾಗಿ ಪ್ರದರ್ಶನ ಕಲೆಗಳಲ್ಲಿ ಸ್ತ್ರೀ ಮತ್ತು ಪುರುಷರಿಬ್ಬರು ಒಂದುಗೂಡಿ ಅವರವರ ಪಾತ್ರಗಳನ್ನು ನ್ಯಾಯಯುತವಾಗಿ ಪೂರೈಸುವರು.

೪.೪. ಸಂಚಾರಿ ವ್ಯಾಪಾರ

"ಅಲೆಮಾರಿಗಳು ಪಾರಂಪರಿಕವಾಗಿ ತಯಾರಿಸಿದ ವಸ್ತುಗಳಿಗೆ ಬೆಲೆ ಸಿಗದೇ ಇರುವುದರಿಂದ ಅವರಿಗೆ ಲಾಭ ಕಡಿಮೆಯಾಗುತ್ತ ಬಂತು. ವ್ಯಾಪಾರ ಸರಿಯಾಗಿ ಆಗದೇ ಇರುವುದನ್ನು ಮನಗಂಡು ಹಲವಾರು ಅಲೆಮಾರಿಗಳು ಆಧುನಿಕ ಮಾರುಕಟ್ಟೆಗೆ ಸಂಬಂಧಿಸಿದಂತೆ ಸಿಗುವ ಕಚ್ಚಾವಸ್ತುಗಳನ್ನು ಖರೀದಿ ಮಾಡಿಕೊಂಡು ಮನೆಯ ಅಲಂಕಾರಕ್ಕೆ ಬಳಸುವ ವಸ್ತುಗಳನ್ನು ತಯಾರಿಸಿ. ಮತ್ತೆ ಕೆಲವು ಸಲ ತಯಾರಿಸಿದ ವಸ್ತುಗಳನ್ನು ತಾವು ಖರೀದಿ ಮಾಡಿ ಊರು ಊರು ತಿರುಗುತ್ತಾ ತಮ್ಮ ವ್ಯಾಪಾರವನ್ನು ಮಾಡುವುದರ ಮೂಲಕ ತಮ್ಮ ಹೊಟ್ಟೆಯನ್ನು ತುಂಬಿಕೊಳ್ಳಲು ಪ್ರಾರಂಭಿಸಿದರು".[೬] ಈ ಆಧುನಿಕ ಕಾಲದ ವ್ಯವಸ್ಥೆಗೆ ಹೊಂದಿಕೊಂಡ ಇವರು ಸಂಚಾರಿ ವ್ಯಾಪಾರದ ಮೂಲಕ ಜಾತ್ರೆಗಳಿಗೆ, ಸಂತೆಗಳಿಗೆ, ವಿಶೇಷ ದಿನಗಳಂದು ತಯಾರಿಸಿದ ಸಿದ್ಧವಸ್ತುಗಳನ್ನು ಮಾರಾಟ ಮಾಡುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡಿದ್ದೇನೆ. ಈ ಸಂಚಾರಿ ವ್ಯಾಪಾರದಲ್ಲಿ ಈ ಕೆಳಗಿನ ವಸ್ತುಗಳನ್ನು ಮಾರಾಟ ಮಾಡುವರು".[೬]

ವಿಗ್ರಹಗಳ ತಯಾರಿಕೆ: ಹಳೆಯದಾದ ಅಲ್ಯೂಮಿನಿಯಂ ವಸ್ತು ತೆಗೆದುಕೊಂಡು ಕುಲುಮೆಯಲ್ಲಿ ಹೆಚ್ಚು ಶಾಖ ಕೊಡುತ್ತಾರೆ. ಅದು ನೀರಾಗುವಂತೆ ಕರಗಿಸಿ, ಅದರಲ್ಲಿರುವ ಕೊಳಕು ಹೊರತೆಗೆಯ ಲಾಗುತ್ತದೆ. ಮೊದಲು ಸಿದ್ಧವಾಗಿರುವ ಅಚ್ಚುಪಡಿಗಳಲ್ಲಿ ಒಂದು ಚೌಕಾಕಾರದ ಕಟ್ಟಿಗೆಯ ಪೆಟ್ಟಿಗೆಯಲ್ಲಿ ಒಂದು ಸಣ್ಣ ರಂಧ್ರ ಮಾಡಿರುತ್ತಾರೆ. ರಂಧ್ರದಲ್ಲಿ ಇದರ ರಸವನ್ನು ಸುರಿಯುತ್ತಾರೆ. ಇದರ ಮೊದಲು ಪೆಟ್ಟಿಗೆಯ ಒಳಗಡೆ ಗ್ರಾನೈಟ್ ಪುಡಿಯನ್ನು ಸಮ ಪ್ರಮಾಣದಲ್ಲಿ ನೀರಿನಲ್ಲಿ ಹಾಕಿ ತುಂಬಿರುತ್ತಾರೆ. ಯಾವ ವಿಗ್ರಹರೂಪಬೇಕೋ ಆ ವಿಗ್ರಹ ಪಡಿಯಚ್ಚು ತೆಗೆದುಕೊಂಡು ಅಚ್ಚುಪಡಿಯಂತೆ ಮಾಡಿ ಅದನ್ನು ಮುಚ್ಚುತ್ತಾರೆ. ರಸವನ್ನು ಅದರಲ್ಲಿ ಸುರಿಯುವರು. ಕೇವಲ ೫ ನಿಮಿಷದಲ್ಲಿ ಗಟ್ಟಿಯಾಗುತ್ತದೆ. ಹೊರತೆಗೆದಾಗ ಬೆಳ್ಳಿಯಂತೆ ಹೊಳೆಯುವ ವಿಗ್ರಹಮೂರ್ತಿ ಕಂಡುಬರುತ್ತದೆ. ಹೀಗೆ ಬೇಕಾದ ವಿಗ್ರಹಗಳನ್ನು ಮಾಡುತ್ತಾರೆ. ನಮಗೆ ಬಂಗಾರದ ಬಣ್ಣದ ವಿಗ್ರಹ ಬೇಕಾದರೆ ಅಲ್ಯೂಮಿನಿಯಂ ರಸದ ಬದಲು ಬಂಗಾರದ ಬಣ್ಣವನ್ನು ಮಿಶ್ರಣ ಮಾಡಿದರೆ ಬಂಗಾರ ಬಣ್ಣದ ಮೂರ್ತಿ ಕಾಣಬಹುದಾಗಿದೆ.

ತೋರಣಗಳ ತಯಾರಿಕೆ: ಪ್ಲಾಸ್ಟಿಕ್ ಬಳಸಿ ತೆಳುವಾದ ತಂತಿ, ದಾರ, ಸೂಜಿ ಹಾಗೂ ಕತ್ತರಿಯನ್ನು ಉಪಯೋಗಿಸಿಕೊಂಡು ಮಾವಿನ ಎಲೆಯ ಆಕಾರದಂತೆ ಕತ್ತರಿಸಿಕೊಳ್ಳುವರು. ಅದು ಮಾವಿನ ತೋರಣವಾಗುತ್ತದೆ. ಮನೆಯ ಬಾಗಿಲಿಗೆ ಹಾಕಿದಾಗ ನೋಡಲು ತುಂಬಾ ಸುಂದರವಾಗಿ ತಾಜಾ ತೋರಣದಂತೆ ಕಂಗೊಳಿಸುತ್ತದೆ. ತೋರಣಗಳಿಗೆ ಕೊಳಕು ಅಂಟಿದಾಗ ನೀರಿನಲ್ಲಿ ತೊಳೆಯಬಹುದು. ಅದು ಎಂದಿನಂತೆ ಹೊಸ ಹೊಳಪಿನಿಂದ ಸುಂದರವಾಗಿ ಕಾಣುತ್ತದೆ.

ಕಡಗ ಮತ್ತು ಸರಗಳ ತಯಾರಿಕೆ: ಸ್ಟೀಲ್ ಮತ್ತು ಎರಕ ಉಪಯೋಗಿಸಿ, ಬಳೆಯಾಕಾರದಲ್ಲಿ ಕಡಗವನ್ನು ತಯಾರಿಸುತ್ತಾರೆ. ಅಲ್ಯೂಮಿನಿಯಂ ಮತ್ತು ತಾಮ್ರದಿಂದ ವಿವಿಧ ರೀತಿಯ ಸರಗಳನ್ನು ತಯಾರಿಸುವರು.

ಉಂಗುರ, ಓಲೆ, ಡಾಬು, ಕಾಲುಂಗುರ: ಇವುಗಳ ತಯಾರಿಕೆಯಲ್ಲಿ ಅಲ್ಯೂಮಿನಿಯಂ ಮತ್ತು ಸ್ಟೀಲ್ ಹಾಗೂ ಎರಕವನ್ನು ಉಪಯೋಗಿಸುತ್ತಾರೆ. ಕುಲುಮೆಯಲ್ಲಿ ಯಾವ ಆಕಾರ ಬೇಕೋ ಅದೇ ರೀತಿಯ ಆಕಾರಗಳನ್ನು ಮಾಡುವುದುಂಟು. ನಂತರ ಉಂಗುರದ ಮೇಲೆ ಹರಳು ಕೂಡಿಸುತ್ತಾರೆ. ಓಲೆಯು ಹರಳಿನ ಅಲಂಕಾರದಿಂದ ಕೂಡಿದ್ದು ಬಂಗಾರದ ಓಲೆಗಳನ್ನು ಮೀರಿಸುವಂತಹ ಕುಶಲತೆಯಲ್ಲಿ ತಯಾರಿಸುತ್ತಾರೆ. ಸೊಂಟದ ಡಾಬನ್ನು ಕುಸುರಿಗಳಿಂದ ತಯಾರಿಸುತ್ತಾರೆ.

ಹಲ್ಲುಕಡ್ಡಿ: ಕಬ್ಬಿಣದಿಂದ ಮುಂದೆ ಚೂಪಾಗಿರುವಂತೆ ತಯಾರಿಸುತ್ತಾರೆ. ಹಲ್ಲಲ್ಲಿ ಸಿಕ್ಕಿಕೊಂಡಿರುವ ಪದಾರ್ಥಗಳನ್ನು ಇದರ ಸಹಾಯದಿಂದ ತೆಗೆಯಬಹುದು.

ಬೀಸಣಿಕೆ ತಯಾರಿಕೆ: ಬೀಸಣಿಕೆ ತಯಾರಿಸುವುದು ತುಂಬಾ ಸರಳವೆಂದು ಹೇಳುತ್ತಾರೆ. ಬಿದಿರು ಸೀಳಿಕೊಂಡು, ತೆಳುವಾದ ಬಿದಿರಿನಿಂದ ಚೌಕಾಕಾರದಲ್ಲಿ ಹೆಣೆದು ದಿಂಡನ್ನು ಗಟ್ಟಿಯಾದ ಬಿದಿರಿನಿಂದ ತಯಾರಿಸಿ ಈ ಚೌಕಾಕಾರಕ್ಕೆ ಹಾಗೂ ದಿಂಡಿಗೆ ತೆಳುವಾದ ಬಿದಿರು ಅಂಟಿಸುತ್ತಾರೆ. ಇದು ಗಾಳಿ ಇಲ್ಲದ ಸಮಯದಲ್ಲಿ ಉಪಯೋಗಿಸಬಹುದು.

ಬೇಟೆಯ ವಸ್ತುಗಳ ತಯಾರಿಕೆ: ಕುದುರೆ ಬಾಲದ ಕೂದಲಿನಿಂದ ಉರುಲು ತಯಾರಿಸುತ್ತಾರೆ. ಪಕ್ಷಿಗಳಿಗೆ ಉರುಲು ಹಾಕಲು ಇದನ್ನು ಉಪಯೋಗಿಸುವುದುಂಟು. ವೈರ್‌ಗಳಿಂದಲೂ ಉರುಲನ್ನು ತಯಾರಿಸುತ್ತಾರೆ. ಸರಗುಣಿಕೆ ರೂಪದಲ್ಲಿ ಹಾಕಿರುತ್ತಾರೆ. ಉಡಗಳಿಗೆ ಹಾಕುವ ಕಡಗದ ಬಲೆ ತಯಾರಿಸುತ್ತಾರೆ. ಬಿದಿರಿನ ಪರಿಕರ ಕೌಜುಗ ಹಿಡಿಯಲು ಅನುಕೂಲವಾಗುವ ರೀತಿ ತಯಾರಿಸುತ್ತಾರೆ. ಮೀನಿನ ಬಲೆ ಗುಡಾರಗಳನ್ನು ಹೆಚ್ಚಾಗಿ ಪುರುಷರು ತಯಾರಿಸುತ್ತಾರೆ.

ಗೃಹೋಪಯೋಗಿ ವಸ್ತುಗಳ ತಯಾರಿಕೆ: ಪೆಟ್ಟಿಗೆಯಲ್ಲಿ ಗ್ರಾನೈಟ್ ಪುಡಿ ತುಂಬಿ ತಮಗೆ ಬೇಕಾದ ರೀತಿಯಲ್ಲಿ ಮಾಡಿಕೊಳ್ಳುವರು. ಸೌಟು, ಕೈಬಟ್ಟಲು, ರೊಟ್ಟಿ ಎಬ್ಬಿಸುವ ಸೌಟು, ಬಟ್ಟಲು ಇತ್ಯಾದಿಗಳ ರೂಪ ಮಣ್ಣಿನಲ್ಲಿ ಚಿತ್ರಿಸಿ ನಂತರ ಅಲ್ಯೂಮಿನಿಯಂ ಕರಗಿಸಿ ಆ ಒಂದು ರಂಧ್ರದಲ್ಲಿ ತುಂಬಿಸುತ್ತಾರೆ. ನಂತರ ಅದು ಅದರ ರೂಪ ಮಾಡಿದ ಜಾಗಕ್ಕೆ ಹೋಗಿ ಘನೀಕೃತವಾಗಿ ೧೫ ನಿಮಿಷಗಳ ನಂತರ ಅದನ್ನು ತೆಗೆದಾಗ ಬೇಕಾದ ಗೃಹಬಳಕೆ ವಸ್ತು ತಯಾರಾಗುತ್ತದೆ. ಬಳಸಿ ಬಿಸಾಡಿದ ಅಲ್ಯೂಮಿನಿಯಂನಿಂದ ಹೊಸದಾದ ವಿಶಿಷ್ಟ ಸಾಮಾನು ತಯಾರಿಸಿ ಕೊಡುವುದು ಅಲೆಮಾರಿಗಳ ಬೃಹತ್ ಕೌಶಲ್ಯ ಯಂತ್ರವನ್ನು ನಾಚಿಸುವಂತಿರುತ್ತದೆ.

ಪ್ರದರ್ಶನ ಕಲೆ ಮತ್ತು ಇತರ ವೃತ್ತಿ ಪರಿಕರಗಳು: ಹಗಲುವೇಷಗಾರರು ತಮ್ಮ ಪ್ರದರ್ಶನ ಕಲೆಗೆ ಬೇಕಾಗುವ ಹಾರ್ಮೋನಿಯಂ ತಯಾರಿಸಲು ಮೆದುವಾದ ಕಟ್ಟಿಗೆ, ಚರ್ಮ ಮತ್ತು ತಂತಿ ಬಳಸಿಕೊಂಡು ಸ್ವರ ಬರುವಂತೆ ತಯಾರಿಸುತ್ತಾರೆ. ತಬಲ ತಗಡಿನ ಡಬ್ಬ ಇಲ್ಲವೇ ಕಟ್ಟಿಗೆಯ ಡಬ್ಬಕ್ಕೆ ಮೇಕೆಯ ಚರ್ಮವನ್ನು ಉಪಯೋಗಿಸುವುದು. ಕಟ್ಟಿಗೆಯ ದಿಮ್ಮಿಯನ್ನು ಉಪಯೋಗಿಸಿ ಬಾರುಗಳ ಮೂಲಕ ನಿರ್ಮಿಸುವುದು ಇದನ್ನು ದುಂಡಾಗಿ ಲೇಪಿಸುತ್ತಾರೆ. ಇದರಿಂದ ಉತ್ತಮವಾದ ನಾದ ಬರುತ್ತದೆ.

ಆಲಂಕಾರಿಕ ಹೂವುಗಳ ತಯಾರಿಕೆ: ವಿವಿಧ ರೀತಿಯ ಹೂವುಗಳನ್ನು ತಯಾರಿಸಲು ಪ್ಲಾಸ್ಟಿಕ್ ಬಳಸಿಕೊಳ್ಳುತ್ತಾರೆ. ಇತರೆ ಪರಿಕರಗಳಾದ ಕಪ್ಪು, ಕೆಂಪು, ಹಸಿರು, ಬಿಳಿ ಬಣ್ಣಗಳು, ಕಬ್ಬಿಣ, ತಂತಿ, ಬಿದಿರು ಕಡ್ಡಿಗಳು, ಟೇಪನ್ನು ಬಳಸಿಕೊಂಡು ವೈವಿಧ್ಯಮಯ ಹೂವುಗಳನ್ನು ಅಲಂಕಾರವಾಗಿ ಕಾಣುವಂತೆ ತಯಾರಿಸುತ್ತಾರೆ. ಇವುಗಳನ್ನು ಟಿ.ವಿಗಳ ಮೇಲೆ ಟೇಬಲ್, ಮನೆಯ ಆಲಂಕಾರಿಕ ಕಪಾಟುಗಳಲ್ಲಿ ಅಂದವಾಗಿ ಕಾಣುವಂತೆ ಬಳಸಲಾಗುವುದು.

ಭಾವಚಿತ್ರಗಳಿಗೆ ಹಾಕುವ ಹಾರಗಳ ತಯಾರಿಕೆ: ಬಟ್ಟೆ, ಪ್ಲಾಸ್ಟಿಕ್, ತೆಳುವಾದ ತಂತಿ, ವಿವಿಧ ಬಗೆಯ ಮಣಿಗಳು, ಮುತ್ತುಗಳು, ದಾರ ಇತ್ಯಾದಿಗಳನ್ನು ಬಳಸಿಕೊಂಡು ವಿವಿಧ ಬಗೆಯ ಹಾರಗಳನ್ನು ತಯಾರಿಸುತ್ತಾರೆ. ಗಂಧದ ಮರದ ಸಿಪ್ಪೆ, ಮರದ ಕಾಯಿಗಳನ್ನು ತಂದು ಶ್ರೀಗಂಧದ ಹೂವಿನ ಹಾರ ತಯಾರಿಸುವರು. ಮುತ್ತಿನ ಸರ, ಪ್ಲಾಸ್ಟಿಕ್ ಹಾರಗಳು ಮತ್ತು ಹರಳುಗಳಿಂದ ಬಗೆ ಬಗೆಯ ಹಾರಗಳನ್ನು ತಯಾರಿಸುತ್ತಾರೆ. ಇವುಗಳಿಗೆ ಗಣೇಶನ ಹಬ್ಬ, ದಸರಾ ಹಾಗೂ ದೀಪಾವಳಿಯಲ್ಲಿ ವಿಶೇಷವಾಗಿ ಹೆಚ್ಚಿನ ಬೇಡಿಕೆಯಿರುತ್ತದೆ.

ಪೊರಕೆ ತಯಾರಿಕೆ: ಈಚಲು ಗರಿ ತಂದು, ಕಲ್ಲಿನ ಬಂಡೆ ಮೇಲೆ ಮುಳ್ಳು ಉದುರುವಂತೆ ಮಾಡುವರು. ಬಿಸಿಲಿನಲ್ಲಿ ಒಣಗಿಸಿ, ಒಂದರ ಮೇಲೊಂದರಂತೆ ದುಂಡಾಗಿ ಇಡಿಯಾಗಿ ಗರಿಯನ್ನು ಕಟ್ಟುವುದುಂಟು. ಇದು ಕಸ ಗುಡಿಸಲು ಅನುಕೂಲವಾಗಿರುತ್ತದೆ. ತೆಂಗಿನಗರಿ, ಕಾಡಿನ ಹುಲ್ಲುಗಳಿಂದಲೂ ಪೊರಕೆ ತಯಾರಿಸುತ್ತಾರೆ.

ಚಿಮಟ ತಯಾರಿಕೆ: ಮೆದುವಾದ ಕಬ್ಬಿಣ ಬಳಸಿಕೊಂಡು ಕುಲುಮೆಯಲ್ಲಿ ಬೆಂಕಿಯಿಂದ ಕಾಯಿಸಿಕೊಳ್ಳುವರು. ೩ ಇಂಚು ಉದ್ದ ಮತ್ತು ಸ್ವಲ್ಪ ಅಗಲ ಮುಂದೆ ಚೂಪಾಗಿ ಜೋಡಿಯಾಗಿ ಚಿಮಟಿಗೆ ತಯಾರಿಸುತ್ತಾರೆ. ಇದನ್ನು ಹಿಡಿದುಕೊಳ್ಳಲು ಮತ್ತು ಕಳೆದುಹೋಗದ ಹಾಗೆ ದಾರದ ಸಹಾಯಕ್ಕಾಗಿ ಒಂದು ರಂಧ್ರವನ್ನು ಮಾಡಿರುತ್ತಾರೆ.

ತಾಯತ: ಮೆದುವಾದ ತಾಮ್ರದ ತಗಡನ್ನು ತೆಗೆದುಕೊಂಡು, ಅದರ ಮೇಲೆ ಮಂತ್ರಗಳ ಅಕ್ಷರಗಳನ್ನು ಬರೆದು ಸುರುಳಿ ಸುತ್ತುತ್ತಾರೆ. ಅದರ ಮೇಲೆ ದಾರ ಪೋಣಿಸಲು ರಂಧ್ರ

ಮಾಡಿರುವುದುಂಟು. ಇದರ ಒಳಗಡೆ ಯಾವುದಾದರೂ ದೇವರ ಹೆಸರಿನ ವಿಭೂತಿ, ಬೂದಿ, ಕುಂಕುಮ, ಮಂತ್ರಗಳ ಚೀಟಿಯನ್ನು ಸೇರಿಸಿ ಪೂಜೆ ಮಾಡುತ್ತಾರೆ. ಯಾವುದೇ ಗ್ರಹಗಳ ತೊಂದರೆ ಬಾರದಂತೆ ನೋಡಿಕೊಳ್ಳಲು ಬಳಸುತ್ತಾರೆ.

ತೊಗಲುಗೊಂಬೆ ತಯಾರಿಕೆ: ತೊಗಲುಗೊಂಬೆ ಕಲೆ ಒಂದು ವಿಶಿಷ್ಟ ಜನಪದ ಕಲೆಯಾಗಿದೆ. ಇದಕ್ಕೆ ತಮಗೆ ಬೇಕಾದ ಗೊಂಬೆಗಳನ್ನು ಸ್ವತಃ ತಯಾರಿಸಿಕೊಳ್ಳುವರು. ಹಿಂದೆ ಜಿಂಕೆಯ ಚರ್ಮವನ್ನು ಉಪಯೋಗಿಸಿ ತಯಾರಿಸುತ್ತಿದ್ದರು. ಈಗ ಜಿಂಕೆಗಳು ಹೇರಳವಾಗಿ ದೊರೆಯದೆ ಇರುವುದರಿಂದ ಮೇಕೆಯ ಚರ್ಮ ತೆಗೆದುಕೊಂಡು ಬ್ಲೇಡಿನ ಸಹಾಯದಿಂದ ಕೂದಲು ತೆಗೆಯುವರು. ನೆರಳಿನಲ್ಲಿ ಒಣಗಿಸುವರು. ಸೋಡಿತ, ಬೆರ, ಮನಾಲ, ದಾಬನಾಸ್ ಆಯುಧಗಳಿಂದ ಯಾವ ಆಕಾರದ ಗೊಂಬೆ ಬೇಕೋ ಆ ಆಕಾರಗಳಲ್ಲಿ ಕತ್ತರಿಸುತ್ತಾರೆ. ಕತ್ತರಿಸಿದ ನಂತರ ಮುತ್ತುಗದ ಹೂವು, ಗೋರಂಟಿ, ಸುಣ್ಣ, ಕಾಚು ಉಪಯೋಗಿಸಿಕೊಂಡು ನೀರಿನಲ್ಲಿ ಮೂರು ದಿವಸ ನೆನೆಹಾಕುತ್ತಾರೆ. ಬೇವಿನ ಅಂಟನ್ನು ಸೇರಿಸಿ ಲೇಪಿಸಿದರೆ ಇದು ಕೆಂಪು ಬಣ್ಣವಾಗುತ್ತದೆ.

ತೆಂಗಿನ ಚಿಪ್ಪು, ಇದ್ದಿಲು ಉಪಯೋಗಿಸಿ ನೀರಿನಲ್ಲಿ ಮಿಶ್ರಣ ಮಾಡಿ ಅಂಟನ್ನು ಬೆರೆಸಿ ಲೇಪನ ಮಾಡಿದರೆ ಕಪ್ಪುಬಣ್ಣವಾಗುತ್ತದೆ. ಗೋರಂಟಿಯನ್ನು ಸುಣ್ಣ ಮತ್ತು ನಿಂಬೆ ಬೆರೆಸಿ ಲೇಪನ ಮಾಡಿದರೆ ಸಿಂಧೂರ ಬಣ್ಣ ಬರುತ್ತದೆ. ಹೀಗೆ ಯಾವ ರೀತಿಯ ಬಣ್ಣ ಬೇಕೊ ಆ ರೀತಿಯ ಬಣ್ಣಗಳನ್ನು ಸಂದರ್ಭಕ್ಕನುಸಾರವಾಗಿ ತಯಾರಿಸಿ ಲೇಪಿಸುತ್ತಾರೆ. ಬಣ್ಣ ಲೇಪಿಸಿದ ನಂತರ ನೆರಳಿನಲ್ಲಿ ಒಣಗಿಸಿದರೆ ಮುಗಿಯಿತು. ತೊಗಲುಗೊಂಬೆ ಸಿದ್ಧಗೊಂಡಂತೆ. ಈ ರೀತಿಯಾಗಿ ತಯಾರಿಸಿದ ಗೊಂಬೆಗಳು ನೋಡಲು ತುಂಬಾ ಆಕರ್ಷಕವಾಗಿ ಕಾಣಿಸುತ್ತವೆ. ವಿಶೇಷವೆಂದರೆ ಗೊಂಬೆಯು ಎರಡು ಕಡೆ ಬಣ್ಣಗಳಿಂದ ಕೂಡಿರುತ್ತದೆ. ಗೊಂಬೆಗಳನ್ನು ಆಡಿಸುವಾಗ ಎರಡು ಕಡೆಯಲ್ಲಿ ತೋರಿಸಬೇಕಾಗುತ್ತದೆ. ಹೀಗೆ ಸಮುದಾಯ ತಮ್ಮ ಕೌಶಲ್ಯತೆಯನ್ನು ಉಪಯೋಗಿಸಿ, ತಾಳ್ಮೆಯಿಂದ ತಯಾರಿಸಬಲ್ಲರು. ಇವರು ಪ್ಲಾಸ್ಟಿಕ್ ಗೊಂಬೆಗಳನ್ನು ಸಹ ಮಾಡುವುದುಂಟು. ಪ್ಲಾಸ್ಟಿಕ್ ಗೊಂಬೆ ಮಾಡಬೇಕಾದರೆ ಪ್ಲಾಸ್ಟಿಕ್‌ನಿಂದ ಗೊಂಬೆಗಳನ್ನು ಕತ್ತರಿಸಿ, ಬಣ್ಣ ಹಚ್ಚುವರು. ಹರಿದು ಹೋಗದಂತೆ ಮತ್ತು ಮಳೆ ಬಂದಾಗ ಹಾಳಾಗದಂತೆ ಇರುತ್ತದೆ ಎನ್ನುತ್ತಾರೆ.

ಬಂಡಿ ತಟ್ಟಿ: ಗ್ರಾಮೀಣ ಪ್ರದೇಶದಲ್ಲಿ ದವಸ ದಾನ್ಯ ಬೆಳೆಯುವ ಸಂದರ್ಭದಲ್ಲಿ ಬಂಡಿ ತಟ್ಟಿ ಹೆಚ್ಚು ಉಪಯೋಗಿಸುವುದುಂಟು. ಎತ್ತಿನ ಗಾಡಿಗಳಲ್ಲಿ ಉಪಯೋಗಿಸುತ್ತಾರೆ. ಅಲೆಮಾರಿಗಳು ಬಂಟಿ ತಟ್ಟಿಗಳನ್ನು ಕಲಾತ್ಮಕವಾಗಿ ಹೆಣೆಯುತ್ತಾರೆ. ತಯಾರಿಸಲು ಬಿದಿರು ಉಪಯೋಗಿಸುತ್ತಾರೆ. ಮಾರುಕಟ್ಟೆಯಲ್ಲಿ ಬಿದಿರು ತಂದು ಸೀಳಿಸಿ ತಟ್ಟಿಗಳ ರಚನೆ ಮಾಡುತ್ತಾ ಮೊಳೆ ಹೊಡೆಯಲಾಗುತ್ತದೆ. ೪ ಅಡಿ ಅಗಲ ೮ ಅಡಿ ಉದ್ದನೆಯ ತಟ್ಟಿ ತಯಾರಿಸುತ್ತಾರೆ. ಈಚಲು ಕಡ್ಡಿ ಬಳಸಿಕೊಂಡು ತಟ್ಟಿ ತಯಾರಿಸುವರು.

ಚಾಟಿ ಇತ್ಯಾದಿ: ಸಿಂಧೋಳ್ಳರು ಹಗ್ಗದಿಂದ ಹೆಣೆದು ಚಾಟಿ ಇತ್ಯಾದಿಗಳನ್ನು ತಯಾರಿಸುತ್ತಾರೆ. ಮೆದುವಾದ ಕಟ್ಟಿಗೆ ತೆಗೆದುಕೊಂಡು ಒಳಗಡೆ ಪೊಳ್ಳು ಮಾಡಿ ಕಬ್ಬಿಣದ ಮೂಲಕ ೧೨ ರಂಧ್ರ ಕೊರೆದು ಮೇಲೆ ಹಿತ್ತಾಳೆ ಅಣಸು ಹಾಕಿ ಹಿಂದೆ ಹಿತ್ತಾಳೆಯ ಬಟ್ಟಲು ಹಾಕಿ ಶಹನಾಯಿ ಸಿದ್ಧಗೊಳ್ಳಿಸುತ್ತಾರೆ.

ರುದ್ರಾಕ್ಷಿ ಸರ: ಅರಣ್ಯದಲ್ಲಿ ಗಿಜ್ಜರ್ ಪಟ್ಟು ಕಾಯಿ ಹೆಚ್ಚಾಗಿ ಸಿಗುತ್ತದೆ. ಆ ಕಾಯಿಗಳನ್ನು ದಾರದಲ್ಲಿ ಬಳಸಿ ಮಧ್ಯದಲ್ಲಿ ಓಂಕಾರ 'ೞ' ಎಂಬ ಅಕ್ಷರ ಬರೆದು ರಚಿಸುತ್ತಾರೆ. ಇದನ್ನು ಕೊರಳಲ್ಲಿ ಉಪಯೋಗಿಸುತ್ತಾರೆ.

ಅಲೆಮಾರಿಗಳ ಇತರೆ ದುಡಿಮೆ

ಬಕೆಟ್, ಕೊಡಗಳ ರೀಪೇರಿ

ಕುಟುಂಬದ ಆರ್ಥಿಕ ಮಟ್ಟವನ್ನು ಸುಧಾರಿಸಿಕೊಳ್ಳಲು ಅನೇಕ ದುಡಿಮೆಗಳಲ್ಲಿ ಇದು ಒಂದು. ಅಲೆಮಾರಿಗಳು ಬಕೆಟ್ ರಿಪೇರಿ ಕೆಲಸವನ್ನು ಮಾಡುತ್ತಾರೆ. ಪ್ಲಾಸ್ಟಿಕ್ ಕೊಡ ಮತ್ತು ಬಕೆಟ್ ರೀಪೇರಿ ಮಾಡಲು ಹಳ್ಳಿ ಹಳ್ಳಿಗೂ ಹೋಗುವುದುಂಟು. ಬಕೆಟ್ ರಿಪೇರಿ ಮಾಡುವ ಪರಿಕರಗಳೆಂದರೆ ಕಟ್ಟಿಗೆ ಅಥವಾ ಪ್ಲಾಸ್ಟಿಕ್ ಹಿಡಿಕೆಯುಳ್ಳ ಅಗಲವಾದ ಎರಡು ಕಬ್ಬಿಣದ ಪಟ್ಟಿಕೆಗಳು (L) ಎಲ್ ಆಕಾರದ ಒಂದು ಕಬ್ಬಿಣದ ಸಲಾಕೆ(ಇದು ಇಕ್ಕಟ್ಟಿನ ಸ್ಥಳಗಳಲ್ಲಿ ಬೆಸುಗೆ ಹಾಕಲು ಬಳಸುವರು). ಚಿಕ್ಕ ಚಿಕ್ಕ ರಂಧ್ರಗಳು, ಒಂದು ತಗಡಿನ ಡಬ್ಬಿ, ಇದಕ್ಕೆ ಒಂದು ತಂತಿಯ ಹಿಡಿಕೆಯನ್ನು ಹಾಕಿರುತ್ತಾರೆ. ತೇಪೆ ಹಾಕಲು ಬಳಸುವ ಸಾಧನೆಗಳನ್ನು ಬಿಸಿ ಮಾಡಲು ಇದ್ದಿಲು, ಬೆಂಕಿ ಮಾಡಲು ಊದಲು ಬೇಕಾಗುವ ಒಂದು ಊದುಗೊಳವಿ, ಶೇವ್ ಮಾಡಿ ಬಿಟ್ಟ ಹಳೆ ಬ್ಲೇಡ್ ಮತ್ತು ತೇಪೆ ಹಾಕಲು ಪ್ಲಾಸ್ಟಿಕ್ ತುಂಡುಗಳು ಬೇಕಾಗುತ್ತದೆ. ಬಕೆಟ್ ರಿಪೇರಿ ಮಾಡುವ ಪರಿಕರಗಳಿಗೆ ಹೆಚ್ಚಿನ ಬಂಡವಾಳದ ಅವಶ್ಯಕತೆಯೂ ಇಲ್ಲ. ಹೆಚ್ಚೆಂದರೆ ೬೦-೭೦ ರೂಪಾಯಿಗಳಿಗೆ ಈ ಎಲ್ಲಾ ಪರಿಕರಗಳು ದೊರಕುತ್ತವೆ. ವಿವಿಧ ರೀತಿಯ ಗುಣಮಟ್ಟದ ಪ್ಲಾಸ್ಟಿಕ್ ವಸ್ತುಗಳನ್ನು ರಿಪೇರಿ ಮಾಡಬೇಕಾದ ಸಂದರ್ಭದಲ್ಲಿ ರಿಪೇರಿ ಮಾಡುವವನಿಗೆ ಇದರಲ್ಲಿ ಹೆಚ್ಚಿನ ಬುದ್ಧಿವಂತಿಕೆ ಇರುತ್ತದೆ. ಈ ಉದ್ಯೋಗ ಉತ್ತಮ ಬದುಕು ಕಟ್ಟಿಕೊಡದಿದ್ದರೂ ಆರ್ಥಿಕ ಚಟುವಟಿಕೆಯಲ್ಲಿ ಸಹಾಯಕವಾಗಿದೆ.

ಪ್ಲಾಸ್ಟಿಕ್ ಕೊಡಗಳ ಮಾರಾಟ

ಯಾದಗಿರಿ ನಗರ ಪ್ರದೇಶದಲ್ಲಿ ಗಂಜ್ ಹಿಂದುಗಡೆ ಅಲೆಮಾರಿಯ ಯುವಕ ಅಂಜನಪ್ಪ ಪ್ಲಾಸ್ಟಿಕ್ ಕೊಡಗಳ ತಯಾರಿಕೆಯ ಕಾರ್ಖಾನೆ ಹಾಕಿದ್ದು ಅದರಲ್ಲಿ ಅನೇಕ ಅಲೆಮಾರಿಗಳು ಕೆಲಸ ಮಾಡುವುದರ ಮೂಲಕ ಆದಾಯವನ್ನು ಪಡೆದುಕೊಳ್ಳುತ್ತಾರೆ. ಬೆಳಗಾದರೆ ಸಾಕು, ಸ್ತ್ರೀ-ಪುರುಷರು

ಗಾಡಿಗಳ ಮೇಲೆ ಕೊಡಗಳನ್ನು ಇಟ್ಟುಕೊಂಡು ಹಳ್ಳಿಗೆ ಹೋಗಿ ಮಾರಾಟ ಮಾಡಿಕೊಂಡು ಬರುವ ಅಲೆಮಾರಿಗಳನ್ನು ನಾವು ನೋಡಬಹುದಾಗಿದೆ. ಇದು ಅವರ ಆಧುನಿಕ ರೀತಿಯಿಂದ ಕೂಡಿದ ಒಂದು ದುಡಿಮೆ ಎಂದರೆ ತಪ್ಪಾಗಲಾರದು. ಇಷ್ಟೆಲ್ಲಾ ಇದ್ದರೂ ಈ ಅಲೆಮಾರಿಗಳ ಆರ್ಥಿಕ ಸ್ಥಿತಿ ತುಂಬಾ ಕೆಳಮಟ್ಟದಲ್ಲಿರುವುದು ಕಂಡುಬರುತ್ತದೆ. ಒಂದೊತ್ತಿನ ಊಟಕ್ಕಾಗಿ ಪರದಾಡು ವಂತಹ ಸ್ಥಿತಿ ಇವರದಾಗಿದೆ. ಒಂದು ದಿನ ಭಿಕ್ಷಾಟನೆ ಅಥವಾ ದುಡಿಯಲು ಹೋಗಲಿಲ್ಲವೆಂದರೆ ಅಂದು ಉಪವಾಸವೇ ಗತಿ. ಕೆಲವು ಕುಟುಂಬಗಳಲ್ಲಿ ಒಬ್ಬರಿಗಿಂತ ಹೆಚ್ಚು ಜನ ದುಡಿಯುವವರಿದ್ದರೂ ಆರ್ಥಿಕ ಮಟ್ಟ ಸುಧಾರಿಸಿಲ್ಲ. ಯಾವುದಾದರೂ ವ್ಯಾಪಾರ ಮಾಡಲು ಬಂಡವಾಳದ ಕೊರತೆ ಎದ್ದು ಕಾಣುತ್ತದೆ. ಅಲೆಮಾರಿಗಳಾಗಿರುವುದರಿಂದ ಇವರಿಗೆ ಯಾರೂ ಆರ್ಥಿಕ ಭದ್ರತೆಯನ್ನು ನೀಡಲು ಮುಂದಾಗುತ್ತಿಲ್ಲ. ಇವರ ದುಡಿಮೆಗೆ ಸರಿಯಾದ ಪ್ರತಿಫಲ ಸಿಗದ ಕಾರಣ ಇನ್ನೂ ಶೋಷಣೆಯ ಹಂತದಲ್ಲಿರುವುದರಿಂದ ಇವರ ಜೀವನಮಟ್ಟ ಸುಧಾರಿಸಲು ಸಾಧ್ಯವಾಗುತ್ತಿಲ್ಲ. ಕೆಲವೊಂದು ಪ್ರದೇಶಗಳಲ್ಲಿ ಅವರ ಬುದ್ಧಿಶಕ್ತಿಗನುಗುಣವಾಗಿ ದುಡಿದು, ದುಂದುವೆಚ್ಚ ಮಾಡದೆ ಆರ್ಥಿಕ ಮಟ್ಟವನ್ನು ಉತ್ತಮಪಡಿಸಿಕೊಂಡಿದ್ದಾರೆ. ಯಾದಗಿರಿ ಜಿಲ್ಲೆಯ ಅಲೆಮಾರಿಗಳ ಬದುಕು ತುಂಬಾ ಕಷ್ಟದಲ್ಲಿದೆ. ಶಿಕ್ಷಣದಿಂದ ವಂಚಿತವಾದ ಸಮುದಾಯಗಳು ಆಧುನಿಕ ಸಮಾಜದಲ್ಲಿ ತುಂಬಾ ತೊಂದರೆಯನ್ನು ಅನುಭವಿಸುತ್ತಿವೆ. ಅಲೆಮಾರಿಗಳ ಬದುಕು ನಿರಂತರವಾಗಿ ಅತಂತ್ರ ಸ್ಥಿತಿಯಲ್ಲಿದೆ. ಆದಕಾರಣ ಸರಿಯಾದ ಸೌಲಭ್ಯಗಳನ್ನು ನೀಡುವುದು ಸರ್ಕಾರದ ಕರ್ತವ್ಯವಾಗಿದೆ. ಇವರನ್ನು ಸಮಾಜದ ಮುಖ್ಯ ವಾಹಿನಿಗೆ ತರುವ ಜವಾಬ್ದಾರಿ ಸರಕಾರದ್ದು ಮತ್ತು ಪ್ರಜಾ ಪ್ರತಿನಿಧಿಗಳದ್ದಾಗಿದೆ. ಪ್ರಮುಖ ಜವಾಬ್ದಾರಿಯಾಗಿದೆ.

ಮೀನುಗಾರಿಕೆಯಿಂದ ದುಡಿಮೆ

ಉತ್ತಮ ಬೇಟೆಗಾರರಾದ ಅಲೆಮಾರಿಗಳು ಮೀನು ಹಿಡಿಯುವ ಕೆಲಸವನ್ನು ಚೆನ್ನಾಗಿ ನಿಭಾಯಿಸಬಲ್ಲರು. ಕೆರೆಯ ಅಕ್ಕಪಕ್ಕದ ಪ್ರದೇಶಗಳಲ್ಲಿ ವಾಸಿಸುವ ಅಲೆಮಾರಿಗಳೆಲ್ಲರೂ ಮೀನು ಶಿಕಾರಿಯನ್ನು ಚೆನ್ನಾಗಿ ಹಿಡಿಯಬಲ್ಲರು. ಕೆರೆ, ಕಾಲುವೆ ಇನ್ನಿತರ ಪ್ರದೇಶಗಳಲ್ಲಿ ಮೀನುಗಾರಿಕೆ ಇಲಾಖೆಯಲ್ಲಿ ಅನುಮತಿ ಪಡೆದುಕೊಳ್ಳುವರು. ಮೀನುಗಾರರ ಸಂಘದ ಅಡಿಯಲ್ಲಿ ಮೀನು ಹಿಡಿದುಕೊಡುವ ದುಡಿಮೆಗೆ ಸೇರಿಕೊಳ್ಳುತ್ತಾರೆ. ಒಂದು ಕೆ.ಜಿ. ಮೀನು ಹಿಡಿದರೆ ಇಂತಿಷ್ಟು ಸಂಭಾವನೆ ಎಂಬ ಕರಾರಿನ ಮೇಲೆ ಮೀನು ಹಿಡಿಯುವರು. ಸಾಮಾನ್ಯವಾಗಿ ಒಂದು ಕೆ.ಜಿ. ಮೀನು ಹಿಡಿದರೆ ೭೫ರಿಂದ ೧೦೦ ರೂಪಾಯಿ ಸಂಭಾವನೆ ಕೊಡುತ್ತಾರೆ. ಹೀಗೆ ಕನಿಷ್ಠ ದಿನದಲ್ಲಿ ೪೦೦ ರಿಂದ ೫೦೦ ರೂಪಾಯಿಗಳವರೆಗೆ ದುಡಿಯುತ್ತಾರೆ. ಕೆಲವು ಪ್ರದೇಶಗಳಲ್ಲಿ ಕೆರೆ, ಹಳ್ಳಗಳ ಪ್ರದೇಶಗಳಲ್ಲಿ ತಾವೇ ಸ್ವತಂತ್ರವಾಗಿ ಮೀನು ಹಿಡಿದು ಊರಲ್ಲಿ ವ್ಯಾಪಾರ ಮಾಡುತ್ತಾರೆ. ಸಾಮಾನ್ಯವಾಗಿ ಪುರುಷರು ಮೀನು ಹಿಡಿದು ತಂದರೆ ಸ್ತ್ರೀಯರು ಮಾರಾಟ ಮಾಡಿ ಹಣ ಸಂಗ್ರಹಿಸುತ್ತಾರೆ.

ಪ್ರಾಣಿ-ಪಕ್ಷಿಗಳಿಂದ ಆದಾಯ

ಅಲೆಮಾರಿಗಳು ಪ್ರಾಣಿ-ಪಕ್ಷಿಗಳನ್ನು ವೃತ್ತಿಗಳಲ್ಲಿ ಬಳಸಿಕೊಂಡು ಆದಾಯ ತರಬಲ್ಲ ಸಾಧನವನ್ನಾಗಿ ಮಾಡಿಕೊಂಡಿದ್ದಾರೆ. ಇವುಗಳನ್ನು ಮಾರಾಟ ಮಾಡುವಲ್ಲಿ ಬಳಸಿಕೊಂಡು ಆದಾಯವನ್ನಾಗಿ ಮಾಡಿಕೊಳ್ಳುತ್ತಾರೆ. ಪ್ರಾಣಿ-ಪಕ್ಷಿಗಳು ನೇರವಾಗಿ ಮತ್ತು ಪರೋಕ್ಷವಾಗಿ ಆದಾಯವನ್ನು ಗಳಿಸುವ ಸಾಧನವಾಗಿವೆ.

ಅಲೆಮಾರಿ ಸಮುದಾಯಗಳು ಪ್ರಾಣಿ-ಪಕ್ಷಿಗಳನ್ನು ಸಾಕಿಕೊಂಡಿರುವುದರಿಂದ ಬದುಕಿಗೆ ಆಸರೆಯಾಗಿವೆ. ತುರ್ತು ಪರಿಸ್ಥಿತಿಗಳಲ್ಲಿ ಕೆಲವು ಪ್ರಾಣಿ ಪಕ್ಷಿಗಳನ್ನು ಮಾರಾಟ ಮಾಡುತ್ತಾರೆ. ಪ್ರದರ್ಶನ ಕಲೆಯಲ್ಲಿ ಇವುಗಳ ಪಾತ್ರ ಅಮೋಘವಾದುದು. ಸಾಮಾನ್ಯವಾಗಿ ಪ್ರಾಣಿ-ಪಕ್ಷಿಗಳು, ನೀರು-ಮೇವು ಸೀಗುವ ಸ್ಥಳದಲ್ಲಿ ಅಲೆಮಾರಿಗಳು ಬಿಡಾರ ನಿರ್ಮಾಣಗೊಳಿಸುತ್ತಾರೆ. ಕೃಷಿ ಭೂಮಾಲೀಕರಿಂದ ಕಣದಲ್ಲಿರುವ ಮೇವನ್ನು ಪ್ರಾಣಿಗಳಿಗೆ ಬೇಡಿಕೊಂಡು ತರುತ್ತಾರೆ. ಸ್ತ್ರೀಯರು, ಮಕ್ಕಳು, ವೃದ್ಧರು ಬಿಡಾರದಿಂದ ಹೊರಬಂದು ಪ್ರಾಣಿಗಳನ್ನು ಹೊರವಲಯದಲ್ಲಿ ಮೇಯಿಸುವುದುಂಟು. ಹೆಳವ ಸಮುದಾಯವು ಮೇವು ಮತ್ತು ನೀರು ಇದ್ದಲ್ಲಿ ನೆಲೆಸುತ್ತಾರೆ. ಕೆಲವು ಪ್ರದೇಶಗಳಲ್ಲಿ ಕುರಿಗಳನ್ನು ಹೊಲ-ಗದ್ದೆಗಳಲ್ಲಿ ತಂಗಿಸುತ್ತಾರೆ. ಇದರಿಂದ ಹೊಲ-ಗದ್ದೆಗಳಿಗೆ ಗೊಬ್ಬರದ ಉಪಯೋಗ ವಾಗುತ್ತದೆ. ಪ್ರತಿಯಾಗಿ ಹೊಲಗದ್ದೆಗಳ ಮಾಲೀಕರು ಜೋಳ ಅಥವಾ ಹಣ ಕೊಡುತ್ತಾರೆ. ಈಗ ಪ್ರಾಣಿಗಳ ಸಾಕುವಿಕೆಯನ್ನು ಬಿಟ್ಟು ಬಿಟ್ಟಿದ್ದಾರೆ.

೪.೫. ಧಾರ್ಮಿಕ ಭಿಕ್ಷಾಟನೆ

ಬಿಡಾರದಲ್ಲಿ ವೇಷಭೂಷಣ ಸಮೇತ ತಯಾರಾಗಿ ಕೈಯಲ್ಲಿ ಚಾಟಿ ಹಿಡಿದುಕೊಂಡು ನಗರ ಮತ್ತು ಗ್ರಾಮಗಳ ಬೀದಿಯಲ್ಲಿ, ಸಂತೆಯ ಪ್ರಮುಖ ಜನಸಂದಣಿಯ ಸ್ಥಳಗಳಲ್ಲಿ ನಿಂತು ಉರುಮೆಯ ನಾದಕ್ಕೆ ನರ್ತಿಸುತ್ತಾ, ಆರ್ಭಟಿಸುತ್ತಾ, ಚಾಟಿಯಿಂದ ಮೈಮೇಲೆ ಹೊಡೆದುಕೊಂಡು ಚಾಕುವಿನಿಂದ ರಕ್ತ ಬರುವಂತೆ ಕೊಯ್ದುಕೊಂಡು ಧಾರ್ಮಿಕ ಭಿಕ್ಷೆ ಬೇಡುತ್ತಾರೆ. ಹೆಂಡತಿಯು ದೇವತೆಯ ಗುಣಗಾನ ಮಾಡಿ ಕಾಣಿಕೆ ಕೊಟ್ಟವರಿಗೆ ಒಳ್ಳೆಯದಾಗಲಿ ಎಂದು ಹೇಳುತ್ತಾ ಹಾರೈಸುತ್ತಾಳೆ. ತಲತಲಾಂತರದಿಂದಲೂ ಆರಾಧನೆ ಮಾಡಿಕೊಂಡು ಇದನ್ನು ಆದಾಯದ ಮೂಲವನ್ನಾಗಿ ಮಾಡಿಕೊಂಡು ಬಂದಿದ್ದಾರೆ. ಹೆಚ್ಚಿನ ಕಾಣಿಕೆ ಪಡೆಯಲು ಯಾರು ಯಾವಾವ ವಸ್ತುವನ್ನು ದಾನವಾಗಿ ಕೊಟ್ಟಿದ್ದಾರೆಂದು ಹೇಳುವ ಮೂಲಕ ಭಿಕ್ಷೆಗೆ ಪ್ರೋತ್ಸಾಹಿಸುವರು ಉದಾಹರಣೆಗೆ "ಮಲ್ಲಪ್ಪದಣಿ ಬೆಳ್ಳಿ ಕುಡುಗೋಲು ಮಾಡಿಸಿ ಕೊಟ್ಟಾನ" ಎಂದು ಆ ಕಾಣಿಕೆಯನ್ನು ರಾಗದಿಂದ ಹೇಳುತ್ತಾನೆ. ಆ ರಾಗಕ್ಕೆ ಪ್ರತಿಯಾಗಿ ಉರುಮೆ ಬಾರಿಸುತ್ತಾ 'ತಾನ ತಂದನಾ' ಎನ್ನುವ ಪ್ರತಿರಾಗ ಹೇಳುವಳು. ಇದನ್ನು ಕೇಳಿದ ಜನರು ಒಡವೆಗಳನ್ನು ದೇವಿಗೆ ಅರ್ಪಿಸುವರು. ಅರ್ಪಿಸಿದರೆ ಬಂದಿರುವ ದೋಷಗಳು ದೂರವಾಗುತ್ತವೆಂದು, ಜನರು ಒಡವೆ ಮಾಡಿಸಿಕೊಡುತ್ತಾರೆ. ಇವು

ಗ್ರಾಮ ಪ್ರದೇಶದಲ್ಲಿ ಮಾತ್ರ ಸಾಧ್ಯವೇ ಹೊರತು ನಗರಗಳಲ್ಲಿ ನಡೆಯುವುದಿಲ್ಲ. ಇತ್ತೀಚೆಗೆ ಗ್ರಾಮದಲ್ಲಿ ಕಡಿಮೆಯಾಗುತ್ತದೆ. ಕೇವಲ ಅಲ್ಪಸ್ವಲ್ಪ ದವಸಧಾನ್ಯಗಳನ್ನು ಹಳೆಯ ಬಟ್ಟೆಗಳನ್ನು ಕೊಡುತ್ತಾರೆ. ಕೇವಲ ೨-೩ ರೂಪಾಯಿಗಳಿಗೆ ತಮ್ಮ ದೇಹದಲ್ಲಿರುವ ಅಮೂಲ್ಯವಾದ ರಕ್ತವನ್ನೇ ಸುರಿಸುತ್ತಾರೆ. ನಗರ ಪ್ರದೇಶದ ಸಂತೆಗಳಲ್ಲಿ ಊರಿನ ಜಾತ್ರೆಗಳಲ್ಲಿ ಈ ರೀತಿ ಪ್ರದರ್ಶನ ಮಾಡಿ ಭಿಕ್ಷೆ ಪಡೆಯುವರು. ಇತ್ತೀಚೆಗೆ ಇದು ಕಡಿಮೆಯಾಗಿದೆಯಾದರೂ ಯಾದಗಿರಿಯಲ್ಲಿ ಪ್ರತಿ ಮಂಗಳವಾರ ಈ ಪ್ರದರ್ಶನ ನಡೆಯುತ್ತದೆ.

ಅಲೆಮಾರಿ ಸಮುದಾಯಗಳ ಭಾವನೆಯಲ್ಲಿ ಸಮಸ್ತ ಚಟುವಟಿಕೆಗಳಿಗೆ ಅತಿಮುಖ್ಯ ಶಕ್ತಿ ಎಂದರೆ ದೈವೀಶಕ್ತಿ. ದೈವೀಶಕ್ತಿಯೊಂದಿಗೆ ತಮ್ಮ ಬದುಕನ್ನು ಬೆಸೆದುಕೊಂಡಿದ್ದಾರೆ. ದೈವೀಶಕ್ತಿಯು ಮಾನಸಿಕ ಸ್ವಾಸ್ಥ ಮತ್ತು ನೆಮ್ಮದಿಯನ್ನು ಕೊಡುವುದು. ದೈವಿಶಕ್ತಿ ಮಾನವಶಕ್ತಿಗಿಂತ ಆಗಾಧ ಶಕ್ತಿ ಎಂತಲೂ ಇದು ಕಣ್ಣಿಗೆ ಕಾಣದೆಯೇ ಕೆಲಸ ಮಾಡುತ್ತದೆಂದು ನಂಬಲಾಗಿದೆ. ಇದರ ಪ್ರಯೋಜನ ಪಡೆಯಲು ಮುಂದಾಗಿ ದೈವೀಶಕ್ತಿಯನ್ನು ಸಂತೋಷಪಡಿಸಲು ಜಪ, ತಪ, ಹರಕೆ, ಬಲಿ, ದಾನಗಳು ಇತ್ಯಾದಿಗಳನ್ನು ಮಾಡಿಕೊಂಡು ಬರಲಾಗಿದೆ. ಬಹುನಿಷ್ಠೆಯಿಂದ ನಡೆದುಕೊಂಡು ಅಪಮಾನವಾಗದಂತೆ ವ್ಯವಸ್ಥಿತವಾಗಿ ಆರಾಧನೆ ಮಾಡಿಕೊಂಡು ಬಂದಿದ್ದಾರೆ. ಬದುಕು ಕಂಡುಕೊಂಡ ಸಮುದಾಯಗಳಲ್ಲಿ ಗೌರವ ಮತ್ತು ಅಂತಸ್ತುಗಳನ್ನು ಕೆಲವರು ಗುರುತಿಸಿಕೊಂಡರೆ ಇದೇ ವೃತ್ತಿಯನ್ನು ಅವಲಂಬಿಸಿದ ಕೆಲವು ಸಮುದಾಯಗಳು ಕಳಪೆಮಟ್ಟದ ಜೀವನ ಸಾಗಿಸಿ ನಿಕೃಷ್ಟವಾಗಿ ಬಾಳುತ್ತಿವೆ.

ಧಾರ್ಮಿಕ ವೃತ್ತಿಯನ್ನು ಕೈಗೊಂಡು ಒಂದೊತ್ತಿನ ಊಟಕ್ಕಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶದಲ್ಲಿ ದೇವರನ್ನು ತಲೆಯ ಮೇಲೆ ಹೊತ್ತುಕೊಂಡು ಹೋಗಿ ದೈವೀ ಸ್ವರೂಪವನ್ನು ಬಿತ್ತರಿಸುವ ಸಮುದಾಯಗಳು ನಮ್ಮಲ್ಲಿವೆ. ಈ ಸಮುದಾಯಗಳೇ ಅಲೆಮಾರಿಗಳು.

ಹಿಂದೆ ರಾಜ ಮಹಾರಾಜರು ಕಟ್ಟಿಸಿದ ಕೋಟೆಗಳಿಗೆ ರಕ್ಷಣೆ ಒದಗಿಸಲು ದೇವತೆ ಬೇಕಾಯಿತು. ದೇವತೆಯ ಆರಾಧನೆ ಮಾಡಲು ಒಂದು ಸಮುದಾಯವನ್ನು ನೇಮಕ ಮಾಡಲಾಯಿತು. ಆ ಸಮುದಾಯ ದೇವಿಯ ಆರಾಧನೆ ಮಾಡುತ್ತಾ, ಗುಣಗಾನ ಮಾಡುತ್ತಾ ಇರುತ್ತಿದ್ದರು. ಇದರ ಪ್ರತಿಫಲವಾಗಿ ಜನರಿಂದ ದವಸದಾನ್ಯದ ರೂಪದಲ್ಲಿ ಆಹಾರ ದೊರೆಯುತ್ತಿತ್ತು. ಇದರಿಂದ ಆ ಸಮುದಾಯ ಬದುಕನ್ನು ನಡೆಸುತ್ತಿತ್ತು. ಕಾಲಗತಿ ಬದಲಾದಂತೆ ರಾಜರ ಆಡಳಿತ ಕೊನೆಗೊಂಡ ಮೇಲೆ ಬದುಕು ಅತಂತ್ರವಾಗಿ ನಂಬಿದ ದೇವರನ್ನೇ ನಂಬಿಕೊಂಡು ಬದುಕಿಗಾಗಿ ಪರಿತಪಿಸುತ್ತಾ, ಬೀದಿಯಲ್ಲಿ ದೇವರನ್ನು ಇರಿಸಿ ಗುಣಗಾನ ಮಾಡುತ್ತಾ, ವೇಷಗಳನ್ನು ಹಾಕಿ, ನರ್ತನಗಳನ್ನು ಮಾಡುತ್ತಾ ಸಮಾಜದ ಜನಸ್ತೋಮಕ್ಕೆ ಯಾವುದೇ ರೀತಿಯ ಕ್ಷಾಮಗಳು, ಬರಗಾಲಗಳು ಕಷ್ಟಗಳನ್ನು ನೀಡದಂತೆ ರಕ್ಷಿಸು. ಎಲ್ಲರೂ ಕ್ಷೇಮವಾಗಿರುವಂತೆ ಕಾಪಾಡು ಎನ್ನುತ್ತಾ ದೇವರನ್ನು ಹೊತ್ತು

ಊರು ಕೇರಿಗಳನ್ನು ತಿರುಗಾಡಿ, ಊರಿನ ಕ್ಷೇಮವನ್ನು ಕಾಯುವಂತೆ ದೇವರಲ್ಲಿ ಪ್ರಾರ್ಥಿಸಿಕೊಳ್ಳುತ್ತಾರೆ. ಭಕ್ತರು ನೀಡುವ ಭಿಕ್ಷೆಯನ್ನು ದಾನವಾಗಿ ಪಡೆಯುತ್ತಾ, ಕಾಯಕವನ್ನು ಮುಂದುವರಿಸಿದರು. ಅಲೆಮಾರಿಗಳು ಈ ಉದ್ಯೋಗವನ್ನು ಬಂಡವಾಳವಿಲ್ಲದೆ ಮಾಡಬಹುದು. ಇದರಿಂದ ಕುಟುಂಬ ಜೀವನ ಸಾಗಿಸುತ್ತಿರುವುದರಿಂದ ಇದೇ ಕಾಯಕವನ್ನು ತಮ್ಮ ಪ್ರಧಾನ ವೃತ್ತಿಯನ್ನಾಗಿ ಮಾಡಿಕೊಂಡು ಬದುಕು ಕಳೆಯಲಾರಂಭಿಸಿದರು.

ಜಾತಿ ಶ್ರೇಣೀಕರಣದ ತುದಿಯ ಸಮುದಾಯ ಕೈಗೊಳ್ಳುವ ಧಾರ್ಮಿಕ ವೃತ್ತಿಗೂ ಅಲೆಮಾರಿ ಸಮುದಾಯದ ಧಾರ್ಮಿಕ ವೃತ್ತಿಗೂ ತುಂಬಾ ವ್ಯತ್ಯಾಸವಿದೆ. ಉದ್ದೇಶ ಒಂದೇ ಆದರೂ ಕ್ರಿಯೆಗಳು ಮಾತ್ರ ಬೇರೆ ಬೇರೆಯಾಗಿದ್ದು ಸ್ಥಾನಮಾನಗಳು ಬೇರೆ ಬೇರೆಯಾಗಿವೆ. ಸಿಂಧೋಳ್ಳು ಪೋತರಾಜನ ವೇಷ ಧರಿಸಿಕೊಂಡು ಚಾಟಿಯಿಂದ ಮೈಮೇಲೆ ರಕ್ತ ಬರುವಂತೆ ಹೊಡೆದುಕೊಂಡು ಭಿಕ್ಷೆ ಬೇಡುತ್ತಾರೆ.

ಹೀಗೆ ಈ ಸಮುದಾಯದ ಸ್ತ್ರೀ-ಪುರುಷರಿಬ್ಬರು ಕೂಡಿಕೊಂಡು ಭಿಕ್ಷಾವೃತ್ತಿಯನ್ನು ಮಾಡುತ್ತಾರೆ. ಅಂದಿನ ಅನ್ನವನ್ನು ಅಂದೇ ಸಂಪಾದಿಸುವರು. ಸಂಪಾದನೆಯಲ್ಲಿ ಇಬ್ಬರ ಪಾತ್ರವೂ ಅವಶ್ಯಕವಿದೆ. ವೃತ್ತಿಗೆ ಇಬ್ಬರ ಅನಿವಾರ್ಯತೆಯೂ ಇದೆ. ಒಮ್ಮೊಮ್ಮೆ ಬಿಡಾರದಲ್ಲಿ ಕ್ಷುಲ್ಲಕ ಕಾರಣದಿಂದ ಜಗಳವಾಡಿ ಮಾತು ಬಿಟ್ಟಾಗ ಆ ಸಂದರ್ಭದಲ್ಲಿ ಮೌನ ಆವರಿಸಿದರು. ಪಾತ್ರ ನಿರ್ವಹಣೆ ಸಂದರ್ಭದಲ್ಲಿ ಒಂದಾಗುತ್ತಾರೆ. ಎಂದಿನಂತೆಯೇ ಸಂಬಂಧಗಳು ಮುಂದುವರಿಯುತ್ತವೆ. ಆ ಕ್ಷಣದಲ್ಲಿ ಬಾಹ್ಯವಾಗಿ ಅವರ ಹೊಂದಾಣಿಕೆಯನ್ನು ಕಾಣದಿದ್ದರೂ, ಅಂತರಂಗದಲ್ಲಿ ಒಂದಾಗಿರುತ್ತಾರೆ. ಇದನ್ನು ಆ ಸಮುದಾಯದ ಸದಸ್ಯರೇ ಹೇಳುತ್ತಾರೆ. ಹೀಗಾಗದಿದ್ದರೆ, ನಾವು ಬದುಕಲು ಸಾಧ್ಯವಿಲ್ಲ. ಆದ್ದರಿಂದ ನಮ್ಮ ಜಗಳವೇನಿದ್ದರೂ ಉಂಡು ಮಲಗುವ ತನಕ ಮಾತ್ರ ಎನ್ನುತ್ತಾರೆ.

"ಅಲೆಮಾರಿಗಳು ಕೂಲಿ ಮಾಡುವುದಿಲ್ಲ. ಹಿಂದೆ ಇವರು ಬೇರೆ ಬೇರೆ ಕಾರಣಕ್ಕೆ ಧಾರ್ಮಿಕವಾಗಿ-ಸಾಂಸ್ಕೃತಿಕವಾಗಿ ಗೌರವಿಸಲ್ಪಟ್ಟವರು. ಈಗ ಆ ಇತಿಹಾಸ ಮುಗಿದು ಹೋಗಿದೆ. ಆದ್ದರಿಂದಲೇ ಇವರಲ್ಲಿ ಸಂಪತ್ತು ನಿರ್ದೇಶಕ ಯಾವ ಆಶಯಗಳು ಇಲ್ಲ, ಇವರಲ್ಲಿ ೧. ಜಾತಿ ಇಲ್ಲ, ೨. ಮತ, ಧರ್ಮ, ಮಠ ಇಲ್ಲ, ೩. ಸಂಪತ್ತು(ಬೆಳ್ಳಿ ಚೂರು ಬಿಟ್ಟರೆ) ಇಲ್ಲ".[೮]

೪. ಕೂಡಿಡುವ ಮನೋಧರ್ಮ ಇಲ್ಲ, ೫. ಇವರ ಕೆಲಸ-ಉತ್ಪಾದಕತೆ ಅಲ್ಲ, ೬. ಸ್ಥಿರ ಉದ್ಯೋಗ-ವೃತ್ತಿ ಇಲ್ಲ, ೭. ಅಭದ್ರತೆ ಇದೆ(ಉದಾ: ಬಾಲ್ಯ ವಿವಾಹ), ೮. ಉದ್ಯಮಶೀಲತೆ ಇಲ್ಲ, ೯. ಪಾನಭೋಗ ಇದೆ, ೧೦. ಪೈಪೋಟಿ ಇಲ್ಲ.

ಇವರು ನಗಣ್ಯರು, ಅನಾಥರು, ಅನುತ್ಪಾದಕರು, ಅಸಂಘಟಿತರು, ಅನ್ಯಭಾಷಿಕರು ಆಗಿ ದೂರ ಸರಿಯುವುದು ಸಹಜ ಸದ್ಯದ ಪರಿಸ್ಥಿತಿಯಲ್ಲಿ ಅಲೆಮಾರಿಗಳ ಆರ್ಥಿಕ ನಿಲುವು

ಯಾವುದಾಗಿರಬಹುದು. ತಮ್ಮ ಯಾವುದೇ ಆರ್ಥಿಕ ಚಟುವಟಿಕೆ, ಉತ್ಪತ್ತಿ ಮತ್ತು ಉಳಿತಾಯವನ್ನು ಅವಲಂಬಿಸಿದೆ. ಅಲೆಮಾರಿಗಳಲ್ಲಿ ಉತ್ಪತ್ತಿ ಎಂಬುದಿಲ್ಲ. ಇದನ್ನು ಈ ಹಿಂದೆಯೇ ಕಂಡುಕೊಂಡಿದ್ದೇವೆ. ಬೇರೆಯವರ ಉತ್ಪತ್ತಿಯನ್ನು ಭಿಕ್ಷೆಯ ಮೂಲಕ ಅಲೆಮಾರಿಗಳು ಪಡೆದುಕೊಳ್ಳುತ್ತಾರೆ. ಭಿಕ್ಷೆ ಸಿಗದಿದ್ದಾಗ ಕೆಲವು ಅಲೆಮಾರಿಗಳು ಮೀನಿನ ಬೇಟೆ ಆಡುತ್ತಾರೆ. ಶಾಸ್ತ್ರ ಶಕುನ ಹೇಳುತ್ತಾರೆ.

ಇವರು ಯಾವುದೇ ಶಾಸ್ತ್ರವಾಗಲೀ, ಶಕುನವಾಗಲೀ, ಸಾಂಸ್ಕೃತಿಕ ಆಟವಾಗಲೀ ಈ ಯಾವುದನ್ನೇ ನಡೆಸಿದರೂ ಜನ ಇಂತವರನ್ನು ಗಂಭೀರವಾಗಿ ಪರಗಣಿಸುವುದಿಲ್ಲ. ಯಾಕೆಂದರೆ, ಇವರ ಎಲ್ಲಾ ಆಟಗಳು ನಡೆಯುವುದು ಬೀದಿ ಬದಿಯ ಹಾದಿಗಳಲ್ಲಿ. ಬುಡಬುಡಿಕೆ, ಕುರುಮಾಮ, ಕೊರವಂಜಿ, ಮುಂತಾದವರು ಬೀದಿಬೀದಿ ಮನೆ ಮುಂದೆ ಕುಳಿತು ಶಾಸ್ತ್ರ ಹೇಳಿದರೆ ಅದಕ್ಕೆ ಹೆಚ್ಚು ಮಾನ್ಯತೆ ಇಲ್ಲ. ದೂರದರ್ಶನದ ಚಾನಲ್‌ಗಳಲ್ಲಿ ಪ್ರಮುಖ ಪತ್ರಿಕೆಗಳಲ್ಲಿ ದೊಡ್ಡ ದೊಡ್ಡ ಹೆಸರುಳ್ಳವರು ಇವರು ಹೇಳುವುದನ್ನೇ ಹೇಳಿದರೆ ಅದಕ್ಕೆ ಎಲ್ಲಿಲ್ಲದ ಮಾನ್ಯತೆ. ಹೀಗಿರುವಾಗ ಈ ಅಲ್ಪಸಂಖ್ಯಾತ ಸಮುದಾಯಗಳ ಭಿಕ್ಷೆ ವೃತ್ತಿಗೂ ಧಕ್ಕೆಯುಂಟಾಗಿ ಇವರ ಬದುಕು ಬರ್ಬರವಾಗುತ್ತಿದೆ.

ಕರ್ನಾಟಕದಲ್ಲಿ ಭಿಕ್ಷಾಟನೆ ನಿಷೇಧದ ಕಾಯ್ದೆ ಇರುವುದರಿಂದಾಗಿ ಈ ಸಮುದಾಯಗಳು ಭಿಕ್ಷೆ ಬೇಡುವುದನ್ನು ಅಪರಾಧವೆಂದು ಪರಿಗಣಿಸಲಾಗಿದೆ.

ಕರ್ನಾಟಕ ಭಿಕ್ಷಾಟನೆ ತಡೆ ಕಾಯ್ದೆ ೧೯೭೫

ಈ ಕಾಯ್ದೆಯು ಯಾವುದೇ ವ್ಯಕ್ತಿಯು ಸಾರ್ವಜನಿಕ ಸ್ಥಳದಲ್ಲಿ ಅಥವಾ ಖಾಸಗಿ ಸ್ಥಳಗಳಲ್ಲಿ, ಊಟ, ಬಟ್ಟೆ, ದವಸ ಧಾನ್ಯ ಮುಂತಾದವುಗಳನ್ನು ಕೇಳಿ ಪಡೆಯುವುದನ್ನು ನಿಷೇಧಿಸುತ್ತದೆ. ಹಾಗೆಯೇ ಹಾಡುಗಳನ್ನು ಹಾಡುವುದು, ನೃತ್ಯ, ಭವಿಷ್ಯ ಹೇಳುವುದು ಇತ್ಯಾದಿಗಳ ಮೂಲಕ ಸಂಪಾದನೆ ಮಾಡುವುದನ್ನು ನಿಷೇಧಿಸುತ್ತದೆ.

ಸೆಕ್ಷನ್-೧೧ರ ಪ್ರಕಾರ ಯಾವುದೇ ಪೊಲೀಸ್ ಅಧಿಕಾರಿಯು ಮೇಲ್ಕಂಡ ಕೆಲಸದಲ್ಲಿ ತೊಡಗಿರುವ ವ್ಯಕ್ತಿಗಳನ್ನು ಬಂಧಿಸುವ ಅಧಿಕಾರವನ್ನು ಹೊಂದಿರುತ್ತಾರೆ. ನಂತರ ಬಿಡುಗಡೆಗಾಗಿ ಅವರು ವ್ಯಕ್ತಿಗತ ಜಾಮೀನು ಅಥವಾ ಬೇರೆ ಯಾರಾದರೂ ಅವರ ಪರವಾಗಿ ಜಾಮೀನು ನೀಡಿ ಅವರನ್ನು ಬಿಡಿಸಬೇಕಾಗುತ್ತದೆ.

ಈ ಕೇಸಿನ ವಿಚಾರಣೆ ನಡೆಸಿದ ದಂಡಾಧಿಕಾರಿಯು ವ್ಯಕ್ತಿಯು ಭಿಕ್ಷಾಟನೆಯ ಅಪರಾಧ ವೆಸಗಿರುವುದು ಕಂಡುಬಂದರೆ ಅವರನ್ನು ಒಂದು ವರ್ಷಕ್ಕೆ ಕಡಿಮೆ ಇರದ ಹಾಗೂ ಮೂರು ವರ್ಷಗಳಿಗೆ ವಿಸ್ತರಿಸಬಹುದಾದ ಬಂಧನದ ಆದೇಶವನ್ನು ಹೊರಡಿಸಬಹುದಾಗಿದೆ.

"ಕರಡಿ ಕುಣಿಸುವುದು, ಕೋತಿ ಆಡಿಸುವುದು, ಹಾವಿನಾಟ, ಸವಲೆತ್ತು, ಹಗಲುವೇಷ, ಬುರ್ರ ಕಥ, ತೊಗಲು ಬೊಂಬೆಯಾಟ, ದೊಂಬರಾಟ, ಮಾರಮ್ಮ, ಸಂಕರಮ್ಮ, ಕಠಾರಮ್ಮ ಮುಂತಾದ

ದೇವರುಗಳನ್ನು ತಲೆಯ ಮೇಲೆ ಹೊತ್ತು ಮನೆಮನೆ ಸುತ್ತುವುದು ಹಾಗೂ ಸಾಂಪ್ರದಾಯಿಕ ನಾಟಿ ವೈದ್ಯ ಮಾಡುತ್ತಾ, ಬೀದಿಬೀದಿ ಸುತ್ತುವುದು ಇವೆಲ್ಲವೂ ಕೂಡ ಭಿಕ್ಷಾಟನೆಯಂತೆ ಕಾಣುತ್ತದೆ. ಇದರಿಂದಾಗಿ ಈ ಅಲೆಮಾರಿ ಮತ್ತು ಅರೆಅಲೆಮಾರಿ ಸಮುದಾಯಗಳು ಇವನ್ನೇ ಕುಲವೃತ್ತಿಗಳೆಂದು ನಂಬಿರುವುದರಿಂದ ಮತ್ತು ಸರ್ಕಾರಗಳು ಅಲೆಮಾರಿ ವೃತ್ತಿಗಳನ್ನೇ ಭಿಕ್ಷಾಟನೆಯ ವೃತ್ತಿಗಳು ಎಂದು ಪ್ರತಿಬಿಂಬಿಸಿ ಭಿಕ್ಷಾಟನೆ ನಿರ್ಮೂಲನ ಕಾಯ್ದೆಯಡಿ ಅಲೆಮಾರಿಗಳನ್ನು ಶಿಕ್ಷಿಸುವ ಸಾಧ್ಯತೆಗಳಿವೆ".[೯] ಈ ಸಮುದಾಯಗಳಿಗೆ ಬದುಕನ್ನು ಕಟ್ಟಿ ಕೊಡುವ ಜವಾಬ್ದಾರಿಯು ಕೂಡ ಸರ್ಕಾರದ್ದೇ ಆಗಿರುತ್ತದೆ. ಅದರಿಂದಾಗಿ ಸರ್ಕಾರ ಸದರಿ ಸಮುದಾಯಗಳ ಬಗ್ಗೆ ವಿಶೇಷ ಕಾಳಜಿ ವಹಿಸಬೇಕಾಗಿದೆ.

೪.೬. ಅಲೆಮಾರಿಗಳ ಅಲೆಯುವಿಕೆ

೧. ಕಲಾತ್ಮಕ ವಸ್ತುಗಳ ಉತ್ಪಾದನೆಗಾಗಿ

ಒಂದು ಕಾಲದಲ್ಲಿ ಕಲಾತ್ಮಕ ವಸ್ತುಗಳಿಗೆ ಅಪಾರ ಮನ್ನಣೆಯಿತ್ತು. ಪ್ಲಾಸ್ಟಿಕ್ ಉಪಯೋಗದಿಂದ ಕಲಾತ್ಮಕ ವಸ್ತುಗಳ ಬಳಕೆ ಕಡಿಮೆಯಾಗಿದೆ. ಇದರ ಪರಿಣಾಮದಿಂದಾಗಿ ಅಲೆಮಾರಿ ಸಮುದಾಯಗಳು ನಿರುದ್ಯೋಗದಿಂದ ನರಳುತ್ತಾ ಅನ್ನದ ಭದ್ರತೆಯಿಲ್ಲದೆ ಪರಿತಪಿಸುವಂತಾಗಿದೆ.

ಗ್ರಾಮೀಣ ಪ್ರದೇಶದಲ್ಲಿ ಊರಿನ ಮಧ್ಯದಲ್ಲಿ ಒಂದು ಕಟ್ಟೆಯನ್ನು ನೋಡಬಹುದು. ಆ ಕಟ್ಟೆಯಲ್ಲಿ ಊರಿನ ಜನರು ತಮ್ಮ ಬೇಸರ ಕಳೆಯಲು ಮತ್ತು ದಣಿವು ಹಾಗೂ ಇತರೇ ಕಾರಣಕ್ಕಾಗಿ ಸೇರುತ್ತಾರೆ. ಈ ಸ್ಥಳದಲ್ಲಿ ಜನಜಂಗುಳಿ ತುಂಬಿರುತ್ತದೆ. ಇಂತಹ ಸ್ಥಳಗಳನ್ನು ತಮ್ಮ ಕಸಬಿಗೆ ಆಯ್ಕೆ ಮಾಡಿಕೊಂಡು ಒಲೆ ಹೂಡಿಕೊಂಡು ಊರಲ್ಲಿ ಒಂದು ಸುತ್ತು ತಿರುಗಾಡಿ ಹಳೆ "ಅಲ್ಯೂಮಿನಿಯಂ ಪಾತ್ರೆಗಳಿಂದ ಹೊಸ ವಸ್ತುಗಳನ್ನಾಗಿ ಮಾಡಿಕೊಡುತ್ತೇವೆ" ಎಂದು ಕೂಗುತ್ತಾ ಓಣಿ ಓಣಿಗಳಲ್ಲಿ ಸುತ್ತಾಡುತ್ತಾರೆ. ಅಲ್ಯೂಮಿನಿಯಂ ತೆಗೆದುಕೊಂಡು ಆಸಕ್ತರು ಇವರ ಬಳಿ ಬರುವರು. ಕುಟುಂಬವು ಕೆಲಸ ನಿರ್ವಹಿಸಲು ತೊಡಗುತ್ತದೆ. ಹೆಂಡತಿ ಒಲೆಯ ರಾಟಿ ತಿರುಗಿಸಿದರೆ, ಗಂಡನು ಅಲ್ಯೂಮಿನಿಯಂ ಕರಗಿಸಿ ಅಚ್ಚುಪಡಿಯಲ್ಲಿ ಹಾಕಿ, ತಮಗೆ ಬೇಕಾಗಿರುವ ಗೃಹಬಳಕೆ ವಸ್ತುಗಳಾದ ಸೌಟು, ಕೆರೆಬಿಲ್ಲೆ, ಚುಚ್ಚಗ, ಕೈಬಟ್ಟಲು, ಮಸೆಕಲ್ಲು, ಅಲಂಕೃತ ವಸ್ತುವಾದ ದೇವರ ವಿಗ್ರಹ ಇತರೆ ವಸ್ತುಗಳನ್ನು ತಯಾರಿಸಿ ಕೊಡುವರು. ಎಲ್ಲಿಯವರೆಗೆ ಆ ಊರಿನಲ್ಲಿ ಕೆಲಸದ ಅವಕಾಶವಿರುತ್ತದೋ ಅಲ್ಲಿಯವರೆಗೆ ಉತ್ಪಾದನೆ ಮಾಡುತ್ತಾ ಜೀವಿಸುವರು. ಇತ್ತೀಚೆಗೆ ಆಧುನಿಕತೆಯ ನವೀನ ಉಪಕರಣಗಳಿಂದ ಇವರ ಕೆಲಸ ಮೂಲೆಗುಂಪಾಗುವ ಸಾಧ್ಯತೆಗಳು ಕಂಡುಬರುತ್ತಿವೆ. ಒಂದೂರಿನಲ್ಲಿ ಒಂದೇ ದಿನ ತಪ್ಪಿದರೆ ಎರಡು ದಿವಸಗಳು ಉತ್ಪಾದನೆ ಮಾಡಿ ಮುಂದಿನ ಊರಿಗೆ ಪ್ರಯಾಣ ಬೆಳಸುತ್ತಾರೆ.

೨. ವಂಶಾವಳಿ ಹೇಳಲು

ಹೆಳವರ ಜಾತಿ ಅಥವಾ ಕುಲವನ್ನು ಕೊಂಡಾಡುವುದನ್ನೆ ತಮ್ಮ ಮುಖ್ಯ ವೃತ್ತಿಯನ್ನಾಗಿ ಮಾಡಿಕೊಂಡು ಬಂದಿರುವರು. ತಮ್ಮ ಪೂರ್ವಜರು ಸಂಗ್ರಹಿಸಿಟ್ಟಿರುವ ಮನೆತನಗಳ ವಂಶಾವಳಿ ಕಡತ ತೆಗೆದು ಅವರದೇ ಗತ್ತಿನಲ್ಲಿ ಹೇಳುತ್ತಾ ತಮಗೆ ಬೇಕಾದ ವಸ್ತುಗಳನ್ನು ಕಾಡಿ ಬೇಡಿ "ನಾನು ನಿಮ್ಮ ಮಗ, ನನಗೂ ಪಾಲಿದೆ ಕೊಡಿಯಪ್ಪ" ಎಂದು ಬೇಡಿ ಪಡೆಯುತ್ತಾನೆ. ಆ ಮನೆಯವರು ಕೊಡುವ ತನಕ ಮನೆಬಿಟ್ಟು ಕದಲುವುದಿಲ್ಲ. ತಮಗೆ ಮೀಸಲಾಗಿರುವ ಮನೆಗಳಲ್ಲಿ ಮಾತ್ರ ವಂಶಾವಳಿ ಹೇಳುತ್ತಾರೆ. ಆಕಳು, ಕರು, ಎಮ್ಮೆ, ಮೇಕೆ, ಕೋಳಿ, ಕುರಿ, ಬಟ್ಟೆ, ದವಸ ಇತ್ಯಾದಿ ಪಡೆಯುವರು. ಎತ್ತಿನ ಮೇಲೆ ಕುಳಿತುಕೊಂಡು ಗಂಟೆ ಬಾರಿಸುತ್ತಾ ವಂಶವೃಕ್ಷವನ್ನು ಹೇಳುವುದು ಕಂಡುಬಂದರೆ, ಕೆಲವು ಕಡೆ ಬರಿಗಾಲಲ್ಲಿ ವಂಶವೃಕ್ಷ ಸಾರುತ್ತಾರೆ. ಪುರುಷರೇ ಇಂತಹ ಕೆಲಸಗಳನ್ನು ಮಾಡುತ್ತಾರೆ. ಸ್ತ್ರೀಯರು ದಾನದ ರೂಪದಲ್ಲಿ ತಂದಿರುವ ಕುರಿ, ಮೇಕೆ, ಕೋಳಿ, ದನ, ಕರುಗಳ ಪಾಲನೆಯಲ್ಲಿರುತ್ತಾರೆ. ವಂಶಾವಳಿ ಹೇಳುವಾಗ ಕೆಲವು ವಿಚಿತ್ರ ಗಾದೆ, ಹಾಸ್ಯ ಚಟಾಕಿ ಬೆರೆಸುತ್ತಾ ವಂಶವೃಕ್ಷವನ್ನು ಸಾರಾಸಗಟಾಗಿ ಹೇಳುವರು. "ಇವರನ್ನು 'ನಡೆದಾಡುವ ಇತಿಹಾಸ' ಎನ್ನುವ ಅನ್ವರ್ಥನಾಮದಿಂದ ಕರೆಯಲಾಗುವುದು.

೩. ನಾಟಿ ಔಷಧಿ ಶೋಧನೆಗಾಗಿ

ಮನುಷ್ಯ ಮತ್ತು ಪ್ರಾಣಿಗಳ ರೋಗಗಳನ್ನು ಗುಣಪಡಿಸುವ ಔಷಧಿಗಳು ಅರಣ್ಯದಲ್ಲಿರುತ್ತದೆ. ಅವರು ಕಾಡೆಲ್ಲಾ ತಿರುಗಾಡಿ ಪತ್ತೆ ಮಾಡಿ ಗಡ್ಡೆ, ಚಕ್ಕೆ, ಕೊಂಬೆ, ರೆಂಬೆ, ಎಲೆ, ಬಳ್ಳಿಗಳು ಇತರೆ ಸಸ್ಯಗಳನ್ನು ಸಂಗ್ರಹಿಸಿ ಬಿಸಿಲಲ್ಲಿ ಒಣಗಿಸಿ ರೋಗದ ಲಕ್ಷಣಕ್ಕೆ ಅನುಗುಣವಾಗಿ ಪ್ರಮಾಣವನ್ನು ಸೂಚಿಸಿ ಕೊಡುವರು. ಇಂತಹ ಔಷಧಿಗಳಿಂದ ಯಾವುದೇ ಅಡ್ಡ ಪರಿಣಾಮಗಳು ಉಂಟಾಗುವುದಿಲ್ಲ. ಗುಣಮುಖರಾಗುವುದು ಗ್ಯಾರಂಟಿ ಎಂದು ಮಾತಿನ ಮೂಲಕ ಹೇಳುವರು. ಹೀಗೆ ಮಾರಾಟ ಮಾಡುವ ಅಲೆಮಾರಿಗಳು ನಾಟಿ ಔಷಧಿಯನ್ನು ಶೋಧಿಸಿ ಸಂಗ್ರಹ ಮಾಡಿಕೊಂಡು ತಮ್ಮ ವಾಸಸ್ಥಾನಕ್ಕೆ ಮರಳುವರು. ಬದುಕಿಗಾಗಿ ಆದಾಯ ಪಡೆಯುವರು. ಇಂತಹ ಔಷಧಿ ಖರೀದಿಸುವ ಜನರು ಕಡಿಮೆಯಾಗಿ ಆದಾಯಕ್ಕೆ ಕೊಡಲಿ ಪೆಟ್ಟು ಬಿದ್ದಿದೆ. ಆಧುನಿಕ ಇಂಗ್ಲಿಷ್ ಮಾತ್ರೆಗಳು, ಔಷಧಿಗಳು ಬಂದಿರುವುದರಿಂದ ಗಿಡಮೂಲಿಕೆ ಕೊಳ್ಳಲು ಮುಂದೆ ಬರುವುದಿಲ್ಲ. ಒಂದು ವೇಳೆ ಕೊಂಡರೂ ಅದಕ್ಕೆ ಸರಿಯಾದ ಬೆಲೆ ನೀಡುವುದಿಲ್ಲ. ಔಷಧಿಗಳನ್ನು ಕೊಳ್ಳುತ್ತಾರೆಂಬ ವಿಶ್ವಾಸದಿಂದ ವಿಪರೀತ ಕಷ್ಟ, ನೋವು ಅನುಭವಿಸಿ ಕ್ರೂರ ವಿಷಜಂತುಗಳೊಂದಿಗೆ ಹೋರಾಟ ಮಾಡಿ ಗಿಡಮೂಲಿಕೆ ತರುವರು. ಗಿಡಮೂಲಿಕೆ ತರುತ್ತೇವೆಂದು ಕಾಡಿಗೆ ಹೋದ ಕೆಲವರು ಮತ್ತೆ ವಾಪಸ್ಸು ಬಂದಿಲ್ಲವಂತೆ. ಹೊಟ್ಟೆ ತುಂಬಿಸಿಕೊಳ್ಳಲು ಸಾವನ್ನು ಬೆನ್ನಿಗೆ ಕಟ್ಟಿಕೊಂಡೇ ಅನ್ವೇಷಣೆಯಲ್ಲಿ ತೊಡಗುತ್ತಿದ್ದಾರೆ. ಇತ್ತೀಚಿನ ಜಾಗತೀಕರಣದಿಂದ ಕಾಡಲ್ಲಿರುವ ಔಷಧಿ ಸಸ್ಯಗಳೆಲ್ಲವೂ ವಿದೇಶಿಯರ

ಸ್ವತ್ತಾಗುತ್ತಲಿವೆ. ಅರಣ್ಯ ಕಾಯ್ದೆ ಕಠಿಣವಾಗುತ್ತಿವೆ. ಗಿಡಮೂಲಿಕೆಗೆಂದು ಹೋದವರು ಶಿಕ್ಷೆಗೆ ಒಳಗಾಗುತ್ತಿದ್ದಾರೆ. ಅಲ್ಪಸ್ವಲ್ಪವಾದರೂ ಅನ್ನ ಕೊಡುವ ಗಿಡಮೂಲಿಕೆಗಳು ಅಲೆಮಾರಿಗಳಿಂದ ದೂರ ಸರಿಯುತ್ತಿವೆ.

೪. ಕಚ್ಚಾವಸ್ತುಗಳಿಗಾಗಿ

ಅನ್ನ ನೀಡುವ ಬಹುಮುಖ್ಯ ಉದ್ಯಮವೆಂದರೆ ಕಾಡು. ಗೃಹೋಪಯೋಗಿ ವಸ್ತುಗಳು ಹಾಗೂ ಅಲಂಕೃತ ವಸ್ತುಗಳು ತುಂಬಾ ವಿಶಿಷ್ಟವಾಗಿ ಕಾಣಲು ಮತ್ತು ಬಾಳಿಕೆ ಬರಲು ಮುಖ್ಯ ಕಾರಣ ಕಾಡಿನ ಉತ್ಕೃಷ್ಟ ಕಚ್ಚಾವಸ್ತುಗಳಾಗಿರುವುವು. ಕಚ್ಚಾವಸ್ತು ಪಡೆಯಲು ಬಿಡಾರ ಬಿಟ್ಟು, ಕಾಡಿಗೆ ಬಂದು ಯಾವ ವಸ್ತು ತಯಾರಿಸಲು ಯಾವ ರೀತಿಯ ಕಚ್ಚಾವಸ್ತುಗಳು ಬೇಕೆಂದು ಮೊದಲು ಯೋಜನೆ ರೂಪಿಸಿಕೊಂಡು ಅನ್ವೇಷಣೆಯಲ್ಲಿ ತೊಡಗುವರು. ಸಿಂದಿಯ ಪೊರಕೆ, ಬಿದಿರು, ಬಳ್ಳಿ, ಮೆದುವಾದ ಮರ, ಅಂಟು ಇತ್ಯಾದಿಗಳನ್ನು ಕಾಡಲ್ಲಿ ಅಲೆದು, ಪತ್ತೆ ಮಾಡಿ ತಮ್ಮ ಉತ್ಪಾದನೆಗೆ ಯಾವ ರೀತಿಯಾಗಿ ಬೇಕಾಗುವುದೋ ಆ ರೀತಿಯಲ್ಲಿ ಅವುಗಳನ್ನು ಕತ್ತರಿಸಿಕೊಂಡು ತರುವರು. ಕುಟುಂಬದ ಗಂಜಿಯ ಉದ್ದೇಶಕ್ಕಾಗಿ ಯಾರೂ ಇಲ್ಲದ ಸಮಯ ನೋಡಿ ವಸ್ತುಗಳನ್ನು ಪತ್ತೆ ಮಾಡಿ ಸಾಗಾಣಿಕೆಯ ಸಾಧನಗಳಿಲ್ಲದೆ ತಲೆ ಮೇಲೆ ೫ರಿಂದ ೧೦ ಕಿ.ಮೀ ಹೊತ್ತು ತರುತ್ತಾರೆ. ಸಂಪರ್ಕ ರಸ್ತೆಗೆ ಬಂದು ಕತ್ತೆ, ಕುದುರೆಗಳ ಮೂಲಕ ವಸ್ತುವನ್ನು ತಾವಿರುವಲ್ಲಿಗೆ ತಂದು ಯಾವ ವಸ್ತು ತಯಾರಿಸಲು, ಯಾವ ತೆರನಾದ, ಆಕಾರ ಬೇಕಾಗುವುದೋ ಆ ರೀತಿಯಲ್ಲಿ ತಯಾರಿಸಿಕೊಂಡು ಉತ್ಪಾದನೆಯಲ್ಲಿ ತೊಡಗುವರು.

೫. ಬೇಟೆ ಮತ್ತು ಪ್ರಾಣಿ-ಪಕ್ಷಿಗಳನ್ನು ಸೆರೆಹಿಡಿಯಲು

ಅಲೆಮಾರಿಗಳು ಪುರಾತನ ಕಾಲದಿಂದಲೂ ಮಾಂಸವನ್ನು ಪ್ರಮುಖ ಆಹಾರವನ್ನಾಗಿ ಮಾಡಿಕೊಂಡರು. ಅಲೆಮಾರಿಗಳು ಬೇಟೆಯನ್ನಾಡುವುದೇ ಒಂದು ಉದ್ಯೋಗವನ್ನಾಗಿ ಮಾಡಿ ಕೊಂಡಿದ್ದರು. ಕಾಡಿನಲ್ಲಿ ಬೇಟೆಯ ತಂತ್ರಗಳನ್ನು ಉಪಯೋಗಿಸಿ ಜಿಂಕೆ, ಕಾಡು ಬೆಕ್ಕು, ಮೊಲ, ಕರಡಿ, ಹಂದಿ, ನವಿಲು, ಬೆಳ್ವ, ಪುರಲಿ, ಹಕ್ಕಿ ಇತ್ಯಾದಿ ಪ್ರಾಣಿ ಪಕ್ಷಿಗಳನ್ನು ಹಿಡಿಯುತ್ತಾರೆ. ಕುಲಕಸಬಿನ ಅನುಕೂಲದ ಉದ್ದೇಶಕ್ಕಾಗಿ ಕರಡಿ, ಕೋತಿ, ಹಾವು, ಗಿಳಿ ಇತರೆ ಪ್ರಾಣಿ-ಪಕ್ಷಿಗಳನ್ನು ಹಿಡಿದು ಅವುಗಳನ್ನು ತಮ್ಮ ಆದಾಯಕ್ಕಾಗಿ ದುಡಿಯುವ ಸಾಧನಗಳಾಗಿ ಬಳಸಿಕೊಳ್ಳುವರು. ಇಲ್ಲಿ ಬೇಟೆಯು ಸಿಕ್ಕರೆ ಸಿಕ್ಕಬಹುದು ಇಲ್ಲದಿದ್ದರೆ ಇಲ್ಲ. ಬೇಟೆ ದೊರೆತರೆ ಊಟ ಇಲ್ಲವೆಂದರೆ ಉಪವಾಸ. ಎಷ್ಟೇ ಸಮಯವಾದರೂ ಬೇಟೆಯನ್ನು ಪಡೆಯುತ್ತೇನೆಂಬ ಅಚಲ ನಂಬಿಕೆಯಿದೆ. ಕೆಲವೊಂದು ಪ್ರಾಣಿಪಕ್ಷಿಗಳನ್ನು ಸಾಕಿದರೆ ಮತ್ತೆ ಕೆಲವನ್ನು ಮಾರಾಟ ಮಾಡುವರು. ಮತ್ತೆ ಕೆಲವನ್ನು ಊಟಕ್ಕೆ ಉಪಯೋಗಿಸಿಕೊಳ್ಳುವರು.

೬. ವ್ಯಾಪಾರಕ್ಕಾಗಿ

ಉತ್ಪಾದಿಸಿದ ವಸ್ತುಗಳಾದ ಗೊಂಬೆ, ಗಿಳಿ, ತೋರಣ, ಬುಟ್ಟಿ, ಚಾಪೆ, ಸರ, ಗೆಜ್ಜೆ, ಪೊರಕೆ, ಗಿಡಮೂಲಿಕೆ, ಮಾಂಸ, ಹಾಲು, ಜೇನು, ಆಲಂಕಾರಿಕ ಮತ್ತು ಗೃಹೋಪಯೋಗಿ ವಸ್ತುಗಳನ್ನು ತಲೆ ಮೇಲೆ ಹೊತ್ತು ಬೀದಿ ಬೀದಿಯಲ್ಲಿ ಅಥವಾ ಸಂತೆ, ನಗರಪ್ರದೇಶ ಗ್ರಾಮಗಳಲ್ಲಿ ವಸ್ತುವಿನ ಅಂದಚೆಂದ ವರ್ಣಿಸುತ್ತಾ ಮಾರುವರು. ಬೆಲೆಯು ಸಂದರ್ಭಕ್ಕೆ ತಕ್ಕಂತೆ ಬದಲಾವಣೆ ಹೊಂದಬಹುದು. ಆದರೆ ಮಾರಾಟ ಮಾತ್ರ ನಿಲ್ಲುವುದಿಲ್ಲ. ಲಾಭ ಬಂದರೂ ಸರಿಯೇ ನಷ್ಟವಾದರೂ ಸರಿಯೇ ಬದುಕಬೇಕಾಗಿರುವುದರಿಂದ ಕೇಳಿದ ಬೆಲೆಗೆ ಕೊಡುವರು. ಇತ್ತೀಚೆಗೆ ಆಧುನಿಕ ಕಾರ್ಖಾನೆಗಳ ಮೂಲಕ ತಯಾರಾಗುವ ವಸ್ತುಗಳಿಗೆ ಬೇಡಿಕೆ ಹೆಚ್ಚಾಗಿದೆ. ಅವುಗಳ ಬಣ್ಣ, ವಿನ್ಯಾಸ, ಆಕಾರಗಳು ಆಲಂಕಾರಿಕ ರೂಪಗಳು ಜನರನ್ನು ಆಕರ್ಷಿಸುವಲ್ಲಿ ಹೆಚ್ಚಿನ ಪಾತ್ರ ವಹಿಸಿರುವುದರಿಂದ ಅಲೆಮಾರಿಗಳ ವಸ್ತುಗಳ ಮಾರಾಟವು ನೆಲ ಕಚ್ಚಿದೆ. ಇಷ್ಟಾದರೂ ಇವರು ಗ್ರಾಮೀಣ ಪ್ರದೇಶಗಳಿಗೆ ಹೋಗಿ ೩ರಿಂದ ೫ ಕಿ.ಮೀ. ನಡೆದು ಗ್ರಾಮಗಳನ್ನು ಸುತ್ತಾಡಿ ವಸ್ತುಗಳನ್ನು ಮಾರಾಟ ಮಾಡುವರು.

ಕಲಾಪ್ರದರ್ಶನಕ್ಕಾಗಿ

ಸಮುದಾಯದ ಜೊತೆ ರಕ್ತಗತವಾಗಿ ಬಂದಿರುವ ಕಲೆಯನ್ನು ಜನರೆದುರು ಅಭಿನಯಿಸಿ ಅದಕ್ಕೆ ಜನರಿಂದ ಪ್ರತಿಫಲ ಪಡೆಯುತ್ತಾರೆ. ಪ್ರತಿಫಲವು ನಿಗದಿಯಾಗಿರುವುದಿಲ್ಲ. ಪ್ರೇಕ್ಷಕರು ತಮಗೆ ಮನಸ್ಸಿಗೆ ಬಂದಷ್ಟು ಕೊಡುವರು. ಅದನ್ನೇ ದೊಡ್ಡ ಮೊತ್ತವೆಂದು ಭಾವಿಸಿ ತೆಗೆದುಕೊಳ್ಳುತ್ತಾರೆ.

ಉದಾಹರಣೆಗೆ ಸ್ತ್ರೀ–ಪುರುಷರು ಹಾಗೂ ಮಕ್ಕಳು ದೊಂಬರಾಟದಲ್ಲಿ ಭಾಗಿಯಾಗಿ ವೈವಿಧ್ಯಮಯ ಕಸರತ್ತು, ಹಾಸ್ಯ ಸನ್ನಿವೇಶಗಳು, ನರ್ತನೆಯಿಂದ ಜನರನ್ನು ರಂಜಿಸುವರು. ಬುರ್ರಕಥೆ, ಹಗಲುವೇಷ, ಕವಲೆತ್ತು ಆಡಿಸುವುದು, ಹಾವಾಡಿಸುವುದು, ಮಂಗನಾಟ, ಕರಡಿಕುಣಿತ ಇತ್ಯಾದಿ ಆಟಗಳನ್ನು ವೇದಿಕೆರಹಿತವಾಗಿ ಬಯಲಿನಲ್ಲಿ ಅಭಿನಯಿಸುವರು.

೭. ವಸ್ತುಗಳ ರಿಪೇರಿಗಾಗಿ

ಬಳಸುವ ಗೃಹೋಪಯೋಗಿ ವಸ್ತುಗಳಾದ ಪ್ಲಾಸ್ಟಿಕ್ ಕೊಡ, ಹಿತ್ತಾಳೆ, ಹಂಚು, ಬಕೆಟ್, ಬುಟ್ಟಿ, ತಂಬಿಗೆ ಇತರೆ ದಿನದ ಬಳಕೆಯಲ್ಲಿ ಉಪಯೋಗಿಸುವ ವಸ್ತುಗಳು ಹಾಳಾಗಿರಬಹುದು. ಇಂತವುಗಳನ್ನು ಉಪಯೋಗಕ್ಕೆ ಯೋಗ್ಯವಾಗುವಂತೆ ಮಾಡುವುದು ರಿಪೇರಿಯಾಗಿದೆ. ಬೆಸುಗೆಯನ್ನು ಹಾಕಿ ಪುನಃ ಬಳಕೆಗೆ ಬರುವಂತೆ ಮಾಡುತ್ತಾರೆ. ಪ್ರತಿ ಬೀದಿಯಲ್ಲಿ ಕೂಗುತ್ತಾ ಕೆಲಸ ಕೇಳುವರು. ಚಾಕು, ಚೂರಿ, ಕೊಡಲಿ, ಕುಡುಗೋಲು, ಮಚ್ಚು, ಉಳಿ ಇತ್ಯಾದಿಗಳನ್ನು 'ಸಾಣೆ' ಹಿಡಿದು ಮರುಬಳಕೆಗೆ ಬಳಸುವಂತೆ ಮಾಡಿಕೊಡುತ್ತಾರೆ. ಜನರು ಕೊಟ್ಟ ಸಾಮಾನು ರಿಪೇರಿ ಮಾಡುತ್ತಾ, ರಿಪೇರಿಯಿಂದ ಬಂದ ಹಣದಿಂದ ಉಪಜೀವನ ನಡೆಸುತ್ತಾರೆ. ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ

ಸ್ಟೀಲಿನ ಉಪಯೋಗವಾಗುತ್ತಿರುವುದರಿಂದ ಅವರಿಗೆ ಯಾವುದೇ ಉದ್ಯೋಗವಿಲ್ಲದೆ ಸಮಸ್ಯೆಯನ್ನು ಎದುರಿಸಬೇಕಾಗಿದೆ. ಅಲ್ಪಸ್ವಲ್ಪ ಸಿಗುವ ಕೆಲಸಗಳಲ್ಲಿಯೂ ಜನರು ಚೌಕಾಸಿ ಮಾಡುವುದರಿಂದ ಕೂಲಿಯೂ ಗಿಟ್ಟುವುದಿಲ್ಲ. ಪ್ರತಿದಿನವೂ ಬೆಂಕಿಯಲ್ಲಿ ಕೆಲಸ ಮಾಡುವುದರಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ತಮ್ಮ ಅನಾರೋಗ್ಯದಿಂದಾದ ಕಷ್ಟವನ್ನು ಸಹಿಸಿಕೊಂಡು ರಿಪೇರಿ ಮಾಡುತ್ತಾರೆ.

೮. ಭವಿಷ್ಯ ಮತ್ತು ಶಕುನ ಹೇಳಲಿಕ್ಕಾಗಿ

ಅಲೆಮಾರಿಗಳು ಶತಶತಮಾನಗಳ ಕಾಲದಿಂದಲೂ ವಂಶಪಾರಂಪರಿಕವಾಗಿ ಬಂದ ಭವಿಷ್ಯ ಹೇಳುವ ವೃತ್ತಿಯನ್ನು ನಿಷ್ಠೆಯಿಂದ ಮಾಡಿಕೊಂಡು ಬಂದಿದ್ದಾರೆ. ಉದಾಹರಣೆಗೆ ಕೊರವಂಜಿ ಕಣಿ ಹೇಳುವುದು, ಬುಡಬುಡಿಕೆ ಶಕುನ ನುಡಿಯುವುದು, ಜ್ಯೋತಿಷ್ಯಗಾರರು ಜ್ಯೋತಿಷ್ಯ ಹೇಳುವುದು ಇತ್ಯಾದಿ. ಇಂತಹ ಕಾಯಕಕ್ಕಾಗಿ ಬಿಡಾರದಿಂದ ಬಹುದೂರ ಹೋಗಿ ಕಾಯಕ ಮುಗಿದ ಮೇಲೆ ಬಿಡಾರದಲ್ಲಿ ಬರುವರು. ಈ ಕಾಯಕ ಕೊಡುವ ಸಂಭಾವನೆಯು ಜನರನ್ನು ಆಧರಿಸುತ್ತದೆ. ಹೀಗೆ ಅಲೆಮಾರಿ ಸಮುದಾಯಗಳು ಎಲ್ಲಿ ಅನುಕೂಲವಿದೆಯೋ ಅಲ್ಲಿ ಕಷ್ಟ-ನೋವು ಅನುಭವಿಸಿ ತಾತ್ಕಾಲಿಕವಾಗಿ ವಾಸಿಸಿ, ಬದುಕಿಗಾಗಿ ವಾಸದ ನೆಲೆಯಿಂದ ವಿವಿಧ ಸ್ಥಳಗಳಿಗೆ ಅಲೆದಾಡಿ ಆ ನೆಲೆಗೆ ವಾಪಸ್ಸಾಗುವರು. ತಮ್ಮ ವೃತ್ತಿಗೆ ಪ್ರತಿಫಲ ದೊರೆಯಲಾರದೆಂದು ಕಂಡುಬಂದಾಗ ಮತ್ತೊಂದು ಪ್ರದೇಶಕ್ಕೆ ಹೋಗುತ್ತಾರೆ. ಆದರೂ ಇವರಿಗೆ ಇನ್ನೂ ವಾಸದ ನೆಲೆ ಸಿಕ್ಕಿಲ್ಲ, ಅಲೆದಾಟ ತಪ್ಪಿಲ್ಲ.

೯. ಚಿಂದಿ ಆಯುವಿಕೆಗಾಗಿ

ಸ್ತ್ರೀಯರು ಮತ್ತು ಮಕ್ಕಳು ತಮ್ಮ ಬಿಡುವಿನ ವೇಳೆ ಅಥವಾ ಬರಗಾಲದಲ್ಲಿ ಹಾಗೂ ಪ್ರತಿದಿನ ಒಂದೇ ವೃತ್ತಿ ಮಾಡುವುದರಿಂದ ಬೇಸತ್ತು ಜನ ಭಿಕ್ಷೆ ಕೊಡದಿದ್ದಕ್ಕಾಗಿ ಕುಟುಂಬದ ಆರ್ಥಿಕ ಸಹಾಯಕ್ಕಾಗಿ ಬಿಸಾಡಿದ ಪ್ಲಾಸ್ಟಿಕ್ ಚೀಲ, ಪ್ಲಾಸ್ಟಿಕ್ ತುಣುಕುಗಳು, ಮಾದಕ ಪೇಯದ ಬಾಟಲಿ, ಅಲ್ಯೂಮಿನಿಯಂ, ತಗಡು, ಕಬ್ಬಿಣ, ತಾಮ್ರದ ತುಣುಕು ಇತ್ಯಾದಿಗಳನ್ನು ಬೀದಿಯಲ್ಲಿ ಕಸದ ತೊಟ್ಟಿಯಲ್ಲಿ, ಮಾರುಕಟ್ಟೆಯಲ್ಲಿ, ಚರಂಡಿಯಲ್ಲಿ ಹುಡುಕಾಡಿ ಆಯ್ದು ತಂದು ತೊಳೆದು, ಒಣಗಿಸಿ ಹತ್ತಿರದ ಗುಜರಿ ಅಂಗಡಿಗಳಿಗೆ ತೂಕಕ್ಕೆ ಮಾರಾಟ ಮಾಡುತ್ತಾರೆ. ಇದರಿಂದ ಬಂದ ಹಣದಿಂದ ಜೀವನ ನಡೆಸುತ್ತಾರೆ.

೧೦. ಗುಡಿಸಲು ಹೊದಿಕೆ ಮತ್ತು ಪಶುಗಳ ಮೇವಿಗಾಗಿ

ಗುಡ್ಡ ಗಾಡುಗಳಲ್ಲಿ ಬೆಳೆದುನಿಂತಿರುವ ಹುಲ್ಲು ಆಯುತ್ತಾರೆ. ಆಯ್ದ ಹುಲ್ಲನ್ನು ಪಶುಗಳಿಗೆ ಆಹಾರವಾಗಿ ಉಪಯೋಗಿಸುತ್ತಾರೆ ಮತ್ತು ಗುಡಿಸಲು ನಿರ್ಮಾಣಕ್ಕಾಗಿ ಉಪಯೋಗಿಸುತ್ತಾರೆ. ದೂರದ ಪ್ರದೇಶಗಳಿಂದ ಹುಲ್ಲು ಆಯ್ದುಕೊಂಡು ತರುತ್ತಾರೆ. ಇದಕ್ಕೂ ಅರಣ್ಯ ಇಲಾಖೆಯ

ಅಡಚಣೆಗಳಿವೆ. ಹುಲ್ಲು ಪೆಂಡಿಕಟ್ಟಿ ಸಮೀಪದ ಗ್ರಾಮಕ್ಕೆ ತೆರಳಿ ೧೦ರಿಂದ ೨೦ ರೂಪಾಯಿಗಳವರೆಗೆ ಮಾರಾಟ ಮಾಡುತ್ತಾರೆ. ಹೀಗೆ ಅಲೆಮಾರಿಗಳ ಅಲೆದಾಟ ಇನ್ನೂ ಇವತ್ತಿಗೂ ಮುಂದುವರಿದಿದೆ.

೪.೭ ಆರ್ಥಿಕತೆ

ಬದಲಾದ ಆರ್ಥಿಕ ಪರಿಸ್ಥಿತಿಯಲ್ಲಿ ಇಂತಹ ಅಲೆಮಾರಿ ಸಮುದಾಯಗಳ ಜೀವನಕ್ರಮ ಬದಲಾವಣೆಗೆ ಒಳಪಡುತ್ತಿದೆ. ಪರಂಪರಾಗತವಾದ ಮೂಲ ಕಸುಬಗಳ ಜೊತೆಯಲ್ಲಿ ಆಧುನಿಕ ವೃತ್ತಿಗಳು ಸೇರ್ಪಡೆಗೊಂಡಿವೆ.

ಸಮೀಕ್ಷೆಗೊಳ್ಳಪಟ್ಟ ಅಲೆಮಾರಿ ಸಮುದಾಯಗಳ ಆರ್ಥಿಕ ಸ್ಥಾನಮಾನಗಳು ಕೆಳಸ್ತರದಲ್ಲಿವೆ. ಅವರಿಗೆ ಮನೆ, ಭೂಮಿ, ಯಾವುದು ಇಲ್ಲದಾಗಿದೆ. ಅಕ್ಷರ ಜ್ಞಾನವಿಲ್ಲದ ಇವರು ಬುದ್ಧಿವಂತರು ಹಾಗೂ ವೃತ್ತಿಪರರು. ಯಾವುದೇ ಕೆಲಸಕೊಟ್ಟರೂ ಅತ್ಯಂತ ನಿಷ್ಠೆಯಿಂದ ಪ್ರಾಮಾಣಿಕವಾಗಿ ಮಾಡುವ ಶಕ್ತಿ ಇವರಲ್ಲಿದೆ. ಯಾವ ಹೊಸ ವೃತ್ತಿಯೇ ಆಗಲಿ ಅದಕ್ಕೆ ಬಹುಬೇಗ ಹೊಂದಿಕೊಳ್ಳುವರು.

ಕೂಲಿ: ಕೃಷಿ ಕೆಲಸಗಳು ಇದ್ದಾಗ ಅವರು ಮಾಲೀಕರಿಂದ ಗೊತ್ತುಪಡಿಸಿಕೊಂಡು ಕೂಲಿ ಕೆಲಸಗಳಿಗೆ ಹೋಗುವರು. ಇವರು ಕೂಲಿ ರೂಪದಲ್ಲಿ ಹಣ ಇಲ್ಲವೆ ದವಸ ಧಾನ್ಯಗಳ ರೂಪದಲ್ಲಿ ಪಡೆಯುವರು. ಇವರು ಸಸಿ ನಾಟಿ, ಕಳೆ, ಭತ್ತಕೊಯ್ಯುವ ಕೆಲಸ ಇತ್ಯಾದಿ ಕೂಲಿ ಕೆಲಸಗಳಿಗಾಗಿ ಹೋಗುವರು.

ಧಾರ್ಮಿಕ ಭಿಕ್ಷಾಟನೆ: ಅಲೆಮಾರಿ ಸಮುದಾಯಗಳಾದ ಬುಡ್ಗಜಂಗಮ್(ಸುಡುಗಾಡುಸಿದ್ಧ, ಬಾಳಸಂತೋಷಿ), ಗೊಂದಳಿ(ಬುಡಬುಡುಕಿ), ಚನ್ನದಾಸ, ಹೆಳವ, ಸಿಂಧೋಳ್ಳು(ದುರಗಮುರಗಿ), ಕೊಲೆಬಸವ, ಹಾವಾಡಿಗ ಸಮುದಾಯಗಳಲ್ಲಿ ಸಾಂಪ್ರದಾಯಿಕ ವೃತ್ತಿ ಧಾರ್ಮಿಕ ಭಿಕ್ಷಾಟನೆಯಾಗಿದೆ. ಆದರೆ ಭಿಕ್ಷೆ ನೀಡುವವರ ಸಂಖ್ಯೆ ವಿರಳವಾಗಿದೆ. ಬದಲಾದ ಆರ್ಥಿಕ ಪರಿಸ್ಥಿತಿಯಲ್ಲಿ ಇವರ ಜೀವನಕ್ರಮ ಬದಲಾವಣೆಗೆ ಒಳಪಡುತ್ತಿದೆ. ಪರಂಪರಾಗತವಾದ ಧಾರ್ಮಿಕ ಭಿಕ್ಷಾಟನೆ ಜೊತೆಯಲ್ಲಿ ಆಧುನಿಕ ವೃತ್ತಿಗಳು ಸೇರ್ಪಡೆಗೊಂಡಿವೆ. ಹಿಂದಿನ ಕಾಲದಲ್ಲಿ ಭಿಕ್ಷೆ ಬೇಡುವುದು ಅಪರಾಧವಾಗಿರಲಿಲ್ಲ. ಆದರೆ ಇಂದು ಸಾಮಾಜಿಕ ವ್ಯವಸ್ಥೆಯಲ್ಲಿ ಭಿಕ್ಷೆ ಬೇಡುವುದು ಅಪರಾಧವೆಂದು ಸರ್ಕಾರ ಪರಿಗಣಿಸಿದೆ. ಈ ಮಾಹಿತಿ ಇದ್ದರೂ ತಮ್ಮ ಜೀವನಕ್ಕಾಗಿ ಧಾರ್ಮಿಕ ಭಿಕ್ಷಾಟನೆ ವೃತ್ತಿಯನ್ನಾಗಿ ಅವಲಂಬಿಸಿ ಕೊಂಡಿದ್ದಾರೆ.

ಪಶು ಸಾಕಣಿಕೆ: ಅಲೆಮಾರಿಗಳಾದುದರಿಂದ ಇವರು ಅಲೆದಾಟ ನಡೆಸಿದರೂ ತಾವು ನೆಲೆನಿಂತ ಪ್ರದೇಶದ ಅಸುಪಾಸಿನಲ್ಲಿಯೇ ಪಶುಪಾಲನೆ ಮಾಡುತ್ತಾರೆ. ಇವರು ತಮ್ಮ ಗುಡಾರಗಳಲ್ಲಿ ಹಂದಿಗಳನ್ನು ಸಾಕಲು ಇಚ್ಛಿಸುತ್ತಾರೆ. ಇವುಗಳಿಗೆ ಸಾಕಲು ಯಾವುದೇ ಖರ್ಚು-ವೆಚ್ಚಗಳು ಇರುವುದಿಲ್ಲ. ಹಂದಿ ಮಾಂಸ ಅತಿ ಬೇಡಿಕೆ ಇರುವುದ್ದರಿಂದ ಹಂದಿಗಳ ಮಾರಾಟ ಮಾಡುವುದುಂಟು. ಹೀಗಾಗಿ ಹಂದಿ, ಮೇಕೆ, ಕೋಳಿ ಕೆಲವರು ಸಾಕುತ್ತಿದ್ದಾರೆ. ಈ ಸಾಕಾಣಿಕೆ ದೊಡ್ಡ ಪ್ರಮಾಣದಲ್ಲಿರದೆ ತುಂಬಾ ಚಿಕ್ಕ

ಪ್ರಮಾಣದಲ್ಲಿದೆ. ಸಾಮಾನ್ಯವಾಗಿ ಹಂದಿ ಮೇಕೆ, ಪ್ರಾಣಿಗಳನ್ನು ಸಾಕಲು ಇವರಲ್ಲಿಯ ವೃದ್ಧರು ಹಾಗೂ ಮಕ್ಕಳು ಸಹಾಯಕರಾಗಿದ್ದಾರೆ.

ಮೀನುಗಾರಿಕೆ: ಕೆಲವು ಅಲೆಮಾರಿ ಸಮುದಾಯಗಳು ಮೀನು ಹಿಡಿಯುವುದು ಇವರ ಕಸುಬಾಗಿದೆ. ಇದಕ್ಕೆ ಸಣ್ಣಪುಟ್ಟ ಕೆರೆ, ಹಳ್ಳ, ಹೊಳೆಗಳಿಗೆ ಹೋಗುವುದಲ್ಲದೆ, ಸಾಮಾನ್ಯವಾಗಿ ನೀರಿನ ಸಾಂದ್ರತೆ ಹೆಚ್ಚಿರುವ ಪ್ರದೇಶಗಳಿಗೆ ವಲಸೆ ಹೋಗಿ, ದಡದಲ್ಲಿ ಗುಡಾರ ಹಾಕಿಕೊಂಡು ಬದುಕುವರು. ಬುಟ್ಟಿಯಲ್ಲಿ ತಂದು ಬಿಟ್ಟು, ಮೀನಿನ ಮಾಲೀಕರಿಗೆ ಕೊಡುತ್ತೇವೆ ಹಾಗೂ ಮಾರಲು ಪೇಟೆಗೆ ಹೋಗುತ್ತೇವೆ ಎಂದು ಸಮೀಕ್ಷೆಯಲ್ಲಿ ವಿಷಯ ಹಂಚಿಕೊಳ್ಳುತ್ತಾರೆ.

ಸಣ್ಣಪುಟ್ಟ ವ್ಯಾಪಾರ: ಕೆಲವು ಅಲೆಮಾರಿ ಸಮುದಾಯಗಳಾದ ಬುಡ್ಗಜಂಗಮ್, ಸಿಂಧೋಳ್ಳು, ಶಿಳ್ಳೇಕ್ಯಾತ ಸಮುದಾಯಗಳು ತಮ್ಮ ಮೂಲ ವೃತ್ತಿಯ ಜೊತೆಯಲ್ಲಿ ಮೀನುಗಾರಿಕೆ ಮತ್ತು ಸಣ್ಣಪುಟ್ಟ ವ್ಯಾಪಾರಗಳನ್ನು ಮಾಡುತ್ತಾರೆ. ಕ್ರಮೇಣವಾಗಿ ಇವರು ತಮ್ಮ ಕುಲಕಸುಬು ಕಾಯಕವನ್ನು ಕಡಿಮೆಗೊಳಿಸಿದ್ದಾರೆ. ಊರುಗಳನ್ನು ಅಲೆದಾಡುವುದನ್ನು ನಿಲ್ಲಿಸಿ ತಮಗೆ ಅನುಕೂಲಕರವಾದ ಪ್ರದೇಶಗಳನ್ನು ಗುರುತಿಸಿಕೊಂಡು ಪುರುಷರು ಕೂಲಿ ಕೆಲಸಗಳಿಗೆ ಹೋಗುವರು. ಹೆಣ್ಣುಮಕ್ಕಳು ಕೌದಿ ಹೊಲಿಯುವುದು, ಸಣ್ಣಪುಟ್ಟ ವ್ಯಾಪಾರ ಮಾಡಿಕೊಂಡು ತಮ್ಮ ಹೊಟ್ಟೆಯನ್ನು ತುಂಬಿಸಿ ಕೊಳ್ಳುವರು. ಹೀಗಾಗಿ ಇವರ ಕುಟುಂಬಗಳ ಆರ್ಥಿಕ ಪರಿಸ್ಥಿತಿ ಬಡತನದಿಂದ ಕೂಡಿ ಇನ್ನು ಅನೇಕರ ಕುಟುಂಬಗಳು ಗುಡಾರದಲ್ಲಿ ಜೀವನ ಕಳೆಯುವರು. ಮತ್ತು ಜೀವನೋಪಾಯಕ್ಕಾಗಿ ಬೇರೆ ವೃತ್ತಿಗಳನ್ನು ಕೈಗೊಂಡು ಕುಟುಂಬಗಳನ್ನು ಸಲಹುತ್ತಿದ್ದಾರೆ. ಇವರಿಗೆ ಸಾಮಾಜಿಕ ಆರ್ಥಿಕ ಭದ್ರತೆ ಇರುವುದಿಲ್ಲ. ಒಟ್ಟಾರೆಯಾಗಿ ಇವರ ಬದುಕು ಅತಂತ್ರ ಸ್ಥಿತಿಯಲ್ಲಿದೆ. ಅಲ್ಲಲ್ಲಿ ತಮ್ಮ ಮಕ್ಕಳಿಗೆ ಶಿಕ್ಷಣ ಕಲಿಯಲು ಕಳುಹಿಸುತ್ತಿದ್ದಾರೆ. ಇವರು ನಾಳಿನ ಬದುಕಿಗಾಗಿ ಗಂಭೀರವಾಗಿ ಚಿಂತೆ ಮಾಡುವುದಿಲ್ಲ.

ಮಹಿಳೆಯರು: ಅಲೆಮಾರಿ ಸಮುದಾಯಗಳ ಮಹಿಳೆಯರು ಬೀದಿಯಲ್ಲಿ ಸೂಜಿ, ಹೇರ್‌ಪಿನ್, ಪ್ಲಾಸ್ಟಿಕ್ ಆಟಿಕೆ ಸಾಮಾನುಗಳನ್ನು ಮಾರಾಟ ಮಾಡುವರು. ಇವರು ಹೆಚ್ಚಾಗಿ ಗ್ರಾಮೀಣ ಭಾಗಗಳಲ್ಲಿ ಹಾಗೂ ವಾರದ ಸಂತೆಗಳಲ್ಲಿ, ಪಟ್ಟಣದ ರಸ್ತೆ ಬದಿಗಳಲ್ಲಿ, ಬೀದಿಗಳಲ್ಲಿ ಮಾರಾಟ ಮಾಡುವರು. ಮಹಿಳೆಯರು ಮುಂಜಾನೆ ೬ ಗಂಟೆಗೆ ಹೋಗಿ, ಸಂಜೆ ತಮ್ಮ ಮನೆಗಳಿಗೆ ಬರುವರು. ಹೀಗೆ ದಿನವೊಂದಕ್ಕೆ ನೂರು ರೂಪಾಯಿಗಳಿಂದ ನೂರು ಐವತ್ತು ರೂಪಾಯಿಗಳವರೆಗೂ ಸಂಪಾದನೆ ಮಾಡುತ್ತೇವೆಂದು ಹೇಳುವರು. ಪಾತ್ರೆ ಸಾಮಾನುಗಳು, ಕೊಡಪಾನಗಳನ್ನು ಬೀದಿಗಳಲ್ಲಿಟ್ಟು ಅಥವಾ ತಲೆ ಮೇಲಿಟ್ಟುಕೊಂಡು ಕೂಗಿ ಮಾರಾಟ ಮಾಡುವರು. ಬೆಳಿಗ್ಗೆ ವ್ಯಾಪಾರವಾದರೆ ಹತ್ತಾರು ರೂಪಾಯಿಗಳು ಲಾಭ ಸಿಗುವುದುಂಟು. ಇತ್ತೀಚೆಗೆ ಯುವಕ ಯುವತಿಯರ ಗೋಡೆ ಕಟ್ಟುವ ಕೆಲಸಕ್ಕೆ ಸಹಾಯಕರಾಗಿ ಕೆಲಸ ಮಾಡಲು ಹೋಗುತ್ತಾರೆ. ಚಿಕ್ಕಮಕ್ಕಳು ಒಡೆದ ಗಾಜು, ಹಾಳಾದ

ಪ್ಲಾಸ್ಟಿಕ್, ಕೂದಲು, ಪೇಪರ್ ಹಾಗೂ ರಟ್ಟು ಆಯ್ದುಕೊಂಡು ನಾಲ್ಕಾರು ರೂಪಾಯಿ ಸಂಪಾದನೆ ಮಾಡುವರು.

ಕೊಡಪಾನ ವ್ಯಾಪಾರ: ಪ್ಲಾಸ್ಟಿಕ್ ಕೊಡಪಾನಗಳನ್ನು ತಲೆಯ ಮೇಲೆ ಹೊತ್ತುಕೊಂಡು ಸೈಕಲ್‌ಗಳ ಮೇಲೆ ಇಟ್ಟುಕೊಂಡು ಪ್ಲಾಸ್ಟಿಕ್ ಕೊಡಪಾನ...... ಬೇಕೇನಪ್ಪ ಎಂದು ಕೂಗಿಕೊಳ್ಳುತ್ತಾ ಹೋಗುವರು. ಮಾರುಕಟ್ಟೆಯಲ್ಲಿ ಒಂದು ಕೊಡಪಾನ ೨೦ ರೂಪಾಯಿಗಳ ದರ ನಿಗದಿಯಾದರೆ ಮಾರಾಟ ಮಾಡುವುದು ೩೦.೦೦ ರೂ.ಗಳಿಗೆ. ಲಾಭ ಬರುವುದು ೧೦ ರೂಪಾಯಿಗಳು. ಹೀಗೆ ದಿನದಲ್ಲಿ ಹತ್ತಕ್ಕಿಂತ ಹೆಚ್ಚಾಗಿ ಕೊಡಪಾನ ಮಾರಾಟ ಮಾಡುವುದುಂಟು.

ಕೊಡಪಾನಗಳಿಗೆ ತೇಪೆ ಹಾಕುವುದು: ಪ್ಲಾಸ್ಟಿಕ್ ಕೊಡಪಾನಗಳಿಗೆ ತೇಪೆ ಹಾಕುವ ಕೆಲಸವನ್ನು ಕಲಿತುಕೊಂಡಿದ್ದಾರೆ. ಕೊಡಪಾನಗಳಿಗೆ ತೇಪೆಹಾಕಲು ಪ್ಲಾಸ್ಟಿಕ್ ತುಂಡುಗಳು ಹಳೆಪ್ಲೇಟ್ ಬೇಕಾಗುತ್ತದೆ. ಒಂದು ಡಬ್ಬಿಯಲ್ಲಿ ಬೆಂಕಿಕೆಂಡ ಇರುತ್ತದೆ. ಬೆಸುಗೆ ಹಾಕಲು ಊದುಗೊಳವಿ ಮೂಲಕ ಶಾಖ ಉತ್ಪತ್ತಿ ಮಾಡುವ ಮೂಲಕ ತೇಪೆ ಹಾಕುವರು.

ಅಲೆಮಾರಿ ಸಮುದಾಯಗಳ ಆರ್ಥಿಕತೆ ಕೆಳಮಟ್ಟದಲ್ಲಿದೆ. ಒಂದೊತ್ತಿನ ಊಟಕ್ಕಾಗಿ ಪರದಾಡುವಂತಹ ಸ್ಥಿತಿ ಇವರದಾಗಿದೆ. ಒಂದು ದಿನ ಭಿಕ್ಷಾಟನೆ ಅಥವಾ ದುಡಿಯಲು ಹೋಗಲಿಲ್ಲವೆಂದರೆ ಅಂದು ಉಪವಾಸ. ಕೆಲವು ಕುಟುಂಬಗಳಲ್ಲಿ ಒಬ್ಬರಿಗಿಂತ ಹೆಚ್ಚು ಜನ ದುಡಿಯುವವರಿದ್ದರೂ ಸಹ ಆರ್ಥಿಕಮಟ್ಟ ಸುಧಾರಿಸಿಲ್ಲ. ಇವರಿಗೆ ಯಾವುದಾದರೂ ಸಣ್ಣಮಟ್ಟ ವ್ಯಾಪಾರ ಮಾಡುವುದಕ್ಕೆ ಹಣಕಾಸಿನ ಕೊರತೆ ಕಾಣುತ್ತದೆ. ಅವರಿಗೆ ಅವರದ್ದೆ ಆದ ಒಂದಿಂಚೂ ಕೃಷಿ ಭೂಮಿಯಿಲ್ಲ. ಕೃಷಿ ಮತ್ತು ಪಶುಪಾಲನೆ ಸಾಧ್ಯವಾಗುತ್ತಿಲ್ಲ. ಮೋಸದ ವ್ಯವಹಾರ ಅವರಿಗೆ ತಿಳಿದಿಲ್ಲ. ಇಂದಿಗೂ ಜೀವನಕ್ಕಾಗಿ ಅಲೆದಾಟ ತಪ್ಪಿಲ್ಲ. ಇವರ ಮೂಲಭೂತ ಬೇಡಿಕೆಗಳಾದ ಊಟ, ಬಟ್ಟೆ, ವಸತಿಗಳು ಪೂರ್ತಿಯಾಗಿ ಲಭ್ಯವಾಗಿಲ್ಲ. ಸರ್ಕಾರದ ಕಾನೂನುಗಳು ಗೊತ್ತಿಲ್ಲ. ಚುನಾವಣೆಯಲ್ಲಿ ಪ್ರತಿನಿಧಿಸಿಲ್ಲ. ಒಟ್ಟಾರೆಯಾಗಿ ಹೇಳುವುದಾದರೆ ಕರ್ನಾಟಕದಲ್ಲಿ ಬಹುತೇಕ ಅಲೆಮಾರಿ ಸಮುದಾಯಗಳ ಬದುಕು ಅತಂತ್ರ ಸ್ಥಿತಿಯಲ್ಲಿದೆ. ಇದಕ್ಕೆ ಯಾದಗಿರಿ ಜಿಲ್ಲೆಯ ಅಲೆಮಾರಿಗಳು ಹೊರತಾಗಿಲ್ಲ.

ಪ್ರತ್ಯೇಕವಾಗಿ ಜಿಲ್ಲೆಯ ಮೂರು ತಾಲೂಕು(ಯಾದಗಿರಿ, ಶಹಾಪುರ, ಸುರುಪುರ)ಗಳ ನೆಲೆಗಳಲ್ಲಿ ಅಲೆಮಾರಿ ಸಮುದಾಯಗಳ ಲಿಂಗವಾರು ಕಸುಬುಗಳ ಪ್ರಮಾಣವನ್ನು ಅವಲೋಕಿಸಿ ಈ ಮುಂದಿನಂತೆ ವಿಶ್ಲೇಷಿಸಲಾಗಿದೆ.

ಕಾಯಕರ್ಹವಲ್ಲದ ವಯೋಗುಂಪು

ಸರ್ಕಾರವು ಸಾಮಾನ್ಯವಾಗಿ ೦ ದಿಂದ ೧೭ ವಯೋಮಾನದವರು ಯಾವುದೇ ವೃತ್ತಿ ಅಥವಾ ನೇಮಕಾತಿಗಳಿಗೆ ಅನರ್ಹವೆಂದು ಹಾಗೂ ೬೧ರ ಮೇಲ್ಪಟ್ಟವರು ವೃದ್ಧರೆಂದು, ದೈಹಿಕ ದೌರ್ಬಲ್ಯ

ದಿಂದಾಗಿ ಯಾವುದೇ ಕೆಲಸ ಮಾಡಲು ಅಸಮರ್ಥರೆಂದು ಭಾವಿಸಲಾಗಿದೆ. ಹೀಗಾಗಿ ೦ ರಿಂದ ೧೭ರ ವಯೋಮಾನದವರು ಹಾಗೂ ೬೧ ವರ್ಷ ಮೇಲ್ಪಟ್ಟ ವಯೋಮಾನದವರನ್ನು ಅವಲಂಬಿತ ವರ್ಗವೆಂದು ಮತ್ತು ಕೆಲಸ ನಿರ್ವಹಿಸಲು ಶ್ರಮಿಕವರ್ಗಕ್ಕೆ ಅನರ್ಹರೆಂದು ಪರಿಗಣಿಸಿ ಕಾಯಕರ್ಹವಲ್ಲದ ಗುಂಪೆಂದು ಪರಿಗಣಿಸಿದೆ.

ಆದರೆ, ಇಲ್ಲಿ ಕಂಡುಬರುವ ಅಲೆಮಾರಿಗಳಲ್ಲಿ ಇದು ಅಪವಾದವೆಂಬಂತೆ ತೋರುತ್ತದೆ. ಅಂದರೆ ಸರಕಾರದ ಲೆಕ್ಕದಲ್ಲಿ ಕಾಯಕರ್ಹವಲ್ಲದವರು ಸಹ ಇವರಲ್ಲಿ ಕಾಯಕ ಮಾಡುವುದನ್ನು ಕಾಣಬಹುದಾಗಿದೆ. ಈ ವಯೋಗುಂಪಿನವರೂ ಒಂದಿಲ್ಲೊಂದು ಕಾಯಕಗಳಲ್ಲಿ ತೊಡಗಿಸಿಕೊಂಡಿರುವುದರಿಂದ ನಿರುದ್ಯೋಗಿಗಳು ಕಾಣಸಿಗರು, ಮತ್ತು ಕಾಯಕರ್ಹರಿಗಿಂತ ಹೆಚ್ಚಿನವರು ಕೆಲಸ ಮಾಡುವುದನ್ನು ಗಮನಿಸಬಹುದು. ಲಿಂಗಭೇದ ಮತ್ತು ವಯೋಭೇಧವಿಲ್ಲದೇ ಇವರು ಇತರೆ ಹಾಗೂ ಧಾರ್ಮಿಕ ಭಿಕ್ಷಾಟನೆಯಲ್ಲಿ ತೊಡಗುವುದು ಸಹಜ. ಸರ್ಕಾರದ ದೃಷ್ಟಿಯಲ್ಲಿ ಇವರು ಕೈಗೊಂಡಿರುವ ಕಾಯಕಗಳಿಗೆ ಯಾವುದೇ ಮಾನ್ಯತೆಗಳಿರುವುದಿಲ್ಲ.

೪.೮ ಅಲೆಮಾರಿ ಸಮುದಾಯಗಳ ಕಾಯಕರ್ಹರ ಪ್ರಮಾಣ

ಯಾದಗಿರಿ ತಾಲೂಕಿನ ಒಟ್ಟಾರೆ ಅಲೆಮಾರಿ ಸಮುದಾಯಗಳ ಗ್ರಾಮವಾರು ೩೩೦ ಕುಟುಂಬಗಳನ್ನು ಅವಲೋಕಿಸಲಾಗಿ ಒಟ್ಟು ಜನಸಂಖ್ಯೆ ೧೫೮೩ರಷ್ಟಿದೆ. ಇದರಲ್ಲಿ ೦-೧೭ ವಯೋಮಾನದವರು ಒಟ್ಟು ಶೇ ೪೨.೯೬ರಷ್ಟಿದ್ದಾರೆ. ಇದರಲ್ಲಿ ಪುರುಷರು ಶೇ ೯೩.೩೨ರಷ್ಟು ಹಾಗೂ ಮಹಿಳೆಯರು ಶೇ ೯೩.೨೪ರಷ್ಟಿದ್ದಾರೆ. ಹಾಗೂ ೬೧ರ ಮೇಲ್ಪಟ್ಟ ವಯೋಮಾನದವರು ಒಟ್ಟು ಶೇ ೩.೧೯ರಷ್ಟಿದ್ದಾರೆ. ಇದರಲ್ಲಿ ಪುರುಷರು ೬.೬೮ರಷ್ಟು ಹಾಗೂ ಮಹಿಳೆಯರು ೬.೭೬ರಷ್ಟಿದ್ದಾರೆ. ಕಾಯಕರ್ಹರ ಪ್ರಮಾಣದಲ್ಲಿರುವ ೧೮-೬೦ರ ವಯೋಮಾನದವರು ಶೇ. ೫೩.೯೫ರಷ್ಟಿದ್ದು, ಲಿಂಗವಾರು ಪುರುಷರು ಶೇ. ೫೦.೮೨ರಷ್ಟು, ಮಹಿಳೆಯರು ಶೇ. ೪೯.೧೮ರಷ್ಟಿದ್ದಾರೆ.

ಕೋಷ್ಟಕ ೪.೮.೧. ಯಾದಗಿರಿ ತಾಲೂಕಿನ ಅಲೆಮಾರಿ ಸಮುದಾಯಗಳ ಗ್ರಾಮವಾರು ಕಾಯಕರ್ಹರು, ಕಾಯಕಸ್ಥರು ಹಾಗೂ ಅವಲಂಬಿತರ ಲಿಂಗವಾರು ಪ್ರಮಾಣ

ನೆಲೆಗಳು	ಅಲೆಮಾರಿ ಸಮುದಾಯಗಳು	ಕಾಯಕರ್ಹರು			ಕಾಯಕಸ್ಥರು			ಅವಲಂಬಿತವರ್ಗ		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಕೊಂಕಲ್	ಬೈಲಪತ್ತಾರ	೭	೯	೧೬	೭	೯	೧೬	-	-	-
	ಗೊಂದಳಿ	೯	೫	೧೪	೯	೫	೧೪	-	-	-
	ಜೋಗಿ	೩	೩	೬	೫	೪	೯	೨	೧	೩
	ಸುಡುಗಾಡುಸಿದ್ಧ	೧೦	೧೧	೨೧	೧೨	೧೬	೨೮	೨	೫	೭
	ಒಟ್ಟು	೨೯	೨೮	೫೭	೩೩	೩೪	೬೭	೪	೬	೧೦

ಗುರುಮಠಕಲ್	ಚನ್ನದಾಸ	೩೫	೪೦	೭೫	೩೫	೪೦	೭೫	–	–	–
	ಬುಡ್ಗಜಂಗಮ್	೧೦	೮	೧೮	೧೦	೮	೧೮	–	–	–
	ಬೈಲಪತ್ತಾರ	೫	೭	೧೨	೫	೭	೧೨	–	–	–
	ಹಂಡಿಜೋಗಿ	೪	೫	೯	೪	೫	೯	–	–	–
	ಒಟ್ಟು	೫೪	೬೦	೧೧೪	೫೪	೬೦	೧೧೪	–	–	–
ಯಾದಗಿರಿ	ಕೊರವ	೫೭	೪೨	೯೯	೬೭	೬೧	೧೨೮	೧೦	೧೯	೨೯
	ಕೋಲೆಬಸವ	೭	೭	೧೪	೭	೭	೧೪	–	–	–
	ಗೊಂದಳಿ	೨೭	೩೦	೫೭	೨೭	೩೦	೫೭	–	–	–
	ಘಿಸಾಡಿ	೮	೮	೧೬	೮	೯	೧೭	–	೧	೧
	ಚನ್ನದಾಸ	೯	೭	೧೬	೧೨	೯	೨೧	೩	೨	೫
	ಬುಡ್ಗಜಂಗಮ್	೩೫	೩೬	೭೧	೩೫	೩೬	೭೧	–	–	–
	ಬೈಲಪತ್ತಾರ	೩೭	೩೮	೭೫	೩೭	೩೮	೭೫	–	–	–
	ಶಿಳ್ಳೇಕ್ಯಾತ	೨೦	೧೮	೩೮	೨೦	೧೮	೩೮	–	–	–
	ಸಿಕ್ಲಿಗರ	೯	೫	೧೪	೯	೫	೧೪	–	–	–
	ಸಿಂಧೋಳ್ಳು	೨೨	೨೮	೫೦	೨೩	೩೨	೫೫	೧	೪	೫
	ಹಾವಾಡಿಗ	೪	೩	೭	೪	೩	೭	–	–	–
	ಹೆಳವ	೧೦	೧೧	೨೧	೧೨	೧೧	೨೩	೨		೨
	ಒಟ್ಟು	೨೪೫	೨೩೩	೪೭೮	೨೬೧	೨೫೯	೫೨೦	೧೬	೨೬	೪೨
ಯರಗೋಳು	ಬುಡಬುಡಕಿ	೭	೮	೧೫	೮	೮	೧೬	೧	–	೧
	ಗೊಂದಳಿ	೮	೮	೧೬	೭	೯	೧೬	೧	೧	೨
	ಜೋಗಿ	೪	೩	೭	೪	೪	೮	–	೧	೧
	ಕೋಲೆಬಸವ	೯	೭	೧೬	೯	೭	೧೬	–	–	–
	ಒಟ್ಟು	೨೮	೨೬	೫೪	೨೮	೨೮	೫೬	೨	೨	೪
ಸೈದಾಪುರ	ಬುಡ್ಗಜಂಗಮ್	೪೯	೪೩	೯೨	೪೯	೪೩	೯೨	–	–	–
ಹತ್ತಿಕುಣಿ	ಕೋಲೆಬಸವ	೭	೭	೧೪	೭	೮	೧೫	–	೧	೧
	ಚನ್ನದಾಸ	೧೦	೯	೧೯	೧೨	೧೪	೨೬	೨	೫	೭
	ಜೋಗಿ	೭	೭	೧೪	೭	೯	೧೬	–	೨	೨
	ಸುಡುಗಾಡುಸಿದ್ಧ	೫	೭	೧೨	೫	೭	೧೨	–	–	–
	ಒಟ್ಟು	೨೯	೩೦	೫೯	೩೧	೩೮	೬೯	೨	೮	೧೦
ಒಟ್ಟು ಯಾದಗಿರಿ ತಾಲೂಕು		೪೩೪	೪೨೦	೮೫೪	೪೫೬	೪೬೨	೯೧೮	೨೪	೪೨	೬೬

ಕೋಷ್ಟಕ ೪.೮.೧ನ್ನು ಗಮನಿಸಿದಾಗ ಯಾದಗಿರಿ ತಾಲೂಕಿನ ಒಟ್ಟಾರೆ ಅಲೆಮಾರಿ ಸಮುದಾಯಗಳ ಕಾಯಕರ್ಹರು ಶೇ. ೪೬.೪೬ ಇದರಲ್ಲಿ ಲಿಂಗವಾರು ಪುರುಷರು ಶೇ ೫೦.೮೨ರಷ್ಟು, ಮಹಿಳೆಯರು ಶೇ ೪೯.೧೮ರಷ್ಟಿದ್ದಾರೆ. ಕಾಯಕಸ್ಥರು ಶೇ. ೪೯.೯೫ರಷ್ಟಿದ್ದು ಇದರಲ್ಲಿ ಪುರುಷರು ಶೇ ೪೬.೩೪ರಷ್ಟು,

ಮಹಿಳೆಯರು ಶೇ ೪೬.೫ರಷ್ಟಿದ್ದಾರೆ. ಅವಲಂಬಿತವರ್ಗ ಶೇ. ೩.೯೧ರಷ್ಟಿದ್ದು ಇದರಲ್ಲಿ ಪುರುಷರು ಶೇ ೨.೪೪ರಷ್ಟು, ಮಹಿಳೆಯರು ಶೇ ೪.೨೭ರಷ್ಟಿದ್ದಾರೆ.

ಶಹಾಪುರ ತಾಲೂಕಿನ ಒಟ್ಟಾರೆ ಅಲೆಮಾರಿ ಸಮುದಾಯಗಳ ಗ್ರಾಮವಾರು ೧೩೧ ಕುಟುಂಬಗಳನ್ನು ಅವಲೋಕಿಸಲಾಗಿ ಒಟ್ಟು ಜನಸಂಖ್ಯೆ ೮೩೫ರಷ್ಟಿದೆ. ಇದರಲ್ಲಿ ೦–೧೭ ವಯೋಮಾನದವರು ಒಟ್ಟು ಶೇ ೪೪.೬೫ರಷ್ಟಿದ್ದಾರೆ. ಇದರಲ್ಲಿ ಪುರುಷರು ಶೇ ೯೪.೭೪ರಷ್ಟು ಹಾಗೂ ಮಹಿಳೆಯರು ಶೇ ೯೪.೯೨ರಷ್ಟಿದ್ದಾರೆ. ಹಾಗೂ ೬೧ರ ಮೇಲ್ಪಟ್ಟ ವಯೋಮಾನದವರು ಒಟ್ಟು ಶೇ ೪.೩೪ರಷ್ಟಿದ್ದಾರೆ. ಇದರಲ್ಲಿ ಪುರುಷರು ೫.೨೬ರಷ್ಟು ಹಾಗೂ ಮಹಿಳೆಯರು ೫.೦೮ರಷ್ಟಿದ್ದಾರೆ. ಕಾಯಕರ್ಹರ ಪ್ರಮಾಣದಲ್ಲಿರುವ ೧೮–೬೦ರ ವಯೋಮಾನದವರು ಶೇ. ೫೧.೦೧ರಷ್ಟಿದ್ದು, ಲಿಂಗವಾರು ಪುರುಷರು ಶೇ. ೪೯.೫೪ರಷ್ಟು, ಮಹಿಳೆಯರು ಶೇ. ೫೦.೪೬ರಷ್ಟಿದ್ದಾರೆ.

ಕೋಷ್ಟಕ ೪.೮.೨. ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ಅಲೆಮಾರಿ ಸಮುದಾಯಗಳ ಗ್ರಾಮವಾರು ಕಾಯಕರ್ಹರು, ಕಾಯಕಸ್ಥರು ಹಾಗೂ ಅವಲಂಬಿತರ ಲಿಂಗವಾರು ಪ್ರಮಾಣ

ನೆಲೆಗಳು	ಅಲೆಮಾರಿ ಸಮುದಾಯಗಳು	ಕಾಯಕರ್ಹರು			ಕಾಯಕಸ್ಥರು			ಅವಲಂಬಿತವರ್ಗ		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಅತ್ತಿಗೂಡುರು	ಕೊರಮ	೩	೩	೬	೪	೪	೮	೧	೧	೨
	ಬುಡ್ಗಜಂಗಮ್	೭	೮	೧೫	೯	೧೧	೨೦	೨	೩	೫
	ಒಟ್ಟು	೧೦	೧೧	೨೧	೧೩	೧೫	೨೮	೩	೪	೭
ಖಾನಪುರ	ಫಿಸಾಡಿ	೫	೪	೯	೬	೪	೧೦	೧	–	೧
	ಬುಡ್ಗಜಂಗಮ್	೩	೫	೮	೪	೬	೧೦	೧	೧	೨
	ಒಟ್ಟು	೮	೯	೧೭	೧೦	೧೦	೨೦	೨	೧	೩
ಗೋಗಿ	ಬುಡ್ಗಜಂಗಮ್	೧೨	೧೯	೩೧	೧೬	೧೬	೩೨	೪	೩	೭
ದಿಗ್ಗಿ	ಗೊಂದಳಿ	೧೦	೧೧	೨೧	೧೨	೧೮	೨೨	೨	೭	೯
	ಜೋಗೇರ	೧	೨	೨	೧	೨	೩	–	–	೧
	ಒಟ್ಟು	೧೧	೧೩	೨೩	೧೩	೨೦	೨೫	೨	೭	೧೦
ದೋರನಹಳ್ಳಿ	ಕೊರಮ	೭	೯	೧೬	೭	೯	೧೬	–	–	–
	ಬುಡ್ಗಜಂಗಮ್	೩	೫	೮	೪	೬	೧೦	೧	೧	೨
	ಬೈಲಪತ್ತಾರ್	೫	೪	೯	೬	೪	೧೦	೧	–	೧
	ಹೆಳವ	೪	೪	೮	೫	೫	೧೦	೧	೧	೨
	ಒಟ್ಟು	೧೯	೨೨	೪೧	೨೧	೨೪	೪೫	೩	೨	೫

ಶಹಾಪುರ	ಬುಡ್ಗಜಂಗಮ್	೩೬	೩೦	೬೬	೩೬	೩೦	೬೬	–	–	–
	ಶಿಳ್ಳೇಕ್ಯಾತ	೧೭	೧೩	೩೦	೧೭	೧೩	೩೦	–	–	–
	ಒಟ್ಟು	೫೩	೪೩	೯೬	೫೩	೪೩	೯೬	–	–	–
ಸಗರ	ಕೊರಮ	೧೧	೧೨	೨೩	೧೧	೧೨	೨೩	೦	೦	೦
	ಗೊಂದಳಿ	೫	೫	೧೦	೫	೬	೧೧	೦	೧	೧
	ಬುಡ್ಗಜಂಗಮ್	೧೭	೧೩	೩೦	೧೮	೧೨	೩೦	೧	೧	೨
	ಬಾಳಸಂತೋಷಿ	೭	೮	೧೫	೯	೧೧	೨೦	೨	೩	೫
	ಹೆಳವ	೧೦	೧೧	೨೧	೧೨	೭	೧೯	೨	೪	೬
	ಒಟ್ಟು	೫೦	೪೯	೯೯	೫೫	೪೭	೧೦೨	೫	೨	೭
ಒಟ್ಟು ಶಾಹಪುರ ತಾಲೂಕು		೧೬೩	೧೬೫	೩೨೯	೧೮೧	೧೭೫	೩೫೬	೧೯	೧೯	೩೯

ಕೋಷ್ಟಕ ೪.೮.೨ನ್ನು ಗಮನಿಸಿದಾಗ ಶಹಾಪುರ ತಾಲೂಕಿನ ಒಟ್ಟಾರೆ ಅಲೆಮಾರಿ ಸಮುದಾಯಗಳ ಕಾಯಕರ್ಹರು ಶೇ. ೪೫.೪೪ರಷ್ಟು, ಇದರಲ್ಲಿ ಲಿಂಗವಾರು ಪುರುಷರು ಶೇ ೪೯.೫೪ರಷ್ಟು, ಮಹಿಳೆಯರು ಶೇ ೫೦.೪೬ರಷ್ಟಿದ್ದಾರೆ. ಕಾಯಕಸ್ಥರು ಶೇ. ೪೯.೧೭ರಷ್ಟಿದ್ದು ಇದರಲ್ಲಿ ಪುರುಷರು ಶೇ ೪೫.೮೨ರಷ್ಟು, ಮಹಿಳೆಯರು ಶೇ ೪೪.೩೧ರಷ್ಟಿದ್ದಾರೆ. ಅವಲಂಬಿತವರ್ಗ ಶೇ. ೫.೩೯ರಷ್ಟಿದ್ದು ಇದರಲ್ಲಿ ಪುರುಷರು ಶೇ ೪.೮೧ರಷ್ಟು, ಮಹಿಳೆಯರು ಶೇ ೪.೮೧ರಷ್ಟಿದ್ದಾರೆ.

ಸುರುಪುರ ತಾಲೂಕಿನ ಒಟ್ಟಾರೆ ಅಲೆಮಾರಿ ಸಮುದಾಯಗಳ ಗ್ರಾಮವಾರು ೧೭೭ ಕುಟುಂಬಗಳನ್ನು ಅವಲೋಕಿಸಲಾಗಿ ಒಟ್ಟು ಜನಸಂಖ್ಯೆ ೮೩೫ರಷ್ಟಿದೆ. ಇದರಲ್ಲಿ ೦–೧೭ ವಯೋಮಾನದವರು ಒಟ್ಟು ಶೇ ೪೬.೧೧ರಷ್ಟಿದ್ದಾರೆ. ಇದರಲ್ಲಿ ಪುರುಷರು ಶೇ ೯೪.೭೪ರಷ್ಟು ಹಾಗೂ ಮಹಿಳೆಯರು ಶೇ ೯೪.೯೨ರಷ್ಟಿದ್ದಾರೆ. ಹಾಗೂ ೬೧ರ ಮೇಲ್ಪಟ್ಟ ವಯೋಮಾನದವರು ಒಟ್ಟು ಶೇ ೨.೫೧ರಷ್ಟಿದ್ದಾರೆ. ಇದರಲ್ಲಿ ಪುರುಷರು ೫.೨೬ರಷ್ಟು ಹಾಗೂ ಮಹಿಳೆಯರು ೫.೦೮ರಷ್ಟಿದ್ದಾರೆ. ಕಾಯಕರ್ಹರ ಪ್ರಮಾಣದಲ್ಲಿರುವ ೧೮–೬೦ರ ವಯೋಮಾನದವರು ಶೇ. ೫೧.೩೮ರಷ್ಟಿದ್ದು, ಲಿಂಗವಾರು ಪುರುಷರು ಶೇ. ೫೦.೩೫ರಷ್ಟು, ಮಹಿಳೆಯರು ಶೇ. ೪೯.೬೫ರಷ್ಟಿದ್ದಾರೆ.

ಕೋಷ್ಟಕ ೪.೮.೩. ಯಾದಗಿರಿ ಜಿಲ್ಲೆಯ ಸುರುಪುರ ತಾಲೂಕಿನ ಅಲೆಮಾರಿ ಸಮುದಾಯಗಳ ಗ್ರಾಮವಾರು ಕಾಯಕರ್ಹರು, ಕಾಯಕಸ್ಥರು ಹಾಗೂ ಅವಲಂಬಿತರ ಲಿಂಗವಾರು ಪ್ರಮಾಣ

ನೆಲೆಗಳು	ಅಲೆಮಾರಿ ಸಮುದಾಯಗಳು	ಕಾಯಕರ್ಹರು			ಕಾಯಕಸ್ಥರು			ಅವಲಂಬಿತವರ್ಗ		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಕಕ್ಕೇರಿ	ಗೊಂದಳಿ	೨೦	೧೬	೩೬	೨೦	೧೭	೩೭	–	೧	೧
	ಘಿಸಾಡಿ	೧೦	೧೨	೨೨	೧೧	೧೧	೨೨	೧	–	೧
	ಬುಡ್ಗಜಂಗಮ್	೧೦	೧೧	೨೧	೧೨	೧೮	೨೨	೨	೭	೯
	ಬೈಲಪತ್ತಾರ	೭	೮	೧೫	೭	೧೦	೧೭	–	೨	೨
	ಒಟ್ಟು	೪೭	೪೭	೯೪	೫೦	೫೬	೯೮	೩	೧೦	೧೩

ಕೆಂಬಾವಿ	ಬುಡ್ಗಜಂಗಮ್	೬	೭	೧೩	೧೧	೧೦	೨೧	೫	೩	೮
	ಸಿಂಧೋಳ್ಳು	೫	೭	೧೨	೬	೯	೧೫	೧	೨	೩
	ಒಟ್ಟು	೧೧	೧೪	೨೫	೧೭	೧೯	೩೬	೬	೫	೧೧
ಕೊಡೆಕಲ್ಲು	ಗೊಂದಳಿ	೭	೯	೧೬	೧೦	೯	೧೯	೩	–	೩
	ಬುಡ್ಗಜಂಗಮ್	೪	೪	೮	೬	೬	೧೨	೨	೨	೪
	ಒಟ್ಟು	೧೧	೧೩	೨೪	೧೬	೧೫	೩೧	೫	೨	೭
ತಿಂಥಣಿ	ಸಿಂಧೋಳ್ಳು	೭	೭	೧೪	೯	೮	೧೭	೨	೧	೩
ನಾರಾಯಣಪುರ	ಬುಡ್ಗಜಂಗಮ್	೭	೮	೧೫	೭	೫	೧೨	–	೩	೩
ಲಕ್ಷ್ಮಿಪುರ	ಹೆಳವ	೪	೪	೮	೫	೫	೧೦	೧	೧	೨
ಸುರಪುರ	ಗೊಂದಳಿ	೪	೪	೮	೬	೬	೧೨	೨	೨	೪
	ಶಿಳ್ಳೇಕ್ಯಾತ	೧೧	೧೨	೨೩	೧೧	೧೧	೨೨	–	೧	೧
	ಸಿಂಧೋಳ್ಳು	೫	೫	೧೦	೫	೬	೧೧	–	೧	೧
	ಸುಡುಗಾಡುಸಿದ್ಧ	೬೩	೬೨	೧೨೫	೭೬	೭೮	೧೫೧	೧೩	೧೬	೨೯
	ಹೆಳವ	೨೦	೧೬	೩೬	೨೦	೧೬	೩೬	–	–	–
	ಒಟ್ಟು	೧೦೩	೯೯	೨೦೨	೧೧೧	೧೧೭	೨೨೫	೧೫	೨೦	೩೫
ಹುಣಸಗಿ	ಸುಡುಗಾಡುಸಿದ್ಧ	೨೬	೨೧	೪೭	೨೬	೨೧	೪೭	–	–	–
ಒಟ್ಟು ಸುರಪುರ ತಾಲೂಕು		೨೧೬	೨೧೩	೪೨೯	೨೨೭	೨೩೧	೪೫೮	೩೨	೪೨	೭೪

ಕೋಷ್ಟಕ ೪.೮.೩ನ್ನು ಗಮನಿಸಿದಾಗ ಸುರುಪುರ ತಾಲೂಕಿನ ಒಟ್ಟಾರೆ ಅಲೆಮಾರಿ ಸಮುದಾಯಗಳ ಕಾಯಕರ್ಹರು ಶೇ. ೪೫.೧೧ರಷ್ಟು, ಇದರಲ್ಲಿ ಲಿಂಗವಾರು ಪುರುಷರು ಶೇ ೫೦.೩೫ರಷ್ಟು, ಮಹಿಳೆಯರು ಶೇ ೪೯.೬೫ರಷ್ಟಿದ್ದಾರೆ. ಕಾಯಕಸ್ಥರು ಶೇ. ೪೭೧೧ರಷ್ಟಿದ್ದು ಇದರಲ್ಲಿ ಪುರುಷರು ಶೇ ೮೭.೬೪ರಷ್ಟು, ಮಹಿಳೆಯರು ಶೇ ೮೪.೬೨ರಷ್ಟಿದ್ದಾರೆ. ಅವಲಂಬಿತವರ್ಗ ಶೇ. ೭೭೮ರಷ್ಟಿದ್ದು ಇದರಲ್ಲಿ ಪುರುಷರು ಶೇ ೧೨.೩೬ರಷ್ಟು, ಮಹಿಳೆಯರು ಶೇ ೧೫.೩೮ರಷ್ಟಿದ್ದಾರೆ.

ಮೇಲಿನ ಯಾದಗಿರಿ ಜಿಲ್ಲೆಯನ್ನೊಳಗೊಂಡಂತೆ ಶಹಾಪುರ ಮತ್ತು ಸುರಪುರ ತಾಲೂಕಿನ ಕಾಯಕಸ್ಥರ ಹಾಗೂ ಅವಲಂಬಿತ ಕಾಯಕರ್ಹರ ಪ್ರಮಾಣದ ಅಂಕಿಅಂಶಗಳನ್ನು ಗಮನಿಸಿದಾಗ ಒಟ್ಟು ಜನಸಂಖ್ಯೆಯಲ್ಲಿ ಕಾಯಕರ್ಹರಲ್ಲದ ಹಾಗೂ ದೈಹಿಕ ದೌರ್ಬಲ್ಯದ ವಯೋಮಾನದವರನ್ನು ತೆಗೆದಿರಸಲಾಗಿ ಕಾಯಕರ್ಹರ ಅಂದರೆ ದುಡಿಯುವ ವರ್ಗದ ಪ್ರಮಾಣವನ್ನು ಕಂಡುಬರುತ್ತದೆ. ಆದರೆ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ದೊರೆತಿರುವ ಮಾಹಿತಿಯ ಅಂಕಿಅಂಶಗಳನ್ವಯ ಕಾಯಕರ್ಹರ ಪ್ರಮಾಣಕ್ಕಿಂತ ಕೆಲವು ಗ್ರಾಮವಾರು ಕಾಯಕಸ್ಥರ ವರ್ಗದ ಲಿಂಗವಾರು ಪ್ರಮಾಣವು ಹೆಚ್ಚಾಗಿರುವುದು ಗಮನಿಸಬಹುದು. ಕಾರಣ ಅಲೆಮಾರಿಗಳು ತಮ್ಮ ಜೀವನನಿರ್ವಹಣೆಗಾಗಿ ಕುಟುಂಬದ ಎಲ್ಲ ಸದಸ್ಯರನ್ನೊಳಗೊಂಡಂತೆ ಯಾವುದೇ ಲಿಂಗವಾರು ತಾರತಮ್ಯವಿಲ್ಲದೇ ಕೆಲಸಗಳು ಮಾಡುತ್ತಾರೆ. ಆದ್ದರಿಂದ ಈ ಅವಲಂಬಿತ ವರ್ಗದವರು ದುಡಿಯುವ ವರ್ಗದೊಂದಿಗೆ ಕೈಜೋಡಿಸಿ ಕೆಲಸಗಳನ್ನು

ನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ ಕಾಯಕಸ್ಥರ ಪ್ರಮಾಣದಲ್ಲಿ ದುಡಿಯುವ ಹಾಗೂ ಅವಲಂಬಿತ ವರ್ಗವು ಸೇರಿಕೊಂಡಿರುವುದರಿಂದ ಇಲ್ಲಿ ಕಾಯಕರ್ಹರ ಪ್ರಮಾಣಕ್ಕಿಂತ ಕಾಯಕಸ್ಥರ ಪ್ರಮಾಣ ಗಣನೀಯವಾಗಿರುವುದು ಮೇಲಿನ ಮೂರು ತಾಲೂಕುಗಳ ಕೋಷ್ಟಕಗಳಿಂದ ತಿಳಿದುಬರುತ್ತದೆ.

೪.೯ ಅಲೆಮಾರಿಗಳು ಅವಲಂಬಿಸಿದ ವೃತ್ತಿಗಳು

ಪ್ರಸ್ತುತ ಯಾದಗಿರಿ ಜಿಲ್ಲೆಯು ಸೇರಿದಂತೆ ಶಹಾಪುರ ಮತ್ತು ಸುರುಪುರ ತಾಲೂಕಿನ ವಿವಿಧ ಅಲೆಮಾರಿ ಸಮುದಾಯಗಳು ತಮ್ಮ ಜೀವನನಿರ್ವಹಣೆಗೆ ಪರಂಪರಾಗತವಾದ, ಸಾಂಪ್ರದಾಯಿಕ ಮತ್ತು ಹಲವು ಬಗೆಯ ಆಧುನಿಕ ಕಸುಬುಗಳನ್ನು ಅಳವಡಿಸಿಕೊಂಡಿರುವುದನ್ನು ಇಲ್ಲಿ ಗಮನಿಸೋಣ. ಬದಲಾದ ಆರ್ಥಿಕ ಪರಿಸ್ಥಿತಿಯಲ್ಲಿ ಇವರ ಜೀವನಕ್ರಮ ಬದಲಾವಣೆಗೆ ಒಳಪಡುತ್ತಿದೆ.

ಇತ್ತೀಚೆಗೆ ಸ್ವಲ್ಪ ಪ್ರಜ್ಞಾವಂತರಾದ ಈ ಅಲೆಮಾರಿ ಸಮುದಾಯಗಳು ಕೃಷಿಕೂಲಿ, ಇತರೆ ಕೂಲಿಕಾರ್ಮಿಕರಾಗಿ, ದಿನಗೂಲಿ, ಬೀದಿ ವ್ಯಾಪಾರ, ಚಿಂದಿ ಆಯುವುದು. ಕಟ್ಲೇರಿ ವ್ಯಾಪಾರ, ಪ್ಲಾಸ್ಟಿಕ್, ಬಾಂಡೆ ಸಾಮಾನುಗಳನ್ನು ಮಾರುವುದು, ಇತರೆ ವೃತ್ತಿಗಳಾದ ಭವಿಷ್ಯ ಹೇಳುವುದು, ಕೌದಿ ಹೊಲಿಯುವುದು, ಚಾಪೆ ಹೆಣೆಯುವುದು, ಕೋತಿಯಾಡಿಸುವುದು, ಕೊರವಂಜಿ ಹೇಳಿಕೆ, ಹಾವು ಆಡಿಸುವುದು, ನೆಲವು ಬಳ್ಳಿ, ಹೂಬಳ್ಳಿಗಳಿಂದ ವೈವಿಧ್ಯಮಯವಾದ ಬುಟ್ಟಿ, ಮರ, ಬೀಸಣಿಕೆ, ತೊಟ್ಟಿಲುಗಳನ್ನು ಮಾಡುವುದು, ನಗರ ಪ್ರದೇಶಗಳಲ್ಲಿ ತಮ್ಮ ಪರಂಪಾರಿಕ ವೃತ್ತಿಗಳಾದ ಬೇಟೆ, ಧಾರ್ಮಿಕ ಭಿಕ್ಷಾಟನೆಯು ಇವರು ಮಾಡುವ ಕಸುಬುಗಳಲ್ಲೊಂದಾಗಿದೆ. ಕುರಿ, ಮೇಕೆ, ಕೋಳಿ, ಹಂದಿ, ಸಣ್ಣ ಪ್ರಮಾಣದ ಪಾಲನೆಯಾಗಿ ಅವುಗಳನ್ನು ತಮ್ಮ ಆರ್ಥಿಕತೆಯ ರಕ್ಷಣೆಯ ದೃಷ್ಟಿಯಿಂದ ಸಾಕುತ್ತಾರೆ. ಹೀಗೆ ಒಟ್ಟಾರೆ ಯಾದಗಿರಿ ಜಿಲ್ಲೆಯ ಕ್ಷೇತ್ರಕಾರ್ಯದಲ್ಲಿ ವಿವಿಧ ಅಲೆಮಾರಿ ಸಮುದಾಯಗಳು ಅನುಸರಿಸುವ ವೃತ್ತಿಗಳ ಅಂಕಿಅಂಶಗಳನ್ನು ಗಮನಿಸೋಣ.


ಕೋಷ್ಟಕ: ೪.೯.೧. ಯಾದಗಿರಿ ಜಿಲ್ಲೆಯ ಅಲೆಮಾರಿ ಸಮುದಾಯಗಳ ಲಿಂಗವಾರು ಕಸುಬುಗಳು

ಕ್ರಸಂ.	ವಿವರ	ಗಂಡು	ಹೆಣ್ಣು	ಒಟ್ಟು
೧.	ಕೃಷಿಕೂಲಿ	೬೭	೯೦	೧೫೭
೨.	ಧಾರ್ಮಿಕ ಭಿಕ್ಷಾಟನೆ	೮೪	೬೪	೧೪೮
೩.	ಪ್ಲಾಸ್ಟಿಕ್ ವ್ಯಾಪಾರ	೫೨	೬೩	೧೧೫
೪.	ಬಟ್ಟೆ ವ್ಯಾಪಾರ	೦	೨	೨
೫.	ಬ್ಯಾಗ್ ವ್ಯಾಪಾರ	೩೧	೧೧	೪೨
೬.	ರೀಪೇರಿ	೫೮	೨	೬೦
೭.	ಗುಜರಿ ವ್ಯಾಪಾರ	೩	೦	೩
೮.	ಹಂದಿ ಸಾಕಾಣಿಕೆ	೭	೫	೧೨
೯.	ಕಬ್ಬಿಣ ವಸ್ತು ತಯಾರಿಕೆ	೧೭	೧೪	೩೧
೧೦.	ತಾಮ್ರ, ಕಂಚು, ಹಿತ್ತಾಳೆ	೧೧	೧೬	೨೭

೧೧.	ಬಾಂಡೆ ವ್ಯಾಪಾರ	೨೦	೧೯	೩೯
೧೨.	ಪುಟ್ಟಿವ್ಯಾಪಾರ	೧೨	೧೪	೨೬
೧೩.	ಕೂದಲು, ಪಿನ್ ಮಾರಾಟ	೧	೮೧	೮೨
೧೪.	ಇತರೆ	೩೯	೨೮	೬೭
	ಒಟ್ಟು	೪೦೨	೪೦೯	೮೧೧

ಕೋಷ್ಟಕ ೪.೯.೧ರಲ್ಲಿ ಅಲೆಮಾರಿ ಸಮುದಾಯದವರಿಗೆ ಸ್ವಂತ ಕೃಷಿ ಭೂಮಿಯೇ ಇಲ್ಲ. ಹೀಗಾಗಿ ಯಾವೊಬ್ಬ ವ್ಯಕ್ತಿಯು ಕೃಷಿಕನಿಲ್ಲ. ಕೃಷಿಕಾರ್ಮಿಕರಾಗಿ ಒಟ್ಟು ಶೇ. ೧೯.೩೬ರಷ್ಟಾಗಿದ್ದು. ಅದರಲ್ಲಿ ಗಂಡು ಶೇ. ೧೬.೬೭ ರಷ್ಟಿದ್ದಾರೆ. ಮಹಿಳೆಯರು ಶೇ. ೨೨.೦೦ರಷ್ಟು ಇರುವುದಾಗಿದೆ. ಪ್ರದರ್ಶನ ಹಾಗೂ ಧಾರ್ಮಿಕ ಭಿಕ್ಷಾಟನೆ ಪ್ರಮಾಣ ಒಟ್ಟು ಶೇ. ೧೮.೨೫ರಷ್ಟಿದೆ. ಅದರಲ್ಲಿ ಗಂಡು ಶೇ. ೨೦.೯೦ ರಷ್ಟಿದ್ದಾರೆ. ಮಹಿಳೆಯರು ಶೇ. ೧೫.೬೫ರಷ್ಟು, ಪ್ಲಾಸ್ಟಿಕ್ ವ್ಯಾಪಾರದಲ್ಲಿ ಒಟ್ಟು ಪ್ರಮಾಣವು ಶೇ. ೧೪.೧೮ರಷ್ಟಿದೆ. ಇದರಲ್ಲಿ ಗಂಡು ಶೇ. ೧೨.೯೪ ರಷ್ಟಿದ್ದಾರೆ. ಮಹಿಳೆಯರು ಶೇ. ೧೫.೪೦ರಷ್ಟು ಇರುವುದು ಕಂಡುಬರುತ್ತದೆ. ಬ್ಯಾಗ್ ವ್ಯಾಪಾರದಲ್ಲಿ ಒಟ್ಟು ಪ್ರಮಾಣವು ಶೇ. ೫.೧೮ರಷ್ಟಿದೆ. ಇದರಲ್ಲಿ ಗಂಡು ಶೇ. ೭.೭೧ ರಷ್ಟಿದ್ದಾರೆ. ಮಹಿಳೆಯರು ಶೇ. ೨.೬೯ರಷ್ಟು ಇರುವುದು ಕಂಡುಬರುತ್ತದೆ. ರೀಪೇರಿ ಕೆಲಸದಲ್ಲಿ ಕೇವಲ ಪುರುಷರ ಒಟ್ಟು ಪ್ರಮಾಣವು ಶೇ. ೭.೪೦ರಷ್ಟಿದೆ. ಇದರಲ್ಲಿ ಗಂಡು ಶೇ. ೧೪.೪೩ರಷ್ಟು ಇರುವುದು. ಹಂದಿ ಸಾಕಾಣಿಕೆಯಲ್ಲಿ ಒಟ್ಟು ಪ್ರಮಾಣವು ಶೇ. ೧.೪೮ರಷ್ಟಿದೆ. ಇದರಲ್ಲಿ ಗಂಡು ಶೇ. ೧.೭೪ ರಷ್ಟಿದ್ದಾರೆ. ಮಹಿಳೆಯರು ಶೇ. ೧.೨೨ರಷ್ಟು ಇರುವುದು. ಕಬ್ಬಿಣ ವಸ್ತು ತಯಾರಿಕೆಯಲ್ಲಿ ಒಟ್ಟು ಪ್ರಮಾಣವು ಶೇ. ೩.೮೨ರಷ್ಟಿದೆ.

ವೃತ್ತಚಿತ್ರ: ೪.೯.೧ ಯಾದಗಿರಿ ಜಿಲ್ಲೆಯ ಅಲೆಮಾರಿ ಸಮುದಾಯಗಳ ಕಸುಬುಗಳ ಪ್ರಮಾಣ




ಇದರಲ್ಲಿ ಗಂಡು ಶೇ. ೪.೨೩ ರಷ್ಟಿದ್ದಾರೆ. ಮಹಿಳೆಯರು ಶೇ. ೩.೪೨ರಷ್ಟು ಇರುವುದು ಕಂಡುಬರುತ್ತದೆ. ತಾಮ್ರ, ಕಂಚು, ಹಿತ್ತಾಳೆಯ ಕೆಲಸ ಮಾಡುವವರ ಪ್ರಮಾಣವು ಶೇ. ೩.೩೩ರಷ್ಟಿದೆ. ಇದರಲ್ಲಿ ಪುರುಷರು ಶೇ. ೨.೭೪ ರಷ್ಟಿದ್ದಾರೆ. ಮಹಿಳೆಯರು ಶೇ. ೩.೯೧ರಷ್ಟು ಇರುವುದು ಕಂಡುಬರುತ್ತದೆ. ಬಾಂಡೆ ವ್ಯಾಪಾರದ ಒಟ್ಟು ಪ್ರಮಾಣವು ಶೇ. ೪.೮೧ರಷ್ಟಿದೆ. ಇದರಲ್ಲಿ ಪುರುಷರು ಶೇ. ೪.೯೮ ರಷ್ಟಿದ್ದಾರೆ. ಮಹಿಳೆಯರು ಶೇ. ೪.೬೫ರಷ್ಟು ಇರುವುದು ಕಂಡುಬರುತ್ತದೆ. ಬುಟ್ಟಿ, ಪೊರಕೆ ವ್ಯಾಪಾರ ದಲ್ಲಿ ಒಟ್ಟು ಪ್ರಮಾಣವು ಶೇ. ೩.೨೧ರಷ್ಟಿದೆ. ಇದರಲ್ಲಿ ಗಂಡು ಶೇ. ೨.೯೯ರಷ್ಟಿದ್ದಾರೆ. ಮಹಿಳೆಯರು ಶೇ. ೩.೪೨ರಷ್ಟು ಇರುವುದು ಕಂಡುಬರುತ್ತದೆ. ಕೂದಲು, ಪೀನ್ ಮಾರಾಟದಲ್ಲಿ ಕೇವಲ ಮಹಿಳೆಯರ ಒಟ್ಟು ಪ್ರಮಾಣವು ಶೇ. ೧೦.೧೧ರಷ್ಟಿದೆ. ಇದರಲ್ಲಿ ಮಹಿಳೆಯರು ಶೇ. ೧೯.೮೦ರಷ್ಟು ಇರುವುದು ಹಾಗೂ ಇತರೆ ವೃತ್ತಿಗಳಲ್ಲಿ ಬರುವ ಹಳೆಪ್ಲಾಸ್ಟಿಕ್, ಪೇಪರ್, ಬಾಟ್ಲಿ, ಚಿಂದಿ ಚೂರು ಆಯುವುದು, ಜಡೆಬೂಟಿ, ರಿಬ್ಬನ್ ಇತ್ಯಾದಿಗಳನ್ನು ತೊಡಗಿಸಿಕೊಂಡಿರುವವರ ಒಟ್ಟು ಶೇ. ೮.೨೬ರಷ್ಟಿದೆ. ಇವರಲ್ಲಿ ಪುರುಷರು ಶೇ. ೯.೭೦ರಷ್ಟಿದ್ದಾರೆ. ಮಹಿಳೆಯರು ಶೇ. ೬.೮೫ರಷ್ಟಿದ್ದಾರೆ. ಸರ್ಕಾರಿ ಕೆಲಸ ಗಳಲ್ಲಿ ಯಾರು ಇಲ್ಲದಿರುವುದು ಮೇಲಿನ ಕೋಷ್ಟಕ ೪.೯.೧ ರಿಂದ ಗಮನಿಸಬಹುದಾಗಿದೆ.

ಕೋಷ್ಟಕ: ೪.೯.೨ ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ಅಲೆಮಾರಿ ಸಮುದಾಯಗಳ ಲಿಂಗವಾರು ಕಸುಬುಗಳು

ಕ್ರಸಂ.	ವಿವರ	ಗಂಡು	ಹೆಣ್ಣು	ಒಟ್ಟು
೧.	ಕೃಷಿಕೂಲಿ	೪೧	೫೯	೧೦೦
೨.	ಧಾರ್ಮಿಕ ಭಿಕ್ಷಾಟನೆ	೧೨	೧೦	೨೨
೩.	ಪ್ಲಾಸ್ಟಿಕ್ ವ್ಯಾಪಾರ	೨೨	೬೪	೮೬
೪.	ಬಟ್ಟೆ ವ್ಯಾಪಾರ	೧	೦	೧
೫.	ಬ್ಯಾಗ್ ವ್ಯಾಪಾರ	೩೨	೮	೪೦
೬.	ಬಲೆ: ಮೀನು ವ್ಯಾಪಾರ	೨	೧	೩
೭.	ರೀಪೇರಿ	೪	೦	೪
೮.	ಗುಜ್ಜರಿ ವ್ಯಾಪಾರ	೩	೦	೩
೯.	ಹಂದಿ ಸಾಕಾಣಿಕೆ	೧	೧	೨
೧೦.	ತಾತ್ಕಾಲಿಕ	೪	೦	೪
೧೧.	ಕಬ್ಬಿಣ ವಸ್ತು ತಯಾರಿಕೆ	೪	೩	೭
೧೨.	ತಾಮ್ರ, ಕಂಚು, ಹಿತ್ತಾಳೆ	೬	೪	೧೦
೧೩.	ವಂಶಾವಳಿ	೨	೦	೨
೧೪.	ಪುಟ್ಟಿವ್ಯಾಪಾರ	೧೮	೧೦	೨೮
೧೫.	ಕೂದಲು, ಪೀನ್ ಮಾರಾಟ	೦	೧೨	೧೨
೧೬.	ಇತರೆ	೨೧	೨	೨೩
	ಒಟ್ಟು	೧೭೩	೧೭೪	೩೪೭

ಕೋಷ್ಟಕ ೪.೯.೨ರಲ್ಲಿ ಕೃಷಿಕೂಲಿಗಳಾಗಿ ಒಟ್ಟು ಶೇ. ೨೮.೮೨ರಷ್ಟಾಗಿದ್ದು ಅದರಲ್ಲಿ ಗಂಡು ಶೇ. ೨೩.೭೦ರಷ್ಟಿದ್ದಾರೆ. ಮಹಿಳೆಯರು ಶೇ. ೩೩.೯೧ರಷ್ಟು ಇರುವುದಾಗಿದೆ. ಪ್ರದರ್ಶನ ಹಾಗೂ ಧಾರ್ಮಿಕ ಭಿಕ್ಷಾಟನೆ ಪ್ರಮಾಣ ಒಟ್ಟು ಶೇ. ೬.೩೪ರಷ್ಟಿದೆ. ಅದರಲ್ಲಿ ಗಂಡು ಶೇ. ೬.೯೪ರಷ್ಟಿದ್ದಾರೆ. ಮಹಿಳೆಯರು ಶೇ. ೫.೭೫ರಷ್ಟು ಪ್ಲಾಸ್ಟಿಕ್ ವ್ಯಾಪಾರದಲ್ಲಿ ಒಟ್ಟು ಪ್ರಮಾಣವು ಶೇ. ೨೪.೭೮ರಷ್ಟಿದೆ. ಇದರಲ್ಲಿ ಗಂಡು ಶೇ. ೧೨.೭೨ರಷ್ಟಿದ್ದಾರೆ. ಮಹಿಳೆಯರು ಶೇ. ೩೬.೭೮ರಷ್ಟು ಇರುವುದು ಕಂಡುಬರುತ್ತದೆ. ಇರುವುದು. ಬ್ಯಾಗ್ ವ್ಯಾಪಾರದಲ್ಲಿ ಒಟ್ಟು ಪ್ರಮಾಣವು ಶೇ. ೧೧.೫೩ರಷ್ಟಿದೆ. ಇದರಲ್ಲಿ ಗಂಡು ಶೇ. ೧೮.೫೦ರಷ್ಟಿದ್ದಾರೆ. ಮಹಿಳೆಯರು ಶೇ. ೪.೬೦ರಷ್ಟು ಇರುವುದು ಕಂಡುಬರುತ್ತದೆ. ರೀಪೇರಿ ಕೆಲಸದಲ್ಲಿ ಒಟ್ಟು ಪ್ರಮಾಣವು ಶೇ. ೧.೧೫ರಷ್ಟಿದೆ. ಇದರಲ್ಲಿ ಗಂಡು ಶೇ. ೨.೩೧ರಷ್ಟು ಇರುವುದು. ಕಬ್ಬಿಣ ವಸ್ತು ತಯಾರಿಕೆಯಲ್ಲಿ ಒಟ್ಟು ಪ್ರಮಾಣವು ಶೇ. ೨.೦೨ರಷ್ಟಿದೆ. ಇದರಲ್ಲಿ ಗಂಡು ಶೇ. ೨.೩೧ರಷ್ಟಿದ್ದಾರೆ. ಮಹಿಳೆಯರು ಶೇ. ೧.೭೨ರಷ್ಟು ಇರುವುದು ಕಂಡುಬರುತ್ತದೆ. ತಾಮ್ರ, ಕಂಚು, ಹಿತ್ತಾಳೆಯ ಕೆಲಸ ಮಾಡುವವರ ಪ್ರಮಾಣವು ಶೇ. ೨.೮೮ರಷ್ಟಿದೆ. ಇದರಲ್ಲಿ ಪುರುಷರು ಶೇ. ೩.೪೭ರಷ್ಟಿದ್ದಾರೆ. ಮಹಿಳೆಯರು ಶೇ. ೨.೩೦ರಷ್ಟು ಇರುವುದು ಕಂಡುಬರುತ್ತದೆ. ಬುಟ್ಟಿ, ಪೊರಕೆ ವ್ಯಾಪಾರದಲ್ಲಿ ಒಟ್ಟು ಪ್ರಮಾಣವು ಶೇ. ೮.೦೭ರಷ್ಟಿದೆ. ಇದರಲ್ಲಿ ಗಂಡು ಶೇ. ೧೦.೪೦ ರಷ್ಟಿದ್ದಾರೆ.

ವೃತ್ತಚಿತ್ರ: ೪.೯.೨ ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ಅಲೆಮಾರಿಗಳ ಕಸುಬುಗಳ ಪ್ರಮಾಣ



ಮಹಿಳೆಯರು ಶೇ. ೫.೭೫ರಷ್ಟು ಇರುವುದು ಕಂಡುಬರುತ್ತದೆ. ಕೂದಲು, ಪಿನ್ ಮಾರಾಟದಲ್ಲಿ ಒಟ್ಟು ಪ್ರಮಾಣವು ಶೇ. ೩.೪೬ರಷ್ಟಿದೆ. ಇದರಲ್ಲಿ ಮಹಿಳೆಯರು ಶೇ. ೬.೯೦ರಷ್ಟು ಇರುವುದು ಹಾಗೂ ಇತರೆ ವೃತ್ತಿಗಳಲ್ಲಿ ಬರುವ ಹಳೆಪ್ಲಾಸ್ಟಿಕ್, ಪೇಪರ್, ಬಾಟ್ಲಿ, ಚಿಂದಿ ಚೂರು ಆಯುವುದು, ಜಡೆಬೂಟಿ, ರಿಬ್ಬನ್ ಇತ್ಯಾದಿಗಳನ್ನು ತೊಡಗಿಸಿಕೊಂಡಿರುವವರ ಒಟ್ಟು ಶೇ. ೬.೬೩ರಷ್ಟಿದೆ. ಇವರಲ್ಲಿ ಪುರುಷರು ಶೇ. ೧೨.೧೪ರಷ್ಟಿದ್ದಾರೆ. ಮಹಿಳೆಯರು ಶೇ. ೧.೧೫ರಷ್ಟಿದ್ದಾರೆ. ಹಂದಿ ಸಾಕಾಣಿಕೆಯಲ್ಲಿ ಹಾಗೂ ಬಟ್ಟೆ ವ್ಯಾಪಾರ. ವಂಶಾವಳಿಯ ಒಟ್ಟು ಪ್ರಮಾಣವು ಅನುಕ್ರಮವಾಗಿ ಶೇ. ೦.೫೮ರಷ್ಟು ಇರುವುದು ಮೇಲಿನ ಕೋಷ್ಟಕ ೪.೯.೨ರಿಂದ ಗಮನಿಸಬಹುದಾಗಿದೆ.


ಕೋಷ್ಟಕ: ೪.೯.೩ ಯಾದಗಿರಿ ಜಿಲ್ಲೆಯ ಸುರುಪುರ ತಾಲೂಕಿನ ಅಲೆಮಾರಿ ಸಮುದಾಯಗಳ ಲಿಂಗವಾರು ಕಸುಬುಗಳು

ಕ್ರ.ಸಂ.	ವಿವರ	ಗಂಡು	ಹೆಣ್ಣು	ಒಟ್ಟು
೧	ಕೃಷಿಕೂಲಿ	೭೪	೬೧	೧೩೫
೨	ಧಾರ್ಮಿಕ ಭಿಕ್ಷಾಟನೆ	೩೫	೨೬	೬೧
೩	ಪ್ಲಾಸ್ಟಿಕ್ ವ್ಯಾಪಾರ	೫೯	೯೯	೧೫೮
೪	ಬಟ್ಟೆ ವ್ಯಾಪಾರ	೨	೧	೩
೫	ಬ್ಯಾಗ್ ವ್ಯಾಪಾರ	೩೧	೧೦	೪೧
೬	ಬಲೆ: ಮೀನು ವ್ಯಾಪಾರ	೯	೭	೧೬
೭	ರೀಪೇರಿ	೩	೨	೫
೮	ಗುಜ್ಜರಿ ವ್ಯಾಪಾರ	೫	೦	೫
೯	ತಾತ್ಕಾಲಿಕ	೨	೦	೨
೧೦	ಕಬ್ಬಿಣ ವಸ್ತು ತಯಾರಿಕೆ	೭	೬	೧೩
೧೧	ತಾಮ್ರ, ಕಂಚು, ಹಿತ್ತಾಳೆ	೫	೧೦	೧೫
೧೨	ಬಾಂಡೆ ವ್ಯಾಪಾರ	೫	೭	೧೨
೧೩	ಪುಟ್ಟವ್ಯಾಪಾರ	೦	೧೩	೧೩
೧೪	ಕೂದಲು, ಪಿನ್ ಮಾರಾಟ	೩	೪	೭
೧೫	ಇತರೆ	೮	೦	೮
	ಒಟ್ಟು	೨೪೮	೨೪೬	೪೯೪

ಕೋಷ್ಟಕ ೪.೯.೩ರಲ್ಲಿ ಕೃಷಿಕೂಲಿಗಳಾಗಿ ಒಟ್ಟು ಶೇ. ೨೭.೩೩ರಷ್ಟಾಗಿದ್ದು ಅದರಲ್ಲಿ ಗಂಡು ಶೇ. ೨೯.೮೪ರಷ್ಟಿದ್ದಾರೆ. ಮಹಿಳೆಯರು ಶೇ. ೨೪.೮೦ರಷ್ಟಾಗಿದೆ. ಪ್ರದರ್ಶನ ಹಾಗೂ ಧಾರ್ಮಿಕ ಭಿಕ್ಷಾಟನೆ ಪ್ರಮಾಣ ಒಟ್ಟು ಶೇ. ೧೨.೩೫ರಷ್ಟಿದೆ. ಅದರಲ್ಲಿ ಗಂಡು ಶೇ. ೧೪.೧೧ರಷ್ಟಿದ್ದಾರೆ. ಮಹಿಳೆಯರು ಶೇ. ೧೦.೫೭ರಷ್ಟು ಪ್ಲಾಸ್ಟಿಕ್ ವ್ಯಾಪಾರದಲ್ಲಿ ಒಟ್ಟು ಪ್ರಮಾಣವು ಶೇ. ೩೧.೯೮ರಷ್ಟಿದೆ. ಇದರಲ್ಲಿ ಗಂಡು ಶೇ. ೨೩.೭೯ರಷ್ಟಿದ್ದಾರೆ. ಮಹಿಳೆಯರು ಶೇ. ೪೦.೨೪ರಷ್ಟು ಇರುವುದು ಕಂಡುಬರುತ್ತದೆ.

ಬ್ಯಾಗ್ ವ್ಯಾಪಾರದಲ್ಲಿ ಒಟ್ಟು ಪ್ರಮಾಣವು ಶೇ. ೮.೩೦ರಷ್ಟಿದೆ. ಇದರಲ್ಲಿ ಗಂಡು ಶೇ. ೧೨.೫೦ರಷ್ಟಿದ್ದಾರೆ. ಮಹಿಳೆಯರು ಶೇ. ೪.೦೭ರಷ್ಟು ಇರುವುದು ಕಂಡುಬರುತ್ತದೆ. ಬಲೆ ಮೀನು ವ್ಯಾಪಾರದ ಒಟ್ಟು ಪ್ರಮಾಣವು ಶೇ. ೩.೨೪ರಷ್ಟಿದೆ. ಇದರಲ್ಲಿ ಗಂಡು ಶೇ. ೩.೬೩ರಷ್ಟಿದ್ದಾರೆ. ಮಹಿಳೆಯರು ಶೇ. ೨.೮೫ರಷ್ಟು ಇರುವುದು.

ವೃತ್ತಚಿತ್ರ: ೪.೯.೩ ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಅಲೆಮಾರಿಗಳ ಕಸುಬುಗಳ ಪ್ರಮಾಣ



ರೀಪೇರಿ ಕೆಲಸದಲ್ಲಿ ಒಟ್ಟು ಪ್ರಮಾಣವು ಶೇ. ೧.೦೧ರಷ್ಟಿದೆ. ಇದರಲ್ಲಿ ಗಂಡು ಶೇ. ೧.೨೧ ರಷ್ಟಿದ್ದಾರೆ. ಮಹಿಳೆಯರು ಶೇ. ೦.೮೧ರಷ್ಟು ಇರುವುದು. ಗುಜರಿ ವ್ಯಾಪಾರದಲ್ಲಿ ಒಟ್ಟು ಪ್ರಮಾಣವು ಶೇ. ೧.೦೧ರಷ್ಟಿದೆ. ಇದರಲ್ಲಿ ಗಂಡು ಶೇ. ೨.೦೨ರಷ್ಟಿದ್ದಾರೆ. ಕಬ್ಬಿಣ ವಸ್ತು ತಯಾರಿಕೆಯಲ್ಲಿ ಒಟ್ಟು ಪ್ರಮಾಣವು ಶೇ. ೨.೬೩ರಷ್ಟಿದೆ. ಇದರಲ್ಲಿ ಗಂಡು ಶೇ. ೨.೮೨ರಷ್ಟಿದ್ದಾರೆ. ಮಹಿಳೆಯರು ಶೇ. ೨.೪೪ರಷ್ಟು ಇರುವುದು ಕಂಡುಬರುತ್ತದೆ. ತಾಮ್ರ, ಕಂಚು, ಹಿತ್ತಾಳೆಯ ಕೆಲಸ ಮಾಡುವವರ ಪ್ರಮಾಣವು ಶೇ. ೩.೦೪ರಷ್ಟಿದೆ. ಇದರಲ್ಲಿ ಪುರುಷರು ಶೇ. ೨.೦೨ರಷ್ಟಿದ್ದಾರೆ. ಮಹಿಳೆಯರು ಶೇ. ೪.೦೭ರಷ್ಟು ಇರುವುದು ಕಂಡುಬರುತ್ತದೆ. ಬಾಂಡೆ ವ್ಯಾಪಾರದಲ್ಲಿ ಒಟ್ಟು ಪ್ರಮಾಣವು ಶೇ. ೨.೪೩ರಷ್ಟಿದೆ. ಇದರಲ್ಲಿ ಗಂಡು ಶೇ. ೨.೦೨ರಷ್ಟಿದ್ದಾರೆ. ಮಹಿಳೆಯರು ಶೇ. ೨.೮೫ರಷ್ಟು ಇರುವುದು.



ಬುಟ್ಟಿ, ಪೊರಕೆ ವ್ಯಾಪಾರದಲ್ಲಿ ಒಟ್ಟು ಪ್ರಮಾಣವು ಶೇ. ೨.೬೩ರಷ್ಟಿದೆ. ಇದರಲ್ಲಿ ಮಹಿಳೆಯರು ಶೇ. ೫.೨೮ರಷ್ಟು ಇರುವುದು ಕಂಡುಬರುತ್ತದೆ. ಕೂದಲು, ಪೀನ್ ಮಾರಾಟದಲ್ಲಿ ಒಟ್ಟು ಪ್ರಮಾಣವು ಶೇ. ೧.೪೨ರಷ್ಟಿದೆ. ಇದರಲ್ಲಿ ಪುರುಷರು ಶೇ. ೧.೨೧ ರಷ್ಟಿದ್ದಾರೆ. ಮಹಿಳೆಯರು ಶೇ. ೧.೬೩ರಷ್ಟು ಇರುವುದು ಹಾಗೂ ಇತರೆ ವೃತ್ತಿಗಳಲ್ಲಿ ಬರುವ ಹಳೆಪ್ಲಾಸ್ಟಿಕ್, ಪೇಪರ್, ಬಾಟ್ಲಿ, ಚಿಂದಿ ಚೂರು ಆಯುವುದು, ಜಡೆಬೂಟಿ, ರಿಬ್ಬನ್ ಇತ್ಯಾದಿಗಳನ್ನು ತೊಡಗಿಸಿಕೊಂಡಿರುವವರ ಒಟ್ಟು ಶೇ. ೧.೬೭ರಷ್ಟಿದೆ. ಇವರಲ್ಲಿ ಪುರುಷರು ಶೇ. ೩.೨೩ ರಷ್ಟಿದ್ದಾರೆ. ಬಟ್ಟೆ ವ್ಯಾಪಾರ, ತಾತ್ಕಾಲಿಕ ಉದ್ಯೋಗದಲ್ಲಿ ಒಟ್ಟು ಪ್ರಮಾಣವು ಕ್ರಮವಾಗಿ ಶೇ. ೦.೬೧, ೦.೪೦ರಷ್ಟು ಇರುವುದು ಕೋಷ್ಟಕ ೪.೩ರಿಂದ ಗಮನಿಸಬಹುದಾಗಿದೆ.

ಉಪಸಂಹಾರ

ಯಾದಗಿರಿ ಜಿಲ್ಲೆಯ ಅಲೆಮಾರಿಗಳ ಆರ್ಥಿಕ ಸ್ಥಿತಿಗತಿಗಳನ್ನು ಕುರಿತು ಅವಲೋಕಿಸಿದಾಗ ಹಲವು ವರ್ಷಗಳ ಹಿಂದೆ ಬಂದು ವಿವಿಧ ಗ್ರಾಮಗಳ, ಪಟ್ಟಣಗಳ ಹೊರಗಡೆ ನೆಲೆಸಿದ ಇವರಿಗೆ ಮೂಲಭೂತ ಸೌಲಭ್ಯಗಳಿಲ್ಲ. ಇರಲು ಮನೆ ಇಲ್ಲ. ಹೊಟ್ಟೆ ತುಂಬಿಕೊಳ್ಳಲು ಪೌಷ್ಟಿಕ ಆಹಾರವಿಲ್ಲ. ಅಲೆದಾಟವೇ ಜೀವನವಾಗಿ ಈ ಅಲೆಮಾರಿಗಳು ನರಕಯಾತನೆಯನ್ನು ಅನುಭವಿಸುತ್ತಿದ್ದಾರೆ. ಇವರ ಜೀವನ ಹೇಗಾಗಿದೆ ಎಂದರೆ "ಅಗಸನ ನಾಯಿ ಹಳ್ಳವನ್ನೂ ಕಾಯಲಿಲ್ಲ ಮನೆಯನ್ನು ಕಾಯಲಿಲ್ಲ" ಎಂಬಂತಾಗಿದೆ. ಕೇವಲ ಒಂದೊತ್ತಿನ ಊಟಕ್ಕಾಗಿ ಚಡಪಡಿಸುತ್ತಿರುವ ಇವರು ಆರ್ಥಿಕವಾಗಿ ಸಬಲರಾಗಬೇಕು ಎಂಬ ಕಲ್ಪನೆಯೂ ಇಲ್ಲದೆ ಜೀವನ ಸಾಗಿಸುತ್ತಿದ್ದಾರೆ. ಈ ಪ್ರದೇಶವೂ ಮೊದಲಿನಿಂದಲೂ ಹಿಂದುಳಿದಿದೆ. ಅದರಲ್ಲಿ ಇವರು ಇನ್ನೂ ಹಿಂದುಳಿದ ತಳಸಮುದಾಯಗಳಾಗಿವೆ.

ಇವರು ಆಡುವ ಆಟ ಅಥವಾ ಪ್ರದರ್ಶನ ಇವರಿಗೆ ಬೇಕಾದಷ್ಟು ಆದಾಯವನ್ನು ತಂದುಕೊಡುವುದಿಲ್ಲ. ಇಂದಿನ ಯುಗದಲ್ಲಿ ಡಿಜಿಟಲ್ ಮಾಧ್ಯಮಗಳ ಪ್ರಭಾವ ಹೆಚ್ಚಾಗಿರುವುದರಿಂದ ಇವರಾಡುವ ಬೀದಿಯ ಆಟ, ಪ್ರದರ್ಶನ ಇವರ ಜೀವನದಲ್ಲಿ ಏನನ್ನೂ ಸಾಧಿಸಲು ಅವಕಾಶ ಮಾಡಿಕೊಡುವುದಿಲ್ಲ. ಆರ್ಥಿಕವಾಗಿ ಮೇಲೆ ಬರಲು ಸಾಧ್ಯವಾಗುತ್ತಿಲ್ಲ.

ಅಲೆಮಾರಿಗಳು ಉತ್ಪಾದಿಸುವ ವಸ್ತುಗಳಿಗೆ ಈಗ ಬೆಲೆ ಇಲ್ಲದಂತಾಗಿದೆ. ಅವುಗಳ ಜಾಗದಲ್ಲಿ ಬಹಳ ದಿನ ಬಾಳಿಕೆ ಬರುವ ವಿವಿಧ ವಿನ್ಯಾಸದ ಮತ್ತು ಕಡಿಮೆ ಬೆಲೆಗೆ ಸಿಗುವ ವಸ್ತುಗಳು ಇಂದು ಮಾರುಕಟ್ಟೆಗೆ ಬಂದಿವೆ. ಆದ್ದರಿಂದ ಇವರ ಕರಕುಶಲತೆ ಕೇಳುವವರಿಲ್ಲ. ಅದರಿಂದ ಆದಾಯವು ಬರುವುದಿಲ್ಲ. ಇದರ ಪರಿಣಾಮದಿಂದಾಗಿ ಅಲೆಮಾರಿಗಳು ಅನಿವಾರ್ಯವಾಗಿ ಭಿಕ್ಷೆ ಬೇಡುವುದರ ಮೂಲಕ ತಮ್ಮ ಹೊಟ್ಟೆ ತುಂಬಿಕೊಳ್ಳಲು ಪ್ರಯತ್ನಿಸುತ್ತಾರೆ. ಭಿಕ್ಷೆ ಬೇಡುವುದೇ ಒಂದು ವೃತ್ತಿಯನ್ನಾಗಿ ಮಾಡಿಕೊಂಡು ಜೀವನ ಸಾಗಿಸುತ್ತಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ

ಗುರುತಿಸಲಾಗಿದೆ. ತಮ್ಮ ಮೂಲ ವೃತ್ತಿಗಳನ್ನು ಬಿಟ್ಟು ಆಧುನಿಕ ರೀತಿಯ ವಸ್ತುಗಳನ್ನು ಉತ್ಪಾದಿಸಿ ಜೀವನ ಸಾಗಿಸಲು ಪ್ರಯತ್ನಿಸಿದರೂ ಇವರಿಗೆ ಸರ್ಕಾರದಿಂದ ಸಿಗುವ ಸೌಲಭ್ಯಗಳ ಮಾಹಿತಿ ಇಲ್ಲದಿರುವುದರಿಂದ ಅವುಗಳನ್ನು ಪಡೆದುಕೊಳ್ಳದೆ ಬೀದಿಯ ಜೀವನವೇ ಇವರಿಗೆ ಗತಿಯಾಗಿದೆ.

ಅವರ ವೇಷಭೂಷಣಗಳನ್ನು ನೋಡಿದೊಡನೆ ಅವರ ಆರ್ಥಿಕ ಪರಿಸ್ಥಿತಿಯ ಅರಿವಾಗುತ್ತದೆ. ಅವರು ಎರಡೊತ್ತಿನ ಗಂಜಿಗೂ ದಿಕ್ಕಿಲ್ಲದವರಾಗಿದ್ದಾರೆ. ಇಂದು ಹೊಟ್ಟೆ ತುಂಬಾ ಊಟ ಮಾಡಿದರೆ ನಾಳೆ ಊಟ ಸಿಗುತ್ತದೆ ಎಂಬ ಭರವಸೆ ಅವರಿಗಿಲ್ಲ. ಆರ್ಥಿಕ ಮುಗ್ಗಟ್ಟಿನಿಂದ ಅವರಿಗೆ ಹಸಿವು ಭೂತಾಕಾರವಾಗಿ ಕಾಡುತ್ತಿದೆ. ತಮ್ಮ ವಿರೋಧಿಗೂ ಇಂತಹ ಪರಿಸ್ಥಿತಿ ಬರಬಾರದೆಂದು ದೇವರಲ್ಲಿ ಮೊರೆ ಇಡುವರು. ಇವರಿಗೆ ಕೃಷಿ ಗೊತ್ತಿಲ್ಲ. ಇವರಿಗೆ ಇವರದೇ ಭೂಮಿ ಇಲ್ಲ. ಜೀವನಕ್ಕಾಗಿ ಅಲೆದಾಟ ತಪ್ಪಿಲ್ಲ. ಸರ್ಕಾರ ಮತ್ತು ಸಮಾಜ ಎಲ್ಲ ಹಂತದಲ್ಲಿಯೂ ಅವರನ್ನು ಶೋಷಣೆ ಮಾಡುತ್ತಿದೆ. ಮಾನವನ ಮೂಲಭೂತ ಬೇಡಿಕೆಗಳಾದ ಊಟ, ಬಟ್ಟೆ, ವಸತಿಗಳು ಅವರಿಗೆ ಸಿಗುತ್ತಿಲ್ಲ. ಸಾಕ್ಷರತೆಯಿಲ್ಲ. ಸರ್ಕಾರದ ಕಾನೂನುಗಳು ಗೊತ್ತಿಲ್ಲ. ಸಾಂಪ್ರದಾಯಿಕ ಕಸಬು ಕಟ್ಟುನಿಟ್ಟಿನ ಜಾತಿ ವ್ಯವಸ್ಥೆಯಲ್ಲಿ ಮತ್ತು ನಂಬಿಕೆಗಳಲ್ಲಿ ಪರಿವರ್ತನೆ ತರುವವರೆಗೆ ಅವರಲ್ಲಿ ಆರ್ಥಿಕ ಪರಿಸ್ಥಿತಿ ಸುಧಾರಿಸುವುದು ಕಷ್ಟ ಸಾಧ್ಯ

ಅಡಿ ಟಿಪ್ಪಣಿಗಳು

೧. ಮೈತ್ರಿ ಕೆ.ಎಂ., ಬುಡಕಟ್ಟು ಕುಲಕಸುಬುಗಳು, ಪು

೨. ಅಜ್ಜಯ್ಯ ಸಿ., ಪಿಎಚ್.ಡಿ. ಮಹಾಪ್ರಬಂಧ, ಪು. ೯೧

೩. ರಮೇಶ ಸ.ಚಿ., ಅಲೆಮಾರಿಗಳ ಸ್ಥಿತಿಗತಿ, ಪು. ೧೯೨

೪. ದಾದಾಪೀರ್, ಕರ್ನಾಟಕದ ಬುಡಕಟ್ಟುಗಳು ಸಂಪುಟ-೨, ಪು. ೪೧೧

೫. ಹರಿಲಾಲ ಪವಾರ, ಕರ್ನಾಟಕದ ಬುಡಕಟ್ಟುಗಳು ಸಂಪುಟ-೨, ಪು. ೫೩೨

೬. ರಮೇಶ ಸ.ಚಿ., ಅಲೆಮಾರಿಗಳ ಸ್ಥಿತಿಗತಿ, ಪು. ೧೯೬

೭. ವಕ್ತೃಮಾಹಿತಿ: ರಾಮುಲು (೩೫), ಬುಡ್ಗಜಂಗಮ, ಸುರುಪುರ

೮. ದ್ವಾರಕನಾಥ ಸಿ.ಎಸ್., ಹಿಂದುಳಿದ ವರ್ಗದ ಆಯೋಗದ ವರದಿ, ಸಂಕುಲ, ಪು.೨೫೫-೨೫೬

೯. ಅದೇ ಪು. ೨೬೦

ಅಧ್ಯಾಯ ೫

ಅಲೆಮಾರಿ ಸಮುದಾಯಗಳ ಅಭಿವೃದ್ಧಿ

ಅಧ್ಯಾಯ ಐದು

ಅಲೆಮಾರಿ ಸಮುದಾಯಗಳ ಅಭಿವೃದ್ಧಿ

ಸ್ವಾತಂತ್ರ್ಯ ಬಂದ ನಂತರದಿಂದಲೂ ಸಮಾಜದ ಏಳಿಗೆಗಾಗಿ ಅನೇಕ ಕಾರ್ಯಕ್ರಮಗಳನ್ನು ಪ್ರತಿಯೊಂದು ಸರಕಾರವು ಜಾರಿಗೊಳಿಸುತ್ತಿವೆ. ಆದರೆ ಈ ಅಲೆಮಾರಿಗಳಿಗೆ ಆ ಕಾರ್ಯಕ್ರಮಗಳು ಸರಿಯಾದ ರೀತಿಯಲ್ಲಿ ಮುಟ್ಟದೇ ಇರುವುದು ಇಂದಿಗೂ ಕಾಣಬಹುದು. ಅಲೆಮಾರಿಗಳು ಸಮಸ್ಯೆಗಳ ಸುಳಿಯಲ್ಲಿ ಜೀವನ ಸಾಗಿಸುತ್ತಿದ್ದಾರೆ. ಅಲೆಮಾರಿಗಳ ಜೀವನ ಸುಧಾರಣೆಗೆ ಸರಕಾರಗಳು ಕೆಲವು ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗಿದೆ. ನಾಳಿನ ಜೀವನದ ಅಸ್ಥಿರತೆ ಮತ್ತು ಅನಿರ್ದಿಷ್ಟತೆಯ ಭಯದಿಂದ ಅವರನ್ನು ದೂರ ಮಾಡಿ ಗೌರವದ ಜೀವನ ನಡೆಸಲು ಅನುಕೂಲ ಮಾಡುವ ಸಲುವಾಗಿ ಸರ್ಕಾರಗಳು ಯೋಜನೆಗಳನ್ನು ರೂಪಿಸಿ, ಆ ಮೂಲಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸಬೇಕಾಗಿದೆ. ಇಂತಹ ಕಾರ್ಯಕ್ರಮಗಳನ್ನು ಸರ್ಕಾರ ವೈಯಕ್ತಿಕವಾಗಿ ಮಾಡುತ್ತಿಲ್ಲ. ಯಾರು ಮೂಲ ಸೌಕರ್ಯಗಳಿಂದ ವಂಚಿತರಾಗಿರುವರೋ. ಅಂತವರ ಜೀವನ ಮಟ್ಟ ಸುಧಾರಿಸಲು ಯೋಜನೆ ಮತ್ತು ಅಭಿವೃದ್ಧಿ ಕಾರ್ಯಗಳು ಅವಶ್ಯಕ ಮತ್ತು ಕಡ್ಡಾಯವೂ ಕೂಡ ಎಂದು ಸಂವಿಧಾನದಲ್ಲಿ ಹೇಳಲಾಗಿದೆ. ಆ ನಿಟ್ಟಿನಲ್ಲಿ ಸರ್ಕಾರವು ಕೆಲವು ಯೋಜನೆಗಳು ಮತ್ತು ಅಭಿವೃದ್ಧಿ ಕಾರ್ಯಗಳನ್ನು ಜಾರಿ ಮಾಡಿದೆ. ಆದರೆ ಇವು ಸಮಾಜದ ಅಂಚಿನ ವ್ಯಕ್ತಿಗಳಾದ ಅಲೆಮಾರಿಗಳ ಪರ ಇಲ್ಲವಾಗಿದೆ. ನೆಲೆ ನಿಂತವರ ಪರವಾಗಿ ಇವೆ. ಯೋಜನೆ ಮತ್ತು ಅಭಿವೃದ್ಧಿ ಕಾರ್ಯಗಳು ಸಾಗಬೇಕಾದ ದಿಕ್ಕಿನಡೆಗೆ ಸಾಗದೆ ಬೇರೊಂದು ದಿಕ್ಕಿನಡೆಗೆ ಸಾಗುತ್ತಿವೆ.

೫.೧. ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮ

ದೀರ್ಘ ಕಾಲದಿಂದ ತಾರತಮ್ಯ ಮತ್ತು ತುಳಿತಕ್ಕೆ ಒಳಗಾಗಿ ಮೂಲಭೂತ ಸೌಲಭ್ಯಗಳಿಂದ ವಂಚಿತರಾದ ಸಮುದಾಯಗಳನ್ನು ಆರ್ಥಿಕ, ಸಾಮಾಜಿಕ, ರಾಜಕೀಯ ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿ ಸಮಾನರಾಗಿ ಪರಿಗಣಿಸಲು, ಅಂತಹ ಸಮುದಾಯಗಳನ್ನು ಸಂರಕ್ಷಣೆ ಮತ್ತು ಕಲ್ಯಾಣದಲ್ಲಿ ಮಹತ್ವ ನೀಡಲು ಸರ್ಕಾರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಾ ಬಂದಿದೆ.

"ಸರ್ಕಾರದ ಅಭಿವೃದ್ಧಿ ಕ್ರಮ ಬೇರೊಂದು ದಿಕ್ಕಿನಲ್ಲಿ ಸಾಗುತ್ತಿದೆ. ಬೃಹತ್ ಕೈಗಾರಿಕೆ, ಅಣೆಕಟ್ಟುಗಳು, ಅಣುಶಕ್ತಿ ಸ್ಥಾವರಗಳು, ಗಣಿಗಳು, ಪೇಪರ್‌ಕಾರ್ಖಾನೆಗಳನ್ನು ಸ್ಥಾಪಿಸುವುದು ಅಭಿವೃದ್ಧಿ ಕ್ರಮವಾಗಿದೆ. ಇಂತಹ ಕ್ರಮದಿಂದ ಉಪಯೋಗವಾಗುವುದು ಅಂಚಿನ ಸಮುದಾಯಗಳಿಗಲ್ಲ. ಇದರಿಂದ ಬಂಡವಾಳಶಾಹಿಗಳಿಗೆ ಮತ್ತು ಭೂಮಾಲೀಕರಿಗೆ ಅನುಕೂಲವಾಗಿದೆ".[೧]

ಆರ್ಥಿಕ ಅಭಿವೃದ್ಧಿಯಲ್ಲಿ ಸಮುದಾಯನಿಷ್ಠವಾದ, ಜಾತ್ಯತೀತವಾದ, ತಾರತಮ್ಯರಹಿತವಾದ ಆರ್ಥಿಕ ಸಂಹಿತೆಗಳು ಬಹುಕಾಲದ ಸ್ವಾಸ್ಥ್ಯವನ್ನು ಉಳಿಸಬಲ್ಲದು. ಅಂತಹ ದಿಕ್ಕಿನಲ್ಲಿ ಅಂಚಿನ ಸಮುದಾಯ, ಅಲೆಮಾರಿಗಳು ಪ್ರಯಾಣ ಮಾಡಬಲ್ಲರು. ಅಂತಹ ಆರ್ಥಿಕ ಸಂಹಿತೆಗಳನ್ನು ಕೇವಲ ಆರ್ಥಿಕತಜ್ಞರು, ಯೋಜನಾಕಾರರಷ್ಟೇ ರೂಪಿಸದೆ ಸಂಬಂಧಪಡುವ ಮಾನವ ಸಮಾಜ, ಆರ್ಥಿಕತಜ್ಞರು ಒಳಗೊಂಡ, ಸಮುದಾಯ ಕೇಂದ್ರಬಿಂದುವಾಗಿ ಅಭಿವೃದ್ಧಿ ಕ್ರಮಗಳೂ ಜಾರಿಯಾಗ ಬೇಕಿದೆ. ಏಕೆಂದರೆ ಇಲ್ಲಿಯ ತನಕ ಸಮುದಾಯಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಯೋಜನಾಕಾರರು ಗಮನ ಕೊಡದೆ, ಸಂಪತ್ತಿನ ಕೇಂದ್ರದಿಂದ, ಬಂಡವಾಳದ ಪ್ರಜ್ಞೆಯಿಂದ ಕೃತಕ ಅಭಿವೃದ್ಧಿ ಮಾದರಿ ಗಳನ್ನು ಪ್ರತಿಪಾದಿಸುತ್ತಾ ಬಂದಿದ್ದಾಗಿದೆ.

ಮಾನವ ಸಂಪತ್ತಿನ ಅರ್ಥಪೂರ್ಣ ವಿಕಾಸ ಮತ್ತು ಅಂತಃಕರಣದ ಅಂತರ್ಗತ ಸಂಬಂಧವೇ ಶ್ರೇಷ್ಠವಾದ ಅಭಿವೃದ್ಧಿ ಎನ್ನಬಹುದು. ಈ ಹಿಂದೆ ರೂಪಿಸಿದಂತಹ ಅಭಿವೃದ್ಧಿ ಮಾನದಂಡಗಳು ಆ ಸಮುದಾಯದೊಂದಿಗೆ ಅನುಸಂಧಾನವಿಲ್ಲದೆ, ವಿಕಾಸವಿಲ್ಲದೆ, ನಾಗರಿಕತೆಗಳೂ ಸಂಪತ್ತಿನ ಕೇಂದ್ರದಲ್ಲಿ ಭೋಗದ ಲಾಲಸೆಯನ್ನು ಆರ್ಥಿಕ ಅಪಮೌಲ್ಯಗಳನ್ನು ಬಲಪಡಿಸಿಕೊಂಡು ವೈರುಧ್ಯಗಳು ಬೆಳೆದುಕೊಂಡು ಬಂದಿವೆ. ಹೀಗಾಗಿ ಸಮುದಾಯಗಳ ಉತ್ಪಾದನಾ ಸಾಮರ್ಥ್ಯಕ್ಕೂ, ಅವರ ಶ್ರಮದ ರೀತಿ ನೀತಿಗೂ, ಸಂಪತ್ತಿನ ಕೇಂದ್ರೀಕರಣಕ್ಕೂ ಮತ್ತು ಅಭಿವೃದ್ಧಿಯ ಮಾನದಂಡಗಳಿಗೂ ಸಂಬಂಧ ಇಲ್ಲದಂತಹ ಬಿರುಕುಗಳು ಏರ್ಪಟ್ಟು ಮಾನವೀಯ ಅಂತಃಕರಣದ ಅಭಿವೃದ್ಧಿ ಈತನಕ ಆಗಿಲ್ಲ. ಇಂತಹ ಅಭಿವೃದ್ಧಿಯ ಮಾನದಂಡದಿಂದ ಸಂಬಂಧಗಳು ಮೂಲೆಗುಂಪಾಗಿವೆ. ಅವಿಭಕ್ತ ಕುಟುಂಬಗಳು ವಿಭಕ್ತ ಕುಟುಂಬಗಳಾಗುತ್ತಿವೆ. ಸಹಬಾಳ್ವೆಗೆ ಬದಲು ಸ್ಪರ್ಧೆ ಬೆಳೆಯುತ್ತಿದೆ. ಸಮುದಾಯಕ್ಕಿಂತ ವ್ಯಕ್ತಿ ಪ್ರಧಾನತೆ ಬಿಂಬಿಸುತ್ತಿದೆ. ಆದುದರಿಂದ ಸಮಾಜದ ವಿಘಟನೆಗೆ ಅಭಿವೃದ್ಧಿಯ ಕ್ರಮ ದಾರಿ

ಮಾಡಿಕೊಟ್ಟಂತಾಗುತ್ತದೆ. ಅಮರ್ತ್ಯಸೇನ್ ಪ್ರತಿಪಾದಿಸುವುದು "ಮಾನವ ಮತ್ತು ಮಾನವಮುಖಿ ಅಭಿವೃದ್ಧಿಯನ್ನು" ಇಂತಹ ಅಭಿವೃದ್ಧಿಯಿಂದ ಮಾನವ ಸಮಾಜ ಸಮಸ್ಯೆಯಿಂದ ಹೊರಬಂದು ಸಾಮಾಜಿಕ ಅಸಮಾನತೆಯನ್ನು ತಡೆಯಬಹುದಾಗಿದೆ" ಎನ್ನುತ್ತಾರೆ. ಈ ತೆರನಾದ ಅಭಿವೃದ್ಧಿ ಕ್ರಮದ ಜರೂರಿದೆ.

ಅಲೆಮಾರಿಗಳ ಅಭಿವೃದ್ಧಿಗೆ ಆಗಬೇಕಾದ ಕಾರ್ಯಕ್ರಮಗಳು

೧. ಆರ್ಥಿಕವಾಗಿ ಸಬಲರಾಗುವಂತಹ ವಾತಾವರಣ ಸೃಷ್ಟಿಸಬೇಕು.

೨. ಅಲೆಮಾರಿಗೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಅತಿ ಬೇಗನೆ ಕಲ್ಪಿಸಿಕೊಡಬೇಕು.

೩. ಸಂಪತ್ತಿನ ಕೇಂದ್ರೀಕರಣ ತಡೆದು ಸಂಪತ್ತಿನ ಪಾಲುಗಳು ಅಲೆಮಾರಿಯಂತಹ ತಳ ಸಮುದಾಯಗಳಿಗೆ ಸೇರುವಂತಹ ಕ್ರಮಗಳು ಕಟ್ಟುನಿಟ್ಟಿನಿಂದ ಜಾರಿಯಾಗಬೇಕು.

೪. ಸಾಂವಿಧಾನಿಕ ಸಂಹಿತೆಗಳನ್ನು ಮತ್ತಷ್ಟು ಬಲಪಡಿಸಬೇಕು ಮತ್ತು ಅವುಗಳ ಜಾರಿ ಸರಿಯಾಗಿ ಆಗಬೇಕು.

೫. ಮಾನವ ಕೇಂದ್ರಿತ ಆರ್ಥಿಕ ಯೋಜನಾ ವ್ಯವಸ್ಥೆಯ ಬದಲು ನಿಸರ್ಗದ ಸಹಜ ತಾರ್ಕಿಕ ಗತಿಯಲ್ಲಿ ಉತ್ಪಾದನಾ ಕ್ರಮಗಳನ್ನು ಜಾರಿಗೆ ತರಬೇಕು.

೬. ಸಮುದಾಯಗಳ ಆರೋಗ್ಯ ಸುಧಾರಿಸುವ ಕಾರ್ಯಕ್ರಮಗಳನ್ನು ಜಾರಿಗೊಳಿಸಬೇಕು.

೭. ಸ್ಥಳೀಯ ಉತ್ಪಾದನಾ ವಸ್ತುಗಳನ್ನು ಪುನಶ್ಚೇತನಗೊಳಿಸಬೇಕು.

೮. ಸಮುದಾಯಗಳನ್ನು ಹೊಸ ಕಾಲದ ವ್ಯವಸ್ಥೆಗೆ ತಕ್ಕಂತೆ ಉತ್ಪಾದನಾ ದೃಷ್ಟಿಯಿಂದ ಪುನರ್ ಸಂಘಟಿಸಬೇಕು.

೯. ಕರಕುಶಲ ಸಮುದಾಯಗಳಿಗೆ ಪ್ರತ್ಯೇಕವಾದ ಆರ್ಥಿಕ ಸ್ವಾಯತ್ತತೆ ಬೇಕು. ಅದನ್ನು ಸರ್ಕಾರ ನೀಡಬೇಕು.

೧೦. ಅಲೆಮಾರಿಗಳು ಕರಕುಶಲ ತಂತ್ರಜ್ಞಾನವನ್ನು ಆಧುನಿಕತೆಯ ಸಂಯೋಗದಿಂದ ಸಮಕಾಲೀನಗೊಳಿಸಬೇಕು. ಅವುಗಳಿಗೆ ಬೇಕಾದ ಮಾರುಕಟ್ಟೆಯನ್ನು ದೇಶೀಯವಾಗಿ ವಿಸ್ತರಿಸಬೇಕಾಗಿದೆ.

ಹೀಗಾದಾಗ ಮಾತ್ರ ಅಭಿವೃದ್ಧಿಯು ಯಶಸ್ವಿಯಾಗಿ ಅಲೆಮಾರಿಗಳು ಕೂಡ ನೆಲೆ ನಿಂತು ಬದುಕನ್ನು ರೂಪಿಸಿಕೊಳ್ಳಬಲ್ಲರು. ಅಂತಹ ಅಭಿವೃದ್ಧಿಯ ಕಾರ್ಯಕ್ರಮಗಳು ಬೇಗ ಆಗಬೇಕಾಗಿದೆ.

೫.೨. ಅಲೆಮಾರಿಗಳಿಗಾಗಿ ಯೋಜನೆಗಳು

ಶತಶತಮಾನಗಳ ಕಾಲದಿಂದಲೂ ಸಾಮಾಜಿಕ ಅಸಮಾನತೆಯ ಬಾಹುಗಳಲ್ಲಿ ಬಂಧಿತರಾಗಿ, ಬದುಕನ್ನು ಕಳೆದುಕೊಂಡ ಸಮುದಾಯಗಳು ಸಾಕಷ್ಟಿವೆ. ಅಂತಹ ಸಮುದಾಯಗಳು ಶೈಕ್ಷಣಿಕ, ಆರ್ಥಿಕ, ರಾಜಕೀಯ ಹಾಗೂ ಇತರೆ ಕ್ಷೇತ್ರಗಳಲ್ಲಿ ಹಿಂದುಳಿದಿವೆ ಇದಕ್ಕೆ ಅಲೆಮಾರಿಗಳು ಹೊರತಲ್ಲ.

"ಇಂದಿಗೂ ನಮ್ಮಲ್ಲಿರುವ ಯೋಜನಾ ನೀತಿಗಳಲ್ಲಿ ವಸಾಹತುಶಾಹಿಯ ಚಹರೆ ಗುರುತಿಸಬಹುದಾಗಿದೆ. ಅಂದರೆ ವಸಾಹತುಶಾಹಿಯ ಮುಖ್ಯ ಸ್ಥಿತಿ ಎಂದರೆ ಬಂಡವಾಳ ಪ್ರಧಾನ ಆರ್ಥಿಕ ಸ್ಥಿತಿ. ಅದನ್ನೇ ಸರ್ಕಾರ ಮುಂದುವರಿಸಿಕೊಂಡು ಹೋಗುತ್ತಿದೆ. ಬೃಹತ್ ಬಂಡವಾಳ ಹಾಕಿ ಬೃಹತ್ ಕಟ್ಟಡ, ಕೈಗಾರಿಕೆ, ಅಣುವಿದ್ಯುತ್ ಘಟಕಗಳು, ಗಣಿಗಾರಿಕೆ, ಕಂಪ್ಯೂಟರ್‌ನ ಸಾಫ್ಟ್‌ವೇರ್ ಕ್ರಾಂತಿ, ರೈಲ್ವೆ ಯೋಜನೆಗಳು, ಅರಣ್ಯಗಳು, ಪ್ರವಾಸೋದ್ಯಮ ಮತ್ತು ಸ್ಥಳಾಂತರ ಇತ್ಯಾದಿಗಳನ್ನೇ ಮುಖ್ಯವಾಗಿ ಯೋಜನೆಯನ್ನಾಗಿಟ್ಟುಕೊಂಡು ಕಾರ್ಯನೀತಿಯನ್ನು ರೂಪಿಸಲಾಗುತ್ತಿದೆ. ಆ ಕಾರ್ಯ ನೀತಿಗಳು ಆಯಾ ಪರಿಸರದಲ್ಲಿ ವಾಸವಿರುವ ಬುಡಕಟ್ಟು ಮತ್ತು ಅಲೆಮಾರಿ ಸಮುದಾಯಗಳ ಮೇಲೆ ಸವಾರಿ ಮಾಡುತ್ತಿವೆ. ಬದುಕನ್ನು ಅತಂತ್ರ ಮಾಡಲ್ಪಟ್ಟಿವೆ. ಇದರ ಪರಿಣಾಮದಿಂದಾಗಿ ಬುಡಕಟ್ಟುಗಳು ಮತ್ತು ಅಲೆಮಾರಿ ಸಮುದಾಯಗಳ ಬದುಕು ಮತ್ತಷ್ಟು ಸಂಕೀರ್ಣವಾಗುತ್ತಿದೆ. ಇದಕ್ಕೆಲ್ಲಾ ಬಹುಮುಖ್ಯ ಕಾರಣ ಯೋಜನೆಯ ನೀತಿಗಳು. ಆದುದರಿಂದ ಒಂದು ಯೋಜನೆಯನ್ನು ರೂಪಿಸಿ ಕಾರ್ಯ ರೂಪದಲ್ಲಿ ತರುವ ಮೊದಲು ಯೋಜನಾ ನೀತಿಗಳನ್ನು ಪರಿಷ್ಕರಿಸಬೇಕಿದೆ. ಪರಿಷ್ಕರಣೆಗೊಂಡ ನೀತಿಗಳನ್ನು ಸಮುದಾಯ ನಿಷ್ಠೆಯಿಂದ ಒಪ್ಪಿಕೊಳ್ಳುವಂತಾಗಬೇಕು. ಹಾಗಾದಾಗ ಮಾತ್ರ ಅನುಷ್ಠಾನಕ್ಕೆ ಬರುವ ಯೋಜನೆಗಳು ಮತ್ತು ನೀತಿಗಳು ಸಫಲವಾಗುವವು ಮತ್ತು ಅಭಿವೃದ್ಧಿ ಕಾಣುವುದು".[೩]

ಯಾದಗಿರಿ ಜಿಲ್ಲೆಯಲ್ಲಿರುವ ಅಲೆಮಾರಿಗಳಿಗೆ ಮೂರು ತಾಲೂಕುಗಳಲ್ಲಿ ಪ್ರಜಾಪ್ರತಿನಿಧಿಗಳು ಒಂದು ಶಾಶ್ವತ ನೆಲೆಯನ್ನು ಕೊಡುವುದಾಗಿ ಹೇಳುತ್ತಾ ಬರುತ್ತಿದ್ದಾರೆ. ಆದರೆ ಇಲ್ಲಿಯವರೆಗೂ ಅಲೆಮಾರಿಗಳಿಗೆ ಬೇಕಾದ ಶಾಶ್ವತ ವಸತಿ ವ್ಯವಸ್ಥೆಯನ್ನು ಮಾಡಿಲ್ಲ. ಸುಳ್ಳು ಆಶ್ವಾಸನೆ ಮಾತ್ರ ಜನ ಪ್ರತಿನಿಧಿಗಳಿಂದ ಬರುತ್ತವೆ ಎಂದು ಯಾದಗಿರಿಯಲ್ಲಿ ವಾಸಿಸುವ ಅಲೆಮಾರಿ ಯುವಕ ನರಸಪ್ಪ ತನ್ನ ಅಳಲನ್ನು ತೋಡಿಕೊಳ್ಳುತ್ತಾನೆ. ಹಾಗೆಯೇ ಶಹಾಪುರದಲ್ಲಿರುವ ಬುಡ್ಗಜಂಗಮ ಯುವಕ ಯಮನಪ್ಪ ಶಹಾಪುರದ ಶಾಸಕ ಶರಣಬಸಪ್ಪ ದರ್ಶನಾಪೂರ ಇವರ ಮುಖಾಂತರ ಶಹಾಪುರ ಬಸ್ ನಿಲ್ದಾಣದ ಹತ್ತಿರ ಶಾಶ್ವತ ನೆಲೆಗಾಗಿ ಕೆಲವೊಂದಿಷ್ಟು ಮನೆಗಳನ್ನು ಕಟ್ಟಿಕೊಂಡಿದ್ದೇವೆ. ಇನ್ನೂ ಹಲವರಿಗೆ ಆ ಸೌಲಭ್ಯ ಸಿಗಬೇಕಾಗಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾನೆ. ಆದರೂ ನಮ್ಮ ಅಲೆದಾಟಕ್ಕೆ ನಮ್ಮ ಸಮಸ್ಯೆಗಳಿಗೆ ಪರಿಹಾರ ಇನ್ನೂ ಸಿಕ್ಕಿಲ್ಲ. ಊರೂರು ಅಲೆದು ತಮ್ಮ ಪಾರಂಪಾರಿಕ ಕಸುಬುಗಳಿಂದ ಜೀವನ ಸಾಗಿಸುತ್ತಿದ್ದ ಅಲೆಮಾರಿಗಳನ್ನು ಕೂಡಿ ಹಾಕಿರುವುದರಿಂದ

ನಿರುದ್ಯೋಗ ತಾಂಡವಾಡುತ್ತಿದೆ. ಅಲೆಮಾರಿತನದ ಬದುಕು ಇವರದಾಗಿರುವುದರಿಂದ ಹೆಚ್ಚಾಗಿ ವ್ಯಾಪಾರ, ಕರಕುಶಲ ಕೈಗಾರಿಕೆಗಳನ್ನು ಇಷ್ಟಪಡುತ್ತಾರೆ. ಇಂತವರಿಗೆ ಬಯಸಿದ ಸಹಕಾರ, ಸಹಾಯ ವಿಲ್ಲವಾಗಿದೆ. ಒಂದು ಎಮ್ಮೆ, ಇಲ್ಲವೇ ಹಸು ಕೊಟ್ಟರೆ ಎಷ್ಟರಮಟ್ಟಿಗೆ ಸಬಲರಾಗಲು ಸಾಧ್ಯ. ಹಸು ಅಥವಾ ಎಮ್ಮೆ ಕೊಡಿಸಿದರೆ ಆಹಾರದ ಸಮಸ್ಯೆ ಬರುತ್ತದೆ. ಅದನ್ನು ಭರಿಸುವುದು ಹೇಗೆ ಎಲ್ಲಕ್ಕಿಂತ ಮುಖ್ಯವಾಗಿ ಆ ಉದ್ಯೋಗವನ್ನು ಆ ಸಮುದಾಯ ಬಯಸಿತ್ತೆ ಎನ್ನುವುದು ಮುಖ್ಯ. ಅಲ್ಪಸ್ವಲ್ಪ ಜನರು ಮಾತ್ರ ಹತ್ತಿರದ ನಗರದಲ್ಲಿ ತಮ್ಮ ವೃತ್ತಿ ಕೈಗೊಳ್ಳಬಹುದು. ಒಂದು ವೃತ್ತಿಯನ್ನು ಅದೇ ನಗರದಲ್ಲಿ ಎಲ್ಲಿಯ ತನಕ ನಡೆಸಲು ಸಾಧ್ಯ. ಮನೆಗೆ ಬಂದರೆ ಅನ್ನವಿಲ್ಲ. ಆದುದರಿಂದ ಮತ್ತೆ ಎಂದಿನಂತೆಯೇ ಆ ಸಮುಚ್ಚಯ ಬಿಟ್ಟು ಅಲೆದಾಟದಲ್ಲಿ ತೊಡಗಬೇಕಾಗುತ್ತದೆ. ಮಳೆಗಾಲದಲ್ಲಂತೂ ವಿಪರೀತ ತೊಂದರೆಗಳಾಗುತ್ತವೆ. ತಗ್ಗು ಪ್ರದೇಶದಲ್ಲಿ ನಗರ ಸ್ಥಾಪಿಸಿರುವುದರಿಂದ ಮೇಲು ಪ್ರದೇಶದ ನೀರೆಲ್ಲಾ ನಗರಕ್ಕೆ ಹರಿದು ಬಂದು ವಸತಿಯೊಳಗೆ ಬರುತ್ತವೆ. ಹೀಗಾಗಿ ಯಾವುದೇ ಯೋಜನೆಯನ್ನು ಅನುಷ್ಠಾನದಲ್ಲಿ ತರುವ ಮೊದಲು ಆ ಸಮಾಜವನ್ನು ಅಥವಾ ಆ ಸಮುದಾಯವನ್ನು ಸಮಗ್ರವಾಗಿ ಅಧ್ಯಯನ ಮಾಡಬೇಕಾಗುತ್ತದೆ. ಕೇವಲ ಯೋಜನಾಕಾರರಷ್ಟೆ ಯೋಜನೆ ರೂಪಿಸದೆ ಬಹುಮುಖಿ ಚಿಂತನೆ ಒಳಗೊಂಡಂತೆ ಯೋಜನಾ ನೀತಿಯ ಅವಶ್ಯಕತೆ ಇದೆ.

ಹೀಗಾಗಿ ಅಲೆಮಾರಿ ಸಮುದಾಯಗಳಿಗೆ ಯೋಜನೆ ರೂಪಿಸಬೇಕಾದರೆ ಕೇವಲ ಆರ್ಥಿಕ ತಜ್ಞರಷ್ಟೇ ಬೇಕೆನ್ನುವುದು ತಪ್ಪಾಗುತ್ತದೆ. ಮಾನವರಿಗಾಗಿ ರೂಪಿಸುವ ಯೋಜನೆಗಳಾದ್ದರಿಂದ ಮಾನವಶಾಸ್ತ್ರಜ್ಞರು ಬೇಕು. ಸಾಮಾಜಿಕ ವಿಷಯವಾಗಿರುವುದರಿಂದ ಸಮಾಜಶಾಸ್ತ್ರಜ್ಞರು, ಹಣಕಾಸಿನ ವಿಷಯವಾದ್ದರಿಂದ ಅರ್ಥಶಾಸ್ತ್ರಜ್ಞರು, ಸಂಪನ್ಮೂಲ ವ್ಯಕ್ತಿಗಳು, ಸಮುದಾಯದ ಕಾಳಜಿಯ ವ್ಯಕ್ತಿಗಳನ್ನೊಳಗೊಂಡಂತೆ ಸಮುದಾಯದ ಸದಸ್ಯರೊಂದಿಗೆ ಯೋಜನಾ ನೀತಿ ರೂಪಿಸಬೇಕಾಗಿದೆ. ಏಕೆಂದರೆ ಅಭಿವೃದ್ಧಿ ಎನ್ನು ವಂತದ್ದು ಏಕಮುಖವಾಗದೆ ಬಹುಮುಖಿಯಾಗಲು ಆ ಸಮುದಾಯದ ಸಮಷ್ಟಿತನವನ್ನು ಒಳ ಗೊಂಡಂತಹ ರೂಪರೇಷೆಗಳು ಬರಬೇಕಿದೆ. ಆದುದರಿಂದ ಸಮುದಾಯದ ಸಮಗ್ರ ಅಧ್ಯಯನ ಕೈಗೊಂಡು, ಸಮುದಾಯ ಇಷ್ಟಪಡುವ ಪ್ರದೇಶದಲ್ಲಿ ನೆಲೆ ನಿಲ್ಲಿಸಬೇಕಿದೆ. ಆ ಸಮುದಾಯದಲ್ಲಿ ಒಪ್ಪುವಂತಹ ಉದ್ಯೋಗದ ಅವಕಾಶ ಮಾಡಿಕೊಡಬೇಕಿದೆ. ಆತ್ಮವಿಶ್ವಾಸ ತುಂಬ ಬೇಕಿದೆ. ಹಾಗಾದಾಗ ಮಾತ್ರ ಅಲೆಮಾರಿಗಳೂ ನೆಲೆ ನಿಂತವರ ರೀತಿಯಲ್ಲಿ ಬದುಕನ್ನು ರೂಪಿಸಿ ಕೊಳ್ಳಬಲ್ಲರು. ಯೋಜನೆಗಳು ಯಾವ ಮಾನದಂಡಗಳಿಂದ ಕೂಡಿರಬೇಕೆಂಬುದನ್ನು ಖ್ಯಾತ ಅರ್ಥಶಾಸ್ತ್ರಜ್ಞರಾದ ಮೆಹಬೂಬ್ ಉಲ್-ಹಕ್ ಅವರು ಹೇಳುವುದೆಂದರೆ “ಸರ್ಕಾರದ ನೀತಿ ನಿರೂಪಣೆಗಳು ಜನತೆಯ ಆಶೋತ್ತರಗಳಿಗೆ ತಕ್ಕಂತೆ ಸ್ಪಂದಿಸಬೇಕು. ಜನತೆಯು ಅಭಿವೃದ್ಧಿ ಪ್ರಕ್ರಿಯೆ ಯಲ್ಲಿ, ನೀತಿ ನಿರೂಪಣೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಜನತೆಯ ಮನೆ ಬಾಗಿಲಿಗೆ ಆಡಳಿತ ಮತ್ತು ಅಧಿಕಾರ ವಿಕೇಂದ್ರೀಕರಣಗೊಳ್ಳಬೇಕು. ಅಭಿವೃದ್ಧಿಯು ಜನತೆಯಿಂದ ಜನರಿಗೋಸ್ಕರ ತಯಾರಾಗಬೇಕು” ಎನ್ನುತ್ತಾರೆ.

ಹೀಗಾಗಿ ಯೋಜನೆಯ ಉದ್ದೇಶ ಸಮುದಾಯದ ಸಮಷ್ಟಿತನದೊಂದಿಗೆ ಬದುಕು ಸುಧಾರಿಸಬೇಕು. ನಿರ್ದಿಷ್ಟ ಗುರಿಯಿರಬೇಕು. ಆ ಗುರಿಯನ್ನು ಮುಟ್ಟಲು ಆಗಾಗ್ಗೆ ನೀತಿ ಕಾರ್ಯಕ್ರಮಗಳಿಗೆ ಪುಷ್ಟಿಯನ್ನು ನೀಡಬೇಕಾಗಿದೆ. ಆ ಯೋಜನೆಗಳ ಅನುಷ್ಠಾನದ ತರುವಾಯ ಮೌಲ್ಯಮಾಪನ ಮಾಡಬೇಕು. ದೀರ್ಘ ಮತ್ತು ಪ್ರತ್ಯೇಕವಾದ ಹಾಗೂ ಅಲ್ಪಾವಧಿಯ ಬೃಹತ್ ಯೋಜನೆಗಳನ್ನು ರೂಪಿಸಬೇಕಿದೆ. ಅಂತಹ ಯೋಜನೆಗಳು ದೇಶೀಯ ನೆಲೆಯಿಂದ ಬರಬೇಕಾಗಿದೆ. ಅಂದಾಗ ಮಾತ್ರ ಅಲೆಮಾರಿಗಳ ಬದುಕು ಬದಲಾವಣೆಯಾಗಲು ಸಾಧ್ಯವಾಗುತ್ತದೆ.

೫.೩. ಅಲೆಮಾರಿ ಪರ್ಯಾಯ ಪದಗಳ ಗೊಂದಲಗಳ ನಿವಾರಣೆ

"ಕಿಲ್ಲಿಕ್ಯಾತ, ದೊಂಬಿದಾಸ, ಚಕ್ರವಾದ್ಯದಾಸ, ದಂಗದಾಸ್, ದಾಸರು, ಬೈರಾಗಿ, ಬಾಲಸಂತ, ಬಹುರೂಪಿ, ದುರ್ಗಾಮುರ್ಗಾ, ಬುರ್‌ಬುರ್‌ಚ, ಪರ್ಯಾಯ ಪದಗಳನ್ನು ಹಿಂದುಳಿದ ವರ್ಗದ ಪಟ್ಟಿಯಿಂದ ವಜಾಗೊಳಿಸವ ಬಗ್ಗೆ".[೫]

ಬೈರಾಗಿ, ಬಾಲಸಂತ, ಬಹುರೂಪಿ ಎಂಬ ಪರ್ಯಾಯ ಪದಗಳ 'ಬುಡ್ಗ ಜಂಗಮ, ಬೇಡ ಜಂಗಮ' ಹಿಂದುಳಿದ ವರ್ಗಗಳ ಪ್ರವರ್ಗ-೧ರ ಪಟ್ಟಿಯಲ್ಲಿ ಕ್ರಸಂ. ೫(ಸಿ) ಹಾಗೂ (ಇ)ಯಲ್ಲಿ 'ಬಾವಾಜಿ' ಎಂಬ ಜಾತಿಯ ಅಡಿಯಲ್ಲಿ ಪರ್ಯಾಯ ಪದಗಳನ್ನಾಗಿ ಸೇರಿಸಲ್ಪಟ್ಟ 'ಬೈರಾಗಿ' ಹಾಗೂ ಅದೇ ಪಟ್ಟಿಯ ಕ್ರಸಂ. ೬೧ರಲ್ಲಿ ತೋರಿಸಿರುವ 'ಬಾಲಸಂತೋಷಿ' ಮತ್ತು ಪ್ರವರ್ಗ-೨(ಎ)ರ ಕ್ರಸಂ. ೧೭೭ರಲ್ಲಿ ತೋರಿಸಿರುವ 'ಬಹುರೂಪಿ' ಪರ್ಯಾಯ ಪದಗಳು ಪರಿಶಿಷ್ಟ ಜಾತಿ ಪಟ್ಟಿಯ 'ಬೇಡ ಜಂಗಮ್', 'ಬುಡ್ಗ ಜಂಗಮ್' ಹೆಸರಿನ ಪರ್ಯಾಯ ಪದಗಳೆಂದು ಗುರುತಿಸಲಾಗಿದೆ.

"ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರ ಹೊರ ತಂದಿರುವ 'ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆಯಲ್ಲಿ 'ಬುಡ್ಗ ಜಂಗಮ' ಎನ್ನುವ ಪುಸ್ತಕದಲ್ಲಿ ಶ್ರೀ ಬಾಲಗುರುಮೂರ್ತಿ ಮತ್ತು ಶ್ರೀ ಪ್ರತಾಪ ಆರ್. ಬಹುರೂಪಿ ಅವರು ಬರೆದಿರುವ ಪುಸ್ತಕದಲ್ಲಿ 'ಬುಡ್ಗಜಂಗಮರನ್ನು ಜನಪದರು ಮತ್ತು ಇತಿಹಾಸಕಾರರು ತಮ್ಮ ಬರವಣಿಗೆಯಲ್ಲಿ ಹಾಕುವ ವೃತ್ತಿ ವೇಷಗಳಿಗೆ ಹಗಲು ವೇಷಗಾರ, ವೇಷಗಾರ, ಬಹುರೂಪಿ, ಬಾಲಸಂತ, ಬೈರಾಗಿ, ಬುರ್ರಕಥೆಯವರು, ಕಥೆ ಹೇಳುವವರು, ಸನ್ಯಾಸಿಗಳು, ಬೀದಿ ಭಾಗವತ, ಬಾವಚಗಳು, ಸಿದ್ಧರು, ಕೊಂಡಮಾಮ, ಶಾಸ್ತ್ರ ಹೇಳುವವರು, ಜಂಗಾಲರು, ಜಗ್ಗಾಲಿ, ಇತ್ಯಾದಿ ಹೆಸರುಗಳಿಂದ ಕರೆಯುವರು. ಆಯಾ ಪ್ರಾಂತ್ಯಕ್ಕೆ ಅನುಗುಣವಾಗಿ ಕಲಾಪ್ರದರ್ಶನ ಮಾಡುವ ಮೇಲ್ಕಂಡ ಕಾಯಕದವರನ್ನು ವಿಭಿನ್ನ ಹೆಸರುಗಳಿಂದ ದಾಖಲಿಸಿರುವುದರಿಂದ, ಸಮುದಾಯದ ನಿಜ ಸ್ವರೂಪ ಹೊರಹೊಮ್ಮಲಿಲ್ಲ" ಎಂದು ಗುರುತಿಸಿದ್ದಾರೆ".[೬] ಈ ಇಡೀ ಪುಸ್ತಕದಲ್ಲಿ ಬುಡ್ಗ ಜಂಗಮದ ಪರ್ಯಾಯ ಪದಗಳಾದ ಬೈರಾಗಿ, ಬಾಲಸಂತೋಷಿ, ಬಹುರೂಪಿ ಮುಂತಾದವರೆಲ್ಲಾ ಅಲೆಮಾರಿಗಳೆಂಬುದು ಸ್ಪಷ್ಟವಾಗುತ್ತದೆ. ಅಂತೆಯೇ, ಈ ಸಮುದಾಯಗಳ ನಡುವೆ

ವೈವಾಹಿಕ ಸಂಬಂಧಗಳು ಹಾಗೂ ಆಚಾರ-ವಿಚಾರ, ಸಂಪ್ರದಾಯ, ಬೆಡಗು, ದೈವ, ಭಾಷೆ, ಪಾರಂಪರಿಕ ವೃತ್ತಿ ಎಲ್ಲಾ ಒಂದೇ ಆಗಿವೆ ಎನ್ನುವುದು ತಿಳಿದುಬರುತ್ತದೆ.

ದಾಸರು, ಚಕ್ರವಾದ್ಯದಾಸ, ದಾಸ, ದಂಗದಾಸರ್, ದೊಂಬಿದಾಸರು ಎಂಬ ಪರ್ಯಾಯ ಪದಗಳ ಚನ್ನದಾಸರ್ ಹಿಂದುಳಿದ ವರ್ಗಗಳ ಪಟ್ಟಿಯ ಪ್ರವರ್ಗ-೧ರ ಕ್ರಸಂ. ೧೨ರ 'ದಾಸರಿ' ಎಂಬ ಜಾತಿಯಡಿಯಲ್ಲಿ ೧೨(ಬಿ) ದಾಸರು, ೧೨(ಸಿ) ಚಕ್ರವಾದ್ಯ ದಾಸ, ೧೨(ಡಿ) ದಂಗ್ ದಸರ್, ೧೨(ಇ) ದೊಂಬಿ-ದಾಸರು ಎಂಬ ಪದಗಳಿದ್ದು, ಇವೆಲ್ಲವೂ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರುವ ಕ್ರಮ.ಸಂಖ್ಯೆ ೨೯ರಲ್ಲಿ 'ಚನ್ನದಾಸರ್, ಹೊಲೆಯ ದಾಸರ್' ಎಂಬ ಜಾತಿಯ ಪರ್ಯಾಯ ಪದ ಗಳೆಂದು ತಿಳಿದು ಬರುತ್ತದೆ.

'ಚನ್ನದಾಸರ್' ಮತ್ತು ಅದರ ಪರ್ಯಾಯ ಪದಗಳಾದ ದಾಸರು, ಚಕ್ರವಾದ್ಯ ದಾಸ, ದಂಗ ದಾಸರ್, ದೊಂಬಿದಾಸರು ಎಂದು ಕರೆಯಲಾಗುವ ಈ ಜಾತಿಯ ಲಿಖಿತ ದಾಖಲೆಗಳಲ್ಲಿ ಪ್ರಮುಖ ವಾದವುಗಳು ಎಂದರೆ, ಆಯಾ ರಾಜ್ಯದ ಮತ್ತು ಆಯಾ ಜಿಲ್ಲೆಗಳ ಗ್ಯಾಝೆಟಿಯರ್‌ಗಳು,. ಈ ಗ್ಯಾಝೇಟಿಯರ್‌ಗಳು ಸಂಕ್ಷಿಪ್ತ ವಿವರಗಳಿಂದ ಕೂಡಿವೆ. ಈ ಸಮುದಾಯವನ್ನು ಕುರಿತು ಪ್ರಕಟಗೊಂಡ ಪ್ರಮುಖ ಮಾನವಶಾಸ್ತ್ರೀಯ ಅಧ್ಯಯನವೆಂದರೆ, Edgar Thurston ಅವರ Caste and Tribes of Southern India, Syed Siraj Ul Hasan ಅವರ The Caste and Tribes of the Nizam dominion, L.K. Anthkrishna Iyer ಅವರ Tribes and Caste, K.S.Singh ಅವರು ಸಂಪಾದಿಸಿದ People of India ಎಂಬ ಗ್ರಂಥಗಳು ಎಡ್ಗರ್ ಥರ್ಸ್ಟನ್‌ರವರ ಪ್ರಕಾರ ದಾಸರು ಸಿರಿವಂತ ಶೂದ್ರರ ವಂಶಜರು. 'ದಾಸ' ಎಂದರೆ ಸೇವಕ. ಇವರನ್ನು ದೇವರ ಸೇವೆಗೆ ಒಪ್ಪಿಸಿದವರು ಎಂದರ್ಥ. ಎಂ.ಡಬ್ಲ್ಯೂ ಫ್ರಾನ್ಸಿಸ್ ಎಂಬುವವರು ಅನಂತಪುರದ ಭಿಕ್ಷುಕರ ಕುರಿತು ಬರೆಯುತ್ತಾ "ಒಡೆದು ಕಾಣುವ ಭಿಕ್ಷುಕರೆಂದರೆ ಈ ದಾಸರಿಗಳು. ಈ ಸಮಾಜ ಕಾಪು, ಬಲಿಜ, ಕುರುಬ, ಗೋಯ ಹಾಗೂ ಮಾಲ ಈ ಜಾತಿಗಳವರಿಂದ ಕೂಡಿ ಆಗಿದೆ. ಇವರು ಭಿಕ್ಷೆ ಬೇಡಿ ಬದುಕುವವರು" ಎಂದಿದ್ದಾರೆ. ಈ ಚನ್ನದಾಸರು, ದೊಂಬಿದಾಸರು, ದಾಸರು, ಚಕ್ರವಾದ್ಯ ದಾಸ, ದಂಗದಾಸ, ಇವರ ಆಚಾರ, ವಿಚಾರ, ಸಂಪ್ರದಾಯ, ಬೆಡಗು, ದೈವ, ಭಾಷೆ, ಪಾರಂಪರಿಕ ವೃತ್ತಿ ಒಂದೇ ಆಗಿರುವುದರೊಂದಿಗೆ ಇವರಿವರಲ್ಲಿ ಕೊಟ್ಟು ಕೊಳ್ಳುವ ಸಂಬಂಧಗಳಿವೆ. ಇದರಿಂದಾಗಿ ಚನ್ನದಾಸರ ಪರ್ಯಾಯ ಪದಗಳನ್ನಾಗಿ ದಾಸರು, ಚಕ್ರವಾದ್ಯ ದಾಸ, ದಂಗದಾಸರ್ ಹಾಗೂ ದೊಂಬಿ ದಾಸರೆಂದು ಪರಿಗಣಿಸಬಹುದಾಗಿದೆ.

ದುರ್ಗಾಮುರ್ಗಿ, ಬುರ್‌ಬುರ್‌ಚ, ಎಂದು ಕರೆಯಲಾಗುವುದೇ ಸಿಂಧೋಳ್ಳು. ಸಿಂಧೋಳ್ಳು ಎಂದು ಕರೆಯಲಾಗುವ ಈ ಜಾತಿಯು ಸಿಂಧೋಳ್ಳು, ಚಿಂದೊಳ್ಳು ಎಂದು ಪರಿಶಿಷ್ಟ ಜಾತಿಯ

ಕ್ರಮಸಂಖ್ಯೆ ೯೭ರಲ್ಲಿ ತೋರಿಸಲ್ಪಟ್ಟಿದೆ. ಅಂತೆಯೇ, ದುರ್ಗಾಮುರ್ಗ, ಬುರ್‌ಬುರ್‌ಚ ಎಂಬ ಹೆಸರುಗಳು ಹಿಂದುಳಿದ ವರ್ಗದ ಪಟ್ಟಿಯ ಪ್ರವರ್ಗ-೧ರ ಕ್ರ.ಸಂ. ೭೦ರಲ್ಲಿ ಕ್ರಮವಾಗಿ (ಎ) ದುರ್ಗಾಮುರ್ಗ, (ಬಿ) ಬುರ್‌ಬುರ್‌ಚ ಎಂದು ಪ್ರಕಟವಾಗಿದೆ. ಡಾ. ದೊಡ್ಡಮನಿ ಲೋಕರಾಜ ಹಾಗೂ ಶ್ರೀ ಶ್ರೀನಿವಾಸ ಎಸ್. ರಾವುಲೋಳ್ ರಚಿಸಿರುವ ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕದ ಪ್ರಾಧಿಕಾರ ಪ್ರಕಟಿಸಿರುವ 'ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ'ಯ ಸಿಂಧೋಳ್ಳು ಪುಸ್ತಕದ ಪು.ಸಂ.೭ರಲ್ಲಿ ಸಿಂಧೋಳ್ಳು ಸಮುದಾಯ ಹಾಗೂ ಅದರ ಪರ್ಯಾಯ ಪದಗಳ ಬಗ್ಗೆ ಈ ರೀತಿ ಹೇಳಲಾಗಿದೆ.

ಸಿಂಧೋಳ್ಳು ಸಮುದಾಯದವರು ಕರ್ನಾಟದ ಉದ್ದಗಲಕ್ಕೂ ಧಾರ್ಮಿಕ ಭಿಕ್ಷೆ ಮಾಡಿಕೊಂಡು ಅಲೆಮಾರಿ ಜೀವನ ಸಾಗಿಸುವಂಥವರು. ಇತ್ತೀಚೆಗೆ ಹಲವೆಡೆ ನೆಲೆನಿಂತು ಜೀವನ ಸಾಗಿಸುತ್ತಿದ್ದಾರೆ. ಇವರು ಕರ್ನಾಟಕದ ೨೧ ಜಿಲ್ಲೆಗಳಲ್ಲಿ ಕಂಡುಬರುತ್ತಿದ್ದು ಅವರನ್ನು ಆಯಾ ಪ್ರದೇಶಗಳಲ್ಲಿ ವಿಭಿನ್ನ ಹೆಸರುಗಳಿಂದ ಗುರುತಿಸಲಾಗುತ್ತದೆ. ಆದರೆ, ಈ ಎಲ್ಲಾ ಹೆಸರುಗಳು ದೇವರನ್ನು ಹೊತ್ತುಕೊಂಡು ಅವರು ನಡೆಸುವ ಭಿಕ್ಷಾಟನಾ ವೃತ್ತಿಯನ್ನು ಸೂಚಿಸುವಂಥವುಗಳಾಗಿವೆ. ಇವರನ್ನು ದುರುಗಮುರಗಿ, ಬುರ್ರಬುರ್ರಚಾ, ಬುರ್ರ ಮಾರಿಯರ್, ಬುರ್ರ ಬುರ್ರ ಪೋಚಮ್ಮ, ಬುರ್ರ ಬುರ್ರ ಸುಂಕಲಮ್ಮ, ಊರಮಾರಿಯಾರ್ ಅಥವಾ ಉರುಮಿಯೋರು, ಬುಟ್ಟಿಕೂಗಮ್ಮ, ಕೂಗಮ್ಮನ ಆಡಿಸುವವರು, ಮರಗವ್ವನ ಆಡಿಸುವವರು, ದುರುಗಮ್ಮನ ಆಡಿಸುವವರು, ಊರಮ್ಮನ ಆಡಿಸುವವರು , ಬಂಡಿಗಾಲಿನ ಪೋತರಾಜ, ಪೋತರಾಜ, ಪೋತಪ್ಪ, ಪೋತ್ಯಾ, ಪೋತರಾಜ್, ಪೆಟ್ಟಿಗೆ ಪೂಜಾರಿ, ಪೂಜಾರರು, ದ್ಯಾವರು ಪೂಜಾರರು, ಭಿಕ್ಷುಕರು ಎಂಬ ಇತ್ಯಾದಿ ಹೆಸರುಗಳಿಂದ ಕರೆಯುವುದುಂಟು.

ಸಿಂಧೋಳ್ಳು ಜಾತಿಯ ಮೇಲ್ಕಂಡ ಎಲ್ಲಾ ಉಪಜಾತಿ ಅಥವಾ ಪರ್ಯಾಯ ಪದಗಳ ನಡುವೆ ವೈವಾಹಿಕ ಸಂಬಂಧಗಳಿದ್ದು, ಇವರ ಸಂಪ್ರದಾಯ ಬೆಡಗು, ದೈವ, ಭಾಷೆ, ಪಾರಂಪರಿಕ ವೃತ್ತಿ, ಆಚಾರ-ವಿಚಾರಗಳು ಒಂದೇ ಆಗಿವೆ. ಹಾಗಾಗಿ ಸಿಂಧೋಳ್ಳು ಎಂದು ಕರೆಯಲಾಗುವ ಜಾತಿಯನ್ನೇ ದುರಗಾಮುರಗಿ, ಬುರ್ರಬುರ್ರಚಾ ಎಂದು ಕರೆಯುತ್ತಾರೆಂದು ಈ ಮೇಲಿನ ವಿಶ್ಲೇಷಣೆಯಿಂದ ಕಂಡುಬರುತ್ತದೆ. ಒಟ್ಟಾರೆಯಾಗಿ ಈ ಸಮುದಾಯವು ದೇವರ ಪೆಟ್ಟಿಗೆಯನ್ನು ತಲೆಯ ಮೇಲೆ ಹೊತ್ತೊಯ್ದು ಭಿಕ್ಷೆ ಬೇಡುವ ಅಲೆಮಾರಿ ಸಮುದಾಯವಾಗಿದೆ.

ಮೇಲಿನ ಈ ಎಲ್ಲಾ ಸಮುದಾಯಗಳನ್ನು ಕಂಡಾಗ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರುವ ಬೇಡ ಜಂಗಮ, ಬುಡ್ಗಜಂಗಮ, ಚನ್ನದಾಸರು, ಹೊಲೆಯ ದಾಸರ್ ಹಾಗೂ ಸಿಂಧೋಳ್ಳು, ಚಿಂದೊಳ್ಳು ಜಾತಿಗಳ ಪರ್ಯಾಯ ಪದಗಳು ಯಾವುದೋ ಕಾರಣಗಳಿಂದ ಹಿಂದುಳಿದ ವರ್ಗದ ಪಟ್ಟಿಯಲ್ಲಿ ಸೇರಿವೆ. ಇದರಿಂದಾಗಿ ಇದರ ಈ ಪಟ್ಟಿಯಲ್ಲಿರುವ ಪರ್ಯಾಯ ಪದಗಳ ಜಾತಿಗಳಿಗೆ

ಪರಿಶಿಷ್ಟ ವರ್ಗದ ಅಡಿಯಲ್ಲಿ ಜಾತಿ ಪ್ರಮಾಣ ಪತ್ರ ನೀಡಲು ತಹಶೀಲ್ದಾರರು ನಿರಾಕರಿಸುತ್ತಿದ್ದಾರೆ. ಇದರಿಂದಾಗಿ ಅತ್ಯಂತ ಕಡುಬಡವ ಹಾಗೂ ಅಲೆಮಾರಿ ಜನಾಂಗಗಳಾದ ಈ ಜಾತಿ ಸಮುದಾಯಗಳಿಗೆ ಸಾಮಾಜಿಕ ನ್ಯಾಯದ ದೃಷ್ಟಿಯಲ್ಲಿ ಅನ್ಯಾಯವಾಗುತ್ತಿದೆ. ಈ ಕಾರಣಕ್ಕಾಗಿ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ದಾಸರು, ಚಕ್ರವಾದ್ಯ ದಾಸ, ದಂಗದಾಸರ್, ದೊಂಬಿದಾಸರು ಹಾಗೂ ಬಾಲಸಂತೋಷಿ, ದುರ್ಗಾಮುರ್ಗ, ಬುರ್‌ಬುರ್‌ಚ ಮತ್ತು ಬಹುರೂಪಿ ಸಮುದಾಯಗಳನ್ನು ಹಿಂದುಳಿದ ವರ್ಗಗಳ ಪಟ್ಟಿಯಿಂದ ತೆಗೆದು ಈ ಸಮುದಾಯಗಳನ್ನು ತಮ್ಮ ಮುಖ್ಯ ಜಾತಿಗಳೊಂದಿಗೆ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಸೇರಿಸಲು ಸರ್ಕಾರ ತಕ್ಷಣ ಕ್ರಮಕೈಗೊಳ್ಳಬೇಕಾಗಿದೆ.

೫.೪. ಅಲೆಮಾರಿಗಳ ಸಬಲೀಕರಣ

ಅಲೆಮಾರಿಗಳು ಶತಶತಮಾನಗಳ ಕಾಲದಿಂದಲೂ ಪಾರಂಪರಿಕ ಕಸಬುಗಳನ್ನು ನೆಚ್ಚಿಕೊಂಡು ಬಂದಿದ್ದಾರೆ. ಬಡತನದ ಬೇಗೆಯಲ್ಲಿ ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿದ್ದಾರೆ. ಹಸಿವನ್ನು ಹಿಂಗಿಸಿಕೊಳ್ಳಲು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶದಲ್ಲಿ ಅಲೆಯುತ್ತಿರುವ ಅಲೆಮಾರಿಗಳ ಜೀವನಕ್ರಮ, ಸಾಮಾಜಿಕ ವ್ಯವಸ್ಥೆ ಹಾಗೂ ಆರ್ಥಿಕ ಜೀವನವನ್ನು ಹಿಂದಿನ ಅಧ್ಯಾಯಗಳಲ್ಲಿ ಪರಿಶಿಲಿಸಲಾಗಿದೆ.

ಬದುಕಿನ ಜಂಜಾಟದಲ್ಲಿ ಹೋರಾಟ ಮಾಡುತ್ತಿರುವ ಅಲೆಮಾರಿಗಳ ಬದುಕು ರೂಪಿಸಲು ಹಾಗೂ ಸಬಲರಾಗಲು ಯಾವ ರೀತಿಯ ಕಾರ್ಯಕ್ರಮಗಳು ಬೇಕು ಎಂಬುದನ್ನು ಸಮುದಾಯದ ಸಮಷ್ಟಿ ವಿವೇಕದಿಂದ ಮತ್ತು ಆ ಕ್ಷೇತ್ರದಲ್ಲಿ ದುಡಿದ ಯೋಜನಾಕಾರರು, ಅಧ್ಯಯನಕಾರರು, ಸಂಪನ್ಮೂಲ ವ್ಯಕ್ತಿಗಳು, ಸರ್ಕಾರ ಒಟ್ಟಿಗೆ ಕೂಡಿಕೊಂಡು ಅಲೆಮಾರಿ ಸಮುದಾಯಗಳು ಸಬಲರಾಗಲು ಅಥವಾ ನೆಲೆ ನಿಂತು ಇತರರಂತೆ ಬದುಕುವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗಿದೆ. ಈ ದೃಷ್ಟಿಯಿಂದ ಸಬಲೀಕರಣದಂತಹ ಅಭಿವೃದ್ಧಿ ಪ್ರಣಾಳಿಕೆಯ ಕಾರ್ಯಕ್ರಮಗಳು, ಸಬಲೀಕರಣದ ವಾತಾವರಣವು ಸೃಷ್ಟಿಗೊಳ್ಳಬೇಕಿದೆ.

"ಮಾನವನ ಸರ್ವಾಂಗಿಣ ಅಭಿವೃದ್ಧಿಗೆ ಅವಶ್ಯಕವಾದ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ, ಮಾನಸಿಕ ಮತ್ತು ಬೌದ್ಧಿಕತೆಗೆ ಸಂಬಂಧಿಸಿದಂತೆ ಶಾಸನ ಬದ್ಧವಾದ ಮತ್ತು ನೈತಿಕ ಶಕ್ತಿಯನ್ನು ಕೊಡುವ ಚೈತನ್ಯವೇ ಸಬಲೀಕರಣವಾಗಿದೆ".[೭]

ಅಲೆಮಾರಿಗಳು ಕೂಡ ಅಧಿಕಾರರಹಿತರು. ಹಾಗಾಗಿ ಅಧಿಕಾರ ಹಿಡಿಯುವುದರ ಕಡೆ ಸಾಗಬೇಕಾಗಿದೆ. ಇಂತಹ ಸ್ಪಷ್ಟ ಅರ್ಥವನ್ನು ನೀಡುವ ಸಬಲೀಕರಣ ಅಲೆಮಾರಿ ಸಮುದಾಯಗಳಿಗೆ ಹೊಸ ಚೈತನ್ಯ ಮೂಡಿಸಬಲ್ಲದು.

ಸಬಲೀಕರಣದ ಮುಖ್ಯ ಉದ್ದೇಶವೆಂದರೆ ಸ್ವಾವಲಂಬನೆಗೆ ತಳಕು ಹಾಕುವಂತಾಗಿದೆ. ಅಲೆಮಾರಿಗಳು ಸ್ವಾವಲಂಬಿಗಳಾಗಬೇಕೆಂಬುದು ನಿಜವಾದರೂ ಸ್ವಾವಲಂಬನೆಯು ಸಬಲೀಕರಣವೆನ್ನಿಸಿ ಕೊಳ್ಳುವುದಿಲ್ಲ. ಏಕೆಂದರೆ ಸ್ವಾವಲಂಬನೆಯು ಅಲೆಮಾರಿಗಳ ಸ್ಥಿತಿಗತಿಯನ್ನು ಉತ್ತಮಪಡಿಸಬಹುದು. ಆದರೆ ಅಲೆಮಾರಿಗಳ ಸಮಸ್ಯೆಯಿರುವುದು ಅವರನ್ನು ನೆಲೆ ನಿಲ್ಲಿಸುವಿಕೆಯ ವಿಚಾರಕ್ಕೆ ಸಂಬಂಧಿಸಿದೆ. ಅಲೆಮಾರಿಗಳು ನೆಲೆ ನಿಲ್ಲುವುದು ಆಸ್ತಿವಂತರಾಗುವುದು, ಆಸ್ತಿಯ ಮಾಲೀಕತ್ವದ ಹಕ್ಕು ಪ್ರಾಪ್ತವಾಗುವುದು. ಅಲೆಮಾರಿಗಳ ಜೊತೆ ನೆಲೆ ನಿಂತವರೂ ಮುಖಾಮುಖಿಯಾಗಬೇಕು. ಸಮಾಜದಲ್ಲಿ ಉತ್ತಮ ಸ್ಥಾನಮಾನವು ಅಲೆಮಾರಿಗಳಿಗೆ ಸಿಗಬೇಕು. ಹೀಗೆ ಇವೆಲ್ಲವೂ ಸಬಲೀಕರಣದ ಪ್ರಮುಖ ಉದ್ದೇಶಗಳು ಈಡೇರಬೇಕಾಗಿದೆ.

ಅಲೆಮಾರಿಗಳ ಸಬಲೀಕರಣದ ಪರ್ಯಾಯ ಅಂಶಗಳು

ಅಲೆಮಾರಿಗಳು ಎದುರಿಸುತ್ತಿರುವ ಸಮಸ್ಯೆಗಳು, ತಾರತಮ್ಯಗಳು, ದೌರ್ಜನ್ಯ ಮತ್ತು ಶೋಷಣೆಗಳನ್ನು ಮನಗಂಡು ಈ ಪ್ರವೃತ್ತಿಗಳನ್ನು ವಿಮುಕ್ತಿಗೊಳಿಸಲು ಸರ್ಕಾರದ ಪಾತ್ರ, ಸಂಘಸಂಸ್ಥೆಗಳು, ಸಾರ್ವಜನಿಕರ ಅಭಿಮತ, ಅಲೆಮಾರಿ ಸಮುದಾಯ ಹಾಗೂ ಅರೆ ಅಲೆಮಾರಿ ಸಮುದಾಯಗಳ ಸಂಘಟನೆಗಳು, ಧಾರ್ಮಿಕ ವಲಯಗಳ ಪಾತ್ರ ಈ ರೀತಿಯ ಅಂಶಗಳು ಸಬಲೀಕರಣದ ಪರ್ಯಾಯ ಅಂಶಗಳಾಗಿ ಬೆಳಕಿಗೆ ಬರಬೇಕಾಗಿದೆ.

೧. ಸಂಘಸಂಸ್ಥೆಗಳ ಪಾತ್ರ

- ಅಲೆಮಾರಿ ಕಾಲೋನಿಗಳಲ್ಲಿ ಶಿಕ್ಷಣ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.
- ಸಣ್ಣ ಕೈಗಾರಿಕೆಗಳಾದ ಬೀಡಿ ತಯಾರಿಕೆ, ಮೀನುಗಾರಿಕೆ, ಟೈಲರ್, ಹಾಲಿನ ಘಟಕಗಳು, ಪೇಪರ್ ತಯಾರಿಕೆ, ಕಂಬಳಿ, ಬಟ್ಟೆಗಳ ಕೈಮಗ್ಗಗಳು, ರೇಷ್ಮೆ ಉಡುಪುಗಳ ತಯಾರಿಕೆ, ಮುದ್ರಣ, ಊದುಬತ್ತಿ ತಯಾರಿಕೆ, ಮೋಂಬತ್ತಿ, ಬೆಂಕಿಕಡ್ಡಿಗಳ ತಯಾರಿಕೆ, ಇನ್ನಿತರ ಕೈ ಕಸುಬುಗಳು ಮಾಡುವಂತಹ ಸಲಕರಣೆಗಳನ್ನು ನೀಡಬೇಕಾಗಿದೆ.
- ಮೀಸಲಾತಿಯಿಂದ ವಂಚಿತರಾಗಿರುವ ಅನೇಕ ಸಮುದಾಯಗಳನ್ನು ಮೀಸಲಾತಿಯಲ್ಲಿ ಸೇರಿಸಿಕೊಳ್ಳುವಂತೆ ಸಹಕರಿಸುವುದು ಹಾಗೂ ಸರ್ಕಾರದ ಮೀಸಲಾತಿಯ ಎಲ್ಲಾ ಸೌಲಭ್ಯಗಳನ್ನು ಕೊಡಿಸುವುದು.
- ಅಲೆಮಾರಿ, ಅರೆಅಲೆಮಾರಿಗಳ ಸಮುದಾಯದ ಸಂಪೂರ್ಣ ಮಾಹಿತಿಯನ್ನು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಕ್ಕೆ ಮನವಿ ಪತ್ರಗಳನ್ನು ಕೊಡುವುದರ ಮೂಲಕ ನ್ಯಾಯ ದೊರಕಿಸಬೇಕಾಗಿದೆ.

* ಸ್ವಯಂಸೇವಾ ಸಂಸ್ಥೆಗಳು ಅಲೆಮಾರಿ ಸಮುದಾಯಗಳ ಅಭಿವೃದ್ಧಿಗಾಗಿ ಮುಂದಾಗಬೇಕು.
* ಅಲೆಮಾರಿ ಸಮುದಾಯಗಳಿಗೆ ಸಂಘಟನೆ ಹೆಚ್ಚಿಸಲು ನೆರವಾಗಬೇಕು.

೨. ಅಲೆಮಾರಿ, ಅರೆಅಲೆಮಾರಿ ಸಮುದಾಯಗಳ ಪಾತ್ರ

* ಕೆಲವು ಸಮುದಾಯಗಳು ಕೆಳಮಟ್ಟದ ವೃತ್ತಿಗಳನ್ನು ಬಿಟ್ಟು, ಪರಿವರ್ತನೆಯ ಹಾದಿಯಲ್ಲಿರುವಾಗ ಅಲ್ಲಿನ ಅಲೆಮಾರಿಗಳು ಬೇರೆ ವೃತ್ತಿಗಳನ್ನು ನೋಡಿ ಮಾಡಬೇಕಾಗಿದೆ.
* ಸಮುದಾಯದವರು ತಮ್ಮ ಸಾಂಪ್ರದಾಯಿಕ ವೃತ್ತಿಯನ್ನು ಅಲ್ಲಗಳೆಯದೆ, ಇತರೇ ಪ್ರವೃತ್ತಿಗಳನ್ನು ಬೆಳೆಸಿಕೊಳ್ಳುವುದು.
* ರಾಜಕೀಯ ಕ್ಷೇತ್ರದಲ್ಲಿ ಅಲೆಮಾರಿ ಸಮುದಾಯಗಳು ಭಾಗವಹಿಸಬೇಕಾಗಿದೆ.
* ಅಲೆಮಾರಿ ಸಮುದಾಯದವರು ಉನ್ನತವಾದ ವಿಚಾರಗಳತ್ತ ಗಮನ ಹರಿಸುವುದು.
* ನ್ಯಾಯಪಂಚಾಯಿತಿಯ ಬದಲಾವಣೆಯಲ್ಲಿ ಸುಧಾರಣೆಯಾಗಬೇಕಾಗಿದೆ.
* ಅಲೆಮಾರಿ ಸಮುದಾಯಗಳು ಏಣಿಶ್ರೇಣಿಗಳನ್ನು ಮರೆತು ಎಲ್ಲ ಅಲೆಮಾರಿ ಸಮುದಾಯಗಳು ಒಂದಾಗಬೇಕು.
* ಸಮುದಾಯದಲ್ಲಿ ಏನಾದರೂ ಸಮಸ್ಯೆಗಳು ಕಂಡುಬಂದಾಗ ಸಮುದಾಯಗಳು, ಸರ್ಕಾರ, ಖಾಸಗಿ ಸಂಘ ಸಂಸ್ಥೆಗಳು ಸಮಸ್ಯೆಯ ವಿರುದ್ಧ ಪ್ರತಿಭಟನೆ ಮಾಡಬೇಕಾಗಿದೆ.
* ನೆಲೆ ನಿಲ್ಲುವ, ಸ್ವಾಭಿಮಾನ, ಭರವಸೆ, ಸ್ವಾಯತ್ತತೆ ಗುಣಗಳನ್ನು ಬೆಳೆಸಿಕೊಳ್ಳುವುದು.
* ಅಲೆಮಾರಿ-ಅರೆಅಲೆಮಾರಿ ಸಮುದಾಯದವರು ತಮ್ಮ ವೈದ್ಯ ಪದ್ಧತಿಯನ್ನು, ಗಿಡಮೂಲಿಕೆಯ ಔಷಧಿಗಳನ್ನು ಕಾಪಾಡಿಕೊಂಡು, ಬೆಳೆಸಿಕೊಂಡು ಬರಬೇಕಾಗಿದೆ. ಅವುಗಳಿಗೆ ಪ್ರೋತ್ಸಾಹ ನೀಡಬೇಕಾಗಿದೆ.

೩. ಸಾರ್ವಜನಿಕರ ರಕ್ಷಣೆ

* ಊರಿಂದ ಊರಿಗೆ ಅಲೆದಾಡುವ ಈ ಸಮುದಾಯಗಳಿಗೆ ಆಯಾ ಊರಿನ ಸ್ಥಳದ ಮಾಲೀಕರು ಇವರಿಗೆ ಕೆಲವು ಕಾಲ ನೆಲೆ ನಿಲ್ಲಲು ಅವಕಾಶವನ್ನು ನೀಡಬೇಕಾಗಿದೆ.
* ಅಲೆಮಾರಿ ಸಮುದಾಯದವರು ಭಿಕ್ಷಾಟನೆ ಸಂದರ್ಭದಲ್ಲಿ ಅಲ್ಲಿನ ಜನರು ಅನ್ನ, ಸಾರು, ರೊಟ್ಟಿ, ದವಸಧಾನ್ಯ, ಹಣ ಕೊಡುವುದುಂಟು. ಆದರೆ ಅವರಿಗೆ ಭಿಕ್ಷಾಟನೆ ನಿರ್ಮೂಲನೆ ಮಾಡುವಂತೆ ಕೆಲವು ಸಲಹೆಗಳನ್ನು ಹೇಳಿ, ಅವರನ್ನು ಅನೇಕ ವೃತ್ತಿಗಳಿಂದ ಜೀವಿಸುವಂತೆ ಪ್ರೇರಣೆಯನ್ನು ನೀಡಬೇಕಾಗಿದೆ.

- ಅಲೆಮಾರಿ ಸಮುದಾಯದ ಪ್ರದರ್ಶನ ಕಲೆ ಇತ್ಯಾದಿಗಳನ್ನು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗುವಂತೆ ಅವರಿಗೆ ವೇದಿಕೆಯನ್ನು, ಪ್ರೋತ್ಸಾಹವನ್ನು ನೀಡಬೇಕು.
- ಅಲೆಮಾರಿ ಸಮುದಾಯದವರು ತಯಾರಿಸುವ ಕರಕುಶಲವಸ್ತುಗಳನ್ನು ಜನರು ಖರೀದಿಸಿ, ಅವರ ಉತ್ಪಾದನೆಗೆ ಸಹಾಯ ಸಹಕಾರ ನೀಡಬೇಕಾಗಿದೆ. ಅವರ ದೇಶಿಯ ಕಲೆಗಳನ್ನು ಜೀವಂತ ವಾಗಿರಿಸಿಕೊಳ್ಳಬೇಕಾಗಿದೆ.
- ಶ್ರೀಮಂತರು, ಮಧ್ಯಮವರ್ಗದವರು, ಸಾಮಾನ್ಯ ವರ್ಗದವರು ಅಲೆಮಾರಿಗಳ ಬದುಕು ಮತ್ತು ಅವರ ಜೀವನಕ್ಕಾಗಿ ಸಹಾಯ ಮಾಡಬೇಕಾಗಿದೆ.
- ಅಲೆಮಾರಿಗಳಿಗೆ ಸಾರ್ವಜನಿಕರ ಸಹಾಯ ಬೇಕಾಗಿದೆ. ಇದರಿಂದ ಅವರಿಗೆ ಜೀವನದಲ್ಲಿ ಬರುವ ತೊಂದರೆಗಳು ಕಡಿಮೆಯಾಗಬಹುದು.
- ಅಲೆಮಾರಿ ಸಮುದಾಯದವರು ಅಸ್ಪೃಶ್ಯರು, ದಲಿತರು, ಕೆಳಜಾತಿಯವರು ಎಂಬ ಮನೋ ಭಾವನೆಗಳನ್ನು ಬೆಳೆಸದೆ ಪ್ರೀತಿಯಿಂದ ಮಾನವಿಯ ಮೌಲ್ಯಗಳಿಂದ ಕಾಣಬೇಕಾಗಿದೆ.

೪. ಸರ್ಕಾರದ ಪಾತ್ರ

- ಅಲೆಮಾರಿ ಸಮುದಾಯದವರು ಕೃಷಿಯೇತರ ಕೂಲಿಗಾಗಿ ಕೆಲಸ ಮಾಡಲು ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಭಾಗವಹಿಸುವಂತೆ ಮಾಡಿ, ಸರ್ಕಾರ ಅಲೆಮಾರಿ ಸಮುದಾಯ ದವರಿಗೆ ಮೊದಲ ಆದ್ಯತೆ ನೀಡಬೇಕಾಗಿದೆ.
- ಅಲೆಮಾರಿ ಕುಟುಂಬಗಳಿಗಾಗಿ ಏನಾದರೂ ಸಮಸ್ಯೆಗಳು ಉಂಟಾದಾಗ ಉದಾಹರಣೆಗೆ ಆಸ್ಪತ್ರೆ ವೆಚ್ಚ, ಸ್ವಾಭಾವಿಕ ಮತ್ತು ನೈಸರ್ಗಿಕ ಮರಣ, ಸಂಪೂರ್ಣ ಮತ್ತು ಅರೆ ಅಂಗವೈಕಲ್ಯ, ಗುಡ್ಡಗಾಡು, ಅರಣ್ಯದ ಹೊರಗಿನ ಪ್ರದೇಶದ ನಿವಾಸದಲ್ಲಿ ಅಪಘಾತಗಳು ಸಂಭವಿಸಿದಾಗ ಕುಟುಂಬಗಳಿಗೆ ನೆರವಾಗಲು 'ಕುಟುಂಬ ವಿಮಾ ಯೋಜನೆ' ಹಾಗೂ ಪರಿಹಾರ ಪ್ರತ್ಯೇಕ ನೆರವು ಕಲ್ಪಿಸಬೇಕಾಗಿದೆ.
- ಅಲೆಮಾರಿ ಸಮುದಾಯಗಳು ಗುಡಾರ, ಗುಡಿಸಲುಗಳಲ್ಲಿ ವಾಸಿಸುತ್ತಿದ್ದಾರೆ. ಅವರಿಗೆ ಸರ್ಕಾರದ ವತಿಯಿಂದ ಸಂಪೂರ್ಣವಾಗಿ ವಸತಿ ಸೌಕರ್ಯಗಳನ್ನು ಕಲ್ಪಿಸಬೇಕಾಗಿದೆ.
- ಅಲೆಮಾರಿ ಸಮುದಾಯದವರ ವಾಸಸ್ಥಳಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳು, ಲೋಕಸಭೆ ಸದಸ್ಯರು, ಶಾಸಕರು, ತಿಂಗಳಿಗೊಮ್ಮೆ ಭೇಟಿ ನೀಡಿ, ಅವರ ಕುಂದುಕೊರತೆಗಳ ಬಗ್ಗೆ ವಿಚಾರಣೆ ಹಾಗೂ ಪರಿಶೀಲನೆ ಮಾಡುವುದು ಮತ್ತು ಸಮಸ್ಯೆಗಳನ್ನು ಪರಿಹರಿಸುವುದು.

- ಗರ್ಭಿಣಿ ಹಾಗೂ ಬಾಣಂತಿಯರಿಗೆ ಪ್ರಸೂತಿ, ಕುಟುಂಬ ಯೋಜನೆ ಮತ್ತು ಪೌಷ್ಠಿಕಾಂಶದ ಆಹಾರದ ಬಗ್ಗೆ ಅರಿವು ಮೂಡಿಸಿ ಸವಲತ್ತುಗಳನ್ನು ನೀಡುವುದು.
- ಬಡತನ ರೇಖೆಯಿಂದ ಮೇಲೆ ಬರಲು ಸಹಕಾರಿಯಾಗುವಂತಹ ನಿರಂತರ ಆದಾಯ ತರುವ ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ರೇಷ್ಮೆ, ಸಣ್ಣ ಕೈಗಾರಿಕೆ, ಮೀನುಗಾರಿಕೆ ಇತರೆ ಕಾರ್ಯಕ್ರಮಗಳಿಗೆ ಸಹಾಯಧನ ನೀಡಬೇಕಾಗಿದೆ.
- ಅಲೆಮಾರಿ ಸಮುದಾಯಗಳಿಗೆ ಆರೋಗ್ಯ ತಪಾಸಣೆ ಮತ್ತು ಔಷಧೋಪಚಾರದ ಸಂಚಾರಿ ಆರೋಗ್ಯ ಘಟಕಗಳ ಸ್ಥಾಪನೆ ಮಾಡಬೇಕಾಗಿದೆ.
- ಅಂತ್ಯೋದಯ ಪಡಿತರ ಚೀಟಿ ಪ್ರತಿಯೊಂದು ಅಲೆಮಾರಿ ಕುಟುಂಬಗಳಿಗೂ ದೊರಕಿಸ ಬೇಕಾಗಿದೆ.
- ಅಲೆಮಾರಿ ಸಮುದಾಯಗಳ ಕಾಲೋನಿಗಳಲ್ಲಿ ಕುಡಿಯುವ ನೀರಿನ ಸೌಲಭ್ಯಗಳನ್ನು ಮಾಡುವುದು.
- ಶಿಕ್ಷಣದಲ್ಲಿ ಪ್ರಗತಿ ಸಾಧಿಸಿದ ಅಲೆಮಾರಿ ಮಕ್ಕಳಿಗೆ ನಗದು ಬಹುಮಾನ, ಶಿಷ್ಯವೇತನ, ಸಮವಸ್ತ್ರಗಳು, ಪಠ್ಯಪುಸ್ತಕಗಳು, ಶಾಲೆ ಬಿಸಿಯೂಟ ಇತರೆ ಸೌಲಭ್ಯಗಳ ಸರಿಯಾಗಿ ಪಡೆದು ಕೊಳ್ಳುವಂತೆ ಪ್ರೋತ್ಸಾಹಿಸುವುದು.
- ಅಲೆಮಾರಿಗಳು ತಮ್ಮ ಕಲೆಯನ್ನು ಬೆಳೆಸಿಕೊಳ್ಳಲು ಸಹಾಯ ಮಾಡುವುದು.
- ಅಲೆಮಾರಿ ಮಹಿಳೆಯರಿಗೆ ಸ್ವಸಹಾಯ ಗುಂಪಿನಲ್ಲಿ ಭಾಗವಹಿಸುವಂತೆ ಪ್ರೇರಣೆ ನೀಡಿ ಅವರಿಗೆ ಅನೇಕ ಮಾಹಿತಿಗಳು ನೀಡಬೇಕಾಗಿದೆ. ಅವರನ್ನು ಸಮಾಜದ ಮುಖ್ಯವಾಹಿನಿಗೆ ಬರುವಂತೆ ಮಾಡಬೇಕಾಗಿದೆ.

೫.೫. ಮೀಸಲಾತಿ

ಬಹುಸಾಧ್ಯತೆಗಳ ಸಂವೇದನಾ ಕ್ರಿಯಾಶೀಲವಾದ, ಮಾನವೀಯ ತಾಯ್ತನದ ತುಡಿತವಿರುವ ಅಂಬೇಡ್ಕರ್ ಅವರ ತತ್ವಗಳು ಧರ್ಮದ ಪ್ರಭುತ್ವವನ್ನು, ಜಾತಿಯ ಯಾಜಮಾನ್ಯವನ್ನು, ಲಿಂಗಭೇದದ ವಿಕಾರವನ್ನು, ಅಸಮಾನತೆಯ ವಿಕೃತಿಯನ್ನು ಮುರಿಯುವ ಮೂಲಕ ಬಹುಸಮಾಜಗಳ ಸಾಮಾಜಿಕ ನ್ಯಾಯದ ಪರಿಕಲ್ಪನೆಗಳಾಗಿವೆ. ಅಂಬೇಡ್ಕರ್ ತತ್ವಗಳು ಏಕಮುಖವಾಗದೆ ಅಥವಾ ಕೇವಲ ದಲಿತರಿಗಷ್ಟೇ ಸೀಮಿತವಾಗದೆ, ತಿರಸ್ಕೃತ ಸಮಾಜಗಳ ಅಸ್ತಿತ್ವ ರೂಪಿಸುವ ಚೈತನ್ಯವಾಗಿ, ಬಹುಮುಖ ಹೊಣೆಗಾರಿಕೆಯ ಮತ್ತು ನಾಳಿನ ಜವಾಬ್ದಾರಿಗಳನ್ನು ಹೊತ್ತುಕೊಳ್ಳುವ ಮೂಲಕ ಸಾಮಾಜಿಕ ಸಾಮರಸ್ಯದ, ಭವಿಷ್ಯದ ಬದುಕು ರೂಪಿಸುವ ದಿಕ್ಸೂಚಿಗಳಾಗಿವೆ.

ಅಂಬೇಡ್ಕರ್ ತಿರಸ್ಕೃತ ಸಮಾಜಗಳು ವಿಕಾಸವಾಗಬೇಕಾದಂತಹ ಅಪರಿಮಿತ ಆಯ್ಕೆ ಮತ್ತು ಸ್ವಾತಂತ್ರ್ಯಗಳ ಕಡೆಗೆ ಪಯಣಿಸಲು ಬೇಕಾದಂತಹ, ಮುಕ್ತಿಯ ಅಂತರ್ಜಲದ ತತ್ವಗಳನ್ನು, ಕಳಂಕಿತರೆನಿಸಿ ಕೊಂಡ ಸಮುದಾಯಗಳಿಗೆ ಸಂವಿಧಾನಬದ್ಧವಾಗಿ ಕೊಡಮಾಡಿದರು. ಅವರ ದೃಷ್ಟಿಯಲ್ಲಿ ಸಾಮಾಜಿಕ ಅಸಮಾನತೆ ಅನುಭವಿಸುತ್ತಿರುವ ಎಲ್ಲ ಸಮಾಜಗಳ ಮುಕ್ತಿಗೆ ಬೇಕಾದ ಎಲ್ಲ ಅವಕಾಶಗಳನ್ನು ಅನಾವರಣ ಮಾಡಿದವರು. ಅವರು ಯೋಚಿಸಿದಂತಹ ಚಿಂತನೆಗಳು, ಹಾಕಿಕೊಳ್ಳಬಹುದಾದ ತತ್ವಗಳು ಕಾರ್ಯಕ್ರಮಗಳು ಸಮಾಜನಿಷ್ಠ ಮತ್ತು ಸಮುದಾಯನಿಷ್ಠವಾದಂತಹ ಅಭಿವೃದ್ಧಿ ಕಾರ್ಯಕ್ರಮಗಳಾಗಿವೆ.

ಮೀಸಲಾತಿಯು ಸಾಮಾಜಿಕ ನ್ಯಾಯದ ತಕ್ಕಡಿ. ಜಾತಿನಿಷ್ಠ ಸಮಾಜದಿಂದ ಮುಕ್ತಿ ಪಡೆಯಲು ಮೀಸಲಾತಿಯು ಒಂದು ಆಸರೆಯ ಕೋಲು. ತಳ ಸಮುದಾಯಗಳ ಮೇಲಿನ ಶೋಷಣೆಯನ್ನು ನಿಯಂತ್ರಿಸುವ ಸಲುವಾಗಿ ರೂಪಿಸಿಕೊಂಡ ಮಾನವೀಯ ಮೌಲ್ಯವಾಗಿ "ಧ್ವನಿ ಇಲ್ಲದವರಿಗೆ ಧ್ವನಿಯಾಗಿ ಅವರವರ ಅಸ್ತಿತ್ವವನ್ನು ಕಂಡುಕೊಳ್ಳಲು, ಆ ಮೂಲಕ ಅಸಮಾನತೆಯನ್ನು ಹೋಗಲಾಡಿಸಲು ಅನುಶಾಸನಿಸಿಕೊಂಡ ಹೊಣೆಗಾರಿಕೆಯಾಗಿದೆ".

ಮೀಸಲಾತಿ ಶತಮಾನಗಳ ಕಾಲದಿಂದ ಮೂಲಭೂತ ಸೌಕರ್ಯ ಮತ್ತು ಹಕ್ಕುಗಳಿಂದ ವಂಚಿತರಾದವರಿಗೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸ್ವಾತಂತ್ರ್ಯ ಕಳೆದುಕೊಂಡವರಿಗೆ ಸಮಾಜದ ಎಲ್ಲರಂತೆ ಬಾಳಲು ಅವಕಾಶ ಮಾಡಿಕೊಡುವ ಸಲುವಾಗಿ ಹಾಗೂ ಮುಖ್ಯವಾಹಿನಿಗೆ ಸೇರಲು ಸಾಧ್ಯವಾಗುವಂತೆ ಮಾಡುವ ಸಾಮಾನ್ಯ ಸಾಧನವಾಗಿದೆ. ಸಮಾಜದ ಅಂಚಿನಲ್ಲಿರುವ ಅಲೆಮಾರಿ ಸಮುದಾಯಗಳಿಗೆ ಪ್ರತ್ಯೇಕವಾದ ಮೀಸಲಾತಿಯು ಇಲ್ಲವಾಗಿವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳಿಗೆ ಮಾತ್ರ ಮೀಸಲಾತಿ ಕೊಡಲಾಗಿದೆ. ಅದು ಆಯಾ ಜಾತಿಯ ಜನಸಂಖ್ಯೆಗೆ ಅನುಗುಣವಾಗಿ ಕೂಡ ಕೊಡಮಾಡಿಲ್ಲ. ಅಧಿಕ ಜನಸಂಖ್ಯೆ ಕಡಿಮೆ ಮೀಸಲಾತಿ ವ್ಯವಸ್ಥೆಯಿದೆ. ಹಿಂದುಳಿದ ವರ್ಗ ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದಲ್ಲಿ ಕೆಲವು ಅಲೆಮಾರಿ ಸಮುದಾಯಗಳು ಸೇರ್ಪಡೆಗೊಳ್ಳುತ್ತವೆ. ಸಮಸ್ಯೆ ಎಂದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಕೆಲವೇ ಕೆಲವು ಜನರು ಮಾತ್ರ ಮೀಸಲಾತಿಯ ಸೌಲಭ್ಯ ಪಡೆಯುತ್ತಿದ್ದಾರೆ. ಅಲೆಮಾರಿ ಸಮುದಾಯಗಳ ಪಾಲು ಅದರಲ್ಲಿ ಗೌಣವಾಗಿದೆ. ಮೀಸಲಾತಿಯ ಅಸಮರ್ಪಕ, ಅನುಷ್ಠಾನ ಮತ್ತು ಅಸಮಾನ ವಿತರಣೆಯಿಂದ ಪಡೆಯಲಾಗುತ್ತಿಲ್ಲ. ಅಲೆಮಾರಿಗಳು ಒಂದು ಕಡೆ ನೆಲೆ ನಿಲ್ಲದೆ, ಸರಿಯಾದ ಮಾಹಿತಿ ಇಲ್ಲದೆ ಮೀಸಲಾತಿ ಪಡೆದುಕೊಳ್ಳುವಲ್ಲಿ ಹಿಂದುಳಿದಿದ್ದಾರೆ.

"ಕೆಳಸಮುದಾಯಗಳಿಗೆ ಮತ್ತು ಸಾಮಾಜಿಕವಾಗಿ ಶೋಷಣೆಗೊಳಗಾದ ಸಮುದಾಯಗಳಿಗೆ ಕಲ್ಪಿಸಿದ ಮೀಸಲಾತಿಯು ಅಂಬೇಡ್ಕರ್ ಅವರ ಬಹುದೊಡ್ಡ ಕೊಡುಗೆಯಾಗಿದೆ".[೮] ಮೀಸಲಾತಿ

ಕೇಳುವ ಮತ್ತು ರೂಪಿಸುವ ಹಂತದಲ್ಲಿ ಅಂಬೇಡ್ಕರ್ ಅತ್ಯಂತ ವಿಲಕ್ಷಣ ರಾಜಕೀಯ ಸವಾಲುಗಳನ್ನು ಎದುರಿಸಿದ್ದಾರೆ. ಈ ದೇಶದಲ್ಲಿನ ಧ್ವನಿ ಇಲ್ಲದ ಮತ್ತು ಶತಮಾನಗಳಿಂದ ಶೋಷಣೆಗೊಳಗಾದ ಸಮುದಾಯಗಳಿಗೆ ರಾಜಕೀಯ, ಆರ್ಥಿಕ ಸವಲತ್ತುಗಳನ್ನು ಒದಗಿಸುವ ಮೀಸಲಾತಿಯನ್ನು ಕೇಳುವ ಸಂದರ್ಭದಲ್ಲಿ ದೇಶದ್ರೋಹಿಯ ಪಟ್ಟ ಕಟ್ಟಿಸಿಕೊಂಡಿದ್ದರು. ಇಂತಹ ಮಾತುಗಳನ್ನು ಮೈಮೇಲೆ ಹೇರಿಕೊಂಡು ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮೀಸಲಾತಿ ಕಲ್ಪಿಸಲು ಮುಂದಾಗಿ ಯಶಸ್ಸು ಕಂಡರು. ಇದರ ಪರಿಣಾಮವಾಗಿ ಮೀಸಲಾತಿಯನ್ನು ಸಂವಿಧಾನಬದ್ಧ ಮಾಡಿದರು. "ಸಂವಿಧಾನದ ಕೆಲವು ಅನುಚ್ಛೇದದಲ್ಲಿ ಮೀಸಲಾತಿಯ ಸೌಲಭ್ಯವನ್ನು ಅಳವಡಿಸಿದರು. ಉದ್ಯೋಗದಲ್ಲಿ ಮೀಸಲಾತಿ ಮತ್ತು ಶಿಕ್ಷಣದಲ್ಲಿ ಪ್ರವೇಶ ಮೀಸಲಾತಿ ಕೊಡಮಾಡಿದ್ದಾರೆ".[೬]

೧. ೩೩೦ನೇ ವಿಧಿ- ಪರಿಶಿಷ್ಟರಿಗೆ ಪಾರ್ಲಿಮೆಂಟ್ ಸದಸ್ಯತ್ವದಲ್ಲಿ ಮೀಸಲಾತಿ ನೀಡಲಾಗಿದೆ.

೨. ೩೩೨ನೇ ವಿಧಿ- ರಾಜ್ಯಗಳಲ್ಲಿನ ಪರಿಶಿಷ್ಟರಿಗೆ ಮೀಸಲಾತಿಯನ್ನು ನೀಡಲಾಗಿದೆ.

೩. ೩೩೪ನೇ ವಿಧಿ- ಪ್ರತಿ ಹತ್ತು ವರ್ಷಗಳಿಗೊಮ್ಮೆ ಮೀಸಲಾತಿಯ ಮುಂದೂಡಿಕೆಯನ್ನು ಪರಿಷ್ಕರಿಸಲು ಅವಕಾಶ ಮಾಡಿಕೊಟ್ಟಿದೆ.

೪. ೨೩೪ನೇ ವಿಧಿ- ಗ್ರಾಮ, ತಾಲ್ಲೂಕು, ಜಿಲ್ಲಾ ಪಂಚಾಯ್ತಿಗಳಲ್ಲಿ ಪಟ್ಟಣ ಮತ್ತು ನಗರ ಸಭೆಗಳಲ್ಲಿ ಪರಿಶಿಷ್ಟರಿಗೆ ಮೀಸಲಾತಿ ಕಲ್ಪಿಸಲಾಗಿದೆ.

ಅಂಬೇಡ್ಕರ್ ಅವರ ದೂರದೃಷ್ಟಿ ಎಂದರೆ ಸಾಮಾಜಿಕವಾಗಿ ತಳದಲ್ಲಿರುವ ಅಥವಾ ಕಟ್ಟಕಡೆಯ ವ್ಯಕ್ತಿಗೆ ದೊರೆಯುವಂತಾಗಬೇಕೆಂಬುದಾಗಿದೆ. ಆದುದರಿಂದ ಅಲೆಮಾರಿ ಸಮದಾಯಗಳು ಕಟ್ಟಕಡೆಯ ವ್ಯಕ್ತಿಗಳಾಗಿರುವುದರಿಂದ ಹಾಗಾಗಿ ಮೀಸಲಾತಿಯನ್ನು ಪಡೆಯಬಹುದಾಗಿದೆ. ಮೀಸಲಾತಿಯ ಪಟ್ಟಿಯಲ್ಲಿ ಅಲೆಮಾರಿಗಳು ಸೇರ್ಪಡೆಯಾಗುತ್ತಾರೆ. ಮೀಸಲಾತಿಯ ದೃಷ್ಟಿಕೋನ ಅಂದು ಅಂಬೇಡ್ಕರ್ ಅವರಿಗೆ ಸಮಷ್ಟಿತನದ ಮೀಸಲಾತಿ ಬೇಕಿತ್ತು. ಅಲೆಮಾರಿಗಳು ಮೀಸಲಾತಿಯಿಂದ ದೂರವೇ ಉಳಿದಿರ ಬಹುದು. ಇದು ಅಂಬೇಡ್ಕರ್ ಅವರ ತಪ್ಪಲ್ಲ. ಮೀಸಲಾತಿ ನೀಡುವವರ ತಪ್ಪಾಗಿದೆ. ಮೀಸಲಾತಿ ನೀಡುವುದರಲ್ಲಿ ವಿಫಲರಾಗಿದ್ದಾರೆ. ಕೆಲವು ಮೀಸಲಾತಿಯ ಮಹತ್ವ ಅಲೆಮಾರಿಗಳಿಗೆ ಗೊತ್ತಿಲ್ಲವಾಗಿದೆ. ಗೊತ್ತಿದ್ದರೂ ಒಂದು ಪಟ್ಟಿಯಲ್ಲಿ ಹಲವಾರು ಜಾತಿ, ಉಪಜಾತಿಗಳು ಆ ಮೀಸಲಾತಿ ಯನ್ನು ಪಡೆದಿರಬಹುದು. ಆದುದರಿಂದ ಬದಲಾದ ಸಂದರ್ಭದಲ್ಲಿ ಎಲ್ಲಾ ಸಮುದಾಯಗಳ ಜಾತಿ ಸಮೀಕ್ಷೆ ಕೈಗೊಂಡು ಕೊನೆಯ ವ್ಯಕ್ತಿಗಳು ಯಾರೆಂದು ತಿಳಿದು ಆ ವ್ಯಕ್ತಿಗೆ ನೀಡಬೇಕಿದೆ. ಅಗತ್ಯವಿದ್ದಲ್ಲಿ ಕಾನೂನು ತಿದ್ದುಪಡಿ ಮಾಡಿ ಅಸಮಾನತೆ ಹೋಗಲಾಡಿಸಬಹುದಾಗಿದೆ. ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಪಡೆಯಬಹುದಾಗಿದೆ. ಮೀಸಲಾತಿಯನ್ನು ಪಡೆಯಬೇಕು ಮತ್ತು ಮೀಸಲಾತಿ ನಮ್ಮದೆ ಎಂಬ ಮನಸ್ಸು ಅಲೆಮಾರಿಗಳಲ್ಲಿ ಬರಬೇಕು ಆಗ ಮಾತ್ರ ಅಂಬೇಡ್ಕರ್

ಅವರ ದೂರದೃಷ್ಟಿ ಸಾರ್ಥಕವಾಗುತ್ತದೆ. ಆದುದರಿಂದ ಅಲೆಮಾರಿ ಸಮುದಾಯಗಳು ಮೀಸಲಾತಿ ಪಡೆದು ಬದುಕನ್ನು ರೂಪಿಸಿಕೊಳ್ಳಬೇಕಿದೆ. ಮೀಸಲಾತಿ ನೀಡುವವರು ತಪ್ಪದೇ ನೀಡಬೇಕಾಗಿದೆ. ಆಗ ಮಾತ್ರ ಅಲೆಮಾರಿಗಳು ಕೂಡ ಮೀಸಲಾತಿ ಸದುಪಯೋಗ ಪಡೆಯಲು ಸಾಧ್ಯವಾಗುತ್ತದೆ.

೫.೬. ಅಲೆಮಾರಿಗಳು ಮತ್ತು ಸಾಮಾಜಿಕ ನ್ಯಾಯ

ಭಾರತದ ಅಲೆಮಾರಿಗಳ ಮಾನವಶಾಸ್ತ್ರ(Anthropology)ಯ ಬಗ್ಗೆ ಸ್ಪಷ್ಟವಾದ ಅಧ್ಯಯನಗಳು ಮತ್ತು ಫಲಿತಗಳು ಅಲೆಮಾರಿಗಳು ಇರುವ ಸ್ಥಿತಿಯಲ್ಲೇ ಇರುವುದು ಸಾಮಾಜಿಕ ನ್ಯಾಯದ ಬಹು ದೊಡ್ಡ ವಿಪರ್ಯಾಸ ಎಂಬುದನ್ನು ಮನದಟ್ಟು ಮಾಡಿವೆ.

"ಈ ನಿಟ್ಟಿನಲ್ಲಿ ಸಮಾಜ ಕಲ್ಯಾಣ ಇಲಾಖೆಯು ಸೇರಿದಂತೆ ಸರ್ಕಾರ, ಸಾಮಾಜಿಕ ನ್ಯಾಯದ ನಿಯೋಗಿಗಳು ಈಗಲೂ ಉಲ್ಲೇಖಿಸುವುದು ವಸಾಹತು ಅಧ್ಯಯನಕಾರರನ್ನು ಎಂದರೆ ಇದರ ವಿಪರ್ಯಾಸ ಅರ್ಥವಾಗುತ್ತದೆ. ಸರ್ಕಾರ ಹೊರಡಿಸುವ ಸುತ್ತೋಲೆಗಳಲ್ಲಿನ ಉಲ್ಲೇಖಗಳು ಇವನ್ನು ವಿವರಿಸುತ್ತವೆ. ಅಂತ್ರೋಪಲಾಜಿಕಲ್ ಸರ್ವೇ ಆಫ್ ಇಂಡಿಯಾದ ಮಾಜಿ ಮುಖ್ಯಸ್ಥ ಕೆ.ಎಸ್.ಸಿಂಗ್ ಅವರ ಮಾನವಶಾಸ್ತ್ರಿಯ ಅಧ್ಯಯನಗಳನ್ನು ನಮ್ಮಲ್ಲಿನ ಕೆಲವರು ಅಸಹನೆಯಿಂದ ಈ Modernity ಯಲ್ಲಿ ಇವರು ಅಪ್ರಸ್ತುತರು ಎಂದು ಟೀಕಿಸುತ್ತಾ ತಾವು ಮಾತ್ರ ಸಾಮಾಜಿಕ ನ್ಯಾಯದ ಹಂಚಿಕೆ ಯಲ್ಲಿ ತಮ್ಮ ಜಾತಿಯನ್ನು ಮಾತ್ರ ಪ್ರೀತಿಸುವ ಜಾತಿವಾದಿಗಳಾಗಿಯೇ ಉಳಿದಿದ್ದಾರೆ. ಆದರೆ ಈಗಲೂ ವಿಚಾರ ನಿಷ್ಠ ಪ್ರಾಜ್ಞರು ಅಲೆಮಾರಿಗಳ ಬಗ್ಗೆ ತುಡಿಯುತ್ತಲೇ ಇರುವುದು ಶ್ಲಾಘನೀಯ".[೧೦]

ಅಲೆಮಾರಿಗಳ ಶಾಪಗ್ರಸ್ತ ಪ್ರಯಾಣ

ಹಲವು ಆದಿವಾಸಿ ಬುಡಕಟ್ಟುಗಳು ಮೂಲ ಕಾಡನ್ನು ತೊರೆದು ನಾಡಿನತ್ತ ತೆವಳುತ್ತಾ ಬಂದ ಪ್ರಯಾಣದ ವಿವರಗಳಿವೆ. ಆದರೆ ನಾಡಿನಲ್ಲಿದ್ದ ನಾಗರಿಕ ಜಾತಿಗಳು ಈ ಆದಿಮರನ್ನು ತಮ್ಮೊಳಗೆ ಬಿಟ್ಟುಕೊಳ್ಳಲಿಲ್ಲ. ಈ ಆದಿವಾಸಿಗಳು ನಾಗರಿಕ ಜಗತ್ತಿನ ಯಾವುದೇ ಸಮಾಜೀಕರಣದ ಪ್ರಕ್ರಿಯೆಗೆ ತೊಡಗಲಿಲ್ಲ ಎನ್ನುವದಕ್ಕಿಂತ ಅಜ್ಞಾನ ಮತ್ತು ಆತಂಕದಿಂದ ಸ್ಪಂದಿಸಲಿಲ್ಲ.

ಅದರ ಫಲವಾಗಿ ಊರಾಚೆಯ ಬಯಲುಗಳಲ್ಲಿ, ನಿರ್ಜನ ಪ್ರದೇಶದಲ್ಲಿ, ಟೆಂಟು ಗುಡಾರಗಳಲ್ಲಿ ಬದುಕುತ್ತಾ ಬಂದವರು ಈ ಅಲೆಮಾರಿಗಳು.

ಕೆಲವರು ಪಶುಪಾಲಕರಾಗಿ ಉಳಿದುಕೊಂಡರೆ ಉಳಿದವರು ಧಾರ್ಮಿಕ ಭಿಕ್ಷಾವೃತ್ತಿಗೆ ಆತು ಕೊಂಡರು. ಕೆಲವರು ಆಧುನಿಕ ವೈಪರೀತ್ಯಗಳ ಫಲವಾಗಿ ರಾಜಕೀಯ ಪಲ್ಲಟಗಳಿಂದ ಅಲೆಮಾರಿಗಳಾಗಿ ರೂಪುಗೊಂಡರು.

ಅಲೆಮಾರಿಗಳ ಸೂರಿಲ್ಲದ, ಶಿಕ್ಷಣವಿಲ್ಲದ, ಯಾವುದೇ ಸಾಮಾಜಿಕ ಸವಲತ್ತಿನ ಹಿನ್ನೆಲೆಯಿಲ್ಲದ ಇವರ ಸ್ಥಿತಿಗತಿಗಳನ್ನು ವಿವರಿಸುವುದಕ್ಕಿಂತ ಈ ಅಲೆಮಾರಿ ಜಗತ್ತಿಗೆ ಬೆನ್ನು ಹಾಕಿದ ಜಾಣಕುರುಡಿನ

ವ್ಯವಸ್ಥೆಯ ಚರಿತ್ರೆ ವಾಸ್ತವ ರಾಜಕಾರಣವಾಗಿ ಮುಂದುವರಿದಿದೆ. ಇಷ್ಟಾಗಿಯೂ ಅಲೆಮಾರಿಗಳನ್ನು ಕುರಿತು ನಡೆದಿರುವ ಅಧ್ಯಯನಗಳು ಅಧ್ಯಯನಕಾರರಿಗೆ ಮಾಹಿತಿಗಾಗಿ ಅವರ ಸಂಶೋಧನಾ ಪದವಿಗಳಿಗೆ ಸರಕಾಗಿ ಕಂಡಿದ್ದರೂ ಮತ್ತೊಂದೆಡೆ ಈ ಸಂಶೋಧನಾ ಕೃತಿಗಳ ಅಪೂರ್ಣ ವಿವರಗಳು ಸರಕಾರದ ಕಾಟಾಚಾರದ ಉಲ್ಲೇಖಗಳಾಗಿ ಪಳೆಯುಳಿಕೆಗಳಾಗಿವೆ. ಆದರೂ ಅವರ ಪ್ರಯತ್ನಗಳು ಏನೂ ಇಲ್ಲದ ಕಡೆ' ಎನ್ನುವಂತೆ ಶ್ಲಾಘನೀಯವೂ ಆಗಿದೆ.

ಭಾರತ ಸರಕಾರ ನೇಮಿಸಿದ "ರಾಷ್ಟ್ರೀಯ ವಿಮುಕ್ತ ಅಲೆಮಾರಿ ಮತ್ತು ಅರೆ ಅಲೆಮಾರಿ ಬುಡಕಟ್ಟುಗಳ ಆಯೋಗ" ಈ ದೇಶದ ಒಟ್ಟು ಅಲೆಮಾರಿಗಳ ಜನಸಂಖ್ಯೆ ಹದಿನೈದು ಕೋಟಿಗೂ ಹೆಚ್ಚು ಎಂದು ಅಂಕಿ ಸಂಖ್ಯೆಗಳನ್ನು ನೀಡಿದೆ.

ಮಹಾರಾಷ್ಟ್ರದಲ್ಲಿ ೭೩ ಅಲೆಮಾರಿ ಸಮುದಾಯಗಳಿದ್ದು ಮಹಾರಾಷ್ಟ್ರ ಸರಕಾರ ಅಲೆಮಾರಿಗಳಿಗೆ ಪ್ರತ್ಯೇಕವಾದ ಮೀಸಲಾತಿ ಪಟ್ಟಿಯನ್ನು ಇಂದಿಗೂ ಚಾಲ್ತಿಯಲ್ಲಿರಿಸಿದೆ.

ಅಲೆಮಾರಿಗಳ ಜನಸಂಖ್ಯೆಯ ಎರಡನೇ ಸ್ಥಾನದಲ್ಲಿರುವ ಕರ್ನಾಟಕದಲ್ಲಿ ಅಲೆಮಾರಿ ಸಮುದಾಯ ಗಳು ಮೂವತ್ತರ ಆಸುಪಾಸಿನಲ್ಲಿದ್ದು ೧೯೬೧ರಲ್ಲಿ ಕರ್ನಾಟಕದಲ್ಲಿ ೫೬ ಅಲೆಮಾರಿ ಬುಡಕಟ್ಟುಗಳು ಇದ್ದವೆಂದು ಅಂದಿನ ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶಕರು ಅಪೂರ್ವವಾದ ಪಟ್ಟಿಯೊಂದನ್ನು ಘೋಷಿಸುತ್ತಾರೆ. ಈ ಪಟ್ಟಿಯಲ್ಲಿ ಒಂದೇ ಬುಡಕಟ್ಟಿನ ಪರ್ಯಾಯ ಪದಗಳ(Synonyms) ಪುನರಾವರ್ತನೆಯಾಗಿ ೫೬ ಸಮುದಾಯಗಳೆಂದು ಘೋಷಿಸಿರುವುದನ್ನು ಪ್ರಸ್ತುತ ಸರಕಾರ ಅದನ್ನೇ ಅಲೆಮಾರಿ ಪಟ್ಟಿಯೆಂದು ಒಪ್ಪಿಕೊಂಡಿದೆ.

ಉದಾಹರಣೆಗೆ ಗೊಂದಳಿ, ಬುಡಬುಡಿಕೆ, ಜೋಷಿ, ವಾಸುದೇವ ಇವೆಲ್ಲ ಒಂದೇ ಸಮುದಾಯ ವಾದರೂ ನಾಲ್ಕೈದು ಪರ್ಯಾಯ ಪದಗಳು ಪಟ್ಟಿಯನ್ನು ಹುಟ್ಟಿಸಿವೆ. ಇಂತಹ ಅವೈಜ್ಞಾನಿಕ ಪಟ್ಟಿಯನ್ನು ರದ್ದುಗೊಳಿಸಬೇಕಾಗಿದೆ.

ಕಿಳ್ಳೇಕ್ಯಾತ-ಕಟಬು, ಬುಂಡೇಬೆಸ್ತ, ಗೊಂಬೆರಾಮ ಈ ನಾಲ್ಕು ಪರ್ಯಾಯ ಪದಗಳು ಶಿಳ್ಳೇಕ್ಯಾತ ಸಮುದಾಯವನ್ನು ಜನಪದರು ಕರೆದ ಹೆಸರುಗಳಾಗಿವೆ. ಈ ಪಟ್ಟಿಯಲ್ಲಿ ಹೀಗೆ ಪರ್ಯಾಯ ಪದಗಳಿಂದ ತುಂಬಿ ಹೋಗಿರುವ ಅಪೂರ್ಣ ಸರಕಾಗಿದೆ.

೧೮೭೧ರಲ್ಲಿ ಬ್ರಿಟಿಷ್ ಸರ್ಕಾರ ತನ್ನ ನಿಯಂತ್ರಣಕ್ಕೆ ಬಾರದ ಮತ್ತು ತನ್ನ ಸಾಮ್ರಾಜ್ಯಶಾಹಿಯ ವಿರುದ್ಧ ದನಿಯಾದ ಇಂತಹ ಅಲೆಮಾರಿ ಗುಂಪುಗಳನ್ನು ಬಂಧಿಸಿ ಅಪರಾಧಿ ಬುಡಕಟ್ಟುಗಳೆಂದು ಘೋಷಿಸಿತು. ಮುಂದೆ ಈ ಕ್ರಿಮಿನಲ್ ಟ್ರೈಬ್ಸ್‌ಗಳನ್ನು ಅಪರಾಧಿ ಬುಡಕಟ್ಟುಗಳು ಎಂಬ ಹಣೆಪಟ್ಟಿಯನ್ನು ತೆಗೆದು ವಿಮುಕ್ತ ಬುಡಕಟ್ಟುಗಳು ಎಂದು ಮರು ನಾಮಕರಣ ಮಾಡಲಾಯಿತು.

ಪಾರ್ದಿ, ದೊಂಬರು, ಗಂಟಿಚೋರ್, ಕೊರವರ್‌ನಂತಹ ಹಲವಾರು ಬುಡಕಟ್ಟುಗಳು ವಿಮುಕ್ತ ಬುಡಕಟ್ಟುಗಳಾದರೂ ಪ್ರತಿ ಹದಿನೈದು ದಿವಸ ತಿಂಗಳಿಗೆ ಪೋಲೀಸ್ ಸ್ಟೇಶನ್ನಿಗೆ ಹೋಗಿ ಸಹಿ ಮಾಡಿ ಬರಬೇಕಿತ್ತು. ಆ ಪ್ರದೇಶಗಳಲ್ಲಿ ಆಗುವ ಕಳ್ಳತನಗಳಿಗೆ ಈ ಅಲೆಮಾರಿಗಳನ್ನೇ ಹೊಣೆ ಮಾಡಿ ಘೋರವಾಗಿ ಹಿಂಸಿಸಲಾಗುತ್ತಿತ್ತು.

ಹೀಗೆ ಸಾಗಿಬಂದ ಶಾಪಗ್ರಸ್ತ ಪ್ರಯಾಣದಲ್ಲಿ ದೇಶ ಸಂವಿಧಾನ ಹಕ್ಕು ಬಾಧ್ಯತೆಗಳ ಪ್ರಜ್ಞೆಯಾಗಲಿ–ಪರಿಸರವಾಗಲಿ ದಕ್ಕದ ಈ ನತದೃಷ್ಟ ಸಮುದಾಯಗಳು ಅಂಬೇಡ್ಕರ್ ಪ್ರಜ್ಞೆಯನ್ನು ಅರ್ಥ ಮಾಡಿಕೊಳ್ಳಲು ಮತ್ತು ಸಂಘಟಿತವಾಗುವ ಯಾವುದೇ ಚಾರಿತ್ರಿಕ ಪ್ರಯತ್ನಗಳಿಗೆ ಸಾಕ್ಷಿಯಾಗಲಿಲ್ಲ.

ಹೀಗಾಗಿಯೇ ಇಂದಿಗೂ ಅಲೆಮಾರಿ ತಾಯಂದಿರು ಮಕ್ಕಳನ್ನು ಕಟ್ಟಿಕೊಂಡು ಸರಿ ರಾತ್ರಿಗಳಲ್ಲಿ ಈ ದೇಶಾದ್ಯಂತ ಬೇಡುತ್ತಾ ಕೈ ಒಡ್ಡುತ್ತಾರೆ. ಇವರಿಗೆ ಸ್ಪೃಶ್ಯ-ಅಸ್ಪೃಶ್ಯ ಎನ್ನುವ ಯಾವುದೇ ಅಮಾನವೀಯ ತಾರ್ಕಿಕ ಅಂಶಗಳು ತಿಳಿಯುವುದೇ ಇಲ್ಲ.

ಕೇವಲ ತುತ್ತಿನ ಚೀಲದ ಹಸಿವನ್ನು ಆ ಕ್ಷಣಕ್ಕೆ ಹಿಂಗಿಸುವುದಷ್ಟೇ ಬದುಕಿನ ತುರ್ತು. ಇದರ ಪರಿಣಾಮ ಅರವತ್ತೈದು ವರ್ಷಗಳ ಸ್ವತಂತ್ರ ಭಾರತದಲ್ಲಿ ಸಾಮಾಜಿಕ ನ್ಯಾಯದ ಹಂಚಿಕೆಯಲ್ಲಿ ಒಬ್ಬ ಅಲೆಮಾರಿ ಕೂಡ ಶಾಸನ ಸಭೆ ರೂಪಿಸುವ ಕಡೆ ಸುಳಿದಾಡಿಲ್ಲ. ಆದರೆ ಪಶುಪಾಲಕ ಅಲೆಮಾರಿಗಳೆಂದವರು ಕೇವಲ ಜಾತಿ ಪ್ರತಿನಿಧಿಗಳಾಗಿದ್ದು ಪ್ರಧಾನ ಧಾರೆಯ ಮೂಲಿಗೆ ಅಲೆಮಾರಿಗಳ ಬಗ್ಗೆ ಅವರಿಗೆ ತಿಳಿದೇ ಇಲ್ಲ.

ಇನ್ನು ಭೂ ಹಂಚಿಕೆಯೇ ಇಲ್ಲ, ಭೂ ಒಡೆತನದ ಪ್ರಶ್ನೆಯಿರಲಿ, ಭೂಮಿಯೊಡನೆ ಸಂಬಂಧ ಏರ್ಪಡಿಸಿಕೊಳ್ಳದ ಈ ಅಲೆಮಾರಿಗಳು ದಲಿತರಂತೆ ಭೂ ಸಂಘರ್ಷಗಳ ಚರಿತ್ರೆಯಲ್ಲಿ ದಾಖಲಿತರಾಗಲಿಲ್ಲ. ಇಂತಹ ವಿಚಿತ್ರಗಳ ಕೀಳರಿಮೆಯ ಮನಸ್ಥಿತಿಯಿಂದ ಅಲೆಮಾರಿಗಳು ಬಳಲುತ್ತಿದ್ದಾರೆ.

ವಸಾಹತು ಅಧ್ಯಯನಕಾರರಿಂದ ಇಂದಿನ ಉಪಸಂಸ್ಕೃತಿ ಅಧ್ಯಯನ ಮಾಲೆ, ಅಲೆಮಾರಿ ಅಧ್ಯಯನ ಮಾಲೆ, ವಿಶ್ವವಿದ್ಯಾಲಯ ಸಂಶೋಧನಾ ಕೃತಿಗಳೆಲ್ಲವನ್ನು ಮನಸ್ಸಿನಲ್ಲಿಟ್ಟುಕೊಂಡು ಸರಳವಾಗಿ ಅಲೆಮಾರಿಗಳು ಯಾರು ಎಂದು ಪ್ರಶ್ನಿಸಬೇಕಾಗುತ್ತದೆ. ಸಂಘಟನೆಯ ಅನುಭವದಲ್ಲಿ ನೀಡುವ ಉತ್ತರಗಳು ಪ್ರಾಮಾಣಿಕತೆಗೆ ಹೆಚ್ಚು ಹತ್ತಿರವಾಗಲಿದ್ದು ಅದರಂತೆ ಅಲೆಮಾರಿ ಮುಖ್ಯಸ್ತರಕ್ಕೆ ಸೇರದ ಜೋಳಿಗೆ ಹೆಗಲೇರಿಸಿಕೊಂಡು, ಅನ್ನ ಬೇಡಿ, ಊರಾಚೆ ಬಯಲುಗಳಲ್ಲಿ ಬದುಕುತ್ತಾ ಬೇಟೆ, ಭಿಕ್ಷಾಟನೆ ಪ್ರದರ್ಶನ ಕಲೆಗಳಲ್ಲಿ ಬೆಳೆದು ಬಂದವನು ಅಲೆಮಾರಿ. ಯಾವುದೇ ನಾಗರಿಕ ಸಂಪತ್ತಿನ ಸನಿಹವಿಲ್ಲದೆ, ಧರ್ಮದ ಹಂಗಿಲ್ಲದೆ, ಆದಿಮ ಸ್ಥಿತಿಯಲ್ಲಿ ಬದುಕಿದ್ದ ಈ ಬುಡಕಟ್ಟುಗಳ ಮೂಲರೂಪಗಳು ಇಂದಿಗೂ ಗ್ರಾಮೀಣ ಭಾರತದಲ್ಲಿ ಕಾಣುತ್ತವೆ.

ಇಂದು ಅಲೆಮಾರಿಗಳು ಅನುಭವಿಸುತ್ತಿರುವ ಗಂಭೀರ ಸಮಸ್ಯೆ 'ಐಡೆಂಟಿಟಿ'ಯನ್ನು ತಿಳಿಯುವುದಾಗಿದೆ. ಇಂತಹ ಐಡೆಂಟಿಟಿ ಸಮಸ್ಯೆಯಲ್ಲಿ ಬುಡ್ಗಜಂಗಮರು, ಚೆನ್ನದಾಸರ್, ಸಿಂಧೋಳ್ಳು, ಶಿಳ್ಳೆಕ್ಯಾತ

ರಂತಹ ಅಲೆಮಾರಿ ಸಮುದಾಯಗಳು ನರಳುತ್ತಿದ್ದಾರೆ. ಇದು ಬೆಕ್ಕಿಗೆ ಚೆಲ್ಲಾಟವಾದರೆ ಇಲಿಗೆ ಪ್ರಾಣ ಸಂಕಟ ಪ್ರಹಸನವಾಗಿದೆ.

ಒಂದು ಕಡೆ ತಮ್ಮ ಸಮುದಾಯಗಳ ಐಡೆಂಟಿಟಿಯ ಯಾವುದೇ ಸಮಸ್ಯೆ ಇಲ್ಲದೇ ಸಂವಿಧಾನ ಬದ್ಧ ಮೀಸಲಾತಿ ಸವಲತ್ತು ಪಡೆಯುತ್ತಿರುವ ಸಮುದಾಯಗಳು ಇದ್ದರೆ ಮತ್ತೊಂದೆಡೆ ತಮ್ಮ ಲಿಖಿತ ಚರಿತ್ರೆಯನ್ನು ಕಾಣದ ತಮ್ಮನ್ನು ಪ್ರತಿನಿಧಿಸುವವರಾರೂ ಇಲ್ಲದೇ ತಮ್ಮ ಐಡೆಂಟಿಟಿ ತಿಳಿಯದೇ, ತಿಳಿದರೂ ಅತಂಕದಿಂದ ಈ 'ಗಂಡಬೇರುಂಡ' ಮೀಸಲು ವ್ಯವಸ್ಥೆಯನ್ನು ಅಸಹಾಯಕತೆಯಿಂದ ನೋಡುವ ಅಲೆಮಾರಿಗಳು ಬದಿಗೆ ತಳ್ಳಲ್ಪಟ್ಟಿದ್ದಾರೆ.

ಉದಾಹರಣೆಗೆ 'ಬುಡ್ಗಜಂಗಮ'ರ ಸಂಪೂರ್ಣ Anthropological ವಿವರಗಳನ್ನು Edgar Thruston, ಕೆ.ಎಸ್.ಸಿಂಗ್, ಉಪಸಂಸ್ಕೃತಿ ಅಧ್ಯಯನ ಮಾಲೆ-ಅಲೆಮಾರಿ ಅಧ್ಯಯನ ಮಾಲೆ-ವಿಶ್ವವಿದ್ಯಾಲಯಗಳಲ್ಲಿ ಪ್ರಕಟಿಸಿರುವ ಸಂಶೋಧನಾ ಕೃತಿಗಳು, ಸರ್ಕಾರಿ ಆದೇಶಗಳು ಇವೆಲ್ಲವುಗಳಿಗಿಂತ ಇಂದಿಗೂ ಸ್ಪಷ್ಟಪಡಿಸುವ ಕ್ಷೇತ್ರಾಧ್ಯಯನ ಅಂದರೆ ಅವರ 'ಎತ್ನೋಗ್ರಫಿ'ಯನ್ನು ಪರಿಶೀಲಿಸುವ ಕ್ರಮ, ಮೀಸಲಾತಿ/ಜಾತಿಯನ್ನು ತಿಳಿಯದ ಬುಡ್ಗಜಂಗಮರು ಬಳಸುವ 'ಬುಡ್ಗ' ಸಮುದಾಯದ ಉಪಕರಣ ನಮ್ಮ ಬುರ್ರಕಥೆ ಈರಮ್ಮ ತನ್ನ ಬುರ್ರಕಥೆ ಮಾಡುವಾಗ ಬಳಸುತ್ತಾಳೆ.

ಇಷ್ಟಾಗಿಯೂ ಅಲೆಮಾರಿ ಬುಡ್ಗಜಂಗಮರಿಗೆ ತಮ್ಮ ಐಡೆಂಟಿಟಿಯನ್ನು ದಕ್ಕಿಸಿಕೊಳ್ಳಲಾಗುತ್ತಿಲ್ಲ. ಇವರು ಭಿಕ್ಷೆ ಬೇಡುವ ಹಾಕುವ ವೇಷಗಳನ್ನು ಸ್ಥಳೀಯ ಜನಪದರು ಕರೆದಂತೆ ಭಾವಿಸಲಾಗಿದೆ. ಬೈರಾಗಿ ವೇಷ, ಬಹುರೂಪಿ, ಹಗಲು ವೇಷ, ಬುರ್ರಕಥೆ ಇಂತಹ ಹೆಸರುಗಳಲ್ಲೇ ಈ ಅಲೆಮಾರಿಗಳು ಸಾಗುತ್ತಿದ್ದು ಇದರ ಬಗ್ಗೆ ಸ್ಪಷ್ಟೀಕರಣ ನೀಡಿ ಅಲೆಮಾರಿಗಳಿಗೆ ಸಾಮಾಜಿಕ ನ್ಯಾಯ ದಕ್ಕಿಸಿಕೊಡ ಬೇಕಾಗಿದ್ದು ಸಾಮಾಜಿಕ ನ್ಯಾಯದ ನಿಯೋಗಿ ಸಂಸ್ಥೆಗಳ ಜವಾಬ್ದಾರಿಯಾಗಿದೆ.

ಮುಖ್ಯವಾದ ಮತ್ತೊಂದು ಸಂಗತಿ ಎಂದರೆ ಬುಡ್ಗಜಂಗಮರು ಮತ್ತು ಸುಡಗಾಡು ಸಿದ್ದರು ಒಂದೇ ಆಗಿದ್ದಾರೆ. ಬೆಡಗು-ಆಚಾರ-ವಿಚಾರ-ಮದುವೆ-ಸಂಬಂಧಗಳು ಭಾಷೆಯಿಂದ ಒಂದೇ ಆದರೂ ಐಡೆಂಟಿಟಿಯ ನೆಲೆಯಲ್ಲಿ ಬೇರೆ ಬೇರೆ ಆಗುತ್ತಿದ್ದಾರೆ. ಇದನ್ನು ಯಾರಾದರೂ ಕ್ಷೇತ್ರಾಧ್ಯಯನ ದಲ್ಲಿ ಪರೀಕ್ಷಿಸಬಹುದು.

ಇಂತಹ ಐಡೆಂಟಿಟಿ ಸಮಸ್ಯೆ ಶಿಳ್ಳೆಕ್ಯಾತರನ್ನು ಕಾಡುತ್ತಿದೆ. ಭಾರತ ಸರ್ಕಾರದ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರುವ ಅಲೆಮಾರಿ ಶಿಳ್ಳೆಕ್ಯಾತರು ತಮ್ಮ ಕುಲಕಸಬಾದ ತೊಗಲುಗೊಂಬೆ ಮತ್ತು ಮೀನು ಹಿಡಿಯುವ ವೃತ್ತಿಗೆ ಅಂಟಿಕೊಂಡವರು. ಮೂಲತಃ ಮರಾಠಿ ನೆಲದಿಂದ ವಲಸೆ ಬಂದ ಶಿಳ್ಳೆಕ್ಯಾತರು ಮರಾಠಿಯನ್ನು ಮಾತನಾಡಿದರೂ ಅವರದೇ ಆದ ಮರಗು ಬಾಷೆ ಇದೆ. ಸ್ಥಳೀಯವಾಗಿ ವಿವಿಧೆಡೆ ಇವರನ್ನು ಶಿಳ್ಳೆಕ್ಯಾತ, ಕಟಬು, ಗೊಂಬೆರಾಮ, ಬುಂಡೆಬೆಸ್ತ ಎಂದೆಲ್ಲ ಕರೆದಿದ್ದು ಈ ಪರ್ಯಾಯ

ಹೆಸರುಗಳೆಲ್ಲಾ ಪ್ರವರ್ಗ-೧ರಲ್ಲಿ ದಾಖಲಾಗಿದೆ. ಜಾತಿಪತ್ರ ನೀಡುವ ತಹಸೀಲ್ದಾರ್ ಶಿಳ್ಳೆಕ್ಯಾತರಿಗೆ ಕಿಳ್ಳೆಕ್ಯಾತ ಎಂದು ನೀಡುತ್ತಾ ಸಂವಿಧಾನಬದ್ಧ ಹಕ್ಕನ್ನು ಹೀಗೆ ತಿರಸ್ಕರಿಸುತ್ತಾ ಅಲೆಮಾರಿಗಳಿಗೆ ದ್ರೋಹವೆಸಗಿದ್ದಾರೆ.

ಸುತ್ತಾಡುವ ಈ ಅನಾದಿಗಳ ಪರವಾಗಿ ಇಂತಹ ತಾಂತ್ರಿಕ ಸಮಸ್ಯೆಗಳನ್ನು ಪರಿಹರಿಸಬೇಕಾದ ಆಯೋಗಗಳು ಬಲಿಷ್ಠರ ಧ್ವನಿಯಾಗಿವೆ. ಇನ್ನೂ ಅಸಂಘಟಿತ ಅನಕ್ಷರಸ್ಥ ಅಲೆಮಾರಿಗಳು ಕನಿಷ್ಠ ಕಾನೂನಿನ ಹೋರಾಟ ಮಾಡುವ ಶಕ್ತಿಯನ್ನು ಪಡೆದಿಲ್ಲ. ಇವರ ಪರವಾಗಿ ಕನಿಷ್ಠ ಮಾನವೀಯ ಕಾರಣದಿಂದಾದರೂ ವಕೀಲರು ದನಿಯಾಗಬೇಕಾದ ಅವಶ್ಯಕತೆ ಇದೆ.

ಇಂತಹದೇ ಸಮಸ್ಯೆ ಸಿಂಧೋಳ್ಳು ಸಮುದಾಯಕ್ಕಿದೆ. ಜಗತ್ತಿನ ಯಾವುದೇ ಸಮುದಾಯ ಇವರಷ್ಟು ಬಡತನದಿಂದ ಇರಲು ಸಾಧ್ಯವಿಲ್ಲ. ಇಂದಿಗೂ ಕನಿಷ್ಠ ಹತ್ತನೇ ತರಗತಿಯ ವಿದ್ಯಾರ್ಥಿಯನ್ನು ನೀಡದ ಈ ಸಮುದಾಯವನ್ನು ಸ್ಥಳೀಯ ದುರ್ಗಮುರ್ಗಿ, ಬೂರ್‌ಬೂರ್‌ಚಾ, ಪೋತರಾಜ ಎಂದೆಲ್ಲಾ ಕರೆದು ಹಾವನೂರ ವರದಿಯಲ್ಲಿ ಈ ಪರ್ಯಾಯ ಹೆಸರುಗಳನ್ನು ಹಿಂದುಳಿದ ವರ್ಗದ ಪ್ರವರ್ಗ-೧ರ ಪಟ್ಟಿಯಲ್ಲಿ ಇಡಲಾಗಿದೆ. ತಮ್ಮ ಬೆನ್ನಿಗೆ ಛಡಿ ಏಟಿನಿಂದ ಬಾರಿಸಿಕೊಳ್ಳುವ ಈ ಅಲೆಮಾರಿಗಳಿಗೆ ಸಂವಿಧಾನದ ಸಾಮಾಜಿಕ ನ್ಯಾಯ ಮರೀಚಿಕೆಯಾಗಿದೆ.

ಪ್ರಸ್ತುತ ಕರ್ನಾಟಕ ಸರಕಾರ ಮತ್ತು ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗ ಮತ್ತು ರಾಜ್ಯದ ಇಲಾಖೆಗಳು ಐಡೆಂಟಿಟಿ ಸಮಸ್ಯೆಯನ್ನು ಪರಿಹರಿಸಬಹುದಿತ್ತು. ಆದರೆ ಹಲವರಿಗೆ ಇಂತಹ ಸಮಸ್ಯೆಗಳ ಬಗ್ಗೆ ಕೇವಲ ಅನುಕಂಪ ಮಾತ್ರವಿದ್ದು ಕಾನೂನಿನ ಪರಿಹಾರ ಕೊಡಿಸಲು ಮುಂದಾಗುತ್ತಿಲ್ಲ.

ಕೂಡಲೇ ಕರ್ನಾಟಕದಲ್ಲಿ ಒಂದು ಶಾಶ್ವತ ಅಲೆಮಾರಿ ಆಯೋಗವನ್ನು ರಚಿಸಿ ಅತ್ಯಂತ ವೈಜ್ಞಾನಿಕವಾದ ಅಲೆಮಾರಿ ಪಟ್ಟಿಯನ್ನು ರಚಿಸಬೇಕು ಮತ್ತು ಅಲೆಮಾರಿ ಐಡೆಂಟಿಟಿ ಸಮಸ್ಯೆಯನ್ನು ಆದ್ಯತೆಯಾಗಿ ಪರಿಹರಿಸಬೇಕು.

ಪರಿಶಿಷ್ಟ ಜಾತಿಯ ಲಂಬಾಣಿಗಳು ಹಿಂದುಳಿದ ವರ್ಗದ ಪಟ್ಟಿಯಲ್ಲಿರುವ 'ಬಂಜಾರ' ಪದವನ್ನು ಉಪಯೋಗಿಸದಷ್ಟು ಎಚ್ಚರದಿಂದಿದ್ದಾರೆ. ಆದರೆ ಇಂತಹ ಎಚ್ಚರ ದ್ರವಿಡ ಅಲೆಮಾರಿಗಳಿಗೆ ಇಲ್ಲ ಎನ್ನುವುದು ವಾಸ್ತವ.

ವಿಶ್ವಸಂಸ್ಥೆಗೆ ಭಾರತ ಸರಕಾರ ಒಂದು ಮುಚ್ಚಳಿಕೆಯನ್ನು ನೀಡಿದ್ದು ಅದರಂತೆ ಭಾರತದಲ್ಲಿ ೨೦೧೫ರ ವೇಳೆಗೆ ಗುಡಿಸಲು ಟೆಂಟುಗಳು ಇಲ್ಲದೇ ಪ್ರತಿಯೊಬ್ಬನಿಗೂ ಸೂರು ನೀಡುತ್ತೇವೆ ಎಂದು ಸುಳ್ಳು ಹೇಳಿದೆ. ವಾಸ್ತವವಾಗಿ ಶೇ. ೮೦ರಷ್ಟು ಅಲೆಮಾರಿಗಳಿಗೆ ರೇಷನ್ ಕಾರ್ಡ್, ಮತದಾನದ ಹಕ್ಕು, ಜಾತಿ ಪತ್ರಗಳಿಲ್ಲದೇ ಟೆಂಟುಗಳಿಲ್ಲದೇ ಬದುಕುತ್ತಿದೆ.

ಬಲಿಷ್ಠರೊಡನೆ ಪೈಪೋಟಿ ಮಾಡಲಾಗದ ಅಲೆಮಾರಿಗಳಿಗೆ ಮೂರನೇ ಅಲೆಮಾರಿ ಪರಿಶಿಷ್ಟ ರಚಿಸಬೇಕಾದ ಅವಶ್ಯಕತೆ ಇದೆ ಎನಿಸುತ್ತದೆ.

ಆದರೆ ಇಷ್ಟೆಲ್ಲಾ ಸಾಧ್ಯವಾಗಲು ರಾಜಕೀಯ ಇಚ್ಛಾಶಕ್ತಿಯನ್ನು ಕಟ್ಟಿಕೊಡುವ ಒತ್ತಡ ಗುಂಪುಗಳು ಅಲೆಮಾರಿಗಳಿಗೆ ಇಲ್ಲದ ಕಾರಣ ಅಲೆಮಾರಿಗಳು ಧ್ವನಿ ಕಳೆದುಕೊಂಡಿದ್ದಾರೆ.

ವಸತಿ–ಶಿಕ್ಷಣ–ಮೀಸಲಾತಿ ಈ ಮೂಲಕ ಅಲೆಮಾರಿ ಜಗತ್ತನ್ನು ಬೆಳಗುವ ಅಂಬೇಡ್ಕರ್‌ಗಾಗಿ ಅಲೆಮಾರಿಗಳ ಈ ಆಂದೋಲನ ಕಾಯುತ್ತಿದೆ. ಇದನ್ನು ಸ್ಪಂದಿಸುವ ಈ ದೇಶದ ಸಾಹಿತಿಗಳು ಅಕಾಡೆಮಿಗಳು/ಆಯೋಗಗಳು ಅಲೆಮಾರಿಗಳ ಕಡೆಗೆ ಗಮನಹರಿಸಬೇಕಾಗಿದೆ. ಇಲ್ಲವಾದರೆ ಪ್ರಜ್ಞಾವಂತರು ಸಹ ನಮ್ಮನ್ನು ಮರೆತವರೆಂದು ಅಲೆಮಾರಿಗಳು ಭಾವಿಸಿದರೆ ತಪ್ಪಲ್ಲ.

೫.೭. ವರ್ತಮಾನದಲ್ಲಿ ಅಲೆಮಾರಿಗಳ ಸಮಸ್ಯೆಗಳು

ನೆಲ ಮತ್ತು ನೆಲೆ ಇಲ್ಲದವರು ಒಂದು ಸಮಾಜದ ಮುಖ್ಯ ಸ್ಥಾನದಲ್ಲಿ ಸ್ಥಾಪಿತವಾಗಲು ಸಾಧ್ಯವಾಗುವುದಿಲ್ಲ. ಅವರು ಮುಖ್ಯ ಉತ್ಪತ್ತಿಯಲ್ಲಿ ತೊಡಗಲು, ಪಾಲುದಾರರಾಗಲು ಆಗುವುದಿಲ್ಲ. ಅಲೆಮಾರಿ ಜನಾಂಗ ಎಂದೂ ಮುಖ್ಯ ಉತ್ಪತ್ತಿಯಲ್ಲಿ ತೊಡಗಿಲ್ಲ. ಇತರರ ಉತ್ಪತ್ತಿಯ ಉಳಿತಾಯಕ್ಕೆ ಕೈಚಾಚಿದರಷ್ಟೆ ಅವರ ಕೆಲಸ ಎಂದೂ ಪ್ರಧಾನ ಅಲ್ಲ. ಕೇವಲ ಪೂರಕ ಕ್ರಿಯೆಗಳಷ್ಟೆ ಉದಾಹರಣೆಗೆ ವೇಷ ಹಾಕುವುದು, ಮಾಟಮಂತ್ರ ಮಾಡುವುದು, ಕಸೂತಿ ಹಾಕುವುದು, ಹಾಡುವುದು, ವಾದ್ಯ ನುಡಿಸುವುದು ಇತ್ಯಾದಿ. ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿರುವ ಅಲೆಮಾರಿಗಳ ಸ್ಥಿತಿಗತಿ ಪುಸ್ತಕದಲ್ಲಿ ಡಾ. ಹಿ.ಶಿ. ರಾಮಚಂದ್ರೆಗೌಡರು ದೇಶಿ ಸಮ್ಮೇಳನವೊಂದರಲ್ಲಿ ಮಾಡಿದ ಆಶಯ ಭಾಷಣವನ್ನು ಪ್ರಕಟಿಸಿದ್ದಾರೆ. ಇದರ ಪ್ರಕಾರ "ಅಲೆಮಾರಿಗಳು ತಮ್ಮ ಸಾಂಸ್ಕೃತಿಕ ಆರ್ಥಿಕ ಅನನ್ಯತೆಯನ್ನು ತಾವೇ ನಿರಾಕರಿಸಿಕೊಳ್ಳುತ್ತಿರುವ ಅಂಶಗಳನ್ನು ಪಟ್ಟಿ ಮಾಡಿದ್ದಾರೆ. ಇದು ಬಹುತೇಕವಾಗಿ ಯಾದಗಿರಿ ಜಿಲ್ಲೆಯ ಅಲೆಮಾರಿಗಳ ನೆಲೆಗಳಿಗೆ ಭೇಟಿ ನೀಡಿದಾಗ ಈ ಅಂಶಗಳು ಕಂಡುಬಂದಿವೆ".[೧೧]

೧. ಬಹುತೇಕ ಹೊರರಾಜ್ಯಗಳಿಂದ ವಲಸೆ ಬಂದವರು ಹಾಗೂ ಅದನ್ನು ಹೋಗಲಾಡಿಸಿ ಕೊಳ್ಳದವರು.

೨. ಊರಹೊರಗೆ ವಸತಿ ಹೂಡುವವರು.

೩. ರಾಜ್ಯದ ಭಾಷೆ, ಸಂಸ್ಕೃತಿ ಮತ್ತು ಆಡಳಿತವನ್ನು ಅವಲಂಬಿಸಿದವರು.

೪. ಧಾರ್ಮಿಕವಾಗಿ ಮೇಲು ಜಾತಿಯ ಪುರಾಣ ಮೂಲಕ್ಕೆ ಕೈಕಟ್ಟಿದಾಗಿ ಜೋಡಿಸಿಕೊಂಡವರು.

೫. ಭಿಕ್ಷೆಯನ್ನೇ ಉತ್ಪತ್ತಿ ಎಂದುಕೊಂಡವರು.

ಪ್ರತಿ ವ್ಯಕ್ತಿಗಳು ಕೈಗೊಳ್ಳುವ ಕೆಲಸ ಕಾರ್ಯಗಳೆಲ್ಲವೂ ಜಾತಿ ಹೆಸರಿನ ಮೂಲಕವೇ ಇರುವುದನ್ನು ನೋಡಬಹುದು. ಅದೇ ಹೆಸರಿನ ಮಠಗಳು, ಸಂಘಗಳು, ಶಿಕ್ಷಣ ಸಂಸ್ಥೆಗಳು ಬೆಳಕಿಗೆ ಬಂದಿವೆ.

ಬರುತ್ತಲೇ ಇವೆ. ಬದಲಾದ ಸ್ಥಿತಿಯಲ್ಲಿ ಬದುಕನ್ನು ಬದಲಾಯಿಸಿಕೊಂಡ ಒಬ್ಬ ಅಲೆಮಾರಿಯನ್ನು ನೀವು ಎಷ್ಟು ವರ್ಷದಿಂದ ಈ ವ್ಯಾಪಾರ ಕೈಗೊಂಡಿದ್ದೀಯಾ ಎಂದು ಕೇಳಿದರೆ ಸುಮಾರು ಎರಡು ಮೂರು ವರ್ಷಗಳಿಂದ ಎನ್ನುತ್ತಾನೆ. ನೀನು ಯಾವ ಜಾತಿಯವನು ಎಂದರೆ ಸುಸಂಸ್ಕೃತ ಜಾತಿ ಯವನೆಂದು ಹೇಳಿಕೊಳ್ಳದೆ ನಾನು ಡೊಂಬರವನು ಎನ್ನುತ್ತಾನೆ. ಆ ವೃತ್ತಿಯನ್ನೇಕೆ ಬಿಟ್ಟೆ ಎಂದರೆ ಅದಕ್ಕೆ ಜನರು ಸರಿಯಾಗಿ ಸ್ಪಂದಿಸುತ್ತಿಲ್ಲ, ಉನ್ನತಮಟ್ಟದ ಸರ್ಕಸ್‌ಗಳು, ಚಲನಚಿತ್ರಗಳೂ ಬಂದಿರುವು ದರಿಂದ ಜನರು ನಮ್ಮ ಕಲೆಯನ್ನು ನೋಡಲು ಬರುತ್ತಿಲ್ಲ. ಹೀಗಾಗಿ ಹೊಟ್ಟೆಪಾಡಿಗೆ ಅದನ್ನು ಬಿಟ್ಟು ವ್ಯಾಪಾರದಲ್ಲಿ ನಿಂತಿದ್ದೇವೆ ಎನ್ನುತ್ತಾನೆ. ಡೊಂಬರಾಟದ ಪಾರಂಪರಿಕ ಕೌಶಲ್ಯವನ್ನು ಬೇರೆಯವರು ಕಲಿತು ಆಧುನಿಕತೆಯ ಹೊಸರೂಪ ಕೊಟ್ಟು ಝಗಝಗಿಸುವ ಬೆಳಕು, ಹೊಸವಿನ್ಯಾಸದ ವಸ್ತ್ರಗಳು, ಧ್ವನಿಪೆಟ್ಟಿಗೆಗಳು, ಆಲಂಕಾರಿಕ ವೇದಿಕೆಯು ನೋಡುವ ಜನರನ್ನು ಆಕರ್ಷಿಸುವಂತೆ ಮಾಡಿ ಹಣ ಗಳಿಸುವವರು. ಆದರೆ ಆಧುನಿಕ ಪ್ರದರ್ಶನಕ್ಕೆ ನೀಡುವ ಹಾಗೂ ಸಾಂಪ್ರದಾಯಿಕ ಡೊಂಬರಾಟಕ್ಕೆ ನೀಡುವ ಜನರ ಪ್ರತಿಕ್ರಿಯೆ ಬೇರೆ ಮತ್ತು ಸಂಭಾವನೆ, ಗೌರವಗಳಲ್ಲಿ ವ್ಯತ್ಯಾಸವಿದೆ. ಆದರೂ ಅದನ್ನು ಅಲ್ಲಲ್ಲಿ ಪ್ರದರ್ಶನ ಮಾಡುವುದನ್ನು ಬಿಟ್ಟಿಲ್ಲ.

ಆಧುನಿಕ ಅಬ್ಬರದ ತಂತ್ರಜ್ಞಾನ ಕಾಲವಾದ ಇಂದು ಮಾನವನ ಸಂಬಂಧಗಳು ಯಾಂತ್ರಿಕವಾಗಿವೆ. ಹಣ, ಅಂತಸ್ತು, ಸ್ಪರ್ಧೆ ಇತ್ಯಾದಿ ಕಲಹಗಳು ಸಾಮಾನ್ಯವಾಗಿವೆ. ಇದರಿಂದ ಕೊಲೆ, ಭಯೋತ್ಪಾದನೆ, ಸುಳ್ಳು, ಮೋಸ, ವಂಚನೆಗಳು ನಿರ್ಭೀತಿಯಿಂದ ಗರಿಬಿಚ್ಚತೊಡಗಿವೆ. ಇದರ ಪರಿಣಾಮದಿಂದ ನೆಮ್ಮದಿಯ ಬದುಕು ಕಲ್ಪನೆಯಾಗಿದೆ. ಕಾರಣ ಇಂದು ತಾನು ಅಳವಡಿಸಿಕೊಂಡಿರುವ ಜೀವನಕ್ರಮ ಮತ್ತು ನಿಯಮಗಳು ಕ್ರೂರತನಕ್ಕೆ ಪ್ರಚೋದನೆಗಳಾಗಿವೆ. ಈ ರೀತಿಯ ಪ್ರಚೋದನೆಯಿಂದ ದೂರವಿದ್ದು ಮೋಸ, ವಂಚನೆ, ಹಿಂಸೆ ವೃತ್ತದಿಂದ ಪ್ರತ್ಯೇಕವಾಗಿ ಜೀವಿಸುವ ಅಲೆಮಾರಿ ಸಮುದಾಯಗಳು ಸಹಬಾಳ್ವೆಯ ಚಿಲುಮೆಗಳಾಗಬೇಕಿದೆ.

ಅಲೆಮಾರಿಗಳ ಸಮಸ್ಯೆಗಳು

ಸಮಸ್ಯೆ ರಹಿತ ಸಮಾಜವನ್ನು ಎಂದೆಂದಿಗೂ ಕಾಣಲು ಅಸಾಧ್ಯ ಆದರೆ ಸಮಸ್ಯೆಗಳು ಆಯಾ ಜಾತಿ ಸಮುದಾಯಗಳಿಗೆ ತಕ್ಕಂತೆ ತಮ್ಮದೇ ಆದ ಸಮಸ್ಯೆಗಳಿರುತ್ತವೆ. ಅಲೆಮಾರಿಗಳ ಸಮಸ್ಯೆಗಳು ಎಲ್ಲರ ಸಮಸ್ಯೆಗಿಂತ ಭಿನ್ನವಾಗಿವೆ. ಇನ್ನೂ ಸಮುದಾಯದ ರೂಪ ಬದಲಾವಣೆಯಾಗಿಲ್ಲ, ಸಮಸ್ಯೆಗಳ ಮಧ್ಯೇ ಸಂಕಷ್ಟಗಳ ಮಧ್ಯೆ ಸಿಲುಕಿಕೊಂಡಿದ್ದಾರೆ. ಅವುಗಳೆಂದರೆ,

೧. ಸಾಮಾಜಿಕ ಸಮಸ್ಯೆ

- ಈ ಅಲೆಮಾರಿಗಳು ಊರಿನ ಹೊರಗೆ ಇಲ್ಲವೇ ಬಯಲು ಪ್ರದೇಶದಲ್ಲಿ ತಮ್ಮದೇ ಆದ ಗುಡಿಸಿಲುಗಳನ್ನು ಕಟ್ಟಿಕೊಂಡು ಕೆಲವು ದಿನಗಳು ಮಾತ್ರ ವಾಸವಾಗಿರುವುದರಿಂದ ಆಯಾ ಪ್ರದೇಶದ ಸಾಮಾಜಿಕ ವ್ಯವಸ್ಥೆಗೆ ಹೊಂದಿಕೊಳ್ಳುವುದಿಲ್ಲ.

➢ ಸಮಾಜದಲ್ಲಿ ಈ ಸಮುದಾಯದವರನ್ನು ಅತ್ಯಂತ ಕೀಳುದೃಷ್ಟಿಯಿಂದ ನೋಡಲಾಗುತ್ತದೆ.

➢ ಸಮಾಜದ ಮುಖ್ಯವಾಹಿನಿಯಲ್ಲಿ ಇವರ ಪಾಲ್ಗೊಳ್ಳುವಿಕೆ ಅತ್ಯಲ್ಪ.

➢ ಇಂದಿನ ಆಧುನಿಕ ಯುಗದಲ್ಲಿ ಇವರನ್ನು ದೂರವಿಡುವುದನ್ನು ಕಾಣಬಹುದಾಗಿದೆ.

೨. **ನೆಲೆ ನಿಲ್ಲುವ ಸಮಸ್ಯೆ**

➢ ಜನತಾ, ಆಶ್ರಯ ಮನೆಗಳ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ.

➢ ಸರ್ಕಾರದಿಂದ ದೊರಕುತ್ತಿರುವ ನೆರವು ಅತ್ಯಲ್ಪವಾಗಿದೆ.

➢ ವಾಲ್ಮೀಕಿ ಆಶ್ರಯ ಮನೆಗಳ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ.

➢ ಸರ್ಕಾರದ ಅಲಕ್ಷತೆಗೆ ತುತ್ತಾಗಿ ಇವರು ಡಾ. ಬಿ.ಆರ್.ಅಂಬೇಡ್ಕರ್ ಯೋಜನೆಯಿಂದ ವಂಚಿತರಾಗಿದ್ದಾರೆ.

➢ ಯಾದಗಿರಿ ಜಿಲ್ಲೆ ಅಲೆಮಾರಿ ಸಮುದಾಯಗಳು ಊರ ಹೊರಗೆ ಗುಡಾರಗಳಲ್ಲಿ ವಾಸ ಮಾಡುತ್ತಿದ್ದಾರೆ.

೩. **ಆರ್ಥಿಕ ಸಮಸ್ಯೆ**

➢ ಇವರ ಅಜ್ಞಾನ ಮತ್ತು ಅನಕ್ಷರತೆಯಿಂದಾಗಿ ಸಾಲ ನೀಡುವ ಬ್ಯಾಂಕಿನ ಅಧಿಕಾರಿಗಳು ಹಿಂದೆ ಮುಂದೆ ನೋಡುತ್ತಿದ್ದಾರೆ.

➢ ಸರ್ಕಾರದ ವತಿಯಿಂದ ಈ ಅಲೆಮಾರಿಗಳಿಗೆ ಸಾಲ ಸೌಲಭ್ಯ ಸರಿಯಾದ ರೀತಿಯಲ್ಲಿ ದೊರೆಯುತ್ತಿಲ್ಲ.

➢ ಭಿಕ್ಷಾಟನೆ ವೃತ್ತಿಯಾಗಿರುವುದರಿಂದ ಯಾವುದೇ ಬ್ಯಾಂಕ್‌ಗಳು ಸಾಲ ಕೊಡಲು ಮುಂದೆ ಬರುತ್ತಿಲ್ಲ.

೪. **ಶೈಕ್ಷಣಿಕ ಸಮಸ್ಯೆ**

➢ ಶಾಲೆಯ ಮುಖವನ್ನೇ ನೋಡದ ಅಶಿಕ್ಷಿತ ಅಲೆಮಾರಿಗಳು ತಮ್ಮ ಮಕ್ಕಳನ್ನು ಜನಪದರು ಕರೆದ ಹೆಸರುಗಳಿಂದಲೇ ದಾಖಲಿಸಲಾಗಿದೆ. ಉದಾಹರಣೆಗೆ ಭಿಕ್ಷುಕ, ಬುರ್ರಕಥೆ ಮುಂತಾದವು. ಇದರಿಂದ ಜಾತಿಪ್ರಮಾಣ ಪತ್ರ ಪಡೆಯಲು ಸಾಧ್ಯವಾಗುತ್ತಿಲ್ಲ.

➢ ಸರಕಾರದ ನಿರ್ಲಕ್ಷ್ಯ ಧೋರಣೆಯು ಈ ಅಲೆಮಾರಿ ಮಕ್ಕಳು ಶಿಕ್ಷಣದಿಂದ ವಂಚಿತರಾಗಲು ಕಾರಣ.

- ವಲಸೆಯೇ ಇವರ ಜೀವನವಾಗಿರುವುದರಿಂದ ಒಂದು ಕಡೆ ನೆಲೆ ನಿಲ್ಲದೇ ಶಿಕ್ಷಣದಿಂದ ಅಲೆಮಾರಿ ಮಕ್ಕಳು ವಂಚಿತರಾಗಿದ್ದಾರೆ.
- ಸರಕಾರಿ ಯೋಜನೆಯಿಂದ ಪ್ರಾರಂಭಿಸಿದ ಟೆಂಟ್ ಶಾಲೆಗಳು ಈ ಮಕ್ಕಳಿಗೆ ಅನುಕೂಲಕರ ವಾಗಿಲ್ಲ.
- ಕಡ್ಡಾಯ ಶಿಕ್ಷಣ ಕುರಿತು ಮಾಹಿತಿ ಇಲ್ಲದಿರುವುದು.
- ಭಿಕ್ಷಾಟನೆಯೇ ತಮ್ಮ ಮೂಲ ಆದಾಯವೆಂದುಕೊಂಡಿರುವ ಈ ಅಲೆಮಾರಿಗಳು ಶಿಕ್ಷಣದ ಮಹತ್ವವನ್ನು ತಿಳಿದುಕೊಂಡಿಲ್ಲ.
- ಮೆರಿಟ್ ಆಧಾರಿತ ಶಿಕ್ಷಣ ವ್ಯವಸ್ಥೆಯಲ್ಲಿ ಶಾಲೆಗೆ ಅಥವಾ ಹಾಸ್ಟೆಲ್‌ಗೆ ಪ್ರವೇಶ ದೊರಕುವುದು ಬಹುಕಷ್ಟದ ವಿಷಯವಾಗಿದೆ.

೫. ರಾಜಕೀಯ ಸಮಸ್ಯೆ

- ಒಂದೇ ಜಾತಿಯವರಿದ್ದರೂ ಕೆಲವರಿಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮೀಸಲಾತಿ ಸೌಲಭ್ಯ ದೊರೆಯದೇ ಇರುವುದು.
- ಶಾಶ್ವತ ನೆಲೆ ಇಲ್ಲದೇ ಇರುವುದರಿಂದ ಸಂಘಟನೆಯ ಕೊರತೆ ಇರುವುದು.
- ನೆಲೆನಿಂತ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಇವರಿಗೆ ಅವಕಾಶ ಕೊಡದೇ ಇರುವುದು.
- ಒಂದು ಕಡೆ ನೆಲೆ ಇಲ್ಲದೆ ತಮ್ಮದೇ ಪ್ರತಿನಿಧಿಗಳನ್ನು ಆರಿಸಿಕೊಳ್ಳಲು ಆಗದಿರುವುದು.
- ಹೀಗಾಗಿ ರಾಜಕೀಯವಾಗಿ ಈ ಸಮುದಾಯಗಳು ಪ್ರಬಲತೆಯನ್ನು ಸಾಧಿಸಲು ಸಾಧ್ಯವಾಗಿಲ್ಲ. ಹಾಗಾಗಿ ರಾಜಕೀಯ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ.

೬. ಆರೋಗ್ಯ ಮತ್ತು ನೈರ್ಮಲ್ಯ ಸಮಸ್ಯೆ

- ಮೂಲಭೂತ ಸೌಲಭ್ಯಗಳಿಂದ ಕೂಡಿದ ವಾಸದ ನೆಲೆ ಅವರಿಗಿಲ್ಲ.
- ಅಲೆಮಾರಿ ಸಮುದಾಯದ ಮಕ್ಕಳು ಹಸಿವಿನಿಂದ ಬಳಲುತ್ತಿದ್ದಾರೆ.
- ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸೌಲಭ್ಯವಿಲ್ಲದಿರುವುದು.
- ಗಾಳಿ, ಮಳೆ, ಬಿಸಿಲು ಮೊದಲಾದವುಗಳಿಗೆ ಮೈವೊಡ್ಡಿಕೊಂಡು ಜೀವನ ಸಾಗಿಸುವುದು ಇವರ ನಿತ್ಯ ಕರ್ಮವಾಗಿದೆ.

೭. ಇನ್ನಿತರ ಸಮಸ್ಯೆಗಳು

- ➢ ರಾಜಕೀಯ ಸುಳ್ಳು ಆಶ್ವಾಸನೆ ಮಾತ್ರ ಪಡೆಯುವರು. ಆದರೆ ಇವರಿಗೆ ಯಾವುದೇ ಅಭಿವೃದ್ಧಿ ಇಲ್ಲದೇ ಇರುವುದು.
- ➢ ಅಲೆಮಾರಿ ಸಮುದಾಯಗಳಲ್ಲಿ ಸಮುದಾಯ ಜಾಗೃತಿ ಮಾಡುವ ಯುವಕರ ಕೊರತೆ.
- ➢ ಸಂಪ್ರದಾಯ ಮತ್ತು ಮೂಢನಂಬಿಕೆಗಳ ಮೇಲೆ ಅವಲಂಬನೆ.
- ➢ ತಮ್ಮ ಹೊರವಲಯದ ಜೀವನವನ್ನು ಬಿಟ್ಟು ನಾಗರಿಕ ಸಮಾಜದ ಹತ್ತಿರ ಬರದೇ ಇರುವುದು.
- ➢ ರಾಜಕೀಯ ಅಜ್ಞಾನ ಮತ್ತು ಸಂಘಟನೆಯ ಕೊರತೆ
- ➢ ಶಾಶ್ವತ ವಸತಿ ಸಮಸ್ಯೆ
- ➢ ವಿದ್ಯುತ್ ಸಮಸ್ಯೆ
- ➢ ನೀರಿನ ಸಮಸ್ಯೆ
- ➢ ಕಲೆ, ಮೌಖಿಕ ಸಾಹಿತ್ಯ, ಸಂಗೀತ ಇವುಗಳನ್ನು ಆಧಾರವಾಗಿಟ್ಟುಕೊಂಡು ಬದುಕುತ್ತಿರುವ ಈ ಅಲೆಮಾರಿಗಳು ಆಧುನಿಕ ಸನ್ನಿವೇಶದಲ್ಲಿ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿವೆ.
- ➢ ಸಿನಿಮಾ, ದೂರದರ್ಶನ ಮಾಧ್ಯಮಗಳ ಪ್ರಭಾವದಿಂದ ಬುರ್ರಕಥೆ ಕೇಳದಾಗಿದೆ.
- ➢ ತಂಬೂರಿ, ಏಕನಾದ, ತತ್ವಪದಗಳು ಮಾಯವಾಗಿವೆ.
- ➢ ಅಲೆಮಾರಿಗಳ ವೇಷಗಳು ಅಪಹಾಸ್ಯಕ್ಕೀಡಾಗಿವೆ.

ಹೀಗೆ ಅನೇಕ ಸಮಸ್ಯೆಗಳ ಸುಳಿಯಲ್ಲಿ ಯಾದಗಿರಿ ಜಿಲ್ಲೆಯ ಅಲೆಮಾರಿಗಳು ಸಿಲುಕಿ ಕೊಂಡಿದ್ದಾರೆ. ಅವುಗಳನ್ನು ಪರಿಹರಿಸಬೇಕಾದ ಅವಶ್ಯಕತೆ ಇದೆ.

೫.೬. ದ್ವಾರಕಾನಾಥ್ ಆಯೋಗದ ಶಿಫಾರಸ್ಸುಗಳು

ದ್ವಾರಕನಾಥ ಆಯೋಗ ನೀಡಿರುವ ಶಿಫಾರಸ್ಸುಗಳು ಕರ್ನಾಟಕದ ಎಲ್ಲ ಅಲೆಮಾರಿಗಳಿಗೂ ಅನ್ವಯಿಸುತ್ತವೆ. ಆದುದರಿಂದ ಯಾದಗಿರಿ ಜಿಲ್ಲೆಯ ಅಲೆಮಾರಿಗಳು ಸಮಾಜದ ಮುಖ್ಯವಾಹಿನಿಗೆ ಬರಲು ಈ ಶಿಫಾರಸ್ಸುಗಳು ಅತಿಮುಖ್ಯವಾಗಿವೆ. ಆದುದರಿಂದ ಅವುಗಳನ್ನು ಈ ಪ್ರಬಂಧದಲ್ಲಿ ಉಲ್ಲೇಖಿಸಿದ್ದೇನೆ.

೧. **ವಸತಿ:** "ಪಾರಂಪರಿಕವಾಗಿ ಅಲೆಮಾರಿ ಜೀವನವನ್ನೇ ಇಂದಿಗೂ ನಡೆಸುತ್ತಿರುವ ಸುಮಾರು ೫೦ ಅಲೆಮಾರಿ ಸಮುದಾಯವನ್ನು ಒಂದು ಘಟಕವೆಂದು ಪರಿಗಣಿಸಿ ಕನಿಷ್ಠ ತಲಾ ಒಂದು ಎಕರೆ ಭೂಮಿಯನ್ನು ಪ್ರತಿ ಘಟಕಕ್ಕೆ ವರ್ಗಾಯಿಸಿ ಅಲ್ಲಿ ಅವರಿಗೆ ಎಲ್ಲಾ ಅನುಕೂಲಗಳಿರುವಂತೆ ವಸತಿ ನಿರ್ಮಾಣ ಮಾಡಿಕೊಡುವುದು".[೨] ಇದರಿಂದಾಗಿ ಈ ಸಮುದಾಯಕ್ಕೆ ಒಂದು ನಿರ್ದಿಷ್ಟ ನೆಲ ಮತ್ತು ನಿರ್ದಿಷ್ಟ ನೆಲೆ ಬಂದಂತಾಗಿ ಅವರ ಸಾಮಾಜಿಕ, ಶೈಕ್ಷಣಿಕ ಜೀವನಕ್ಕೆ ಅಡಿಪಾಯವಾಗುತ್ತದೆ. ಈ ಪ್ರದೇಶವನ್ನು ನವಗ್ರಾಮದ ಮಾದರಿಯಲ್ಲಿ ಅಭಿವೃದ್ಧಿಪಡಿಸಿ ಇಲ್ಲಿನ ಮಕ್ಕಳ ವಿದ್ಯಾಭ್ಯಾಸಕ್ಕೆ ಅಗತ್ಯವಾದ ಅಂಗನವಾಡಿ ಕೇಂದ್ರ, ಆರೋಗ್ಯ ಕೇಂದ್ರ ಹಾಗೂ ಶಾಲೆಗಳನ್ನು ಸ್ಥಾಪಿಸಬೇಕು.

೨. "ಬಳ್ಳಾರಿ ಬಳಿಯ 'ಗುಡಾನಗರ'ದಲ್ಲಿ ಈ ಅಲೆಮಾರಿಗಳಿಗಾಗಿ ಕಟ್ಟಿಸಿರುವ ಮನೆಗಳು, ಅಂಗನವಾಡಿ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ, ಶಾಲೆ, ಮುಂತಾದವನ್ನು ಈ ಕಾರಣದಿಂದಾಗಿ ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳ ಬಳಿ ಈ ರೀತಿಯ 'ಗುಡಾನಗರ'ಗಳನ್ನು ಕಟ್ಟದರೆ ಈ ಅಲೆಮಾರಿ ಸಮುದಾಯಗಳಿಗೆ ಒಂದು ಸ್ಥಿರವಾದ ನೆಲೆಯಾಗುತ್ತದೆ".[೩] ಈ ಕಾರಣದಿಂದಾಗಿ ಪ್ರತಿ ಜಿಲ್ಲಾ ಕೇಂದ್ರ ಕ್ರಮೇಣ ತಾಲೂಕು ಕೇಂದ್ರಗಳ ಬಳಿಯೂ ಗುಡಾರ ನಗರದಂತಹ ವಸತಿ ಸಮುಚ್ಚಯವನ್ನು ಅಲೆಮಾರಿಜನಾಂಗಗಳ ಸರ್ವತೋಮುಖ ಅಭಿವೃದ್ಧಿಗಾಗಿ ಸರ್ಕಾರ ಕಟ್ಟಿ ಕೊಡಬೇಕೆಂದು ಈ ಮೂಲಕ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತದೆ.

೩. ಅಂತೆಯೇ, ಗ್ರಾಮ ಪಂಚಾಯಿತಿ, ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆ, ನಗರಾಭಿವೃದ್ಧಿ ಪ್ರಾಧಿಕಾರಗಳು, ಗೃಹನಿರ್ಮಾಣ ಮಂಡಳಿ, ಸ್ಲಮ್ ಬೋರ್ಡ್‌ಗಳು, ಇಂದಿರಾ ಆವಾಸ್ ಯೋಜನೆ ಇತ್ಯಾದಿಗಳಲ್ಲಿ ಈಗಾಗಲೇ ಈ ಪ್ರದೇಶಗಳಲ್ಲಿ ನೆಲೆ ನಿಲ್ಲಲು ಪ್ರಯತ್ನಿಸುತ್ತಿರುವ ಅಲೆಮಾರಿಗಳಿಗೆ ಇವರ ಜನಸಂಖ್ಯೆಗನುಗುಣವಾಗಿ ಶೇಕಡಾವಾರು ನಿವೇಶನ ಮತ್ತು ಮನೆಗಳನ್ನು ಮೀಸಲಿಡಬೇಕು. ನಗರ ಪ್ರದೇಶಗಳನ್ನು ಅಭಿವೃದ್ಧಿ ಪಡಿಸುವ

ಹಂತದಲ್ಲಿ ಸ್ಲಮ್ ಬೋರ್ಡ್ ಇತ್ಯಾದಿಗಳಲ್ಲಿ ಎಸ್‌ಸಿ/ ಎಸ್‌ಟಿ/ ಒಬಿಸಿ ಸಮುದಾಯಗಳಿಗೆ ಮನೆಗಳನ್ನು ನಿರ್ಮಿಸಿಕೊಡುವ ವ್ಯವಸ್ಥೆ ಈಗಾಗಲೇ ಇದೆ. ಫಲಾನುಭವಿಗಳಿಂದ ೧೦% ರಿಂದ ೧೨%ರಷ್ಟು ಮೊತ್ತವನ್ನು ಪಡೆಯುವ ವ್ಯವಸ್ಥೆ ಈಗ ಇರುತ್ತದೆ. ಈ ವ್ಯವಸ್ಥೆಯನ್ನು ಸಡಿಲಗೊಳಿಸಿ ನಿರ್ಗತಿಕರಾದ ಅಲೆಮಾರಿಗಳಿಗೆ ಕನಿಷ್ಠ ೫೫% ಪಾಲುದಾರಿಕೆ ಪಡೆದು ಮನೆಗಳನ್ನು ನಿರ್ಮಿಸಿಕೊಡಬೇಕೆಂದು ಶಿಫಾರಸ್ಸು ಮಾಡಿರುತ್ತದೆ.

೪. ಅಲೆಮಾರಿಗಳ ಈ ಪಾರಂಪರಿಕ ಕುಲವೃತ್ತಿಗೆ ಧಕ್ಕೆಯುಂಟಾಗಿರುವುದರಿಂದಾಗಿ ಈ ಅಲೆಮಾರಿಗಳು ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಇದರಿಂದಾಗಿ ಇವರಿಗೆ

ಕೃಷಿ ಮಾಡುವ ಅರಿವು, ಜ್ಞಾನ ಮತ್ತು ಆಸಕ್ತಿ ಇವೆಲ್ಲವೂ ಇವೆ. ಆದರೆ ಕೃಷಿ ಮಾಡಲು ಭೂಮಿಯೇ ಇಲ್ಲ. ಆದ್ದರಿಂದ ಈ ಅಲೆಮಾರಿ ಕೃಷಿಕರನ್ನು ಗುರುತಿಸಿ ಕನಿಷ್ಠ ಕುಟುಂಬವೊಂದಕ್ಕೆ ಎರಡರಿಂದ ಮೂರು ಎಕರೆಯಷ್ಟು ಕೃಷಿಯೋಗ್ಯವಾದ ಭೂಮಿಯನ್ನು ನೀಡಿ ಕೃಷಿಗೆ ಬೇಕಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕಾಗಿದೆ.

ಅಲೆಮಾರಿಗಳ ವಸತಿ ಸಮುಚ್ಚಯಕ್ಕೆ ಕನಿಷ್ಠ ಸೌಕರ್ಯಗಳಾದ ನೈರ್ಮಲ್ಯ, ಶುದ್ಧ ಕುಡಿಯುವ ನೀರು ಚರಂಡಿ ವ್ಯವಸ್ಥೆ, ಸಾರ್ವಜನಿಕ ಶೌಚಾಲಯ ಮತ್ತು ವಿದ್ಯುಚ್ಛಕ್ತಿಯನ್ನು ಕಡ್ಡಾಯವಾಗಿ ಇರುವಂತೆ ನೋಡಿಕೊಳ್ಳಬೇಕು.

ಶಿಕ್ಷಣ

ತಲಾತಲಾಂತರಗಳಿಂದ ತಮ್ಮ ಪಾರಂಪರಿಕ ಜ್ಞಾನವನ್ನೇ ಸಮಾಜದ ಇತರೆ ಎಲ್ಲಾ ಸಮುದಾಯ ಗಳ ಸ್ವಾಸ್ಥ್ಯ ಕಾಪಾಡಲು ಧಾರೆ ಎರೆದ ಈ ಅಲೆಮಾರಿಗಳು ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ಎಂದೂ ಏನನ್ನೂ ಮಾಡಲಾಗಲಿಲ್ಲ. ಅಂತೆಯೇ ಸರ್ಕಾರಗಳೂ ಕೂಡ ಈ ಅಲೆಮಾರಿ ಮಕ್ಕಳ ಶಿಕ್ಷಣಕ್ಕಾಗಿ ಯಾವುದೇ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡಂತೆ ಕಂಡುಬರುವುದಿಲ್ಲ. ಆದ್ದರಿಂದ ಸರ್ಕಾರ ಈಗಲಾದರೂ ಈ ಮಕ್ಕಳ ಶಿಕ್ಷಣದ ಬಗ್ಗೆ ತೀವ್ರ ಕಾಳಜಿ ವಹಿಸಬೇಕಾದ ಅವಶ್ಯಕತೆ ಇದೆ.

ಕಾಲಾಂತರದಿಂದ ಶಿಕ್ಷಣ ಪಡೆಯಲು ವಂಚಿತರಾದ ಈ ಅಲೆಮಾರಿಗಳ ಮಕ್ಕಳ ಶಿಕ್ಷಣ ಮತ್ತು ಉದ್ಯೋಗದ ದೃಷ್ಟಿಯಿಂದ ಈ ಅಲೆಮಾರಿಗಳಿಗೆ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಒಂದು ವಿಶೇಷ ಪ್ಯಾಕೇಜನ್ನು ಸರ್ಕಾರ ನೀಡಬೇಕಾಗುತ್ತದೆ.

“ಈ ವಿಶೇಷ ಪ್ಯಾಕೇಜ್‌ನಡಿ ಈ ಕೆಳಕಂಡಂತೆ ಕೆಲವು ಸೂತ್ರಗಳನ್ನು ಸರ್ಕಾರ ಅಳವಡಿಸಿಕೊಳ್ಳ ಬೇಕಾಗುತ್ತದೆ”.[೧೪]

ಅ. ಶಿಕ್ಷಣ ಕ್ಷೇತ್ರದಲ್ಲಿ ಈಗಿರುವ ಸ್ಪರ್ಧೆಯನ್ನು ಗಮನಿಸಿದರೆ ಈ ಅಲೆಮಾರಿಗಳಿಗೆ ಸಾಧಾರಣ ಶಿಕ್ಷಣ ನೀಡುವುದು ನಿಷ್ಪ್ರಯೋಜಕ. ಈ ಹಿನ್ನೆಲೆಯಲ್ಲಿ ಅಲೆಮಾರಿಗಳಿಗೆ ವಿಶೇಷ ಶಿಕ್ಷಣದ ಸವಲತ್ತನ್ನು ನೀಡಬೇಕಾಗುತ್ತದೆ. ಈ ಕಾರಣಕ್ಕೆ ಅಲೆಮಾರಿಗಳಿಗೆ ಶಿಕ್ಷಣದಲ್ಲಿ ವಿಶೇಷ ಮೀಸಲಾತಿ ನೀತಿಯನ್ನೇ ರೂಪಿಸಿ ಜಾರಿಗೊಳಿಸಬೇಕಾಗುತ್ತದೆ.

ಬ. ಸರ್ಕಾರಿ ಶಾಲಾ ಕಾಲೇಜು, ಅನುದಾನಿತ ಶಿಕ್ಷಣ ಸಂಸ್ಥೆಗಳು, ಹಾಸ್ಟೆಲ್‌ಗಳಿಗೆ ಪ್ರವೇಶ ಪಡೆಯಲು ಈ ಅಲೆಮಾರಿಗಳು ಗಳಿಸಿದ ಅಂಕಗಳ ನಿರ್ಬಂಧವಿಲ್ಲದೆ ಅವಕಾಶ ಕಲ್ಪಿಸಿ ಕೊಡಬೇಕು.

ಸಿ. ಅಲೆಮಾರಿಗಳಿಗೆ ವೃತ್ತಿ ಜೀವನ ನಡೆಸಲು ಸಾಧ್ಯವಾಗದೆ ಅತ್ಯಂತ ನಿರ್ಗತಿಕ ಕಡುಬಡವ ರಾಗಿರುವ ಕಾರಣ ಇವರಿಗೆ ಇವರ ಮಕ್ಕಳ ಶಿಕ್ಷಣದ ಅವಶ್ಯಕತೆಯ ಅರಿವಾಗಿರುವುದಿಲ್ಲ. ಆದ

ಕಾರಣ ಇಂತಹ ಮಕ್ಕಳ ಪೋಷಕರನ್ನು ಈ ದಿಸೆಯಲ್ಲಿ ಪ್ರೋತ್ಸಾಹಿಸುವ ದೃಷ್ಟಿಯಿಂದ ಕನಿಷ್ಠ ಪ್ರೋತ್ಸಾಹ ಧನವನ್ನು ನಿಡಬೇಕಾಗಿದೆ.

ಡಿ. ಎಸ್‌ಸಿ/ಎಸ್‌ಟಿ/ಒಬಿಸಿ ಈ ಯಾವುದೇ ಪಟ್ಟಿಯಲ್ಲಿದ್ದರೂ 'ಅಲೆಮಾರಿ' ಎಂದು ಗುರುತಿಸಲಾದ ಈ ಸಮುದಾಯದ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೆ ಉಚಿತ ಶಿಕ್ಷಣ ನೀಡುವುದನ್ನು ಕಡ್ಡಾಯಗೊಳಿಸಬೇಕು.

ಇ. ಅನುದಾನರಹಿತ ಮತ್ತು ಅನುದಾನಸಹಿತ ಪ್ರತಿಷ್ಠಿತ ಶಾಲೆಗಳಲ್ಲಿ ವಿಶೇಷ ನೀತಿಯನ್ನು ಮಾಡಿ ಅಲೆಮಾರಿ ಮಕ್ಕಳಿಗೆ ಪ್ರವೇಶ ಮಾಡಿಕೊಡಬೇಕು.

ಎಫ್. ಅಲೆಮಾರಿಗಳಿಗಾಗಿ ಉನ್ನತ ಶಿಕ್ಷಣ ನೀಡಲು ವಿಶೇಷ ಮೀಸಲಾತಿ ಕಲ್ಪಿಸಿ, ಧನಸಹಾಯ ನೀಡಬೇಕು.

ಅಲೆಮಾರಿ ಅಭಿವೃದ್ಧಿ ನಿಗಮ

ಈ ಅಲೆಮಾರಿ ಹಾಗೂ ಅರೆಅಲೆಮಾರಿಗಳ ಸರ್ವತೋಮುಖ ಅಭಿವೃದ್ಧಿಗಾಗಿ "ರಾಜ್ಯ ಅಲೆಮಾರಿ, ಅರೆಅಲೆಮಾರಿ ಅಭಿವೃದ್ಧಿ ನಿಗಮ" ಒಂದನ್ನು ಸ್ಥಾಪನೆ ಮಾಡುವ ಅವಶ್ಯಕತೆ ಇದೆ. ಬಹಳಷ್ಟು ಅಲೆಮಾರಿ ಸಮುದಾಯಗಳು ತಮ್ಮ ಪಾರಂಪರಿಕ ವೃತ್ತಿಯಿಂದ ವಿಮುಖರಾಗಿದ್ದು, ಜೀವನ ನಿರ್ವಹಣೆಗಾಗಿ ಹತ್ತಾರು ವೃತ್ತಿಗಳನ್ನು ಅವಲಂಬಿಸಿದ್ದಾರೆ. ಈ ಸಣ್ಣಮಟ್ಟ ವ್ಯಾಪಾರಕ್ಕೂ, ಈ ಸಮುದಾಯಕ್ಕೆ ಬಂಡವಾಳ ಭರಿಸುವುದು ಕಷ್ಟಸಾಧ್ಯ ಎನಿಸಿದೆ. ಸ್ಥಳೀಯ ಲೇವಾದೇವಿದಾರರಿಂದ ಬಂಡವಾಳಕ್ಕಾಗಿ ಸಾಲ ಪಡೆದು ಹೆಚ್ಚಿನ ಬಡ್ಡಿ ನೀಡಿ ಇವರು ಗಳಿಸುವ ಲಾಭಕ್ಕಿಂತಲೂ ಬಡ್ಡಿಯೇ ಹೆಚ್ಚಾಗಿ, ಈ ವ್ಯಾಪಾರದಿಂದಲೂ ಹೊಟ್ಟೆಹೊರೆಯಲಾರದ ಸ್ಥಿತಿಯನ್ನು ತಲುಪಿದ್ದಾರೆ.

ಇವರನ್ನು ಜೀವನ ನಿರ್ವಹಣೆ ಮತ್ತು ಆರ್ಥಿಕ ಸಂಕಷ್ಟದಿಂದ ಪಾರು ಮಾಡಲು ಇವರ ಸರ್ವತೋಮುಖ ಅಭಿವೃದ್ಧಿಗಾಗಿ, ಹಾಗೆಯೇ, ಅಲ್ಪಸ್ವಲ್ಪ ಭೂಮಿವುಳ್ಳ ಅಲೆಮಾರಿಗಳ ನೀರಾವರಿ ಯೋಜನೆಗಳಿಗಾಗಿ ಬೇಕಾದ ಸಹಾಯಧನ, ಸಣ್ಣ ಮತ್ತು ಮಧ್ಯಮ ಮಟ್ಟದ ಗೃಹಕೈಗಾರಿಕೆಗಳನ್ನು ಸ್ಥಾಪಿಸಲು ಸಾಲ ಮತ್ತು ಸಹಾಯಧನ, ಬೇರೆ ಬೇರೆ ರೀತಿಯ ಸ್ವಯಂ ಉದ್ಯೋಗಗಳನ್ನು ಸ್ಥಾಪಿಸುವವರಿಗೆ ನೆರವು ಇತ್ಯಾದಿ ಯೊಜನೆಗಳನ್ನು ಈ ನಿಗಮದಿಂದ ಜಾರಿಗೊಳಿಸಬಹುದಾಗಿದೆ, ಇದರಿಂದಾಗಿ ಅಲೆಮಾರಿಗಳಿಗಾಗಿ ಒಂದು 'ಅಭಿವೃದ್ಧಿ ನಿಗಮವನ್ನು' ಸ್ಥಾಪಿಸಬೇಕಾದ ಅವಶ್ಯಕತೆ ಇದೆ.

೧. ಈ ಸಮುದಾಯಕ್ಕೆ ಅವಶ್ಯವಿರುವ ಮೂಲಭೂತ ಅವಶ್ಯಕತೆಗಳು ವಾಸಿಸಲು ಯೋಗ್ಯವಾದ ಮನೆ, ಕುಡಿಯಲು ನೀರು, ವಾಸಿಸುವ ಸ್ಥಳದಲ್ಲಿ ಚರಂಡಿಯನ್ನು ಕಲ್ಪಿಸಿಕೊಡುವುದಕ್ಕೆ ವಿಶೇಷ ವಾದ ಯೋಜನೆಗಳನ್ನು ಹಮ್ಮಿಕೊಳ್ಳಬಹುದಾಗಿದೆ.

೨. ಈ ಸಮುದಾಯದಲ್ಲಿ ಶಿಕ್ಷಣವನ್ನು ಪಡೆಯುವ ಮಟ್ಟ ತೀರ ಕಡಿಮೆ ಇದ್ದು ಎಲ್ಲಾ ಮಕ್ಕಳು ಶಿಕ್ಷಣವನ್ನು ಪಡೆಯುವಂತಹ ವಿಶೇಷವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬಹುದಾಗಿದೆ.

೩. ಈವರೆಗೆ ಎಸ್.ಎಸ್.ಎಲ್.ಸಿ. ಓದಿರುವ ಮತ್ತು ಈಗ ಓದುತ್ತಿರುವ ಯುವಕ ಮತ್ತು ಯುವತಿಯರಿಗೆ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ವಿಶೇಷವಾಗಿ ಸಹಾಯಧನ ಮತ್ತು ವಿದ್ಯಾರ್ಥಿ ವೇತನ ನೀಡಬಹುದಾಗಿದೆ.

೪. ಸಮುದಾಯದಲ್ಲಿರುವ ಯುವಕ/ಯುವತಿಯರಿಗೆ ಸರ್ಕಾರದಿಂದ ಅವರು ಬಯಸುವ ಸ್ವ-ಉದ್ಯೋಗಕ್ಕೆ ಸಂಬಂಧಿಸಿದಂತೆ ತರಬೇತಿ ನೀಡುವುದು ಮತ್ತು ತರಬೇತಿಗೊಂಡವರಿಗಾಗಿ ಸ್ವಯಂ ಉದ್ಯೋಗವನ್ನು ಮಾಡಲು ಅನುಕೂಲವಾಗುವಂತಹ ವಿಶೇಷ ಸಾಲಸೌಲಭ್ಯ ವ್ಯವಸ್ಥೆಯನ್ನು ಕಲ್ಪಿಸಿಕೊಡಬಹುದಾಗಿದೆ.

೫. ಮಹಿಳೆಯರಿಗಾಗಿ ಮನೆಯಲ್ಲಿ ಕೆಲಸ ಮಾಡಲು ಮತ್ತು ಮಸಾಲೆ ಪದಾರ್ಥಗಳ ಮಾರಾಟಕ್ಕೆ ಅಗತ್ಯವಾದ ವ್ಯವಸ್ಥೆ ಮತ್ತು ಸುಲಭ ಕಂತುಗಳಲ್ಲಿ ಬಡ್ಡಿರಹಿತ ಸಾಲ ಸೌಲಭ್ಯ ನೀಡಬಹುದಾಗಿದೆ.

೬. ಅಲೆಮಾರಿಗಳ ಸಮಾಜ ಸಮುದಾಯದಿಂದ ಒಬ್ಬರನ್ನು ಆಯಾ ಪಂಚಾಯಿತಿ/ನಗರ ಸಭೆಗಳಿಗೆ ಸದಸ್ಯರನ್ನಾಗಿ ನಾಮಕರಣ ಮಾಡುವ ಮೂಲಕ ರಾಜಕೀಯ ಹಕ್ಕನ್ನು ಪಡೆಯಲು ಆದೇಶ ಹೊರಡಿಸಬಹುದು.

೭. ಈ ಸಮುದಾಯದ ಐತಿಹಾಸಿಕ ಹಿನ್ನೆಲೆ, ಇವರ ಸಂಸ್ಕೃತಿಯ ಅನನ್ಯತೆ ಹಾಗೂ ಸಮಾಜಕ್ಕೆ ಈ ಸಮುದಾಯ ನೀಡಿದ ಕೊಡುಗೆಗಳನ್ನು ಅಧ್ಯಯನ ನಡೆಸಲು ಆದೇಶ ನೀಡಬಹುದು.

೮. ಸಾಮಾಜಿಕ ವ್ಯವಸ್ಥೆಯಲ್ಲಿ ಈ ಸಮುದಾಯವನ್ನು ಗುರುತಿಸಿ, ಸಾಮಾಜಿಕ ಮತ್ತು ಆರ್ಥಿಕವಾಗಿ ಮುಖ್ಯವಾಹಿನಿಗೆ ತರುವುದಕ್ಕಾಗಿ ಮಹಿಳೆ, ಮಕ್ಕಳು ಮತ್ತು ಸಮುದಾಯಕ್ಕೆ ವಿಶೇಷವಾದ ಪ್ಯಾಕೇಜನ್ನು ಸರ್ಕಾರವು ಘೋಷಣೆ ಮಾಡಬಹುದು.

೯. ಪ್ರಮುಖವಾಗಿ ಈ ಸಮುದಾಯದಲ್ಲಿ ಶಿಕ್ಷಣವನ್ನು ಪಡೆಯುವ ಮಟ್ಟ ತೀರ ಕಡಿಮೆ ಇದ್ದು, ಎಲ್ಲಾ ಮಕ್ಕಳು ಶಿಕ್ಷಣವನ್ನು ಪಡೆಯುವಂತಹ ವಿಶೇಷವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬಹುದು.

ಉಪಸಂಹಾರ

ಇಂದಿನ ಜಾಗತಿಕ ವ್ಯವಸ್ಥೆಯಲ್ಲಿ ಈ ದೇಶದ ಮೂಲ ನಿವಾಸಿಗಳೆಂದೇ ಬಿಂಬಿತವಾಗುತ್ತಿರುವ ಅಲೆಮಾರಿಗಳ ಅಭಿವೃದ್ಧಿ ಅತ್ಯವಶ್ಯಕವಾಗಿ ಆಗಬೇಕಾಗಿದೆ. ಅಲೆಮಾರಿ ಸಮುದಾಯಗಳ ದುರ್ದೈವವೋ ಅಥವಾ ರಾಜಕಾರಣಿಗಳ ಸರ್ಕಾರಗಳ ನಿರ್ಲಕ್ಷ್ಯವೋ ಅದು ಹೇಳಿಕೊಳ್ಳುವ ರೀತಿಯಲ್ಲಿ ಆಗುತ್ತಿಲ್ಲ.

ಕರ್ನಾಟಕದ ಘನ ಸರ್ಕಾರಗಳು ಉದ್ದಿಮೆಗಳಿಗೆ ಐಟಿ ಕಂಪನಿಗಳಿಗೆ ರೀಯಲ್ ಎಸ್ಟೇಟ್‌ಗೆ ಸಾವಿರ ಎಕರೆಗಟ್ಟಲೆ ಭೂಮಿಯನ್ನು ನೀಡುತ್ತದೆ. ಆದರೆ ಎಷ್ಟೋ ವರ್ಷಗಳಿಂದ ಅಲೆಮಾರಿಗಳಾಗಿ ತಮ್ಮ ಸಂಸ್ಕೃತಿಯನ್ನು ಬಿಂಬಿಸುತ್ತಾ ಬಂದ ದೇಶಿಯ ಸೊಗಡಿನಲ್ಲಿ ಬದುಕುತ್ತಿರುವ ಈ ಅಲೆಮಾರಿಗಳಿಗೆ ವಾಸಮಾಡಲು ಒಂದು ಮನೆಕಟ್ಟಿ ಕೊಡಲು ಆಗುತ್ತಿಲ್ಲ ವೆಂದರೆ ಇದಕ್ಕೆ ಕಾರಣವೇನಿರಬಹುದು. ಅಭಿವೃದ್ಧಿಯ ಹೆಸರಿನಲ್ಲಿ ಎಷ್ಟೋ ಹಣ ಖರ್ಚಾಗುತ್ತದೆ. ಆದರೆ ಅದು ಯಾರಿಗೆ ಸಿಗಬೇಕು ಅವರಿಗೆ ಸಿಕ್ಕಿರುವುದಿಲ್ಲ.

ಈ ಅಲೆಮಾರಿಗಳ ಅಭಿವೃದ್ಧಿ ಹಿನ್ನಲೆಯಲ್ಲಿ ಅನೇಕ ಆಯೋಗಗಳು ರಚನೆಯಾಗಿವೆ. ತಮ್ಮ ವರದಿಯನ್ನು ನೀಡಿವೆ. ಅಂತಹದ್ದರಲ್ಲಿ ಡಾ. ಸಿ.ಎಸ್. ದ್ವಾರಕನಾಥ ಅವರ ಅಧ್ಯಕ್ಷತೆಯಲ್ಲಿ ರಚನೆಯಾದ ಹಿಂದುಳಿದ ವರ್ಗದ ಆಯೋಗ ಈ ಅಲೆಮಾರಿ ಸಮುದಾಯಗಳ ಕುರಿತು ಹಲವು ಶಿಫಾರಸ್ಸುಗಳನ್ನು ಮಾಡಿದೆ. ಪರ್ಯಾಯ ಪದದ ಗೊಂದಲದ ನಿವಾರಣೆಗೆ ಸಲಹೆ ನೀಡಿದೆ.

ನಮ್ಮ ನೆಚ್ಚಿನ ಸಂವಿಧಾನವು ಕೂಡ ಈ ಅಲೆಮಾರಿಗಳಿಗೆ ಮೀಸಲಾತಿ ನೀಡುವುದರ ಮೂಲಕ ನಾಗರೀಕ ಸಮಾಜದ ಮುಖ್ಯವಾಹಿನಿಗೆ ಬರಲು ಅವಕಾಶಗಳನ್ನು ಕಲ್ಪಿಸಿದೆ. ಈ ಹಿನ್ನಲೆಯಲ್ಲಿ ಡಾ. ಅಂಬೇಡ್ಕರ್ ಅವರು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಏಳ್ಗೆಗಾಗಿ ಮಾತ್ರವಲ್ಲದೆ ಈ ಅಲೆಮಾರಿಗಳ ಏಳ್ಗೆಯು ಕೂಡ ಅದರಲ್ಲಿ ಅಡಕವಾಗಿದೆ. ಆದರೆ ಈ ಅಲೆಮಾರಿಗಳು ಅದರ ಸದುಪಯೋಗಪಡೆದುಕೊಳ್ಳದೇ ಅವರ ಪಾಲನ್ನು ಬೇರೆಯವರು ತಿನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ. ಇವುಗಳನ್ನು ನಿವಾರಿಸಿ ಈ ಅಲೆಮಾರಿಗಳನ್ನು ಅಭಿವೃದ್ಧಿಪಡಿಸಿ ಸಮಾಜದ ಮುಖ್ಯವಾಹಿನಿಗೆ ತರಬೇಕಾಗಿದೆ.

ಅಡಿ ಟಿಪ್ಪಣಿ

೧. ರಮೇಶ ಸ.ಚಿ., ಅಲೆಮಾರಿಗಳ ಸ್ಥಿತಿಗತಿ, ಪು. ೨೫೪-೨೫೫

೨. ಚಂದ್ರಶೇಖರ ಟಿ.ಆರ್., ಅಮರ್ತ್ಯಸೇನರ ಅಭಿವೃದ್ಧಿ ಕಥನ, ಪು. ೧

೩. ಅಜ್ಜಯ್ಯ ಸಿ., ಪಿಎಚ್.ಡಿ. ಮಹಾಪ್ರಬಂಧ, ಪು. ೨೫೨-೨೫೪

೪. ಮೆಹಬೂಬ್-ಉಲ್-ಹಕ್ ಅಪ್ಲಿಕೇಶನ್ ಆನ್ ಹ್ಯೂಮನ್ ಡೆವಲಪ್‌ಮೆಂಟ್, ಪು.೨೦

೫. ದ್ವಾರಕನಾಥ ಸಿ.ಎಸ್., ಹಿಂದುಳಿದ ವರ್ಗದ ಆಯೋಗದ ವರದಿ, ಸಂಕುಲ, ಪು.೭೧-೭೨

೬. ಅದೇ ಪು. ೭೪-೭೭

೭. ಅಜ್ಜಯ್ಯ ಸಿ., ಪಿಎಚ್.ಡಿ. ಮಹಾಪ್ರಬಂಧ, ಪು. ೨೬೭

೮. ಪ್ರಭಾಕರ ಎ.ಎಸ್., ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಪು. ೩೫

೯. ಅಜ್ಜಯ್ಯ ಸಿ., ಪಿಎಚ್.ಡಿ. ಮಹಾಪ್ರಬಂಧ, ಪು. ೨೬೩-೨೬೪

೧೦. ಬಾಲಗುರುಮೂರ್ತಿ, ಸಂವಾದ ವಿಶೇಷಾಂಕ, ೨೦೧೨

೧೧. ರಮೇಶ ಸ.ಚಿ., ಅಲೆಮಾರಿಗಳ ಸ್ಥಿತಿಗತಿ, ಪು. ೧೭

೧೨. ದ್ವಾರಕನಾಥ ಸಿ.ಎಸ್., ಹಿಂದುಳಿದ ವರ್ಗದ ಆಯೋಗದ ವರದಿ, ಸಂಕುಲ, ಪು.೨೬೦

೧೩. ಅದೇ ಪು. ೨೬೧

೧೪. ಅದೇ ಪು. ೨೬೨

ಅಧ್ಯಾಯ ೬

ಸಮಾರೋಪ

೬.೧. ಅಧ್ಯಯನದ ಫಲಿತಗಳು

೬.೨. ಪರಿಹಾರೋಪಾಯಗಳು

ಅಧ್ಯಾಯ ಆರು

ಸಮಾರೋಪ

ಈ ನಾಗರಿಕ ಸಮಾಜಕ್ಕೆ ಭಿನ್ನವಾದ ಸಮಾಜವೊಂದಿದೆ ಅದುವೇ ಅಲೆಮಾರಿ ಸಮಾಜ. ಶುದ್ಧ ಮಾನವೀಯ ಮೌಲ್ಯಗಳು, ಸಾರ್ವತ್ರಿಕ ಮೌಲ್ಯಗಳು ಸಾಮುದಾಯಿಕ ಕಲ್ಪನೆಗಳನ್ನು ಜೀವಂತ ವಾಗಿಟ್ಟುಕೊಂಡು, ಸಮಕಾಲೀನ ಸಮಾಜಗಳ ನಡುವೆಯೇ ಜೀವಿಸುತ್ತಾ, ಇಂದಿಗೂ ಜೀವಂತವಾಗಿವೆ. ಮೇಲೆ ತಿಳಿಸಿರುವ ಎಲ್ಲಾ ಮೌಲ್ಯಗಳನ್ನು ಇಂದಿನವರೆಗೂ ಉಳಿಸಿಕೊಂಡು ಬಂದಿರುವ ಸಮುದಾಯ ಗಳ ಬದುಕು ಅಲೆದಾಟದಲ್ಲಿದೆ. ಅಲೆಮಾರಿಗಳಲ್ಲಿ ಹೇರಳವಾದ ಜ್ಞಾನಸಂಪತ್ತಿದೆ, ಕೌಶಲ್ಯವಿದೆ, ದೈಹಿಕಶಕ್ತಿಯಿದೆ, ಉತ್ಕೃಷ್ಟ ಸಾಹಿತ್ಯವಿದೆ ಇಷ್ಟೆಲ್ಲಾ ಸಂಪತ್ತುಗಳಿದ್ದರೂ ಬದುಕಿಗಾಗಿ ಒಂದು ಪ್ರದೇಶ ದಿಂದ ಮತ್ತೊಂದು ಪ್ರದೇಶಕ್ಕೆ ಅಲೆದಾಟ ತಪ್ಪಿಲ್ಲ. ನೆಲ-ನೆಲೆ- ಬೆಲೆ ಎಲ್ಲವನ್ನು ಕಳೆದುಕೊಂಡು ಆತಂಕದೊಂದಿಗೆ ೨೧ನೇ ಶತಮಾನದಲ್ಲೂ ಒಂದ್ಹೊತ್ತಿನ ಊಟಕ್ಕಾಗಿ ಅಲೆಯುತ್ತಿರುವುದು ದುರಂತ.

ಕರ್ನಾಟಕ ರಾಜ್ಯದ ೩೦ನೇ ಹೊಸ ಜಿಲ್ಲೆಯಾದ ಯಾದಗಿರಿಗೆ ಸುರಪುರ, ಶಹಾಪೂರ ಪ್ರಮುಖವಾದವುಗಳು. ಇವು ನೀರಾವರಿಯಿಂದ ಕೂಡಿದ ತಾಲೂಕು ಪ್ರದೇಶಗಳನ್ನು ಹೊಂದಿವೆ. ಈ ಪ್ರದೇಶವು ಮಳೆಯಿಲ್ಲದ ಒಣ ಹವೆಯಿಂದ ಕೂಡಿದೆ. ಮಳೆಯನ್ನೆ ಆಶ್ರಯಿಸಿ ಬದುಕು ಸಾಗಿಸುವ ವಿಶಾಲವಾದ ನಾಡಲ್ಲಿ ಅನೇಕ ಸಮುದಾಯಗಳು ಇರುವುದನ್ನು ಕಾಣುತ್ತೇವೆ. ಅಕ್ಷರ ಲೋಕದಿಂದ ದೂರವಿದ್ದು, ಸ್ವಂತ ವಾಸದ ನೆಲೆಯಿಲ್ಲದೆ ಹಾಗೂ ಆದಾಯದ ಮೂಲವಿಲ್ಲದೆ ಇದೆ ಭಾಗದ

ಜನತೆಯನ್ನು ನಂಬಿಕೊಂಡು ಬದುಕುತ್ತಿರುವ ಅಲೆಮಾರಿ ಸಮುದಾಯಗಳ ಬದುಕನ್ನು ಶೋಧಿಸಿ, ದಾಖಲಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

ಯಾದಗಿರಿ ಜಿಲ್ಲೆಯು ಅನೇಕ ಗ್ರಾಮ ಪ್ರದೇಶ ಮತ್ತು ನಗರ ಪ್ರದೇಶಗಳಲ್ಲಿ ಅಲೆಮಾರಿಗಳು ವಾಸಿಸುತ್ತಿದ್ದಾರೆ. ಈ ಜಿಲ್ಲೆಯ ಅಲೆಮಾರಿಗಳ ಪ್ರಮುಖ ನೆಲೆಯಾದ ಸುರಪುರದ ಹತ್ತಿರ ಶಹಾಪುರದ ಬಸ್ ನಿಲ್ದಾಣದ ಹತ್ತಿರ ಹುಣಸಿಗಿ, ಕೆಂಬಾವಿ ಹತ್ತಿರ ಸೈದಾಪುರ, ಗುರುಮಿಠಕಲ್ ಮುಂತಾದ ಪ್ರದೇಶಗಳಲ್ಲಿ ಅಲೆಮಾರಿಗಳು ವಾಸಿಸಿರುವುದನ್ನು ಪ್ರಸ್ತುತ ಅಧ್ಯಯನದ ವ್ಯಾಪ್ತಿಯೊಳಗೆ ಸೇರಿಸಿಕೊಳ್ಳಲಾಗಿದೆ.

“ಯಾದಗಿರಿ ಜಿಲ್ಲೆಯ ಅಲೆಮಾರಿಗಳ ಸಾಮಾಜಿಕ ಸ್ಥಿತಿಗತಿಗಳು ಒಂದು ಅಧ್ಯಯನ” ಎಂಬ ಪ್ರಬಂಧವು ಕ್ಷೇತ್ರ ಮಾಹಿತಿ ಪೂರಕ ಮಾಹಿತಿ ಗ್ರಂಥಗಳು ನೆರವು, ವಕ್ತೃಗಳ ವಿವರಣೆಯ ಮೂಲಕ ಅಧ್ಯಯನಕ್ಕೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸಿಕೊಳ್ಳುವುದರ ಮೂಲಕ ಈ ಪ್ರಬಂಧವು ರೂಪುಗೊಂಡಿದೆ. ಜೊತೆಗೆ ಈ ಯಾದಗಿರಿ ಜಿಲ್ಲೆಯಲ್ಲಿ ಬರುವ ವಿವಿಧ ಅಲೆಮಾರಿಗಳ ಸಂಘಗಳ ಪದಾಧಿಕಾರಿಗಳ ಮತ್ತು ಹಿರಿಯರು ತಿಳಿಸಿದ ಅಭಿಪ್ರಾಯ ಮತ್ತು ಅನುಭವಗಳನ್ನು ಇದರಲ್ಲಿ ಬಳಸಿಕೊಳ್ಳಲಾಗಿದೆ.

ಮೊದಲನೇ ಅಧ್ಯಾಯನವು ‘ಪ್ರಸ್ತಾವನೆ’ ಎಂಬ ಪೀಠಿಕೆ ಭಾಗದೊಂದಿಗೆ ಪ್ರಾರಂಭಿಸಲಾಗಿದೆ. ಇದರಲ್ಲಿ ಅಧ್ಯಯನದ ಉದ್ದೇಶ ವ್ಯಾಪ್ತಿ, ವಿಧಾನ, ಸ್ವರೂಪ ಮತ್ತು ಅಲೆಮಾರಿಗಳ ಕುರಿತು ಇಲ್ಲಿಯವರೆಗೆ ನಡೆದಿರುವ ಅಧ್ಯಯನಗಳ ಸಂಕ್ಷಿಪ್ತ ಮಾಹಿತಿಯನ್ನು ಕಟ್ಟಿಕೊಡಲಾಗಿದೆ.

ಅಧ್ಯಾಯ ಎರಡರಲ್ಲಿ ಯಾದಗಿರಿಯು ಕರ್ನಾಟಕದ ೩೦ನೇ ಜಿಲ್ಲೆಯಾಗಿ ಗುಲಬರ್ಗಾದಿಂದ ಬೇರ್ಪಟ್ಟ ಹೊಸ ಜಿಲ್ಲಾ ಕೇಂದ್ರದ ಭೌಗೋಳಿಕ ಹಿನ್ನೆಲೆ, ಚಾರಿತ್ರಿಕ ಹಿನ್ನೆಲೆಯೊಂದಿಗೆ ಅಧ್ಯಯನಕ್ಕೆ ಸಂಬಂಧಿಸಿದ ಈ ಜಿಲ್ಲೆಯಲ್ಲಿ ಕಂಡುಬರುವ ಅಲೆಮಾರಿಗಳ ಕುರಿತು ಸ್ಥೂಲ ಪರಿಚಯ ಮಾಡಲಾಗಿದೆ. ಅದರೊಂದಿಗೆ ಅಲೆಮಾರಿಗಳ ಉಪಪಂಗಡಗಳ ಕುರಿತು ಅವರ ಹಿನ್ನೆಲೆಯ ಕುರಿತು ವಿವರವಾದ ವಿವರಣೆಯೊಂದಿಗೆ ‘ಉಪಸಂಹಾರ’ವನ್ನು ಈ ಅಧ್ಯಯನ ಒಳಗೊಂಡಿದೆ.

ಅಧ್ಯಾಯ ಮೂರರಲ್ಲಿ ಅಧ್ಯಯನದ ಅತ್ಯಂತ ಪ್ರಮುಖ ವಿಷಯ ಜಿಲ್ಲೆಯಲ್ಲಿ ಅವರ ಸಾಮಾಜಿಕ ಸ್ಥಿತಿ ಕುರಿತು ಅಂದರೆ ಕುಟುಂಬ, ವಿವಾಹ ಅವರ ಆಚರಣೆಗಳು ಅನುಸರಿಸುವ ಮೂಢನಂಬಿಕೆಗಳು, ಅವರ ಉಡುಗೆ ತೊಡುಗೆಗಳು ಶಿಕ್ಷಣ, ಆರೋಗ್ಯ, ಅಲೆಮಾರಿ ಮಹಿಳೆಯರ ಸ್ಥಾನಮಾನ, ಅಲೆಮಾರಿಗಳಲ್ಲಿ ಇವತ್ತಿಗೂ ಕಂಡುಬರುವ ನ್ಯಾಯ ಪಂಚಾಯಿತಿ, ಅವರು ವಾಸ ಮಾಡುವ ನೆಲೆಗಳು ಕುರಿತು ವಿವಿಧ ಪುಸ್ತಕಗಳ ಅಧ್ಯಯನದಿಂದ ಮತ್ತು ಕ್ಷೇತ್ರಕಾರ್ಯದ ಮಾಹಿತಿ ಯೊಂದಿಗೆ ಈ ಅಧ್ಯಾಯನದಲ್ಲಿ ವಿವರಿಸಲಾಗಿದೆ.

ಅಧ್ಯಾಯ ನಾಲ್ಕರರಲ್ಲಿ ಯಾದಗಿರಿ ಜಿಲ್ಲೆಯಲ್ಲಿ ಕಾಣಬರುವ ಅಲೆಮಾರಿಗಳ ಆರ್ಥಿಕಮಟ್ಟ ಯಾವ ರೀತಿಯಿದೆ, ಅವರು ತಮ್ಮ ಕುಲಕಸಬುಗಳನ್ನು ಹೇಗೆ ಉತ್ಪತ್ತಿಯನ್ನಾಗಿ ಮಾಡಿಕೊಂಡಿದ್ದಾರೆ. ಅವರ ಕರಕುಶಲತೆಗೆ ಈಗ ಯಾವ ರೀತಿಯ ಮಾನ್ಯತೆ ಇದೆ. ಅದರಿಂದ ಅವರ ಆರ್ಥಿಕಮಟ್ಟ ಸುಧಾರಿಸಲು ಸಾಧ್ಯವಾಗಿದೆಯೇ ಅವರ ವ್ಯಾಪಾರ ಸ್ಥಿತಿ ಯಾವ ಮಟ್ಟದಲ್ಲಿದೆ. ಅವರು ಮೊದಲಿನಿಂದಲೂ ಧಾರ್ಮಿಕವಾಗಿ ಅನುಸರಿಸಿಕೊಂಡು ಬಂದ ಭಿಕ್ಷಾಟನೆಯ ಕುರಿತು ಹಲವು ವರ್ಷಗಳಿಂದ ಯಾವುದೇ ನೆಲೆಯನ್ನು ಕಂಡುಕೊಳ್ಳದೆ ಸಂಚಾರಿಗಳಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಹೋಗುವುದಕ್ಕೆ ಯಾವ ಅಂಶಗಳು ಪ್ರಮುಖ. ಏತಕ್ಕಾಗಿ ಅಲೆಯುತ್ತಿದ್ದಾರೆ ಎಂಬ ವಿಷಯವನ್ನು ಈ ಅಧ್ಯಯನವು ಒಳಗೊಂಡಿದೆ.

ಐದನೆಯ ಅಧ್ಯಾಯವು ಅಲೆಮಾರಿಗಳ ಅಭಿವೃದ್ಧಿಯ ಕುರಿತು ವಿಷಯವನ್ನು ಹೇಳಲಾಗಿದೆ. ಅಂದರೆ ಅಲೆಮಾರಿಗಳು ಒಂದೇ ಆಗಿದ್ದರೂ ಕೂಡ ಸರ್ಕಾರಿ ಸೌಲಭ್ಯ ಪಡೆಯುವಲ್ಲಿ ಕೆಲವು ತಾಂತ್ರಿಕ ಕಾರಣಗಳಿರುವುದರಿಂದ ಅಂದರೆ, ಅವರ ಪರ್ಯಾಯ ಪದಗಳ ಗೊಂದಲಗಳ ಕುರಿತು ಡಾ. ಸಿ.ಎಸ್. ದ್ವಾರಕನಾಥ ಪರ್ಯಾಯ ಪದಗಳ ಗೊಂದಲ ನಿವಾರಣೆಯಾಗದ ಹೊರತು ಅವರು ಸರ್ಕಾರದ ಸೌಲಭ್ಯ ಪಡೆಯುವಲ್ಲಿ ತೊಂದರೆಯನ್ನು ಅನುಭವಿಸಲೇ ಬೇಕಾಗುತ್ತದೆ ಎಂಬುದರ ವಿವರವಾದ ಮಾಹಿತಿ, ಅಲೆಮಾರಿಗಳ ಸಬಲೀಕರಣದ ಅವಶ್ಯಕತೆ, ಶಿಕ್ಷಣ, ಮೀಸಲಾತಿ ವ್ಯವಸ್ಥೆ, ಸಾಮಾಜಿಕ ನ್ಯಾಯದ ಜೊತೆಗೆ ಆರೋಗ್ಯ, ಈ ವರ್ತಮಾನದಲ್ಲಿ ಅವರ ಸ್ಥಿತಿ ಏನಾಗಿದೆ. ಅವರು ಎದುರಿಸುತ್ತಿರುವ ಸಮಸ್ಯೆಗಳೇನು, ಅದಕ್ಕೆ ಪರಿಹಾರವೇನು ಮತ್ತು ಇತ್ತೀಚೆಗೆ ಡಾ. ಸಿ.ಎಸ್. ದ್ವಾರಕನಾಥ ಆಯೋಗ ಅಲೆಮಾರಿಗಳಾಗಿ ಶಿಫಾರಸ್ಸು ಮಾಡಿದ ಅಂಶಗಳೇನು, ಜೊತೆಗೆ ಯಾದಗಿರಿ ಜಿಲ್ಲೆಯಲ್ಲಿ ಕ್ಷೇತ್ರಕಾರ್ಯದ ಮೂಲಕ ಕಂಡುಕೊಂಡ ಅಂಶಗಳ ಚಿತ್ರಣವನ್ನು ಈ ಅಧ್ಯಾಯದಲ್ಲಿ ಕಟ್ಟಿಕೊಡಲಾಗಿದೆ.

ಈ ಮೇಲಿನ ಐದು ಅಧ್ಯಾಯಗಳಲ್ಲಿ ಯಾದಗಿರಿ ಜಿಲ್ಲೆಯ ಅಲೆಮಾರಿಗಳ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಅಂಶಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುವುದರೊಂದಿಗೆ ಇಂದಿಗೂ ಅವರು ಬದಲಾವಣೆಯ ಪರಿಧಿಯಲ್ಲಿ ಬರುತ್ತಿದ್ದರೆಯೆ ಅಥವಾ ಅದು ಅವರಿಗೆ ಮರೀಚಿಕೆಯೋ ಎಂಬ ಅಂಶಗಳ ಹಿನ್ನೆಲೆಯಲ್ಲಿ ಈ ಪ್ರಬಂಧವು ವಿಷಯದ ಆಳ ಅರಿವುಗಳನ್ನು ಒಳಗೊಂಡಿದೆ. ಕೇವಲ ನಂಬಿಕೆ, ಆಚರಣೆ, ನ್ಯಾಯ ಪಂಚಾಯಿತಿ ಇಷ್ಟೇ ಸೀಮಿತವಾಗಿದೆ ಆಧುನಿಕ ಯುಗದ ಈ ೨೧ನೇ ಶತಮಾನದಲ್ಲಿಯೂ ಇವರು ಯಾವ ರೀತಿ ಜೀವನ ಸಾಗಿಸುತ್ತಿದ್ದಾರೆ ಎಂಬ ಅಂಶಗಳ ಮೂಲಕ ಯಾದಗಿರಿ ಜಿಲ್ಲೆಯಲ್ಲಿರುವ ಮತ್ತು ಆಗಾಗ ಬಂದು ಹೋಗುವ ಅಲೆಮಾರಿಗಳ ಕುರಿತು ಮಾಹಿತಿಯನ್ನು ಕ್ಷೇತ್ರಕಾರ್ಯದಿಂದ ಪಡೆದುಕೊಂಡು ದಾಖಲಿಸಿಕೊಳ್ಳುವುದರ ಮೂಲಕ ಈ ಮಹಾಪ್ರಬಂಧವು ರೂಪುಗೊಂಡಿರುತ್ತದೆ ಮತ್ತು ಅಲೆಮಾರಿಗಳ ಕುರಿತು ಸ್ಪಷ್ಟವಾದ ಚಿತ್ರಣವು ಅವರ ಸಮಸ್ಯೆಗಳ ಕುರಿತು ವಿವರಣೆ ಇದರಲ್ಲಿದೆ.

ಕೊನೆಯ ಅಧ್ಯಾಯವು ಮಹಾಪ್ರಬಂಧದ 'ಸಮಾರೋಪ' ಎಂಬ ಶೀರ್ಷಿಕೆಯಿಂದ ಕೂಡಿದೆ. ಇದರಲ್ಲಿ ಎಲ್ಲಾ ಅಧ್ಯಾಯಗಳ ಸಾರಾಂಶ ಒಳಗೊಂಡಿದೆ. ಈ ಅಧ್ಯಾಯದಲ್ಲಿ ಅಧ್ಯಯನದ ಫಲಿತಗಳು, ವೃತ್ತ ಪತ್ರಿಕೆಗಳ ವರದಿಗಳ ಮಾಹಿತಿಯನ್ನು ಒಳಗೊಂಡಿದೆ.

ಅನುಬಂಧದಲ್ಲಿ ಗ್ರಂಥಋಣ, ಮಾಹಿತಿದಾರರ ಪಟ್ಟಿ, ಸಮುದಾಯಗಳ ಸಾಂದರ್ಭಿಕ ಛಾಯಚಿತ್ರಗಳನ್ನು ಒಳಗೊಂಡಿದೆ.

೬.೧. ಅಧ್ಯಯನದ ಫಲಿತಗಳು

ಪ್ರಸ್ತುತ ಅಧ್ಯಯನದಿಂದ ಕಂಡುಕೊಂಡ ಫಲಿತಗಳನ್ನು ಹೀಗೆ ಪಟ್ಟಿ ಮಾಡಲಾಗಿದೆ.

೧. ಅಲೆಮಾರಿಗಳು ಇನ್ನು ಸಂಪ್ರದಾಯ ಮತ್ತು ಮೂಢನಂಬಿಕೆಗಳಿಂದ ಹೊರ ಬರುತ್ತಿಲ್ಲ.

೨. ಸರಕಾರಿ ಯೋಜನೆ ಉಪಯೋಗದಲ್ಲಿ ಅಜ್ಞಾನ ಹಾಗೂ ಸಂವಿಧಾನಿಕ ಸವಲತ್ತಗಳ ಕುರಿತು ಸರಿಯಾದ ಮಾಹಿತಿ ಮತ್ತು ಜ್ಞಾನದ ಕೊರತೆ ಇದೆ.

೩. ಅಧ್ಯಯನದಲ್ಲಿ ಜನಪ್ರತಿನಿಧಿಗಳ ನಿರ್ಲಕ್ಷ್ಯ, ಬಲಿಷ್ಠರ ಶೋಷಣೆಗೆ ಒಳಗಾಗಿದ್ದಾರೆ.

೪. ಮೂಲವೃತ್ತಿಗಳಿಗೆ ಪ್ರೋತ್ಸಾಹ ಇಲ್ಲದೇ ಇರುವುದು. ಅಲೆಮಾರಿಗಳು ತಮ್ಮ ಕಲೆಗಳನ್ನು ಮುಂದುವರೆಸಿಕೊಂಡು ಹೋಗಲು ಆಗುತ್ತಿಲ್ಲ.

೫. ಅಲೆಮಾರಿಗಳಲ್ಲಿ ಸಂಘಟನೆ ಕೊರತೆ ಇದೆ.

೬. ಒಂದೇ ಜಾತಿಯವರಿದ್ದರೂ ಸರಕಾರಿ ಸೌಲಭ್ಯದ ಲಭ್ಯತೆ ಇಲ್ಲದಿರುವುದು.

೭. ಒಂದೇ ಕಡೆ ನೆಲೆ ನಿಲ್ಲದಿರುವುದು.

೮. ಅಲೆಮಾರಿ ಸಮುದಾಯಗಳಿಗೆ ಭಿಕ್ಷೆಯು ಹೊಟ್ಟೆ ಹೊರೆಯ ಬಲ್ಲದು ಎಂಬ ಮನೋಭಾವನೆ ಮುಂದುವರಿದಿದೆ.

೯. ವೃತ್ತಿಗಳ ಆಧಾರದ ಮೇಲೆ ಆಯಾ ಸಮುದಾಯಕ್ಕೆ ಅನ್ವಯಗೊಂಡಂತೆ ವಿವಿಧ ಹೆಸರುಗಳಿಂದ ಕರೆಯುತ್ತಾರೆ. ಆ ವೃತ್ತಿ ಹೆಸರುಗಳೇ ಜಾತಿ ಎಂಬಂತೆ ಬಿಂಬಿತವಾಗುತ್ತಿವೆ.

೧೦. ದೈವಭಕ್ತಿ ಅಪಾರವಾಗಿ ನೆಲೆಯೂರಿದೆ.

೧೧. ಭಿಕ್ಷೆಗಾಗಿ ಅಂತರ ಜಿಲ್ಲೆ ಮತ್ತು ಅಂತರ ರಾಜ್ಯದಲ್ಲಿ ವಲಸೆ ಹೋಗುವರು.

೧೨. ಅಲೆಮಾರಿಗಳು ಗ್ರಾಮದ ಕೊನೆಯ ಭಾಗ, ಶಾಲೆ, ಸ್ಮಶಾನ, ಹಳ್ಳಕೊಳ್ಳ, ಕಾಡು, ಕೋಟೆ-ಕೊತ್ತಲುಗಳು, ರೈಲ್ವೆ ನಿಲ್ದಾಣಗಳು, ಬಸ್ಸುನಿಲ್ದಾಣಗಳು, ಕೊಳಚೆ ಪ್ರದೇಶ, ಸಂತೆಮೈದಾನ, ಸರ್ಕಾರಿ ಕಟ್ಟಡ, ಸ್ಥಗಿತಗೊಂಡ ವಾಹನ, ಸರ್ಕಾರಿ ಕಛೇರಿಗಳ ಬಳಿ ಗುಡಾರ ಮತ್ತು ಗುಡಿಸಲುಗಳನ್ನು ನಿರ್ಮಿಸಿಕೊಂಡು ಜೀವಿಸುತ್ತಿದ್ದಾರೆ.

೧೩. ಉಡುಪುಗಳಲ್ಲಿ ಸುಧಾರಣೆಯಾಗುತ್ತಿದೆ.

೧೪. ಕುಲ ಪಂಚಾಯತಿಗಳ ಮೂಲಕ ವ್ಯಾಜ್ಯ ಮತ್ತು ಇತರೆ ಎಲ್ಲ ಕಾರ್ಯಗಳು ನಡೆಯುತ್ತಿದ್ದರೂ ಇತ್ತೀಚಿಗೆ ಬದಲಾವಣೆ ಆಗಿವೆ.

೧೫. ಬಹಳಷ್ಟು ಅಲೆಮಾರಿಗಳಿಗೆ ಶಾಶ್ವತ ನೆಲೆ ಇಲ್ಲ. ಅಲ್ಲಲ್ಲಿ ನೆಲೆನಿಲ್ಲುತ್ತಿದ್ದಾರೆ.

೧೬. ಗಿಡಮೂಲಿಕೆ ವೈದ್ಯ ಪದ್ಧತಿಯು ವಂಶಪರಂಪಾರಿಕವಾಗಿ ಬೆಳೆದು ಬಂದಿದೆ ಮತ್ತು ಅದನ್ನು ನಂಬಿಕೊಂಡಿದ್ದಾರೆ ಮತ್ತು ಕೆಲವು ಬದಲಾವಣೆ ಕಂಡುಕೊಂಡಿದ್ದಾರೆ.

೧೭. ಕುಲಕಸುಬಿನ ಜೊತೆಯಲ್ಲಿ ಕೂಲಿ, ರೀಪೇರಿ ಕೆಲಸ ಇತ್ಯಾದಿಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ.

೧೮. ವ್ಯಾಪಾರ ಪ್ರಮುಖ ವೃತ್ತಿಯಾಗಿದ್ದು, ವಿವಿಧ ಬಗೆಯ ವಸ್ತುಗಳನ್ನು ಅಂತರ ರಾಜ್ಯಕ್ಕೂ ವಲಸೆ ಹೋಗಿ ವ್ಯಾಪಾರಗಳನ್ನು ಮಾಡುತ್ತಾರೆ. ಉದಾಹರಣೆಗೆ ಪ್ಲಾಸ್ಟಿಕ್ ಕೊಡಗಳನ್ನು ಮಾಡುವುದು ಮತ್ತು ಮಾರುವುದು.

೧೯. ಕರಕುಶಲ ಕಲೆ ಜೀವಂತವಾಗಿದ್ದು ಅದರ ಮೂಲಕ ವಿವಿಧ ವಸ್ತು ತಯಾರಿಸುತ್ತಾರೆ. ಆದರೆ ಇವುಗಳಿಗೆ ಈಗ ಬೆಲೆ ಕಡಿಮೆಯಾಗಿದೆ. ಉತ್ಪಾದಿಸುವ ವಸ್ತುಗಳಿಗೆ ಮಾರುಕಟ್ಟೆ ವ್ಯವಸ್ಥೆ ಇಲ್ಲದೆ ಅವರ ಬದುಕು ಬೀದಿ ಪಾಲಾಗಿದೆ.

೨೦. ಇತ್ತೀಚೆಗೆ ಹುಟ್ಟಿದ ಮಕ್ಕಳಿಗೆ ಸಮಯ ಸಂದರ್ಭ ಕಾಲಮಾನ ಮತ್ತು ಚಲನಚಿತ್ರದ ನಾಯಕ/ನಾಯಕಿಯರ ಹೆಸರನ್ನು ನಾಮಕರಣ ಮಾಡುತ್ತಾರೆ.

೨೧. ಪ್ರಮುಖ ಹಬ್ಬಗಳಲ್ಲಿ 'ಬಲಿ' ಆಚರಣೆಗಳು ಚಾಲ್ತಿಯಲ್ಲಿದೆ.

೨೨. ಅಲೆಮಾರಿಗಳಿಗೆ ಮೂಲಭೂತ ಸಮಸ್ಯೆಗಳಿವೆ.

೨೩. ಕೂಡಿಕೆ ಮತ್ತು ವಿಧವಾ ವಿವಾಹ ವಧುದಕ್ಷಿಣೆ ಚಾಲ್ತಿಯಲ್ಲಿದೆ. ಆದರೆ ಕೆಲವು ವಧುದಕ್ಷಿಣೆಗೆ ಅಸ್ಪದ ನೀಡುತ್ತಿದ್ದಾರೆ.

೨೪. ಸ್ತ್ರೀ-ಪುರುಷರಿಬ್ಬರು ಸಮಾನತೆಯಿಂದ ದುಡಿಯುವರು.

೨೫. ಅಕ್ಷರ ಲೋಕದಿಂದ ದೂರವಿದ್ದಾರೆ.

೨೬. ಪ್ರಾಣಿ-ಪಕ್ಷಿಗಳು ಕುಟುಂಬದಲ್ಲಿ ಆದಾಯ ತರುವಂತ ಮೂಲಗಳಾಗಿವೆ.

೨೭. ಉತ್ಪಾದಿಸಿದ ವಸ್ತುವಿನ ಸಾಗಾಣಿಕೆ, ಕಚ್ಚಾವಸ್ತು ಸಾಗಾಣಿಕೆ ಮಾರಾಟಕ್ಕಾಗಿ ಸಾಗಾಣಿಕೆಗಾಗಿ ಕಾಲು ನಡಿಗೆಯೆ ಅನಿವಾರ್ಯವಾಗಿದೆ. ಈಗ ಸಾರಿಗೆ ಸಂಪರ್ಕ ಲಭ್ಯವಿರುವುದರಿಂದ ಅದನ್ನು ಅವಲಂಬಿಸಿದ್ದಾರೆ.

೨೮. ಪ್ರದರ್ಶನ ಕಲೆಗಳಿಗೆ ಬೇಡಿಕೆ ಕಡಿಮೆಯಿದೆ. ಸಂಪ್ರದಾಯಿಕ ಕಲೆಗಳು ಅಳಿವಿನಂಚಿನಲ್ಲಿವೆ.

೨೯. ತಮ್ಮ ವಸ್ತುಗಳ ಸಾಗಾಣಿಕೆಗೆ ಇತ್ತೀಚೆಗೆ ದ್ವಿಚಕ್ರ ವಾಹನಗಳ ಬಳಕೆ ಮಾಡಿ ಕೊಳ್ಳುತ್ತಿದ್ದಾರೆ.

೩೦. ಯಾದಗಿರಿಯಲ್ಲಿ ಅಂಜನಪ್ಪ ಎನ್ನುವ ಅಲೆಮಾರಿ ಯುವಕ ಪ್ಲಾಸ್ಟಿಕ್ ಕೊಡಗಳ ತಯಾರಿಕೆ ಕಾರ್ಖಾನೆ ಹಾಕಿದ್ದಾರೆ. ಇದರಲ್ಲಿ ಅನೇಕ ಅಲೆಮಾರಿಗಳು ಸ್ವಂತ ಉದ್ಯೋಗ ಪಡೆಯಲು ಸಹಾಯಕವಾಗಿದೆ.

೬.೨. ಪರಿಹಾರೋಪಾಯಗಳು

ಯಾದಗಿರಿ ಜಿಲ್ಲೆಯ ಅಲೆಮಾರಿಗಳ ಸಾಮಾಜಿಕ ಸ್ಥಿತಿಗತಿಗಳು ಅಧ್ಯಯನದ ಹಿನ್ನೆಲೆಯಲ್ಲಿ ಈ ಸಮುದಾಯ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿರುವುದನ್ನು ಗುರುತಿಸಲಾಗಿದೆ. ಸಮಸ್ಯೆಗಳ ಪರಿಹಾರಕ್ಕಾಗಿ ಈ ಕೆಳಗಿನ ಸೂಕ್ತ ಸಲಹೆಗಳನ್ನು ನೀಡಲಾಗಿದೆ. ಸಮಾಜ, ಸರ್ಕಾರ, ಸಂಘ-ಸಂಸ್ಥೆಗಳು ಈ ಕುರಿತು ಗಂಭೀರವಾಗಿ ಚಿಂತಿಸಿ, ಸಹಾಯ ಹಸ್ತ ನೀಡಬೇಕಾದ ಅವಶ್ಯಕತೆ ಇದೆ.

- ಯಾದಗಿರಿ ಜಿಲ್ಲೆಯ ಅಲೆಮಾರಿಗಳು ಶಹಾಪುರ, ಸುರಪುರ ಮತ್ತು ಯಾದಗಿರಿಯ ಬಹುತೇಕ ಪ್ರದೇಶಗಳಲ್ಲಿ ಗುಡಾರ, ಗುಡಿಸಲುಗಳಲ್ಲಿ ವಾಸಿಸುತ್ತಿದ್ದಾರೆ. ಅವರಿಗೆ ಸರ್ಕಾರದ ವತಿಯಿಂದ ಸಂಪೂರ್ಣವಾಗಿ ವಸತಿ ಸೌಕರ್ಯಗಳನ್ನು ಕಲ್ಪಿಸುವುದು.
- ಇವರು ವಾಸಿಸುವ ಸ್ಥಳಗಳು ಕತ್ತಲೆ ಪ್ರದೇಶಗಳಾಗಿರುವುದರಿಂದ ಅಲ್ಲಿ ಬೀದಿ ದೀಪಗಳ ವ್ಯವಸ್ಥೆ ಮಾಡುವುದು. ಇದಕ್ಕೂ ಮೊದಲು ಅವರಿಗೆ ಶಾಶ್ವತ ನೆಲೆಯನ್ನು ಒದಗಿಸುವ ಜರೂರು ಇದೆ.
- ಅಂತ್ಯೋದಯ ಪಡಿತರ ಚೀಟಿ ಪ್ರತಿಯೊಂದು ಕುಟುಂಬಗಳಿಗೂ ದೊರಕುವಂತೆ ಮಡುವುದು.
- ಮತದಾನಕ್ಕಾಗಿ ಎಲ್ಲ ಸಮುದಾಯಗಳ ಅಲೆಮಾರಿಗಳಿಗೆ ಮತದಾನದ ಗುರುತಿನ ಚೀಟಿ ಒದಗಿಸುವುದು.
- ಅಲೆಮಾರಿಗಳು ವಾಸಿಸುವ ಪ್ರದೇಶಗಳಲ್ಲಿ ಸರ್ಕಾರ ತುರ್ತಾಗಿ ನಿವೇಶನಗಳನ್ನು ನೀಡಿ ಆಶ್ರಯ ಯೋಜನೆಗಳಲ್ಲಿ ಮನೆಗಳನ್ನು ನಿರ್ಮಿಸಿ ಕೊಡುವುದು.
- ಇತ್ತೀಚಿನ ದಿನಗಳಲ್ಲಿ ಅಲೆಮಾರಿಗಳು ಕೃಷಿಯೇತರ ಕೂಲಿಗಾಗಿ ಕೆಲಸ ಮಾಡಲಿಕ್ಕೆ ಹೋಗುತ್ತಿದ್ದಾರೆ. ಆದಕಾರಣ ಈ ಅಲೆಮಾರಿ ಸಮುದಾಯಕ್ಕೆ ಸರ್ಕಾರವು ವ್ಯವಸಾಯಕ್ಕಾಗಿ ಭೂಮಿಯನ್ನು ಒದಗಿಸುವುದು.
- ಅಲೆಮಾರಿ ಯುವಕರು ಇತ್ತೀಚಿಗೆ ಇವರು ಪ್ಲಾಸ್ಟಿಕ್ ಕೊಡಪಾನ ಮೊದಲಾದ ವ್ಯಾಪಾರ ಮಾಡುತ್ತಿದ್ದು ಇಂತಹ ಕಸುಬುಗಳಿಗೆ ಬಂಡವಾಳದ ಅವಶ್ಯಕತೆ ಇದೆ. ಅದಕ್ಕಾಗಿ ಸರಕಾರ ಸಾಲ ಸೌಲಭ್ಯವನ್ನು ಕಲ್ಪಿಸುವುದು.

- ಸಮ ಪ್ರಮಾಣದಲ್ಲಿ ಕೂಲಿ ಮತ್ತು ಊಟದ ವ್ಯವಸ್ಥೆಯನ್ನು ಕಲ್ಪಿಸಿಕೊಡುವುದು.
- ಶಿಕ್ಷಣದಲ್ಲಿ ಪ್ರಗತಿಸಾಧಿಸಿದ ಅಲೆಮಾರಿ ಮಕ್ಕಳಿಗೆ ಸರಕಾರಿ ಯೋಜನೆ ಅಡಿಯಲ್ಲಿ ಕಾರ್ಖಾನೆ ಮತ್ತು ಸರ್ಕಾರಿ ಕಛೇರಿಗಳಲ್ಲಿ ಉದ್ಯೋಗ ಕಲ್ಪಿಸುವುದು.
- ಸ್ವಯಂ ಸೇವಾ ಸಂಸ್ಥೆಗಳು ಸರಕಾರ ಮತ್ತು ಸಮುದಾಯಗಳ ನಡುವೆ ಕೊಂಡಿಯಾಗಿ ಸರಕಾರದ ಯೋಜನೆಗಳನ್ನು ಕಾರ್ಯಗತಗೊಳಿಸಲು ಮುಂದಾಗುವುದು
- ಅಲೆಮಾರಿಗಳು ವಾಸಿಸುವ ಕಡೆಗಳಲ್ಲಿ ಅಲ್ಲಿನ ಶಾಸಕರು ಮತ್ತು ಲೋಕಸಭೆ ಸದಸ್ಯರು ತಿಂಗಳಿ ಗೊಮ್ಮೆ ಭೇಟಿನೀಡಿ ಅವರ ಕುಂದುಕೊರತೆಗಳ ಬಗ್ಗೆ ವಿಚಾರಣೆ ಮಾಡಲು ಮುಂದಾಗುವುದು.
- ಅಲೆಮಾರಿ ಪರ್ಯಾಯ ಪದದ ಗೊಂದಲ ನಿವಾರಣೆ ಮಾಡುವುದು.
- ಅಲೆಮಾರಿಗಳು ವಾಸಿಸುವ ಸ್ಥಳಗಳಲ್ಲಿ ಗುಡಿ ಕೈಗಾರಿಕೆಗಳ ತರಬೇತಿಯನ್ನು ನೀಡುವುದು.
- ಮಹಿಳೆಯರನ್ನು ಸ್ವ-ಸಹಾಯ ಗುಂಪಿನಲ್ಲಿ ಸೇರುವಂತೆ ಪ್ರೇರೇಪಣೆ ಮಾಡಿ, ಅವರಿಗೆ ಅನೇಕ ಬಗೆಯ ಪುಸ್ತಕಗಳನ್ನು ಪರಿಚಯಿಸಿ ಮಾಹಿತಿ ಒದಗಿಸುವುದು ಮತ್ತು ಪ್ರೋತ್ಸಾಹಿಸುವುದು.
- ವ್ಯಾಪಾರದಲ್ಲಿ ನಿರತ ಪುರುಷ ಮತ್ತು ಮಹಿಳೆಯರಿಗೆ ಐ.ಆರ್.ಡಿ.ಪಿ. ಯೋಜನೆಯ ವಿಶೇಷ ಸಾಲ ಸೌಲಭ್ಯಗಳನ್ನು ಬ್ಯಾಂಕ್‌ಗಳಿಂದ ದೊರೆಯುವಂತೆ ಮಾಡಿ, ಉಳಿತಾಯ ಮನೋಭಾವನೆ ಬೆಳಸುವುದು.
- ಅಲೆಮಾರಿಗಳ ನಿರ್ಲಕ್ಷಿತ ವೃದ್ಧರಿಗೆ, ಅಂಗವಿಕಲರಿಗೆ ಮತ್ತು ವಿಧವೆಯರಿಗೆ ಮಾಸಿಕ ವೇತನ ಕಲ್ಪಿಸುವುದು.
- ಹಲವೆಡೆ ಬೇರೆ ಸಮುದಾಯದ ಬಲಿಷ್ಠರು ಅಲೆಮಾರಿ ಬುಡ್ಗಜಂಗಮ ಹೆಸರಿನಲ್ಲಿ ಬೇಡ ಜಂಗಮ ಎಂದು ಜಾತಿ ಪ್ರಮಾಣ ಪತ್ರ ಪಡೆಯುವುದನ್ನು ನಿಲ್ಲಿಸಬೇಕಾಗಿದೆ.
- ಅಲೆಮಾರಿ ವೃದ್ಧರಿಗೆ ಮಾಸಿಕ ನಿರ್ವಹಣೆ ಭತ್ಯೆ ದೊರಕಿಸಿಕೊಡಬೇಕಾಗಿದೆ.
- ಸ್ವಯಂ ಉದ್ಯೋಗಕ್ಕೆ ಉತ್ತೇಜನ ನೀಡಿ ಒಂದೇ ಸ್ಥಳದಲ್ಲಿ ನಿಲ್ಲುವಂತೆ ಮಾಡುವ ಅವಶ್ಯಕತೆ ಇದೆ.
- ಯಾದಗಿರಿ ಜಿಲ್ಲೆಯ ಅಲೆಮಾರಿಗಳಿಗೆ ಸಾಮಾಜಿಕ ಸ್ಥಾನಮಾನ ಕೆಳಮಟ್ಟದ್ದಾಗಿದೆ.
- ಆರ್ಥಿಕ ಮತ್ತು ಸಾಮಾಜಿಕ ಭದ್ರತೆಯ ಕಾರ್ಯವಾಗಬೇಕಿದೆ.
- ಅಲೆಮಾರಿಗಳ ಸ್ವಾಭಿಮಾನ ಬದುಕನ್ನು ಪ್ರೋತ್ಸಾಹಿಸಬೇಕಾಗಿದೆ.
- ಬಿಕ್ಷಾಟನೆ ಮಾಡುವುದು ಇನ್ನೂ ಇದೆ.

- ಉಚಿತ ವೈದ್ಯಕೀಯ ಸೌಲಭ್ಯಗಳನ್ನು ಸರಿಯಾಗಿ ಪಡೆಯುತ್ತಿಲ್ಲ.
- ರಾಜಕೀಯದಲ್ಲಿ ಪ್ರಾತಿನಿಧ್ಯ ಅತ್ಯಂತ ಕಡಿಮೆ ಅಥವಾ ಇಲ್ಲವೆಂದೇ ಹೇಳಬಹುದು.
- ಸಾಮಾಜಿಕ ಮುಖ್ಯವಾಹಿನಿಗೆ ಬರಲು ಪ್ರೋತ್ಸಾಹಿಸಬೇಕಾಗಿದೆ.
- ಸಂಸ್ಕೃತಿಕ ಮತ್ತು ಉನ್ನತ ಮಟ್ಟದ ಜೀವನವನ್ನು ತಲುಪಲು ಆಗಿಲ್ಲ.

ಮುಂದಿನ ಅಧ್ಯಯನದ ಸಾಧ್ಯತೆಗಳು

ಅಲೆಮಾರಿಗಳ ಸಂಸ್ಕೃತಿ ಮರೆಮಾಚುವ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಸಂಶೋಧಕರು, ಅಧ್ಯಯನಕಾರರು, ಇಂತಹ ಸಮುದಾಯದ ಬಗ್ಗೆ, ಸಾಮಾಜಿಕ, ಆರ್ಥಿಕ, ರಾಜಕೀಯ, ಮಹಿಳಾ ಮತ್ತು ಮಾನವಶಾಸ್ತ್ರೀಯ ದೃಷ್ಟಿಕೋನಗಳಲ್ಲಿ ಅಧ್ಯಯನ ಮಾಡಬಹುದಾಗಿದೆ.

ಕರ್ನಾಟಕದ ಉದ್ದಗಲಕ್ಕೂ ಹರಡಿಕೊಂಡಿರುವ ಅಲೆಮಾರಿ ಸಮುದಾಯಗಳ ಕುರಿತು ಅಧ್ಯಯನ ಮಾಡುವವರಿಗೆ ಪ್ರಸ್ತುತ ಈ ಮಹಾಪ್ರಬಂಧ ಮಾರ್ಗಸೂಚಿಯಾಗಬಹುದು. ಒಟ್ಟಿನಲ್ಲಿ **ಯಾದಗಿರಿ ಜಿಲ್ಲೆಯ ಅಲೆಮಾರಿಗಳ ಸಾಮಾಜಿಕ ಸ್ಥಿತಿಗತಿಗಳು–ಒಂದು ಅಧ್ಯಯನ** ಎಂಬ ಈ ವಿಷಯದ ನಿಬಂಧ ಅಲೆಮಾರಿ ಸಮುದಾಯದ ವಿವಿಧ ಅಂಶಗಳ ಕುರಿತು ಮಾಹಿತಿ ದೊರಕಿಸಿಕೊಡಬಲ್ಲ ಒಂದು ಪ್ರಾಮಾಣಿಕ ಪ್ರಯತ್ನವಾಗಿದೆ. ಆದಾಗ್ಯೂ ಗಮನಕ್ಕೆ ಬರದೆ ಇರುವ ಸಂಶೋಧನಾಂಶಗಳು ಉಳಿದಿರುವ ಸಾಧ್ಯತೆಗಳಿವೆ. ಆಸಕ್ತಿ ಇರುವ ಅಧ್ಯಯನಕಾರರು ಆ ಬಗೆಗೆ ಹೆಚ್ಚಿನ ಅಧ್ಯಯನವನ್ನು ಮಾಡಬಹುದಾಗಿದೆ.

ಅನುಬಂಧಗಳು

೧. ಪರಾಮರ್ಶನ ಗ್ರಂಥಗಳು

೨. ಪ್ರಮುಖ ಮಾಹಿತಿದಾರರು

೩. ಸಮೀಕ್ಷಾ ನೆಲೆಗಳ ನಕ್ಷೆ

೪. ಸಮೀಕ್ಷಾ ಪ್ರಶ್ನಾವಳಿ ಮಾದರಿ

೫. ಕ್ಷೇತ್ರಕಾರ್ಯ ಕೈಗೊಂಡ ಅಂಕಿ-ಅಂಶಗಳ ಪಟ್ಟಿ

೬. ಪತ್ರಿಕಾ ವರದಿಗಳು

೭ ಛಾಯಾಚಿತ್ರಗಳು

ಪರಾಮರ್ಶನ ಗ್ರಂಥಗಳು

ಅಕ್ಕಮಹಾದೇವಿ, ಬುಡಕಟ್ಟು ನ್ಯಾಯ, ಕವಿಶೈಲಿ ಮುದ್ರಣಾಲಯ, ಮೈಸೂರು

ಅಶೋಕ ಕುಮಾರ, ರಂಜೇರೆ., ವಿವಿಧ ವೃತ್ತಿ ಪದಕೋಶ, ೨೦೦೦, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

ಅಂಜಿನಪ್ಪ ಯಳನಾಡು, ಹಗಲು ವೇಷದವರ ಸಂಸ್ಕೃತಿ, ೧೯೯೩, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಅಂಗಡಿ, ಎಸ್ ಎಸ್., ಸಂಕೀರ್ಣ ವೃತ್ತಿ ಪದಕೋಶ, ೨೦೦೦, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

ಅಮರೇಶ ನುಗುಡೋಣಿ, ಹೈದ್ರಾಬಾದ್ ಕರ್ನಾಟಕದ ಹಾಡು ಪಾಡು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಉಮಾಪತಿ ಬಿ.ಎ., ಪರಿಶಿಷ್ಟ ಬುಡಕಟ್ಟುಗಳು, ಜಾತಿಗಳು, ೧೯೭೯, (ಪ್ರಸಂ.) ಹಾ.ಮಾ.ನಾಯಕ, ಕರ್ನಾಟಕ ಕನ್ನಡ ವಿಶ್ವಕೋಶ, ಮೈಸೂರು, ಕನ್ನಡ ಅಧ್ಯಯನ ಸಂಸ್ಥೆ.

ಉಷಾ ಎಂ., ಮಹಿಳೆ ಮತ್ತು ಜಾತಿ, ೨೦೦೫, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಎಲ್ಲಪ್ಪ ಕೆ.ಕೆ., ದೊಕ್ಕಲು ಮಕ್ಕಳು ಒಂದು ಅಧ್ಯಯನ, ೧೯೯೯, ಶ್ರೀದುರ್ಗಾ ಪ್ರಕಾಶನ, ರಾಂಪುರ

ಕನ್ನಡ ಜಾನಪದ ವಿಶ್ವಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕರೀಗೌಡ ಬೀಚನಹಳ್ಳಿ, ಕರಕುಶಲ ಕಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕಾಳೇಗೌಡ ನಾಗವಾರ್, ಹುಚ್ಚಪ್ಪ ಮಾಸ್ತರ ಎನ್. (ಸಂ), ಗಿರಿಜನ ಸಂಸ್ಕೃತಿ, ೨೦೦೦, ಕನ್ನಡ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

ಕೃಷ್ಣಮೂರ್ತಿ ಹನೂರು, ಮ್ಯಾಸ ಬೇಡರ ಸಂಸ್ಕೃತಿ, ೧೯೯೭, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಖಂಡೋಬಾ ಪಿ.ಕೆ., ಕರ್ನಾಟಕ ಲಂಬಾಣಿಗಳು ಒಂದು ಸಾಂಸ್ಕೃತಿಕ ಅಧ್ಯಯನ, ೧೯೯೧, ಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ತೇಜ್‌ಸಿಂಗ್ ರಾಠೋಡ ಮೆಮೊರಿಯಲ್ ಟ್ರಸ್ಟ್, ಗುಲಬರ್ಗಾ.

ಖಂಡೋಬಾ ಪಿ.ಕೆ., ಗಿರಿಜನ ಸಿರಿ, ಸ್ನೇಹಾ ಪ್ರಿಂಟರ್ಸ್, ಬೆಂಗಳೂರು.

ಗೀತಾನಾಗಭೂಷಣ, ದುರುಗಿ ಮುರುಗಿಯರ ಸಂಸ್ಕೃತಿ, ೧೯೯೩, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಗೋವಿಂದರಾಜು ಟಿ., ಗೊಂಬೆರಾಮರ ಸಂಸ್ಕೃತಿ, ೧೯೯೩, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಚಂದ್ರಶೇಖರ, ಬಿ.ಎಸ್., *ಸಮಾಜ ವಿಜ್ಞಾನಗಳಲ್ಲಿ ಸಂಶೋಧನಾ ವಿಧಾನಗಳು*, ೨೦೦೧, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

ಚಂದ್ರಶೇಖರ ಟಿ.ಆರ್., ಅಭಿವೃದ್ಧಿ ಮೀಮಾಂಸೆ, ೧೯೯೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಂದ್ರಶೇಖರ ಟಿ.ಆರ್. ಅಮರ್ತ್ಯಸೇನರ ಅಭಿವೃದ್ಧಿ ಕಥನಾ.

ಚಂದ್ರಶೇಖರ ಟಿ.ಆರ್., ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ, ೨೦೦೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚನ್ನಣ್ಣವಾಲೀಕರ, ಸಮಗ್ರ ಜಾನಪದ, ಸಂಪ್ರಬಂಧ ಸಂಪುಟ, ದಲಿತ ಬಂಡಾಯ ಸಾಹಿತ್ಯ ಪ್ರಕಾಶನ, ಸೇಡಂ.

ಚಿಕ್ಕೇರಿ ಶಿವಶಂಕರ, ಗೊರವರ ಸಂಸ್ಕೃತಿ, ೧೯೯೩, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಚೆಲುವರಾಜು, ದೊಕ್ಕಲರ ಸಂಸ್ಕೃತಿ, ೧೯೯೯, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಜಗದೀಶ ವಿ., ಮಾನವಶಾಸ್ತ್ರ, ೨೦೦೫, ಸಿ.ವಿ.ಜಿ. ಪಬ್ಲಿಕೇಶನ್, ಬೆಂಗಳೂರು.

ಜ್ಯೋತ್ಸ್ನಾ ಕಾಮತ್, ಮಹಿಳೆ: ಒಂದು ಅಧ್ಯಯನ, ೧೯೯೯, ನವಕರ್ನಾಟಕ ಪಬ್ಲಿಕೇಶನ್, ಬೆಂಗಳೂರು.

ತಪಸ್ವೀಕುಮಾರ ನಂ. ಸಂಸ್ಕೃತಿಕ ವಿಕಾಸ, ೧೯೯೫, ಸಂಸ್ಕೃತಿ ಭಾರತಿ ಪ್ರಕಾಶನ, ಮೈಸೂರು

ದೀಪಿಕಾ, ಮೀನುಗಾರಿಕೆ, ೧೯೮೫, ಬೆಂಗಳೂರು.

ದೇವೇಂದ್ರಕುಮಾರ ಸಿ. ಹಕಾರಿ, ದೊಂಬರ ಸಂಸ್ಕೃತಿ, ೧೯೯೦, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ದೈವಜ್ಞ, ಗಂಗಾಧರ., *ಬುಡಕಟ್ಟು ಸಮಾಜ ಹುಟ್ಟು-ಸಾವಿನ ನಡುವೆ*, ೨೦೦೦, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

ದೊಡ್ಡನ ಪಾಟೀಲ, ಭೌತಿಕ ಮೂಲಭೂತ ಸೌಕರ್ಯ ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮಾನತೆ, (ಹೈದ್ರಾಬಾದ್ ಕರ್ನಾಟಕ ಅನುಲಕ್ಷಿಸಿ), ೨೦೦೨, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ನಿರುಪಮಾ., *ಸಂಶೋಧನಾ ವಿಧಾನಗಳು*, ೨೦೦೨, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.

ನಂಜಣ್ಣವರ್ ಎಸ್.ಎನ್., ಮಾನವ ಭೂಗೋಳ ಶಾಸ್ತ್ರ, ೧೯೯೩, ವಿಜಯ್ ಬುಕ್ ಡಿಪೋ, ಗದಗ.

ನಿಂಗಣ್ಣ ಸಣ್ಣಕ್ಕಿ, ಬುಡುಬುಡಕೆಯವರು, ೧೯೮೦, ಐಬಿಎಚ್ ಪ್ರಕಾಶನ, ಬೆಂಗಳೂರು.

ಪ್ರಭಾಕರ ಎ.ಎಸ್., ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ೨೦೦೦, ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

ಪ್ರೇಮಾ ಲಿಂಗರಾಮಾರ, ಯೋಜನೆ ಮತ್ತು ಬಡತನ ನಿವಾರಣೆ, ೧೯೯೯, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

ಪೋತೆ ಎಚ್.ಟಿ., ಹೈದ್ರಾಬಾದ್ ಕರ್ನಾಟಕದ ಜನಪದ ಪ್ರದರ್ಶನ ಕಲೆಗಳು, ೨೦೦೦, ಅಂಬು ಪ್ರಕಾಶನ, ರಾಯಚೂರು.

ಬಾಲಗುರುಮೂರ್ತಿ (ಸಂ.) ಕರ್ನಾಟಕ ರಾಜ್ಯ ಅಲೆಮಾರಿ ಅರೆ ಅಲೆಮಾರಿ ಸಮುದಾಯಗಳ ಪಾರ್ಶ್ವನೋಟ, ೨೦೦೫, ಕರ್ನಾಟಕ ರಾಜ್ಯ ಅಲೆಮಾರಿ ಅರೆ ಅಲೆಮಾರಿಗಳ ಒಕ್ಕೂಟ, ಬೆಂಗಳೂರು.

ಬೆನಕನಹಳಿ ಜಿ. ನಾಯಕ್, ಕರ್ನಾಟಕ ಕಲೆಗಳು, ಸಂಪುಟ-೩, ೧೯೮೬, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಬೋರಲಿಂಗಯ್ಯ ಹಿ.ಚಿ., ಪ್ರಭಾಕರ ಎ.ಎಸ್., ಬುಡಕಟ್ಟು ಅಧ್ಯಯನ, ೨೦೦೫, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಬೋರಲಿಂಗಯ್ಯ ಹಿ.ಚಿ., ಸಿದ್ಧಿಯರ ಸಂಸ್ಕೃತಿ, ೧೯೯೦, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಬೋರಲಿಂಗಯ್ಯ ಹಿ.ಚಿ., ಕರ್ನಾಟಕದ ಜಾನಪದ ಕಲೆ ಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಲ್ಲಿನಾಥಯ್ಯ (ಅನು), ಸಮಾಜಶಾಸ್ತ್ರದ ಕೈಪಿಡಿ, ೧೯೮೫, ಮೈಸೂರು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಮಹೇಶ, ಮೀಸಲಾತಿ ಮತ್ತು ಭವಿಷ್ಯದ ಪಥಗಳು, ೨೦೦೩, ವಿಮೋಚನಾ ಪ್ರಕಾಶನ, ಚಿತ್ರದುರ್ಗ

ಮೆಹಬೂಬ ಉಲ್ ಹಕ್, ಅಪ್ಲಿಕೇಷನ್ ಆನ್ ಹ್ಯೂಮನ್ ಡೆವಲೆಪಮೆಂಟ್, ೧೯೯೬, ಆಕ್ಸ್‌ಫರ್ಡ್ ಯುನಿವರ್‌ಸಿಟಿ ಪ್ರೆಸ್

ಮೊಗಳ್ಳಿ ಗಣೇಶ್, ದಲಿತ ಕಥನಾ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರಾಘು ಕೆ., ಭಾರತದಲ್ಲಿ ಶಿಕ್ಷಣ ಮತ್ತು ಸಮಾಜ, ೧೯೯೯, ಚೆಲುವ ಬುಕ್‌ಹೌಸ್, ಮೈಸೂರು.

ರಾಜಶೇಖರಯ್ಯ ಎ.ಎ., (ಸಂ.) ಅಂಬೇಡ್ಕರ ಬರಹಗಳು ಮತ್ತು ಭಾಷಣಗಳು, ೧೯೯೮, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ರಾಮಚಂದ್ರಪ್ಪ ಬರಗೂರು, ಸಂಸ್ಕೃತಿ ಮತ್ತು ಸೃಜನಶೀಲತೆ, ೧೯೯೧, ಜಯಸಿಂಹ ಪ್ರಕಾಶನ, ಬೆಂಗಳೂರು.

ರಾಮಣ್ಣ ಕ್ಯಾತನಹಳ್ಳಿ, ಗೊಂದಲಿಗರು: ಒಂದು ಅಧ್ಯಯನ, ೧೯೦೦, ಕನ್ನಡ ಅಧ್ಯಯನ ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ರಾವ್ ಎಂ.ವಿ., ಮಾರಾಟದ ಕಾರ್ಯಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಲಕ್ಕಪ್ಪಗೌಡ ಎಚ್.ಜೆ., (ಪ್ರಸಂ.) ಕರ್ನಾಟಕದ ಬುಡಕಟ್ಟುಗಳು, ಸಂಪುಟ-೨, ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ, ಬೆಂಗಳೂರು.

ವೆಂಕಟಸ್ವಾಮಿ, ಮಂ., *ಅಲೆಮಾರಿ ಹೆಜ್ಜೆಗಳು* (ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ, ೨೦೦೧).

ಶಿವ ಚಿತ್ತಪ್ಪ ಕೆ., ಮಹಿಳೆ ಮತ್ತು ಅಭಿವೃದ್ಧಿ, ಚಿನ್ಮಯಿ ಪ್ರಕಾಶನ

ಸವಿತಾ ನಾಯಕ, ಬುಡಕಟ್ಟು ಮಹಿಳೆಯರ ಪ್ರಧಾನ ಕಲೆ, ೨೦೦೦, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಹರಿಲಾಲ್ ಪವಾರ, ಹೆಳವರ ಸಂಸ್ಕೃತಿ, ೧೯೯೩, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಹೇಮಲತಾ ಗಣಪತಿರಾವ್ ವಡ್ಡೆ, ಬೀದರ ಜಿಲ್ಲೆಯ ಟೋಕ್ರಿಕೋಳಿ ಬುಡಕಟ್ಟು ಒಂದು ಸಾಂಸ್ಕೃತಿಕ ಅಧ್ಯಯನ, ೨೦೦೨ (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

ENGLISH

Ananthakrishna Iyer, L K., *The Mysore Tribes and Castes* ,Mysore: The Mysore University, 1930; rpt. 1998, New Delhi: Mittal Publications, 5 Vols.

Brochure on Reservation for Scheduled Castes, Scheduled Tribes and other Categories of Backward Classes in Services and Posts Bangalore: Government Press, 1987.
